ಕರಾವಳಿ ಕರ್ನಾಟಕದ ಧಾರ್ಮಿಕ ವಸ್ತು ಸಂಗ್ರಹಾಲಯಗಳು–ಸಾಂಸ್ಕೃತಿಕ ಇತಿಹಾಸ ಪುನರ್ರಚನೆಯ ಮಾದರಿಗಳು

ಪಿಎಚ್.ಡಿ. ಪದವಿಗಾಗಿ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಿದ್ಧಪಡಿಸಿದ ಮಹಾಪ್ರಬಂಧ

ಸಂಶೋಧಕರು

ಪೂಜಾರಿ ಕೃಷ್ಣಪ್ಪ.ಕೆ

ಮಾರ್ಗದರ್ಶಕರು

[illegible]

[illegible]

[illegible]

[illegible]

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿದ್ಯಾರಣ್ಯ–೫೮೩ ೨೭೬

[illegible]

ಕರಾವಳಿ ಕರ್ನಾಟಕದ ಭೌತಿಕ ವಸ್ತು ಸಂಗ್ರಹಾಲಯಗಳು–ಸಾಂಸ್ಕೃತಿಕ ಇತಿಹಾಸ ಪುನರ್ರಚನೆಯ ಮಾದರಿಗಳು

ಪಿಎಚ್.ಡಿ ಪದವಿಗಾಗಿ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಸಿದ್ಧಪಡಿಸಿದ ಮಹಾಪ್ರಬಂಧ

ಸಂಶೋಧಕರು

ತುಕಾರಾಮ ಪೂಜಾರಿ.ಕೆ

ಮಾರ್ಗದರ್ಶಕರು

ಡಾ.ಪೀಟರ್ ವಿಲ್ಸನ್ ಪ್ರಭಾಕರ್

ಇತಿಹಾಸ ಪ್ರಾಧ್ಯಾಪಕರು ಹಾಗೂ ಪ್ರಾಂಶುಪಾಲರು, ವಿವೇಕಾನಂದ ಮಹಾವಿದ್ಯಾಲಯ

ಪುತ್ತೂರು, ದಕ್ಷಿಣಕನ್ನಡ–೫೭೪೨೦೩

ಮೂಲಕ

ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ ಮಂಗಳೂರು, ದಕ್ಷಿಣಕನ್ನಡ–೫೭೫೦೦೧.

ಕನ್ನಡ ವಿಶ್ವವಿದ್ಯಾಲಯ, ಹಂಪಿ,

ವಿದ್ಯಾರಣ್ಯ–೫೮೩೨೭೬

೨೦೧೮

ಪ್ರಮಾಣ ಪತ್ರ

"ಕರಾವಳಿ ಕರ್ನಾಟಕದ ಭೌತಿಕ ವಸ್ತು ಸಂಗ್ರಹಾಲಯಗಳು–ಸಾಂಸ್ಕೃತಿಕ ಇತಿಹಾಸ ಪುನರ್ರಚನೆಯ ಮಾದರಿಗಳು" ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ ಪದವಿಗಾಗಿ ಸಿದ್ದಪಡಿಸಲಾಗಿದೆ. ಡಾ. ಪೀಟರ್ ವಿಲ್ಸನ್ ಪ್ರಭಾಕರ್, ಇತಿಹಾಸ ಪ್ರಾಧ್ಯಾಪಕರು ಹಾಗೂ ಪ್ರಾಂಶುಪಾಲರು, ವಿವೇಕಾನಂದ ಮಹಾವಿದ್ಯಾಲಯ, ಪುತ್ತೂರು, ದಕ್ಷಿಣ ಕನ್ನಡ–೫೭೪೨೦೩ ಇವರು ಈ ಪ್ರಬಂಧ ರಚನೆಗೆ ಮಾರ್ಗದರ್ಶನ ಮಾಡಿದ್ದಾರೆ. ಈ ಮಹಾಪ್ರಬಂಧವನ್ನು ಅಥವಾ ಇದರ ಯಾವುದೇ ಭಾಗವನ್ನು ಯಾವುದೇ ಪದವಿಗಾಗಲಿ, ಇಲ್ಲವೇ ಬೇರೆ ಯಾವುದೇ ಪ್ರಕಟಣೆಗಾಗಲಿ ಬಳಸಿಕೊಂಡಿರುವುದಿಲ್ಲ ಎಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ: 21-07-2018

ಸ್ಥಳ : ಬಂಟ್ವಾಳ

ತುಕಾರಾಮ ಪೂಜಾರಿ ಕೆ.

ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ

ಶ್ರೀ ವೆಂಕಟರಮಣ ಸ್ವಾಮಿ ಕಾಲೇಜು,

ಬಂಟ್ವಾಳ, ದಕ್ಷಿಣ ಕನ್ನಡ–೫೭೪೨೧೧

ದೃಢೀಕರಣ ಪತ್ರ

ತುಕಾರಾಮ ಪೂಜಾರಿ ಕೆ. ಇವರು **"ಕರಾವಳಿ ಕರ್ನಾಟಕದ ಭೌತಿಕ ವಸ್ತು ಸಂಗ್ರಹಾಲಯಗಳು– ಸಾಂಸ್ಕೃತಿಕ ಇತಿಹಾಸ ಪುನರ್ರಚನೆಯ ಮಾದರಿಗಳು"** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಮಂಡಿಸಲು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಈ ಮಹಾಪ್ರಬಂಧವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಅಭ್ಯರ್ಥಿಯು ಯಾವುದೇ ಪದವಿಗಾಗಲಿ, ಇಲ್ಲವೇ ಬೇರೆ ಯಾವುದೇ ಪ್ರಕಟಣೆಗಾಗಲಿ ಬಳಸಿಕೊಂಡಿರುವುದಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: 21-07-2018

ಸ್ಥಳ: ಪುತ್ತೂರು

ಡಾ. ಪೀಟರ್ ವಿಲ್ಸನ್ ಪ್ರಭಾಕರ್

ಇತಿಹಾಸ ಪ್ರಾಧ್ಯಾಪಕರು ಹಾಗೂ ಪ್ರಾಂಶುಪಾಲರು,

ವಿವೇಕಾನಂದ ಮಹಾವಿದ್ಯಾಲಯ,

ಪುತ್ತೂರು, ದಕ್ಷಿಣ ಕನ್ನಡ – ೫೭೪೨೦೩

ಪರಿವಿಡಿ

೧. ಗ್ರಂಥಸೂಚಿ

೨. ಛಾಯಾಚಿತ್ರಗಳು

   ೧. ಭೌತಿಕ ವಸ್ತುಗಳು

   ೨. ವೃತ್ತಿ ಸಂಬಂಧಿತ

   ೩. ಸಂದರ್ಶನ – ವಿವಿಧ ಕ್ಷೇತ್ರಗಳ ಪರಿಣಿತರು

   ೪. ವಿದ್ವಾಂಸರೊಂದಿಗಿನ ಸಂದರ್ಶನ

೩. ಅನುಬಂಧ

   ೧. ಪಾರಿಭಾಷಿಕ ಪದಕೋಶ

   ೨. ಮಾದರಿ ಪ್ರಶ್ನಾವಳಿ

   ೩. ಕ್ಷೇತ್ರ ಕಾರ್ಯ ತಖ್ತೆ

   ೪. ಸಂದರ್ಶಿಸಿದ ಬೀಡುಗಳು ಮತ್ತು ಮ್ಯೂಸಿಯಂಗಳು

ಅಧ್ಯಾಯ ಒಂದು

ಪ್ರಸ್ತಾವನೆ

ಒಂದು ಸಾಮಾಜಿಕ, ಸಾಂಸ್ಕೃತಿಕ ಪರಿಸರದ ಇತಿಹಾಸವು ಎರಡು ನೆಲೆಗಳಲ್ಲಿ ಪುನರ್‌ರಚಿತವಾಗಿರುತ್ತದೆ. ಒಂದು, ಪ್ರಧಾನಧಾರೆಯ ಇತಿಹಾಸ. ಇನ್ನೊಂದು, ಜನಪದ ಇತಿಹಾಸ. ಪ್ರಧಾನಧಾರೆಯ ಇತಿಹಾಸಕ್ಕೆ ಶಾಸನಗಳು, ವೀರಗಲ್ಲುಗಳು, ಲಿಖಿತ ದಾಖಲೆಗಳು, ಸಾಹಿತ್ಯಿಕ ಬರವಣಿಗೆಗಳು ಆಕರವನ್ನು ಒದಗಿಸುತ್ತವೆ. ಜನಪದ ಇತಿಹಾಸದಲ್ಲಿ ಪ್ರಧಾನಧಾರೆಯ ಇತಿಹಾಸ ರಚನೆಗೆ ಬಳಸಿದ ಆಕರಗಳಿಗಿಂತ ಭಿನ್ನ ಮಾದರಿಯ ಆಕರಗಳನ್ನು ಪರಿಗಣಿಸಲಾಗುತ್ತದೆ. ಈ ಜನಪದ ಇತಿಹಾಸ ರಚನೆಯಲ್ಲಿ ಮುಖ್ಯವಾಗಿ ಎರಡು ಪ್ರಮುಖ ಆಧಾರಗಳನ್ನು ಪರಿಗಣಿಸಬೇಕಾಗುತ್ತದೆ. ಒಂದು, ಮೌಖಿಕ ಸಾಹಿತ್ಯ ಇನ್ನೊಂದು ಭೌತಿಕ ವಸ್ತು ಪರಿಕರಗಳು. ಪ್ರಸ್ತುತ ಅಧ್ಯಯನವು 'ಕರಾವಳಿ ಕರ್ನಾಟಕದ ಭೌತಿಕ ವಸ್ತು ಸಂಗ್ರಹಾಲಯಗಳು– ಸಾಂಸ್ಕೃತಿಕ ಇತಿಹಾಸ ಪುನರ್ರಚನೆಯ ಮಾದರಿಗಳು' ಎಂಬ ನೆಲೆಯಲ್ಲಿ ಭೌತಿಕ ವಸ್ತುವನ್ನು ಸಾಂಸ್ಕೃತಿಕ ಇತಿಹಾಸ ರಚನೆಗೆ ಆಕರವಾಗಿ ಬಳಸಿಕೊಂಡಿದೆ. ಮೌಖಿಕ ಆಕರವು ಜನರ ಬಾಯ್ದೆರೆಯಲ್ಲಿರುವ ಹಾಡು, ಕಬಿತೆ, ಭಾಷೆ, ಒಗಟು, ಉರಲ್, ಪಾಡ್ದನ ಇವುಗಳ ಕಡೆಗೆ ಲಕ್ಷ್ಯವಹಿಸಿದರೆ, ಭೌತಿಕ ವಸ್ತುಗಳು ಇತಿಹಾಸ ರಚನೆಯಲ್ಲಿ ನಿರ್ದಿಷ್ಟ ವಸ್ತುಗಳನ್ನು ಕೇಂದ್ರೀಕರಿಸಿರುತ್ತವೆ. 'ಭೌತ' ಎಂದರೆ ಹೆಸರೆ ಹೇಳುವಂತೆ ಕಣ್ಣಿಗೆ ಕಾಣುವ, ಇಂದ್ರಿಯಕ್ಕೆ ಗೋಚರವಾಗುವ ದತ್ತ ವಸ್ತುವಾಗಿರುತ್ತದೆ. ಈ ದತ್ತ ವಸ್ತು ನಿರ್ದಿಷ್ಟ ದೇಶ ಕಾಲದಲ್ಲಿ ಬಳಕೆಗೆ ಒಳಗಾಗುತ್ತದೆ. ಅಂದರೆ, ಕರಾವಳಿ ಕರ್ನಾಟಕವನ್ನೆ ಕೇಂದ್ರೀಕರಿಸಿದರೆ ಇಲ್ಲಿ ಬೇರೆ ಬೇರೆ ಸಮುದಾಯಗಳು, ಪಂಗಡಗಳು ಆಡುವ ಭಾಷೆ ಒಂದೇ ಆದರೂ ಬಳಸುವ ವಸ್ತು ಪರಿಕರಗಳಲ್ಲಿ ವೈವಿಧ್ಯತೆ ಇದೆ. ಈ ವಸ್ತುಗಳು ನಿರ್ವಾತದಲ್ಲಿರದೆ ಬಳಕೆಗೊಳ್ಳುವ ವ್ಯಕ್ತಿ ಸಮುದಾಯದ ಜೊತೆಗೆ ನಿಕಟವಾದ ಸಂಬಂಧವನ್ನು ಹೊಂದಿರುತ್ತದೆ. ಸಂಸ್ಕೃತಿಯೆನ್ನುವುದು ನಿರಂತರವಾಗಿ ಬದಲಾಗುತ್ತಾ ಇರುವುದು. ಈ ಬಗೆಯ ಬದಲಾವಣೆಗೆ ಎರಡು ಕಾರಣಗಳನ್ನು ಕೊಡಬಹುದು. ಒಂದು ಆಂತರಿಕವಾದ ಒತ್ತಡ. ಇನ್ನೊಂದು, ಬಾಹ್ಯವಾದ ಒತ್ತಡ. ಬಾಹ್ಯ ಒತ್ತಡವು ಮುಖ್ಯವಾಗಿ ಯುದ್ಧಗಳು, ವಲಸೆ, ಕೈಗಾರಿಕತೆ, ಆಧುನಿಕತೆ ಮೊದಲಾದವುಗಳಿಂದ ಸಂಸ್ಕೃತಿಯ ಬದಲಾವಣೆಗೆ ಪ್ರಮುಖ ಕಾರಣವಾಗುತ್ತದೆ. ಈ ಎಲ್ಲಾ ಒತ್ತಡಗಳಿಂದ ಮಾನವನ ಬದುಕಿನ ವಿನ್ಯಾಸ ಬದಲಾದ ಹಾಗೆ ಅವನು ಬಳಸುವ ವಸ್ತು ಪರಿಕರಗಳು ಕಾಲದಿಂದ ಕಾಲಕ್ಕೆ ಬದಲಾವಣೆಗೆ ಒಳಗಾಗುತ್ತದೆ. ಹಾಗಾಗಿ ಒಂದು ಭೌತಿಕ ವಸ್ತು ಭೌಗೋಳಿಕ, ಸಾಂಸ್ಕೃತಿಕ, ಸಾಮಾಜಿಕ, ಮತ್ತು ಚಾರಿತ್ರಿಕ ಸಂಗತಿಗಳನ್ನು ತನ್ನ ಒಡಲಲ್ಲಿ ಸೇರಿಸಿಕೊಂಡಿರುತ್ತದೆ.

೧.೧ ಅಧ್ಯಯನದ ಉದ್ದೇಶ ಮತ್ತು ಮಹತ್ವ

ಕರಾವಳಿ ಕರ್ನಾಟಕದ ಜನರು ತಮ್ಮ ದಿನನಿತ್ಯದ ಕೆಲಸ ಕಾರ್ಯಗಳಲ್ಲಿ ಬಳಕೆ ಮಾಡುತ್ತಿದ್ದ ವಸ್ತುಗಳ ಐತಿಹಾಸಿಕ ಮಹತ್ವವನ್ನು ದಾಖಲಿಸುವುದು ಮತ್ತು ಈ ಪ್ರದೇಶದಲ್ಲಿ ಬಳಕೆಗೊಳ್ಳುತ್ತಿದ್ದ ಭೌತಿಕ ವಸ್ತು ಪರಿಕರಗಳ ಮೂಲಕ ಸಾಂಸ್ಕೃತಿಕ ಚರಿತ್ರೆಯನ್ನು ಸಾಮಾಜಿಕ ಚರಿತ್ರೆಯ ಜೊತೆಯಲ್ಲಿ ಮರುಕಥಿಸುವ ಉದ್ದೇಶವನ್ನು ಈ ಪ್ರಬಂಧ ಹೊಂದಿದೆ. ಇಲ್ಲಿನ ಸಾಂಸ್ಕೃತಿಕ ಚರಿತ್ರೆಯನ್ನು ಅವಲೋಕನ ಮಾಡಿದಾಗ ಬೇಟೆ ಸಂಸ್ಕೃತಿ, ಬೇಸಾಯ ಸಂಸ್ಕೃತಿ ಮತ್ತು ವಾಣಿಜ್ಯ ಸಂಸ್ಕೃತಿಗಳು ಪ್ರಮುಖವಾಗಿ ಗೋಚರಿಸುತ್ತವೆ. ಈ ಮೂರು ಸಂಸ್ಕೃತಿಯ ವಿಭಾಗಗಳಿಂದಲೂ ಭೌತಿಕ ಸಂಸ್ಕೃತಿ ವಿಸ್ತಾರಗೊಂಡಿದೆ. ಕರಾವಳಿ ಪ್ರದೇಶವಾಗಿದುದ್ದರಿಂದ ವಾಣಿಜ್ಯ ಉದ್ದೇಶದಿಂದ ಬಹು ಪ್ರಾಚೀನ ಕಾಲದಿಂದಲೂ ಹಲವು ದೇಶಗಳೊಂದಿಗೆ ಸಂಪರ್ಕ ಇದ್ದುದರಿಂದ ಅನೇಕ ಭೌತಿಕ ವಸ್ತುಗಳ ಕೊಡುಕೊಳ್ಳುವಿಕೆ ಕೂಡ ಇಲ್ಲಿ ನಡೆದಿದೆ. ಈ ಹಿನ್ನೆಲೆಯಲ್ಲಿ ಭೌತಿಕ ವಸ್ತುಗಳನ್ನು ಐತಿಹಾಸಿಕ ದೃಷ್ಟಿಯಿಂದ ಅಧ್ಯಯನ ಮಾಡುವ ಉದ್ದೇಶವನ್ನು ಈ ಪ್ರಬಂಧ ಹೊಂದಿದೆ. ಭೌತಿಕ ವಸ್ತುಗಳೆಂದರೆ ಕೇವಲ ನಿರ್ವಾತದ ಸೃಷ್ಟಿಯಲ್ಲ, ಒಟ್ಟು ಮಾನವನ ಚರಿತ್ರೆಯನ್ನು ಸಮರ್ಥವಾಗಿ ದಾಖಲಿಸುವ ಆಕರವೂ ಆಗಿದೆ. ಮನುಷ್ಯ ಚರಿತ್ರೆಯು ಬೇರೆ ಬೇರೆ ಕಾಲಘಟ್ಟಗಳಲ್ಲಿ ಸಾಗಿ ಬಂದ ಹಾದಿಯನ್ನು ತನ್ನ ಕಾಲದಲ್ಲಿ ಬಳಸಿರುವ ವಸ್ತುಗಳ ಅಧ್ಯಯನದಿಂದ ಒಂದು ಕಾಲದ ಚರಿತ್ರೆಯನ್ನು ಗುರುತಿಸಲು ಸಾಧ್ಯ ಎಂಬ ಹಿನ್ನೆಲೆಯಲ್ಲಿ ಈ ಅಧ್ಯಯನ ಮಹತ್ವ ಪಡೆಯುತ್ತದೆ. ಈ ನೆಲೆಯಲ್ಲಿ ಕರಾವಳಿ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಭೌತಿಕ ವಸ್ತುಗಳ ಅಧ್ಯಯನ ಈ ಪ್ರಬಂಧದ ಮುಖ್ಯ ಉದ್ದೇಶ.

ಭೌತಿಕ ವಸ್ತುಗಳ ಮೂಲಕ ಈವರೆಗೆ ಪರಿಗಣಿಸಲ್ಪಡದ ಜನಸಾಮಾನ್ಯರ ಇತಿಹಾಸವನ್ನು ದಾಖಲಿಸುವುದು ಈ ಅಧ್ಯಯನದ ಇನ್ನೊಂದು ಪ್ರಮುಖ ಉದ್ದೇಶ. ಸಾಂಪ್ರದಾಯಿಕ ಇತಿಹಾಸದಲ್ಲಿ ಕಾಣಿಸಿಕೊಳ್ಳದ ಜನಸಾಮಾನ್ಯರ ಬದುಕಿನ ಚಿತ್ರಣವನ್ನು ಭೌತಿಕ ಪರಿಕರಗಳ ಮಾದರಿಗಳ ಮೂಲಕ ಅಧ್ಯಯನ ಮಾಡುವುದು ಇಂದಿನ ಸಾಮಾಜಿಕ ಸಮಾನತೆಯ ಚಿಂತನೆಗೆ ಪೂರಕವಾದ ವಿಷಯವಾಗಿದೆ. ಶಾಸನಗಳು, ಲಿಖಿತ ಸಾಹಿತ್ಯಗಳಲ್ಲಿ ಕೇವಲ ರಾಜರುಗಳ ವೈಭವ, ಅವರ ಯುದ್ಧಗಳು, ಒಪ್ಪಂದಗಳು, ಅವರು ನೀಡಿದ ದಾನಗಳ ಪ್ರಶಂಸೆ ಇತ್ಯಾದಿ ಪ್ರಧಾನವಾಗಿ ಉಲ್ಲೇಖವಾಗುತ್ತಿದ್ದವು[೧]. ಪುರುಷೋತ್ತಮ ಬಿಳಿಮಲೆಯವರ ಪ್ರಕಾರ, ಭಾರತದಲ್ಲಿ ಯಾವುದನ್ನು ಚರಿತ್ರೆ ಎನ್ನುತ್ತೇವೆಯೋ, ಯಾವುದನ್ನು ಭಾರತೀಯ ಸಂಸ್ಕೃತಿ ಎನ್ನುತ್ತೇವೆಯೋ, ಅದು ಕೇವಲ ಅಲ್ಪಸಂಖ್ಯಾತ ವರ್ಗದ ಚಿಂತನೆಗಳಾಗಿವೆ. ಬಹುಸಂಖ್ಯಾತ ಜನವರ್ಗದ ಸಾಂಸ್ಕೃತಿಕ ಮೌಲ್ಯಗಳು ಈ ದೇಶದ ಚರಿತ್ರೆಯಲ್ಲಾಗಲೀ ಸಂಸ್ಕೃತಿಯ ಭಾಷ್ಯದಲ್ಲಾಗಲೀ ದಾಖಲಾಗದೇ ಹೋಗಿದೆ[೨]. ಹಾಗಾಗಿ ಅವುಗಳನ್ನು ಗುರುತಿಸಿ ಅಧ್ಯಯನ ಮಾಡುವ ಅಗತ್ಯವನ್ನು ಈ ಮಹಾಪ್ರಬಂಧ ಸಮರ್ಥಿಸುತ್ತದೆ. ಬಹು ಸಂಖ್ಯಾತ ಶ್ರಮಿಕ ವರ್ಗದ ಅಂಚಿನ ಇತಿಹಾಸವನ್ನು ಮತ್ತು ಕರಾವಳಿ ಕರ್ನಾಟಕದ ವರ್ಣಮೂಲ ಜಾತಿಯಾಧಾರಿತ ವರ್ಗಗಳು ಈ ಪ್ರದೇಶದಲ್ಲಿ ನಡೆಸಿದ ಸಾಮಾಜಿಕ ಬದುಕಿನ ಶೋಷಣೆಗಳನ್ನು, ಬಹುಮುಖಿ ಮೌಖಿಕ ಆಕರಗಳ ಮೂಲಕ ಮತ್ತು ಭೌತಿಕ ವಸ್ತುಗಳ ಮೂಲಕ ಅಧ್ಯಯನ ನಡೆಸುವ ಉದ್ದೇಶವನ್ನೂ ಈ ಮಹಾಪ್ರಬಂಧ ಹೊಂದಿದೆ.

ಭೌತಿಕ ವಸ್ತು ಪರಿಕರಗಳನ್ನು ಇತಿಹಾಸ ರಚನೆಗೆ ಆಕರವಾಗಿ ತೆಗೆದುಕೊಳ್ಳುವಲ್ಲಿ ಬಿ.ಶಿವರಾಮ ಶೆಟ್ಟಿಯವರ ಮಾತು ಇಲ್ಲಿ ಉಲ್ಲೇಖನೀಯ–

"ಮೌಖಿಕ ಇತಿಹಾಸದ ಪುನರ್ ರಚನೆಯ ಸಂದರ್ಭದಲ್ಲಿ ೧೯ನೆಯ ಶತಮಾನದಲ್ಲಿ ಯುರೋಪಿನಲ್ಲಿ ಬಂಡವಾಳಶಾಹಿಯ ಉಚ್ಛ್ರಾಯ ಕಾಲದಲ್ಲಿ ಸೃಷ್ಟಿಗೊಂಡ, ಚರಿತ್ರೆಯನ್ನು ಗ್ರಹಿಸಿದ ಕೇಂದ್ರ ಮತ್ತು ಪಂಥಿ ಎನ್ನುವ ಪರಿಕಲ್ಪನೆ ಹಾಗೂ ಆ ವರ್ಗೀಕರಣದ ವಿನ್ಯಾಸದಲ್ಲೇ 'ಮೌಖಿಕ ಇತಿಹಾಸವನ್ನು ಪುನರ್ ನಿರೂಪಿಸಿಕೊಳ್ಳುತ್ತಿದ್ದೇವೆ. ಹೀಗೆ ಮೇಲಿನ–ಕೆಳಗಿನ, ಕೇಂದ್ರ–ಅಂಚು, ನಗರ–ಗ್ರಾಮ್ಯ, ಗಂಡು–ಹೆಣ್ಣು, ರಾಜ–ಜನ ಈ ಬಗೆಯ ಶ್ರೇಣೀಕೃತ ಸಿದ್ಧ ಸ್ಥಿತಿಗಳನ್ನು ಒಪ್ಪಿಕೊಂಡೇ ಮೌಖಿಕ ಇತಿಹಾಸವನ್ನು ನಾವಿಂದು ಪುನರ್ ಉತ್ಪಾದಿಸಿಕೊಳ್ಳುತ್ತಿದ್ದೇವೆ. ಈ ಘಟಕಗಳ ನಡುವೆ ಪರಸ್ಪರ ಕೊಳುಕೊಡೆಯ ಅವಲಂಬನದ ಸಂಬಂಧಗಳನ್ನು ಕಾಣದೆ, ಕೇವಲ ವಿರುದ್ಧ ನೆಲೆಗಳಲ್ಲಿ ಅವುಗಳನ್ನು ಗ್ರಹಿಸಿಕೊಂಡ ಕಾರಣದಿಂದಲೆ ಮೌಖಿಕ ಚರಿತ್ರೆಯನ್ನು ಮೌಖಿಕ ಇತಿಹಾಸವಾಗಿ ಸಾಂಪ್ರದಾಯಿಕ ಇತಿಹಾಸ ರಚನೆಗೆ ಬದಲಿಯಾಗಿ ನಿರೂಪಿಸುತ್ತಿದ್ದೇವೆ. ಈ ಗ್ರಹಿಕೆಯ ಕಾರಣದಿಂದ, ಸಾಂಪ್ರದಾಯಿಕ ಇತಿಹಾಸ ರಚನೆಯ ಆಕ್ಷರಿಕ ಆಕರಗಳಿಗೆ ಬದಲಿಯಾಗಿ ಮೌಖಿಕ ಆಕರಗಳನ್ನು ಬಳಸಿಕೊಳ್ಳಲಾಗುತ್ತಿದೆ. ಆ ಮೂಲಕ ರಾಜನ ಬದಲು ಜನರ ದೃಷ್ಟಿಯಲ್ಲಿ ರಾಜತ್ವವನ್ನು ನಿರೂಪಿಸಲಾಗುತ್ತಿದೆ. ಅಂದರೆ ಪ್ರಭುತ್ವದ ಸಾಂಪ್ರದಾಯಿಕ ಇತಿಹಾಸಕ್ಕೆ ವಿರುದ್ಧವಾಗಿ ವಿಲೋಮ ಸ್ಥಿತಿಯಲ್ಲಿ ಪ್ರಭುತ್ವದ ಚರಿತ್ರೆಯನ್ನು ಹೆಣೆಯಲಾಗುತ್ತಿದೆ. ಹಾಗೆಯೇ ಕೇಂದ್ರ–ಪರಿಧಿ ಎನ್ನುವ ಪಶ್ಚಿಮ ಪ್ರಣೀತ ಗೃಹೀತಗಳ ಆಧಾರದಲ್ಲಿ ಮೌಖಿಕ ಚರಿತ್ರೆಯನ್ನು ಪರಿಧಿಯಲ್ಲಿ ಗ್ರಹಿಸಿಕೊಳ್ಳಲಾಗುತ್ತಿದೆ. ಇದರಿಂದ ಅಂಚಿಗೆ ಸರಿಸಲ್ಪಟ್ಟ ಚರಿತ್ರೆ ಕೇಂದ್ರಕ್ಕೆ ಬರುತ್ತದೆ. ಅಂಚಿನಲ್ಲಿರುವ ಹೆಣ್ಣಿನ ಮೂಲಕ ಗಂಡಿನ, ಆಳಿನ ಮೂಲಕ ಒಡೆಯನ, ಜನರ ಮೂಲಕ ರಾಜನ, ಕೆಳಗಿನ ಮೂಲಕ ಮೇಲಿನ ಚರಿತ್ರೆ ಮರುನಿರ್ಮಿತವಾಗುತ್ತದೆ. ಈ ವಿನ್ಯಾಸದಲ್ಲಿ ಮೌಖಿಕ ಚರಿತ್ರೆಯನ್ನು ನಿರೂಪಿಸುವುದು ಮೌಖಿಕ ಇತಿಹಾಸವಾಗಿ ಮತ್ತು ಈಗಾಗಲೆ ನಿರೂಪಿಸಲ್ಪಟ್ಟ ಸಾಂಪ್ರದಾಯಿಕ ಇತಿಹಾಸಕ್ಕೆ ವಿರುದ್ಧವಾಗಿ ಅಧೀನವೇ ಇಲ್ಲಿ ಪ್ರಧಾನವಾಗುತ್ತದೆ"[೩].

ಭಾರತದ ಇತಿಹಾಸವನ್ನು ಯುರೋಪಿನಿಂದ ಆಮದು ಮಾಡಿಕೊಳ್ಳಲಾದ ಬೇರೆಬೇರೆ ಸಿದ್ಧಾಂತಗಳ ಮೂಲಕ ನೋಡುವ ಪ್ರಯತ್ನವನ್ನು ಮಾಡಲಾಯಿತೇ ಹೊರತು ಭಾರತದ ಸ್ಥಳೀಯತೆಯನ್ನು ಅರ್ಥಮಾಡಿಕೊಳ್ಳುವ ಪ್ರಯತ್ನಗಳು ಸರಿಯಾಗಿ ನಡೆಯಲಿಲ್ಲ. ಕರ್ನಾಟಕದ ಪ್ರಮುಖ ಅರಸು ಮನೆತನಗಳ ಆಳ್ವಿಕೆಯ ಭಾಗವಾಗಿದ್ದ ತುಳುನಾಡು ಆಡಳಿತಾತ್ಮಕವಾಗಿ ಕನ್ನಡದ ಮೂಲಕವೇ ಗುರುತಿಸಿಕೊಂಡಿರುವುದು ತುಳುನಾಡಿನ ಚರಿತ್ರೆಯ ಅಧ್ಯಯನದಿಂದ ತಿಳಿದುಬರುವ ವಿಚಾರ. ಆದರೆ ಅಧ್ಯಯನಗಳು ಇಷ್ಟಕ್ಕೆ ಸೀಮಿತಗೊಂಡರೆ ತುಳುನಾಡನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ತುಳುನಾಡಿನ ಜನರ ಬದುಕು ರೂಪುಗೊಂಡಿರುವ ಬಗೆ, ಚಾರಿತ್ರಿಕವಾಗಿ ಅದು ವಿಕಸನಗೊಂಡಿರುವ ರೀತಿ, ಬಹುಭಾಷಿಕ ಸಂಸ್ಕೃತಿಯ ಹುಟ್ಟು, ತುಳುನಾಡಿನ ಜನರನ್ನು ಶ್ರಮಜೀವಿಗಳನ್ನಾಗಿ ಮಾಡಿದ ಭೌಗೋಳಿಕ ಪರಿಸರ, ಜನರಲ್ಲಿ ಭಯ ಹಾಗೂ ನಂಬಿಕೆಯನ್ನು ಮೂಡಿಸುವ ಭೂತಾರಾಧನೆ, ರಾತ್ರಿಯ ನಿದ್ದೆಯನ್ನೇ ಮರೆಸುವ ಯಕ್ಷಗಾನ, ಸ್ಪರ್ಧಾತ್ಮಕವಾಗಿ ಬೆಳೆದು ಬಂದ ವೈಷ್ಣವ ಹಾಗೂ ಶೈವ ಧರ್ಮಗಳು, ಆಳ್ವಿಕೆ

ನಡೆಸಿದ ಜೈನ ಅರಸೊತ್ತಿಗೆ ಮುಂತಾದ ತುಳುನಾಡಿನ ವೈಶಿಷ್ಟ್ಯಗಳನ್ನು ಸ್ಥಳೀಯವಾಗಿಯೇ ಗುರುತಿಸಿ ಅಧ್ಯಯನ ಮಾಡಬೇಕಾಗುತ್ತದೆ. ತುಳುನಾಡನ್ನು ಆಳಿದ ಅಳುಪರು, ಬಂಗರು, ಚೌಟರು, ಅಜಿಲರು, ಭೈರರಸರು ಹಾಗೂ ಇನ್ನೂ ಅನೇಕ ಸಣ್ಣ ಪುಟ್ಟ ಅರಸು ಮನೆತನಗಳು ಹೊರಗಿನ ರಾಜಕೀಯ ಶಕ್ತಿಗಳ ಅಧೀನದಲ್ಲಿದ್ದರೂ ತುಳುನಾಡಿನಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿರುವುದು ಕಂಡುಬರುತ್ತದೆ[೪].

ಚರಿತ್ರೆಯುದ್ದಕ್ಕೂ ಕರ್ನಾಟಕದ ಸಾರ್ವಭೌಮತ್ವವನ್ನು ಒಪ್ಪಿಕೊಂಡು ಸಾಮಂತ ನೆಲೆಯಲ್ಲಿ ಅಸ್ತಿತ್ವವನ್ನು ಕಂಡುಕೊಂಡಿರುವ ಈ ತುಳುನಾಡಿನ ಇತಿಹಾಸವನ್ನು ಇಷ್ಟಕ್ಕೆ ಸೀಮಿತಗೊಳಿಸಲಾಗಿದೆ.

In the present century, until very recently, we have seen research activity on Tuluva culture primarily in the area of historical work, and that, almost exclusively on ancient Tuluva history through the collection and interpretation of inscriptions and religious monuments This research has given us a clear idea of broad outline of political and religious developments in the region, but what we see from this type of evidence is only a narrow slice of tuluva culture and society[5]

ಅಲ್ಲದೆ, ಭಾರತದಲ್ಲಿ ಪಾರಂಪರಿಕ ಇತಿಹಾಸಕಾರರಾಗಲಿ, ಆಧುನಿಕ ಇತಿಹಾಸಕಾರರಾಗಲಿ, ನವಚರಿತ್ರೆಕಾರರಾಗಲಿ, ಮೌಖಿಕ ಇತಿಹಾಸಕಾರರಾಗಲಿ, ಜನಪದ ಅಧ್ಯಯನಗಳಲ್ಲಾಗಲಿ, ಭೌತಿಕ ವಸ್ತು ಪರಂಪರೆ ಬಹಳ ಕಡಿಮೆ ಕಾಣಿಸಿಕೊಂಡಿದೆ. ಪ್ರಧಾನಧಾರೆಯ ಇತಿಹಾಸ ನಿರೂಪಣೆಯನ್ನು ಪ್ರಶ್ನಿಸುವ ಯುಗ ಪ್ರಾರಂಭಗೊಂಡು ದಶಕಗಳೇ ಕಳೆದಿದೆ. ಆದರೂ ಪ್ರಧಾನ ಚರಿತ್ರೆಯಲ್ಲಿ ಭೌತಿಕ ಸಂಸ್ಕೃತಿ ಕಾಣಿಸಿಕೊಂಡಿದ್ದು ಅತ್ಯಲ್ಪ. ಇಂದಿನ ಬದಲಾದ ಕಾಲಘಟ್ಟದಲ್ಲಿ ಸಾಂಸ್ಕೃತಿಕ ಇತಿಹಾಸದ ರಚನೆಗೆ ಭೌತಿಕ ವಸ್ತುಗಳು ನಿಖರವಾದ ಆಕರವಾಗಿ ನಿಲ್ಲಬಹುದು. ಲಿಖಿತ ಆಧಾರಗಳು ಇಲ್ಲದಿದ್ದಾಗಲೂ ಪ್ರಾಚ್ಯ ವಸ್ತು ಅವಶೇಷಗಳು ಗತಕಾಲದ ಮಾನವನ ಸಂಸ್ಕೃತಿಯನ್ನು ಅರಿತುಕೊಳ್ಳಲು ಹೇಗೆ ನೆರವಾಗುತ್ತದೆ ಎಂಬುದಕ್ಕೆ ಭಾರತದ ಹರಪ್ಪ ಸಂಸ್ಕೃತಿಯು (ಸಿಂಧೂ ಕಣಿವೆ ಸಂಸ್ಕೃತಿ) ಒಂದು ಒಳ್ಳೆಯ ಉದಾಹರಣೆ. ಹರಪ್ಪ, ಮೊಹೆಂಜೋದಾರೋ, ಕಾಲಿಬಂಗಾನ್, ಲೋಥಲ್ ಮುಂತಾದ ಹಲವಾರು ನೆಲೆಗಳಲ್ಲಿ ಹರಪ್ಪ ಸಂಸ್ಕೃತಿಯ ಅವಶೇಷಗಳ ಉತ್ಖನನದಿಂದ ಕೋಟೆ–ಕಟ್ಟಡಗಳು, ಬೀದಿಗಳು, ಆಯುಧೋಪಕರಣಗಳು, ತಾಮ್ರದ, ಮಡಕೆಯ ಪಾತ್ರೆ, ಮಣ್ಣಿನ ಗೊಂಬೆಗಳು, ಲಿಪಿಯುಳ್ಳ ಮುದ್ರೆಗಳು, ಆಭರಣಗಳು ಹೀಗೆ ಇನ್ನೂ ಸಹಸ್ರಾರು ವಸ್ತು ವಿಶೇಷಗಳು ಬೆಳಕಿಗೆ ಬಂದಿವೆ. ಇವುಗಳ ಆಳವಾದ ಅಧ್ಯಯನದಿಂದ ಹರಪ್ಪ ನಾಗರಿಕತೆಯ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ವ್ಯವಸ್ಥೆಯ ವಿಚಾರಗಳನ್ನು ವಿವರವಾಗಿ ತಿಳಿಯಲಾಗಿದೆ. ಈಜಿಪ್ಟ್ ಮತ್ತು ಮೆಸೊಪೊಟೋಮಿಯಾದಂತಹ ಇತರ ಪ್ರಾಚೀನ ಸಂಸ್ಕೃತಿ ಪರಿಜ್ಞಾನ ಸಹ ಆಯಾ ಪ್ರದೇಶಗಳಲ್ಲಿ ದೊರೆತಿರುವ ಪ್ರಾಚ್ಯ ಅವಶೇಷಗಳ ಆಧಾರದಲ್ಲೇ ಇವೆ.

ವಿದೇಶದಲ್ಲಿ ಭೌತಿಕ ವಸ್ತುಗಳ ಅಧ್ಯಯನಗಳು ಸಾಕಷ್ಟು ನಡೆದಿವೆ. ಭಾರತದ ಸಂದರ್ಭದಲ್ಲಿ ಭೌತಿಕ ವಸ್ತುಗಳ ಅಧ್ಯಯನ ವಿರಳ. ಆದರೆ, ಕರಾವಳಿ ಕರ್ನಾಟಕದ ಐತಿಹಾಸಿಕ ಮತ್ತು ಪುರಾತತ್ವ ವಸ್ತುಸಂಗ್ರಹಾಲಯಗಳ ವಸ್ತು ಪರಿಕರಗಳ ಅಧ್ಯಯನವನ್ನು ಸೀಮಿತ ಚೌಕಟ್ಟಿನೊಳಗೆ ಕಾಣಲಾಗಿದ್ದು ಇವುಗಳ ಅಧ್ಯಯನ ಸಾಂಸ್ಕೃತಿಕ ಇತಿಹಾಸ ಮತ್ತು ಸಾಮಾಜಿಕ ಇತಿಹಾಸದ ನೆಲೆಗಟ್ಟಿನಲ್ಲಿ ಈವರೆಗೆ ನಡೆದಿಲ್ಲ. ಸಾಂಸ್ಕೃತಿಕ ಇತಿಹಾಸದ ನೆಲೆಗಟ್ಟಿನಲ್ಲಿ ಅಲ್ಲಲ್ಲಿ ಚದುರಿದಂತೆ ಅಧ್ಯಯನಗಳು ನಡೆದಿದ್ದರೂ, ಸಮಗ್ರವಾದ ಅಧ್ಯಯನ ನಡೆದಿಲ್ಲ. ಆದುದರಿಂದ ಸಾಂಸ್ಕೃತಿಕ ಹಾಗೂ ಐತಿಹಾಸಿಕ ದೃಷ್ಟಿಯಿಂದಲೂ ಪ್ರಸ್ತುತ ಅಧ್ಯಯನ ಮಹತ್ವಪೂರ್ಣವೆನಿಸಿಕೊಳ್ಳಲಿದೆ. ಒಪ್ಪಿತವಾದ ಚರಿತ್ರೆಗೆ ಸವಾಲಾಗಿ ಇಂದಿನ ಸಂದರ್ಭದ ತಾತ್ವಿಕ ಅವಶ್ಯಕತೆಯಾಗಿ ಭೌತಿಕ ವಸ್ತುಗಳು ತನ್ನ ಅಂತರ್ಗತವಾಗಿರುವ ಮಿತಿಗಳೊಂದಿಗೆ ಚರಿತ್ರೆ, ಬರವಣಿಗೆ ಪ್ರಕ್ರಿಯೆಗೆ ಹೊಸ ನೋಟವನ್ನು ಬೀರಲಿವೆ.

ಮನುಷ್ಯನ ಚಾತುರ್ಯ, ಕೌಶಲ್ಯತೆ ಮತ್ತು ದಕ್ಷತೆಗೆ, ವಸ್ತು ಪರಿಕರಗಳು ಭೌತಿಕ ದಾಖಲೆಯಾಗಿ ನಿಲ್ಲಬಲ್ಲವು. ಮನುಷ್ಯ ನಿರ್ಮಿತ ವಸ್ತುಗಳು ವಾಸ್ತವವಾಗಿದ್ದು, ದೃಷ್ಟಿಗೋಚರವಾಗುತ್ತವೆ. ಈ ವಾಸ್ತವ ವಸ್ತುಗಳು ಇತಿಹಾಸಕಾರನಿಗೆ ಲಭ್ಯವಿರುವ ಐತಿಹಾಸಿಕ ಪುರಾವೆಯಾಗಿರುವುದರ ಜೊತೆಗೆ ಆ ವಸ್ತುವೇ ಒಂದು ಕಾಲದ ಗತವನ್ನು ನೆನಪಿಸುತ್ತದೆ. ಇಂತಹ ಭೌತಿಕ ವಸ್ತುಪರಿಕರಗಳಿಂದ ಇತಿಹಾಸ ರಚನೆಗೆ ಪೂರಕವಾದ ಧಾತುಗಳನ್ನು ತೆಗೆಯಬಹುದಾಗಿದೆ. ಮನುಷ್ಯನ ಬದುಕಿನ ವಾಸ್ತವಗಳನ್ನು ಈ ಪರಿಕರಗಳ ಮೂಲಕ ಸಂಗ್ರಹಿಸಿ ಅಗತ್ಯತೆಗೆ ಉಪಯೋಗಿಸಿಕೊಳ್ಳಬಹುದಾಗಿದೆ. ಸಂಗ್ರಹಿತ ವಾಸ್ತವಗಳಿಗೆ ಸಂಬಂಧವಿದ್ದು ಒಂದಕ್ಕೊಂದು ಪೂರಕ ಹಾಗೂ ಅವು ಕಾರಣ ಮತ್ತು ಪರಿಣಾಮ, ಘಟನೆ ಮತ್ತು ತತ್ಪರಿಣಾಮ, ಸಂದರ್ಭ ಹಾಗೂ ಪ್ರತಿಕ್ರಿಯೆನ್ನು ವಿಶ್ಲೇಷಿಸುತ್ತವೆ. ಭೌತಿಕ ಪರಿಕರಗಳು ಷೋಕೇಸನ್ನು ಅಲಂಕರಿಸಲ್ಪಡುವ ನಿರ್ಜೀವ ವಸ್ತುಗಳಲ್ಲ; ಅವುಗಳಿಂದ ಅರ್ಥಪೂರ್ಣ ಬದುಕಿನ ಅಂಶಗಳನ್ನು ನಿರ್ವಚಿಸಬಹುದಾಗಿದೆ ಎನ್ನುತ್ತಾರೆ– ಅಮೇರಿಕನ್ ಚಿಂತಕ ಜೊನ್ ಟಿ ಸ್ಕಿಲ್ಬೆಕರ್[1].

ಭಾರತದಲ್ಲೂ ಭೌತಿಕ ವಸ್ತು ಪರಂಪರೆಯ ಅಧ್ಯಯನಕ್ಕೆ ವಿಪುಲವಾದ ಅವಕಾಶವಿದೆ. ನಮ್ಮ ಜನಪದರ ಬದುಕಿನ ವಿವಿಧ ಮಗ್ಗುಲುಗಳನ್ನು, ಜೀವನ ವಿಧಾನಗಳನ್ನು ತಿಳಿದುಕೊಳ್ಳಲು ವಸ್ತುಸಂಗ್ರಹಾಲಯಗಳ ಮೂಲಕ ಸಾಧ್ಯವಾಗಿಸಿಕೊಳ್ಳಬಹುದು. ಭಾರತದಲ್ಲಿ ವಸ್ತುಸಂಗ್ರಹಾಲಯಗಳು ಹಾಗೂ ವಸ್ತು ವಿಶೇಷಗಳ ಅಧ್ಯಯನ ಬಹು ನಿರ್ಲಕ್ಷಿತ ಕ್ಷೇತ್ರವಾಗಿದೆ. ವಸ್ತುಸಂಗ್ರಹಾಲಯಗಳ ವಸ್ತುವಿಶೇಷಗಳನ್ನು ಕೇವಲ ಒಂದು ಆಲಂಕಾರಿಕ ವಸ್ತುವಾಗಿ, ವಸ್ತುಸಂಗ್ರಹಾಲಯವನ್ನು ವಸ್ತುಗಳನ್ನು ಶೇಖರಣೆ ಮಾಡುವ ಸ್ಥಳ ಎಂಬ ದೃಷ್ಟಿಯಿಂದ ಮಾತ್ರ ನೋಡಲಾಗಿದೆ. ಐತಿಹಾಸಿಕ ಹಾಗೂ ಸಾಂಸ್ಕೃತಿಕ ಮುನ್ನಡೆಯಲ್ಲಿ ವಸುಸಂಗ್ರಹಾಲಯಗಳ ಪಾತ್ರ ಪರಿಣಾಮಕಾರಿಯಾಗಬೇಕಾದಲ್ಲಿ ಅವುಗಳ ಬಗೆಗಿನ ದೃಷ್ಟಿಕೋನವನ್ನು ಬದಲಿಸಿಕೊಳ್ಳಬೇಕಾಗಿದೆ. ಭೌತಿಕ ವಸ್ತುವೊಂದನ್ನು ಪ್ರಾಥಮಿಕ ಆಕರವಾಗಿ ಬಳಸಬಹುದಾದ ಎಲ್ಲಾ ಸಾಧ್ಯತೆ ಇದ್ದರೂ, ಪ್ರಧಾನಧಾರೆಯ ಇತಿಹಾಸ ರಚನೆಯ ಕ್ರಮಗಳಲ್ಲಿ ಅದನ್ನು ನಿರ್ಲಕ್ಷಿಸಲಾಗಿದೆ.

ಬಿ.ಎ. ವಿವೇಕ ರೈಯವರು ಅಭಿಪ್ರಾಯ ಪಡುವಂತೆ, “ಇತಿಹಾಸ ರಚನೆಯಲ್ಲಿ ಲಿಖಿತ ಪರಂಪರೆಯನ್ನೆ ಅವಲಂಬಿಸಿ ಬಹುಸಂಖ್ಯಾತ ಜನಸಮುದಾಯದ ಭಾವನೆಗಳನ್ನು ಸಂಪೂರ್ಣ ಕಡೆಗಣಿಸಿ ನಾವು ಸಾಕಷ್ಟು ತಪ್ಪುಗಳನ್ನು ಮಾಡಿದ್ದೇವೆ. ನಮ್ಮ ಲಿಖಿತ ಇತಿಹಾಸಗಳು ಅಪರಿಪೂರ್ಣ, ಪಾರ್ಶ್ವಿಕ, ಅರ್ಧಸತ್ಯಗಳನ್ನು ಒಳಗೊಂಡ ‘ಬಾಕಿ ಇತಿಹಾಸ’ ವಾಗಿ ಉಳಿದು ಬಂದಿರುವುದು ಇಂದು ನಮ್ಮೆಲ್ಲರ ಗಮನಕ್ಕೆ ಬಂದಿದೆ. ಕಂಠಸ್ಥ ಪರಂಪರೆಯ ಸಾಮಗ್ರಿಗಳಲ್ಲಿ ಕಾಲ್ಪನಿಕತೆ ಸೇರಿಕೊಂಡಿರಬಹುದು. ಘಟನೆಗಳು ಕಾಲದ ಅಂತರವನ್ನು ಮರೆತು ಒಂದಾಗಿರಬಹುದು. ವ್ಯಕ್ತಿಗಳ, ಸ್ಥಳಗಳ ಹೆಸರು ವ್ಯತ್ಯಾಸಗೊಂಡಿರಬಹುದು. ಕಾಲದ ಬೆಳವಣಿಗೆಯ ಮೂಲದ ತಿರುಳಿನ ಸುತ್ತ ಕವಚಗಳ ಪದರುಗಳನ್ನ ಪೇರಿಸಿರಬಹುದು, ಆದರೆ ಬಹುಜನರ ನೋವು–ನಲಿವುಗಳು ಆಸೆ–ಆಕಾಂಕ್ಷೆಗಳು ಬೇರೆ ಬೇರೆ ರೂಪಗಳಲ್ಲಿ ದಾಖಲಾಗಿ ಪ್ರಸರಿಸುತ್ತಾ ಇಂತಹ ಕಂಠಸ್ಥ ಪರಂಪರೆಯಾಗಿದೆ ಎನ್ನುವುದನ್ನು ಮರೆಯಲಾಗದು. ಇಂತಹ ಕಂಠಸ್ಥ ಪರಂಪರೆಯ ಸಾಮಾಗ್ರಿಗಳನ್ನು ಬಳಸಿ ಕೊಂಡು ಇತಿಹಾಸ ರಚನೆ ಮಾಡಿದಾಗ ಸಂಭವಿಸಬಹುದಾದ ತಪ್ಪುಗಳು ಲಿಖಿತ ಪರಂಪರೆಯ ಇತಿಹಾಸ ರಚನೆಯಲ್ಲಿ ಆಗಬಹುದಾದ ತಪ್ಪುಗಳಷ್ಟು ಘೋರವಾಗಿರುವುದಿಲ್ಲ, ಅಮಾನವೀಯವಾಗಿರುವುದಿಲ್ಲ, ಪ್ರಜಾಪ್ರಭುತ್ವ ವಿರೋಧಿಯಾಗಿರುವುದಿಲ್ಲ ಎನ್ನುವುದನ್ನು ನಾವು ಮನಗಂಡಷ್ಟು ಒಳ್ಳೆಯದು. ಭಾರತದ ಬೇರೆ ಬೇರೆ ಪ್ರದೇಶಗಳ ಇತಿಹಾಸ ರಚನೆಯಲ್ಲಿ ಇತಿಹಾಸ, ಜಾನಪದ ಮತ್ತು ಸಾಹಿತ್ಯ– ಈ ಮೂರು ಶಿಸ್ತುಗಳ ಮಂದಿ ಪರಸ್ಪರ ಕಲೆತು ಇಂದು ಕೆಲಸ ಮಾಡಬೇಕಾಗಿದೆ”.[೭] ತುಳುನಾಡಿನ ಚರಿತ್ರೆಯೂ ಇದಕ್ಕೆ ಅಪವಾದವಲ್ಲ. ಇದೂ ಕೂಡಾ ಅರಸು ಕೇಂದ್ರಿತ ಚರಿತ್ರೆಯಾಗಿಯೇ ಇತ್ತೀಚಿನವರೆಗೆ ದಾಖಲಾಗಿದೆ. ಅಂಚಿನ ಇತಿಹಾಸ ಕಥನದ ಕುರಿತು ಇತ್ತೀಚೆಗಷ್ಟೆ ಸಂಶೋಧಕರಲ್ಲಿ ಒಲವು ವ್ಯಕ್ತವಾಗುತ್ತಿದೆ.

ಈ ಕೊರತೆಯನ್ನು ಅಳಿಸಿ ಹಾಕುವ ಕಾರ್ಯದಲ್ಲಿ ಮೌಖಿಕ ಮತ್ತು ಭೌತಿಕ ಇತಿಹಾಸ ಸಾಮಾಗ್ರಿಗಳು ಮಹತ್ವದ ಆಕರಗಳಾಗಬಲ್ಲವು. ಮೌಖಿಕ ಸಾಹಿತ್ಯದ ಜನಪದರು ತಮ್ಮ ಇತಿಹಾಸವನ್ನು ಜೀವಂತವಾಗಿ ಉಳಿಸಿಕೊಂಡು ಬಂದಿದ್ದಾರೆ. ತುಳುನಾಡಿನ ಇತಿಹಾಸದ ಬಗೆಗೆ ಶೀನಪ್ಪ ಹೆಗ್ಗಡೆಯವರು ಅಭಿಪ್ರಾಯಪಡುವಂತೆ, “ನಮ್ಮ ತುಳುನಾಡಿನ ಪ್ರಾಚೀನ ಇತಿಹಾಸವನ್ನು ಸಂಶೋಧನೆ ಮಾಡಿ ಗ್ರಂಥ ಬರೆಯಬೇಕಾದರೆ ವಿದ್ವಾಂಸರು ಬರೆದಿಟ್ಟ ಗ್ರಂಥಗಳಾಗಲಿ, ಪುರಾಣಗಳಾಗಲಿ ಸಾಕಷ್ಟು ಆಧಾರವಾಗಲಾರವು; ತುಳುವರ ಗಾದೆ, ಕಥೆ, ಕಬಿತ, ಪಾಡ್ದನಗಳೆಂಬ ಜಾನಪದ ಸಾಹಿತ್ಯ ಇವುಗಳ ಸಂಗ್ರಹದಿಂದ ಶೋಧನೆ ಮಾಡಿ ಬರೆಯಬೇಕು”[೮]. ಯಾಕೆಂದರೆ ಅನಕ್ಷರಸ್ಥ ಜನರ ಜೀವನಾನುಭವದಿಂದ ರೂಪುಗೊಂಡ ಈ ಅಭಿವ್ಯಕ್ತಿಗಳು ಅವರ ಅಗಾಧ ಆಲೋಚನಾ ಲಹರಿ, ಶಬ್ದ ಭಂಡಾರ, ಲಯಬದ್ಧತೆ, ವಿನೋದಪ್ರಿಯತೆಯನ್ನು ಸೂಚಿಸುವುದು ಮಾತ್ರವಲ್ಲ ಸಾಂಸ್ಕೃತಿಕ ಇತಿಹಾಸ ರಚನೆಯಲ್ಲಿ ಮಹತ್ತರ ಪಾತ್ರವಹಿಸಬಲ್ಲದು.

ಪ್ರಸ್ತುತ ನಿಬಂಧದಲ್ಲಿ ಬಂದಿರುವ ‘ಸಾಂಸ್ಕೃತಿಕ’ ಎಂಬ ವಿಶೇಷಣದ ಕುರಿತು ಟಿಪ್ಪಣಿಯ ಅಗತ್ಯವಿದೆ. ಆಂಗ್ಲ ಭಾಷೆಯ ‘ಕಲ್ಚರ್’ ಎಂಬ ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ‘ಸಂಸ್ಕೃತಿ’ಎನ್ನುವ ಶಬ್ದವು ಬಳಕೆಯಲ್ಲಿದೆ.

ಸಂಸ್ಕೃತಿ ಎನ್ನುವ ಪದ ತೀರಾ ಇತ್ತೀಚಿನದ್ದಾಗಿದೆ. ಸಾಮಾನ್ಯವಾಗಿ 'ಬದುಕು' ಎಂದು ಪರಿಭಾವಿಸಲಾಗಿರುವ ಕಲ್ಪನೆಯನ್ನೆ ಈ ಸಂಸ್ಕೃತಿ ಎನ್ನುವ ಪದ ಒಳಗೊಳ್ಳುತ್ತದೆ. ನಾಗರಿಕತೆಯ ಹಾದಿಯಲ್ಲಿ ಮಾನವನು ತನ್ನ ಜೀವನ ಕ್ರಮದಲ್ಲಿ ಅನೇಕ ಪರಿಷ್ಕಾರಗಳನ್ನು ಮಾಡಿಕೊಂಡು ಬಂದಿದ್ದಾನೆ. ಹೀಗಾಗಿ ಮಾನವನು ಪ್ರಾಣಿಗಳಿಗಿಂತ ಭಿನ್ನವಾದ 'ಬುದ್ಧಿಪೂರ್ವಕ' ಮಾನವನಾಗಿ ರೂಪುಗೊಂಡಿದ್ದಾನೆ. ಪ್ರಾಣಿ ಸಹಜವಾಗಿದ್ದ ಮನುಷ್ಯನನ್ನು ಬುದ್ಧಿವಂತ ಮಾನವನನ್ನಾಗಿ ರೂಪುಗೊಳಿಸಿದ್ದೆ ಈ ಸಂಸ್ಕೃತಿಯಾಗಿದೆ. ಈ ಹಾದಿಯಲ್ಲಿ ಜೀವನವನ್ನು ರೂಪಿಸುವ ಕೆಲಸವನ್ನು ಮಾನವ ಮಾಡಿಕೊಂಡು ಬಂದ. ಆಹಾರ, ವಸ್ತ್ರ, ವಸತಿ, ಮೈಥುನ ಮೊದಲಾದುದಕ್ಕೆ ಸೀಮಿತವಾದ ಬದುಕನ್ನು ಹಾಡು, ಕುಣಿತ, ಹರಟೆ, ಕಲೆ ಸಾಹಿತ್ಯಗಳಿಗೆ ವಿಸ್ತರಿಸಿಕೊಂಡ. ಹೀಗೆ ಜೀವನಕ್ಕೆ ಬೇಕಾದ ಅಗತ್ಯ ಕೌಶಲಗಳನ್ನೂ ಕಂಡುಕೊಳ್ಳುವುದಕ್ಕೆ ಆರಂಭಿಸಿದ. ಸಮುದಾಯ ಪ್ರಜ್ಞೆಯ ಒಳಗೆ ಜಾಗೃತಗೊಂಡ ಮಾನವನು ಭಾಷೆ, ನಡವಳಿಕೆ, ಆಚಾರ–ವಿಚಾರ, ಆರಾಧನೆಗಳಲ್ಲಿ ನಿರ್ದಿಷ್ಟತೆಯನ್ನು ಹಾಗೂ ಅನನ್ಯತೆಯನ್ನು ಕಲ್ಪಿಸಿಕೊಂಡ. ಹೀಗೆ ಬದುಕಿಗೆ ಪೂರಕವಾದ ಅಂದರೆ ಆರ್ಥಿಕ, ಸಾಮಾಜಿಕ, ರಾಜಕೀಯ ಮುಂತಾದವುಗಳ ಸಮಗ್ರ ಅಧ್ಯಯನವೇ ಸಾಂಸ್ಕೃತಿಕ ಅಧ್ಯಯನವೆಂದು ಸ್ಪಷ್ಟಪಡಿಸಬಹುದು.

ಮಾನವನು ನಾಗರಿಕತೆಯೆಡೆಗೆ ಚಲಿಸಿದ ಪ್ರಯಾಣದ ಹೆಜ್ಜೆಗಳನ್ನು ಆ ದೇಶಕಾಲದಲ್ಲಿ ಮಾನವನು ಬಳಸಿದ ಭೌತಿಕ ವಸ್ತುಗಳ ಅಸ್ತಿತ್ವದಿಂದ ಗುರುತಿಸಬಹುದು. ಆದಿಮ ಮಾನವನು ತನ್ನ ಮೂಲಭೂತ ಅಗತ್ಯಗಳಾದ ಆಹಾರ, ವಸತಿ, ಮೈಥುನ ಮೊದಲಾದವುಗಳನ್ನು ಪೂರೈಸಿಕೊಳ್ಳುವ ಸಲುವಾಗಿ ಕಾಡು ಮೇಡುಗಳಲ್ಲಿ ಅಲೆದಾಡುತ್ತಿದ್ದ. ಆಹಾರಕ್ಕಾಗಿ ತನ್ನ ಪರಿಸರದಲ್ಲಿ ಸುಲಭವಾಗಿ ಲಭ್ಯವಾಗುತ್ತಿದ್ದ ಗೆಡ್ಡೆಗೆಣಸುಗಳನ್ನು ಅರಸುತ್ತಿದ್ದವನು, ಕ್ರಮೇಣ ಕಾಡುಪ್ರಾಣಿಗಳನ್ನು ಬೇಟೆಯಾಡುವುದಕ್ಕೆ ಆರಂಭಿಸಿದ. ಆ ಕಾಲದಲ್ಲಿ ಮಾನವನಿಗೆ ತಾನು ಬದುಕುತ್ತಿದ್ದ ಪರಿಸರವು ಅನೇಕ ರೀತಿಯ ಸವಾಲುಗಳನ್ನು ಒಡ್ಡಿತ್ತು. ಹಾಗಾಗಿ, ಬೇಟೆಯು ಎರಡು ಮುಖ್ಯ ಕಾರಣಗಳಿಗಾಗಿ ಅವಶ್ಯವಾಗಿತ್ತು: ೧) ಆಹಾರದ ನೆಲೆಯಾಗಿ ಮತ್ತು ೨) ಕಾಡುಗಳಲ್ಲಿ ಆಗಿಂದಾಗ್ಗೆ, ಎದುರಾಗುವ ಕಾಡುಪ್ರಾಣಿಗಳಿಂದ ರಕ್ಷಣೆಯನ್ನು ಪಡೆಯುವುದಕ್ಕೋಸ್ಕರವಾಗಿತ್ತು. ಆತ ಬೇಟೆಗಾಗಿ, ಕಲ್ಲಿನ ಆಯುಧಗಳನ್ನು, ಮರದ ಈಟಿ–ಭರ್ಚಿಗಳನ್ನು ಬಳಸಲು ಆರಂಭಿಸಿದ ಬಳಿಕ ಕ್ರಮೇಣ ಬೆಂಕಿಯ ಉಪಯೋಗವನ್ನೂ ಕಂಡುಕೊಂಡ, ಒಂದೇ ಕಡೆ ನೆಲೆನಿಂತು ವಾಸಿಸುವುದಕ್ಕೆ ಆರಂಭಿಸಿದ ಆತ ವಾಸಕ್ಕೆ ತನ್ನದೆ ಕಲ್ಪನೆಯ ವಾಸಯೋಗ್ಯವಾದ ವ್ಯವಸ್ಥೆಯನ್ನು ನಿರ್ಮಿಸಿಕೊಂಡ. ಮಳೆ, ಗಾಳಿ, ಬಿಸಿಲು, ಪ್ರಾಣಿಗಳಿಂದ ರಕ್ಷಣೆ ಪಡೆದು, ಬದುಕು ಕಟ್ಟಲು ಆರಂಭಿಸಿ ಒಂದು ಸಾಮಾಜಿಕ ವ್ಯವಸ್ಥೆಯ ಒಳಗೆ ತನ್ನ ಬದುಕನ್ನು ಒಗ್ಗಿಸಿಕೊಂಡ.

ಕಾಡುಮೇಡುಗಳಲ್ಲಿ ಅಲೆದಾಡಿ ಗೆಡ್ಡೆಗೆಣಸುಗಳನ್ನು ಸಂಗ್ರಹಿಸಿ, ಬೇಟೆಯಾಡಿ ಹೊಟ್ಟೆ ಹೊರೆಯುತ್ತಿದ್ದ ಮನುಷ್ಯ ಕ್ರಮೇಣ ನಿರ್ದಿಷ್ಟ ಸ್ಥಳದಲ್ಲಿ ನೆಲೆನಿಂತು ಆಹಾರ ಉತ್ಪಾದನಾ ಹಂತಕ್ಕೆ ತಲುಪಿದ. ಕೃಷಿಕಾರ್ಯದಲ್ಲಿ ತೊಡಗಿಸಿಕೊಂಡು ಬೆಳೆಗಳನ್ನು ಬೆಳೆಯಲಾರಂಭಿಸಿದ ನಂತರದ ಹಂತದಲ್ಲಿ ಅದಕ್ಕೆ ಪೂರಕವಾದ ಭೌತಿಕ ಪರಿಕರಗಳನ್ನು ಆವಿಷ್ಕರಿಸಿದ. ಸಾಕು ಪ್ರಾಣಿಗಳಾದ ಎಮ್ಮೆ, ಕೋಣ, ಎತ್ತು, ದನ, ಕೋಳಿ ಮುಂತಾದವುಗಳನ್ನು

ಪಳಗಿಸಿ ಬಳಸಲು ಪ್ರಾರಂಭಿಸಿದ. ನೊಗ, ನೇಗಿಲು ಮುಂತಾದ ಅನಿವಾರ್ಯ ಪರಿಕರಗಳನ್ನು ಸೃಷ್ಟಿಸಿಕೊಂಡ. ಕರಾವಳಿ ಕರ್ನಾಟಕದ ಭೌಗೋಳಿಕ ಪರಿಸರ ಭತ್ತದ ಬೇಸಾಯಕ್ಕೆ ಅನುಕೂಲಕರವಾಗಿರದಿದ್ದರೂ ಗುಡ್ಡಬೆಟ್ಟಗಳನ್ನು ಸಮತಟ್ಟು ಮಾಡಿ ಭತ್ತದ ಬೆಳೆಯನ್ನು ಬೆಳೆಯಲಾರಂಭಿಸಿದ. ಹೀಗೆ ಕುಟುಂಬ ವ್ಯವಸ್ಥೆಯ ಒಳಗೆ ತನ್ನ ಬದುಕನ್ನು ನಿರ್ವಚಿಸಿಕೊಳ್ಳಲು ಹಲವಾರು ಶತಮಾನಗಳೇ ಬೇಕಾಯಿತು. ಸಂಘಟಿತ ಮಾನವನಿಗೆ ಆಹಾರ, ರಕ್ಷಣೆ, ವಾಸಸ್ಥಾನ ನಿರ್ಮಾಣ, ಕೃಷಿ, ಮೊದಲಾದ ಅಗತ್ಯ ಕೆಲಸಗಳಿಗಾಗಿ, ತಾಂತ್ರಿಕ ಸ್ವರೂಪದ ಸಲಕರಣೆಗಳು ಅವಶ್ಯಕವಿದ್ದವು. ಅನಿವಾರ್ಯತೆ ಹೊಸ ಆವಿಷ್ಕಾರಕ್ಕೆ ಮೂಲ ಎನ್ನುವಂತೆ ಆಯಾಯ ಪ್ರಾದೇಶಿಕ ವೈವಿಧ್ಯಕ್ಕೆ ತಕ್ಕಂತೆ ಅಂದಂದಿನ ಅವಶ್ಯಕತೆಯನ್ನು ಪೂರೈಸಿಕೊಂಡು ಬದುಕು ಕಟ್ಟಿದ. ತನ್ನ ಬದುಕಿಗಾಗಿ ಪರಿಸರದಲ್ಲಿ ಸುಲಭದಲ್ಲಿ ಲಭ್ಯವಾಗುವ ವಸ್ತುಗಳನ್ನು ಒಂದೋ ಯಥಾಸ್ಥಿತಿಯಲ್ಲಿ ಅಥವಾ ತನಗೆ ತೋಚಿದ ರೀತಿಯಲ್ಲಿ ಮಾರ್ಪಾಡು ಮಾಡುತ್ತಾ ಮುಂದೆ ಸಾಗಿರುವುದನ್ನು ಗುರುತಿಸಬಹುದು. ಅಂದರೆ ಮನುಷ್ಯನ ವಿಕಾಸದ ಹಂತದಲ್ಲಿ ಈ ವಸ್ತು ಸಂಸ್ಕೃತಿಯು ಕಾಲಕ್ಕೆ ತಕ್ಕಂತೆ, ಅವಶ್ಯಕತೆಗೆ ತಕ್ಕಂತೆ, ಪರಿಷ್ಕರಣೆಗೊಂಡು ಬಂದಿರುವುದನ್ನು ಕಾಣಬಹುದು.

ಕರಾವಳಿ ಕರ್ನಾಟಕ ಬಹು ಹಿಂದಿನಿಂದಲೇ ವ್ಯಾಪಾರ-ವ್ಯವಹಾರಕ್ಕೆ ತೆರೆದುಕೊಂಡಿತ್ತು. ಮಧ್ಯಪ್ರಾಚ್ಯ ದೇಶಗಳೊಂದಿಗೆ ಬಹು ಹಿಂದಿನಿಂದಲೇ ಸಂಪರ್ಕವಿದ್ದ ದಾಖಲೆಗಳು ಲಭ್ಯವಾಗುತ್ತವೆ. ಎರಡು ಸಾವಿರ ವರ್ಷಗಳ ಹಿಂದೆಯೇ ಗ್ರೀಕ್ ಪ್ರಹಸನಗಳಲ್ಲಿ ಕಂಡು ಬಂದಿರುವ ಮಲ್ಪೆನಾಯಕನ ಉಲ್ಲೇಖ ತುಳುನಾಡಿನ ವ್ಯಾಪಾರವು ವಿದೇಶಿ ಸಂಪರ್ಕಕ್ಕೆ ಒಳಗಾಗಿತ್ತು ಎನ್ನುವುದರಲ್ಲಿ ಅನುಮಾನವಿಲ್ಲ. ಕ್ರಿ.ಶ ೧೬ ನೇಯ ಶತಮಾನದ ಪೂರ್ವಾರ್ಧದಲ್ಲಿ ಕಾಣಿಸಿಕೊಂಡ ಕವಿ ರತ್ನಾಕರವರ್ಣಿ 'ಭರತೇಶ ವೈಭವ'ದಲ್ಲಿ ಹೇಳಿರುವ "ದೋಣಿ, ದುಗ್ಗಿ, ಕಪ್ಪಲು, ದೊಡ್ಡ ಹಡಗು"ಗಳು ಈ ಭಾಗದ ಜನರ ಸಾಹಸ ಮತ್ತು ವ್ಯಾಪಾರಕ್ಕೆ ಸಾಕ್ಷಿಯಾಗಿದೆ.

ಕರಾವಳಿ ಕರ್ನಾಟಕದ ಜನರ ಎಲ್ಲಾ ಸಾಂಸ್ಕೃತಿಕ ಅಭಿವ್ಯಕ್ತಿಯ ಹಿಂದಿರುವ ಚಾಲಕಶಕ್ತಿಯೆಂದರೆ ಮುಖ್ಯ ವೃತ್ತಿಯಾಗಿದ್ದ ಕೃಷಿ ಬದುಕು. ಪ್ರತಿಯೊಂದು ಆಚರಣೆ, ಆರಾಧನೆ, ನಂಬಿಕೆ, ನಡವಳಿಕೆ, ಹಾಡು, ಕುಣಿತ, ಕ್ರೀಡೆ ಇವೆಲ್ಲವುಗಳ ಹಿಂದೆ ಮುಖ್ಯ ವೃತ್ತಿ ಮಿಳಿತವಾಗಿತ್ತು. ಕೃಷಿ ಬದುಕು ಈ ಜನರ ಆರ್ಥಿಕ, ಸಾಮಾಜಿಕ ಮತ್ತು ಅವಶ್ಯಕ ಪೂರೈಸುವ ಘಟಕವಾಯಿತು. ಆದರೆ, ಬೇಸಾಯ ಕ್ಷೀಣಿಸುತ್ತಾ ಬಂದ ಹಾಗೆ ಬೇಸಾಯದ ಹಿಂದಿದ್ದ ಸಾಂಸ್ಕೃತಿಕ ಮೌಲ್ಯಗಳೂ ಮರೆಯಾಗುತ್ತಿದೆ. ಜೊತೆಜೊತೆಗೆ ಬೇಸಾಯದ ಸಂದರ್ಭದಲ್ಲಿ ಉಪಯೋಗಿಸಲಾಗುತ್ತಿದ್ದ ಭೌತಿಕ ವಸ್ತು ಪರಂಪರೆ ಕೂಡಾ ಅವಸಾನದ ಅಂಚಿನಲ್ಲಿವೆ. ಒಂದು ಅಧ್ಯಯನದ ಮೂಲಕ ಈ ವಸ್ತುಗಳನ್ನು ಉಳಿಸಿಕೊಳ್ಳಲಾಗದಿದ್ದರೂ, ಇದರ ಹಿಂದಿರುವ ಸಾಂಸ್ಕೃತಿಕ ಇತಿಹಾಸವನ್ನು ಪುನರ್ ರಚಿಸಲು ಸಾಧ್ಯ. ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿನ ಪ್ರತೀಕವಾಗಿ ಅಳಿದುಳಿದಿರುವ ಈ ಭೌತಿಕ ವಸ್ತುಗಳು, ಇತಿಹಾಸ ಪುನರ್ ರಚನೆಯಲ್ಲಿ ಮಹತ್ತರವಾದ ಪಾತ್ರವಹಿಸಬಹುದು. ಆದುದರಿಂದ, ಇಲ್ಲಿನ ಮುಖ್ಯ ವೃತ್ತಿಯಾದ ಕೃಷಿಕಾರ್ಯದಲ್ಲಿ, ಗೃಹೋಪಯೋಗಿ ವಸ್ತುವಿಶೇಷಗಳಲ್ಲಿ, ಕರಕುಶಲ ಸಾಮಾಗ್ರಿಗಳಲ್ಲಿ, ಆಚರಣೆ ಸಂಪ್ರದಾಯಗಳಲ್ಲಿ, ಉಪಯೋಗಿಸಲ್ಪಡುವ ಭೌತಿಕ ವಸ್ತು ಪರಿಕರಗಳ ಕಲಾತ್ಮಕತೆ, ಸಾಂಸ್ಕೃತಿಕವಾಗಿ ಅವುಗಳು ಪಡೆದ ಮಹತ್ವವನ್ನು

ಗುರುತಿಸಿ, ಚಾರಿತ್ರಿಕವಾಗಿ ಶಾಸ್ತ್ರೀಯ ಚೌಕಟ್ಟಿನಲ್ಲಿ ಅಭ್ಯಸಿಸುವುದು ಈ ಪ್ರಬಂಧದ ಪ್ರಮುಖ ಉದ್ದೇಶ. ಈ ಭೌತಿಕ ವಸ್ತು ಪರಿಕರಗಳ ಸಮಗ್ರ ಅಧ್ಯಯನದ ಮೂಲಕ ಕರಾವಳಿ ಕರ್ನಾಟಕದ ತುಳುವರ ಜಗತ್ತನ್ನು ಮತ್ತೆ ಹೊಸದಾಗಿ ನಿರ್ವಚಿಸಬಹುದಾಗಿದೆ. ಅನೇಕ ಸಾಂಸ್ಕೃತಿಕ ಇತಿಹಾಸದ ವಸ್ತುಸಂಗ್ರಹಾಲಯದ ಭೌತಿಕ ವಸ್ತುಪರಿಕರಗಳು ಒಂದು ಶಾಸನ ಅಥವಾ ಲಿಖಿತ ದಾಖಲೆಗಳು ನೀಡಲಾಗದ ಮಾಹಿತಿಗಳನ್ನು ಒದಗಿಸುವುದರಿಂದ ಐತಿಹಾಸಿಕ ನೆಲೆಯಿಂದ ಇವುಗಳ ಅಧ್ಯಯನವನ್ನು ನಡೆಸಿ, ನಿಖರತೆಯನ್ನು ಸ್ಪಷ್ಟಪಡಿಸುವುದೆ ಮುಖ್ಯ ಉದ್ದೇಶವಾಗಿದ್ದು, ಇತರ ಉದ್ದೇಶಗಳನ್ನು ಈ ಕೆಳಗೆ ನೀಡಲಾಗಿದೆ:

- ವಸ್ತುಸಂಗ್ರಹಾಲಯಗಳ ಸ್ವರೂಪ, ಹುಟ್ಟು ಮತ್ತು ಬೆಳವಣಿಗೆಯ ಅಧ್ಯಯನ
- ಕೃಷಿಸಂಸ್ಕೃತಿ–ಪರಂಪರೆಯಲ್ಲಿ ಭೌತಿಕ ಪರಿಕರಗಳು ಮತ್ತು ಇತಿಹಾಸದ ಅಧ್ಯಯನ
- ಗ್ರಾಮೀಣ ಕರಕುಶಲ ಸಾಧನಗಳ ಅಧ್ಯಯನ ಹಾಗೂ ಇತಿಹಾಸದ ರಚನೆ
- ಗೃಹೋಪಯೋಗಿ ವಸ್ತುಗಳ ಅಧ್ಯಯನ
- ಆಚರಣೆಗಳು ಮತ್ತು ಸಂಪ್ರದಾಯಗಳ ಅಧ್ಯಯನ
- ವಸ್ತುಪರಿಕರಗಳ ಮೂಲಕ ಕರಾವಳಿ ಕರ್ನಾಟಕದ ಜನರ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಇತಿಹಾಸವನ್ನು ಪುನರ್‌ರಚಿಸುವುದು.

ಒಂದು ಕಾಲಘಟ್ಟದಲ್ಲಿ ಬದುಕಾಗಿದ್ದ ವಸ್ತುಗಳು ಕಾಲಾಂತರದಲ್ಲಿ ಅದರ ಬಳಕೆ ಸ್ಥಗಿತಗೊಂಡು, ಸ್ಥಗಿತಗೊಂಡ ತಕ್ಷಣದಿಂದ ಅದೊಂದು ಸಾಮಾಜಿಕ ಅಧ್ಯಯನ ವಿಷಯದ ವಸ್ತುವೆನಿಸಿಕೊಳ್ಳುತ್ತದೆ. ಈ ವಸ್ತುಗಳು ವಸ್ತುಸಂಗ್ರಹಾಲಯ ಸೇರಿ ನಮ್ಮ ಗತದ ಪ್ರತಿಷ್ಠೆಯ ವಿಷಯವೆನಿಸಿಕೊಳ್ಳುತ್ತದೆ. ಇದೊಂದು ಶಿಸ್ತಿನ ಸ್ವರೂಪವಿಲ್ಲದೆ ಅಡ್ಡಾದಿಡ್ಡಿಯಾಗಿದ್ದು, ಇತಿಹಾಸರಚನೆಯ ವಿಧಾನವೊಂದರ ಪ್ರಕಾರ ವ್ಯವಸ್ಥಿತಗೊಳಿಸಿದಾಗ ಇತಿಹಾಸ ಪುನರ್‌ರಚನೆಯಾಗುವುದು ಮಾತ್ರವಲ್ಲ, ತಳಮಟ್ಟದ ಅಧ್ಯಯನ ಸಾಧ್ಯವಾಗುತ್ತದೆ.

"ಇತಿಹಾಸಕಾರ ಜಾನಪದದ ಕಡೆಗೆ ಲಕ್ಷ್ಯವೀಯದಿರುವುದಂತು ಅಕ್ಷಮ್ಯ ವಿಚಾರವಾಗಿದೆ. ಗೀತೆ, ಕಥೆ, ಗಾದೆ, ಒಗಟು, ಬಯಲಾಟ, ಐತಿಹ್ಯ, ಪುರಾಣ, ಸಂಪ್ರದಾಯ ಇವೇಮೊದಲಾದ ಜಾನಪದ ಪ್ರಕಾರಗಳಲ್ಲಿ ಐತಿಹಾಸಿಕಾಂಶಗಳು ಸಾಂದ್ರವಾಗಿ ಸಮಾವೇಶಗೊಂಡಿವೆ. ಅನೇಕ ಕಥನ ಕಾವ್ಯಗಳು ಪೃಥ್ವಿರಾಜ, ಕುಮಾರರಾಮ, ಮಲ್ಲಸರ್ಜನಾಯಕ, ಚನ್ನಮ್ಮ, ರಾಯಣ್ಣ ಮೊದಲಾದ ವೀರರ ಮತ್ತು ವೀರ ಮಾತೆಯರ ಸುತ್ತ ನೇಯ್ಗೆಗೊಂಡಿರುವುದರಿಂದ, ಅವು ಒಂದೊಂದು ಐತಿಹಾಸಿಕ ಕೃತಿಗಳೆಂದೇ ಹೇಳಬಹುದು. ಪ್ರತಿಯೊಂದು ಪುರಾಣ ಅಥವಾ ಐತಿಹ್ಯದ ಹಿಂದೆ ಚಾರಿತ್ರಿಕ ಘಟನೆಯೊಂದು ಇದ್ದೇ ಇರುತ್ತದೆ; ಅವು ಪ್ರಚ್ಛನ್ನ ಇತಿಹಾಸಗಳು. ಕರಿಬಂಟನ ಕಾಳಗವಾಗಲಿ, ಸಾರಂಗಧರ ನಾಟಕವಾಗಲಿ ನಡೆದ ಸಂಗತಿಯೊಂದರ ಚಪ್ಪರದ ಮೇಲೆ ಕವಿ ಹಬ್ಬಿಸಿರುವ ಕಲಾಲತೆ. ಒಂದು ನಾಡಿನ ಪ್ರಾಮಾಣಿಕವಾದ ಸಾಂಸ್ಕೃತಿಕ ಚರಿತ್ರೆಗೆ ಬೇಕಾದ ಸಾಮಗ್ರಿಯನ್ನು ಜಾನಪದದಿಂದ

ಪಡೆಯಬೇಕಾಗುತ್ತದೆ. ಚರಿತ್ರೆಯಲ್ಲಿ ಕಾಣಬಹುದಾದ ಪಿಗ್ಗಗಳನ್ನು ಜಾನಪದದ ನೆರವಿನಿಂದ ತುಂಬಬಹುದಾಗಿದೆ. ಲಿಖಿತ ಶಾಸನಗಳಂತೆಯೇ ಈ ಅಲಿಖಿತ ಶಾಸನಗಳಿಗೂ ಚರಿತ್ರೆಕಾರ ಬೆಲೆಕೊಟ್ಟಿದ್ದಾದರೆ ಇತಿಹಾಸದ ಅಧ್ಯಯನ ಪೂರ್ಣವಾಗುತ್ತದೆ”[೯] ಎನ್ನುವ ದೆ.ಜವರೇಗೌಡರ ಮಾತು ಇಲ್ಲಿ ಮೌಖಿಕ ಸಾಹಿತ್ಯ ಇತಿಹಾಸ ರಚನೆಯಲ್ಲಿ ಬಳಸಿಕೊಳ್ಳಬೇಕಾದ ಔಚಿತ್ಯವನ್ನು ಸೂಚಿಸುತ್ತದೆ. ಚರಿತ್ರೆಯೆನ್ನುವುದು ಕೇವಲ ಕಾಲ ಮತ್ತು ಘಟನೆಗಳ ಮೊತ್ತವಷ್ಟೆ ಅಲ್ಲ. ಮೌಖಿಕ ಸಾಹಿತ್ಯ, ಭೌತಿಕ ಸಾಮಾಗ್ರಿಗಳೂ ಚರಿತ್ರೆಯ ಭಾಗಗಳೇ ಆಗುತ್ತವೆ.[೧೦]

ಬಿ.ಎ ಸಾಲೆತ್ತೂರ್ ಪ್ರಕಾರ ಕೃಷಿ, ಬೇಸಾಯವನ್ನೇ ಆಶ್ರಯಿಸಿದ್ದ ಜನಸಾಮಾನ್ಯರ ಇತಿಹಾಸವು ಭೌತಿಕ ವಸ್ತುಗಳಲ್ಲಿ, ಹಾಡು, ಕುಣಿತ, ಜನಪದ ಕತೆ, ನಂಬಿಕೆಗಳಲ್ಲಿ ಅಡಕವಾಗಿರುತ್ತದೆ ಎನ್ನುವುದನ್ನು ಪರಿಗಣಿಸಿಯೇ ಇಲ್ಲ. ‘ಪ್ರಾಚೀನ ಹಾಗೂ ಮಧ್ಯಯುಗೀನ ತುಳುವರ ಅಧ್ಯಯನಕ್ಕೆ ಪಾಡ್ದನಗಳು ಜನಪದ ಗೀತೆಗಳು ಅತ್ಯಂತ ಉಪಯುಕ್ತ ಆಕರಗಳಾಗಿವೆ.[೧೧]

ಮೌಖಿಕ ಸಾಹಿತ್ಯದೊಂದಿಗೆ ಭೌತಿಕ ವಸ್ತುಗಳ ಹಿನ್ನೆಲೆಯಲ್ಲಿ ಲಭ್ಯವಿರುವ ಲಿಖಿತ ದಾಖಲೆಗಳನ್ನೂ ಉಪಯೋಗಿಸಿಕೊಂಡಲ್ಲಿ ಆಕರಗಳಿಗೆ ಕಾಲ, ಸಂದರ್ಭ, ವರ್ಗ ಇದರ ತೀರ್ಮಾನಕ್ಕೆ ಬಳಸುವ ಮಾನದಂಡಗಳು ಸ್ಪಷ್ಟವಾಗಿಲ್ಲವೆನ್ನುವ ಪ್ರಧಾನಧಾರೆಯ ಇತಿಹಾಸ ನಿರೂಪಣಾಕಾರರಲ್ಲಿರುವ ಅನುಮಾನ ದೂರವಾಗುವುದು. ಭೌತಿಕ ಸಂಸ್ಕೃತಿ ಸಂರಚನೆಗಳಾದ ಕೃಷಿ ಉಪಕರಣಗಳನ್ನು, ಗೃಹಬಳಕೆಯ ವಸ್ತುಗಳನ್ನು, ಆಚರಣಾಸಂಬಂಧಿ ವಸ್ತುಗಳನ್ನು, ಕಸುಬುಗಳಲ್ಲಿ ಬಳಕೆಯಾಗುವ ಪರಿಕರಗಳನ್ನು, ವಾಸ್ತು, ದಾರುಶಿಲ್ಪ, ಎಲ್ಲವನ್ನೂ ಕೂಲಂಕುಷವಾಗಿ ಅಧ್ಯಯನ ನಡೆಸಬೇಕಾಗುವುದು. ಇವುಗಳನ್ನು ವಿವಿಧ ಆಕರಗಳಿಂದ ಮುಖ್ಯವಾಗಿ ಮೌಖಿಕ ಸಾಹಿತ್ಯ ಮತ್ತು ಐತಿಹ್ಯಗಳಿಂದ ತಿಳಿದುಕೊಳ್ಳುವ ಪ್ರಯತ್ನ ನಡೆಯುತ್ತಿದೆ. ಅಧ್ಯಯನಕ್ಕೆ ಒಳಪಡುವ ವಸ್ತು ವಿಶೇಷಗಳು ಬೇರೆ ಬೇರೆ ಕಾಲಘಟ್ಟಗಳ ಅಗತ್ಯಗಳಲ್ಲಿ ರೂಪುಗೊಂಡವುಗಳಾಗಿರುತ್ತದೆ.

ಕರಾವಳಿ ಕರ್ನಾಟಕದ ಭೌತಿಕ ವಸ್ತುಪರಿಕರಗಳು ಈ ಪ್ರದೇಶದ ಸಾಂಸ್ಕೃತಿಕ ಇತಿಹಾಸವನ್ನು ಕಟ್ಟುವುದಕ್ಕೆ, ನಿರೂಪಿಸುವುದಕ್ಕೆ ಪೂರಕವಾದ ದಾಖಲೆಯನ್ನು ಒದಗಿಸುತ್ತವೆ. ಒಂದು ಶವಸಂರಕ್ಷಣಾ ಪೆಟ್ಟಿಗೆಯೊಂದರ ಸಹಾಯದಿಂದ ತುಳುನಾಡಿನ ಅಳಿಯಕಟ್ಟು ವ್ಯವಸ್ಥೆಯ ಕುರಿತ ನಿಚ್ಚಳ ಮಾಹಿತಿ ಪಡೆಯಬಹುದಾದರೆ ಈ ಪರಿಕರ ಸಮಕಾಲೀನ ಇತಿಹಾಸವನ್ನು ತೆರೆದಿಡುವಲ್ಲಿ ಸಫಲವಾಗುವುದು. ಅದೇ ರೀತಿ ಒಂದು ಸಾಮಾನ್ಯ ಇಡ್ಲಿ ಬೇಯಿಸುವ ಮಣ್ಣಿನ ಪಾತ್ರೆ ರೂಪಾಂತರಗೊಂಡ ಹಿಂದಿನ ಕತೆ ಸಾಂಸ್ಕೃತಿಕ ಬದುಕಿನ ಪಲ್ಲಟಕ್ಕೆ ನಾಂದಿಯಾಗುತ್ತದೆ. ಒಂದು ವಸ್ತುವಿನ ಭಿನ್ನಭಿನ್ನ ಪಠ್ಯಗಳು ಲಭ್ಯವಾದಾಗ ಸಂಸ್ಕೃತಿಯ ವೈವಿಧ್ಯತೆಯನ್ನು ತಿಳಿದುಕೊಳ್ಳಲು ಸಾಧ್ಯವಾಗುವುದು. ಈ ಸಂಸ್ಕೃತಿಯಲ್ಲಿ ಬದಲಾವಣೆ ನಡೆದುದನ್ನು ಇತಿಹಾಸ ತಿಳಿಸುತ್ತದೆ. ಕುತೂಹಲಿಯಾದ ಮಾನವ ತಾನು ಬಳಸುತ್ತಿದ್ದ ವಸ್ತು ಪರಿಕರಗಳನ್ನ ತನ್ನ ಅನುಕೂಲತೆಯ ದೃಷ್ಟಿಯಿಂದ ನಿರಂತರ ಪರಿಷ್ಕಾರಕ್ಕೆ ಒಳಪಡಿಸುತ್ತಿರುತ್ತಾನೆ. ಈ ವಿಧದ ಸಾಂಸ್ಕೃತಿಕ ಪಲ್ಲಟ ನಡೆಯುತ್ತಿರುತ್ತದೆ. ಇದನ್ನು ದಾಖಲಿಸುವುದು ಮತ್ತು ಈ ಕುರಿತಂತೆ ಸಮಗ್ರ ಅಧ್ಯಯನ ನಡೆಸುವ ಅಗತ್ಯವಿದೆ.

ಮಾನವನು ಉಪಯೋಗಿಸಿದ ಉಪಕರಣಗಳು, ಅವುಗಳ ಅವಶೇಷಗಳು ಇತಿಹಾಸ ಅಧ್ಯಯನಕ್ಕೆ ಆಕರವಾಗಬಲ್ಲವು. ಅಕ್ಷರಾಧಾರಿತ ಮಾದರಿಯ ಇತಿಹಾಸ ರಚನೆಯು ಜನಸಾಮಾನ್ಯರ ಇತಿಹಾಸವನ್ನು ನಿರ್ಲಕ್ಷಿಸುವುದರಿಂದ ಅದು ಅಪೂರ್ಣವಾದದ್ದು ಮತ್ತು ಪಾರ್ಶ್ವಿಕವಾದುದು. ಆದ್ದರಿಂದ ಜನಸಾಮಾನ್ಯರನ್ನು ಇತಿಹಾಸ ಕಥನಕ್ರಮದ ಒಳಗೆ ಜೋಡಿಸುವುದರಿಂದ ಒಂದು ಸಾವಯವ ಮಾದರಿಯ ಇತಿಹಾಸವನ್ನು ಕಾಣಬಹುದು. ಅದು ಅಂದಿನ ಸಾಮಾಜಿಕ, ಆರ್ಥಿಕ ಸಾಂಸ್ಕೃತಿಕ ಇತಿಹಾಸವನ್ನು ಅನಾವರಣಗೊಳಿಸುತ್ತವೆ. ಚರಿತ್ರೆ ಎನ್ನುವುದು ಕಳೆದ ಕಾಲದ ಘಟನೆಗಳ ವ್ಯವಸ್ಥಿತವಾದ ದಾಖಲೆಯಾಗಿದೆ. ಇತಿಹಾಸ ರಚನಾಶಾಸ್ತ್ರವು ಅಕ್ಷರಾಧಾರಿತ ಮಾದರಿಯನ್ನೇ ಅಂದರೆ ಶಾಸನಗಳು, ಓಲೆಗಳು, ಮೊದಲಾದವುಗಳನ್ನು ಮಾತ್ರ ಮುಖ್ಯ ಆಕರಗಳನ್ನಾಗಿ ಇಟ್ಟುಕೊಂಡಿವೆ. ಚರಿತ್ರೆಯನ್ನು ಅಧಿಕಾರ ಕೇಂದ್ರಿತ ನೆಲೆಗಳಿಂದ ಪುನರ್‌ರಚಿಸಿರುವುದೇ ಇದಕ್ಕೆ ಕಾರಣ. ಅದು ಉಳ್ಳವರ ಚರಿತ್ರೆ ನಿರ್ಮಾಣದ ಕಥನಗಳಾಗಿ ಕಾಣಿಸಿಕೊಂಡಿವೆ. ಕೆಳಸ್ತರದ ನೆಲೆಯ ಇತಿಹಾಸ ರಚನೆಯು ವರ್ತಮಾನದ ಅಗತ್ಯವಾಗಿದೆ. ಆಧುನಿಕ ಇತಿಹಾಸ ನಿರೂಪಣೆಗಳು ಜನಪದ ಇತಿಹಾಸವನ್ನು ತನ್ನ ಅಧ್ಯಯನದಲ್ಲಿ ಬಳಸಿಕೊಳ್ಳುವುದನ್ನು ಕಾಣಬಹುದು. ಹಾಗಾಗಿ ಜನಪದ ಇತಿಹಾಸ ನಿರೂಪಣೆಯು ಅಕ್ಷರಾಧಾರಿತ ಮಾದರಿಯ ಇತಿಹಾಸ ನಿರೂಪಣೆಯ ಕಥನಕ್ರಮಕ್ಕಿಂತ ಭಿನ್ನವಾದ ಆಯಾಮವನ್ನು ಪಡೆದುಕೊಳ್ಳುತ್ತದೆ. ಅಕ್ಷರಾಧಾರಿತ ಪರಂಪರೆಯ (ಕೇಂದ್ರೀಯ) ಚರಿತ್ರೆಯ ಕಥನಕ್ಕೆ ಸ್ಥಳ, ಇಸವಿ, ತಾರೀಕುಗಳ ನಿಗದಿತ ಸಮಯ ಕಾಲಗಳ ಅಧಿಕೃತತೆ ಇದ್ದರೆ ಜನಪದ ಇತಿಹಾಸಕ್ರಮಕ್ಕೆ ಸಂಗತಿಗಳು, ಘಟನೆಗಳು, ಕಥೆಗಳು, ಗಾದೆಗಳು, ಭೌತಿಕ ವಸ್ತು ಪರಿಕರಗಳು, ಒಗಟುಗಳು ಆಧಾರಗಳಾಗಿ ಕಾಣಿಸಿಕೊಳ್ಳುತ್ತವೆ. ಜನಪದ ಇತಿಹಾಸ ಕ್ರಮದಲ್ಲಿ ಹಲವು ಆಕರಗಳಿಂದ ಸಂಗ್ರಹಿಸಿದ ಸಂಪನ್ಮೂಲಗಳನ್ನು ವ್ಯವಸ್ಥಿತವಾದ ರೀತಿಯಲ್ಲಿ ಮರುಕಥಿಸುವುದು ಅಗತ್ಯವಾದುದು. ಇತಿಹಾಸದಲ್ಲಿ ದಾಖಲಾಗದೆ ಉಳಿದ ಜನಪದರ ಜನಜೀವನದ ಮಾದರಿಗಳು ಮೌಖಿಕ ಮಾದರಿಯ ಕಥನಗಳಲ್ಲಿ ಸೃಜನಶೀಲ ಮಾದರಿಯಲ್ಲಿ ಕಾಣಿಸಿಕೊಂಡಿದೆ. ಬಹುಶಃ ಜನಪದ ಬದುಕು ತನ್ನ ಆಂತರ್ಯದಲ್ಲಿ ಹಲವು ಸಂಗತಿಗಳನ್ನು ಸಾವಯವ ಮಾದರಿಯಲ್ಲಿ ಹುದುಗಿಸಿಕೊಂಡಿದೆ. ಸಾವಯವ ಮಾದರಿಯಲ್ಲಿ ಇದ್ದ ಜನಪದರ ಬದುಕಿನ ವಿನ್ಯಾಸಗಳನ್ನು ಜನಜೀವನದ ಮೌಲ್ಯಪ್ರಜ್ಞೆಯ ನೆಲೆಯಲ್ಲಿ ಮರುನಿರೂಪಿಸುವ ಕಥನವೇ ಇತಿಹಾಸದ ಪುನರ್‌ರಚನೆ.

೧.೨ ಅಧ್ಯಯನದ ವ್ಯಾಪ್ತಿ

ಕರ್ನಾಟಕದ ಕರಾವಳಿಯಲ್ಲಿರುವ ತುಳುನಾಡಿನ ಭೌಗೋಳಿಕ ವಿಸ್ತಾರವನ್ನು ಕರಾರುವಕ್ಕಾಗಿ ನಿರ್ಧರಿಸುವುದು ಅಸಾಧ್ಯ. ಯಾವುದೇ ಒಂದು ಪ್ರದೇಶವನ್ನು ಒಂದು ನಿರ್ದಿಷ್ಟ ಘಟಕವಾಗಿ ಗುರುತಿಸಬೇಕಾದ ಸಂದರ್ಭ ಆ ಪ್ರದೇಶದ ರಾಜಕೀಯ, ಭಾಷಾ ಹಾಗೂ ಸಾಂಸ್ಕೃತಿಕ ಮೇರೆಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಈ ಪೈಕಿ ರಾಜಕೀಯ ಮೇರೆಗಳು ಯಾವಾಗಲೂ ಸ್ಥಿರವಾಗಿರುತ್ತದೆ ಎಂದು

ಹೇಳಲಾಗುವುದಿಲ್ಲ. ರಾಜಕೀಯ ಏರುಪೇರುಗಳಿಗೆ ಅನುಗುಣವಾಗಿ, ಆಳರಸರ ಪ್ರಭುತ್ವದ ಏಳುಬೀಳುಗಳಿಗನುಸಾರವಾಗಿ ರಾಜಕೀಯ ಮೇರೆಗಳೂ ಕಾಲಕಾಲಕ್ಕೆ ಬದಲಾಗುವುದು ಸಹಜ. ತುಳುನಾಡು ಇದಕ್ಕೆ ಅಪವಾದವಲ್ಲ. [೧೨]

ಪಾಡ್ದನಗಳಲ್ಲಿ ಕರಾವಳಿ ಕರ್ನಾಟಕದ ವ್ಯಾಪ್ತಿಯನ್ನು ಬಡಗು ಬಾರ್ಕೂರಿನಿಂದ ತೆಂಕಿನ ನೀಲೇಶ್ವರದ ವರೆಗೆ, ಮೂಡಣದ ಘಟ್ಟದಿಂದ ಪಡುವಣದ ಕಡಲಿನ ವರೆಗಿದೆ ಎಂದು ಹೇಳಲಾಗಿದೆ. ಇನ್ನೊಂದು ಪಾಡ್ದನದಲ್ಲಿ ತುಳುನಾಡಿನ ವ್ಯಾಪ್ತಿಯನ್ನು ಪಡುವಣದ ಕಡಲಬದಿಯಿಂದ ಮೂಡಣದ ಘಟ್ಟದ ವರೆಗೆ, ತೆಂಕಣದ ನೀಲೇಶ್ವರದ ಗಡಿಯಿಂದ ಬಡಗಣದ ಅಂಕೋಲೆಯ ವರೆಗೆ ಇದೆ ಎಂದು ನಿರೂಪಿತವಾಗಿದೆ. (ತೆನ್ಕಾಯಿ ನೀಲೇಶ್ವರದ ಗಡಿಡ್ದ್ ಬಡಕಾಯಿ ಅಂಕೋಲೆ ಮುಟ್ಟ)[೧೩]ಅಲ್ಲದೆ ಛತ್ರಿಯಷ್ಟು ದೊಡ್ಡದು, ಹರಿವಾಣದಷ್ಟು ಉರುಟು, ಹಣದಷ್ಟು ಚೆಂದ, ಕೆಳಗೆ ತುಳುರಾಜ್ಯ ಬಹಳ ಚೆಂದ ಕಾಣುತ್ತಿದೆ.[೧೪] (ಪಂಜುರ್ಲಿ ಪಾಡ್ದನ)

ಇಲ್ಲಿನ ಮೇರೆಯನ್ನು ಉರುಟಾಗಿ ಗುರುತಿಸಿರುವುದರಿಂದ ತುಳುನಾಡು ಘಟ್ಟದ ಮೇಲಕ್ಕೂ ವಿಸ್ತರಿಸಿತ್ತು ಎನ್ನುವುದರ ಸುಳಿವು ದೊರೆಯುತ್ತದೆ. ಪಂಜುರ್ಲಿ ಪಾಡ್ದನದಲ್ಲಿ ವಿಜಯನಗರದ ಉಲ್ಲೇಖವಿದೆ, ಮತ್ತು ಸರಿಸುಮಾರು ಅದೇ ಕಾಲದ ಅಂದರೆ ೧೪ನೇ ಶತಮಾನದ ಕಾಯ್ಕಿಣಿ ಶಾಸನದಲ್ಲಿ ಗೇರುಸೊಪ್ಪೆಯು ತುಳುನಾಡಿನ ಪ್ರಸಿದ್ಧ ನಗರವೆಂದು ಗುರುತಿಸಲಾಗಿದೆ. ಹಿಂದಿನಿಂದಲೂ ಹಾಸನ, ಚಿಕ್ಕಮಗಳೂರು ಹಾಗೂ ಶಿವಮೊಗ್ಗಗಳಲ್ಲಿ ತುಳುವರು ನೆಲೆಸಿರುವುದನ್ನೂ ಇಲ್ಲಿ ಗಮನಿಸಬಹುದು.

ಹೀಗೆ ಕಾಲಕಾಲಕ್ಕೆ ರಾಜಕೀಯ ಬೆಳವಣಿಗೆಗಳಿಗೆ ತಕ್ಕಂತೆ ಮೇರೆ ಬದಲಾದರೂ ಮುಖ್ಯವಾಗಿ ತುಳು ಭಾಷೆಯನ್ನಾಡುತ್ತಿದ್ದ ಕರಾವಳಿ ಕರ್ನಾಟಕದಲ್ಲಿ ವಾಸಿಸುತ್ತಿದ್ದ ಕಡಲು–ಘಟ್ಟದ ನಡುವಿನ ಪ್ರದೇಶವು ತುಳುನಾಡು ಎಂದು ಗುರುತಿಸಲ್ಪಟ್ಟಿತ್ತು. ಉತ್ತರ ಅಕ್ಷಾಂಶ ೧೨° ೪' ೧೫" ರಿಂದ ೧೩° ೫೮' ೩೦" ಹಾಗೂ ಪೂರ್ವ ರೇಖಾಂಶ ೭೪° ೪೩' ೨೬" ರಿಂದ ೨೪° ೪೪' ೩೧" ಇವುಗಳ ನಡುವೆ ಈ ತುಳುನಾಡು ಇದೆಯೆಂದು ಗುರುತಿಸಲಾಗಿದೆ.[೧೫] ಬ್ರಿಟೀಷರ ಆಗಮನದ ನಂತರ ಈ ಜಿಲ್ಲೆ ವಿಭಜನೆಗೊಂಡು, ಸೌತ್ ಕೆನರಾ ಎಂದು ಗುರುತಿಸಲ್ಪಟ್ಟ ಜಿಲ್ಲೆಯನ್ನು ಬ್ರಿಟಿಷರು ಕೂಡಾ 'ತುಳು ಕಂಟ್ರಿ' (ತುಳುನಾಡು) ಎಂದು ಗುರುತಿಸಿದ್ದರು. ಈಗಿನ ದಕ್ಷಿಣಕನ್ನಡ, ಉಡುಪಿ ಜಿಲ್ಲೆ ಮತ್ತು ಕಾಸರಗೋಡು ಪ್ರದೇಶವು ಈ ತುಳುನಾಡಿನ ವ್ಯಾಪ್ತಿಯೊಳಗಿತ್ತು.

ಭಾಷಿಕ ತುಳುನಾಡು ಎನ್ನುವುದು ತುಳುನಾಡಿನ ಕೇಂದ್ರ ಭಾಗವಾದರೆ ಅದರ ಆಚೆಗೆ ವಿಸ್ತರಣೆಗೊಳ್ಳುತ್ತಿದ್ದ ತುಳುನಾಡು ಆಯಾ ಅರಸು ಮನೆತನದ ಸಾಮರ್ಥ್ಯವನ್ನು ಅವಲಂಬಿಸಿರುತ್ತಿತ್ತು. ತುಳುನಾಡನ್ನು ಸ್ಥಳೀಯ ಚರಿತ್ರೆ ಅಧ್ಯಯನದ ವಿಧಾನದ ಮೂಲಕ ಅಧ್ಯಯನ ನಡೆಸುವಾಗ ಈ ಸೂಕ್ಷ್ಮ ವಿಚಾರಗಳು ಮಹತ್ವವನ್ನು ಪಡೆದುಕೊಳ್ಳುತ್ತವೆ. ರಾಜಪ್ರಭುತ್ವದ ಅವಧಿಯಲ್ಲಿ ತುಳುನಾಡಿನ ರಾಜಕೀಯ ಮೇರೆಗಳು ಕನ್ನಡದ ಅರಸು ಮನೆತನಗಳ ನಿರ್ಣಯ ಹಾಗೂ ನಿರ್ಧಾರಕ್ಕೆ ಅನುಗುಣವಾಗಿ ರೂಪುಗೊಳ್ಳುತ್ತಿದ್ದವು. ಉದಾಹರಣೆಗೆ ಹೇಳುವುದಾದರೆ ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯ ಅವಧಿಯಲ್ಲಿ ತುಳುನಾಡನ್ನು ಮಂಗಳೂರು ರಾಜ್ಯ ಹಾಗೂ

ಬಾರ್ಕೂರು ರಾಜ್ಯಗಳಾಗಿ ವಿಂಗಡಿಸಿರುವುದು. ಇದರ ಮೂಲಕ ಹೊಸದಾದ ರಾಜಕೀಯ ಮೇರೆಗಳು ನಿರ್ಮಾಣಗೊಂಡವು. ವಸಾಹತು ಪ್ರಭುತ್ವದ ಸಂದರ್ಭದಲ್ಲಿ ತುಳುನಾಡು ಮದ್ರಾಸು ಪ್ರೆಸಿಡೆನ್ಸಿಯ ಭಾಗವಾಗಿ ಕಲೆಕ್ಟರುಗಳ ಆಡಳಿತಕ್ಕೆ ಒಳಗಾಯಿತು. ಪ್ರಜಾಪ್ರಭುತ್ವದ ಸಂದರ್ಭದಲ್ಲಿ ತುಳುನಾಡು ಮೂರು ಜಿಲ್ಲೆಗಳಾಗಿ ವಿಂಗಡಣೆಗೊಂಡು ಆಡಳಿತಾತ್ಮಕವಾಗಿ ಬೇರೆಬೇರೆಯಾಗಿಯೇ ಗುರುತಿಸಿಕೊಳ್ಳಬೇಕಾಯಿತು. ತುಳುಭಾಷೆ, ಸಾಹಿತ್ಯ, ಆಚರಣೆ, ನಂಬಿಕೆ ಮುಂತಾದವು ಆಡಳಿತಾತ್ಮಕ ಗಡಿಗಳನ್ನು ಮೀರುವ ಅಂಶಗಳಾಗಿರುವುದರಿಂದ ವಿಶಾಲಾರ್ಥದಲ್ಲಿ ತುಳುನಾಡು ಎನ್ನುವ ಪದ ಇನ್ನೂ ಜೀವಂತವಾಗಿದೆ[೧೬].

ಪ್ರಸ್ತುತ ಅಧ್ಯಯನವು ಕರಾವಳಿ ಕರ್ನಾಟಕದ ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಗೆ ಸೀಮಿತವಾಗಿದೆ. ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯನ್ನು ತುಳುನಾಡೆಂದು ಕರೆಯಲಾಗುತ್ತಿತ್ತು. ಭೌಗೋಳಿಕವಾಗಿ ಕಾಲಕಾಲಕ್ಕೆ ತುಳುನಾಡಿನ ವ್ಯಾಪ್ತಿಯು ಏರುಪೇರುಗೊಂಡಿರುವುದು ಗಮನೀಯ. ಪ್ರಸ್ತುತ ಅಧ್ಯಯನದಲ್ಲಿ ದಕ್ಷಿಣದ ಚಂದ್ರಗಿರಿಯಿಂದ ಉತ್ತರದ ಸುವರ್ಣ ನದಿಯವರೆಗಿನ ಪ್ರದೇಶವನ್ನು ಆಯ್ದುಕೊಳ್ಳಲಾಗಿದೆ. ಅಂದರೆ, ಈಗಿನ ಭೌಗೋಳಿಕ ವಿನ್ಯಾಸದಂತೆ ದಕ್ಷಿಣಕನ್ನಡ, ಉಡುಪಿ ಜಿಲ್ಲೆ ಮತ್ತು ಕಾಸರಗೋಡು ಪ್ರದೇಶವು ಅಧ್ಯಯನದ ವ್ಯಾಪ್ತಿಗೆ ಒಳಪಡುತ್ತದೆ. ಇಂದಿಗೂ ಈ ಪ್ರದೇಶವು ಸಾಂಸ್ಕೃತಿಕ ಅನನ್ಯತೆಯನ್ನು ಉಳಿಸಿಕೊಂಡಿದೆ.

- ಈ ಅಧ್ಯಯನವು ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯ ಖಾಸಗಿ ಹಾಗೂ ಸರಕಾರಿ ವಲಯದ ಐತಿಹಾಸಿಕ ಮತ್ತು ಜಾನಪದ ವಸ್ತುಸಂಗ್ರಹಾಲಯಗಳಿಗೆ ಸೀಮಿತವಾಗಿದೆ. ವೈವಿಧ್ಯಮಯವಾದ ವಸ್ತು ಸಂಗ್ರಹಾಲಯಗಳು ಈ ಪ್ರದೇಶದಲ್ಲಿದ್ದರೂ, ಪ್ರಸ್ತುತ ಅಧ್ಯಯನಕ್ಕೆ ಜನಪದ ಮತ್ತು ಐತಿಹಾಸಿಕ ವಸ್ತು ಸಂಗ್ರಹಾಲಯಗಳನ್ನಷ್ಟೆ ಸೀಮಿತಗೊಳಿಸಲಾಗಿದೆ.
- ಕೇವಲ ಆಯ್ದ ಭೌತಿಕ ವಸ್ತುಪರಿಕರಗಳನ್ನು ಸಾಂಸ್ಕೃತಿಕ ಅಧ್ಯಯನದ ವ್ಯಾಪ್ತಿಯೊಳಗೆ ತೆಗೆದುಕೊಳ್ಳಲಾಗಿದೆ. ಸಾಕಷ್ಟು ವಿವಿಧ ಪರಿಕರಗಳು ಅಧ್ಯಯನಕ್ಕೊಳಪಡಿಸಬಹುದಾದರೂ ವಿಷಯದ ಲಭ್ಯತೆ ಮತ್ತು ಪ್ರಾಮುಖ್ಯತೆ, ಮಹಾಪ್ರಬಂಧದ ಚೌಕಟ್ಟಿಗೆ ಒಳಪಟ್ಟಂತೆ ವಸ್ತುಗಳನ್ನು ಸೀಮಿತಗೊಳಿಸಲಾಗಿದೆ.

೧.೩ ಆಕರಗಳು ಮತ್ತು ಸಂಶೋಧನಾ ವಿಧಾನ

ಇದೊಂದು ಬಹುಶಿಸ್ತೀಯ ಅಧ್ಯಯನ ವಿಷಯವಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಭೌತಿಕ ವಸ್ತು ಪರಿಕರಗಳನ್ನು ಪ್ರಾಥಮಿಕ ಆಕರವಾಗಿ ಬಳಸಿಕೊಳ್ಳಲಾಗಿದೆ. ಇದಕ್ಕೆ ಅಗತ್ಯವಿರುವ ಪ್ರಾಥಮಿಕ ಹಾಗೂ ಆನುಷಂಗಿಕ ಆಕರಗಳನ್ನು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕ್ಷೇತ್ರಕಾರ್ಯ ನಡೆಸಿ ಪಡೆದುಕೊಳ್ಳಲಾಗಿದೆ. ಉಡುಪಿ, ಕಾರ್ಕಳ, ಬೆಳ್ತಂಗಡಿ, ಬಂಟ್ವಾಳ, ಮಂಗಳೂರು, ಸುಳ್ಯ, ಪುತ್ತೂರು, ಕಾಸರಗೋಡು ಪ್ರದೇಶಗಳಲ್ಲಿ ಕ್ಷೇತ್ರಕಾರ್ಯ ನಡೆಸಲಾಗಿದೆ. ಸಾಂಸ್ಕೃತಿಕ ಇತಿಹಾಸವನ್ನು ಅರ್ಥ ಮಾಡಿಕೊಳ್ಳಲು ಬೇರೆ ಬೇರೆ ಬಗೆಯ ಮಾಧ್ಯಮಗಳನ್ನು ಮತ್ತು ಆಕರಗಳನ್ನು ಬಳಸಿಕೊಳ್ಳಲು ಸಾಧ್ಯವಿದ್ದರೂ, ಭೌತಿಕ ಆಕರಗಳ ನೆಲೆಗಟ್ಟಿನಲ್ಲಿ

ವಿಷಯನಿಷ್ಠ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಜಿಲ್ಲೆಯ ವಿವಿಧ ವಸ್ತುಸಂಗ್ರಹಾಲಯಗಳಿಗೆ ಭೇಟಿಯಿತ್ತು ಅಲ್ಲಿನ ಭೌತಿಕ ವಸ್ತು ವಿಶೇಷಗಳನ್ನು ಅಭ್ಯಸಿಸಿ, ಅವುಗಳಲ್ಲಿರುವ ಐತಿಹಾಸಿಕ ಅಂಶಗಳನ್ನು ಗುರುತಿಸಲಾಯಿತು. ಇಡೀ ಕರಾವಳಿ ಕರ್ನಾಟಕವೇ ಒಂದು ಬಯಲು ವಸ್ತುಸಂಗ್ರಹಾಲಯದಂತಿದ್ದು, ಇಲ್ಲಿ ಲಭ್ಯವಿರುವ ಭೌತಿಕ ಪರಿಕರಗಳನ್ನೂ ವಿಭಜಿಸಿ ಸ್ಥೂಲ ಅಧ್ಯಯನ ನಡೆಸಲಾಗಿದೆ. ಅಧ್ಯಯನದ ಸ್ಪಷ್ಟತೆಗಾಗಿ ಮೌಖಿಕ ಆಕರಗಳಾದ ಪಾಡ್ದನ, ಗಾದೆ, ಒಗಟು, ಎದುರುಕತೆ, ಸ್ಥಳನಾಮ, ಐತಿಹ್ಯ ಇತ್ಯಾದಿಗಳನ್ನು ಬಳಸಿಕೊಳ್ಳಲಾಗಿದೆ. ಒಟ್ಟಿನಲ್ಲಿ ವೈಜ್ಞಾನಿಕವಾಗಿ ಕ್ಷೇತ್ರಕಾರ್ಯನಡೆಸಿ, ಸಂದರ್ಶನಗಳನ್ನು ಮಾಡಿ, ಆಯ್ದ ಭೌತಿಕ ವಸ್ತು ಪರಿಕರಗಳ ವರ್ಗೀಕರಣ ಮಾಡಿ, ವೈಜ್ಞಾನಿಕ ವಿಶ್ಲೇಷಣೆಯನ್ನು ಒದಗಿಸಲು ಪ್ರಯತ್ನಿಸಲಾಗಿದೆ.

ಮುಖ್ಯವಾಗಿ, ಇಲ್ಲಿ ಕೃಷಿ, ಕರಕುಶಲ, ಗೃಹೋಪಯೋಗಿ, ಮತ್ತು ಆಚರಣೆಗಳಿಗೆ ಸಂಬಂಧಿತ ವಸ್ತುಗಳನ್ನು ಪ್ರಾತಿನಿಧಿಕವಾಗಿ ಆಯ್ಕೆ ಮಾಡಿಕೊಂಡು ಅಧ್ಯಯನ ನಡೆಸಲಾಗಿದೆ. ಭೌತಿಕ ಪರಿಕರಗಳ ಕುರಿತಂತೆ ಪ್ರಾಥಮಿಕ ಮಾಹಿತಿಯನ್ನು ಕ್ಷೇತ್ರಕಾರ್ಯಮಾಡಿ ಕಲೆ ಹಾಕಲಾಗಿದೆ; ಅಲ್ಲದೆ ವಿದ್ವಾಂಸರುಗಳನ್ನು ಭೇಟಿ ಮಾಡಿ ಚರ್ಚಿಸಲಾಗಿದೆ.

ಈ ಕ್ಷೇತ್ರದ ಪರಿಣತ ವಕ್ತೃ ಹಾಗೂ ಅನುಭವಿ ಹಿರಿಯರನ್ನು ಸಂಪರ್ಕಿಸಿ ಮಾಹಿತಿ ಸಂಗ್ರಹಿಸಲಾಗಿದೆ. ಸಂದರ್ಶನ, ಚರ್ಚೆ, ಸಂವಾದಗಳ ಮೂಲಕ ಅಮೂಲಾಗ್ರ ಮಾಹಿತಿಗಳನ್ನು ಸಂಗ್ರಹಿಸಿ, ವಿಶ್ಲೇಷಣಾತ್ಮಕ ಅಧ್ಯಯನ ಮಾಡಲಾಗಿದೆ. ಮಾಹಿತಿದಾರ ಕೇಂದ್ರಿತ ಸಂಶೋಧನೆಯ ವಿಧಾನವನ್ನು ಇಲ್ಲಿ ಬಳಸಲಾಗಿದೆ. ಅನುಷಂಗಿಕ ಮಾಹಿತಿಗಾಗಿ ಅಂತರ್ಜಾಲದ ಬರಹಗಳನ್ನು, ಗ್ರಂಥಗಳನ್ನು, ಜರ್ನಲ್‌ಗಳನ್ನು ಅಭ್ಯಸಿಸಲಾಗಿದೆ. ಪರಾಮರ್ಶನ ಗ್ರಂಥಗಳನ್ನು ಅಧ್ಯಯನ ಮಾಡಿ ಸಂದರ್ಭಾನುಸಾರ ಬಳಸಿಕೊಳ್ಳಲಾಗಿದೆ.

ಪ್ರತಿಯೊಂದು ವಸ್ತುವಿನ ವಿಶ್ಲೇಷಣೆಯನ್ನು ಈ ಕೆಳಗಿನಂತೆ ನಾಲ್ಕು ಆಯಾಮದಲ್ಲಿ ನೋಡಿಕೊಂಡು ವರ್ಗೀಕರಣ ಮಾಡಲಾಗಿದೆ.

೧. ವಸ್ತುವಿನ ಇತಿಹಾಸ: ಎಲ್ಲಿ, ಯಾವಾಗ ಮತ್ತು ಹೇಗೆ ಉಪಯೋಗಿಸಲಾಗುತ್ತಿತ್ತು/ ಬಳಕೆಯಾಗುತ್ತದೆ.

೨. ವಸ್ತುವಿನ ವಿನ್ಯಾಸ ಮತ್ತು ರಚನೆ (Structural): ವಸ್ತುವಿನ ರಚನೆ ಹೇಗೆ ಮಾಡಲಾಗಿದೆ, ಯಾವ ಧಾತು ಉಪಯೋಗಗೊಂಡಿದೆ, ಯಾವ ತಾಂತ್ರಿಕತೆ ಬಳಸಲಾಗಿದೆ ಮತ್ತು ಅದರ ಕಾರ್ಯನಿರ್ವಹಣೆಯಲ್ಲಿ ಯಾವ ರೀತಿಯಲ್ಲಿ ವಸ್ತುಗಳನ್ನು ಜೋಡಿಸಲಾಗಿದೆ?

೩. ವಸ್ತುವಿನ ಕಾರ್ಯನಿರ್ವಹಣೆ (Functional): ವಸ್ತು ಯಾವ ನಿಯೋಜಿತ ಕಾರ್ಯಕ್ಕಾಗಿ ಬಳಸಲಾಗುತ್ತದೆ?

೪. ಬದಲಾವಣೆ ಹೇಗಾಯಿತು– ಪಲ್ಲಟ (Adaptation/changes): ವಸ್ತುವಿನ ಬದಲಾವಣೆ ಯಾವಾಗ ಆಯಿತು ಮತ್ತು ಹೇಗಾಯಿತು?

೫. ವಸ್ತುವಿನ ಉಪಯುಕ್ತತೆ ಇಂದಿನ ಸಂಧರ್ಭದಲ್ಲಿ (Utility in the present context) ಇಂದಿನ ದಿನಮಾನದಲ್ಲಿ ವಸ್ತು ಯಾವ ನೆಲೆಯಲ್ಲಿ ನಿಲ್ಲುತ್ತದೆ? (ಸಂಸ್ಕೃತಿಯ ಪ್ರಸರಣದಲ್ಲಿ ಮತ್ತು ಪ್ರಯೋಜನಗಳ ನೆಲೆಯಲ್ಲಿ)

ಒಟ್ಟಿನಲ್ಲಿ ಅಧ್ಯಯನಕ್ಕೊಳಪಡುವ ವಸ್ತುವಿಶೇಷಗಳು ಹೇಗಿವೆ ಮತ್ತು ಅವು ಯಾಕೆ ಇವೆ? ಹೇಗೆ ಮತ್ತು ಯಾಕೆ ಬದಲಾವಣೆ ಹೊಂದುತ್ತದೆ? ಎಂಬುದನ್ನು ಗುರುತಿಸುವ ಪ್ರಯತ್ನವನ್ನು ಪ್ರಾಥಮಿಕ ಆಕರಗಳನ್ನು ಬಳಸಿ, ಆನುಷಂಗಿಕ ಆಕರಗಳ ಅಧ್ಯಯನ ನಡೆಸಿ, ಕ್ಷೇತ್ರಕಾರ್ಯ ಮಾಡಿ, ವಕ್ತೃಗಳ ಸಂದರ್ಶನ ಮಾಡಿ ಸಮಗ್ರ ವಿಷಯಗಳನ್ನು ಸಂಗ್ರಹಿಸಿ ಅಧ್ಯಯನ ಮಾಡಲಾಗಿದೆ.

೧.೪ ಅಧ್ಯಯನದ ಸ್ವರೂಪ

ಉದ್ದೇಶಿತ ಅಧ್ಯಯನವನ್ನು ಕೈಗೊಳ್ಳಲು ಅನುಕೂಲವಾಗುವಂತೆ ಅಧ್ಯಯನಗಳನ್ನು ಈ ಕೆಳಗಿನಂತೆ ವಿಭಜಿಸಲಾಗಿದೆ:

ಒಂದನೆಯ ಅಧ್ಯಾಯವು ಪ್ರಸ್ತಾವನೆಗೆ ಸೀಮಿತವಾಗಿದ್ದು, ಇದರಲ್ಲಿ ತುಳುನಾಡಿನ ಸಾಂಸ್ಕೃತಿಕ ಹಿನ್ನೆಲೆ, ಭೌಗೋಳಿಕ ಹಿನ್ನೆಲೆ, ಭೌತಿಕ ವಸ್ತುಗಳ ಪರಿಕಲ್ಪನೆಯನ್ನು ಒದಗಿಸಲಾಗಿದೆ. ಅಲ್ಲದೆ, ಅಧ್ಯಯನದ ಅಗತ್ಯ, ಉದ್ದೇಶ, ವ್ಯಾಪ್ತಿ, ಈ ವರೆಗೆ ನಡೆದ ಅಧ್ಯಯನದ ಸಮೀಕ್ಷೆ, ಸಂಶೋಧನಾ ವಿಧಾನವನ್ನು ಚರ್ಚಿಸಲಾಗಿದೆ.

ವಸ್ತುಸಂಗ್ರಹಾಲಯದ ಪರಿಕಲ್ಪನೆಯನ್ನು **ಅಧ್ಯಾಯ ಎರಡರ**ಲ್ಲಿ ಚರ್ಚಿಸಲಾಗಿದ್ದು, ವಸ್ತು ಸಂಗ್ರಹಾಲಯದ ಅರ್ಥ, ವ್ಯಾಖ್ಯೆ, ವಿಂಗಡಣೆ ಹಾಗೂ ಜಗತ್ತಿನ ಮತ್ತು ಭಾರತದ ಪುರಾತತ್ವ ವಸ್ತು ಸಂಗ್ರಹಾಲಯಗಳ ಹುಟ್ಟು, ಬೆಳವಣಿಗೆ, ಸ್ವರೂಪ, ನಿರ್ವಹಣೆ ಮತ್ತು ಪಾತ್ರವನ್ನು ಒದಗಿಸಲಾಗಿದೆ. ವಿಶೇಷವಾಗಿ ಅಧ್ಯಯನಕ್ಕೊಳಪಡುವ ಕರಾವಳಿ ಕರ್ನಾಟಕದಲ್ಲಿರುವ ವಸ್ತುಸಂಗ್ರಹಾಲಯಗಳ ಬಗ್ಗೆ ಸ್ಥೂಲ ಸಮೀಕ್ಷೆ ಮಾಡಲಾಗಿದೆ. ಈ ಸಂಗ್ರಹಾಲಯಗಳಲ್ಲಿನ ನ್ಯೂನತೆಗಳನ್ನು ಪಟ್ಟಿ ಮಾಡಲಾಗಿದ್ದು ಒಂದು ವಸ್ತು ನಿರ್ದಿಷ್ಟ (ಸಬ್ಜೆಕ್ಟ್ ಸ್ಪೆಸಿಫಿಕ್) ಮತ್ತು ಪೂರ್ಣಪ್ರಮಾಣದ ಸಂಗ್ರಹಾಲಯದ ಕೊರತೆಯ ಕುರಿತು ಬೆಳಕು ಚೆಲ್ಲಲಾಗಿದೆ.

ತುಳುನಾಡಿನ ಕೃಷಿ ಪರಂಪರೆ, ನಂಬಿಕೆ, ಐತಿಹ್ಯದ ಕುರಿತು, ಭೌತಿಕ ವಸ್ತು ಪರಿಕರಗಳನ್ನು ಬಳಸಿ ಅವುಗಳ ವಿಭಜನೆಯನ್ನು ಮಾಡಿ, ಕೃಷಿ ಬದುಕು ಮತ್ತು ಇತಿಹಾಸ ಎಂಬ **ಮೂರನೆಯ ಅಧ್ಯಾಯ** ಒಳಗೊಂಡಿದೆ. ನೀರಾವರಿ ಸಾಧನಗಳು, ಉಳುಮೆಯ ಸಾಧನಗಳು, ಸಂರಕ್ಷಣಾ ಪರಿಕರಗಳು, ಕೆಲಸಕಾರ್ಯದ ನಿರ್ವಹಣೆಗೆ ಅವಶ್ಯಕವಗಿರುವ ಪರಿಕರಗಳು ಹೀಗೆ ನಾಲ್ಕು ವಿಭಾಗಳನ್ನು ಮಾಡಿ ಅದಕ್ಕೆ ಸಂಬಂಧಿಸಿದ ವಸ್ತುವಿಶೇಷಗಳ ಸಮಗ್ರ ಮಾಹಿತಿಯನ್ನು ಕ್ರೋಢಿಕರಿಸಲಾಗಿದೆ. ಕೃಷಿ ಬದುಕಿಗೆ ತುಳುವರು ನೀಡಿದ ಪ್ರಾಧಾನ್ಯತೆಯನ್ನು ಅವರು ಬಳಸಿದ ವಸ್ತು ಪರಿಕರಗಳ ಮೂಲಕ ಗುರುತಿಸುತ್ತಾ, ಸಾಂಸ್ಕೃತಿಕ ಇತಿಹಾಸದ ಮಜಲುಗಳ ಸ್ಪಷ್ಟತೆಯನ್ನು ಈ ಅಧ್ಯಾಯವು

ಒದಗಿಸುತ್ತದೆ. ಕೃಷಿ ಕೇಂದ್ರಿತ ಬದುಕಿನಲ್ಲಿ ಬಳಸುತ್ತಿದ್ದ ವಸ್ತು ಪರಿಕರಗಳು ಕಾಲ–ದೇಶದ ಹಿನ್ನೆಲೆಯಿಂದ ಪರಿಷ್ಕಾರಕ್ಕೆ ಒಳಗಾಗಿರುವುದನ್ನು ಇಲ್ಲಿ ದಾಖಲಿಸಲಾಗಿದೆ.

ಅಧ್ಯಾಯ ನಾಲ್ಕು ಗೃಹೋಪಯೋಗಿ ವಸ್ತುಗಳು ಮತ್ತು ಸಾಂಸ್ಕೃತಿಕ ಇತಿಹಾಸಕ್ಕೆ ಮೀಸಲಾಗಿದೆ. ಇದರಲ್ಲಿ ತುಳುವರ ಮನೆಯ ಸ್ವರೂಪ, ಅಡುಗೆ ಕೋಣೆಯ ಪರಿಕರಗಳು, ಸೌಕರ್ಯ ಸಾಧನಗಳು ಅವುಗಳ ಹಿಂದಿರುವ ನಂಬಿಕೆಗಳು, ಪ್ರಸ್ತುತತೆ ಕುರಿತಾದ ಅಧ್ಯಯನವಿದೆ. ಸಾಮನ್ಯವಾಗಿ ಅತ್ಯಂತ ಸರಳವಾಗಿರುತ್ತಿದ್ದ ಮನೆಗಳಲ್ಲಿ, ಅಡುಗೆಕೋಣೆ ಪ್ರಮುಖ ಪಾತ್ರವನ್ನು ವಹಿಸುತ್ತದೆ,. ಅದುದರಿಂದ ಅಡುಗೆ ಕೋಣೆಯ ಪರಿಕರಗಳ ವಿಸ್ತೃತ ಅಧ್ಯಯನ ಇಲ್ಲಿ ನಡೆಸಲಾಗಿದ್ದು ಹೆಚ್ಚಿನ ಎಲ್ಲಾ ಪರಿಕರಗಳನ್ನು ಪ್ರಕೃತಿಯಿಂದ ಲಭ್ಯವಾಗುವ ವಸ್ತುಗಳನ್ನೆ ಬಳಸುತ್ತಿದ್ದುದು ಗಮನಾರ್ಹ.

ಗ್ರಾಮೀಣ ಕರಕುಶಲ ಸಾಧನಗಳು ಹಾಗೂ ಐತಿಹಾಸಿಕ ಅಂಶಗಳು **ಅಧ್ಯಾಯ ಐದ**ರಲ್ಲಿದೆ. ಈ ಅಧ್ಯಾಯದಲ್ಲಿ ಪ್ರಮುಖವಾಗಿ ಗ್ರಾಮೀಣ ಬದುಕಿನಲ್ಲಿ ಕರಕುಶಲಕರ್ಮಿಗಳು, ಅವರ ಪಾತ್ರ, ಅವರು ತಯಾರಿಸುವ ಭೌತಿಕ ಪರಿಕರಗಳು, ಅವುಗಳಲ್ಲಿ ಅಡಕವಾಗಿರುವ ಸಾಂಸ್ಕೃತಿಕ ಹಿನ್ನೆಲೆ, ನಿಪುಣತೆ, ನಂಬಿಕೆಗಳನ್ನು ಚಾರಿತ್ರಿಕ ನೆಲೆಯಿಂದ ಅಧ್ಯಯನ ಕೈಗೊಳ್ಳಲಾಗಿದೆ. ಕೃಷಿಯಲ್ಲಿ ಬಳಸುವ ಪರಿಕರಗಳು, ಗೃಹೋಪಯೋಗಿ ಪರಿಕರಗಳು, ಆರಾಧನಾ ರಂಗದ ಪರಿಕರಗಳು, ಕಸುಬಿನ ಪರಿಕರಗಳು ಮತ್ತು ಇತರೆ ಪರಿಕರಗಳು ಅಂತ ವಿಭಾಗಗಳನ್ನು ಮಾಡಿ ಹಲವು ಪ್ರಾತಿನಿಧಿಕ ವಸ್ತು ಪರಿಕರಗಳ ವಿಶ್ಲೇಷಣೆಯನ್ನು ನೀಡಲಾಗಿದೆ. ಈ ವಸ್ತು ಪರಿಕರಗಳನ್ನು ರಚನೆ ಮಾಡುತ್ತಿದ್ದ ಕುಶಲಕರ್ಮಿಗಳಾದ ಅಕ್ಕಸಾಲಿಗ, ಕಮ್ಮಾರ, ಕಂಚುಗಾರ, ಬಡಗಿ, ಶಿಲ್ಪಗಾರ, ನೇಕಾರ, ಕುಂಬಾರ, ಹೆಣೆಯುವಿಕೆಯಲ್ಲಿ ತೊಡಗಿಸಿಕೊಡಿರುವವರ ಜಾಣ್ಮೆ, ಕುಶಲತೆ, ನೈಪುಣ್ಯತೆಯನ್ನು ಗುರುತಿಸಿ ಇಲ್ಲಿ ಪ್ರಸ್ತುತಪಡಿಸಲಾಗಿದೆ. ಯಂತ್ರ–ತಂತ್ರಗಳಿಲ್ಲದ ಕಾಲದಲ್ಲಿ ವಸ್ತುಗಳ ಅವಿಷ್ಕಾರದಲ್ಲಿ ರಚನಾಕಾರರು ತೋರಿಸಿದ ನಿಷ್ಠೆ, ವೃತ್ತಿಪರತೆ ಸಹಜವಾಗಿಯೇ ಬಿಂಬಿತವಾಗಿದೆ.

ಆಚರಣೆ ಮತ್ತು ಸಂಪ್ರದಾಯಗಳಲ್ಲಿ ಇತಿಹಾಸದ ಹೆಜ್ಜೆ ಗುರುತುಗಳು ಎನ್ನುವ **ಅಧ್ಯಾಯ ಆರರಲ್ಲಿ** ತುಳುವರ ಆಚರಣೆಗಳನ್ನು ವಿಭಜನೆಗೊಳಪಡಿಸಿ ವಿಶ್ಲೇಷಣೆಗೊಳಪಡಿಸಲಾಗಿದೆ. ತುಳುವ ಆಚರಣೆಗಳನ್ನು ಜೀವನಾವರ್ತನ, ವಾರ್ಷಿಕಾವರ್ತನ ಮತ್ತು ಆರಾಧನ ಹಿನ್ನೆಲೆಯ ಆಚರಣೆಗಳು ಎಂದು ವಿಭಜಿಸಿ ಅದಕ್ಕೆ ಸಂಬಂಧಿಸಿದ ವಸ್ತು ಪರಿಕರಗಳ ಅಧ್ಯಯನವನ್ನು ನಡೆಸಲಾಗಿದೆ. ಆಚರಣೆ ಮತ್ತು ಸಂಪ್ರದಾಯ, ನಂಬಿಕೆ ಇವುಗಳ ಪರಿಕಲ್ಪನೆಯ ತಾತ್ವಿಕತೆಯನ್ನು ಚರ್ಚಿಸುವ ಮೂಲಕ ತುಳುವರ ಆಚರಣೆ, ಸಂಪ್ರದಾಯ ಮತ್ತು ನಂಬಿಕೆಯ ನೆಲೆಯನ್ನು ವಿವೇಚಿಸಲಾಗಿದೆ. ಸರಳ ಆಚರಣೆಗಳು ಆಡಂಬರದ ದಿಶೆಯಲ್ಲಿ ಸಾಗುತ್ತಿದ್ದು, ಅವುಗಳ ನೇರ ಪರಿಣಾಮ ಭೌತಿಕ ಪರಿಕರಗಳ ಮೇಲೂ ಬೀಳುತ್ತಿರುವುದನ್ನು ಗಮನಿಸಿ ಚರ್ಚಿಸಲಾಗಿದೆ. ಹಾಗೂ ಅಧ್ಯಯನದ ಫಲಿತವನ್ನು **ಅಧ್ಯಾಯ ಏಳ**ರಲ್ಲಿ ವಿಶ್ಲೇಷಣೆಗೊಳಪಡಿಸಲಾಗಿದೆ.

೧.೫ ಈವರೆಗೆ ನಡೆದಿರುವ ಅಧ್ಯಯನದ ಸಮೀಕ್ಷೆ

ವಿದೇಶಿ ಬರಹಗಾರರಾದ ಪ್ರೌನ್ ತಮ್ಮ ಪ್ರಬಂಧದಲ್ಲಿ, 'ಭೌತಿಕ ಸಂಸ್ಕೃತಿ' ಅಂದರೆ, ಯಾವುದೇ ಒಂದು ನಿರ್ದಿಷ್ಟ ಸಮಾಜದಲ್ಲಿ ನಿರ್ದಿಷ್ಟ ಸಮಯದಲ್ಲಿ ಉಪಯೋಗಿಸಲ್ಪಡುವ ವಸ್ತುಗಳಲ್ಲಿನ ನಂಬಿಕೆಗಳ ಅಧ್ಯಯನ–ಅಂದರೆ, ಅದರ ಹಿಂದಿರುವ ನಂಬಿಕೆ, ಮೌಲ್ಯ, ಮನೋವೃತ್ತಿ, ಊಹೆ ಮುಂತಾದವುಗಳ ಅಧ್ಯಯನ. ಪ್ರತಿಯೊಂದು ಮಾನವನಿರ್ಮಿತ ವಸ್ತುರಚನೆಯಲ್ಲಿ ತಿಳಿದೊ, ತಿಳಿಯದೆಯೋ, ನೇರವೋ, ಪರೋಕ್ಷವಾಗಿಯೋ, ವಸ್ತು ನಿರ್ಮಿಸಿದವನ, ಉಪಯೋಗಿಸಿದವನ ಅಥವಾ ಸಮಾಜದ ಅಂದಿನ ನಂಬಿಕೆಗಳು ವ್ಯಕ್ತಗೊಳ್ಳುತ್ತದೆ. ಆದುದರಿಂದ ಈ ಭೌತಿಕ ಸಂಸ್ಕೃತಿ ಎನ್ನುವುದು ವಸ್ತುರೂಪಿ ಸಾಂಸ್ಕೃತಿಕ ಮಾನವ ಶಾಸ್ತ್ರ ಅಥವಾ ಸಾಂಸ್ಕೃತಿಕ ಇತಿಹಾಸ. ಮನುಷ್ಯ ನಿರ್ಮಿತ ವಸ್ತುಗಳಾದ ಅಥವಾ ಮಾರ್ಪಡಿಸಲಾದ ವಸ್ತುಗಳಾದ ಸುತ್ತಿಗೆ, ಮೇಜು, ನೇಗಿಲು, ಟಿ–ಪೊಟ್, ಭೂತಕನ್ನಡಿ, ಮನೆ, ಪೈಂಟಿಂಗ್ ಮುಂತಾದವುಗಳನ್ನು ಒಟ್ಟಾಗಿ ಭೌತಿಕ ವಸ್ತುಗಳೆಂದು ಕರೆಯಲ್ಪಡುವುದು[೧೭] ಎಂದಿದ್ದಾರೆ.


ಭೌತಿಕ ವಸ್ತುಗಳು ಮಾನವ ನಿರ್ಮಿತ; ಆದುದರಿಂದ, ಅವುಗಳು ಆಯಾ ಕಾಲಘಟ್ಟದ ಮನುಷ್ಯನ ಬುದ್ಧಿಮತ್ತೆಗೆ ನಿಖರವಾದ ಕೈಗನ್ನಡಿ, ಮತ್ತು ಸ್ಪಷ್ಟವಾದ ಕುರುಹು.

ಭೌತಿಕ ಸಂಸ್ಕೃತಿಯನ್ನು Simon J. Bronner ಹೀಗೆ ನಿರೂಪಿಸಿದ್ದಾರೆ. "Material culture is made up of tangible things crafted, shaped, altered and used across time and space. It is inherently personal and social, mental and physical. It is art, architecture, food, clothing and furnishing. Material culture represents the things /stuffs that is created and used on daily basis, the material products of a culture[18].

ಜೊನ್ ಟಿ. ಸ್ಕೆಲ್‌ಬೆಕರ್ ಅವರ ಅಭಿಪ್ರಾಯ ಹೀಗಿದೆ: ಭೌತಿಕ ವಸ್ತುಗಳ ಅಧ್ಯಯನದಲ್ಲಿ ಮುಖ್ಯವಾಗಿ ಎರಡು ತೊಡಕುಗಳಿವೆ; ಒಂದನೆಯದಾಗಿ, ವಸ್ತುಗಳು ಭೌಗೋಳಿಕವಾಗಿ ಎಲ್ಲೆಂದರಲ್ಲಿ ಅಂದರೆ, ಮ್ಯೂಸಿಯಂಗಳಲ್ಲಿ, ಹಿಸ್ಟೊರಿಕಲ್ ಸೊಸೈಟಿ, ಸಂಸ್ಥೆ, ಪ್ರಾಚ್ಯಸಂಗ್ರಹಾಲಯಗಳಲ್ಲಿ ಚದುರಿಕೊಂಡಿರುವುದು, ಮತ್ತು ಎರಡನೇಯದಾಗಿ, ವಸ್ತುಗಳ ಒಂದೇ ತೆರನಾದ ಸಮರ್ಪಕ ವಿಭಜನೆಯ ಕ್ರಮವನ್ನಿಲ್ಲಿ ಅಳವಡಿಸದೆ ಇರುವುದು ಎಂದು ಅಭಿಪ್ರಾಯ ಪಡುತ್ತಾರೆ[೧೯].

ಇ.ಮೆಕ್ ಲಂಗ್ ಫ್ಲೆಮಿಂಗ್ ಒಂದು ವಸ್ತುವಿನ ಗುಣ ಲಕ್ಷಣ ವನ್ನು ತಿಳಿಯಲು ಐದು ವಿಭಾಗಗಳನ್ನಾಗಿಸಬಹುದೆನ್ನುತ್ತಾ, ವಸ್ತುವಿನ ಇತಿಹಾಸ, ಧಾತು, ರಚನೆ, ರೂಪುರೇಶೆ ಮತ್ತು ಕಾರ್ಯ ಹಾಗೂ ನಾಲ್ಕು ಮುಖ್ಯ ಕ್ರಿಯೆಗಳಾದ ಗುರುತಿಸುವಿಕೆ, ಮೌಲ್ಯಮಾಪನ, ಸಾಂಸ್ಕೃತಿಕ ವಿಭಜನೆ ಮತ್ತು ವಿಶ್ಲೇಷಣೆ

ಮಾಡಬೇಕಾಗುತ್ತದೆ ಎನ್ನುವನು. ಒಂದು ವಸ್ತುವಿನ ಕಲಾತ್ಮಕತೆಯ ಪರಿಧಿಗಿಂತಲೂ ಹಿಂದೆ ಹೋಗಿ ವಿಶ್ಲೇಷಿಸುವ ಅಗತ್ಯತೆಯನ್ನು ತಿಳಿಸುತ್ತಾ ಅವರೊಂದು ಚೌಕಟ್ಟನ್ನು ಒದಗಿಸುತ್ತಾರೆ.



ಚಿತ್ರ ೧: ಇ. ಮೆಕ್ ಲಂಗ್ ಫ್ಲೆಮಿಂಗ್[೨೦] ಒದಗಿಸಿದ ಭೌತಿಕ ವಸ್ತುವಿನ ಅಧ್ಯಯನದ ಚೌಕಟ್ಟು

ಭೌತಿಕ ವಸ್ತುಗಳು ಮನುಷ್ಯನು ತಯಾರಿಸಿದ ಮತ್ತು ಉಪಯೋಗಿಸಿದ ವಸ್ತುರೂಪದಲ್ಲಿನ ಅಭಿವ್ಯಕ್ತಿ ಮಾತ್ರವಲ್ಲ, ಅದೊಂದು ಸಂಸ್ಕೃತಿ, ಅದು ಸಾರ್ಥಕತೆಯ ಅಗತ್ಯ ಮಾನದಂಡ. ಆದರೆ, ಮ್ಯೂಸಿಯಂಗಳು ಭೌತಿಕ ವಸ್ತು ಪರಿಕರಗಳ ಅಧ್ಯಯನ ಶಿಸ್ತಿಗೆ ಬಹಳ ಕಡಿಮೆ ಮಹತ್ವ ನೀಡಿವೆ ಎಂದು ಎಚ್ಚರಿಸುತ್ತಾ, ಇದನ್ನು ಸಿದ್ಧಾಂತ ರೂಪಕ್ಕೆ ತರುವಲ್ಲಿ ಫ್ಲೆಮಿಂಗ್ ವಿಫಲರಾಗಿದ್ದಾರೆ.

ಜೊನ್ ಟಿ. ಸ್ಕೆಲ್‌ಬೆಕರ್ ತಮ್ಮ 'ದಿ ಯುಸ್ ಆಫ್ ಒಬ್‌ಜೆಕ್ಟ್ಸ್ ಇನ್ ಹಿಸ್ಟೋರಿಕಲ್ ರಿಸರ್ಚ್' ಪ್ರಬಂಧದಲ್ಲಿ. ಸಾಂಪ್ರದಾಯಿಕ ಆಕರಗಳಾದ ದಾಖಲೆಗಳಲ್ಲಿಯೂ ಲೋಪದೋಷ ಇಲ್ಲದಿಲ್ಲ, ಅಂತೆಯೆ ವಸ್ತು ಪರಿಕರಗಳಲ್ಲಿಯೂ ಇದರ ಸಾಧ್ಯತೆ ಇದೆಯೆನ್ನುತ್ತಾ, ಪ್ರತಿರೂಪಗಳು, ತದ್ರೂಪಿಗಳು ನಿರ್ವಚನೆಯ ದಾರಿ ತಪ್ಪಿಸಬಹುದು ಎನ್ನುತ್ತಾರೆ[೨೧]. ವಸ್ತುಪರಿಕರಗಳನ್ನು ವಿವಿಧ ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ತುಲನಾತ್ಮಕವಾಗಿ ನೋಡಬೇಕೆನ್ನುತ್ತಾ, ಅಮೆರಿಕಾದ ಮತ್ತು ಯುರೋಪಿನಲ್ಲಿ ಬಳಕೆಯಾಗುತ್ತಿದ್ದ ಕೃಷಿಬಳಕೆಯ ವಸ್ತುಗಳನ್ನು ಉದಾಹರಿಸುತ್ತಾರೆ. ಅಮೇರಿಕನ್ನರ ಕೃಷಿ ಪರಿಕರಗಳು ಅಗತ್ಯಕ್ಕೆ ತಕ್ಕಷ್ಟೆ ಗಟ್ಟಿ ಹಾಗೂ ಹಗುರವಾಗಿದ್ದವು.

ಸ್ಟೀವನ್ ಎಮ್. ಬೆಕೊ ತನ್ನ 'ಕಲ್ಚರ್, ಹಿಸ್ಟರಿ ಮತ್ತು ಆರ್ಟಿಫ್ಯಾಕ್ಟ್' ಎಂಬ ಪ್ರಬಂಧದಲ್ಲಿ ಮನುಷ್ಯ ನಿರ್ಮಿತ ವಸ್ತುಗಳಿಗೆ 'ಭೌತಿಕ ಸಂಸ್ಕೃತಿ' ಪದ ಬಳಕೆಗಿಂತ 'ಆರ್ಟಿಫ್ಯಾಕ್ಟ್' ಪದ ಬಳಕೆ ಸೂಕ್ತ; 'ಭೌತಿಕ ಸಂಸ್ಕೃತಿ' ಪದವನ್ನು ಸರಿಯಾಗಿ ವ್ಯಾಖ್ಯಾನಿಸದಿದ್ದರೆ, ಅದರ ಅರ್ಥ ಸುಲಭಗ್ರಾಹ್ಯವಲ್ಲ[೨೨]. ಬೆಕೊ, ಒಬ್ಬ ಮಾನವ ಶಾಸ್ತ್ರಜ್ಞನಾಗಿದ್ದುಕೊಂಡು 'ಕೆನಡದ ನೇಷನಲ್ ಮ್ಯೂಸಿಯಂ ಆಫ್ ಮೆನ್'ನಲ್ಲಿ ಹಲವಾರು ವರ್ಷ ಕಾರ್ಯ ನಿರ್ವಹಿಸಿದ್ದು, ತನ್ನ 'ಕಲ್ಚರ್, ಹಿಸ್ಟರಿ ಮತ್ತು ಆರ್ಟಿಫ್ಯಾಕ್ಟ್' ಎಂಬ ಪ್ರಬಂಧದಲ್ಲಿ ಸಾಂಸ್ಕೃತಿಕ ಅಧ್ಯಯನ ಮತ್ತು ವಸ್ತು ಸಂಗ್ರಹಾಲಯದ ಕಾರ್ಯಗಳ ಸಂಬಂಧ ಮತ್ತು ವಸ್ತುಸಂಗ್ರಹಾಲಯ ಕಾರ್ಯಗಳು ಸಾರ್ವಜನಿಕರ ಕ್ಷೇಮಾಭಿವೃದ್ದಿಯ ಮೇಲೆ ಹೇಗೆ ಪರಿಣಾಮ ಬೀರುವುದರ ಸಂಬಂಧದ ಮೇಲೆ ದೃಷ್ಟಿ ಹರಿಸುವುದು ಮಾತ್ರವಲ್ಲ ಅವನು ಮ್ಯೂಸಿಯಂನ ಕಾರ್ಯಗಳಿಗೆ ವಿಸ್ತೃತ ಒಳನೋಟವನ್ನು ಒದಗಿಸಿದ್ದಾನೆ. ಮ್ಯೂಸಿಯಂನಲ್ಲಿರುವ ಯಾವ ವಸ್ತುವೂ ಕನಿಷ್ಠವಲ್ಲ, ಪ್ರತಿಯೊಂದಕ್ಕೂ ಅದರದೇ ಆದ ಪ್ರಾಮುಖ್ಯತೆಯಿದೆ. ವಸ್ತುಗಳು ಮನುಷ್ಯನ ಸಂಸ್ಕೃತಿಯನ್ನು ತನ್ನ ಸ್ವರೂಪ ಮತ್ತು ಕಾರ್ಯಗಳ ಮುಖಾಂತರ ಅನಾವರಣಗೊಳಿಸುತ್ತವೆ.

"20ನೇಯ ಶತಮಾನದಲ್ಲಿ ಗೋರ್ಡನ ಚೈಲ್ಡ್ ಅವರು, ಅವರ ನಂತರ, ಲಿವಿಸ್ ಬಿನ್ಫರ್ಡ್, ಡೇವಿಡ್ ಕ್ಲಾರ್ಕ್, ಇವರುಗಳೆಲ್ಲಾ ಪ್ರಾಕ್ತನಶಾಸ್ತ್ರೀಯ ವಸ್ತುಗಳನ್ನಿಟ್ಟುಕೊಂಡು ಮನುಷ್ಯನ ಬಗ್ಗೆ ತಿಳಕೊಳ್ಳುವುದು ಹೇಗೆ, ಯಾವ ಸೈದ್ಧಾಂತಿಕ ಚೌಕಟ್ಟನ್ನು ಬಳಸಿಕೊಳ್ಳಬಹುದು ಅಂತ ಚರ್ಚೆ ಮಾಡುತ್ತಾ ಬರುತ್ತಾರೆ. ಹಾಗೆ ಬರುವಾಗಲೂ ಕೂಡಾ ಅವರು ಹಿಸ್ಟ್ರಿಯನ್ನು ಬಿಟ್ಟರೂ ಆಂಥ್ರೋಪೊಲಾಜಿಯನ್ನು ಹಿಡಿದುಕೊಳ್ಳ ಬೇಕಾಗುತ್ತದೆ. ಅದರ ಸಿದ್ಧಾಂತವನ್ನು ಬಳಸುತ್ತಾರೆ. ಗೊರ್ಡನ್ ಚೈಲ್ಡ್ ಅವರ Man Makes Himself ಬರೆಯುವಾಗ ಮನುಷ್ಯನ ಉಪಕರಣಗಳನ್ನಿಟ್ಟುಕೊಂಡು ನಾವು ಅವನ ಇತಿಹಾಸ ಕಟ್ಟುವುದು ಹೇಗೆ ಅಂತಾ ಚರ್ಚೆ ಮಾಡುತ್ತಾರೆ. ಈ ಗ್ರಂಥದಲ್ಲಿ ಮನುಷ್ಯನ ತಾಂತ್ರಿಕತೆಯ ಬೆಳವಣಿಗೆಯಮೂಲಕ ಸಾಮಾಜಿಕ ಬೆಳವಣಿಗೆಯ ಇತಿಹಾಸ ಕಟ್ಟುವ ಒಂದು ಪ್ರಯತ್ನ ಇದೆ. ಮೋರ್ಗನ್ ಅವರು 19ನೆಯ ಶತಮಾನದಲ್ಲಿ ಮನುಷ್ಯ ಸಮಾಜದ ವಿಕಾಸದ ಕುರಿತು ಏನು ಹೇಳುತ್ತಾರೋ ಗೊರ್ಡನ್ ಚೈಲ್ಡ್ 20ನೇಯ ಶತಮಾನದ ಆಧಿಭಾಗದಲ್ಲಿ ಅದನ್ನ ಪ್ರಾಕ್ತನ ಶಾಸ್ತ್ರಕ್ಕೆ ಅನ್ವಯಿಸಿಕೊಂಡು ಮನುಷ್ಯನ ಉಪಕರಣಗಳನ್ನು ಅಧ್ಯಯನ ಮಾಡುತ್ತಾ ಮನುಷ್ಯ ಹೇಗೆ ಬೆಳೆದ, ಹೇಗೆ ವಿಕಾಸವಾಗುತ್ತಾ ಬಂದ ಹೇಗೆ ಶಿಲಾಯುಗ ಹಂತದಿಂದ ನಾಗರಿಕ ಹಂತಕ್ಕೆ ಬೆಳೆದು ಬಂದ ಎನ್ನುವುದನ್ನು ಕಟ್ಟಿ ತೋರಿಸುತ್ತಾ ಹೋಗುತ್ತಾನೆ. ಆ ನಂತರ 1960ರ ನಂತರ ಬಂದ ಲಿವಿಸ್ ಬಿನ್‌ಫರ್ಡ್, ಡೇವಿಡ್ ಕ್ಲರ್ಕ್ ಮುಂತಾದವರು ಇಂಥ ವಿಧಾನವನ್ನು ಹಳೆಯದು ಎಂದು ಟೀಕಿಸಿ ಅವಶೇಷಗಳನ್ನು ವಿಶ್ಲೇಷಿಸಿಯೇ ಮನುಷ್ಯ ಸಂಸ್ಕೃತಿಗಳ ಕುರಿತು ತಿಳಿಯಬಹುದು ಎಂಬುದನ್ನು ತಮ್ಮ ವಿಧಾನದಲ್ಲಿ ತೋರಿಸುತ್ತಾರೆ. ವಿಕಾಸದ ಕಥೆಗಿಂತ ಸಾಂಸ್ಕೃತಿಕ ಪ್ರಕ್ರಿಯೆಯ ಅಧ್ಯಯನ ಹೀಗೆ ಪ್ರಧಾನವಾಯಿತು"[23] (ರಾಜಾರಾಮ ಹೆಗಡೆ, 2016).

ಜೂಲ್ಸ್ ಪ್ರಾನ್ ಅವರು ತಮ್ಮ 'ದಿ ಟ್ರುತ್ ಆಫ್ ಮೆಟೀರಿಯಲ್ ಕಲ್ಚರ್' ಎಂಬ ಪ್ರಬಂಧದಲ್ಲಿ: ಮಾನವ ನಿರ್ಮಿತ ವಸ್ತುಗಳು ಹಿಂದೆ ತಯಾರಾಗಿದ್ದರೂ, ಇತಿಹಾಸದ ಇತರ ದಾಖಲೆಗಿಂತ ಭಿನ್ನವಾಗಿ, ಇಂದಿಗೂ ವರ್ತಮಾನದಲ್ಲಿ ಅಸ್ತಿತ್ವದಲ್ಲಿವೆ; ಇವುಗಳನ್ನು ಮರುಅನುಭವಿಸಬಹುದು, ಅಲ್ಲದೆ, ಇವು ಅಧಿಕೃತವಾದುವು ಮತ್ತು ಪ್ರಾಥಮಿಕ ಐತಿಹಾಸಿಕ ಆಕರಗಳಾಗಿಯೂ ಲಭ್ಯ. ಆದ್ದರಿಂದ ಈ ವಸ್ತುಗಳು ಐತಿಹಾಸಿಕ ದಾಖಲೆ ಎನ್ನುತ್ತಾರೆ[೨೪]. ಇವು ಇತರ ಐತಿಹಾಸಿಕ ದಾಖಲೆಗಳಂತೆ, ತನ್ನಷ್ಟಕ್ಕೆ ಘಟಿಸುವುದಿಲ್ಲ; ಅವುಗಳು ಯಾವುದೊ ಕಾರ್ಯಕಾರಣದ ಫಲಿತಾಂಶವಾಗಿ ಹುಟ್ಟಿಕೊಂಡಿರುವಂತದ್ದು. ಒಂದು ವಸ್ತುವಿನ ಅಸ್ತಿತ್ವದ ಹಿಂದೆ ಹಲವಾರು ಕಾರಣಗಳಿರಬಹುದು. ಆ ಕಾರಣಗಳಿಂದಾಗಿ ಆ ರೂಪದಲ್ಲಿ, ಆ ಉದ್ದೇಶದೊಂದಿಗೆ, ಆ ವಸ್ತುವಿನ ವಿನ್ಯಾಸ, ಬಣ್ಣ, ರಚನೆಯಾಗಿರುತ್ತದೆ. ಅವರು ೩ ಹಂತದ ಅಧ್ಯಯನ ವಿಧಾನಗಳನ್ನು ಸೂಚಿಸುತ್ತಾರೆ. ೧. ಡಿಸ್ಕ್ರಿಪ್ಷನ್ (ವಿವರಣಾತ್ಮಕ), ಡಿಡಕ್ಷನ್ (ತೀರ್ಮಾನಕ್ಕೆ ಬರುವುದು) ಮತ್ತು ಸ್ಪೆಕ್ಯುಲೆಶನ್ (ಊಹಾಪೋಹ/ಅನುಮಾನ).

ಪೀಟರ್ ಗೆ ತನ್ನ ಆರ್ಟ್ ಮತ್ತು ಆಕ್ಟ್ ಪುಸ್ತಕದಲ್ಲಿ–ಐತಿಹಾಸಿಕ ದಾಖಲೆಗಳಿಗೆ ಸಮಾಂತರವಾಗಿ ೩ ವಿಧದ ಐತಿಹಾಸಿಕ ಕಾರಣಗಳನ್ನು, ಮಾನವ ನಿರ್ಮಿತ ವಸ್ತುಗಳಿಗೆ ಗುರುತಿಸುತ್ತಾರೆ. ಅವುಗಳೆಂದರೆ, ಕೌಶಲ್ಯ, ಸಂಸ್ಕೃತಿ, ಮತ್ತು ವ್ಯಕ್ತಿಗತ ನೈಪುಣ್ಯ. ವಸ್ತುವಿನ ಆವಿಷ್ಕಾರದ ಕೌಶಲ್ಯವು ಪಾರಂಪರಿಕತೆಯಿಂದ ಬಂದುದಾದರೆ, ಆಯಾ ಕಾಲಘಟ್ಟದ ಪ್ರಚಲಿತ ನಂಬಿಕೆ, ಪದ್ಧತಿಗಳು, ಆಚಾರ–ವಿಚಾರಗಳ ಸಂಸ್ಕೃತಿ ವಸ್ತುವಿನಲ್ಲಿ ಪ್ರತಿಬಿಂಬಿತವಾಗುತ್ತವೆ. ಅಲ್ಲದೆ, ರಚನಾಕಾರನ ಮಾನಸಿಕ ಸ್ಥಿತಿಗತಿಯೂ ವಸ್ತುವಿನ ವಿನ್ಯಾಸದಲ್ಲಿ ಪರಿಣಾಮ ಬೀರುತ್ತದೆ.

ಒಂದು ಜನಾಂಗದ ಅಧ್ಯಯನ ಒಳಗೊಳ್ಳುವ ಮೌಖಿಕ ಸಾಹಿತ್ಯದ ಭಾಗ, ಸಾಮಾಜಿಕ ಪದ್ಧತಿ ಮತ್ತು ಆಚರಣೆಗಳ ಭಾಗ, ಪ್ರದರ್ಶನಾತ್ಮಕ ರಂಗಕಲೆಗಳ ಭಾಗ – ಇವುಗಳ ಜೊತೆಗೆ ಭೌತಿಕ ಸಂಸ್ಕೃತಿಯ ಭಾಗವು ಮುಖ್ಯವಾಗಿ ಸೇರುತ್ತದೆ ಎಂದು ರಿಚರ್ಡ್ ಎಂ ಡಾರ್ಸನ್[೨೫] ತಮ್ಮ ಸಂಪಾದಿತ ಸಂಶೋಧನಾ ಪ್ರಬಂಧ ಸಂಕಲನದ ಪ್ರಸ್ತಾವನೆಯಲ್ಲಿ ತಿಳಿಸುತ್ತಾ, ಒಂದು ಜನಾಂಗದ ಅಧ್ಯಯನವು ನಾಲ್ಕು ವಿಭಾಗಗಳಲ್ಲಿ ಗುರುತಿಸಬಹುದು ಎಂದಿದ್ದಾರೆ:

೧. ಮೌಖಿಕ ಸಾಹಿತ್ಯ (Oral Literature)

೨. ಭೌತಿಕ ಸಂಸ್ಕೃತಿ (Material Culture)

೩. ಸಾಮಾಜಿಕ ಪದ್ಧತಿ ಮತ್ತು ಆಚರಣೆಗಳು (Social Folk Customs)

೪. ಪ್ರದರ್ಶನಾತ್ಮಕ ರಂಗಕಲೆಗಳು (Performing Folk Arts)

ಅವುಗಳಲ್ಲಿ ಭೌತಿಕ ಸಂಸ್ಕೃತಿಯನ್ನು (Material Culture) ಎರಡನೆಯ ಘಟಕವಾಗಿ ಗುರುತಿಸುತ್ತಾರೆ. ಪರಂಪರಾಗತ ಇತಿಹಾಸದಲ್ಲಿ ಬರುವ ಉಪಾಖ್ಯಾನವನ್ನು ಸ್ಥಿರೀಕರಿಸಲು ಪ್ರಾಚೀನಕಾಲದ ಜನರು ದೈನಂದಿನ ಬದುಕಿನಲ್ಲಿ ಬಳಸುತ್ತಿದ್ದ ವಸ್ತುರೂಪದ ಸಾಮಗ್ರಿಗಳನ್ನು ಬಳಸಿಕೊಳ್ಳಬಹುದೆನ್ನುತ್ತಾರೆ.

ಡಾ. ಜವಹರಲಾಲ್ ಹಂಡೂ ತಮ್ಮ ಕೃತಿಯಲ್ಲಿ ಭೌತಿಕ ಸಂಸ್ಕೃತಿಯ ಬಗ್ಗೆ ಉಲ್ಲೇಖಿಸುತ್ತಾರೆ[೨೬]. ಜಾನಪದದ ವಿವಿಧ ವಿಭಾಗಗಳ ಬಗ್ಗೆ ವಿವರಿಸುತ್ತಾ ಜನಪದ ವಾಸ್ತು ಶಿಲ್ಪವು ಭೌತಿಕ ಸಂಸ್ಕೃತಿಯ ಒಂದು ಅಂಗವೆಂದು ಹೇಳುತ್ತಾರೆ. ಭೌತಿಕ ಸಂಸ್ಕೃತಿಯು ಒಳಗೊಳ್ಳುವ ಜನಪದ ವೇಷಭೂಷಣ, ಜನಪದ ವೈದ್ಯ, ಕರಕುಶಲ ಕಲೆಗಳು, ಮನೆ ಮೊದಲಾದವುಗಳನ್ನು ಈ ಲೇಖನದಲ್ಲಿ ಪ್ರಸ್ತಾಪಿಸಲಾಗಿದೆ. ಆಧುನಿಕ ತಂತ್ರಜ್ಞಾನದ ಪ್ರವೇಶ ಗ್ರಾಮೀಣ ಭಾರತದ ಜನತೆಯ ಮೇಲೆ (ಜನಪದರ ಮೇಲೆ) ಆದ ಪರಿಣಾಮವಾಗಿ ಅಲ್ಲಿನ ಜನಪದರು ತಮ್ಮ ಸಂಸ್ಕೃತಿಯ ಪ್ರತೀಕಗಳೆನಿಸಿದ ಈ ಕರಕುಶಲ ಕಲೆ, ವಾಸ್ತು ಇತ್ಯಾದಿಗಳನ್ನು ಕೈಬಿಡುತ್ತಿರುವುದರ ಬಗ್ಗೆ ಪ್ರಸ್ತಾಪಿಸಿದ ಡಾ. ಹಂಡೂ ಅವರು ಭೌತಿಕ ಸಂಸ್ಕೃತಿಯ ಅಧ್ಯಯನದ ಅಗತ್ಯವನ್ನು ಸೂಚಿಸುತ್ತಾರೆ.

"ಜಾನಪದ ಪರಂಪರೆಯು ಒಳಗೊಳ್ಳುವ ಮೌಖಿಕ ಸಾಹಿತ್ಯ, ಭೌತಿಕ ಸಂಸ್ಕೃತಿ, ಸಾಮಾಜಿಕ ಆಚರಣೆಗಳು ಮತ್ತು ರಂಗಪ್ರದರ್ಶನ ಕಲೆಗಳು – ಇವುಗಳ ನಡುವೆ ಪರಸ್ಪರ ಸಂಬಂಧವಿರುವುದನ್ನು ಮರೆಯಬಾರದು. ಕರಾವಳಿಯ ಜಾನಪದ ಪರಂಪರೆಯ ಮೂಲಕ ಪ್ರಕಟವಾಗುತ್ತಾ ಬಂದ ತುಳುವರ ಲೋಕದೃಷ್ಟಿಯ ಸ್ವರೂಪವನ್ನು ಚರ್ಚಿಸುವಾಗ ಈ ನಾಲ್ಕು ವರ್ಗಗಳನ್ನು ಒಟ್ಟಾಗಿ ಗ್ರಹಿಸಬೇಕಾದುದು ಮುಖ್ಯ".[೨೭]

"ಈ ನಾಲ್ಕು ಅಂಗಗಳಲ್ಲಿ ಎರಡನೆಯದಾದ, ಭೌತಿಕ ಜಾನಪದ ಕ್ಷೇತ್ರದಲ್ಲಿ ಏನೇನೂ ಕೆಲಸ ನಡೆದಿಲ್ಲ".[೨೮]

ಬಿ.ಎ ಸಾಲೆತ್ತೂರು ತುಳುನಾಡಿನ ಜನಜೀವನದ ಜತೆಗೆ, ವೃತ್ತಿ, ಕಸುಬು, ಧರ್ಮ, ವ್ಯಾಪಾರ, ಕಲೆ, ಇವುಗಳ ಚಿತ್ರಣ ನೀಡುವಾಗ ಕೋಟಿಚೆನ್ನಯ, ಸಿರಿ, ಪಂಜುರ್ಲಿ ಪಾಡ್ದನಗಳನ್ನು ಮೂಲ ಆಕರವಾಗಿ ಬಳಸುತ್ತಾರೆ[೨೯].

ಡಾ. ಜೀ.ಶಂ. ಪರಮಶಿವಯ್ಯನವರು ತಮ್ಮ 'ಜಾನಪದ' ಕೃತಿಯಲ್ಲಿ ಭೌತಿಕ ಜಾನಪದವನ್ನು ಜಾನಪದದ ಒಂದು ಪ್ರಮುಖ ಅಂಗವೆಂದು ಪರಿಗಣಿಸಿದ್ದಾರೆ. ಜನಪದರ ದಿನನಿತ್ಯದ ಬಳಕೆಯ ಸಲಕರಣೆಗಳ ನಿರ್ಮಾಣದ ಹಿಂದೆ ಜನಪದರ ಪ್ರತಿಭೆ ಕೆಲಸ ಮಾಡಿದೆ. ಇಂತಹ ನಿರ್ಮಾಣಗಳು ಕಲೆ ಮತ್ತು ಸೌಂದರ್ಯದ ದೃಷ್ಟಿಯಿಂದಲೂ ಗಮನಸೆಳೆಯುತ್ತವೆ ಎಂಬ ಅಂಶ ಜೀ.ಶಂ.ಪ ಕೃತಿಯಿಂದ ಸ್ಪಷ್ಟವಾಗುತ್ತದೆ. ಒಂದು ಸಂಸ್ಕೃತಿಯ ಪರಿಸರದಲ್ಲಿ ರೂಪುಗೊಂಡ ಈ ವಸ್ತು ವಿಶೇಷಗಳು ನಿರ್ದಿಷ್ಟ ಜನಾಂಗಗಳನ್ನು ಚಾರಿತ್ರಿಕವಾಗಿ, ಸಾಮಾಜಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಅಧ್ಯಯನ ಮಾಡುವವರಿಗೆ ಮಹತ್ವದ ಆಕರಗಳಾಗುತ್ತವೆ ಎಂಬ ಅಭಿಪ್ರಾಯವನ್ನು ಜೀ.ಶಂ.ಪರಮಶಿವಯ್ಯನವರು ಸಮರ್ಥವಾಗಿ ಮಂಡಿಸಿದ್ದಾರೆ.

ಗೃಹೋಪಯೋಗಿ ವಸ್ತುಗಳು, ವೃತ್ತಿ ಸಂಬಂಧೀ ಸಲಕರಣೆಗಳು, ಉಡುವ ಉಡುಪು, ತೊಡುವ ಆಭರಣಗಳು, ವಿಶೇಷ ಕೆತ್ತನೆಗಳಿರುವ ಕಟ್ಟಡಗಳು ಮತ್ತು ಅವುಗಳ ಬಿಡಿಭಾಗಗಳು, ಚಿತ್ರಕಲೆ, ಅಲಂಕಾರ ಸಾಮಗ್ರಿಗಳು, ಬೇಟೆಯಲ್ಲಿ ಬಳಸುವ ಮತ್ತು ಯುದ್ಧಸಂಬಂಧಿ ಆಯುಧಗಳು, ಅಳತೆ ತೂಕದ ಮಾಪನಗಳು, ಆಹಾರ ಸಾಮಗ್ರಿಗಳು ಮತ್ತು ಅವುಗಳ ಸಂಗ್ರಹ ಸಲಕರಣೆಗಳು, ಜನಪದ ವೈದ್ಯದ ತಯಾರಿ ಸಲಕರಣೆಗಳು

ಮತ್ತು ಅವುಗಳ ಶೇಖರಣೆಯ ಮಡಕೆಗಳು, ಆರಾಧನಾ ವಸ್ತುವಿಶೇಷಗಳು– ಇವು ಭೌತಿಕ ಸಂಸ್ಕೃತಿಯ ವಿಭಾಗದಲ್ಲಿ ಬರುತ್ತವೆ. ಜನಪದರು ಬಳಸುವ ಎಷ್ಟೋ ಗೃಹೋಪಯೋಗಿ ವಸ್ತುಗಳು ಮತ್ತು ವೃತ್ತಿ ಸಂಬಂಧಿ ವಸ್ತುಗಳು ಸರಳ ರಚನೆಗಳಾಗಿದ್ದರೂ ಅವುಗಳ ಕುರಿತಂತೆ ಜನಪದರು ಹೊಂದಿರುವ ಭಾವನಾತ್ಮಕ ಸಂಬಂಧಗಳು ಗಮನ ಸೆಳೆಯುತ್ತವೆ. ಕೃಷಿಯಲ್ಲಿ ಬಳಸುವ ನೊಗ, ನೇಗಿಲು, ಹಲಗೆಗಳನ್ನು ಜನಪದರು ಗೌರವದ ಭಾವನೆಯಿಂದ ನೋಡುತ್ತಾರೆ. ದವಸಧಾನ್ಯಗಳನ್ನು ಅಳೆಯುವ ಬುಟ್ಟಿಗಳಿಗೆ ಕೈಮುಗಿಯುತ್ತಾರೆ. ಬಡಿಸುವ, ಉಣ್ಣುವ ಸಲಕರಣೆಗಳನ್ನು ಯಾವತ್ತೂ ಒಡೆಯುವುದಿಲ್ಲ; ಕಾಲು ತಾಕಿದರೂ ಕೈ ಮುಟ್ಟಿ ನಮಸ್ಕರಿಸುತ್ತಾರೆ. ಇಡಿಯ ಮನೆಯ ಕುರಿತಂತೆ ಜನಪದರು ಹೊಂದಿರುವ ಗೌರವದ ಭಾವನೆಗೆ ಅನುಗುಣವಾಗಿ ಅಲ್ಲಿರುವ ವಸ್ತುಗಳ ಬಗೆಗೂ ಪೂಜ್ಯ ಭಾವನೆಯನ್ನು ಇಟ್ಟುಕೊಂಡಿರುತ್ತಾರೆ (ಪರಮಶಿವಯ್ಯ ಜೆ ಎಸ್, ೧೯೭೫).[೩೦]

ಮಾನವ ಜನಾಂಗದ ಇತಿಹಾಸವನ್ನು ಪುನರ್‌ರಚಿಸುವಲ್ಲಿ ಪ್ರಾಚೀನ ಕಾಲದಿಂದ ಇದುವರೆಗೆ ಉಳಿದುಬಂದ ಸರ್ವಸಾಮಗ್ರಿಗಳು ಪ್ರಯೋಜಕವೆನಿಸುತ್ತವೆ. ಅಂತೆಯೇ ಭೂಮಿಯ ಮೇಲೆ ಕಾಣುವ ಹಾಗೂ ಅಡಗಿರುವ ಆಕರಗಳನ್ನು ಶೋಧಿಸಬೇಕು. ಹೀಗೆ ಉತ್ಖನನ, ಶಾಸನಶಾಸ್ತ್ರ, ನಾಣ್ಯಶಾಸ್ತ್ರ, ವಾಸ್ತುಶಿಲ್ಪ ಕಲೆಗಳನ್ನೊಳಗೊಂಡ ಪುರಾತತ್ವಕ್ಕೆ ಬಹುಮುಖ ವ್ಯಾಪ್ತಿಯಿದೆ. ಇದರ ಅಧ್ಯಯನ ಬಹು ವಿಸ್ತಾರವಾದದ್ದು. ಪ್ರಾಗೈತಿಹಾಸಿಕ ಯುಗದ–ರೂಪಣಯುಗ, ಸಾಮ್ರಾಜ್ಯಯುಗ, ಸಂಘರ್ಷಣಯುಗ ಹಾಗೂ ವಿಚ್ಛಿನ್ನಯುಗಗಳವರೆಗೆ, ಪ್ರಾಕ್ತನಶಾಸ್ತ್ರದ ವ್ಯಾಪ್ತಿ ಹಬ್ಬಿದೆ. ಇದರ ಮುಖ್ಯ ಉದ್ದೇಶವೆಂದರೆ ಮಾನವನ ಒಟ್ಟು ಇತಿವೃತ್ತವನ್ನು ತಿಳಿಯುವುದು. ಅವನ ಸಾಮಾಜಿಕ, ಸಾಂಸ್ಕೃತಿಕ ಸಂದರ್ಭವನ್ನು ಶೋಧಿಸುವುದು.[೩೧]. ಆದರೆ ಪುರಾತತ್ವಜ್ಞನು ಆದಷ್ಟೂ ತಾನು ಸಂಗ್ರಹಿಸಿದ ಮೂಲ ಆಕರಗಳು ಮಾತಾಡುವಂತೆ ಮಾಡಬೇಕು. ಅಂದರೆ ವಸ್ತುನಿಷ್ಠ ವಿವರಣೆ ನೀಡಿ ಕೈಬಿಡಬೇಕು. ವಿಷಯದ ನಿರೂಪಣೆಯಲ್ಲಿ ಸದಾ ಎಚ್ಚರಿಕೆ ವಹಿಸಬೇಕು. ಪ್ರಾಚ್ಯವಸ್ತು ವಿಶೇಷಗಳನ್ನು ಹುಡುಕುವುದಾಗಲಿ, ಸಂಗ್ರಹಿಸುವುದಾಗಲಿ ಅತಿಮುಖ್ಯವಲ್ಲ; ಅವುಗಳ ತಯಾರಿಕೆಯ–ತಂತ್ರವಿಧಾನಗಳ ಹಿನ್ನಲೆಯಲ್ಲಿರುವ ಮೂಲ ಉದ್ದೇಶಗಳನ್ನು ಕುರಿತು ಚಿಂತನೆ ಆಗಬೇಕಾಗಿದೆ.

ತುಳುನಾಡಿನ ಗರೋಡಿಗಳ ಸಾಂಸ್ಕೃತಿಕ ಅಧ್ಯಯನ ಎನ್ನುವ ಗ್ರಂಥದಲ್ಲಿ (೧೯೯೦) ಗರೋಡಿಯ ಒಳಗಿನ ಭೌತಿಕ ವಸ್ತುಗಳ ಪಟ್ಟಿಯನ್ನು ನೀಡಿದ್ದಾರೆ. ಕೋಟಿ ಚೆನ್ನಯ ಆರಾಧನೆಯಲ್ಲಿ ಬಳಕೆಯಾಗುವ ಭೌತಿಕ ವಸ್ತು ವಿಶೇಷಗಳ ಬಗೆಗೆ ಈ ಕೃತಿಯಲ್ಲಿ ಅಪಾರವಾದ ಮಾಹಿತಿಗಳಿವೆ. ಮುಖ್ಯವಾಗಿ, ಈ ಮಾಹಿತಿಗಳನ್ನು ಆರಾಧನೆಯ ಪೂರಕ ಸಾಮಾಗ್ರಿಗಳೆಂಬಂತೆ ಪಟ್ಟಿ ಮಾಡಲಾಗಿದೆಯೇ ಹೊರತು ತುಳು ಸಂಸ್ಕೃತಿ ಮತ್ತು ಜನಾಂಗಗಳ ಸಾಂಸ್ಕೃತಿಕ ಅನನ್ಯತೆಯನ್ನು ಶೋಧಿಸುವ ಉದ್ದೇಶವನ್ನು ಈ ಗ್ರಂಥ ಇಟ್ಟುಕೊಂಡಿಲ್ಲ.

ಸಮಗ್ರ ಕೋಟಿಚೆನ್ನಯ ಕೃತಿಯಲ್ಲಿ ಬನ್ನಂಜೆ ಬಾಬು ಅಮೀನ್ ಅವರು ಗರೋಡಿಗಳ ನಿರ್ಮಾಣದಲ್ಲಿ 'ಆಯ'ದ ಪ್ರಸ್ತಾವನೆ ಮಾಡುತ್ತಾರೆ ಮತ್ತು ದೈವಾರಾಧನೆಯಲ್ಲಿ ಮತ್ತು ಕೃಷಿ ಕಾರ್ಯದಲ್ಲಿ ಉಪಯೋಗಿಸಲ್ಪಡುವ ಭೌತಿಕವಸ್ತುಗಳ ಮಾಹಿತಿ ಒದಗಿಸುತ್ತಾರೆ.

ಉಗ್ಗಪ್ಪ ಪೂಜಾರಿಯವರ 'ಪಚ್ಚೆಸಿರಿ' (೨೦೧೨) ಕೃತಿಯಲ್ಲಿ ಕೃಷಿಯಲ್ಲಿ, ಗೃಹ ಬಳಕೆಯಲ್ಲಿ ಹಾಗೂ ಕಸುಬಿನಲ್ಲಿ ಬಳಸಲ್ಪಡುವ ಪರಿಕರಗಳ ತುಳು ಪಾರಿಭಾಷಿಕ ಹೆಸರುಗಳಲ್ಲದೆ ತುಳುವರ ಪಾರಂಪರಿಕ ಆಭರಣಗಳ ಹೆಸರುಗಳನ್ನೂ ಉಲ್ಲೇಖಿಸುತ್ತಾರೆ.

ತುಳುನಾಡಿನಲ್ಲಿ ಜಾತಿ–ಕುಲ ಕಸುಬುಗಳು ಲೇಖನದಲ್ಲಿ ಸಾಯಿಗೀತಾ (೨೦೧೪) ಅವರು ವಿವಿಧ ಜನ ವರ್ಗದವರು ತಮ್ಮ ಕುಲ ಕಸುಬಿನಲ್ಲಿ ಉಪಯೋಗಿಸುತ್ತಿದ್ದ ಭೌತಿಕ ವಸ್ತುಗಳ ವಿವರಣೆಯನ್ನಲ್ಲದೆ, ಇಲ್ಲಿ ಸುಲಭದಲ್ಲಿ ಸಿಗುವ ವಸ್ತುಗಳನ್ನು ಜೀವನಾನುಕೂಲ ವಸ್ತುಗಳನ್ನಾಗಿ ಮಾಡಿಕೊಂಡು ಪ್ರಕೃತಿಯ ಪಕ್ಕೆಯಲ್ಲಿ ಬದುಕುತ್ತಿದ್ದವರು ತುಳುವರು ಎಂದು ವಿವರಿಸುತ್ತಾರೆ.

'ಕಣ್ಮರೆಯಾಗುತ್ತಿರುವ ಕೃಷಿ ಬದುಕು' ಲೇಖನದಲ್ಲಿ, ತುಕಾರಾಮ ಪೂಜಾರಿ (೨೦೧೪) ಕೃಷಿ ಕಾರ್ಯದಲ್ಲಿ ಉಪಯೋಗಿಸಲ್ಪಡುವ ಎಲ್ಲಾ ಭೌತಿಕ ವಸ್ತುಗಳ ಉಲ್ಲೇಖ ಮಾಡುತ್ತಾ, ಅವುಗಳ ಪಾರಿಭಾಷಿಕ ಶಬ್ದಗಳ ಪರಿಚಯ ಮತ್ತು ಉಪಯುಕ್ತತೆಯನ್ನು ಸಾಂಸ್ಕೃತಿಕ ಚೌಕಟ್ಟಿನಲ್ಲಿ ನೀಡುವ ಪ್ರಯತ್ನ ಮಾಡಿದ್ದಾರೆ.

ಬಿಲ್ಲವ ಸಾಂಸ್ಕೃತಿಕ ಸಂಪದ, ಎನ್ನುವ ಮಹಾಪ್ರಬಂಧದಲ್ಲಿ ದೇಜಪ್ಪ ದಲ್ಲೋಡಿಯವರು (೨೦೧೨), ನಿರ್ದಿಷ್ಟ ಜನಾಂಗವೊಂದರ ಜಾನಪದ ಸಾಮಾಗ್ರಿಗಳ ವಿಶ್ಲೇಷಣೆ ನಡೆಸಿದ್ದಾರೆ.

ಗೀತಾ ಕೆ. ಅವರು 'ಮಂಗಳೂರು ಪರಿಸರದ ಅಡುಗೆ ಜಾನಪದ' ಎಂಬ ಎಂ.ಫಿಲ್ ಪ್ರೌಢಪ್ರಬಂಧದಲ್ಲಿ (ಅಪ್ರಕಟಿತ, ೧೯೮೮) ಅಡುಗೆ ಜಾನಪದದ ವಿಷಯಗಳನ್ನು ವಿಶ್ಲೇಷಿಸುವಾಗ ಸಾಮಾನ್ಯ ಅಡುಗೆಮನೆಯೊಂದರ ವಿನ್ಯಾಸದ ಚಿತ್ರಣ ನೀಡುತ್ತಾರೆ. ಅಡುಗೆ ಮನೆ ಮತ್ತು ಕುಟುಂಬದ ಶ್ರೇಣೀಕೃತ ವ್ಯವಸ್ಥೆ, ಜೀವನ ಆವರ್ತನ ಮತ್ತು ವಾರ್ಷಿಕ ಆವರ್ತನದಲ್ಲಿ ಅಡುಗೆಮನೆಯಲ್ಲಿ ನಡೆಯುವ ಆಚರಣೆಗಳನ್ನು ಕುರಿತಾದ ವಿವರಗಳು ಈ ಕೃತಿಯಲ್ಲಿವೆ. 'ಅಡುಗೆ ಜಾನಪದ' ವಿಷಯದ ಒಂದು ಭಾಗವಾಗಿ ಅಡುಗೆ ಮನೆಯ ವಿನ್ಯಾಸ ಮತ್ತು ಅಲ್ಲಿ ನಡೆಯುವ ಆಚರಣೆಗಳನ್ನು ವಿವರಣಾತ್ಮಕವಾಗಿ ನೀಡಿದ್ದಾರೆ.

ಪ್ರಕಾಶಚಂದ್ರ ಬಿ. ಅವರ 'ತುಳುನಾಡಿನ ಜನಪದ ವಾಸ್ತುಶಿಲ್ಪ' (೨೦೦೮), ಅಪ್ರಕಟಿತ ಸಂಶೋಧನಾ ಮಹಾಪ್ರಬಂಧದಲ್ಲಿ, ಸಾಂದರ್ಭಿಕವಾಗಿ ಭೌತಿಕ ವಸ್ತುಗಳ ಉಲ್ಲೇಖ ಬರುತ್ತದೆ. ಮುಖ್ಯವಾಗಿ ಮನೆಯ ನಿರ್ಮಾಣ, ವಾಸ್ತುಶಿಲ್ಪದ ಕುರಿತಂತೆ ಅಧ್ಯಯನವನ್ನು ಈ ಪ್ರಬಂಧ ಕೇಂದ್ರೀಕರಿಸಿಕೊಂಡಿದೆ.

ಡಾ. ಬಿ.ಎ. ವಿವೇಕ ರೈಯವರ 'ಅನ್ವಯಿಕ ಜಾನಪದ' (೧೯೮೫)ರ ಗ್ರಂಥದಲ್ಲಿ ಭೌತಿಕ ವಸ್ತುಗಳನ್ನು ಇತಿಹಾಸಕ್ಕೆ ಆಕರಗಳಾಗಿ ಬಳಸುವ ಬಗ್ಗೆ ಇತಿಹಾಸ ಮತ್ತು ಜಾನಪದ ಎಂಬ ಲೇಖನವಿದೆ. ಪ್ರಸ್ತುತ ಲೇಖನದಲ್ಲಿ ಕಂಠಸ್ಥ ಪರಂಪರೆಯ ಆಕರಗಳನ್ನು ಇತಿಹಾಸಕ್ಕೆ ಹೇಗೆ ಬಳಸಬಹುದೆಂಬುದಕ್ಕೆ ಮಾರ್ಗಸೂಚಿಯಾಗಿದೆ.

ಡಾ. ಪುರುಷೋತ್ತಮ ಬಿಳಿಮಲೆ ಮತ್ತು ಚೆಲುವರಾಜು ಅವರ 'ಹಂಪಿ ಜಾನಪದ' (೧೯೯೬) ಗ್ರಂಥದಲ್ಲಿ ಭೌತಿಕ ಜಾನಪದ ಎಂಬ ಅಧ್ಯಯನಪೂರ್ಣವಾದ ಲೇಖನವಿದೆ. ಈಲ್ಲಿ ಅವರು ಹಂಪಿಯ ಬೃಹದಾಕಾರದ ಬಂಡೆಗಳು, ಪಾಳುಬಿದ್ದ ಗುಡಿಗಳು, ಶಿಥಿಲ ಕೋಟೆಗಳು, ಬತ್ತಿದ ಕೆರೆಗಳು ಮತ್ತಿತರ ವಿಷಯಗಳನ್ನು

ಚರ್ಚಿಸುತ್ತಾರೆ. ಮುಖ್ಯವಾಗಿ ಹಂಪಿ ಪರಿಸರದ ಬೋಜನ ಶಾಲೆ, ಪುಷ್ಕರಿಣಿ, ಹರಕೆ ಮಂಟಪ, ಹರಕೆ ತೊಟ್ಟಿಲು, ಶಿಲ್ಪ ಮತ್ತು ಕೆರೆಗಳು ಇವುಗಳ ಕುರಿತಹಾಗೆ ಜನರ ನಂಬಿಕೆ, ಐತಿಹ್ಯಗಳನ್ನು ಕೆದಕುವ ಪ್ರಯತ್ನ ಮಾಡುತ್ತಾರೆ.

'ಜಾನಪದ ವಸ್ತು ಸಂಗ್ರಹಾಲಯ ಮತ್ತು ಸಂಘ-ಸಂಸ್ಥೆಗಳು' ಎನ್ನುವ ಪ್ರಬಂಧದಲ್ಲಿ ಡಿ.ಲಿಂಗಯ್ಯ ಮತ್ತು ಡಾ.ಸಂಧ್ಯಾ ರೆಡ್ಡಿಯವರು ಬದಲಾವಣೆಯ ಸನ್ನಿವೇಶದಲ್ಲಿ ಜಾನಪದ ವಸ್ತು ಸಂಗ್ರಹಾಲಯಗಳ ಅಗತ್ಯ ಮತ್ತು ಸ್ವರೂಪದ ಕುರಿತಂತೆ ಬೆಳಕು ಚೆಲ್ಲುತ್ತಾ ವಸ್ತುಸಂಗ್ರಹಾಲಯಗಳು ಕಲಾದೇಗುಲಗಳಿದ್ದಂತೆ ಮತ್ತು ಪರಂಪರೆಯಕೊಂಡಿ ಎನ್ನುತ್ತಾರೆ. ಭಾರತದ ವೈವಿಧ್ಯಮಯವಾದ ಸಂಗ್ರಹಾಲಯಗಳ ಸ್ಥೂಲ ಪರಿಚಯವನ್ನೂ ನೀಡುವರು.

ತುಕಾರಾಮ ಪೂಜಾರಿಯವರ 'ದಕ್ಷಿಣ ಕನ್ನಡದ ವಸ್ತು ಸಂಗ್ರಹಾಲಯಗಳು' (೨೦೦೭) (ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಸಂಪಾದನೆ ಡಾ. ಆರ್ ಗೋಪಾಲ್) ಎಂಬ ಲೇಖನದಲ್ಲಿ ದಕ್ಷಿಣ ಕನ್ನಡದ ವಸ್ತು ಸಂಗ್ರಹಾಲಯದ ಚಾರಿತ್ರಿಕ ಪರಿಚಯವನ್ನು ಒದಗಿಸುತ್ತಾರೆ.

ಪು. ಶ್ರೀನಿವಾಸ ಭಟ್, ಕಟೀಲು ಅವರ ಪುಸ್ತಕ 'ಜನಪದ ಶತಪಥ' (೨೦೦೫), ತುಳುನಾಡಿನ ಗ್ರಾಮೀಣರಲ್ಲಿ ಪ್ರಚಲಿತದಲ್ಲಿದ್ದ ನಂಬಿಕೆಗಳು, ಆಚರಣೆಗಳು, ವ್ಯವಸಾಯ ಪದ್ಧತಿ, ಪರಿಕರಗಳು, ನಿತ್ಯೋಪಯೋಗಿ ವಸ್ತುಗಳು, ಮಳೆ-ನೀರು, ಮರಮಟ್ಟು, ಅಳತೆಯ ಮಾನ ಇತ್ಯಾದಿ ಬಹು ಉಪಯುಕ್ತ ವಿವರಣಾತ್ಮಕ ಮಾಹಿತಿಗಳಿವೆ.

ಡಾ.ಸುಂದರ ಕೇನಾಜೆಯವರ 'ಬತ್ತದ ಲೋಕ ತುಳುನಾಡಿನ ಬತ್ತದ ಬೇಸಾಯ ಜಾನಪದ ಅಧ್ಯಯನ' (೨೦೦೯), ಎಂಬ ಮಹಾಪ್ರಬಂಧದಲ್ಲಿ ಬೇಸಾಯ ಮತ್ತು ಭೌತಿಕ ಸಂಸ್ಕೃತಿಯನ್ನು ಕುರಿತಂತೆ ಒಂದು ಅಧ್ಯಾಯವಿದೆ. ಬೇಸಾಯಕ್ಕೆ ಸಂಬಂಧಪಟ್ಟ ಪರಿಕರಗಳ ವ್ಯವಸ್ಥಿತವಾದ ಮಾಹಿತಿ, ವಿಶ್ಲೇಷಣೆ ಇಲ್ಲಿದೆ.

'ವಸ್ತು ಸಂಗ್ರಹಾಲಯ ಶಾಸ್ತ್ರದ ಮೂಲ ತತ್ವಗಳು' (೧೯೮೪) (ಮೂಲ: ಎಮ್.ಎಲ್ ನಿಗಮ್, ಅನು: ಬಿ.ಎಸ್ ಸಣ್ಣಯ್ಯ) ಎಂಬ ಗ್ರಂಥದಲ್ಲಿ ವಸ್ತುಸಂಗ್ರಹಾಲಯದ ಸಮಗ್ರ ಪರಿಚಯವನ್ನು ನೀಡಲಾಗಿದೆ. ಶಾಸ್ತ್ರೀಯ ಅಧ್ಯಯನವನ್ನು ಇಲ್ಲಿ ಮಾಡಲಾಗಿದೆ

ವ.ನಂ ಶಿವರಾಮು ತಮ್ಮ 'ಜಾನಪದ ವಸ್ತು ಸಂಗ್ರಹಾಲಯಗಳು' ಪುಸ್ತಕದಲ್ಲಿ, ಜಾನಪದ ವಸ್ತು ಸಂಗ್ರಹಾಲಯಗಳನ್ನು ಪರಿಚಯಿಸುತ್ತಾ, ಜಾನಪದ ವಸ್ತುಗಳ ಭೌಗೋಳಿಕ, ಚಾರಿತ್ರಿಕ, ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಕ, ಕಲಾತ್ಮಕ ಹಾಗೂ ಜನಾಂಗೀಯ ಅಧ್ಯಯನಗಳ ಜೊತೆಗೆ ಭಾಷಿಕ ಅಧ್ಯಯನವೂ ನಡೆಯಬೇಕೆನ್ನುತ್ತಾರೆ.

'ಆಯನ-ಸಾಂಸ್ಕೃತಿಕ ಉತ್ಸವ' ತುಳುನಾಡಿನ ಪರಿಚಯಾತ್ಮಕ ಲೇಖನಗಳ ಸಂಗ್ರಹ-ಎಂಬ ಪುಸ್ತಕದಲ್ಲಿ 'ತುಳು ಸಂಸ್ಕೃತಿಯನ್ನು ಮೊಗೆದು ಕೊಡುವ 'ತುಳು ಬದ್ಕ್ ವಸ್ತುಸಂಗ್ರಹಾಲಯ' ಎಂಬ ಲೇಖನವಿದೆ (ಕೇಶವ ಕುಡ್ಲ, ೨೦೧೦). ಈ ಲೇಖನದಲ್ಲಿ ಪ್ರಾಸಂಗಿಕವಾಗಿ ತುಳುಬದುಕು ವಸ್ತುಸಂಗ್ರಹಾಲಯದ ಪ್ರಾದೇಶಿಕ ನೆಲೆಯನ್ನು ಸಮರ್ಥಿಸಿದ್ದಾರೆ.

‘ತುಳುನಾಡಿನ ಆಚರಣೆಗಳು ವಾರ್ಷಿಕ ಆವರ್ತನದ ಸಾಂಸ್ಕೃತಿಕ ಅಧ್ಯಯನ’ (೨೦೧೩) ಮಹಾಪ್ರಬಂಧದಲ್ಲಿ, ಡಾ. ದಿವಾ ಕೊಕ್ಕಡ, ಕೃಷಿಯನ್ನೆ ಪ್ರಧಾನವಾಗಿರಿಸಿಕೊಂಡು ಹುಟ್ಟಿಕೊಂಡಿರುವ ಎಲ್ಲಾ ಹಬ್ಬಹರಿದಿನಗಳನ್ನು ತಾತ್ವಿಕ ವಿವೇಚನೆಗೆ ಒಳಪಡಿಸಿ ನಿರೂಪಿಸುವ ಪ್ರಯತ್ನ ಮಾಡಿದ್ದಾರೆ.

‘ಕಣ್ಮರೆಯಾಗುತ್ತಿರುವ ತುಳು ಬದುಕು’ (೧೯೯೬) ಕೃತಿಯಲ್ಲಿ ತುಳು ಬದುಕಿನಲ್ಲಿ ಆಗುತ್ತಿರುವ ಬದಲಾವಣೆಗಳನ್ನು ವಿವಿಧ ಆಯಾಮದಲ್ಲಿ ನೋಡಲಾಗಿದೆ.

‘ತುಳುವ ಸಂಸ್ಕಾರಗಳು ಮತ್ತು ವೃತ್ತಿಗಳು’ ಕೃತಿಯಲ್ಲಿ ಲಕ್ಷ್ಮಿ ಎ (೨೦೧೦) ತುಳುವರ ಜೀವನಾವರ್ತನ ಸಂಸ್ಕಾರಗಳನ್ನು ಪಾಡ್ದನಗಳ ಆಧಾರದಲ್ಲಿ ನಿರೂಪಿಸಿ ವಿವಿಧ ವೃತ್ತಿಗಳ ವಿವರಣೆಯನ್ನೂ ನೀಡುವರು.

ಈ ವರೆಗೆ ನಡೆದಿರುವ ಅಧ್ಯಯನದ ಸಮೀಕ್ಷೆಯಿಂದ ತಿಳಿದು ಬರುವ ವಿಚಾರವೆಂದರೆ ಕರಾವಳಿ ಕರ್ನಾಟಕದ ಭೌತಿಕ ವಸ್ತು ಪರಿಕರಗಳ ಸಮಗ್ರ ಅಧ್ಯಯನ ನಡೆದಿಲ್ಲ. ಬಿಡಿಬಿಡಿಯಾಗಿ ಭೌತಿಕ ವಸ್ತುಗಳ ಉಲ್ಲೇಖ ಕೆಲವೆಡೆ ಕಾಣಿಸಿಕೊಂಡಿವೆಯಾದರೂ ಒಂದು ಸಾಂಸ್ಕೃತಿಕ ನೆಲೆಯಲ್ಲಿ ಸಮಗ್ರವಾಗಿ ದಾಖಲೆಯಾಗಿಲ್ಲ. ಅದರಲ್ಲಿಯೂ ಭೌತಿಕ ವಸ್ತುಗಳು ಸಾಮಾಜಿಕ ಇತಿಹಾಸದ ನಿರೂಪಣೆಯ ಆಕರವಾಗಿ ಬಳಕೆಯಾಗಿರುವುದು ತೀರಾ ವಿರಳ. ಮಾನವಶಾಸ್ತ್ರಜ್ಞರು, ಪ್ರಾಕ್ತನಶಾಸ್ತ್ರಜ್ಞರು ಉತ್ಖನನ ನಡೆದಲ್ಲಿ ದೊರೆತ ವಸ್ತುಗಳನ್ನು ಚರಿತ್ರೆಯ ಪರಿಕರಗಳಾಗಿ ನೋಡಿದ್ದಾರೆ. ಆದರೆ ಅವೇ ಮಾದರಿಯ ಶತಮಾನಗಳ ಹಿನ್ನೆಲೆಯುಳ್ಳ ದೈನಂದಿನ ಬಳಕೆಯ ವಸ್ತುಗಳನ್ನು ಒಂದು ನಿರ್ದಿಷ್ಟ ಪ್ರದೇಶದ ಸಾಂಸ್ಕೃತಿಕ ಚರಿತ್ರೆಯ ರಚನೆಯ ಆಕರವಾಗಿ ಬಳಸಿರುವುದು ಕಂಡು ಬರುವುದಿಲ್ಲ. ಹಾಗಾಗಿ ಇಲ್ಲಿ ಕಾಣಿಸಿಕೊಳ್ಳುವ ಈ ಕೊರತೆಯನ್ನು ಪ್ರಸ್ತುತ ನಿಬಂಧವು ನೀಗಿಸುತ್ತದೆ.

ಕೊನೆ ಟಿಪ್ಪಣಿ

[೧] ರೈ ವಿವೇಕ ಬಿ.ಎ, *ಅನ್ವಯಿಕ ಜಾನಪದ*, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೮೫, ಪುಟ: ೮೯.

[೨] ಬಿಳಿಮಲೆ ಪುರುಷೋತ್ತಮ, *ಕರಾವಳಿ ಜಾನಪದ* , ಮಂಗಳಗಂಗೋತ್ರಿ, ದ.ಕ, ೧೯೯೦, ಪುಟ:೩

[೩] ಶೆಟ್ಟಿ ಶಿವರಾಮ ಬಿ, *ಮೌಖಿಕ ಚರಿತ್ರೆ: ಜನಪದರ ಚರಿತ್ರೆಯ ಆಯಾಮಗಳು, ಚರಿತ್ರೆ ಬರವಣಿಗೆ ಕ್ರಮಗಳು ಮತ್ತು ಸಂಶೋಧನಾ ವಿಧಾನ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦, ಪು: ೨೯೯.

[೪] ರೈ ಮೋಹನ್ ಕೃಷ್ಣ ಕೆ, *ತುಳುನಾಡು ಕನ್ನಡ ನುಡಿ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨, ಪು: ೨೬.

[೫] ಕ್ಲಾಸ್ ಪೀಟರ್ ಜೆ, *ಫ್ಯೂಚರ್ ರಿಸರ್ಚ್ ಇನ್ ತುಳು*, ವಿಶ್ವ ತುಳು ಸಮ್ಮೇಳನೊ, ೨೦೦೯.

[೬] ಸ್ಕಿಲ್ಬೆಕರ್ ಜೊನ್ ಟಿ '*ದಿ ಯುಸ್ ಆಫ್ ಒಬ್‌ಜೆಕ್ಟ್ಸ್ ಇನ್ ಹಿಸ್ಟೊರಿಕಲ್ ರಿಸರ್ಚ್ ಇನ್ ಮೆಟೆರಿಯಲ್ ಕಲ್ಚರ್ ಸ್ಟಡಿಸ್ ಇನ್ ಅಮೇರಿಕಾ*', ಥೊಮಸ್ ಜೆ ಸ್ಕಿಲರ್ತ್, ಅಮೇರಿಕನ್ ಅಸೋಸಿಯೇಶನ್ ಫಾರ್ ಸ್ಟೆಟ್ ಮತ್ತು ಲೊಕಲ್ ಹಿಸ್ಟ್ರಿ ಬುಕ್ ಸಿರೀಸ್, ೧೯೮೧, ಪುಟ: ೧೦೬.

[೭] ರೈ ವಿವೇಕ ಬಿ.ಎ., *ಅನ್ವಯಿಕ ಜಾನಪದ*, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೫, ಪು: ೧೦೪–೧೦೫.

[೮] ಹೆಗ್ಗಡೆ ಶೀನಪ್ಪ ಪೊಳಲಿ ಎನ್. ಎ., *ಕಿಲ್ಲೆ ಕೃತಿ ಸಂಚಯ*, ದೇಶಭಕ್ತ ಎನ್. ಎಸ್ ಕಿಲ್ಲೆ ಶತಮಾನೋತ್ಸವ ಸಮಿತಿ, ಪುತ್ತೂರು, ೨೦೦೦, ಪುಟ: ೧೭೩.

[೯] ಜವರೇಗೌಡ ದೇ, *ಜಾನಪದ ಅಧ್ಯಯನ*, ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೧, ಪುಟ: ೯.

[೧೦] ನಂದಾವರ ವಾಮನ, *ಕೋಟಿ ಚೆನ್ನಯ ಜಾನಪದೀಯ ಅಧ್ಯಯನ*, ಹೇಮಾಂಶು ಪ್ರಕಾಶನ, ೨೦೦೧, ಪುಟ: ೧೧೬.

[೧೧] ಸಾಲೆತ್ತೂರು ಬಿ.ಎ, *ಏನ್ಶೆಂಟ್ ಹಿಸ್ಟರಿ*, ಓರಿಯಂಟಲ್ ಬುಕ್ ಏಜನ್ಸಿ, ಪುಣೆ, ೧೯೩೬, ಪುಟ: ೪೫೯.

[೧೨] ಭಟ್ ಗಣಪಯ್ಯ ಪುಂಡಿಕ್ಕೈ, *ತೌಳವ*, ಸಿಂಧೂರ ಪ್ರಕಾಶನ ಮೂಡಬಿದ್ರೆ, ೧೯೯೭, ಪುಟ: ೧೧.

[೧೩] ಭಟ್ ಶ್ರೀನಿವಾಸ ಪು., *ತುಳುವೆರೆ ಆಡಳಿತೆದ ಮಜಲ್ ಮರ್ಗಿಲುಲು*, ಸಂ: ವಾಮನ ನಂದಾವರ, ಕೊಡಿಪು, ವಿಶ್ವತುಳುಸಮ್ಮೇಳನೊ, ೨೦೦೯, ಪುಟ ೧.

[೧೪] ಭಟ್ ವಾದಿರಾಜ, ಕನರಾಡಿ, *ಪಾಡ್ದನಗಳು–ಅಧ್ಯಯನಾತ್ಮಕ ಸಂಗ್ರಹ*, ಯುಗಪುರುಷ ಪ್ರಕಟನಾಲಯ, ಕಿನ್ನಿಗೋಳಿ, ೧೯೭೪.

[೧೫] ರೈ ಮೋಹನ್ ಕೃಷ್ಣ ಕೆ., *ತುಳುನಾಡು ಕನ್ನಡ ನುಡಿ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨, ಪು ೩೯.

[೧೬] ರೈ ಮೋಹನ್ ಕೃಷ್ಣ ಕೆ., *ತುಳುನಾಡು ಕನ್ನಡ ನುಡಿ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨, ಪು:೫೩–೫೪.

[೧೭] ಪ್ರೌನ್ ಜೂಲ್ಸ್, *ಪ್ರೈಂಡ್ ಇನ್ ಮೆಟರ್, ಮೆಟೀರಿಯಲ್ ಕಲ್ಚರ್ ಥಿಯರಿ ಮತ್ತು ಮೆತಡ್'*, ವಿಂಟರ್ಥರ್ ಪೋರ್ಟ್‌ಪೋಲಿಯೊ, ೧೯೮೨.

[೧೮] ಬ್ರೊನರ್ ಸೈಮನ್ ಜೆ, ಅಮೇರಿಕನ್ ಮೆಟಿರಿಯಲ್ ಕಲ್ಚರ್ ಮತ್ತು ಪೋಕ್ ಲೈಫ್, ಯು ಎಮ್ ಐ ರಿಸರ್ಚ್ ಪ್ರೆಸ್, ಲಂಡನ್, ೧೯೮೫.

[೧೯] ಸ್ಕೆಲ್‌ಬೆಕರ್ ಜೊನ್ ಟಿ., *ದಿ ಯುಸ್ ಆಫ್ ಒಬ್‌ಜೆಕ್ಟ್ಸ್ ಇನ್ ಹಿಸ್ಟೊರಿಕಲ್ ರಿಸರ್ಚ್, ಮೆಟಿರಿಯಲ್ ಕಲ್ಚರ್ ಸ್ಟಡೀಸ್ ಇನ್ ಅಮೇರಿಕಾ*, ಅಮೇರಿಕನ್ ಅಸೋಸಿಯೆಶನ್ ಫಾರ್ ಸ್ಟೇಟ್ ಮತ್ತು ಲೊಕಲ್ ಹಿಸ್ಟರಿ, ೧೯೮೧.

[೨೦] ಫ್ಲೆಮಿಂಗ್ ಇ. ಮೆಕ್ ಲಂಗ್, *ಮೆಟಿರಿಯಲ್ ಕಲ್ಚರ್ ಸ್ಟಡೀಸ್ ಇನ್ ಅಮೇರಿಕಾ*, ಅಮೇರಿಕನ್ ಅಸೋಸಿಯೆಶನ್ ಫಾರ್ ಸ್ಟೇಟ್ ಮತ್ತು ಲೊಕಲ್ ಹಿಸ್ಟರಿ, ೧೯೮೧.

[೨೧] ಜೊನ್ ಟಿ. ಸ್ಕೆಲ್‌ಬೆಕರ್, '*ದಿ ಯುಸ್ ಆಫ್ ಒಬ್‌ಜೆಕ್ಟ್ಸ್ ಇನ್ ಹಿಸ್ಟೊರಿಕಲ್ ರಿಸರ್ಚ್, ಮೆಟಿರಿಯಲ್ ಕಲ್ಚರ್ ಸ್ಟಡೀಸ್ ಇನ್ ಅಮೇರಿಕಾ*', ಅಮೇರಿಕನ್ ಅಸೋಸಿಯೆಶನ್ ಫಾರ್ ಸ್ಟೇಟ್ ಮತ್ತು ಲೊಕಲ್ ಹಿಸ್ಟರಿ, ೧೯೮೧ ಪುಟ:೧೦೬.

[೨೨] ಥಾಮಸ್ ಜೆ. ಸ್ಕಿಲರ್‌ತ್(ಸಂ), '*ಮೆಟಿರಿಯಲ್ ಕಲ್ಚರ್ ಸ್ಟಡೀಸ್ ಇನ್ ಅಮೇರಿಕಾ ಅಮೇರಿಕನ್ ಅಸೋಸಿಯೆಶನ್ ಫಾರ್‌ಸ್ಟೇಟ್ ಮತ್ತು ಲೊಕಲ್ ಹಿಸ್ಟರಿ*', ೧೯೮೧, ಪುಟ: ೨.

[23] ಹೆಗಡೆ ರಾಜಾರಾಮ (ಅಪ್ರಕಟಿತ ಲೇಖನ), ೨೦೧೬

[೨೪] ಜೂಲ್ಸ್ ಪ್ರಾನ್, '*ದಿ ಟ್ರುತ್ ಆಫ್ ಮೆಟೀರಿಯಲ್ ಕಲ್ಚರ್*', ಸ್ಮಿತ್‌ಸೊನಿಯನ್ ಇನ್‌ಸ್ಟಿಟ್ಯೂಶನ್ ಪ್ರೆಸ್ ವಾಷಿಂಗ್‌ಟನ್, ೧೯೮೨.

[೨೫] ರಿಚರ್ಡ್ ಎಮ್ ಡೊರ್ಸನ್, *ಪೊಕ್ಲೋರ್ ಮತ್ತು ಪೋಕ್‌ಲೈಫ್: ಎನ್ ಇಂಟ್ರೊಡಕ್ಷನ್*, ಯುನಿವರ್ಸಿಟಿ ಆಫ್ ಚಿಕಾಗೊ, ೧೯೭೨.

[೨೬]ಜವಹರಲಾಲ್ ಹಂಡೂ, *ಪೋಕ್ ಲೊರ್ ಆನ್ ಇನ್ಟ್ರೊಡಕ್ಷನ್*, ಸೆಂಟ್ರಲ್ ಇನ್‌ಸ್ಟಿಟ್ಯುಟ್ ಇಂಡಿಯನ್ ಲ್ಯಾಂಗ್ವೇಜಸ್, ಮೈಸೂರು, ೧೯೮೯.

[೨೭]ಚಿನ್ನಪ್ಪಗೌಡ ಕೆ, *ಭೌತಿಕ ಸಂಸ್ಕೃತಿ: ಸಂರಕ್ಷಣೆ ಮತ್ತು ಸಂಶೋಧನೆ*, ಜಾನಪದ ಬೆಳ್ಳಿ ದೀಪಾರಾಧನೆ (ಸಂ)ಎಸ್. ಡಿ ಶೆಟ್ಟಿ, ಜಾನಪದ ಪ್ರಕಾಶನ, ಹೊನ್ನಾವರ, ೨೦೦೮.

[೨೮] ಪುರುಷೋತ್ತಮ ಬಿಳಿಮಲೆ, *ಕರ್ನಾಟಕ ಜಾನಪದ: ಲೋಕದೃಷ್ಟಿಯ ಪರಿಶೀಲನೆ*, ಕೂಡುಕಟ್ಟು, ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ, ೧೯೯೭ ಪುಟ: ೧೧೫.

[೨೯] ಸಾಲೆತ್ತೂರು ಬಿ.ಎ, *ದಿ ಹಿಸ್ಟರಿ ಆಫ್ ತುಳುವಾಸ್*, ಓರಿಯೆಂಟಲ್ ಬುಕ್ ಏಜನ್ಸಿ, ಪೂನಾ, ೧೯೩೬.

[೩೦] ಪರಮಶಿವಯ್ಯ ಜೆ.ಎಸ್., *ಜನಪದ: ಕೆಲವು ಮುಖಗಳು*, ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರ ನಿಯಮಿತ, ಬೆಂಗಳೂರು, ೧೯೭೫.

[೩೦] ರಘುನಾಥ ಭಟ್ ಆರ್, *ಪುರಾತತ್ವ ಪರಿಚಯ*, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು,೧೯೮೪, ಪುಟ:೩೩–೩೪.

ಅಧ್ಯಾಯ ಎರಡು

ವಸ್ತು ಸಂಗ್ರಹಾಲಯ ಪರಿಕಲ್ಪನೆ

೨.೧ ವಸ್ತು ಸಂಗ್ರಹಾಲಯ–ಅರ್ಥ–ವ್ಯಾಖ್ಯೆ–ವಿಂಗಡಣೆ

ವಸ್ತುಸಂಗ್ರಹಾಲಯದ ಕಲ್ಪನೆ ಪುರಾತನವಾದುದಾದರೂ ಇದರ ಬೆಳವಣಿಗೆ ತೀರಾ ಇತ್ತೀಚಿನದು. ವಸ್ತುಸಂಗ್ರಹಾಲಯ ಎಂಬ ಪದಕ್ಕೆ ಇಂಗ್ಲಿಷ್ ಭಾಷೆಯಲ್ಲಿ ಮ್ಯೂಸಿಯಂ ಎಂಬ ಪರ್ಯಾಯ ಪದವಿದೆ. ಮ್ಯೂಸಿಯಂ ಎಂದರೆ ಗ್ರೀಕ್ ಭಾಷೆಯಲ್ಲಿ ಕಲಾಭಿಮಾನಿ ದೇವತೆಗಳ ಗರ್ಭಗೃಹ. ಒಂದು ಕಾಲದಲ್ಲಿ–ಅನುಪಯುಕ್ತ ವಸ್ತುಗಳ ಸಂಗ್ರಹ– ಎಂದು ಗುರುತಿಸಲಾಗುತ್ತಿದ್ದ ವಸ್ತುಸಂಗ್ರಹಾಲಯಗಳು ಇಂದು ವಿಶೇಷಾರ್ಥದಲ್ಲಿ ಗಮನ ಸೆಳೆಯುತ್ತಿವೆ. ನಿರ್ದಿಷ್ಟ ಪ್ರದೇಶದ ಸಮುದಾಯದ ಕಲೆ ಮತ್ತು ಸಂಸ್ಕೃತಿಗಳನ್ನು ಉಳಿಸಿಕೊಂಡು ಬರುವಲ್ಲಿ ಮಾತ್ರವಲ್ಲದೆ, ಮಾನವನ ಸೃಜನಶೀಲತೆ ಮತ್ತು ಪ್ರಕೃತಿಯ ಮೇಲಣ ನಿಯಂತ್ರಣದ ಬಗ್ಗೆ ಮೂಲಭೂತ ಸಾಕ್ಷ್ಯಗಳನ್ನು ಸಾದರಪಡಿಸುವುದರ ಮೂಲಕ ಸಾಮಾಜಿಕ, ಸಾಂಸ್ಕೃತಿಕ ಉತ್ಥಾನಕ್ಕೆ ನೆರವಾಗುವುದಲ್ಲದೆ, ಶೈಕ್ಷಣಿಕ ಗುಣ ಪ್ರಾಧಾನ್ಯತೆಯನ್ನು ಹೊಂದಿದೆ.

ವಸ್ತುಸಂಗ್ರಹಾಲಯ ಎಂದರೆ ಅಪೂರ್ವವಾದ ಪದಾರ್ಥಗಳನ್ನು ಪ್ರದರ್ಶನಕ್ಕಾಗಿ ಸಂಗ್ರಹಿಸಿಡುವ ಸ್ಥಳ ಎಂದು ಹೇಳಲಾಗಿದೆ. ಆದರೆ ಇದೊಂದು ತಾತ್ಕಾಲಿಕವಾದ ಪ್ರದರ್ಶನ ಕೇಂದ್ರವಲ್ಲ, ಶಾಶ್ವತವಾದ ಸ್ಥಳ. ವಸ್ತು ಸಂಗ್ರಹಾಲಯಗಳು ಕೇವಲ ಕಲಾವಸ್ತುಗಳ ಸಂಗ್ರಹಾಲಯಗಳಷ್ಟೇ ಅಲ್ಲ, ಅವು ಜ್ಞಾನದ ಎಲ್ಲಾ ಕ್ಷೇತ್ರಗಳನ್ನೂ ಪ್ರತಿನಿಧಿಸುವಂತಹ ಅಪೂರ್ವ ವಸ್ತುಗಳನ್ನು ಒಳಗೊಂಡಿರುವಂಥವು.[೧]

ವಸ್ತು ಸಂಗ್ರಹಾಲಯದ ವಸ್ತುಗಳನ್ನು ನಿರ್ಜೀವ ವಸ್ತುವಿನಂತೆ ಕಾಣದೆ, ಅವುಗಳು ಸಜೀವ ಸಂಸ್ಕೃತಿಯ ಭಾಗವೆಂದು ಪರಿಭಾವಿಸುವುದು ಸೂಕ್ತ. ಆದಿಮಾನವ ಸ್ಥಿತಿಯ ಕಾಲದಿಂದಲೂ ಮನುಷ್ಯ ತನ್ನ ಅಗತ್ಯಕ್ಕೆ ಬೇಕಾದ ವಸ್ತುಗಳನ್ನು ಸೃಷ್ಟಿಸಿಕೊಳ್ಳುತ್ತಾ ಬಂದಿದ್ದಾನೆ. ಅಡುಗೆಯ ಪಾತ್ರೆ ಪರಿಕರಗಳು, ಬೇಟೆ ಮೀನುಗಾರಿಕೆಯ ಸಾಧನ ಸಲಕರಣೆಗಳು, ಕೃಷಿ ಉಪಕರಣಗಳು, ಉಡುಗೆ–ತೊಡುಗೆ, ಒಡವೆಗಳು, ಆಯುಧಗಳು, ಮಕ್ಕಳ ಆಟಿಕೆಯ ವಸ್ತುಗಳು, ನೇಯ್ಗೆ, ಕುಂಬಾರಿಕೆ, ಕಮ್ಮಾರಿಕೆ, ಮೊದಲಾದ ವೃತ್ತಿ ಸಲಕರಣೆಗಳು, ಪೂಜಾ ವಸ್ತುಗಳು, ಇತರ ಸಲಕರಣೆಗಳು ಇತ್ಯಾದಿಯಾಗಿ ಮನುಷ್ಯ ಸೃಷ್ಟಿಸಿದ ವಸ್ತುಗಳು ಪರಂಪರೆಯ ಮುದ್ರೆ ಪಡೆದಿರುತ್ತವೆ. ಕಾಲಕ್ಕೆ ತಕ್ಕಂತೆ ಇವುಗಳ ತಯಾರಿಕೆಗೆ ಬಳಸುವ ಸಾಮಗ್ರಿ ಹಾಗೂ ರೂಪ ವಿನ್ಯಾಸಗಳಲ್ಲಿ ಮಾರ್ಪಾಟುಗಳಾಗಬಹುದು. ಎಷ್ಟೋ ವಸ್ತುಗಳು ಉಪಯೋಗವಿಲ್ಲದವೂ ಆಗಬಹುದು. ಇಂಥ ಎಲ್ಲಾ ವಸ್ತುಗಳನ್ನು ಸಂಗ್ರಹಿಸಿ, ದಾಖಲಿಸಿ, ಶಾಸ್ತ್ರೀಯವಾಗಿ ಇಡುವುದೇ ಜಾನಪದ ವಸ್ತು ಸಂಗ್ರಹಾಲಯಗಳ ಉದ್ದೇಶ. ಒಂದು ಪ್ರದೇಶದ ಒಂದು ಕಾಲದ ಮಾನವನ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಕಲಾತ್ಮಕ ಬದುಕನ್ನು ಪ್ರತಿಬಿಂಬಿಸುವಂತಹ ಅವನ ಸಮಸ್ತ ವಸ್ತುಗಳನ್ನು ಒಂದೆಡೆ ಸೇರಿಸಿದರೆ ಅದು ಜಾನಪದ ವಸ್ತು ಸಂಗ್ರಹಾಲಯವೆನಿಸಿಕೊಳ್ಳುತ್ತದೆ.[೨]

ಪರಂಪರಾಗತ ಸಂಸ್ಕೃತಿಯ ವಿವಿಧ ಸ್ತರಗಳನ್ನು ಗುರುತಿಸಲು, ನಮ್ಮ ಪೂರ್ವಜರ ಜೀವನ ಕಲೆ, ಕುಶಲ ಕಲೆ ಮುಂತಾದವುಗಳನ್ನು ತಿಳಿಯಲು ಇಂತಹ ವಸ್ತುಗಳು ಮಾತ್ರವೇ ಅಧಿಕೃತ ಮಾಹಿತಿ ಒದಗಿಸಬಲ್ಲವು. ವಸ್ತುಗಳ ಸಂಗ್ರಹ ಹಂತದಲ್ಲೇ ಅವುಗಳಿಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸಬೇಕಾಗುತ್ತದೆ. ವಸ್ತುವಿನ ಕಾಲ, ಸಂಗ್ರಹಿಸಿದ ದಿನಾಂಕ, ಅದರ ಬಳಕೆ, ಮೂಲವಸ್ತು ಇತ್ಯಾದಿ ವಿವರಗಳೊಂದಿಗೆ ಅದರ ಸಾಂಸ್ಕೃತಿಕ ಹಿನ್ನಲೆ, ಬಳಕೆಯ ಸಾಮಾಜಿಕ ಸಂದರ್ಭ, ವಸ್ತುವಿನ ಬಗೆಗಿರುವ ನಂಬಿಕೆ, ಸಂಪ್ರದಾಯ, ಸಾಹಿತ್ಯಕ ವಿಚಾರಗಳು, ಚಾರಿತ್ರಿಕ ದಾಖಲೆಗಳು, ವಸ್ತುವಿನ ಪ್ರತಿಯೊಂದು ಭಾಗಗಳ ಹೆಸರು, ಆ ಹೆಸರುಗಳ ಹಿನ್ನಲೆ, ವಸ್ತುವಿನ ಪ್ರತಿಯೊಂದು ತಯಾರಿಕೆಗೆ ಬೇಕಾದ ಮೂಲ ಸಾಮಗ್ರಿಯನ್ನು ಪಡೆಯುವ ವಿಧಾನ, ಆ ಸಂದರ್ಭದ ಸಂಪ್ರದಾಯ, ಆಚರಣೆಗಳು, ವಸ್ತುವಿನ ತಯಾರಿಕೆಯ ವಿಧಾನ, ತಯಾರಿಸುವ ಮತ್ತು ಬಳಸುವ ಪ್ರದೇಶ ಹಾಗೂ ಜನಾಂಗ ಹೀಗೆ ಎಲ್ಲ ಬಗೆಯ ವಿವರಗಳನ್ನು ಪಡೆಯಬೇಕಾಗುತ್ತದೆ.

ವಸ್ತು ಸಂಗ್ರಹಾಲಯದ ವಸ್ತುಗಳು ಆಯಾ ಪ್ರದೇಶದ, ಕಾಲದ, ಜನಾಂಗದ ಸಾಂಸ್ಕೃತಿಕ ಇತಿಹಾಸದ ಪುನರ್ ರಚನೆಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಜನಾಂಗದ ಸಂಸ್ಕೃತಿಯನ್ನು ಗುರುತಿಸುವವರಿಗೆ, ನಾಗರಿಕತೆಯ ಮಜಲುಗಳನ್ನು ತಿಳಿಯುವವರಿಗೆ, ವಸ್ತುಗಳು ಮಾರ್ಪಡಿಕೆಗೊಳಪಟ್ಟು ಸುಧಾರಣೆಗೊಂಡಾಗ ಅದರ ಹಿಂದಿನ ರಚನೆ, ವಿನ್ಯಾಸ ಇತ್ಯಾದಿ ಅಗತ್ಯವಾಗಿ ನೆರವಾಗುತ್ತದೆ. ಹಿಂದಣ ಹೆಜ್ಜೆಯನ್ನರಿಯದೆ, ಮುಂದಣ ಹೆಜ್ಜೆಯನ್ನಿಡಲಾಗದು.

ಪಾಶ್ಚಾತ್ಯ ಮತ್ತು ಪೌರಾತ್ಯ ದೇಶಗಳು ತಮ್ಮ ಚರಿತ್ರೆ, ಸಂಸ್ಕೃತಿ ಹಾಗೂ ತಮ್ಮ ನಡುವೆ ಇದ್ದ ಚಿಂತಕರ ಬಗೆಗಿನ ಗೌರವ, ಅಭಿಮಾನಗಳಿಂದಾಗಿ ಅವುಗಳ ಕುರಿತಾದ ಮ್ಯೂಸಿಯಂಗಳನ್ನು ರೂಪಿಸಿಕೊಳ್ಳುತ್ತಿವೆ. ನೆದರ್‌ಲ್ಯಾಂಡ್, ಕ್ಯೂಬಾ, ಚೀನಾ ರಷ್ಯಾದಂತಹ ಬಹಳಷ್ಟು ದೇಶಗಳು ಶ್ರೀಮಂತ ಹಾಗೂ ತೃತೀಯ ಜಗತ್ತು ಎಂಬ ವ್ಯತ್ಯಾಸವಿಲ್ಲದೆ ತಮ್ಮ ದೇಶ, ಜನಾಂಗಗಳ ಇತಿಹಾಸ, ಕಾವ್ಯ ಮತ್ತು ಸಂಸ್ಕೃತಿಗಳನ್ನು ಇಂದಿನ ತಮ್ಮ ಜನಪದದ ನೆಲೆ ಅರಿವುಗಳ ತಳಹದಿಯಲ್ಲಿ ಮರುರೂಪಿಸುವಲ್ಲಿ ಜರೂರಾಗಿ ತೊಡಗಿಸಿಕೊಂಡಿವೆ. ಅದರ ಭಾಗವಾಗಿ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸುತ್ತಿವೆ. ಇಂತಹ ವಸ್ತುಸಂಗ್ರಹಾಲಯಗಳು ಅವರಿಗೆ ಕೇವಲ ವಸ್ತುಪ್ರದರ್ಶನಾಲಯಗಳಾಗಿಲ್ಲ. ಅವು ಅವರ ಬದುಕಿನ ಅನುಭವದ ಭಾಗವಾಗಿ, ವರ್ತಮಾನದ ಭಾಗವಾಗಿ ಅಸ್ಮಿತೆ ಪಡೆದುಕೊಳ್ಳುತ್ತಿವೆ.[೩] ಕೈಗಾರಿಕಾ ಕ್ರಾಂತಿಯ ಫಲವಾಗಿ ಸಾಂಸ್ಕೃತಿಕ ಪರಂಪರೆಗಳು ಬಹಳ ಬೇಗ ಈ ದೇಶಗಳಲ್ಲಿ ಕಣ್ಮರೆಯಾಗುವಂತಹ ಸ್ಥಿತಿ ಕಂಡುಬಂದವು. ಅಷ್ಟೇ ವೇಗದಲ್ಲಿ ಇವುಗಳನ್ನು ಕಾಪಿಡಬೇಕೆನ್ನುವ ಪ್ರಜ್ಞೆಯೂ ಅವರಲ್ಲಿ ಜಾಗೃತಗೂಂಡ ಕಾರಣ ವಸ್ತುಸಂಗ್ರಹಾಲಯಗಳು ಇಲ್ಲಿ ಸ್ಥಾಪನೆಗೊಂಡವು.

ಭಾರತದ ಮಟ್ಟಿಗೆ ಹೇಳುವುದಾದರೆ, ಸಾಂಸ್ಕೃತಿಕ ಪರಂಪರೆಯ ಕುರಿತಾಗಿ ಜನಸಾಮಾನ್ಯರಿಂದ ಜನಮಾನ್ಯರವರೆಗಿನ ಅಸಡ್ಡೆ, ಅಜ್ಞಾನ, ಅಂಧಶ್ರದ್ದೆಗಳು ವಸ್ತುಸಂಗ್ರಹಾಲಯಗಳ ಬೆಳವಣಿಗೆಯನ್ನು ಕುಂಠಿತಗೊಳಿಸಿದೆ.

ವಸ್ತುಸಂಗ್ರಹಾಲಯಗಳನ್ನು ಎರಡು ರೀತಿಯಲ್ಲಿ ವರ್ಗೀಕರಿಸಬಹುದು: ಅ) ಆಡಳಿತ ದೃಷ್ಟಿಯಿಂದ, ಆ) ಸಂಗ್ರಹಿತವಾದ ಮುಖ್ಯ ವಸ್ತುಗಳ ಸ್ವರೂಪದ ದೃಷ್ಟಿಯಿಂದ.

ಅ) ಆಡಳಿತ ದೃಷ್ಟಿಯ ವರ್ಗೀಕರಣ

- ರಾಷ್ಟ್ರೀಯ ವಸ್ತುಸಂಗ್ರಹಾಲಯ
- ಪ್ರಾಂತೀಯ ಪ್ರಾದೇಶಿಕ ವಸ್ತುಸಂಗ್ರಹಾಲಯ
- ಸ್ಥಳೀಯ ವಸ್ತುಸಂಗ್ರಹಾಲಯ
- ವಿಶ್ವವಿದ್ಯಾಲಯ ವಸ್ತುಸಂಗ್ರಹಾಲಯ
- ಧರ್ಮದರ್ಶಿ ಮಂಡಳಿಗಳ ಆಡಳಿತಕ್ಕೊಳಪಟ್ಟ ಖಾಸಗಿ ವಸ್ತುಸಂಗ್ರಹಾಲಯ
- ಸಾಂಘಿಕ ವಸ್ತುಸಂಗ್ರಹಾಲಯ
- ಸಂಸ್ಥಾ ವಸ್ತುಸಂಗ್ರಹಾಲಯ
- ವಾಣಿಜ್ಯ ಸಂಸ್ಥೆಗಳ ವಸ್ತುಸಂಗ್ರಹಾಲಯ

ಆ) ಸಂಗ್ರಹಿತವಾದ ಮುಖ್ಯ ವಸ್ತುಗಳ ಸ್ವರೂಪದ ದೃಷ್ಟಿಯಿಂದ ವರ್ಗೀಕರಣ

- ಕೃಷಿ ಸಂಗ್ರಹಾಲಯ
- ಮಾನವ ವಸ್ತುಸಂಗ್ರಹಾಲಯ
- ಪುರಾತತ್ವ ವಸ್ತುಸಂಗ್ರಹಾಲಯ
- ಪ್ರಾಕೃತಿಕ ಇತಿಹಾಸ ವಸ್ತುಸಂಗ್ರಹಾಲಯ
- ಜಾನಪದ ವಸ್ತುಸಂಗ್ರಹಾಲಯ
- ಅರಣ್ಯ ವಸ್ತುಸಂಗ್ರಹಾಲಯ
- ಶೈಕ್ಷಣಿಕ ವಸ್ತುಸಂಗ್ರಹಾಲಯ
- ಗೊಂಬೆ ಸಂಗ್ರಹಾಲಯ
- ಮಕ್ಕಳ ಆಟಿಕೆ ವಸ್ತುಸಂಗ್ರಹಾಲಯ
- ಸಸ್ಯಶಾಸ್ತ್ರ ಸಂಗ್ರಹಾಲಯ
- ಸೈನಿಕ ಸಂಗ್ರಹಾಲಯ
- ಶಸ್ತ್ರಾಸ್ತ್ರ ಸಂಗ್ರಹಾಲಯ

- ವಾಯುಪಡೆ ವಸ್ತುಸಂಗ್ರಹಾಲಯ
- ಭೂಗರ್ಭ ವಸ್ತುಸಂಗ್ರಹಾಲಯ
- ಮೆಡಿಕಲ್ ಸಂಗ್ರಹಾಲಯ
- ರೈಲು ಸಂಗ್ರಹಾಲಯ
- ಅಂಚೆ ಸಂಗ್ರಹಾಲಯ
- ವಿಜ್ಞಾನಸಂಗ್ರಹಾಲಯ
- ಆದಿವಾಸಿ ಸಂಗ್ರಹಾಲಯ
- ಪೊಲೀಸ್ ಸಂಗ್ರಹಾಲಯ
- ಜೀವಶಾಸ್ತ್ರ ಸಂಗ್ರಹಾಲಯ

ವಸ್ತುಸಂಗ್ರಹಾಲಯಗಳನ್ನು ಒಳಾಂಗಣ ಮತ್ತು ಹೊರಾಂಗಣ ವಸ್ತುಸಂಗ್ರಹಾಲಯಗಳೆಂದೂ ವಿಭಜಿಸಬಹುದು. ಒಳಾಂಗಣ ವಸ್ತುಸಂಗ್ರಹಾಲಯಗಳಲ್ಲಿ ದಿನನಿತ್ಯದ ಮನೆಬಳಕೆಯ ವಸ್ತುಗಳು, ಅಲಂಕಾರಿಕ ಸಾಧನಸಾಮಗ್ರಿಗಳು, ವೇಷಭೂಷಣಗಳು, ದಿನಬಳಕೆಯ ಸಾಮಾಗ್ರಿಗಳು, ಅಳತೆಯ ಸಾಧನಗಳು, ವಾದ್ಯವಿಶೇಷಗಳು, ಕಸೂತಿ ವಸ್ತುಗಳು ಹಾಗೂ ಆಯಾ ವಿಭಾಗಕ್ಕೆ ಸಂಬಂಧಿಸಿದ ಬಿಸಿಲು, ಮಳೆ, ಗಾಳಿ ಮತ್ತು ನೈಸರ್ಗಿಕ ರಕ್ಷಣೆಯನ್ನು ಪಡೆಯಬೇಕಾದಂತಹ ವಸ್ತುಗಳನ್ನು ಸೂಕ್ತ ರೀತಿಯಲ್ಲಿ ಪ್ರದರ್ಶಿಸಲಾಗುತ್ತದೆ.

ಹೊರಾಂಗಣ ವಸ್ತುಸಂಗ್ರಹಾಲಯಗಳಲ್ಲಿ ವಿಸ್ತಾರವಾದ ಬಯಲು ಪ್ರದೇಶದಲ್ಲಿ ಸ್ವಾಭಾವಿಕ ಪರಿಸರದಲ್ಲಿ ವಸ್ತುಗಳನ್ನು ಜೋಡಿಸಿಡಲಾಗುತ್ತದೆ. ಉದಾಹರಣೆಗೆ, ಒಂದು ನಿರ್ದಿಷ್ಟ ಕಾಲಾವಧಿಯಲ್ಲಿದ್ದ ಊರು–ಕೇರಿಗಳ ವಿನ್ಯಾಸ, ಮನೆಯ ಮಾದರಿಗಳು, ಹೆಬ್ಬಾಗಿಲು, ದೇವಾಲಯ, ಬಾವಿ, ಅರಳಿಕಟ್ಟೆ ಮೊದಲಾದ ಸಾರ್ವಜನಿಕ ಬದುಕಿನ ರೀತಿ, ಜನಜೀವನದ ವಿಧಾನಗಳೆಲ್ಲಾ ತಿಳಿಯುವಂತಿರಬೇಕು. ವಿದೇಶಿ ಜಾನಪದ ಸಂಗ್ರಹಾಲಯಗಳಲ್ಲಿ ಇಂತಹ ಹೊರಾಂಗಣ ಸಂಗ್ರಹಾಲಯಗಳನ್ನು ತುಂಬಾ ವ್ಯವಸ್ಥಿತವಾಗಿ ರೂಪಿಸಲಾಗಿದೆ. ಎಷ್ಟೋ ಕಡೆ ಹಳೆಯ ಮಾದರಿಗಳನ್ನು ಯಥಾವತ್ತಾಗಿ ತಂದು ಸ್ಥಾಪಿಸಲಾಗಿದೆ.

ಯಾವುದೇ ವರ್ಗೀಕರಣಕ್ಕೊಳಪಟ್ಟ ಸಂಗ್ರಹಾಲಯವಾದರೂ, ಪರಂಪರಾನುಗತ ಸಂಸ್ಕೃತಿಯ ವಿವಿಧ ವಸ್ತುಗಳ ಹುಟ್ಟು, ಬೆಳವಣಿಗೆಯನ್ನು ತಿಳಿಯಲು ಸಾಧ್ಯವಾಗುತ್ತದೆ. ವಸ್ತು ಸಂಗ್ರಹಾಲಯದಲ್ಲಿಯ ಅತ್ಯಂತ ಕನಿಷ್ಠ ಎಂದು ಭಾವಿಸಬಹುದಾದ ವಸ್ತುವೂ ಕೂಡ ಸಾಂಸ್ಕೃತಿಕ ಇತಿಹಾಸದ ದೃಷ್ಟಿಯಿಂದ ಅತ್ಯಂತ ಮುಖ್ಯವೆನಿಸುತ್ತದೆ.

ಮ್ಯೂಜಿಯಂನ ಸ್ಥಾಪನೆ ಕ್ರಿ.ಪೂ. ಮೂರನೇ ಶತಮಾನದಲ್ಲೇ ನಡೆದಿತ್ತು. ಈಜಿಪ್ಟ್ ದೇಶದ ಪ್ರಾಂತ್ಯವಾದ ಅಲೆಕ್ಸಾಂಡ್ರಿಯಾದಲ್ಲಿ ಅಂದಿನ ಸುಪ್ರಸಿದ್ಧ ಗಣಿತ, ಖಗೋಳ ಹಾಗೂ ಭೂಗರ್ಭ ಶಾಸ್ತ್ರಜ್ಞನಾದ ಟಾಲೆಮಿ ಮೊದಲಿಗೆ

ಇದನ್ನು ಸ್ಥಾಪಿಸಿದನೆಂದು ತಿಳಿಯಲಾಗಿದೆ. ಹಿಂದೆ ಸಂಗ್ರಹಾಲಯಗಳು ಸಾಮಾನ್ಯವಾಗಿ ಪಂಡಿತರಿಗೆ ಅಥವಾ ಕಲಾಭಿಮಾನಿಗಳಿಗೆ ಮಾತ್ರ ಸೀಮಿತವಾಗಿದ್ದವು. ಆದರೆ ಹದಿನೆಂಟನೇ ಶತಮಾನದಲ್ಲಿ ಉಂಟಾದ ಸಾಂಸ್ಕೃತಿಕ ಅರಿವು, ಜ್ಞಾನ ಪಿಪಾಸೆಗಳು ವಸ್ತುಸಂಗ್ರಹಾಲಯಗಳ ಬಗ್ಗೆ ಇದ್ದ ಮೂಲಭೂತ ದೃಷ್ಟಿ ಬದಲಾಗಲು ಕಾರಣವಾದವು. ಸಾಮಾನ್ಯವಾಗಿ ರಾಜಮಹಾರಾಜರು, ಶ್ರೀಮಂತರು ತಮ್ಮ ಬಿಡುವಿನ ವೇಳೆಯನ್ನು ಕಳೆಯಲು ಅಲಂಕಾರಿಕ ವಸ್ತುಗಳನ್ನು ಪ್ರದರ್ಶಿಸುತ್ತಿದ್ದರು. ಅಲ್ಲಿ ಶ್ರೀಸಾಮಾನ್ಯರಿಗೆ ಅವಕಾಶವಿರಲಿಲ್ಲ.

ಆಧುನಿಕ ವಸ್ತುಸಂಗ್ರಹಾಲಯಗಳ ಬೆಳವಣಿಗೆಯ ಇತಿಹಾಸವನ್ನು ೨೦೦ ವರ್ಷಗಳಷ್ಟು ಹಿಂದಿನಿಂದಷ್ಟೆ ಗುರುತಿಸಬಹುದಾಗಿದೆ. ಸುಮಾರಾಗಿ ೧೮ನೆಯ ಶತಮಾನದ ಮಧ್ಯಭಾಗಕ್ಕೂ ಹತ್ತೊಂಬತ್ತನೆಯ ಶತಮಾನದ ಆದಿಗೂ ಮಧ್ಯೆ ಜನತಾ ವಸ್ತುಸಂಗ್ರಹಾಲಯದ ಹೊಸ ಕಲ್ಪನೆ ಐರೋಪ್ಯ ಸಮಾಜದಿಂದ ರೂಪಿತವಾಯಿತು.[೪] ಸಾಧ್ಯವಾದ ಎಲ್ಲಾ ಸಾಧನ ಜನತೆಗೆ ದೃಶ್ಯ ಶಿಕ್ಷಣವನ್ನು ಒದಗಿಸುವ ಮಾಧ್ಯಮವಾಗಿ ಮೂಡಿ ಬರಲು ಕಾರಣವಾಯಿತು. ಖಾಸಗಿ ಸಂಗ್ರಹಕಾರರ ಮನೋಭಾವದಲ್ಲಿ ಮಾರ್ಪಾಡಾಗಿ ತಮ್ಮ ವಸ್ತು ಸಂಗ್ರಹಗಳನ್ನು ಸಾಮಾನ್ಯ ಪ್ರಜೆಗೆ ತೆರೆದಿಡಲು ಪ್ರಾರಂಭಿಸಿದರು. ಯಾವ ಗೊತ್ತುಗುರಿಯಿಲ್ಲದೆ ಕೇವಲ ಆತ್ಮತೃಪ್ತಿಗಾಗಿ ಸಿಕ್ಕಿದ ಎಲ್ಲಾ ವಸ್ತುಗಳನ್ನು ಒಂದೆಡೆ ಕಲೆ ಹಾಕುತ್ತಿದ್ದ ಕಾಲ ಕೊನೆಗೊಂಡು ಕ್ರಮಬದ್ಧ ಜೋಡಣೆ, ಅರ್ಥವತ್ತಾದ ಪ್ರದರ್ಶನ ಅತ್ಯಂತ ಮುಖ್ಯವೆಂದು ಪರಿಗಣಿಸಲಾಯಿತು.

ಮೊದಲ ಮಹಾಯುದ್ಧದಿಂದೀಚೆಗೆ ಯುರೋಪ್ ಮತ್ತು ಅಮೇರಿಕಾ ದೇಶಗಳಲ್ಲಿ ಆಧುನಿಕ ವಸ್ತುಸಂಗ್ರಹಾಲಯಗಳ ಚರಿತ್ರೆಯ ಹೊಸಯುಗ ಆರಂಭವಾಯಿತು. ಸಂಗ್ರಹಾಲಯಗಳ ವಾಸ್ತುವಿನ್ಯಾಸ ಮತ್ತು ಪ್ರದರ್ಶನ ಮತ್ತು ಪ್ರಸ್ತುತಿ ಹೆಚ್ಚಿನ ಮಹತ್ವ ಪಡೆಯಿತು. ವಸ್ತುಸಂಗ್ರಹಾಲಯಗಳು ಸಾಂಸ್ಕೃತಿಕ ಪುನರ್‌ರಚನೆಯಲ್ಲಿ ಮಹತ್ವದ ಪಾತ್ರ ವಹಿಸಬೇಕಾದರೆ ಹೊಸ ಆಯಾಮದಲ್ಲಿ ತೆರೆದಿಡಬೇಕಾದ ಅವಶ್ಯಕತೆಯನ್ನು ಮನಗಂಡಿತು. ಸಾಮಾನ್ಯ ಜನರಿಗೆ ವಸ್ತುಸಂಗ್ರಹಾಲಯಗಳನ್ನು ತೆರೆದಿಡುವ ನಿಟ್ಟಿನಲ್ಲಿ ಪ್ರಯತ್ನಗಳು ಸಾಗಿದವು.

ಸ್ಕಾಂಡಿನಿವಿಯನ್ ದೇಶಗಳಾದ ನೆದರ್‌ಲ್ಯಾಂಡ್, ಸ್ಪೆಯಿನ್, ಸ್ವಿಟ್ಜರ್‌ಲ್ಯಾಂಡ್ ಮುಂತಾದ ದೇಶಗಳು ಹೊಸ ವಸ್ತುಸಂಗ್ರಹಾಲಯಗಳನ್ನು ಸ್ಥಾಪಿಸಿದವು ಮಾತ್ರವಲ್ಲದೆ, ಹಳೆಯದನ್ನು ಪುನರುಜ್ಜೀವನಗೊಳಿಸಿದವು. ಹೊರಾಂಗಣ ಅಥವಾ ಜಾನಪದ ವಸ್ತುಸಂಗ್ರಹಾಲಯಗಳು ನೈಸರ್ಗಿಕ ವಾತವರಣದಲ್ಲಿ ಪ್ರಪ್ರಥಮವೆಂಬಂತೆ ಹುಟ್ಟಿಕೊಂಡಿತು. ಇದು ಇತರ ರಾಷ್ಟ್ರಗಳಿಗೂ ಮಾದರಿಯೆನಿಸಿಕೊಂಡಿತು. ಸ್ವೀಡಿಶ್ ಜನರ ಬದುಕನ್ನು ಬಿಂಬಿಸುವ ಪ್ರಥಮ ಜಾನಪದ ವಸ್ತು ಸಂಗ್ರಹಾಲಯ ೧೮೭೩ ರಲ್ಲಿ ಸ್ಟೋಕ್‌ಹೊಮ್‌ನಲ್ಲಿ ಅಸ್ತಿತ್ವಕ್ಕೆ ಬಂತು. ಅರ್ಥರ್ ವಿಜೇಲಿಯಸ್ ರಿಂದ ಸ್ಥಾಪಿಸಲ್ಪಟ್ಟ ಈ ವಸ್ತುಸಂಗ್ರಹಾಲಯ ಜಾನಪದ ವಸ್ತುಸಂಗ್ರಹಾಲಯಗಳಲ್ಲೊಂದು ಮೈಲಿಗಲ್ಲು. ಸ್ವೀಡನ್ನಿನಲ್ಲಿ ಏಳುನೂರಕ್ಕೂ ಅಧಿಕ ಬಯಲು ವಸ್ತು ಸಂಗ್ರಹಾಲಯಗಳಿವೆ.

ಆನಂತರ ಡೆನ್ಮಾರ್ಕ್, ಹಾಲೆಂಡ್ ಜರ್ಮನಿ, ಅಮೇರಿಕಾ ರಷ್ಯಾ ಮೊದಲಾದ ದೇಶಗಳೂ ಈ ಕಾರ್ಯದಲ್ಲಿ ತೊಡಗಿದವು. ವಸ್ತುಸಂಗ್ರಹಾಲಯಗಳು ಶೈಕ್ಷಣಿಕವಾಗಿಯೂ ಪರಿಣಾಮಕಾರಿ ಎಂದರಿತ ಅಮೇರಿಕ

ಮತ್ತು ಬ್ರಿಟನ್, ವಸ್ತು ಸಂಗ್ರಹಾಲಯಗಳಿಗೆ ಹೊಸ ಆಯಾಮವನ್ನು ಒದಗಿಸಿತು. ಎರಡನೆಯ ಮಹಾಯುದ್ಧದ ನಂತರ ಮತ್ತಷ್ಟು ಪ್ರಚೋದನೆ ಸಿಕ್ಕಿತು. ಡಾ. ಮೋರ್ಲೆಯ ಪ್ರಕಾರ ವಸ್ತುಸಂಗ್ರಹಾಲಯದ ಚಟುವಟಿಕೆಗಳ ಪುನಶ್ಚೇತನ ಹೊಸತನವನ್ನು ತಂದುಕೊಟ್ಟಿತು; ಅವುಗಳ ಉದ್ದೇಶಗಳು ಮತ್ತು ಸಾಧ್ಯಾಸಾಧ್ಯತೆಗಳ ಬಗ್ಗೆ ಮರುವಿಮರ್ಶೆ ನಡೆಯಿತು ಮತ್ತು ಹೊಸ ವಿಧಾನಗಳಿಂದ ಹಾಗೂ ಇತರರ ಅನುಭವದಿಂದ ಪ್ರಯೋಜನ ಪಡೆಯುವ ತೀವ್ರ ಆಕಾಂಕ್ಷೆ ಬೆಳೆಯಿತು.

ಪ್ರದರ್ಶನ ವ್ಯವಸ್ಥೆ ಹೆಚ್ಚು ಮಹತ್ವ ಪಡೆಯಿತಲ್ಲದೆ, ೨೦ನೇಯ ಶತಮಾನದ ಆದಿಯಲ್ಲಿ ಎಲ್ಲಾ ದೇಶಗಳು, ಶಾಸ್ತ್ರೀಯ ವಾಸ್ತು ವಿನ್ಯಾಸಕ್ಕೆ ಒತ್ತು ನೀಡಿದವು. ೧೯೩೦ ಮತ್ತು ೧೯೪೦ ಯ ನಂತರ ಸಂಗ್ರಹಾಲಯದ ಸ್ವರೂಪ ಹಾಗೂ ಉದ್ದೇಶಕ್ಕೆ ಸರಿಹೊಂದುವ ಆಧುನಿಕ ಕಟ್ಟಡಗಳು ನಿರ್ಮಾಣಗೊಂಡವು. ಇದೇ ರೀತಿ ವಸ್ತುಗಳ ಪ್ರದರ್ಶನದಲ್ಲಿಯೂ ಹೊಸ ರಚನೆಗಳನ್ನು, ಕಲಾತಂತ್ರಗಳನ್ನು ಎಲ್ಲೆಡೆಯಲ್ಲೂ ಪ್ರಯೋಗಿಸಿ ನೋಡಲಾಯಿತು. ಮುಂದುವರಿದ ರಾಷ್ಟ್ರಗಳಲ್ಲಿ ಶೈಕ್ಷಣಿಕ ಮಹತ್ವ ಪಡೆದು ಹೆಚ್ಚು ವ್ಯಾಪಕಗೊಂಡಿತೆನ್ನಬಹುದು.

The institution of a museum was initially a colonial imposition. Its establishment lay in colonial views of knowledge about India with a recognizable ideological purpose of giving an identity to the Indian past. The intention of the museum was to display objects in a classified manner. The general classification was fairly simplistic. It began with separating natural objects from those that were made by human effort.[5]

ಭಾರತದಲ್ಲಿ ೧೮೭೬ರಲ್ಲಿ ಮೊದಲ ಬಾರಿಗೆ ಬಂಗಾಳದ ಏಷಿಯಾಟಿಕ್ ಸೊಸೈಟಿ ತನ್ನ ವಸ್ತುಸಂಗ್ರಹಾಲಯವನ್ನು ಜನರ ವೀಕ್ಷಣೆಗೆ ತೆರೆಯಲು ಮುಂದಾಯಿತು. ಅಲ್ಲಿಂದ ಪ್ರಾರಂಭವಾದ ವಸ್ತುಸಂಗ್ರಹಾಲಯದ ಅಭಿವೃದ್ಧಿ ಇಂದು ದೇಶದಾದ್ಯಂತ ವಿವಿಧ ಕ್ಷೇತ್ರಗಳಲ್ಲಿ ಆಕರ್ಷಿಸುತ್ತಾ ಜ್ಞಾನಾಭಿವೃದ್ಧಿಗೆ ಅವಕಾಶ ಮಾಡಿಕೊಡುತ್ತಿದೆ. ಭಾರತದ ವಸ್ತುಸಂಗ್ರಹಾಲಯದ ಹುಟ್ಟು ಮತ್ತು ಬೆಳವಣಿಗೆಗಳಲ್ಲಿ ಗಮನಿಸಬೇಕಾದ ನಾಲ್ಕು ಅಂಶಗಳಿವೆ:

ಭಾರತ ಸರಕಾರದಲ್ಲಿ ಅಧಿಕಾರಿಗಳಾಗಿ ಕೆಲಸ ಮಾಡುತ್ತಿದ್ದ ತಮ್ಮ ದೇಶದಲ್ಲಿನ ವಸ್ತುಸಂಗ್ರಹಾಲಯದ ಉಪಯೋಗವನ್ನು ತಿಳಿದಿದ್ದ ಬ್ರಿಟಿಷರು ಈ ದೆಸೆಯಲ್ಲಿ ಮುನ್ನಡೆದುದು ಈ ನಿಟ್ಟಿನಲ್ಲಿ ಮೊದಲನೆಯ ಹಾಗೂ ಮುಖ್ಯವಾದ ಹೆಜ್ಜೆ. ಎರಡನೆಯದಾಗಿ, ರಾಜಮಹಾರಾಜರುಗಳು ತಮ್ಮ ತಮ್ಮ ರಾಜ್ಯಗಳಲ್ಲಿ ಕಲೆ ಮತ್ತು ಸಂಸ್ಕೃತಿಯ ಪ್ರತೀಕವಾಗಿದ್ದ ವಸ್ತುಗಳ ಸಂಗ್ರಹದಲ್ಲಿ ತೋರಿದ ಆಸಕ್ತಿ. ಹಲವಾರು ತತ್ವನಿಷ್ಠ ಸಂಘ–ಸಂಸ್ಥೆಗಳು ತಾವು ಸಂಗ್ರಹಿಸಿದ್ದ ವಸ್ತುಗಳ ಸಹಕಾರದಿಂದ ದೊಡ್ಡ ದೊಡ್ಡ ವಸ್ತುಸಂಗ್ರಹಾಲಯಗಳ ಸ್ಥಾಪನೆಗೆ ಮುಂದಾದುದು. ಕೊನೆಯದಾದರೂ ಮುಖ್ಯವಾದುದೆಂದರೆ – ಭಾರತ ಪ್ರಾಚ್ಯವಸ್ತು ಸರ್ವೇಕ್ಷಣೆ ಇಲಾಖೆಯ ಹುಟ್ಟು ಹಾಗೂ ಅದರ ಅಧಿಕಾರಿಗಳು ಭೂಶೋಧನೆಯ ಸ್ಥಳಗಳಲ್ಲಿಯೆ ವಸ್ತುಸಂಗ್ರಹಾಲಯಗಳನ್ನು ತೆರೆದುದು, ದೊರೆತ ವಸ್ತುಗಳನ್ನು

ಇತರ ವಸ್ತುಸಂಗ್ರಹಾಲಯಗಳಿಗೆ ಕಳುಹಿಸಿದುದು ಹಾಗೂ ಆ ವಸ್ತುಗಳ ಬಗ್ಗೆ ಪಂಡಿತರಿಗೆ ವಿಶದ ಪಡಿಸುವ ಮೂಲಕ ಈ ಚಳುವಳಿಯನ್ನು ಗಣನೀಯವಾಗಿ ಬಲಪಡಿಸಿದುದು.[೬]

ಮದ್ರಾಸು ಸಾಹಿತ್ಯ ಸಂಘದಲ್ಲಿ ೧೮೫೧ರಲ್ಲಿ ವಸ್ತುಸಂಗ್ರಹಾಲಯದ ಸ್ಥಾಪನೆಯಾಯಿತು. ಏಷಿಯಾಟಿಕ ಸೊಸೈಟಿ ಮತ್ತು ಮದ್ರಾಸು ಸಾಹಿತ್ಯಸಂಘದಿಂದ ಸ್ಫೂರ್ತಿಗೊಂಡು ಹಲವಾರು ಸಂಘಸಂಸ್ಥೆಗಳು ವಸ್ತುಸಂಗ್ರಹಾಲಯಗಳನ್ನು ಸ್ಥಾಪಿಸಿದವು. ಕರಾಚಿಯ ವಿಕ್ಟೋರಿಯ ಮ್ಯೂಸಿಯಂ (೧೮೫೧), ತಿರುವನಂತಪುರದ ಮ್ಯೂಸಿಯಂ (೧೮೫೭) ಸ್ಥಾಪನೆಯಾದಾಗ ಭಾರತದಲ್ಲಿ ೧೨ ವಸ್ತುಸಂಗ್ರಹಾಲಯಗಳಾದವು. ಲಕ್ನೊ ಮತ್ತು ನಾಗಪುರದಲ್ಲಿ ೧೮೬೩ರಲ್ಲಿ ೨ ವಸ್ತುಸಂಗ್ರಹಾಲಯಗಳು ಸ್ಥಾಪಿತವಾದವು. ಲಾಹೋರ್ (೧೮೬೪), ಬೆಂಗಳೂರು (೧೮೬೪). ಫೈಜಾಬಾದ್ (೧೮೬೭), ದೆಹಲಿ (೧೮೬೮), ಕಲ್ಕತ್ತಾ (೧೮೭೨), ಮಥುರೆ (೧೮೭೪) ಹಾಗೂ ರಾಯಪುರ (೧೮೭೫) – ಈ ಎಲ್ಲಾ ಕಡೆಗಳಲ್ಲಿ ವಸ್ತುಸಂಗ್ರಹಾಲಯಗಳು ಆರಂಭವಾದವು.

ಬ್ರಿಟಿಷ್ ಸರಕಾರವು ೧೮೭೮ರಲ್ಲಿ ಇಂಡಿಯನ್ ಟ್ರೆಷರ್ ಟ್ರಾವ್ ಕಾಯ್ದೆಯನ್ನು ಜಾರಿಗೆ ತಂದಿತು. ೧೮೮೭ರಲ್ಲಿ ತಿರಚೂರು, ಉದಯಪುರ, ಭೋಪಾಲ್, ಮತ್ತು ಜಯಪುರಗಳಲ್ಲಿ, ೧೮೮೮ರಲ್ಲಿ ರಾಜಕೋಟೆಯಲ್ಲಿ, ಬರೋಡ ಮತ್ತು ವಿಜಯವಾಡಗಳಲ್ಲಿ ೧೮೯೪ರಲ್ಲಿ, ಭಾವನಗರ ಮತ್ತು ತಿರುಚಿನಪಳ್ಳಿಯಲ್ಲಿ ೧೮೯೫ರಲ್ಲಿ ವಸ್ತುಸಂಗ್ರಹಾಲಯಗಳು ಸ್ಥಾಪಿತವಾದವು. ಪುರಾತತ್ವ ಇಲಾಖೆಯ ವತಿಯಿಂದ ೧೯೦೯ರಲ್ಲಿ ಚಂಬ ಮತ್ತು ಜೋಧ್‌ಪುರಗಳಲ್ಲಿ, ೧೯೧೦ರಲ್ಲಿ ಖುಜುರಾಹೊ ಮತ್ತು ಗ್ವಾಲಿಯರ್‌ನಲ್ಲಿ ವಸ್ತು ಸಂಗ್ರಹಾಲಯ ಸ್ಥಾಪನೆಯಾಯಿತು. ೧೯೨೧ರಲ್ಲಿ ಪ್ರಿನ್ಸ್ ಆಫ್ ವೇಲ್ಸ್ (ಈಗಿನ ಛತ್ರಪತಿ ಶಿವಾಜಿ ವಸ್ತುಸಂಗ್ರಹಾಲಯ) ಮ್ಯೂಸಿಯಂ ಮುಂಬಯಿಯಲ್ಲಿ ತೆರೆಯಲಾಯಿತು.

ಭಾರತದ ಎಲ್ಲಾ ವಸ್ತು ಸಂಗ್ರಹಾಲಯಗಳು ೧೯೪೬ ರಲ್ಲಿ ಭಾರತ ಪುರಾತತ್ವ ಇಲಾಖೆಯ ಅಧೀನಕ್ಕೆ ಒಳಪಟ್ಟವು. ೧೯೪೭ರಲ್ಲಿ ದೇಶ ವಿಭಜನೆಗೊಂಡಾಗ ಇಂಡಸ್ ಮತ್ತು ಪೇಶಾವರ ಭಾಗದ ಸಮೃದ್ಧಯುತವಾದ ಪುರಾತತ್ವ ನಿವೇಶನಗಳು ಹಾಗೂ ಹಲವಾರು ವಸ್ತುಸಂಗ್ರಹಾಲಯಗಳು ಪಾಕಿಸ್ತಾನಕ್ಕೆ ಸೇರಿಕೊಂಡವು. ಭಾರತದಲ್ಲಿ ೧೮೫೭ರಲ್ಲಿ ೧೨ ವಸ್ತುಸಂಗ್ರಹಾಲಯಗಳಿದ್ದುದು, ಇಂದು ಸುಮಾರು ವಿವಿಧ ನಮೂನೆಯ ೮೦೦ಕ್ಕೂ ಮೇಲ್ಪಟ್ಟು ವಸ್ತುಸಂಗ್ರಹಾಲಯಗಳಿವೆ.

ಅವುಗಳಲ್ಲಿ ಮುಖ್ಯವಾದುವನ್ನು ಇಲ್ಲಿ ಹೆಸರಿಸಲಾಗಿದೆ:

ರಜಪುತಾನ ಸಂಗ್ರಹಾಲಯ, ಅಜ್ಮೀರ್
ಅಂಬೆರ್ ಮ್ಯೂಸಿಯಂ
ಸ್ಟೇಟ್ ಮ್ಯೂಸಿಯಂ, ಭುವನೇಶ್ವರ್
ಪುರಾತತ್ವ ಮ್ಯೂಸಿಯಂ, ಬೊದ್ ಗಯಾ
ಅಶುತೋಷ್ ಮ್ಯೂಸಿಯಂ ಆಫ್ ಇಂಡಿಯನ್ ಆರ್ಟ್

ಅಲಹಾಬಾದ್ ಮ್ಯೂಸಿಯಂ, ಅಲಹಾಬಾದ್
ಬರೊಡಾ ಮ್ಯೂಸಿಯಂ
ಗಂಗಾ ಗೊಲ್ಡನ್ ಜುಬಿಲಿ ಮ್ಯೂಸಿಯಮ್, ಬಿಕನೆರ್
ಛತ್ರಪತಿ ಮಹಾರಾಜ ವಸ್ತು ಸಂಗ್ರಹಾಲಯ, ಮುಂಬಯಿ
ಇಂಡಿಯನ್ ಮ್ಯೂಸಿಯಂ, ಕಲ್ಕತ್ತ

ಭೂರಿ ಸಿಂಗ್ ಮ್ಯೂಸಿಯಂ , ಚಂಬಾ
ಸ್ಟೇಟ್ ಮ್ಯೂಸಿಯಂ, ಗೌಹಾತಿ
ಸೆಂಟ್ರಲ್ ಮ್ಯೂಸಿಯಂ, ಜೈಪುರ್
ಪುರಾತತ್ವ ಮ್ಯೂಸಿಯಂ, ಖಜುರಾಹೊ
ಕೋಟ ಮ್ಯೂಸಿಯಂ
ಪೋರ್ಟ್ ಸೈನ್ಟ್ ಜಾರ್ಜ್ ಮ್ಯೂಸಿಯಂ, ಚೆನ್ನೈ
ಪುರಾತತ್ವ ಮ್ಯೂಸಿಯಂ, ಮೈಸೂರು
ರಾಷ್ಟ್ರೀಯ ಮ್ಯೂಸಿಯಂ, ನವ ದೆಹಲಿ
ಪ್ರಭಾಸ್ ಪಟನ್ ಮ್ಯೂಸಿಯಂ
ವಾಟ್ಸನ್ ಮ್ಯೂಸಿಯಂ, ರಾಜಕೋಟ್
ಪುರಾತತ್ವ ಮ್ಯೂಸಿಯಂ, ಸಾರನಾಥ
ಭಾರತ ಕಲಾ ಭವನ್, ವಾರಣಾಸಿ

ಚಂದ್ರಾಧರಿ ಮ್ಯೂಸಿಯಂ ದರ್ಭಂಗ
ಪುರಾತತ್ವ ಮ್ಯೂಸಿಯಂ, ಹಂಪಿ
ಸರ್ದಾರ್ ಮ್ಯೂಸಿಯಂ ಜೋಧಪುರ
ಪುರಾತತ್ವ ಮ್ಯೂಸಿಯಂ, ಕೊಂಡಪುರ
ಸ್ಟೇಟ್ ಮ್ಯೂಸಿಯಂ, ಲಕ್ನೊ
ಸರಕಾರಿ ಮ್ಯೂಸಿಯಮ್, ಚೆನ್ನೈ
ಪುರಾತತ್ವ ಮ್ಯೂಸಿಯಂ, ನಲಂದಾ
ಮ್ಯೂಸಿಯಂ ಆಫ್ ಆಂಟಿಕ್ಯುಟಿಸ್, ಪದ್ಮನಾಭಪುರಂ
ವಾಟ್ಸನ್ ಮ್ಯೂಸಿಯಂ, ರಾಜಕೋಟ್
ಟಿಪ್ಪು ಸುಲ್ತಾನ್ ಮ್ಯೂಸಿಯಮ್, ಶ್ರೀರಂಗಪಟ್ಣ
ಉದಯಪುರ್ ಮ್ಯೂಸಿಯಮ್
ಸಾಲಾರ್ ಜಂಗ್ ಮ್ಯೂಸಿಯಂ, ಹೈದ್ರಾಬಾದ್

ಭಾರತದಲ್ಲಿ ಸುಮಾರು ೩೯ ವಿವಿಧ ಪ್ರಕಾರಗಳ ವಸ್ತುಸಂಗ್ರಹಾಲಯಗಳಿವೆ. ಪುರಾತತ್ವಕ್ಕೆ ಸಂಬಂಧಿಸಿದಂತೆ ೧೬೪ ಮ್ಯೂಸಿಯಂಗಳಿವೆ. ಆರ್ಟ್ ಮತ್ತು ಕ್ರಾಫ್ಟ್‌ಗೆ ಸಂಬಂಧಿಸಿದ ೧೦೦ ಸಂಗ್ರಹಾಲಯಗಳಿವೆ. ದೆಹಲಿಯ ರಾಷ್ಟ್ರೀಯ ವಸ್ತು ಸಂಗ್ರಹಾಲಯವು ೧೯೬೦ರಲ್ಲಿ ಸ್ಥಾಪಿತವಾಯಿತು.

ಭಾರತದ ಇತರ ಕಡೆಗಳಲ್ಲಿರುವ ವಸ್ತುಸಂಗ್ರಹಾಲಯಗಳಲ್ಲಿ ಪುಣೆಯ ಕೇಳ್ಕರ್ ಮ್ಯೂಸಿಯಂ, ಅಹ್ಮದಾಬಾದಿನ ಶ್ರೇಯಸ್ ಜಾನಪದ ಕಲಾ ಮ್ಯೂಸಿಯಂ, ರಾಜಸ್ಥಾನದ ಉದಯಪುರದಲ್ಲಿರುವ ಜಾನಪದ ವಸ್ತು ಸಂಗ್ರಹಾಲಯ, ಬರೋಡಾದ ಸರಕಾರಿ ಸಂಗ್ರಹಾಲಯ, ಮುಂಬೈಯ ವಿಕ್ಟೋರಿಯಾ ಮ್ಯೂಸಿಯಂ, ಹೈದರಾಬಾದಿನ ಸಾಲರ್ ಜಂಗ್ ಮ್ಯೂಸಿಯಂ, ಬೋಪಾಲದ ಮಾನವ ವಸ್ತುಸಂಗ್ರಹಾಲಯಗಳು ಕಲಾತ್ಮಕ ಹಾಗೂ ವ್ಯವಸ್ಥಿತ ಪ್ರದರ್ಶನಕ್ಕೆ ಹೆಸರನ್ನು ಗಳಿಸಿದೆ.

ವಸ್ತುಸಂಗ್ರಹಾಲಯವೆಂದರೆ ಒಂದು ರಾಷ್ಟ್ರದ ಸಂಪತ್ತು ಹಾಗೂ ಸಾಂಸ್ಕೃತಿಕ ಆಸ್ತಿ. ಇಲ್ಲಿನ ವಸ್ತುಪರಿಕರಗಳು ತಮ್ಮ ಪೂರ್ವಜರ ಕತೆಯನ್ನು, ಚರಿತ್ರೆಯನ್ನು ತೆರೆದಿಡುತ್ತವೆ. ವಸ್ತುಗಳ ಮಹತ್ವವನ್ನು, ವಸ್ತುವನ್ನು ಆಧರಿಸಿ ಸಮೀಕ್ಷಿಸಿ ಅದರ ವಿಶೇಷತೆಯನ್ನು, ಇತಿಹಾಸವನ್ನು ಪ್ರತಿಪಾದಿಸುವ ಪ್ರಮುಖ ಪಾತ್ರ ವಹಿಸುತ್ತವೆ. ದುರಾದೃಷ್ಟವಶಾತ್ ಭಾರತದಲ್ಲಿ ವಸ್ತುಸಂಗ್ರಹಾಲಯಗಳು ಹಾಗೂ ವಸ್ತುವಿಶೇಷಗಳ ಅಧ್ಯಯನ ಬಹು ನಿರ್ಲಕ್ಷಿತ ಕ್ಷೇತ್ರವಾಗಿದೆ. ವಸ್ತುಸಂಗ್ರಹಾಲಯಗಳ ವಸ್ತುವಿಶೇಷಗಳನ್ನು ಕೇವಲ ಒಂದು ಅಲಂಕಾರಿಕ ವಸ್ತುವಾಗಿ ಅಥವಾ ವಸ್ತುಗಳನ್ನು ಶೇಖರಣೆ ಮಾಡುವ ಸ್ಥಳ ಎನ್ನುವ ದೃಷ್ಟಿಯಿಂದ ಮಾತ್ರ ಇಲ್ಲಿ ಮಹತ್ವ ಕಂಡುಕೊಂಡಿದೆ. ಐತಿಹಾಸಿಕ ಹಾಗೂ ಸಾಂಸ್ಕೃತಿಕ ಮುನ್ನಡೆಯಲ್ಲಿ ವಸ್ತುಸಂಗ್ರಹಾಲಯಗಳ ಪಾತ್ರ ಪರಿಣಾಮಕಾರಿಯಾಗಬೇಕಾದಲ್ಲಿ ಅವುಗಳ ಬಗ್ಗೆ ನಮ್ಮ ದೃಷ್ಟಿಕೋನವನ್ನು ಬದಲಿಸಿಕೊಳ್ಳಬೇಕಾಗಿದೆ. ಅದರಲ್ಲಿಯೂ ಜಾನಪದ ವಸ್ತು ಸಂಗ್ರಹಾಲಯಗಳನ್ನು

ನೋಡುವ ದೃಷ್ಟಿ ಬದಲಾಗಬೇಕಾಗಿದೆ. ಅಧ್ಯಯನದ ಆಯಾಮದಲ್ಲಿ ಜಾನಪದ ವಸ್ತು ಸಂಗ್ರಹಾಲಯಗಳು ಬಹು ನಿರ್ಲಕ್ಷಿತ ಕ್ಷೇತ್ರ. ನಿಜಾರ್ಥದಲ್ಲಿ ಇವುಗಳು ತಲೆಮಾರುಗಳ ನಡುವೆ ಸಂಪರ್ಕ ಸಾಧಿಸುವ ಸೇತುವೆಗಳು.

ಭಾರತದ ವಸ್ತು ಸಂಗ್ರಹಾಲಯಗಳನ್ನು ಉಸ್ತುವಾರಿ ಮತ್ತು ವಿತ್ತ ಒದಗಣೆಯ ನೆಲೆಯಲ್ಲಿ ಈ ಕೆಳಗಿನಂತೆ ವರ್ಗೀಕರಿಸಬಹುದು:

- ಸಂಸ್ಕೃತಿ ಮಂತ್ರಾಲಯ, ಭಾರತ ಸರಕಾರ
- ಅರ್ಕಿಯೊಲಜಿಕಲ್ ಸರ್ವೆ ಆಫ್ ಇಂಡಿಯ
- ರಾಜ್ಯ ಪುರಾತತ್ವ ಮತ್ತು ವಸ್ತುಸಂಗ್ರಹಾಲಯ ಇಲಾಖೆ
- ಸ್ಟೇಟ್ ಡವೆಲಪ್‌ಮೆಂಟ್ ಅಥಾರಿಟಿ
- ಸ್ಟೇಟ್ ಮುನ್ಸಿಪಲ್ ಕಾರ್ಪೊರೇಶನ್
- ಸಾರ್ವಜನಿಕ ಮತ್ತು ಖಾಸಗಿ ಟ್ರಸ್ಟ್
- ಸೊಸೈಟಿ/ಫೌಂಡೇಶನ್
- ವಿಶ್ವವಿದ್ಯಾನಿಲಯ/ಸಂಸ್ಥೆ

೨.೨ ಕರ್ನಾಟಕದ ವಸ್ತುಸಂಗ್ರಹಾಲಯಗಳು – ಹುಟ್ಟು – ಬೆಳವಣಿಗೆ – ಸ್ವರೂಪ –ನಿರ್ವಹಣೆ – ಮಹತ್ವ

ಕರ್ನಾಟಕದ ವಸ್ತು ಸಂಗ್ರಹಾಲಯಗಳನ್ನು ಪ್ರಮುಖವಾಗಿ ಈ ಕೆಳಗಿನಂತೆ ವರ್ಗೀಕರಿಸಬಹುದು:

- ಪುರಾತತ್ವ ವಸ್ತುಸಂಗ್ರಹಾಲಯ
- ಆರ್ಟ್ ಗ್ಯಾಲರಿ
- ಜಾನಪದ ಸಂಗ್ರಹಾಲಯ
- ಸರಕಾರಿ ವಸ್ತು ಸಂಗ್ರಹಾಲಯ

ಪುರಾತತ್ವ ವಸ್ತುಸಂಗ್ರಹಾಲಯ

ಪುರಾತತ್ವ ವಸ್ತುಸಂಗ್ರಹಾಲಯಗಳು ಕರ್ನಾಟಕದ ಹಲವು ಕಡೆಗಳಲ್ಲಿ ಇವೆ. ವಿಶ್ವವಿದ್ಯಾನಿಲಯಗಳಲ್ಲಿ, ಪುರಾತತ್ವ ಶಾಸ್ತ್ರದ ಅಧ್ಯಯನ ಸಂದರ್ಭದಲ್ಲಿ ಪ್ರಾಚೀನ ಹಸ್ತಪ್ರತಿಗಳನ್ನು, ಶಾಸನಗಳನ್ನು ಸಂಗ್ರಹಿಸಲಾಗಿದೆ.

ಹಂಪಿಯ ಹೊರಾಂಗಣ ಸಂಗ್ರಹದಲ್ಲಿ ಹಳೆಯ ಶಾಸನಗಳು, ಶಿಲ್ಪಗಳು, ಹಸ್ತಪ್ರತಿಗಳು, ತೈಲ ಚಿತ್ರಗಳು, ಶಸ್ತ್ರಗಳು, ಗಾಜಿನ ಪಿಂಗಾಣಿಗಳು ಇತ್ಯಾದಿಗಳಿವೆ. ಇವುಗಳು ಸುಮಾರು ೧೪೮೦-೧೬೮೦ರ ಅವಧಿಗೆ ಸಂಬಂಧಪಟ್ಟಿವೆ.

ಜಾನಪದ ಸಂಗ್ರಹಾಲಯ

ಭಾರತದಲ್ಲಿ ಪ್ರಥಮ ಜಾನಪದ ವಸ್ತು ಸಂಗ್ರಹಾಲಯ ಮೈಸೂರು ವಿಶ್ವವಿದ್ಯಾಲಯದ ಮಾನಸಗಂಗೋತ್ರಿ ಆವರಣದಲ್ಲಿ ೧೯೬೮ರಲ್ಲಿ ರೂಪುಗೊಂಡಿದೆ. ಭಾರತದ ಬೇರೆ ಬೇರೆ ರಾಜ್ಯಗಳಲ್ಲಿ ಅನೇಕ ವಸ್ತು ಸಂಗ್ರಹಾಲಯಗಳಿದ್ದರೂ ಜಾನಪದಕ್ಕಾಗಿಯೇ ಮೀಸಲಾದ ಮತ್ತು ಶಾಸ್ತ್ರೀಯವಾಗಿ ಮತ್ತು ಕಲಾತ್ಮಕವಾಗಿ ರೂಪುಗೊಂಡಿರುವ ಸಂಗ್ರಹಾಲಯವಿದು. ಇಲ್ಲಿ ಸಂಗ್ರಹಿಸಲಾಗಿರುವ ವಸ್ತುಗಳನ್ನು ಶಾಸ್ತ್ರೀಯವಾಗಿ ಜೋಡಿಸಿಡಲಾಗಿದೆ ಮತ್ತು ಅಧ್ಯಯನಕ್ಕೆ ತೆರೆದಿಡಲಾಗಿದೆ. ಜನಪದ ವಸ್ತುಗಳ ಬಗೆಗಿನ ಅಧ್ಯಯನವೆಂದರೆ ಒಂದು ರೀತಿ ಜನಪದದ ಅಧ್ಯಯನವೇ ಆಗುತ್ತದೆ. ಇಲ್ಲಿ ಸುಮಾರು ಆರು ಸಾವಿರಕ್ಕೂ ಮಿಕ್ಕಿ ಜನಪದ ವಸ್ತುಗಳಿವೆ.

ಕರ್ನಾಟಕ ಜಾನಪದ ಪರಿಷತ್ತಿನ ನೆಲೆಯಲ್ಲಿ ಮೈಸೂರು-ಬೆಂಗಳೂರಿನ ಹೆದ್ದಾರಿ ಪಕ್ಕಕ್ಕೆ ರಾಮನಗರದಲ್ಲಿ ಅಸ್ತಿತ್ವಕ್ಕೆ ಬಂದಿರುವ ಜಾನಪದ ಲೋಕ (೧೯೯೪) ಒಳಾಂಗಣ ಮತ್ತು ಹೊರಾಂಗಣ ಸಂಗ್ರಹಾಲಯಕ್ಕೆ ಸಾಕ್ಷಿಯಾಗುತ್ತದೆ. ಇಲ್ಲಿನ ಕಟ್ಟಡಗಳು ಗ್ರಾಮೀಣ ಮಾದರಿಯಲ್ಲಿದೆ.

ಸರಕಾರಿ ಸಂಗ್ರಹಾಲಯ ಮತ್ತು ಆರ್ಟ್ ಗ್ಯಾಲರಿ

ಸುಮಾರು ೧೮೮೬ರಲ್ಲಿ ಇದು ಅಸ್ತಿತ್ವಕ್ಕೆ ಬಂದಿದ್ದು ಇದರಲ್ಲಿ ಬೇರೆ ಬೇರೆ ಅಂತಸ್ತುಗಳನ್ನು ಸಾಮಾಜಿಕ ಭಿನ್ನತೆಯನ್ನು ಕಾಣಬಹುದು. ಇಲ್ಲಿನ ಆಭರಣಗಳ ಅಪೂರ್ವ ಸಂಗ್ರಹ ಗಮನಸಬಹುದು. ೫೦೦೦ ವರ್ಷದ ಮೊಹೆಂಜೊದಾರೊವಿನ ಹಳೆಯ ಪ್ರಾಚ್ಯವಸ್ತುಗಳು ಇಲ್ಲಿದೆ. ಇತಿಹಾಸ ಸಂಶೋಧಕರಿಗೆ ಇದು ಆಕರವಾಗಬಲ್ಲುದು.

ಇತರ ವಸ್ತುಸಂಗ್ರಹಾಲಯಗಳು

- ಇಂದಿರಾ ಗಾಂಧಿ ಮಾನವ ವಸ್ತುಸಂಗ್ರಹಾಲಯ ಮೈಸೂರಿನಲ್ಲಿದೆ.
- ಜಯಚಾಮರಾಜೇಂದ್ರ ಆರ್ಟ್ ಗ್ಯಾಲರಿ, ಮೈಸೂರು
- ಕೆಳದಿ ಮ್ಯೂಸಿಯಂ, ಕೆಳದಿ
- ಕವಿಶೈಲ, ತೀರ್ಥಹಳ್ಳಿ
- ಹಸ್ತ ಶಿಲ್ಪ, ಮಣಿಪಾಲ
- ಟಿಪ್ಪುಸುಲ್ತಾನ ವಸ್ತುಸಂಗ್ರಹಾಲಯ, ಶ್ರೀರಂಗಪಟ್ಟಣ
- ತುಳು ಬದುಕು ವಸ್ತು ಸಂಗ್ರಹಾಲಯ ಮತ್ತು ಆರ್ಟ್ ಗ್ಯಾಲರಿ, ಬಂಟ್ವಾಳ

೨.೩ ಕರಾವಳಿ ಕರ್ನಾಟಕದ ವಸ್ತುಸಂಗ್ರಹಾಲಯಗಳು–ಹುಟ್ಟು–ಬೆಳವಣಿಗೆ–ಸ್ವರೂಪ–ಮಹತ್ವ

ಪ್ರಕೃತಿ ಸೌಂದರ್ಯ, ಭಾಷೆ, ಕಟ್ಟಳೆ, ವಾಸ್ತುಶಿಲ್ಪಗಳಿಗೆ ದಕ್ಷಿಣಕನ್ನಡವು ಒಂದು ತೆರೆದಿಟ್ಟ ಸಂಗ್ರಹಾಲಯ ಎಂದು ಹೇಳಲಾಗುತ್ತದೆ. ಭೌಗೋಳಿಕವಾಗಿ ಒಂದು ಬಗೆಯಲ್ಲಿ ಪ್ರತ್ಯೇಕತೆಯನ್ನು ಉಳಿಸಿಕೊಂಡು ವಿವಿಧ ಜನವರ್ಗದ ನೆಲೆವೀಡಾಗಿ ವೈವಿಧ್ಯಪೂರ್ಣವಾದ ಸಾಹಿತ್ಯದ ಗಣಿಯನ್ನೇ ಹೊಂದಿ ಆದಿಯಿಂದಲೇ ದೇಶವಿದೇಶದ ಕುತೂಹಲಗಳಿಸಿದ ನಾಡು–ತುಳುನಾಡು (ಆರಂಭಿಕ ಸೌತ್‌ಕೆನರಾ ಜಿಲ್ಲೆ). ನಾಗಮಂಡಲ, ಭೂತಾರಾಧನೆ ಮುಂತಾದ ಧಾರ್ಮಿಕ ಆಚರಣೆಗಳು, ಯಕ್ಷಗಾನ, ತಾಳಮದ್ದಲೆ ಮುಂತಾದ ರಂಗಪ್ರಭೇದಗಳು, ವಿವಿಧ ಜಾನಪದ ಕುಣಿತಗಳು ಸಂಧಿ ಪಾಡ್ದನಗಳು ಮುಂತಾದ ಜನಪದ ವಿನೋದಗಳು ಬೇಸಾಯ, ಮೀನುಗಾರಿಕೆ ಮುಂತಾದ ವೃತ್ತಿಗಳು ತುಳುವ ಸಂಸ್ಕೃತಿಯ ಪ್ರಮುಖ ಅಂಗಗಳು. ಅವಿಭಜಿತ ಜಿಲ್ಲೆಯೇ ಒಂದು ಭೌತಿಕ ವಸ್ತುಸಂಗ್ರಹಾಲಯದಂತಿದ್ದು, ಇಲ್ಲಿನ ಗುಡ್ಡ, ಬೆಟ್ಟ, ಬಯಲು, ಕಾಡು, ಕಣಿವೆ, ನದಿ, ತೊರೆ, ಸಮುದ್ರ, ಇತ್ಯಾದಿಗಳಿಂದ ಕೂಡಿದ ಭೌಗೋಲಿಕ ರಚನೆ, ಗುತ್ತು, ಬೀಡುಗಳ ವಾಸ್ತು, ದಾರುಶಿಲ್ಪಗಳು, ವಿಶಿಷ್ಠವಾದ ಕಂಬಳ ಕೋಳಿಕಟ್ಟದಂತಹ ಕ್ರೀಡೆಗಳು, ಕೃಷಿ ಕಾರ್ಯಗಳು, ಕಸುಬುಗಳು, ಆರಾಧನಾ ಕೇಂದ್ರಗಳು, ಸಾಂಸ್ಕೃತಿಕ ಹಿನ್ನೆಲೆಗಳು, ಎಲ್ಲವೂ ಅನನ್ಯ. ಇಂದು ಇವುಗಳ ಹಿನ್ನೆಲೆಯನ್ನು ಮತ್ತು ವೈಶಿಷ್ಟ್ಯವನ್ನು ಅಳಿದುಳಿದ ಭೌತಿಕ ವಸ್ತುಗಳು ಮತ್ತು ಮೌಖಿಕ ಸಾಹಿತ್ಯಗಳು ಮಾತ್ರ ನಿರೂಪಿಸಬಲ್ಲದು. ಈ ಭೌತಿಕ ವಸ್ತುಗಳು ಜಿಲ್ಲೆಯಲ್ಲಿರುವ ಕೆಲವೊಂದು ವಸ್ತುಸಂಗ್ರಹಾಲಯದಲ್ಲಿ ಮಾತ್ರ ಕಾಣ ಸಿಗುವುದರಿಂದ ಅಧ್ಯಯನದ ಪೂರ್ವಭಾವಿಯಾಗಿ ಇಲ್ಲಿನ ವಸ್ತುಸಂಗ್ರಹಾಲಯಗಳ ವೈಶಿಷ್ಟತೆಯ ಕುರಿತು ಗುರುತಿಸಿಕೊಳ್ಳಲಾಗಿದೆ.

ವಿಶಿಷ್ಟತೆಯನ್ನು ಹೊಂದಿರುವ ಈ ನಾಡಿನ ಇತಿಹಾಸ, ಸಂಸ್ಕೃತಿ ಮತ್ತು ಪರಂಪರೆಯನ್ನು ಪ್ರತಿಬಿಂಬಿಸುವ ಒಂದು ಪೂರ್ಣ ಪ್ರಮಾಣದ ವಸ್ತು ಸಂಗ್ರಹಾಲಯದ ಅಗತ್ಯ ಈ ಪ್ರದೇಶಕ್ಕಿದೆ ಎಂಬ ಮಾತು ಒಪ್ಪಿಕೊಳ್ಳಲೇ ಬೇಕಾದ ಮಾತಾದರೂ ಇಲ್ಲಿ ಸಂಗ್ರಹಾಲಯಗಳೇ ಇಲ್ಲ ಎನ್ನುವಂತಿಲ್ಲ. ಇಲ್ಲಿಯೂ ಸರಕಾರದ ವತಿಯಿಂದ, ವಿಶ್ವವಿದ್ಯಾನಿಲಯದಿಂದ, ಖಾಸಗಿ ಸಂಸ್ಥೆಗಳಿಂದ, ಕಾಲೇಜುಗಳಿಂದ ಹಾಗೂ ವ್ಯಕ್ತಿಗತವಾಗಿ ನಡೆಸಲ್ಪಡುವ ಸಂಗ್ರಹಾಲಯಗಳಿವೆ. ಇಲ್ಲಿನ ವಸ್ತು ಸಂಗ್ರಹಾಲಯಗಳ ಸ್ಥೂಲ ಪರಿಚಯವನ್ನು ಇಲ್ಲಿ ಮಾಡಲಾಗಿದೆ. ಜಿಲ್ಲೆಯಲ್ಲಿ ಖಾಸಗಿ ಮತ್ತು ಸರಕಾರಿ ವಲಯಗಳಲ್ಲಿ ವಸ್ತುಸಂಗ್ರಹಾಲಯಗಳು ಕಾರ್ಯ ನಿರ್ವಹಿಸುತ್ತಿವೆ.

೨.೩.೧ ಸೀಮಂತಿಬಾಯಿ ವಸ್ತುಸಂಗ್ರಹಾಲಯ

ದಕ್ಷಿಣಕನ್ನಡ ಜಿಲ್ಲೆಯ ವಸ್ತುಸಂಗ್ರಹಾಲಯಗಳಲ್ಲಿ ಮೊದಲು ಉಲ್ಲೇಖಿತವಾಗುವುದು ಮಂಗಳೂರಿನ ಸುಂದರ ಪರಿಸರದ ಬಿಜೈಯಲ್ಲಿರುವ ಸೀಮಂತಿಬಾಯಿ ವಸ್ತುಸಂಗ್ರಹಾಲಯ. ಕರ್ನಲ್ ವಿ.ಆರ್. ಮಿರಜ್‌ಕರ್ ಎಂಬ ವೈದ್ಯರೊಬ್ಬರು ತಮ್ಮ ಸಂಗ್ರಹದ ಅಪೂರ್ವ ವಸ್ತುಗಳನ್ನು, ಭವ್ಯವಾದ ತನ್ನ ಭವನವನ್ನು ಉನ್ನತೋದ್ದೇಶದಿಂದ ಸರ್ಕಾರಕ್ಕೆ ಒಪ್ಪಿಸಿಬಿಟ್ಟರು (೧೯೬೦). ಅದನ್ನೇ ಮೂಲವಾಗಿಟ್ಟುಕೊಂಡು ಸರಕಾರವು

ಮಿರಜ್‌ಕರ್‌ರವರ ಅಪೇಕ್ಷೆಯಂತೆ ಅವರ ತಾಯಿ ಸೀಮಂತಿ ಬಾಯಿಯವರ ಸ್ಮರಣಾರ್ಥವಾಗಿ ಈ ವಸ್ತುಸಂಗ್ರಹಾಲಯವನ್ನು ಸ್ಥಾಪಿಸಿತು.

ದೋಣಿಯಾಕಾರದಲ್ಲಿರುವ ಈ ವಸ್ತುಸಂಗ್ರಹಾಲಯದಲ್ಲಿ ವಿವಿಧ ಸಮುದಾಯದ ಸಂಸ್ಕೃತಿ–ಪರಂಪರೆಗೆ ಸಂಬಂಧಪಟ್ಟ ವಸ್ತುಗಳು, ಚಿತ್ರಗಳು, ವಿಗ್ರಹಗಳು, ಲ್ಯಾಂಪ್‌ಗಳು, ಭೂತ–ದೈವದ ಮುಖವಾಡಗಳು, ಪ್ರಜಾ ಸಲಕರಣೆಗಳು, ಶಾಸನಗಳು, ವಿವಿಧ ಗಾತ್ರದ ಫಿರಂಗಿಗಳು, ಫಿರಂಗಿ ಗುಂಡುಗಳು, ನಾಣ್ಯಗಳು ಮುಂತಾದ ಹತ್ತುಹಲವು ವಸ್ತುಗಳು ಸಂಗ್ರಹಾಲಯದಲ್ಲಿದೆ. ಕರ್ನಾಟಕ ಸರಕಾರದ ಪ್ರಾಚ್ಯವಸ್ತು ಸಂಗ್ರಹಾಲಯ ಇಲಾಖೆಯಡಿಯಲ್ಲಿ ನಡೆಯುತ್ತಿರುವ ಈ ಸಂಗ್ರಹಾಲಯದಲ್ಲಿ ಸುಮಾರು ಎಂಟು ಉದ್ಯೋಗಿಗಳು ಕಾರ್ಯನಿರ್ವಹಿಸುತ್ತಿದ್ದು ಕೆಲವೊಂದು ಅಗತ್ಯತೆಗಳ ಕೊರತೆಯಿದೆ. ಮಂಗಳೂರಿನ ಸರಕಾರಿ ಸ್ವಾಮ್ಯದಲ್ಲಿರುವ ಈ ಏಕೈಕ ವಸ್ತುಸಂಗ್ರಹಾಲಯ ಆಧುನಿಕ ಇತಿಹಾಸ ಮತ್ತು ೧೬ ನೆಯ ಶತಮಾನದ ನಡುವಿನ ಕೊಂಡಿಯಂತಿದೆ. ಆದರೆ ಅಧ್ಯಯನ ಹಾಗೂ ಜನರನ್ನು ಆಕರ್ಷಿಸುವ ನಿಟ್ಟಿನಲ್ಲಿ ಈ ಸಂಗ್ರಹಾಲಯ ಕೆಲಸ ಮಾಡಿದಂತಿಲ್ಲ. ಅಲ್ಲದೆ, ಇಲ್ಲಿನ ಆಡಳಿತೆ ವಸ್ತುಗಳನ್ನು ಕಾಪಿಡುವಲ್ಲಿಯೂ ಸೋತಿದೆ.

೨.೩.೨ ಧರ್ಮಸ್ಥಳದ ಮಂಜೂಷಾ ವಸ್ತು ಸಂಗ್ರಹಾಲಯ

ಶ್ರೀಕ್ಷೇತ್ರ ಧರ್ಮಸ್ಥಳ ರಾಷ್ಟ್ರದ ಪ್ರಮುಖ ಧಾರ್ಮಿಕ ಕೇಂದ್ರವಾಗಿರುವ ಹಾಗೆಯೇ ಸಾಹಿತ್ಯ ಹಾಗೂ ಸಾಂಸ್ಕೃತಿಕ ಕೇಂದ್ರವಾಗಿಯೂ ಪ್ರಖ್ಯಾತವಾಗಿದೆ. ಆಸ್ತಿಕರನ್ನು, ನಾಸ್ತಿಕರನ್ನು ನಿಬ್ಬೆರಗಾಗಿಸುವ ಕ್ಷೇತ್ರದ ಮಂಜೂಷಾ ವಸ್ತುಸಂಗ್ರಹಾಲಯ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಶ್ರೀಮಂತ ಅಭಿರುಚಿ ಮತ್ತು ದೂರದೃಷ್ಟಿಯ ಫಲವಾಗಿ ರೂಪುಗೊಂಡಿದೆ. ಕಲಾರಾಧಕ ತಿಪ್ಪೇಸ್ವಾಮಿಯವರ ವಿಶೇಷ ಪರಿಣತಿಯಿಂದ ಇಂದು ಡಾ.ಎಸ್.ಡಿ. ಶೆಟ್ಟಿಯವರ ಮಾರ್ಗದರ್ಶನದಲ್ಲಿ ಆಸಕ್ತ ಜನತೆಗೆ ರಸದೌತಣವನ್ನು ನೀಡುತ್ತಿದೆ. ಇಲ್ಲಿ ಸಂಗ್ರಹಗೊಂಡ ವಸ್ತುವಿಶೇಷಗಳ ಹಿನ್ನೆಲೆಯನ್ನು ಕೆದಕುತ್ತಾ ಹೋದಂತೆ ಹೊಸ ಲೋಕವೊಂದರ ಪ್ರವೇಶದ ಅನುಭವವಾಗುತ್ತದೆ. ನಲವತ್ತು ಕೋಟಿ ವರ್ಷಗಳಷ್ಟು ಹಿಂದಿನ ಜೀವಿಯ ಪಳೆಯುಳಿಕೆಗಳನ್ನೊಳಗೊಂಡು, ಪ್ರಾಗೈತಿಹಾಸಿಕ ಶಿಲಾಯುಗದ ಸಂಸ್ಕೃತಿಯ ಉಪಕರಣಗಳು, ಉಳ್ಳಾಲದ ಚೌಟ ರಾಣಿ ಅಬ್ಬಕ್ಕನ ಕುರಿತ ಮಾಹಿತಿ ನೀಡುವ ತಾಮ್ರ ಶಾಸನದಿಂದ ಹಿಡಿದು ದೇಶ–ವಿದೇಶದ ವಸ್ತುವೈವಿಧ್ಯಗಳು ಮಂಜೂಷಾದಲ್ಲಿವೆ. ಶಿವಮೊಗ್ಗ ಜಿಲ್ಲೆಯ ಮೇಗರವಳ್ಳಿಯ ಬಿ.ವಿ. ಮೂರ್ತಿಯವರ ಏಕಾಗ್ರತೆ ಹಾಗೂ ಶ್ರದ್ಧೆಯ ಫಲವಾಗಿ ಸಂಗ್ರಹಗೊಂಡ ೩೦ ಸಾವಿರಕ್ಕೂ ಹೆಚ್ಚಿನ ವೃತ್ತಪತ್ರಿಕೆಗಳು ಈ ಸಂಗ್ರಹಾಲಯದಲ್ಲಿವೆ. ಈ ಸಂಗ್ರಹವು ವೃತ್ತಪತ್ರಿಕೆಯ ಬೆಳವಣಿಗೆಯ ವಿವಿಧ ಮಜಲುಗಳನ್ನು ಸಾಕ್ಷ್ಯಪೂರ್ವಕವಾಗಿ ತಿಳಿಯಪಡಿಸುತ್ತದೆ.

ವೀರೇಂದ್ರ ಹೆಗ್ಗಡೆಯವರು ೧೯೮೮ರಲ್ಲಿ ಹುಟ್ಟುಹಾಕಿದ ಶ್ರೀ ಧರ್ಮಸ್ಥಳ ಮಂಜುನಾಥ ಸಾಂಸ್ಕೃತಿಕ ಪ್ರತಿಷ್ಠಾನ ದ ಅಂಗವಾಗಿರುವ ಮಂಜೂಷಾದಲ್ಲಿ ಅಪೂರ್ವವಾದ ಒಂದು ಗ್ರಂಥ ಹಾಗೂ ಹಸ್ತಪ್ರತಿ ಭಂಡಾರವೂ

ಇದೆ. ಬಾಗಲಕೋಟೆಯ ಬಸವೇಶ್ವರ ಆರ್ಟ್ಸ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದ ಗೌ.ಮ. ಉಮಾಪತಿ ಶಾಸ್ತ್ರಿಯವರು ಎರಡು ಸಾವಿರಕ್ಕೂ ಹೆಚ್ಚು ಹಸ್ತಪ್ರತಿಗಳನ್ನು ಸಂಗ್ರಹಿಸಿದ್ದು, ಆ ಸಂಗ್ರಹವನ್ನು ಧರ್ಮಸ್ಥಳಕ್ಕೆ ಅರ್ಪಿಸಿದಾಗ ಧರ್ಮಾಧಿಕಾರಿಗಳು ಅವರನ್ನೇ ಆ ಸಂಗ್ರಹಾಲಯದ ಮೇಲ್ವಿಚಾರಕರನ್ನಾಗಿ ನೇಮಿಸಿದರು. ದಿನದಿಂದ ದಿನಕ್ಕೆ ಬೆಳೆಯುತ್ತಿರುವ ವಿವಿಧ ಭಾಷೆಯ ಅಮೂಲ್ಯ ಸಾಹಿತ್ಯ ಗಣಿಯಾಗಿರುವ ಈ ಹಸ್ತಪ್ರತಿಗಳನ್ನು ವೈಜ್ಞಾನಿಕ ರೀತಿಯಲ್ಲಿ ಸಂರಕ್ಷಿಸಿ ಇಡಲಾಗಿದೆ. ತಾಳೆಗರಿಯ ಗ್ರಂಥಗಳಲ್ಲದೆ, ಕಾಗದದ ಹಸ್ತಪ್ರತಿಗಳು, ಕಡತಗಳು, ಕಲ್ಲಚ್ಚಿನ ಪ್ರತಿಗಳು, ಪ್ರಾಚೀನ ಮುದ್ರಿತ ಗ್ರಂಥಗಳಿರುವ ಈ ಭಂಡಾರವು ಸಾಹಿತ್ಯ ವಿದ್ಯಾರ್ಥಿಗಳು ಹಾಗೂ ಸಂಶೋಧಕರಿಗೆ ಬಹು ಉಪಯುಕ್ತವಾಗಿದೆ.

ಮಂಜೂಷಾದ ಇನ್ನೊಂದು ಪ್ರಮುಖ ಆಕರ್ಷಣೆಯೆಂದರೆ, ಕುತೂಹಲಕಾರಿಯಾದ ಕಾರ್ ಮ್ಯೂಸಿಯಂ. ವಿವಿಧ ಮಾದರಿಯ, ನೋಡಲು ವಿಚಿತ್ರವೆನಿಸುವ, ೧೯೦೭ರಿಂದ ತೊಡಗಿ ಇತ್ತೀಚೆಗಿನ ಸುಮಾರು ನಲ್ವತ್ತಕ್ಕಿಂತಲೂ ಹೆಚ್ಚಿನ ಅತ್ಯಪೂರ್ವವಾದ ಕಾರುಗಳ ಕಾರುಬಾರು ಮನಸ್ಸಿಗೆ ಮುದ ನೀಡುತ್ತದೆ. ಗಾಂಧೀಜಿಯವರು ಮದರಾಸಿನಿಂದ ಪಾಂಡಿಚೇರಿಗೆ ಪ್ರಯಾಣ ಮಾಡಿದ ಸ್ಟುಡಿ ಬೇಕರ್ ಕಾರು, ಶೃಂಗೇರಿ ಮಠಾಧೀಶರು ಬಳಸಿದ್ದ ಪೇಕಾರ್ಡ್ ಕಾರು, ಮೈಸೂರು ಮಹಾರಾಜರ ಡ್ಯಾಮ್ಲರ್ ಎಂಬ ದೊಡ್ಡ ಕಾರು ಇತ್ಯಾದಿ ಕಾರ್ ಮ್ಯೂಸಿಯಂಗೆ ಐತಿಹಾಸಿಕ ಮೆರುಗನ್ನು ತಂದುಕೊಟ್ಟಿವೆ. ಇದರೊಂದಿಗೆ ಕುದುರೆ ಸಾರೋಟುಗಳು, ಎತ್ತಿನ ಗಾಡಿಗಳು ಗಮನ ಸೆಳೆಯುತ್ತವೆ. ೧೮೬೪ರಿಂದ ೧೯೦೩ರವರೆಗಿನ ತಯಾರಿಕೆಯ ವೈವಿಧ್ಯಮಯ ಸಾರೋಟುಗಳು ಇಲ್ಲಿ ಮರುಜೀವ ಪಡೆದು ನವನಾಗರಿಕತೆಯ ಈ ದಿನದಲ್ಲಿ ನಮ್ಮ ಪೂರ್ವಿಕರ ಸಂಚಾರ ವ್ಯವಸ್ಥೆಯ ಕುರಿತು ಅಧ್ಯಯನ, ಸಂಶೋಧನೆ ನಡೆಸುವವನಿಗೆ ವಿಪುಲ ಅವಕಾಶವನ್ನು ತೆರೆದಿಟ್ಟಿದೆ. ಇತ್ತೀಚೆಗೆ ಪುನರ್‌ರಚಿಸುವ ಕಾರ್ಯದಲ್ಲಿ ತೊಡಗಿಕೊಂಡಿದೆ.

೨.೩.೩ ಡಾ.ಬಿ. ವಸಂತಶೆಟ್ಟಿ ಸ್ಮಾರಕ ವಸ್ತುಸಂಗ್ರಹಾಲಯ

೧೯೬೦ರ ದಶಕ ತುಳುನಾಡಿನ ಶೈಕ್ಷಣಿಕ ಕ್ಷೇತ್ರದಲ್ಲಿ ಒಂದು ಸಂಕ್ರಮಣ ಕಾಲ. ಹತ್ತುಹಲವು ಶೈಕ್ಷಣಿಕ ಸಂಸ್ಥೆಗಳು, ಮಹಾವಿದ್ಯಾನಿಲಯಗಳು ಮಾತ್ರವಲ್ಲದೆ ಮಂಗಳೂರು ವಿಶ್ವವಿದ್ಯಾನಿಲಯವು ಜನ್ಮ ತಳೆದ ಕಾಲವದು. ಇಂತಹ ಸಂಸ್ಥೆಗಳಲ್ಲಿ ಬ್ರಹ್ಮಾವರದ ಎಸ್.ಎಂ.ಎಸ್. ಕಾಲೇಜು ಒಂದು. ಇಲ್ಲಿ ಪ್ರಾಚೀನ ಭಾರತೀಯ ಇತಿಹಾಸ ಮತ್ತು ಪುರಾತತ್ವಶಾಸ್ತ್ರ ವಿಭಾಗವನ್ನು ಪ್ರಾರಂಭಿಸುವುದರೊಂದಿಗೆ ಜಿಲ್ಲೆಯಲ್ಲಿ ಕಾಲೇಜು ಒಂದು ಇತಿಹಾಸವನ್ನು ನಿರ್ಮಿಸಿತೆನ್ನಬಹುದು. ವಿಭಾಗದ ಚುಕ್ಕಾಣಿ ಹಿಡಿದವರು ಖ್ಯಾತ ಇತಿಹಾಸ ಸಂಶೋಧಕ ಡಾ.ಬಿ. ವಸಂತ ಶೆಟ್ಟಿಯವರು. ಡಾ. ಶೆಟ್ಟಿಯವರು ಕಾಲೇಜಿನ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯ ನಿಗದಿತ ಪಾಠಪ್ರವಚನಗಳೊಂದಿಗೆ ಸ್ಥಳೀಯ ಇತಿಹಾಸದಲ್ಲಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಆಸಕ್ತಿ ಮೂಡಿಸುವ ಸಲುವಾಗಿ ಅನೇಕ ಯಶಸ್ವಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಇತರ ಕಾಲೇಜುಗಳಿಗೆ ಇತಿಹಾಸ ಉಪನ್ಯಾಸಕರಿಗೆ ಮಾದರಿಯಾದರು. ಇವರ ಇತಿಹಾಸ ಪ್ರೇಮ, ದೂರದೃಷ್ಟಿಗಳಿಂದ ಕಾಲೇಜಿನಲ್ಲೇ ಒಂದು ಸಂಗ್ರಹಾಲಯ ನಿರ್ಮಾಣವಾಯಿತು. ಇದು

ಇತಿಹಾಸ ಹಾಗೂ ಸಂಸ್ಕೃತಿ ಸಂರಕ್ಷಣೆಗೆ ಸಂಬಂಧಿಸಿದ ಸಂಗ್ರಹಾಲಯ. ವಿದ್ಯಾರ್ಥಿಗಳ, ಆಡಳಿತ ಮಂಡಳಿಯ ಹಾಗೂ ಸಾರ್ವಜನಿಕರ ಪೂರ್ಣ ಸಹಕಾರದ ಫಲವಾಗಿ ಇವರ ಮನದಿಚ್ಛೆ ಕಾರ್ಯರೂಪಕ್ಕೆ ಬಂದು ಈ ಸಂಗ್ರಹಾಲಯ ಹಂತಹಂತವಾಗಿ ಬೆಳೆಯತೊಡಗಿತು. ಶ್ರೀಯುತ ಶೆಟ್ಟರು ೧೯೯೦ರಲ್ಲಿ ಅನಿರೀಕ್ಷಿತವಾಗಿ ವಿಧಿವಶರಾದ ಬಳಿಕ ಕಾಲೇಜಿನ ಆಡಳಿತ ಮಂಡಳಿ, ಅಧ್ಯಾಪಕವೃಂದ ಶೆಟ್ಟಿಯವರ ಶ್ರಮದ ಫಲವಾಗಿ ಬೆಳೆದು ನಿಂತ ಸಂಗ್ರಹಾಲಯಕ್ಕೆ ಈಗ ಡಾ. ಬಿ. ವಸಂತ ಶೆಟ್ಟಿ ಸ್ಮಾರಕ ವಸ್ತು ಸಂಗ್ರಹಾಲಯವೆಂದು ಹೆಸರಿಟ್ಟು ತಮ್ಮ ಕೃತಜ್ಞತೆಯನ್ನು ಸಲ್ಲಿಸಿದೆ.

ಇತಿಹಾಸಕ್ತರು, ಮುಖ್ಯವಾಗಿ ಪುರಾತತ್ವ ವಿಭಾಗದ ವಿದ್ಯಾರ್ಥಿಗಳು, ಸಂಶೋಧಕರು ಭೇಟಿ ನೀಡಲೇಬೇಕಾದ ಸಂಗ್ರಹಾಲಯವಿದು. ಡಾ. ಶೆಟ್ಟಿಯವರಿಗೆ ಶಾಸನಶಾಸ್ತ್ರ ಅತ್ಯಂತ ಪ್ರಿಯವಾದ್ದರಿಂದ ಅವರು ಸಂಶೋಧಿಸಿದ ಹಾಗೂ ಇತರ ಶಾಸನಗಳನ್ನು ಇಲ್ಲಿ ಸಂಗ್ರಹಿಸಿಟ್ಟಿದ್ದಾರೆ. ಮುಖ್ಯವಾಗಿ ಕುಮ್ರಗೋಡಿನ ಶಾಸನ, ಮಾಬುಕ್ಕಳದ ಜೈನ ಶಾಸನ, ಹಂದಾಡಿಯ ಅಳೂಪ ಶಾಸನ, ಆಳೂಪ ಸ್ಮಾರಕ ಶಾಸನ, ಉದ್ಯಾವರ, ಬಾರಕೂರಿನ ವಿಜಯನಗರ ಶಾಸನ ಇತ್ಯಾದಿ ಅಲ್ಲದೆ ಇಲ್ಲಿ ಅನೇಕ ಅಪೂರ್ವ ಮೂರ್ತಿಗಳು, ಸ್ಥಳೀಯವಾದ ದೈವಗಳ ಹಾಗೂ ಇತರ ಆರಾಧನೆಗೆ ಸಂಬಂಧಿಸಿದ ವಸ್ತುಗಳೂ ಇವೆ. ಸೂಕ್ಷ್ಮ ಶಿಲಾಯುಗದ ಅವಶೇಷಗಳು, ನಾಣ್ಯಗಳು, ಮಣ್ಣಿನಿಂದ ಮಾಡಲ್ಪಟ್ಟ ಬಾರಕೂರಿನ ನಗರ ಭೂಪಟ ನಮ್ಮನ್ನು ವಿಶೇಷವಾಗಿ ಆಕರ್ಷಿಸುತ್ತದೆ. ಆದರೆ, ಸಾರ್ವಜನಿಕರಿಗೆ ಇದು ತೆರೆದುಕೊಂಡಿಲ್ಲ. ಯುಜಿಸಿ ಅಥವಾ ಸರಕಾರಿ ಸಂಸ್ಥೆಗಳು ವಿದ್ಯಾಸಂಸ್ಥೆಯ ಅಭಿವೃದ್ಧಿ ಪರಿವೀಕ್ಷಣೆಗಾಗಿ ಬರುವ ಸಮಯದಲ್ಲಿ ಮಾತ್ರ ಈ ವಸ್ತುಸಂಗ್ರಹಾಲಯಗಳ ಧೂಳನ್ನು ಕೊಡವಲಾಗುತ್ತದೆ.

೨.೩.೪ ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರದ ತುಳು ಬದುಕು ವಸ್ತುಸಂಗ್ರಹಾಲಯ

ತುಳುನಾಡಿನ ವೀರ ಮಹಿಳೆ ಅಂತರರಾಷ್ಟ್ರೀಯ ಮಟ್ಟದ ಖ್ಯಾತಿಯ ಪುತ್ತಿಗೆ ಚೌಟ ಮನೆತನದ ಉಳ್ಳಾಲದ ರಾಣಿ ಅಬ್ಬಕ್ಕನ ಹೆಸರಿನಲ್ಲಿ ಅಸ್ತಿತ್ವಕ್ಕೆ ಬಂದ ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರ (೧೯೯೩) ಜಿಲ್ಲೆಯ ಸಂಗ್ರಹಾಲಯಗಳ ಕ್ಷೇತ್ರದಲ್ಲಿ ಹೊಸದೊಂದು ಇತಿಹಾಸವನ್ನು ನಿರ್ಮಿಸಿದೆ. ಪೂರ್ಣಪ್ರಮಾಣದ ಪ್ರಾದೇಶಿಕ ವಸ್ತುಸಂಗ್ರಹಾಲಯದ ಗುಣಲಕ್ಷಣಗಳನ್ನು ಹೊಂದಿರುವ ಸಂಗ್ರಹಾಲಯದ ಸ್ಥಾಪಕರು ಬಂಟ್ವಾಳ ಎಸ್.ವಿ.ಎಸ್. ಕಾಲೇಜಿನ ಇತಿಹಾಸ ವಿಭಾಗ ಮುಖ್ಯಸ್ಥ ಶ್ರೀ ತುಕಾರಾಂ ಪೂಜಾರಿಯವರು. ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯ ಪ್ರಾಚೀನ ತುಳುನಾಡಿನ ಕೆಳಸ್ತರದ ಜನರ ಬದುಕಿನ ಜೀವನ ವಿಧಾನವನ್ನು ಪ್ರತಿಬಿಂಬಿಸುವ ಸಹಸ್ರಾರು ವಸ್ತುಗಳನ್ನು ಸಂಗ್ರಹಿಸಿ ಬಂಟ್ವಾಳದ ಸಂಚಯಗಿರಿಯಲ್ಲಿ ಸ್ಥಾಪಿಸಿರುವ ತುಳು ಬದುಕು ವಸ್ತು ಸಂಗ್ರಹಾಲಯ ಒಂದು ಅಪೂರ್ವ ಕೊಡುಗೆ. ಕೇಂದ್ರವು ನಿರಂತರವಾಗಿ ರಾಷ್ಟ್ರ ಹಾಗೂ ರಾಜ್ಯಮಟ್ಟದ ವಿಚಾರಸಂಕಿರಣ, ವಸ್ತುಪ್ರದರ್ಶನ, ವಿಚಾರಗೋಷ್ಠಿ, ಕಾರ್ಯಾಗಾರ, ಐತಿಹಾಸಿಕ ನಿವೇಶನ ದರ್ಶನ, ಪುಸ್ತಕ ಪ್ರಕಟಣೆ, ವಸ್ತುಸಂಗ್ರಾಹಕರ ಸಮಾವೇಶ ಮುಂತಾದ ಹತ್ತು ಹಲವು ವಿಶಿಷ್ಟ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರೊಂದಿಗೆ ಯುವ ಪೀಳಿಗೆಯಲ್ಲಿ

ಸಂಸ್ಕೃತಿ–ಸಂರಕ್ಷಣಾ ಜಾಗೃತಿಯನ್ನುಂಟು ಮಾಡುವಲ್ಲಿ ಯಶಸ್ವಿಯಾಗಿದೆ. ಇಲ್ಲಿ ಸೇರ್ಪಡೆಗೊಂಡ ಸಾವಿರಾರು ವಸ್ತುವಿಶೇಷಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಒಂದು ಪ್ರದೇಶದ ಇತಿಹಾಸ ಮತ್ತು ಸಂಸ್ಕೃತಿಗಳ ವಿವಿಧ ಮಜಲುಗಳನ್ನು ಗುರುತಿಸುವಲ್ಲಿ ವಸ್ತುಸಂಗ್ರಹಾಲಯದ ಪಾತ್ರವೇನು ಎಂಬುವುದನ್ನು ಮನದಟ್ಟಾಗಿಸುತ್ತದೆ. ವಿಶೇಷವಾಗಿ ಜನಸಾಮಾನ್ಯರ ಜೀವನವಿಧಾನದ ಬಗ್ಗೆ ಬೆಳಕು ಚೆಲ್ಲುವ ಈ ಸಂಗ್ರಹಾಲಯದಲ್ಲಿ ತುಳುವರ ಉನ್ನತ ಜೀವನ ದೃಷ್ಟಿ, ರಸಿಕತೆ, ಜೀವನ ಶ್ರದ್ಧೆ, ಧಾರ್ಮಿಕ ಪ್ರಜ್ಞೆಗಳನ್ನು ಗುರುತಿಸಬಹುದಾಗಿದೆ. ಅಲ್ಲದೆ, ಇತಿಹಾಸ ರಚನೆಗೆ ಜಾನಪದ ವಸ್ತುಗಳನ್ನು ಹೇಗೆ ಬಳಸಿಕೊಳ್ಳಬಹುದೆಂಬ ಪ್ರಯತ್ನವೂ ಇಲ್ಲಿ ನಡೆಯುತ್ತಿದೆ. ಈ ವಸ್ತುಸಂಗ್ರಹಾಲಯವು ಉಪನ್ಯಾಸ ಕೊಠಡಿ, ಗ್ರಂಥಾಲಯ, ಪ್ರದರ್ಶನ ಶಾಲೆ, ರಂಗಮಂದಿರ, ರಾಣಿ ಅಬ್ಬಕ್ಕನ ಬದುಕಿನ ಚಿತ್ರಣವನ್ನು ನೀಡುವ ರಾಣಿ ಅಬ್ಬಕ್ಕ ಕಲಾ ಗ್ಯಾಲರಿಯನ್ನು ಹೊಂದಿದೆ. ತೀರಾ ಇತ್ತೀಚೆಗೆ ನಾಣ್ಯಶಾಸ್ತ್ರ ವಿಭಾಗ ಮತ್ತು ತುಳುವಿಗಾಗಿ ಜೀವನವನ್ನು ಮುಡಿಪಾಗಿಟ್ಟ ದಿ.ಎಸ್.ಯು.ಪಣಿಯಾಡಿ ಅವರ ಹೆಸರಿನ ಗ್ರಂಥಾಲಯವು ಸೇರ್ಪಡೆಗೊಂಡಿದೆ. ಇದು ವೈಯಕ್ತಿಕ ಪರಿಶ್ರಮದಿಂದ ಸಾಕಾರಗೊಂಡ ಸಂಗ್ರಹಾಲಯವಾದುದರಿಂದ ಇದನ್ನು ಬೆಳೆಸಲು ಅಗತ್ಯವಾಗಿರುವ ಆರ್ಥಿಕ ನೆರವು ದೊರೆಯುತ್ತಿಲ್ಲ. ಸರಕಾರ ಅಥವಾ ಸಾರ್ವಜನಿಕರು ಸ್ಪಂದಿಸದಿದ್ದರೆ ಅಮೂಲ್ಯವಾದ ಸಂಗ್ರಹದ ಶಿಸ್ತುಬದ್ಧ ಅಧ್ಯಯನಕ್ಕೆ ತೊಡಕುಂಟಾಗುತ್ತದೆ. ಒಂದು ಒಳ್ಳೆಯ ವ್ಯವಸ್ಥಿತ ವಸ್ತುಸಂಗ್ರಹಾಲಯದಲ್ಲಿ ಇರಬೇಕಾದ ಲಕ್ಷಣಗಳನ್ನು ಹೊಂದಿದ್ದರೂ, ಆರ್ಥಿಕ ತೊಡಕಿನಿಂದಾಗಿ ಆಧುನಿಕ ವ್ಯವಸ್ಥೆಗಳನ್ನು ಮಾಡಲಾಗಿಲ್ಲ. ಪ್ರದರ್ಶನಾಲಯ ಹಾಗೂ ಸಂಗ್ರಹಕಾರ್ಯದ ನಿರ್ವಹಣೆಗೆ ಉದ್ಯೋಗಿಗಳ ಕೊರತೆಯಿದೆ. ಪರಾಮರ್ಶನೆಗಾಗಿ ಬರುವವರಿಗೆ ಇದು ತೊಡಕಾಗಿದೆ.

ಪ್ರೊ ಡಿ.ಲಿಂಗಯ್ಯ ಮತ್ತು ಡಾ.ಸಂಧ್ಯಾ ರೆಡ್ಡಿ ಹೇಳುವಂತೆ, ನಮ್ಮ ಸಾಂಸ್ಕೃತಿಕ ಪರಂಪರೆ ಅತ್ಯಂತ ವಿಸ್ತ್ರತ ಮತ್ತು ವೈವಿಧ್ಯಪೂರ್ಣವಾಗಿದೆ. ಇದನ್ನು ಕಾಯ್ದಿಡುವುದು ಒಂದು ಸಂಸ್ಥೆ ಅಥವಾ ಒಬ್ಬ ವ್ಯಕ್ತಿಯಿಂದಾಗುವ ಕೆಲಸವಲ್ಲ. ಯಾರೇ ಆದರೂ ಒಂದು ಪರಿಮಿತಿಯಲ್ಲಷ್ಟೆ ಮಾಡಬಹುದು....ಒಂದು ದೊಡ್ಡ ಕೇಂದ್ರೀಕೃತ ವಸ್ತು ಸಂಗ್ರಹಾಲಯ ಪೂರೈಸಲಾಗದ ಅಗತ್ಯತೆಯನ್ನು ಸ್ಥಳೀಯ ಸಣ್ಣ ವಸ್ತು ಸಂಗ್ರಹಾಲಯಗಳು ಪೂರೈಸಬಲ್ಲವು ಎಂಬುದನ್ನು ಗಮನಿಸಬೇಕಾಗುತ್ತದೆ.[೭]

೨.೩.೫ ಶೋಭಾ ಆಳ್ವ ಸ್ಮಾರಕ ವಸ್ತು ಸಂಗ್ರಹಾಲಯ

ಮೂಡಬಿದ್ರೆಯ ಆಳ್ವಾಸ್ ಎಜುಕೇಷನ್ ಟ್ರಸ್ಟ್‌ನ ನಿರ್ದೇಶಕ ಡಾ. ಮೋಹನ ಆಳ್ವರು ತಮ್ಮ ಕಲಾ ಅಭಿರುಚಿ ಹಾಗೂ ಕಾಳಜಿಯಿಂದ ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡವರು. ದೇಶದ ಮೂಲೆಮೂಲೆಗಳಿಂದ ಸಂಗ್ರಹಿಸಲಾದ ಅತ್ಯಮೂಲ್ಯವಾದ ವಿವಿಧ ಭಂಗಿಯ ಗಣೇಶನ ಕಂಚಿನ ವಿಗ್ರಹಗಳು, ಅಪರೂಪದ ಶಿವನ ನಗ್ನ ಮೂರ್ತಿ, ವಿವಿಧ ಆಕಾರದ ಕಂಚಿನ ಕುದುರೆಗಳು, ಆನೆಗಳು ಹೀಗೆ ನೂರಾರು ಕಲಾತ್ಮಕ ವಸ್ತುಗಳು ಈ ಸಂಗ್ರಹದಲ್ಲಿವೆ. ಇವೆಲ್ಲವನ್ನು ದೇಶದ ಮೂಲೆ ಮೂಲೆಗಳಿಂದ ಸಂಗ್ರಹಿಸಲಾಗಿದೆ. ಇದರಲ್ಲಿ ವಿವಿಧ ಭಂಗಿಯ,

ಗಾತ್ರದ ಗಣೇಶನ ಮೂರ್ತಿಗಳೇ ಎರಡೂವರೆ ಸಾವಿರಕ್ಕಿಂತ ಮೇಲ್ಪಟ್ಟಿವೆ ಎಂದ ಮೇಲೆ ಈ ಕುರಿತಾಗಿ ಹೆಚ್ಚು ಹೇಳುವ ಅಗತ್ಯವಿಲ್ಲ. ಇವೆಲ್ಲದರ ಪ್ರದರ್ಶನ ವ್ಯವಸ್ಥೆ ಪ್ರಗತಿಯಲ್ಲಿದೆ.

೨.೩.೬ ಇತರ ಪ್ರಮುಖ ಸಂಗ್ರಹಾಲಯಗಳು

- ಮಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ವತಿಯಿಂದ ನಡೆಸಲ್ಪಡುವ ಸಂಗ್ರಹಾಲಯವೊಂದಿದೆ. ಇಲ್ಲಿ ಈ ಪ್ರದೇಶದ ಜನಜೀವನ, ಆರಾಧನೆಗೆ ಸಂಬಂಧಪಟ್ಟ ಅಮೂಲ್ಯ ವಸ್ತುಗಳಿವೆ. ಆದರೆ ಇದರ ಬೆಳವಣಿಗೆಗೆ ವಿಪುಲವಾದ ಅವಕಾಶವಿದ್ದರೂ ಇದು ನಿರೀಕ್ಷಿತ ಮಟ್ಟಕ್ಕೆ ತಲುಪಲಿಲ್ಲವೆಂದೇ ಹೇಳಬೇಕಾಗಿದೆ.
- ಮಂಗಳೂರು ವಿಶ್ವವಿದ್ಯಾನಿಲಯದ ದಯಾನಂದ ಪೈ ಮತ್ತು ಸತೀಶ ಪೈಯವರ ಹೆಸರಿನ ಯಕ್ಷಗಾನ ಕೇಂದ್ರದಲ್ಲಿ ತೆಂಕುತಿಟ್ಟು ಮತ್ತು ಬಡಗುತಿಟ್ಟಿನ ಯಕ್ಷಗಾನಕ್ಕೆ ಸಂಬಂಧಿಸಿದ ಅಪೂರ್ವ ಸಂಗ್ರಹವಿದೆ.
- ಇನ್ನು ಉಲ್ಲೇಖಿಸಲೇಬೇಕಾದ ಸಂಗ್ರಹವೆಂದರೆ, ಎಂ.ಜಿ.ಎಂ. ಕಾಲೇಜಿನ ಆವರಣದಲ್ಲಿರುವ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರದ ಸಂಗ್ರಹ. ಇಲ್ಲಿ ವಿವಿಧ ಶಾಸನಗಳು, ವಿಗ್ರಹಗಳು, ಮರದ ಮೂರ್ತಿಗಳು ನಾಗಬಿಂಬ ಮುಂತಾದವುಗಳನ್ನು ಕಾಣಬಹುದು.
- ಜಿಲ್ಲೆಯ ಪ್ರತಿಷ್ಠಿತ, ಪುರಾತನ ವಿದ್ಯಾ ಸಂಸ್ಥೆಗಳಲ್ಲಿ ಒಂದಾದ ಸಂತ ಅಲೋಷಿಯಸ್ ಕಾಲೇಜಿನ ಸಂಗ್ರಹಾಲಯವು ಇತ್ತೀಚೆಗೆ ಹೊಸ ರೂಪ ಪಡೆದು ಆಸಕ್ತರನ್ನು ಆಕರ್ಷಿಸುತ್ತಿದೆ. ೧೯೦೬ರಲ್ಲಿ ಹೊರಬಂದ ಕಾರೊಂದನ್ನು ಒಳಗೊಂಡಿರುವ ಈ ಸಂಗ್ರಹಾಲಯ ಕಾಲೇಜು ಮಟ್ಟದ ಸಂಗ್ರಹಾಲಯಕ್ಕೆ ಮಾದರಿಯಾಗಿದೆ.
- ಇಂದು ಸಂಸ್ಕೃತಿ ಸಂರಕ್ಷಣಾ ಜಾಗೃತಿ ಎಲ್ಲರಲ್ಲೂ ಮೂಡಿದ್ದು, ಜಿಲ್ಲೆಯ ಕೆಲವು ಕಾಲೇಜುಗಳಲ್ಲಿ ಈ ನಿಟ್ಟಿನಲ್ಲಿ ಸ್ಮರಣೀಯ ಕಾರ್ಯವು ನಡೆಯುತ್ತಿದೆ. ಇಲ್ಲಿ ಉಲ್ಲೇಖಿಸಬಹುದಾದ ಹೆಸರುಗಳೆಂದರೆ, ಕಲ್ಯಾಣಪುರದ ಮಿಲಾಗ್ರಿಸ್ ಕಾಲೇಜು (ಪಾದೂರು ಗುರುರಾಜ ಭಟ್ಟರಿಂದ ಸ್ಥಾಪಿಸಲ್ಪಟ್ಟಿದೆ) ಸಂಗ್ರಹಾಲಯ, ಪುತ್ತೂರಿನ ವಿವೇಕಾನಂದ ಕಾಲೇಜಿನ ಇತಿಹಾಸ ಮತ್ತು ಸಂಸ್ಕೃತಿ ಸಂಶೋಧನ ಕೇಂದ್ರದ ಸಂಗ್ರಹ, ಕಾರ್ಕಳದ ಭುವನೇಂದ್ರ ಕಾಲೇಜಿನ ಯಕ್ಷಗಾನ ಸಂಬಂಧಿತ ಸಂಗ್ರಹಾಲಯ, ಮಂಗಳೂರು ವಿಶ್ವವಿದ್ಯಾನಿಲಯದ ಯಕ್ಷಗಾನ ಕೇಂದ್ರದ ಸಂಗ್ರಹಾಲಯ, ಉಡುಪಿಯ ಪೂರ್ಣಪ್ರಜ್ಞಾ ಕಾಲೇಜಿನ ಸಂಗ್ರಹಾಲಯ, ಭಂಡಾರ್ಕಾರ್ಸ್ ಕಾಲೇಜಿನ ಸಂಗ್ರಹಾಲಯ ಮುಂತಾದವುಗಳು.
- ಶ್ರೀ ದುರ್ಗಾಪರಮೇಶ್ವರಿ ಪದವಿಪೂರ್ವ ಕಾಲೇಜಿನಲ್ಲೂ ಕಟೀಲಿನಲ್ಲೂ ಜಾನಪದ ವಸ್ತು ಸಂಗ್ರಹಾಲಯವೊಂದು ೨೦೧೧ರಲ್ಲಿ ಸ್ಥಾಪನೆಗೊಂಡಿದೆ.

- ಮಂಗಳೂರಿನ ಶಕ್ತಿನಗರದಲ್ಲಿರುವ ವಿಶ್ವಕೊಂಕಣಿ ಕೇಂದ್ರದ ರೂವಾರಿಯಾದ ಬಸ್ತಿ ವಾಮನ ಶೆಣೈಯವರ ಪರಿಶ್ರಮದಿಂದ ಜಾನಪದ ವಸ್ತುಸಂಗ್ರಹಾಲಯವೊಂದು ಸ್ಥಾಪನೆಗೊಂಡಿದೆ. ಅಲ್ಲದೆ, ಶಕ್ತಿನಗರದಲ್ಲಿರುವ ಕಲಾಂಗಣದಲ್ಲಿಯೂ ವಸ್ತುಸಂಗ್ರಹಾಲಯದ ಯೋಜನೆ ಸಿದ್ಧಗೊಳ್ಳುತ್ತಿದೆ.
- ಮೂಡಬಿದ್ರೆಯ ಸೋನ್ಸ್ ಫಾರ್ಮಿನ ಕೃಷಿ ಉಪಕರಣಗಳ ಸಂಗ್ರಹಾಲಯ, ೧೯೩೧ರಲ್ಲಿ ಪ್ರಾರಂಭಗೊಂಡ ಮಂಗಳೂರಿನ ಕೆನರಾ ಹೈಯರ್ ಸೆಕೆಂಡರಿ ಸ್ಕೂಲಿನ ಸಂಗ್ರಹಾಲಯ, ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಅನಾಟಮಿ ಸಂಗ್ರಹಾಲಯ ಗಮನ ಸೆಳೆಯುತ್ತವೆ.
- ಸಾಂಸ್ಕೃತಿಕವಾಗಿ ತುಳುನಾಡಿನ ಭಾಗವೆಂದೇ ಪರಿಗಣಿಸಲ್ಪಡುವ ಕಾಸರಗೋಡಿನಲ್ಲೂ ಕೆಲವೊಂದು ಉಲ್ಲೇಖನೀಯ ಸಂಗ್ರಹಾಲಯಗಳಿವೆ. ಕಾಞಂಗಾಡ್ ತಾಲೂಕಿನ ಪಡ್ನಾಕಾಡಿನ ನೆಹರು ಆರ್ಟ್ಸ್ ಆಂಡ್ ಸಾಯನ್ಸ್ ಕಾಲೇಜಿನ ಇತಿಹಾಸ ಮತ್ತು ಜಾನಪದ ವಸ್ತುಸಂಗ್ರಹಾಲಯ, ಕಾಸರಗೋಡು ಸರಕಾರಿ ಕಾಲೇಜಿನ ವಸ್ತುಸಂಗ್ರಹಾಲಯ. ಹಾಗೆಯೇ, ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈಯವರ ಸ್ಮರಣಾರ್ಥ ಆಯೋಜನೆಗೊಳ್ಳುತ್ತಿರುವ ಗಿಳಿವಿಂಡು ಯೋಜನೆಯಡಿಯಲ್ಲಿಯೂ ವ್ಯವಸ್ಥಿತ ವಸ್ತುಸಂಗ್ರಹಾಲಯವೊಂದು ರೂಪುಗೊಳ್ಳುತ್ತಿದೆ.
- ಇದಲ್ಲದೆ, ಜಿಲ್ಲೆಯಲ್ಲಿ ಅನೇಕ ಅಪೂರ್ವ ವಸ್ತುಗಳನ್ನು, ನಾಣ್ಯಗಳನ್ನು ಹೊಂದಿರುವ ಸಂಗ್ರಾಹಕರಿದ್ದಾರೆ. ಇವರಲ್ಲಿ ಮುಖ್ಯವಾಗಿ ಕೇಳಿ ಬರುವ ಹೆಸರುಗಳೆಂದರೆ, ಹಿರಿಯ ವಿದ್ವಾಂಸರಾದ ಶ್ರೀ ಎಂ. ಮುಕುಂದ ಪ್ರಭು, ನಾಣ್ಯತಜ್ಞ ಮೂಡಬಿದ್ರೆಯ ನಿತ್ಯಾನಂದ ಪೈ, ಕಾರ್ಪೊರೇಷನ್ ಬ್ಯಾಂಕ್ ಉದ್ಯೋಗಿ ರಾಘವ ಆಚಾರ್, ಜಯಪ್ರಕಾಶ್ ಮುಂತಾದವರು.
- ಮಂಗಳೂರಿನ ಡಾ. ಮದನ ಮೋಹನ್ ನಾಯ್ಕ್, ಪದ್ಮನಾಭ ದೇವಾಡಿಗ ಮುಂತಾದವರು ತಮ್ಮ ವೈಯಕ್ತಿಕ ನೆಲೆಯಲ್ಲಿ ಬಹಳಷ್ಟು ವಸ್ತುಗಳನ್ನು ಸಂಗ್ರಹಿಸಿದ್ದಾರೆ.
- ಹಸ್ತಶಿಲ್ಪ ಖ್ಯಾತಿಯ ಮಣಿಪಾಲದ ವಿಜಯನಾಥ ಶೆಣೈಯವರ ಪರಿಶ್ರಮದಿಂದ ರೂಪುಗೊಂಡ ಸಂಸ್ಕೃತಿ ಗ್ರಾಮ ಸಾಂಸ್ಕೃತಿಕ ಕ್ಷೇತ್ರಕ್ಕೆ ಈ ಜಿಲ್ಲೆಯ ಅದ್ಭುತ ಕೊಡುಗೆಯಾಗಿದೆ. ಹಿಂದಿನ ವೈಭವೋಪೇತ ಗುತ್ತಿನ ಮನೆಗಳನ್ನು, ಅರಮನೆಗಳನ್ನು ಯಥಾವತ್ತಾಗಿ ಇಲ್ಲಿ ಪುನರ್‌ನಿರ್ಮಿಸಲಾಗಿದೆ.
- ಮಂಗಳೂರಿನ ಪಿಲಿಕುಲದಲ್ಲಿ ಬಯಲು ವಸ್ತುಸಂಗ್ರಹಾಲಯದ ಯೋಜನೆ ಪ್ರಗತಿಯಲ್ಲಿದೆ. ಇಲ್ಲಿನ ಗುತ್ತಿನ ಮನೆ ಮತ್ತು ಪರಿಕರಗಳು ಆಕರ್ಷಣೀಯವಾಗಿದೆ.
- ಕಾರ್ಕಳದ ಕೋಟಿ–ಚೆನ್ನಯ ಥೀಮ್ ಪಾರ್ಕ್ ನಲ್ಲಿ ವ್ಯವಸ್ಥಿತವಾದ ವಸ್ತುಸಂಗ್ರಹಾಲಯಕ್ಕೆ ಪೂರಕವಾದ ಎಲ್ಲಾ ಅವಕಾಶವಿದೆ. ಕೋಟಿ ಚೆನ್ನಯರ ಬದುಕಿಗೆ ಸಂಬಂದಪಟ್ಟ ತೈಲಚಿತ್ರಗಳು ಇಲ್ಲಿ ಗಮನಸೆಳೆಯುತ್ತದೆ.

ಹೀಗೆ ಸಂಗ್ರಹಾಲಯಗಳಿಗೆ, ಸಂಗ್ರಾಹಕರಿಗೆ ಇಲ್ಲಿ ಕೊರತೆಯಿಲ್ಲ. ಆದರೆ ಈ ಸಂಗ್ರಹಾಲಯಗಳು ಹೇಗೆ ಕಾರ್ಯ ನಿರ್ವಹಿಸುತ್ತಿವೆ ಎಂಬುವುದು ಇಲ್ಲಿ ಮುಖ್ಯವಾಗುತ್ತದೆ. ಯಾವುದೇ ಸಂಗ್ರಹಾಲಯದ ಅದರ ವಿನ್ಯಾಸದಲ್ಲಿ ಐದು ಮುಖ್ಯ ಅಂಶಗಳನ್ನು ಗಮನಿಸಬೇಕಾಗುತ್ತದೆ. (೧) ಸಾಕಷ್ಟು ಹಣವುಳ್ಳ ಉತ್ತಮ ಆಡಳಿತ, (೨) ವಸ್ತು ಸಂಗ್ರಹ, (೩) ನೌಕರ ವೃಂದ, (೪) ಬೇಕಾದಂತಹ ಕಟ್ಟಡ ವ್ಯವಸ್ಥೆ, (೫) ಬುದ್ಧಿ ಜೀವಿಗಳಿಗೂ, ವಿದ್ವಾಂಸರಿಗೂ ಅನುಕೂಲಕರವಾದ ಸೇವೆಯನ್ನು ನೀಡುವಂತಹ ಕಾರ್ಯನೀತಿಗಳು.[೮]

ಈ ಅಂಶಗಳನ್ನು ಗಮನಿಸಿದಾಗ ಇಲ್ಲಿನ ಎಲ್ಲಾ ಸಂಗ್ರಹಾಲಯಗಳು ಒಂದಿಲ್ಲೊಂದು ನ್ಯೂನತೆಯಿಂದ ಸೊರಗುತ್ತಿವೆ. ವಸ್ತುಸಂಗ್ರಹಾಲಯಕ್ಕೂ, ಜನತೆಗೂ ನಡುವೆ ಇರುವ ಉತ್ತಮ ಸಂಪರ್ಕ ಸಾಧನವೆಂದರೆ ವಸ್ತುಪ್ರದರ್ಶನ ಶಾಲೆ. ಅಲ್ಲಿನ ಪ್ರತಿ ವಸ್ತುವೂ ಪ್ರೇಕ್ಷಕರಿಗೊಂದು ಸಂದೇಶವನ್ನೀಯುತ್ತದೆ. ಆದರೆ ಪ್ರದರ್ಶನಕ್ಕಿಟ್ಟ ವಸ್ತುವು ಎಷ್ಟೇ ಉತ್ತಮ ಕಲಾ ಮಟ್ಟದ್ದಾಗಿದ್ದರೂ, ಅದನ್ನು ವ್ಯವಸ್ಥಿತ ರೀತಿಯಲ್ಲಿ ಅರ್ಥಪೂರ್ಣವಾಗಿ ಅಳವಡಿಸದಿದ್ದಲ್ಲಿ ಪ್ರೇಕ್ಷಕನಲ್ಲಿ ಏನೊಂದೂ ಪರಿಣಾಮವಾಗಲಾರದು. ಪ್ರತಿಯೊಬ್ಬನೂ ವಸ್ತುಗಳ ಹಿನ್ನೆಲೆಯ ಬಗ್ಗೆ ಅರಿವಿರುವವನೆಂದು ನಿರೀಕ್ಷಿಸುವುದು ಸಾಧ್ಯವಿಲ್ಲವಾದುದರಿಂದ ವಸ್ತುಗಳು ತಾವೇ ತಮ್ಮ ಕಥೆಯನ್ನು ಬಿತ್ತರಿಸುವಂತೆ ಜೋಡಿಸಬೇಕು. ವಸ್ತುಗಳ ಆಂತರಿಕ ಮತ್ತು ಬಾಹ್ಯ ಗುಣಗಳೆರಡೂ ನಷ್ಟವಾಗಲು ಬಿಡದೆ ಅವು ಸಂತೋಷವನ್ನು ಶಿಕ್ಷಣವನ್ನು ನೀಡುವಂತೆ ಅವನ್ನು ಪ್ರದರ್ಶಿಸಬೇಕಾಗುತ್ತದೆ.

ಈ ವಿಚಾರವಾಗಿ ವಿಸ್ತೃತ ಅಧ್ಯಯನ ನಡೆಸಿರುವ ಡಾ. ಮೋರ್ಲೆ ಎಂಬಾಕೆಯು ಅತ್ಯಂತ ಸುಂದರವಾದ ಹೇಳಿಕೆಯನ್ನಿತ್ತಿದ್ದಾಳೆ–ಶೈಕ್ಷಣಿಕ ದೃಷ್ಟಿಯಿಂದ ವಸ್ತುಪ್ರದರ್ಶನವನ್ನು ಏರ್ಪಡಿಸುವಾಗ ಬಹಳ ಎಚ್ಚರಿಕೆಯಿಂದ ನಿಯೋಜಿತಗೊಳಿಸಬೇಕಾಗುತ್ತದೆ. ಅದು ಒಂದು ಭಾಷಣವನ್ನು ಏರ್ಪಡಿಸಿದಂತೆ ಅಥವಾ ಗ್ರಂಥವನ್ನು ರಚಿಸಿದಂತಾಗಬೇಕಾಗುತ್ತದೆ. ಆದರೆ, ನೇರವಾದ ದೃಶ್ಯಸಂದೇಶಕ್ಕೆ ಆಧುನಿಕ ಸಂಗ್ರಹಾಲಯದಲ್ಲಿ ಎರಡೂ ಕ್ಷೇತ್ರಗಳನ್ನೂ, ಎಂದರೆ ಪ್ರದರ್ಶನ ರೀತಿ ನೀತಿಗಳು ಮತ್ತು ಶೈಕ್ಷಣಿಕ ನಿಯೋಜನೆಗಳೆರಡನ್ನೂ ಒಂದು ಉದ್ದೇಶಕ್ಕಾಗಿ ಕೂಡಿಸಬೇಕಾಗುತ್ತದೆ.[೯]

ಜಿಲ್ಲೆಯ ವಿವಿಧ ವಸ್ತು ಸಂಗ್ರಹಾಲಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಕಂಡುಕೊಂಡ ಮುಖ್ಯವಾದ ನ್ಯೂನತೆಗಳನ್ನು ಇಲ್ಲಿ ಪಟ್ಟಿ ಮಾಡಲಾಗಿದೆ:

ಕರಾವಳಿ ಕರ್ನಾಟಕದಲ್ಲಿರುವ ವಸ್ತು ಸಂಗ್ರಹಾಲಯಗಳ ಉಸ್ತುವಾರಿ ನೋಡಿಕೊಳ್ಳಲು ವ್ಯವಸ್ಥಿತ ಆಡಳಿತ ಮಂಡಳಿ ಇಲ್ಲ. ಹೆಚ್ಚಿನವುಗಳಲ್ಲಿ ವಸ್ತುಗಳನ್ನು ವ್ಯವಸ್ಥಿತವಾಗಿ ವರ್ಗೀಕರಿಸಿ ಜೋಡಿಸಲಾಗಿಲ್ಲ; ಸಾಮಾನ್ಯ ಅಂದರೆ ಎಲ್ಲಾ ವರ್ಗದ ವಸ್ತುಗಳನ್ನೂ ಒಟ್ಟಿಗೆ ಜೋಡಿಸಿಡಲಾಗಿದೆ. ಅಲ್ಲದೆ, ನಿರ್ದಿಷ್ಟ ಗುರಿ ಹೊಂದಿದ ವಸ್ತುಸಂಗ್ರಹಾಲಯಗಳು ಇಲ್ಲ.

ವಸ್ತು ಸಂಗ್ರಹಾಲಯಗಳು ಕೇವಲ ಪ್ರದರ್ಶನ ತಾಣವಾಗಿ ಮಾತ್ರ ಕಾರ್ಯ ನಿರ್ವಹಿಸುತ್ತಿದೆ. ಇದಕ್ಕೆ ಪೂರಕವಾದ ಅಧ್ಯಯನ, ಕಾರ್ಯಾಗಾರ, ವಿಚಾರಗೋಷ್ಠಿಗಳು ನಡೆಯುತ್ತಿಲ್ಲ. ಪುಸ್ತಕ ಪ್ರಕಟಣೆ ಇಲ್ಲ. ವಸ್ತು

ಸಂಗ್ರಹಾಲಯದ ಕುರಿತು ತಿಳಿಸುವ ವಿಧಾನ ಶಾಸ್ತ್ರ ಇಲ್ಲದೆ ಇರುವುದು. ಪ್ರದರ್ಶನ ಶಾಲೆಯ ವ್ಯವಸ್ಥೆ ತೀರಾ ಕಳಪೆಯಾಗಿದೆ. ಒಂದು ಗೋದಾಮಿನ ಮಾದರಿಯಲ್ಲಿ ವಸ್ತುಗಳನ್ನು ಇಡಲಾಗಿದೆ. ವಸ್ತುಗಳ ಕುರಿತಾದ ಮಾಹಿತಿ, ವಿವರಣೆ ಲಭ್ಯವಿಲ್ಲ.

ವಸ್ತು ಸಂಗ್ರಹಾಲಯಗಳಲ್ಲಿ ಆಧುನಿಕತೆಯ ಸೋಂಕಿಲ್ಲ. ಅಂದರೆ ಆಧುನಿಕ ತಾಂತ್ರಿಕತೆ, ಪ್ರದರ್ಶನ ವ್ಯವಸ್ಥೆ, ಬೆಳಕಿನ ವ್ಯವಸ್ಥೆ ಕಂಡು ಬರುವುದಿಲ್ಲ. ಹೆಚ್ಚಿನ ಎಲ್ಲಾ ವಸ್ತುಸಂಗ್ರಹಾಲಯಗಳು, ಇನ್ನಿತರ ಉದ್ದೇಶಕ್ಕಾಗಿ ಕಟ್ಟಲ್ಪಟ್ಟ ಕಟ್ಟಡಗಳನ್ನೆ ಹೊಂದಿದೆ. ಪ್ರವಾಸಿಗರಿಗೆ/ಅಧ್ಯಯನಾಸಕ್ತರಿಗೆ ಬೇಕಾದ ಪೂರಕ ಅನುಕೂಲ (ಪಾರ್ಕಿಂಗ್, ಮಾಹಿತಿ ನೀಡುವಿಕೆ, ತಾತ್ಕಾಲಿಕ ವಸತಿ) ವ್ಯವಸ್ಥೆಗಳಿಲ್ಲ.

ಇಲ್ಲಿನ ವಸ್ತು ಸಂಗ್ರಹಾಲಯಗಳಲ್ಲಿ ವಸ್ತುಪರೀಕ್ಷೆಯ ಪ್ರಯೋಗಶಾಲೆ ಇಲ್ಲ. ಹೆಚ್ಚುವರಿ ವಸ್ತುಗಳನ್ನಿಡಲು ಗೋದಾಮುಗಳಿಲ್ಲ. ವಸ್ತುಗಳನ್ನು ಸುಸ್ಥಿತಿಯಲ್ಲಿಡಲು ಕಾರ್ಯನಿರ್ವಹಣಾಗಾರವಿಲ್ಲ. ಇನ್ನಿತರ (ವಿದೇಶಿ) ವ್ಯವಸ್ಥಿತ ಸಂಗ್ರಹಾಲಯಕ್ಕೆ ಹೋಲಿಸಿದರೆ ಬೆಳಕಿನ ವ್ಯವಸ್ಥೆ ಸಾಲದು. ವಸ್ತು ಸಂಗ್ರಹಾಲಯದ ಹಿನ್ನಡೆಗೆ ಮುಖ್ಯವಾಗಿ ಆರ್ಥಿಕ ಸಂಪನ್ಮೂಲದ ಕೊರತೆ ಇದೆ. ಸ್ಥಳಭಾವ ಕಂಡು ಬರುತ್ತದೆ. ಸರಕಾರಿ ಸಂಗ್ರಹಾಲಯಗಳಲ್ಲಿ ನಿರ್ವಹಣೆಯ ಕೊರತೆ ಕಂಡು ಬರುತ್ತದೆ.

ಜಗತ್ತಿನ ವಸ್ತು ಸಂಗ್ರಹಾಲಯಗಳ ಸ್ಥೂಲ ಅಧ್ಯಯನವನ್ನು ಈ ವಿಭಾಗದಲ್ಲಿ ಮಾಡಲಾಗಿದೆ. ವಿದೇಶದಲ್ಲಿ ವಸ್ತು ಸಂಗ್ರಹಾಲಯಕ್ಕೆ ನೀಡಿದ ಮಹತ್ವವನ್ನು ಭಾರತದಲ್ಲಿ ನೀಡಿರುವುದಿಲ್ಲ. ಇಲ್ಲಿ ವಿಪುಲವಾದ ಅವಕಾಶಗಳಿವೆಯಾದರೂ ಒಂದಲ್ಲ ಒಂದು ನಿಟ್ಟಿನಲ್ಲಿ ಇಲ್ಲಿನ ವಸ್ತು ಸಂಗ್ರಹಾಲಯಗಳು ಕೊರತೆಯನ್ನು ಎದುರಿಸುತ್ತಿವೆ. ವಸ್ತು ಸಂಗ್ರಹಾಲಯದ ನೈಜ ಸಿದ್ಧಾಂತದಡಿಯಲ್ಲಿ ವೈಜ್ಞಾನಿಕವಾದ, ವ್ಯವಸ್ಥಿತವಾದ ವಸ್ತು ಸಂಗ್ರಹಾಲಯಗಳು ಇಲ್ಲಿ ಇಲ್ಲ. ಕರಾವಳಿ ಕರ್ನಾಟಕದ ವಸ್ತು ಸಂಗ್ರಹಾಲಯಗಳು ಸಹ ಇದಕ್ಕೆ ಹೊರತಲ್ಲ. ಈ ಹಿನ್ನೆಲೆಯಲ್ಲಿ ಕರಾವಳಿ ಕರ್ನಾಟಕದ ವಸ್ತುಸಂಗ್ರಹಾಲಯಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ವಸ್ತು ಸಂಗ್ರಹಾಲಯದ ಸ್ವರೂಪ, ವಿಧಾನಗಳ ಕುರಿತ ಗಂಭೀರವಾದ ಅಧ್ಯಯನಾತ್ಮಕ ಸಂಗ್ರಹಾಲಯಗಳು ಇಲ್ಲ. ಹಾಗಾಗಿ ವಸ್ತು ಸಂಗ್ರಹಾಲಯಗಳನ್ನು ಆಧುನಿಕ ವಿಧಾನದಲ್ಲಿ ವೈಜ್ಞಾನಿಕವಾಗಿ ಮರುಸಂಯೋಜಿಸುವ ಅಗತ್ಯ ಇದೆ. ವ್ಯವಸ್ಥಿತವಾಗಿ, ಅಚ್ಚುಕಟ್ಟಾಗಿ ವಸ್ತುಗಳನ್ನು ವರ್ಗೀಕರಿಸಿ ಪೂರಕ ಅಧ್ಯಯನ, ಸಂಶೋಧನೆ ನಡೆಸಿ, ಅಧುನಿಕತೆಯ ಮೆರಗನ್ನು ನೀಡಿ ಒಂದು ಸಾಂಸ್ಕೃತಿಕ ತಾಣವಾಗಿ ವಿಶ್ವವಿದ್ಯಾನಿಲಯ ಮಾದರಿಯಲ್ಲಿ ರೂಪುಗೊಳಿಸಬೇಕು.

ಕೊನೆ ಟಿಪ್ಪಣಿ

[೧] ಶಿವರಾಮು ವ.ನಂ., *ಜಾನಪದ ವಸ್ತು ಸಂಗ್ರಹಾಲಯಗಳು*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

[೨]ಲಿಂಗಯ್ಯ ಡಿ. ಮತ್ತು ಡಾ. ಸಂಧ್ಯಾ ರೆಡ್ಡಿ, *ಜಾನಪದ ವಸ್ತು ಸಂಗ್ರಹಾಲಯ ಮತ್ತು ಸಂಘ ಸಂಸ್ಥೆಗಳು*, ಜಾನಪದ:ಸ್ವರೂಪ ಮತ್ತುಸಾಹಿತ್ಯ, ಕನ್ನಡ ಸಾಹಿತ್ಯ ಪರಿಶತ್ತು, ಬೆಂಗಳೂರು, ಪುಟ ೧೨೧–೧೨೨.

[೩] ಗೌರಮ್ಮ ಹೆಚ್., '*ಜಾನಪದ ವಸ್ತುಸಂಗ್ರಹಾಲಯದ ಅವಲೋಕನ*', ಜಾನಪದ ಜಗತ್ತು, ಸಂಪುಟ೪೫, ಸಂಚಿಕೆ ೧ ಅಕ್ಟೊಬರ್ ೨೦೧೬–ಮಾರ್ಚ್ ೧೭, ಪುಟ: ೩೫.

[೪] ನಿಗಮ್ ಎಮ್.ಎಲ್., *ವಸ್ತುಸಂಗ್ರಹಾಲಯ ಶಾಸ್ತ್ರದ ಮೂಲತತ್ವಗಳು*, ಅನುವಾದ: ಬಿ.ಎಸ್ ಸಣ್ಣಯ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೮೪.

[೫] ಅಂತರ್ಜಾಲ ಮಾಹಿತಿ: ರೊಮಿಲ ಥಾಪರ್, ೨೦೧೪.

[೬] ನಿಗಮ್ ಎಮ್.ಎಲ್., *ವಸ್ತುಸಂಗ್ರಹಾಲಯ ಶಾಸ್ತ್ರದ ಮೂಲತತ್ವಗಳು*, ಅನುವಾದ: ಬಿ.ಎಸ್ ಸಣ್ಣಯ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೮೪.

[೭] ನಾಯಕ ಹಾ.ಮ, *ಜಾನಪದ ಸ್ವರೂಪ*, ೧೯೯೭.

[೮] ನಿಗಮ್ ಎಮ್.ಎಲ್., *ವಸ್ತುಸಂಗ್ರಹಾಲಯ ಶಾಸ್ತ್ರದ ಮೂಲತತ್ವಗಳು*, ಅನುವಾದ: ಬಿ.ಎಸ್ ಸಣ್ಣಯ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೮೪.

[೯] ನಿಗಮ್ ಎಮ್.ಎಲ್, *ವಸ್ತುಸಂಗ್ರಹಾಲಯ ಶಾಸ್ತ್ರದ ಮೂಲತತ್ವಗಳು*, ಅನುವಾದ: ಬಿ.ಎಸ್ ಸಣ್ಣಯ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೮೪ (ಮುನ್ನುಡಿಯಲ್ಲಿ).

ಅಧ್ಯಾಯ ಮೂರು

ಕೃಷಿ ಬದುಕು ಮತ್ತು ಇತಿಹಾಸ

೩.೧ ಕೃಷಿ ಪರಂಪರೆ– ನಂಬಿಕೆ– ಐತಿಹ್ಯ

ಹಳೆ ಶಿಲಾಯುಗದ ಕಾಲದಲ್ಲಿ (ಕ್ರಿಸ್ತಪೂರ್ವ ೫೦,೦೦೦– ಕ್ರಿಸ್ತಪೂರ್ವ ೧೫,೦೦೦) ಆಹಾರ ಸಂಗ್ರಹಣೆಗಾಗಿ ಕಾಡುಮೇಡು ಅಲೆಯುತ್ತಿದ್ದ ಮಾನವ ನೂತನ ಶಿಲಾಯುಗದ ಕೊನೆಯ ಘಟ್ಟದಲ್ಲಿ (ಕ್ರಿಸ್ತಪೂರ್ವ ೧೫೦೦೦ – ಕ್ರಿಸ್ತಪೂರ್ವ ೫೦೦೦) ಒಂದು ಕಡೆ ನೆಲೆ ನಿಂತು ಬದುಕುವುದನ್ನು ರೂಢಿಸಿಕೊಂಡ. ಅಂದರೆ, ಮೂಲತ: ಮಾನವನ ಬದುಕು ಅಸ್ತವ್ಯಸ್ತವಾಗಿದ್ದ ಸ್ಥಿತಿ ಒಂದು ಸರಳ ರೇಖಾತ್ಮಕವಾದ ವ್ಯವಸ್ಥೆಯಲ್ಲಿ ರೂಪುಗೊಂಡಿತು. ಕಾಡುಮೇಡುಗಳಲ್ಲಿ ಅಲೆದಾಡಿ ಗೆಡ್ಡೆಗೆಣಸುಗಳನ್ನು ಸಂಗ್ರಹಿಸಿ, ಬೇಟೆಯಾಡಿ ಹೊಟ್ಟೆ ಹೊರೆಯುತ್ತಿದ್ದ ಮನುಷ್ಯ ಕ್ರಮೇಣ ನಿರ್ದಿಷ್ಟ ಸ್ಥಳದಲ್ಲಿ ನೆಲೆನಿಂತು ಆಹಾರ ಉತ್ಪಾದನಾ ಹಂತಕ್ಕೆ ತಲುಪಿದ. ಇದರೊಂದಿಗೆ ಒಂದು ಕುಟುಂಬ ಜೀವನದ ಕಲ್ಪನೆಯು ಅವನಲ್ಲಿ ಜಾಗ್ರತವಾಯಿತು. ಗುಡಿಸಲುಗಳ ನಿರ್ಮಾಣ, ಕೃಷಿ, ಬೇಟೆ ಸಂಬಂಧಿತ ವಸ್ತುಗಳ ತಯಾರಿ, ಕಲ್ಲು, ಮರ ಬಿದಿರು, ಎಲುಬುಗಳನ್ನೆ ಮೊದಲ್ಗೊಂಡು ಆಯುಧ ಇತ್ಯಾದಿಗಳನ್ನು ಸಿದ್ಧಪಡಿಸತೊಡಗಿದ. ಕೃಷಿಯ ಮೂಲಭೂತ ಅವಶ್ಯಕತೆಗಳಾಗಿ ಸಾಕುಪ್ರಾಣಿಗಳಾದ ಎಮ್ಮೆ, ಕೋಣ, ಎತ್ತು, ದನ, ಕೋಳಿ ಮುಂತಾದುವುಗಳು ಕೃಷಿ ಬದುಕಿನ ಭಾಗವಾಗಿ ಕಾಣಿಸಿಕೊಂಡವು. ನೇಗಿಲು, ನೊಗ, ಮೊದಲಾದುವುಗಳು ಆವಿಷ್ಕಾರಗೊಂಡವು. ನಿಸರ್ಗದ ಭಾಗವಾಗಿ ಬದುಕುತ್ತಿದ್ದ ಮಾನವ ಯಾವಾಗ ಪ್ರಕೃತಿಯಿಂದ ಹೊರಬಂದು ತನ್ನ ಅಸ್ತಿತ್ವವನ್ನು ಕಂಡುಕೊಳ್ಳುವುದಕ್ಕೆ ಪ್ರಾರಂಭಿಸಿದಂದಿನಿಂದ ಮಾನವ ನಿಸರ್ಗದ ಜೊತೆಗೆ ಒಂದು ಬಗೆಯ ಸಂಘರ್ಷದ ಬದುಕನ್ನು ಕಟ್ಟುವುದು ಅನಿವಾರ್ಯವಾಯಿತು. ಪಂಜುರ್ಲಿ ಪಾಡ್ದನದಲ್ಲಿ ಉಲ್ಲೇಖಗೊಂಡಿರುವಂತೆ ಪ್ರಕೃತಿ ಮತ್ತು ಮನುಷ್ಯನ ಸಂಘರ್ಷ ಸ್ಪಷ್ಟವಾಗಿ ಗುರುತಿಸಬಹುದು. ಬೇಸಾಯ ಮಾಡುತ್ತಿದ್ದ ಬಲ್ಲಾಳನ ಗದ್ದೆಗೆ ಕಾಡುಹಂದಿಯ ದಾಳಿಯಾಗುವುದು, ಶ್ರಮವಹಿಸಿ ಬೆಳೆಸಿದ ಭತ್ತದ ಕೃಷಿ ಕಾಡು ಪ್ರಾಣಿಗಳಿಗೆ ಬಲಿಯಾಗುವುದು, ಇದನ್ನು ಕಂಡಂತಹ ಬಲ್ಲಾಳನು ಹಂದಿಯನ್ನು ಕೊಲ್ಲುವುದರ ಉಲ್ಲೇಖ ಪಂಜುರ್ಲಿ ಪಾಡ್ದನದಲ್ಲಿದೆ. ಪಾಡ್ದನಗಳಲ್ಲಿ ಕೊಲ್ಲುವ ಸಂದರ್ಭದಲ್ಲಿ ಆಯುಧಗಳಾಗಿ ಬಿಲ್ಲುಬಾಣಗಳನ್ನು ಬಳಸಿದರೆ, ಇನ್ನು ಕೆಲವು ಪಾಡ್ದನಗಳಲ್ಲಿ ಬಂದೂಕಿನ ಉಲ್ಲೇಖವು ಕಂಡುಬರುತ್ತದೆ. ಹಂದಿಯ ದಾಳಿಯಿಂದ ಕಂಗೆಟ್ಟ ಮಾನವ ಒಂದು ಬಗೆಯ ಭಯ, ಆತಂಕಕ್ಕೆ ಒಳಗಾದ. ಈ ರೀತಿ ಆತಂಕಕ್ಕೆ ಒಳಗಾದ ಮನುಷ್ಯ ತನಗೆ, ತನ್ನ ಬೇಸಾಯಕ್ಕೆ ತೊಂದರೆಯನ್ನು ಕೊಡುತ್ತಿದ್ದ ಪ್ರಾಣಿಗಳನ್ನು ಆರಾಧಿಸುವುದಕ್ಕೆ ಆರಂಭಿಸಿದ. 'ಕಾಡು' ಮತ್ತು 'ನಾಡು' ಇದು ಮಾನವ ನಾಗರಿಕತೆಯ ಕಡೆಗೆ ಹೆಜ್ಜೆ ಹಾಕಿದ ಕಥನವನ್ನು ಖಚಿತವಾಗಿ ದಾಖಲಿಸುತ್ತದೆ. ಕಾಡು ಸ್ವಾಭಾವಿಕವಾಗಿರುವಂತಹದ್ದು. ಸ್ವಾಭಾವಿಕವಾಗಿ ಸ್ವಚ್ಛಂಧವಾಗಿ ಬದುಕುತ್ತಿದ್ದ ಮಾನವನು ಈ ಪ್ರಕೃತಿಯನ್ನು ತನ್ನ ಬುದ್ಧಿಮತ್ತೆಯಿಂದ ಜಗತ್ತಿನ ಉಳಿದ

ಜೀವಜಂತುಗಳಿಗಿಂತ ಭಿನ್ನ ಎನ್ನುವುದನ್ನು ತನ್ನ ನಡವಳಿಕೆಯಲ್ಲಿ, ಆಚರಣೆಯಲ್ಲಿ, ಬದುಕಿನ ರೀತಿ–ನೀತಿಯಲ್ಲಿ ಕಂಡುಕೊಳ್ಳುವುದಕ್ಕೆ ಪ್ರಯತ್ನಿಸಿದ. ಹೀಗೆ ಪ್ರಕೃತಿಯಿಂದ ಪ್ರತ್ಯೇಕತೆಯನ್ನು ಸಾಧಿಸುವ ನೆಲೆಯಲ್ಲಿಯೆ ಸಂಸ್ಕೃತಿ ರೂಪುಗೊಳ್ಳುತ್ತದೆ. ಅಂದರೆ, ಪ್ರಕೃತಿಯೆಂದರೆ 'ಕಾಡು'; ಸ್ವಾಭವಿಕವಾಗಿರುವಂತಹ ಪ್ರಾಪಂಚಿಕ ಜಗತ್ತು ಮತ್ತು ಮಾನವ ತನ್ನ ಸ್ವಬುದ್ಧಿಮತ್ತೆಯಿಂದ ಸೃಜಿಸಿಕೊಳ್ಳುವ ಅಥವಾ ನಿರ್ಮಿಸುವ ಜಗತ್ತು. ಇದನ್ನೆ 'ನಾಡು' ಎಂದು ಕರೆಯುತ್ತೇವೆ. ಈ ಕಾಡುತನದಿಂದ ಮಾನವ ಬೇರ್ಪಡೆಗೊಂಡು ತನ್ನತನವನ್ನು (identity) ಸ್ಥಾಪಿಸಿಕೊಳ್ಳುವಾಗ ಸಂಘರ್ಷವನ್ನು ಪ್ರಕೃತಿ ಜೊತೆ ಮಾನವ ಎದುರಿಸಿಕೊಂಡು ಬಂದ. ಇದು ಕರಾವಳಿ ಕರ್ನಾಟಕಕ್ಕೂ ಅನ್ವಯಿಸುತ್ತದೆ. ಇಲ್ಲಿಯ ಕೃಷಿ ಪ್ರಧಾನ ಆಚರಣೆ, ಆರಾಧನೆಗಳಲ್ಲಿ, ಮತ್ತು ಮೌಖಿಕ ಮತ್ತು ಭೌತಿಕ ವಸ್ತುಪರಿಕರಗಳಲ್ಲಿ ಈ ಬಗೆಯ ಸಂಘರ್ಷವನ್ನು ತಿಳಿಸುವ ಆಕರಗಳು ವಿಪುಲವಾಗಿ ಸಿಗುತ್ತವೆ. ಪ್ರಕೃತಿಯ ಜೊತೆ ಹೋರಾಡುವುದರೊಂದಿಗೆ ಅನುಸಂಧಾನದ ಮಾರ್ಗವನ್ನು ಮಾನವ ಅನುಸರಿಸಿಕೊಂಡು ಬಂದಿದ್ದಾನೆ.

ಕರಾವಳಿ ಕರ್ನಾಟಕದ ಮುಖ್ಯ ಜೀವನಾಧಾರ ವೃತ್ತಿ – ಭತ್ತದ ಬೇಸಾಯ. ದಕ್ಷಿಣ ಕನ್ನಡದ ಈ ಪ್ರದೇಶವು ಅಧಿಕ ಮಳೆ ಬೀಳುವ ಪ್ರದೇಶವಾಗಿತ್ತು. ಇಲ್ಲಿಯ ಭೌಗೋಳಿಕ ಪರಿಸರವು ಭತ್ತದ ಬೇಸಾಯಕ್ಕೆ ಅನುಕೂಲಕರವಾಗಿರಲಿಲ್ಲ. ಬೆಟ್ಟ ಗುಡ್ಡಗಳನ್ನು, ಕಡಿದಾದ ಕಣಿವೆಗಳನ್ನು ಹದಮಾಡಿ ಬೆಟ್ಟು ಬೈಲುಗಳೆಂಬ ವಿಂಗಡನೆಯನ್ನು ಮಾಡಿ ಭತ್ತದ ಪೈರನ್ನು ವರ್ಷದಲ್ಲಿ ಕನಿಷ್ಠ ಮೂರು ಸಾರಿ ಬೆಳೆದು ಫಸಲು ತೆಗೆಯುವ ಕಾಯಕವನ್ನೇ ಮುಖ್ಯ ವೃತ್ತಿಯನ್ನಾಗಿಸಿಕೊಂಡ. ಗದ್ದೆಗಳನ್ನು ಬೈಲು, ಮಜಲು, ಬೆಟ್ಟು ಗದ್ದೆಗಳೆಂದು ವಿಭಜಿಸಲಾಗಿತ್ತು. ಬುಕಾನನ್ (೧೮೦೭) ತಮ್ಮ ಗ್ರಂಥದಲ್ಲಿ ಈ ರೀತಿಯ ವಿಭಜನೆಯ ಕುರಿತು ಮಾಹಿತಿ ನೀಡಿದ್ದಾರೆ.[೧]

೩.೧.೧ ವ್ಯವಸಾಯ ಮತ್ತು ನೀರಾವರಿ

'ಎಣೇಲ್ಗ್ ಮೇಲ್ ನೀರ್, ಸುಗ್ಗಿಗ್ ಒಡ್ಡನೀರ್, ಬೊಕ್ಕ ಕೊಳಕೆಗ್ ಅಡಿನೀರ್' ಎಂಬ ಮಾತೊಂದು ಅರ್ಥಗರ್ಭಿತವಾಗಿ ಮೂಡಿ ಬಂದಿದೆ. ಈ ಬೆಳೆಗಳನ್ನು ಪರಿಸರದ ಬದಲಾವಣೆಯನ್ನು ಅನುಸರಿಸಿಕೊಂಡು ಬೆಳೆಯಲಾಗುತ್ತಿತ್ತು. ಮುಖ್ಯವಾಗಿ ಭತ್ತದ ಬೆಳೆಯನ್ನು ಎಣೆಲು (ಕಾರ್ತಿ ಬೆಳೆ), ಸುಗ್ಗಿ ಮತ್ತು ಕೊಳಕೆ ಬೆಳೆಗಳೆಂದು ಗುರುತಿಸಬಹುದಾಗಿದೆ. ಬೇಸಾಯದ ಕೆಲಸದಲ್ಲಿ ನೀರಿನ ಅವಶ್ಯಕತೆ ಇದ್ದು. ಎಣೇಲು ಬೆಳೆಗೆ 'ತರೆ' ನೀರು (ಆಕಾಶದಿಂದ ಬಿದ್ದ ಮಳೆ ನೀರು), ಸುಗ್ಗಿಗೆ 'ಆಜ'ನೀರು (ಆಗಾಗ ನೀರು ಬಿಟ್ಟು ಒದ್ದೆ ಮಾಡಿದರೆ ಸಾಕು), ಮತ್ತು ಕೊಳಕೆಗೆ 'ಅಡಿ'ನೀರು (ಬುಡದಲ್ಲಿ ಸದಾ ನೀರಿರಬೇಕು) ಬೇಕು. ಆದುದರಿಂದ ಎಣೇಲು ಬೆಳೆಗೆ ನೀರಿನ ಕೊರತೆ ಇಲ್ಲ, ಸುಗ್ಗಿಗೆ ಹರಿಯುವ ನೀರು ಇತ್ತು ಮತ್ತು ಕೊಳಕೆ ಬೆಳೆಗೆ ನೀರಿನ ಮೂಲಗಳಿಂದ ನೀರು ಪಡೆಯುವ ಸಾಹಸ ಮಾಡಬೇಕಾಗಿತ್ತು. ಅದಕ್ಕೆ ಇರಬೇಕು 'ಎಣೇಳ್ ಸೂಳೆ, ಸುಗ್ಗಿ ಮದಿಮಾಳ್, ಕೊಳಕೆ ಪೆದ್ಮೆದಿ' ಎಂಬ ಗಾದೆಯೊಂದು ಈ ಬೆಳೆಗಳಿಗೆ ಸಂಬಂಧಪಟ್ಟಂತೆ ಹುಟ್ಟಿ ಕೊಂಡಿರುವುದು.

ಏಣೆಲು ಬೆಳೆ ಮಳೆಗಾಲದಲ್ಲಿ, ಸುಗ್ಗಿ ಬೆಳೆ ಚಳಿಗಾಲದಲ್ಲಿ ಹಾಗೂ ಕೊಳಕೆ ಬೆಳೆ ಬೇಸಿಗೆ ಕಾಲದಲ್ಲಿ ಬೆಳೆಯುವ ಬೆಳೆಗಳು. ಸಾಮಾನ್ಯವಾಗಿ ಪ್ರತೀ ವರ್ಷದ ಜುಲಾಯಿ ತಿಂಗಳ ಹದಿನೈದನೇ ದಿನಾಂಕದೊಳಗೆ ಏಣೆಲು ಬೆಳೆಯ ಮತ್ತು ನವೆಂಬರ್ ಹದಿನೈದರ ಒಳಗೆ ಸುಗ್ಗಿ ಬೆಳೆಯ ನಾಟಿ ಕಾರ್ಯ ಮುಗಿದಿರಬೇಕೆಂದು ಹಿಂದಿನ ಕಾಲದ ನಿಯಮ. ಜುಲಾಯಿ ಹದಿನೈದರ ಅನಂತರ ತುಳುವಿನ ಆಟಿ ಮತ್ತು ನವೆಂಬರ್ ಹದಿನೈದರ ಬಳಿಕ ಜಾರ್ದೆ ತಿಂಗಳುಗಳು ಪ್ರಾರಂಭವಾಗುವುದರಿಂದ ಈ ಎರಡೂ ತಿಂಗಳುಗಳು ಆರಂಭವಾಗುವ ಮೊದಲು ಮೇಲಿನ ಎರಡೂ ಬೆಳೆಗಳ ನಾಟಿ ಮತ್ತು ಬಿತ್ತನೆ ಕಾರ್ಯ ಮುಗಿಯುವುದು ಅಧಿಕ ಇಳುವರಿ ಪಡೆಯುವುದಕ್ಕೆ ಸಕಾಲಗಳೆಂದು ಅಂದಿನ ಬೇಸಾಯಗಾರರು ಅರಿತಿದ್ದರು. ಇದೇ ರೀತಿಯಲ್ಲಿ ಕೊಳಕೆ ಬೆಳೆಯನ್ನು ನಾಟಿ ಮಾಡದೆ ಹೆಚ್ಚಾಗಿ ಬಿತ್ತನೆಯ ಮೂಲಕವೇ ಬೆಳೆಸಲಾಗುತ್ತಿದ್ದುದರಿಂದ, ಅದರ ಬಿತ್ತನೆ ಕಾರ್ಯ ಕೂಡ ಫೆಬ್ರವರಿ ೧೫ರ ಒಳಗೆ ಮುಗಿಯುತ್ತಿತ್ತು.

ಸುಗ್ಗಿ ಬೆಳೆಯನ್ನು ಹಿಂದಿನಕಾಲದಲ್ಲಿ ಬಹಳ ಪೂಜ್ಯವೆಂದು ಪರಿಗಣಿಸಲಾಗಿತ್ತು. ಅದನ್ನು ಸತ್ಯದ ಬೆಳೆಯೆಂದು ಜನರು ಹೇಳುತ್ತಿದ್ದರು. ಕೊಳಕೆ ಬೆಳೆ ತುಂಬಾ ಶ್ರಮದಾಯಕ ಬೆಳೆ. ತುಳು ಲೆಕ್ಕಾಚಾರದಲ್ಲಿ ಆ ಬೆಳೆ ಬೆಳೆಯುವ ದಿನಗಳು ವರ್ಷದ ಕೊನೆಯ ದಿನಗಳಾಗಿರುವುದರಿಂದ ಅಲ್ಲಿ ಸಾಕಷ್ಟು ನೀರಿನ ಅಭಾವವಿತ್ತು. ಬೇಸಾಯಗಾರ ಬೆಳೆಗೆ ಹಾನಿಯಾಗದಂತೆ ಅದನ್ನು ರಕ್ಷಿಸಿಕೊಳ್ಳಬೇಕಾದರೆ ಹರಸಾಹಸ ಪಡಬೇಕಾಗಿತ್ತು. ಹೀಗಾಗಿ "ಬಲಕೆ ಇತ್ತಿನಾಯಗ್ ಕೊಲಕೆ" (ಶಕ್ತಿ ಇದ್ದವನಿಗೆ ಕೊಳಕೆ) ಎನ್ನುವ ತುಳು ಗಾದೆಯೊಂದು ಕೂಡ ಜನಪದದಲ್ಲಿ ಹುಟ್ಟಿಕೊಂಡಿದೆ. ಅಂದಿನ ದಿನಗಳಲ್ಲಿ ತನ್ನ ಅಥವಾ ನೆರೆಕರೆಯವರ ಸಾಕುಪ್ರಾಣಿಗಳಿಂದ ಬೆಳೆದು ನಿಂತ ಪೈರುಗಳಿಗೆ ತೊಂದರೆಯುಂಟಾಗುತ್ತಿತ್ತು. ಇದಕ್ಕೆ ಸಂಬಂಧಪಟ್ಟಂತೆ ತುಳುವರು ಹೇಳಿಕೊಳ್ಳುವ ಒಂದು ಮಾತಿದೆ. "ಏಣೇಲ್‌ಗ್ ಲೆತ್ತ್ ಪನೋಡು, ಸುಗ್ಗಿಗ್ ಜತ್ತ್ ದೇರೋಡು, ಕೊಳಕೆಗ್ ಜಪಡಾದ್ ಬುಡೋಡ್'. ಅಂದರೆ ಏಣೇಲ್ ಬೆಳೆಯಲ್ಲಿ ದನಕರುಗಳು ತಿಂದು ಹಾಳು ಮಾಡುತ್ತಿದ್ದರೆ ಕರೆದು ಹೇಳಬೇಕು, ಸುಗ್ಗಿ ಬೆಳೆಗೆ ಹೀಗಾದರೆ ಗದ್ದೆಗಿಳಿದು ದನಕರುಗಳನ್ನು ತಾನೇ ಓಡಿಸಬೇಕು, ಕೊಳಕೆ ಗದ್ದೆಗೆ ಪೈರು ತಿನ್ನುವಂತೆ ದನಕರುಗಳನ್ನು ಇಳಿಸಿಬಿಡಬೇಕು. ಅಂದರೆ ಕೊಳಕೆ ಬೆಳೆಯು ಉಳ್ಳವನಿಂದ ಮಾತ್ರ ಸಾಧ್ಯ. ಅದು ಹಾಳಾದರೆ ನಷ್ಟವಿಲ್ಲ ಎನ್ನುವ ಆಶಯ ಇಲ್ಲಿದೆ. ಹೀಗಾಗಿ "ಬಲಕೆ ಇತ್ತಿನಾಯಗ್ ಕೊಲಕೆ" ಎಂಬ ಗಾದೆ ಮಾತು ಇಲ್ಲಿ ಪುಷ್ಟಿ ನೀಡುತ್ತದೆ.

ಇಲ್ಲಿ ತುಳುವರ ಇನ್ನೊಂದು ಮಾತು ಪ್ರಸ್ತುತವೆನಿಸುತ್ತದೆ. 'ಕಾರ್ತಿ ಬೊಳ್ಳೊಡು ಪೋಂಡು, ಸುಗ್ಗಿ ಧನಿಕ್‌ಲೆಗಾಂಡ್, ಕೊಳಕೆ ಮಾತ್ರ ಮರಿಯಾಲದ ಉಣಸ್‌ಗ್ (ಕಾರ್ತಿ ಬೆಳೆ ನೆರೆಯ ಭರಾಟೆಯಿಂದ ನಾಶವಾದರೆ, ಸುಗ್ಗಿ ಬೆಳೆ ಧನಿಗಳ ಗೇಣಿ ಸಂದಾಯಕ್ಕಾದರೆ, ಕೊಳಕೆ ಮಾತ್ರ ಮಳೆಗಾಲಾದ ಊಟಕ್ಕೆ ಆಗುವುದು) ಎನ್ನುವ ಮಾತು ಗೇಣಿದಾರನ ಸ್ಥಿತಿಯನ್ನು ವಿವರಿಸುತ್ತದೆ.

ಈ ಪ್ರದೇಶದಲ್ಲಿ ನೀರು ಕಡಿಮೆಯಿದ್ದಾಗ ಉದ್ದು, ಹೆಸರು, ಹುರುಳಿ ಮುಂತಾದ ದ್ವಿದಳ ಧಾನ್ಯಗಳನ್ನು ಬೆಳೆಸಿ ಕೃಷಿ ಸಂಸ್ಕೃತಿಯೊಂದಿಗೆ ಬೆಸೆದು ಬದುಕಿದರು ಇಲ್ಲಿನ ಜನರು. ಬೇಸಾಯದ ಎಲ್ಲಾ ಕೆಲಸ ಕಾರ್ಯಗಳನ್ನು

ನಿರ್ವಹಿಸುತ್ತಿದ್ದ ಆಳುಕಾಳುಗಳಿಗೆ ಹಣದ ರೂಪದಲ್ಲಿ ಸಂಬಳವಿರಲಿಲ್ಲ, ಬದಲಿಗೆ 'ಪಡಿ' (ಹೆಚ್ಚಾಗಿ ಭತ್ತ ಅಥವಾ ಅಕ್ಕಿಯ ರೂಪದಲ್ಲಿ) ನೀಡಲಾಗುತ್ತಿತ್ತು.

ವ್ಯವಸಾಯಕ್ಕೆ ಅಗತ್ಯವಾಗಿ ನೀರಿನ ಆಶ್ರಯ ಬೇಕಾಗಿತ್ತು. ಆಧುನಿಕ ನೀರಾವರಿಯ ಯಾವುದೆ ಸಲಕರಣೆಗಳು ಇಲ್ಲದ ಆ ಕಾಲದಲ್ಲಿ ಬಾವಿ, ಕೆರೆ, ತೋಡು ಮೊದಲಾದ ನೀರಿನ ಮೂಲಗಳಿಂದ, ನೀರನ್ನು ವ್ಯವಸಾಯಕ್ಕೆ ಬಳಸುವುದು ರೂಢಿಯಾಗಿತ್ತು. ಈ ದಿಶೆಯಲ್ಲಿ ಬೇಸಾಯದಲ್ಲಿ ನಿರತವಾದಂತಹ ಕುಟುಂಬಗಳು ಕೆಲವು ತಾಂತ್ರಿಕ ಸಲಕರಣೆಗಳನ್ನು ಶೋಧಿಸುವುದು ಅನಿವಾರ್ಯವಾಗಿತ್ತು. ಹಾಗಾಗಿ ನೀರಾವರಿಗಾಗಿ ಏತ/ಪಣೆ, ಕೊಂತ, ಕೊರಂಗೆ ಮುಂತಾದ ಸಲಕರಣೆಗಳನ್ನು ಶೋಧಿಸಿ ಉಪಯೋಗಿಸುವುದಕ್ಕೆ ಆರಂಭಿಸಿದರು. ಏರುಪೇರುಗಳನ್ನು ಸಮತಟ್ಟು ಮಾಡಿ ಗದ್ದೆಯ ರೂಪಕೊಟ್ಟು ಉಳುಮೆಗೆ ನೊಗ, ನೇಗಿಲು, ಹಲಗೆ (ಪಲಾಯಿ), ಮುಂತಾದವುಗಳನ್ನು ಕಾಲಾನುಕ್ರಮದಲ್ಲಿ ಅವಶ್ಯಕತೆಗೆ ಸರಿಯಾಗಿ ಉಪಯೋಗಿಸಲಾಯಿತು. ಬೆಳೆದ ಪೈರುಗಳನ್ನು ಕಾಡುಪ್ರಾಣಿಗಳಿಂದ ಸಂರಕ್ಷಿಸಲೋಸುಗ ತನ್ನ ಜಾಣ್ಮೆಯನ್ನು ಬಳಸಿ ವಿವಿಧ ರಕ್ಷಣಾ ಸಾಧನಗಳಾದ ನೀರಮೊಂಟೆ, ಹುಲಿ ಓಡಿಸುವ ಸಾಧನ, ಹಕ್ಕಿ ಓಡಿಸುವ ಸಾಧನಗಳನ್ನು ಕಂಡು ಹುಡುಕಲಾಯಿತು. ದವಸಧಾನ್ಯಗಳನ್ನು ಹಾಳಾಗದಂತಿಡಲು ಮುಡಿ, ತುಪ್ಪೆ, ಪತ್ತಾಯ, ಕದಿಕೆ, ಕುಟಾಯಿ, ಮಣ್ಣಿನ ಗುಡಾಣ ಮುಂತಾದ ನೈಸರ್ಗಿಕ ವಸ್ತುಗಳು ಸಿದ್ದವಾದವು. ಹೀಗೆ ಕೃಷಿ ಬದುಕಿಗೆ ಪೂರಕ ಅಗತ್ಯ ವಸ್ತುಗಳಾದ ಕತ್ತಿ, ಕುಡಾರಿ, ಮಡು, ಒಚ್ಚಿದ ಮರ, ಕೊಟ್ಟು, ಪಿಕ್ಕಾಸು, ಸ್ಯಂಗೊಲು, ಕಾಂಟ್ಯ, ಅಳತೆ ಸಾಧನಗಳಾದ ಕಲಸಿಗೆ, ಸೇರು, ಬಲ್ಲ, ಪಾವು, ಚಟಾಕ್ ಮುಂತಾದವುಗಳು ಸಿದ್ಧಗೊಂಡವು.

ಈ ಪ್ರದೇಶದ ಅತೀ ಮುಖ್ಯ ಆಹಾರ ಪದಾರ್ಥವನ್ನು ಶ್ರೀಮಂತಿಕೆ ಬಡತನದ ವ್ಯತ್ಯಾಸವಿಲ್ಲದೆ ಪೂಜ್ಯ ಭಾವದಿಂದ ಕಾಣಲಾಗುತ್ತದೆ. ಇಲ್ಲಿನ ಜನರು ಒಂದಗಳು ಅನ್ನವನ್ನು ಚೆಲ್ಲಲಾರರು. ಅಕ್ಕಿ, ಭತ್ತಕ್ಕೆ ಸಂಬಂಧಪಟ್ಟಂತೆ ತುಳುವಿನಲ್ಲಿ ಅನೇಕ ನಂಬಿಕೆಗಳು, ಗಾದೆ ಮಾತುಗಳು, ಒಗಟುಗಳನ್ನು ಕಾಣಬಹುದು. 'ಅರಿಟ್ಟ್ ಪುರಿಯಾಂಡ ಎಡ್ಡೆ' ಎಂಬ ಮಾತು ಹುಳವಾದ ಅಕ್ಕಿಯನ್ನು ತಿನ್ನಲು ಅಸಹ್ಯ ಪಡಬಾರದೆನ್ನುವುದಕ್ಕೆ ಹುಟ್ಟಿಕೊಂಡಿರಬೇಕು. ಅಂದಿನ ದಿನಗಳಲ್ಲಿ ಗುಡಾಣಗಳಲ್ಲಿ ತುಂಬಿಸಿಟ್ಟ ಅಕ್ಕಿಯಲ್ಲಿ ಮಳೆಗಾಲದಲ್ಲಿ ಹುಳವಾಗುವುದು ಸಾಮಾನ್ಯವಾಗಿತ್ತು. ಈ ರೀತಿ ಹುಳವಾದರೆ ಶ್ರೀಮಂತಿಕೆ ವೃದ್ಧಿಯ ಲಕ್ಷಣವೆಂದು ನಂಬಲಾಗಿತ್ತು.


'ಮರಿ ತುಚ್ಚಿಂಡ ಮರ್ದ್‌ಂಡು, ಅರಿ ತುಚ್ಚಿಂಡ ಮರ್ದ್ ಇಜ್ಜಿ' (ಹಾವು ಕಚ್ಚಿದರೆ ಮದ್ದಿದೆ, ಅಕ್ಕಿ ಕಚ್ಚಿದಲ್ಲಿ ಮದ್ದಿಲ್ಲ) ಎಂಬ ತುಳುವರ ಮಾತು ಅಕ್ಕಿಯ ಬಗೆಗಿನ ಗೌರವವನ್ನು ಎತ್ತಿ ತೋರಿಸುತ್ತದೆ. ಒಂದು ವೇಳೆ ನಾಗರ ಹಾವು ಕಚ್ಚಿದರೆ ಔಷೋಧೋಪಚಾರದಿಂದ ಗುಣಪಡಿಸಬಹುದು. ಆದರೆ, ಅಕ್ಕಿ ಕಚ್ಚಿದರೆ ಅರ್ಥಾತ್ ಮುನಿದರೆ ಸಾವು ನಿಶ್ಚಿತ ಎಂಬ ಆಶಯ ಇಲ್ಲಿದೆ. ಇದರಿಂದ ತುಳುವರು ಭತ್ತದ ಬೇಸಾಯಕ್ಕೆ ನೀಡಿರುವ ಮಹತ್ವ ಎದ್ದು ಕಾಣುತ್ತದೆ.

ತುಳುನಾಡಿನಲ್ಲಿ ಭಕ್ತಿಭಾವದಿಂದ ಕಾಣುವ ಅತೀ ಪ್ರಮುಖವಾದ ಭತ್ತದ ತಳಿಯೆಂದರೆ 'ಅತಿಕರ' ತಳಿ. ಇದಕ್ಕೆ ಸಂಬಂಧಪಟ್ಟಂತೆ ಅನೇಕ ನಂಬಿಕೆಗಳು, ಐತಿಹ್ಯಗಳು ಕಾಣಬಹುದು. 'ಅತಿಕರ ಅರಿತ್ತ ನುಪ್ಪುಲ, ತೌತೆದ ಕಜಿಪುಲಾ ಬೊಡಿನಾಯಗ್ ಭೂಮಿದ ಮಿತ್ತದ ನೀರ್ ಮುಗಿಂಡ್‌ಂದ್ ಲೆಕ್ಕೊ' (ಅತಿಕರ ತಳಿಯ ಭತ್ತದ ಅನ್ನ ಮತ್ತು ಸೌತೆ ಸಾರು ಸಾಕೆನಿಸಿದವನಿಗೆ ಭೂಮಿಯ ಮೇಲಿನ ಋಣ ಮುಗಿಯಿತು) ಎಂಬ ಗಾದೆಯಿದೆ. ಅತಿಕರದ ಅನ್ನ ಮತ್ತು ಸಾರು ಯಾವುದೇ ವಯೋಮಾನದವರು, ರೋಗಿಗಳು ಸೇವಿಸಬಹುದಾದಂತಹ ಆಹಾರ. ಇದರಲ್ಲಿ ಯಾವುದೇ ದೋಷವಿಲ್ಲ. ಇದು ಸಾಕೆನಿಸಿದವರು ಭೂಮಿಯ ಮೇಲೆ ಹೆಚ್ಚು ದಿನ ಬದುಕಿರಲಾರರು ಎನ್ನುವುದು ತುಳುವರ ನಂಬಿಕೆ. ಅಲ್ಲದೆ ಈ ತಳಿಗೆ ಸಂಬಂಧಪಟ್ಟಂತೆ – ಅತಿಕರ ತಳಿಯನ್ನು ತಪ್ಪಿ ಏಣೇಲಿಗೆ ಬಿತ್ತಿದರೂ ತೆನೆ ಬರುವುದು ಸುಗ್ಗಿಯಲ್ಲಿ– ಎಂಬ ನಂಬಿಕೆಯೂ ತುಳುವರಲ್ಲಿ ಇದೆ. ದೇವಸ್ಥಾನಗಳ ಮುಂಭಾಗದಲ್ಲಿರುವ 'ಕೊಡಿಮರ'ದ ತುದಿಯಲ್ಲಿಯೂ 'ಅತಿಕರ'ದ ಬೀಜವನ್ನು ಕಟ್ಟುವುದು ವಾಡಿಕೆ– ಅಂದರೆ, ಅತಿಕರದ ಭತ್ತ ಬಹಳ ಬಾಳಿಕೆ ಬರುತ್ತದೆ ಎಂದು ತಿಳಿಯಲಾಗಿದೆ.

೩.೨ ಕೃಷಿ ಪರಿಕರಗಳು

ಕರಾವಳಿ ಕರ್ನಾಟಕದ ಕೃಷಿ ಪರಿಕರಗಳ ಸಮಗ್ರ ಚಿತ್ರಣವನ್ನು ಸೀಮಿತ ಚೌಕಟ್ಟಿನೊಳಗೆ ಒದಗಿಸುವುದು ಅಸಾಧ್ಯವಾದ ಮಾತಾದರೂ ಕೃಷಿ ಬದುಕಿಗೆ ಸಂಬಂಧಿಸಿದ ಕೆಲವು ಪ್ರಮುಖ ವಸ್ತು ಪರಿಕರಗಳ ಚಿತ್ರಣ ನೀಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಈ ವಸ್ತು ಪರಿಕರಗಳು ಪ್ರಾದೇಶಿಕ ಭಿನ್ನತೆಯನ್ನು ಹೊಂದಿದ್ದರೂ ಇಲ್ಲಿನ ವಸ್ತುಗಳ ರಚನೆಯಲ್ಲಿ ನಿರ್ಮಿಸುವಾತನು ತನ್ನ ಕಲಾತ್ಮಕತೆಯನ್ನು, ಒಡೆಯನ ಬಯಕೆಯನ್ನು, ಸಾಂದರ್ಭಿಕ ಸಾಮಾಜಿಕ ನೆಲೆಗಟ್ಟನ್ನು, ನಂಬಿಕೆಗಳನ್ನು ಅಳವಡಿಸಿಕೊಂಡಿರುವುದನ್ನು ಗಮನಿಸಬಹುದಾಗಿದೆ. ಕೃಷಿಗೆ ಸಂಬಂಧಿಸಿದ ಭೌತಿಕ ಪರಿಕರಗಳನ್ನು ಈ ಕೆಳಗಿನಂತೆ ವಿಭಜಿಸಿ ಅಧ್ಯಯನ ನಡೆಸಲಾಗಿದೆ.

ಈ ಕೆಳಗೆ ನೀಡಲಾದ ವಿಭಜನೆ ಜಿಲ್ಲೆಯಲ್ಲಿ ಪ್ರಚಲಿತದಲ್ಲಿದ್ದ ಕೃಷಿ ಚರಿತ್ರೆಯನ್ನು (ಸಂಪೂರ್ಣವಲ್ಲದಿದ್ದರೂ) ಸ್ಥೂಲವಾಗಿ ಪರಿಕರಗಳ ಮೂಲಕ ತೆರೆದಿಡಲು ಅನುಕೂಲ ಮಾಡುವುದು.


ಕೃಷಿ ಪರಿಕರಗಳು
ನೀರಾವರಿ ಸಾಧನಗಳು
ಪಣೆ
ಕೊಂತ
ಕೊರಂಗೆ
ಕೃಷಿ ಕಾರ್ಯದ ಸಾಧನಗಳು
ನೊಗ/ನೇಗಿಲು
ಹಲಗೆ
ಓಡ
ಕುರುಂಟು
ಸಂರಕ್ಷಣಾ ಸಾಧನಗಳು
ಗದ್ದೆಯಲ್ಲಿ ಪೈರು ಸಂರಕ್ಷಣೆ
ಹುಲಿ ಮೊಂಟೆ
ನೀರ ಮೊಂಟೆ
ಹಕ್ಕಿ ಓಡಿಸುವ ಸಾದನ
ಇಲಿಕತ್ತರಿ
ದವಸ ದಾನ್ಯಗಳು ಹಾಳಾಗದಂತೆ
ಮುಡಿ
ಕದಿಕೆ
ತುಪ್ಪೆ
ಕುಟಾಯಿ
ಕೆಲಸ ನಿರ್ವಹಣೆಯ ಪರಿಕರಗಳು
ಗೆರಸೆ
ಕತ್ತಿ
ಪಡಿಮಂಚ
ಹಿಡಿಸೂಡಿ
ಒನಕೆ

೩.೨.೧ ನೀರಾವರಿ ವ್ಯವಸ್ಥೆ

ಏಣೆಲು ಬೆಳೆಗೆ ಮೇಲಿನ ನೀರು, ಸುಗ್ಗಿ ಬೆಳೆಗೆ ಹರಿಯುವ ನೀರು, ಕೊಳಕೆ ಬೆಳೆಗೆ ಅಡಿನೀರು (ಏಣೆಲ್‌ಗ್ ಮೇಲ್ ನೀರ್, ಸುಗ್ಗಿಗ್ ಒಡ್ಡನೀರ್, ಕೊಳಕೆಗ್ ಅಡಿನೀರ್)–ಎಂಬ ಮಾತಿದೆ. ಏಣೆಲು ಬೆಳೆಯ ಸಂದರ್ಭದಲ್ಲಿ ಸಾಕಷ್ಟು ಮಳೆಯಾಗುವುದರಿಂದ ಮೇಲಿನ ನೀರು ಇರುತ್ತದೆ. ಸುಗ್ಗಿ ಬೆಳೆಗೆ ಹಳ್ಳ ತೋಡುಗಳಿಂದ ಹರಿದು ಬರುವ ನೀರನ್ನು ಒದಗಿಸಲಾಗುತ್ತದೆ. ಕೊಳಕೆ ಬೆಳೆಗೆ ಮಾತ್ರ ನೀರಾವರಿ ಪರಿಕರಗಳನ್ನು ಉಪಯೋಗಿಸಿಯೇ ನೀರುಣಿಸಬೇಕಾಗುತ್ತದೆ. ಹಾಗಾಗಿ ಏತದ ಬಳಕೆಯು ಮುಖ್ಯವಾಗಿ ಕೊಳಕೆ ಬೆಳೆಗೆ ಬಳಸಲ್ಪಡುತ್ತದೆ.

ಬುಕನನ್[೨] (೧೮೦೭) ಹಾಗೂ ಜಾನ್ ಸ್ಟುರಕ್[೩] (೧೮೯೪) ಅಂದಿನ ಕಾಲದ ನೀರಾವರಿ ವೈವಿಧ್ಯಗಳನ್ನು ಸಚಿತ್ರವಾಗಿ ವಿವರಗಳನ್ನು ದಾಖಲಿಸಿದ್ದಾರೆ. ಮೂರು ಅಡಿಗಿಂತ ಹೆಚ್ಚು ಆಳದಲ್ಲಿ ನೀರಿದ್ದಾಗ ಏತವನ್ನು ಬಳಸಲಾಗುತ್ತದೆ. ಆಳ ಕಡಿಮೆಯಿದ್ದಲ್ಲಿ ಕೈದಂಬೆಯಿಂದ ನೀರನ್ನು ಹಾಯಿಸಲಾಗುತ್ತದೆ.

ಪಣೆ

ಪಣೆ ಎಂಬುದು ಆಧುನಿಕ ಪೂರ್ವದ ಕೃಷಿಯಲ್ಲಿ ಬಳಸುತ್ತಿದ್ದ ನೀರಾವರಿಯ ಮುಖ್ಯ ಸಲಕರಣೆ. ಪಣೆ ಎಂದರೆ ಹಲವು ಅರ್ಥಗಳನ್ನು ಒಳಗೊಂಡಿದೆ. ತುಳು ನಿಘಂಟುವಿನಲ್ಲಿ ಪಣೆಯನ್ನು ಏತ ಎಂದೂ ಮತ್ತು ಬಾವಿ, ಕೆರೆ ಮೂಲಗಳಿಂದ ನೀರೆತ್ತಲಿಕ್ಕಾಗಿ ನಿರ್ಮಿಸಿದ ವಿಶಿಷ್ಟ ರಚನೆ ಎಂದು ವಿವರಿಸಲಾಗಿದೆ. ಇದನ್ನು ಏತಂಗೊಟ್ಟಿ, ಚೊಟ್ಟೆ ಅಥವಾ ತೊಟ್ಟೆ ಎಂದೂ ಕರೆಯಲ್ಪಡುವರು.[೪] ನೇತ್ರಾವತಿಯಿಂದ ಪಣೆಯ ಮೂಲಕ ನೀರು ಜಗ್ಗಿಕೊಂಡು ವ್ಯವಸಾಯಕ್ಕೆ ಬಳಸುತ್ತಿದ್ದುದರಿಂದ ಪಣೆ ವ್ಯವಸಾಯದ ಊರು ಪಾಣೆಮಂಗಳೂರಾಯಿತೆಂದು ದಕ್ಷಿಣಕನ್ನಡ ಜಿಲ್ಲೆಯ ಸ್ಥಳನಾಮಗಳು ಲೇಖನದಲ್ಲಿ ಬೆಂ.ಶಾ. ಶ್ಯಾಮಲಾ ರತ್ನಕುಮಾರಿ ಅಭಿಪ್ರಾಯಪಡುತ್ತಾರೆ.[೫] ತುಳುನಾಡಿನ ಸ್ಥಳ ನಾಮಗಳ ಕುರಿತಾಗಿ ಸಂಶೋಧನಾತ್ಮಕ ಅಧ್ಯಯನ ನಡೆಸಿರುವ ಕೆಮ್ತೂರು ರಘುನಾಥ ಭಟ್ ಅವರು ಪಣೆ ಎಂಬ ಹೆಸರಿನಿಂದ ಹೊರಡುವ ಶಬ್ದಗಳ ಮೂಲಚೂಲವನ್ನು ಹುಡುಕುವ ಪ್ರಯತ್ನ ಮಾಡಿದ್ದಾರೆ. ಅವರ ಪ್ರಕಾರ ಪಣೆಗಳ ಊರು 'ಪಾಣೇರ್' ಅಥವಾ ಪಾಣೆ ಮಂಗಳೂರು ಎಂಬ ಹೆಸರು ಬಂದಿದ್ದಿರಬಹುದೆಂದು ಅಭಿಪ್ರಾಯಪಡುತ್ತಾರೆ. ತುಳುವಿನಲ್ಲಿ 'ಪಣೆ' ಎಂದರೆ 'ಏತ' (ಏರು+ತ) ಎಂದರ್ಥ. ಈ ಪದವು ಪ್ರಾಯಶಃ ಪಣೆ/ಪಾಣೆಯ 'ಏರಿನ' ಕಲ್ಪನೆಯನ್ನು ಮೂಡಿಸುತ್ತದೆ. ಪಾಣೆಮಂಗಳೂರು ತುಳುವಿನ ಪಾಣೇರ್, ಪಣಂಬೂರು, ಪಣೆಯಾಡಿ, ಪಾಣಾಜೆ, ಪಣೇಯೂರು, ಪಣಕಜೆ ಮುಂತಾದ ನಾಮಗಳೂ ಇದೇ ಅರ್ಥದಿಂದ ಬಂದಿರಬಹುದು. ಪಣೆತ್ತಾಡಿ ಎಂಬ ಊರು ಪಣೆಯ ಅಡಿಯನ್ನು ಸೂಚಿಸಿದರೆ, ಬಿದಿರಿನ ಏತವಿರುವ ಸ್ಥಳ ಬೆದ್ರಪಣೆಯಾಗಿದೆ. 'ಚರಿತ್ರೆ ನಿರುತ್ತರವಾಗುವಲ್ಲಿ ಸ್ಥಳನಾಮ ಉಸುರುತ್ತದೆ'ಎನ್ನುವುದು ಇದಕ್ಕೆ ಇರಬಹುದು. ಒಂದು ಭೌತಿಕ ವಸ್ತುವಿನ ಅಸ್ತಿತ್ವವು ಪ್ರಾದೇಶಿಕ ಹೆಸರಿನ ಮೂಲಕ ರೂಢಿಗೆ ಬರುವ ಸಾಧ್ಯತೆಯನ್ನು ಕಾಣಬಹುದು ಈ ಭೌಗೋಳಿಕ

ಪ್ರದೇಶದಲ್ಲಿ ವ್ಯವಸಾಯ ಮತ್ತಿತರ ಕಾರ್ಯಗಳಿಗೆ ನೀರಾವರಿ ನಡೆಸಲು ಹೆಚ್ಚು ಉಪಯೋಗಿಯಾದ ಒಂದು ಪರಿಕರ ಪಣೆ ಆಗಿದ್ದಿರಬಹುದು. ಹಾಗಾಗಿ, ಸ್ಥಳನಾಮಗಳಲ್ಲಿ 'ಪಣೆ' ಸಾರ್ವತ್ರಿಕವಾಗಿ ಕಾಣಿಸಿಕೊಂಡಿದೆ.

ನೀರಾವರಿಗೆ ಸಂಬಂಧಪಟ್ಟಂತೆ ನೀರು ಹಾಯಿಸಲು ಇಂದಿನಂತೆ ಆಧುನಿಕ ತಂತ್ರಜ್ಞಾನದ ಪರಿಕರಗಳು ಇರಲಿಲ್ಲ. 'ಏತ'ವೆ ನೀರು ಹಾಯಿಸುವ ಪ್ರಧಾನ ಸಾಧನ. ಕೆರೆಬಾವಿಗಳಿಂದ, ನದಿತೋಡುಗಳಿಂದ ನೀರನ್ನು ಏತ ಅಥವಾ ಕೊಂತಗಳ ಮುಖಾಂತರವೇ ಗದ್ದೆಗಳಿಗೆ, ಹಿತ್ತಿಲುಗಳಿಗೆ ನೀರು ಹಾಯಿಸಲಾಗುತ್ತಿತ್ತು. ಏಣೆಲು ಬೆಳೆ ಮಳೆಗಾಲದ ಬೆಳೆಯಾದುದರಿಂದ ಅದಕ್ಕೆ ನೀರಿನ ಅಗತ್ಯ ಇರುತ್ತಿದ್ದಿಲ್ಲ. ಆದರೆ ಸುಗ್ಗಿ, ಕೊಳಕೆ ನೀರಾಶ್ರಯವಿದ್ದರೆ ಮಾತ್ರ ಬೆಳೆಯುವ ಬೆಳೆಗಳಾಗಿದ್ದವು. ಮುಖ್ಯವಾಗಿ ಕೆರೆ, ಬಾವಿ, ನದಿ ತೋಡುಗಳು ಏತ ನೀರಾವರಿಯ ಆಶ್ರಯ ತಾಣಗಳಾಗಿದ್ದು, ಇವುಗಳಿಂದ ನೀರೆತ್ತಲು ಅವರು ಕಂಡುಕೊಂಡಿದ್ದ ಏತ ನೀರಾವರಿಯ ವಿಧಾನ ಇಂದಿನ ವೈಜ್ಞಾನಿಕ ರೀತಿಯ ವ್ಯವಸ್ಥೆಗಳಿಗಿಂತ ಕಡಿಮೆಯದಾಗಿರಲಿಲ್ಲ.

ದೇಜಪ್ಪ ದಲ್ಲೋಡಿ (೨೦೧೨) ಯವರು ಅಭಿಪ್ರಾಯ ಪಡುವಂತೆ, "ಸುಮಾರು ೩೦ ರಿಂದ ೪೦ ಅಡಿ ಉದ್ದದ ಮತ್ತು ಎರಡರಿಂದ ಎರಡೂವರೆ ಅಡಿ ಸುತ್ತಳತೆಯ ನೇರವಾಗಿರುವ ಉದ್ದನೆಯ ಮರವೊಂದನ್ನು ಮಧ್ಯದಿಂದ ಎರಡೂ ಕಡೆ ಸಮತೂಕದಲ್ಲಿರುವಂತೆ ಮಾಡಿ ಅದರ ನಡುವನ್ನು ಬಲಿಷ್ಠವಾದ ಎರಡು ಮರದ ಕಂಬಗಳ ನಡುವೆ ನೆಲದಿಂದ ಸುಮಾರು ೧೦–೧೨ ಅಡಿಗಳಷ್ಟು ಕಚ್ಚಿ ಹಿಡಿಯುವಂತಹ 'ಗ' ಆಕಾರದಲ್ಲಿ ಅದಕ್ಕೆ ಕೀಲುಗಳನ್ನು ಹೊಡೆದು ತೂಗು ಹಾಕಲಾಗುತ್ತದೆ. ಈ ಮರಕ್ಕೆ 'ಬೆರ್ಮರ'ವೆಂದೂ, ಅದನ್ನು ಧರಿಸಿರುವ ಮರದ ಪೀಠಕ್ಕೆ 'ನುಗಪನೆ' ಎಂದೂ ಹೆಸರು. ಆ ಬಳಿಕ ಮರದ ಹಿಂಭಾಗದ ತುದಿಗೆ ಸಾಧಾರಣ ಅದರಷ್ಟೇ ಉದ್ದವಿದ್ದು ಒಬ್ಬ ಮನುಷ್ಯನ ಕೈ ಮುಷ್ಟಿಯೊಳಗೆ ನಿಲ್ಲುವಷ್ಟು ಸುತ್ತಳತೆ ಹೊಂದಿದ ಸಪೂರವಾದ ಬಿದಿರೊಂದನ್ನು ಕಟ್ಟಿ ಕೆರೆಯಿಂದ ನೀರೆತ್ತಲು ಮರದ 'ಮರಯಿ'ಯನ್ನು ಸಿಕ್ಕಿಸುತ್ತಿದ್ದರು. ಈ ಬಿದಿರನ್ನು 'ಕರೆ' ಎಂದು ಕರೆಯುತ್ತಾರೆ. ಕರೆಯ ಬುಡವು ಮರಾಯಿಯನ್ನು ಹಿಡಿದುಕೊಳ್ಳುವಂತೆ ಅದರ ಎರಡು ಬದಿಗಳಿಗೆ ಸುಮಾರು ೧ ೧/೨ ಅಡಿ ಉದ್ದದ ೪ ಇಂಚು ಅಗಲ ೧ ಇಂಚು ದಪ್ಪವಿದ್ದು ತೂತು ಕೊರೆದಿರುವ ಮರದ ೨ ಪಟ್ಟಿಗಳನ್ನು ಜೋಡಿಸುತ್ತಿದ್ದರು. ಏತದಿಂದ ನೀರೆಳೆಯುವ ಸಮಯದಲ್ಲಿ ಮರಿಗೆಯನ್ನು ಈ ಪಟ್ಟಿಗಳ ನಡುವೆ ತಂದು ಅದರ 'ನಳ'ದಲ್ಲಿರುವ ತೂತಿಗೆ ಸರಿಯಾಗಿ ಪಟ್ಟಿಗಳ ತೂತು ನಿಲ್ಲುವಂತೆ ಮಾಡಿ ೧೦/೧೨ ಇಂಚುಗಳಷ್ಟು ಉದ್ದದ ಮರದ ಕೋಲನ್ನು ಸಿಕ್ಕಿಸಲಾಗುತ್ತಿತ್ತು. ಕರೆಯು ಮರಿಗೆಯನ್ನು ಹಿಡಿದುಕೊಳ್ಳುವುದಕ್ಕೆ ಈ ಕೋಲು ಸಹಾಯಕವಾಗುವುದು. ಇದಕ್ಕೆ 'ಗಿರ್‌ಗೋಲು' ಎಂದೂ, ಮರದ ಪಟ್ಟಿಗಳಿಗೆ 'ಕರೆತ್ತ ನಾಲಯಿ' (ಕರೆಯ ನಾಲಗೆ) ಎಂದೂ ಹೇಳಲಾಗಿದೆ. 'ಕರೆ'ಯನ್ನು 'ಬೆರ್ಮರ'ಕ್ಕೆ ಹಿಂಭಾಗದಲ್ಲಿ ಜೋಡಿಸಿ ಕಟ್ಟುವ ಸಾಧನಗಳಿಗೆ 'ಅಟ್ಟೆ', 'ಮುದಲೆ'ಗಳೆಂದು ಹೇಳುತ್ತಾರೆ. 'ಬೆರ್ಮರ'ದ ಹಿಂಭಾಗದಲ್ಲಿ ಕಟ್ಟಲಿಕ್ಕಾಗಿ ಕರೆಯ ಬೆನ್ನಮೇಲೆ ಇರಿಸುವ ೨ ೧/೨ ಅಡಿ ಉದ್ದವಿರುವ ಮುದಲೆ ಎಂಬ ಮರದ ಸಲಕರಣೆಯು ಮೊಸಳೆಯಾಕಾರದಲ್ಲಿರುವುದರಿಂದ ಇದಕ್ಕೆ 'ಮುದಲೆ' (=ಮೊಸಳೆ) ಎನ್ನುವ ಹೆಸರು ಬಂದಿರುತ್ತದೆ. ಇದು 'ಕರೆ' ಮತ್ತು 'ಬೆರ್ಮರ'ದ ಜೋಡಣೆಯನ್ನು ಭದ್ರವಾಗಿರಿಸುತ್ತದೆ. ಅದೇ ರೀತಿ ಬೆರ್ಮರದ

ಮುಂಭಾಗದ ತುದಿಗೆ ಭಾರವಾದ ಕಲ್ಲೊಂದನ್ನು ಕಟ್ಟುತ್ತಿದ್ದರು. ಇಬ್ಬರು ವ್ಯಕ್ತಿಗಳ ಮೂಲಕ ಕೆರೆಯಿಂದ ಎಳೆಯಲ್ಪಡುವ ನೀರು ಹೆಚ್ಚಿನ ಶ್ರಮವಿಲ್ಲದೆ ಮೇಲೆ ಬರುವುದಕ್ಕೆ ಈ ಕಲ್ಲು ಸಹಾಯಕವಾಗುವುದು. ಕಲ್ಲನ್ನು ಕಟ್ಟಿರುವ 'ಬೆರ್ಮರ'ದ ಮುಖ ಭಾಗಕ್ಕೆ ರಂಧ್ರವನ್ನು (ತೂತನ್ನು) ಕೊರೆದು ಆ ರಂಧ್ರಕ್ಕೆ ಸುಮಾರು ೭/೮ ಇಂಚು ಸುತ್ತಳತೆ ಹೊಂದಿದ ೪ ಅಡಿಯಷ್ಟು ಉದ್ದದ ಬಡಿಗೆಯಂತಿರುವ ಗಟ್ಟಿಯಾದ ಮರದ ಕೋಲನ್ನು ಸಿಕ್ಕಿಸಿ, ಆ ಕೋಲಿನ ಇಕ್ಕೆಲಗಳಿಗೆ ತಲಾ ೩೦ ರಿಂದ ೪೦-೪೫ ಅಡಿಗಳಷ್ಟು ಉದ್ದದ ಬೈಹುಲ್ಲಿನಲ್ಲಿ ತೋರವಾದ ಎರಡು ಹಗ್ಗಗಳನ್ನು ಕಟ್ಟುವರು. ಇವುಗಳಿಗೆ 'ಮೊರಜ' ಅಥವಾ 'ಕಡೆಬಲ್ಲ್'ಗಳೆಂದು ಹೆಸರು. ಇಲ್ಲಿಗೆ ಏತ ಸಿದ್ಧವಾಗುತ್ತದೆ. ಇದನ್ನು ತುಳುವಿನಲ್ಲಿ 'ಪನೆ' ಎನ್ನುತ್ತಾರೆ. ಏತದ ಹಿಂಭಾಗದಲ್ಲಿಟ್ಟುಕೊಂಡು 'ಕೆರೆ'ಯ ಮೂಲಕ 'ಮರಿಗೆ'ಯನ್ನು 'ಕೆರೆ'ಗೆ ಮುಳುಗಿಸಿ ನೀರನ್ನೆತ್ತಿ ಕೊಡುವ ವ್ಯಕ್ತಿ ಆ ಮೊದಲೇ ರಚನೆಗೊಂಡಿದ್ದ ಮರದ ಇಲ್ಲವೇ ತಾಳೆಯ ಮರದ ಅಡ್ಡಪಟ್ಟಿಗಳಲ್ಲಿ ನಿಂತಿರುತ್ತಾನೆ. ಇವುಗಳಿಗೆ 'ಪುಡೆಮುಟ್ಟು'ಗಳೆನ್ನುವರು. ಕೆರೆಯ ತಳದಲ್ಲಿ ನೆಟ್ಟಿರುವ ಎರಡು ಕಂಬಗಳು ಹೊತ್ತುಕೊಳ್ಳುವಂತೆ ಅವುಗಳಲ್ಲಿರಿಸಿರುವ ಉದ್ದದ ಬಿದಿರು ಅಥವಾ ಮರದ ತುಂಡುಗಳ ಮೇಲೆ ಒಂದರಿಂದ ಮತ್ತೊಂದಕ್ಕೆ ಸುಮಾರು ಮೂರು ಅಡಿಯಷ್ಟು ಅಂತರವಿರಿಸಿಕೊಂಡು ಹಾಕಲಾದ ಎರಡು ಅಡ್ಡಪಟ್ಟಿಗಳಿಂದ ಈ 'ಪುಡೆಮುಟ್ಟು' ರಚಿತವಾಗಿದೆ. ನೀರು ಮೊಗೆಯುವಾತನು ಇದರಲ್ಲಿ ನಿಂತು ಎತ್ತಿಕೊಡುವ ನೀರನ್ನೆಳೆಯಲು ಸಿದ್ಧರಾದ ಇಬ್ಬರು ಆಳುಗಳು 'ಬೆರ್ಮರದ' ತುದಿಗೆ ಜೋಡಿಸಿರುವ ಹಗ್ಗಗಳನ್ನು ಒಬ್ಬೊಬ್ಬರು ಒಂದೊಂದನ್ನಾಗಿ ಗಟ್ಟಿಯಾಗಿ ಹಿಡಿದುಕೊಂಡು ಅದರ ಮುಂಭಾಗದಲ್ಲಿ ರಚಿಸಿರುವ ೫/೬ ಅಡಿಗಳಷ್ಟು ಆಳವಾದ ಹೊಂಡಕ್ಕೆ ಹಿಮ್ಮುಖವಾಗಿ ನೆಗೆಯುತ್ತಾರೆ. ಈ ಹೊಂಡಕ್ಕೆ 'ಪನೆಗುರಿ' ಎನ್ನುವರು. ಕೆರೆಯ ನೀರು ತುಂಬಾ ಆಳದಿಂದ ಮೇಲೆ ಬರಬೇಕಾದಲ್ಲಿ ಈ ಹೊಂಡ ೧೦/೧೨ ಅಡಿಗಳಷ್ಟು ಆಳಕ್ಕೂ ಇರಬೇಕಾಗುವುದು. ನೀರೆಳೆಯುವವರ ದೇಹಭಾರ ಹಾಗೂ ಶಾರೀರಿಕ ಶಕ್ತಿ ಮತ್ತು ಬೆರ್ಮರಕ್ಕೆ ಬಿಗಿದಿರುವ ಕಲ್ಲಿನ ಭಾರ ಸೇರಿದಂತೆ ಕೆರೆಯಿಂದ ಮರಿಗೆಯಲ್ಲಿ ನೀರೆತ್ತಿಕೊಡುವವನ ಮೂಲಕ ನೀರು ಸರಾಗವಾಗಿ ಮೇಲೆ ಬರುತ್ತದೆ. ಹಾಗೆ ಬಂದ ನೀರನ್ನು ಆತನು ತನ್ನ ಮುಂದಿನಲ್ಲಿರುವ 'ಬರೊಣಿ' ಮುಖಾಂತರ ಗದ್ದೆಗೆ ಹಾಯಿಸುವನು. ಬೆರ್ಮರದ ಮುಂಭಾಗ ಭಾರವಾಗಿರುವುದರಿಂದ ನೀರೆತ್ತಿಕೊಡುವವನು ಮರಿಗೆಯನ್ನು ನೀರಿಗೆ ಮುಳುಗಿಸಿ ಮೇಲೆ ಮಾಡಿದ ತತ್‌ಕ್ಷಣ ನೀರೆಳೆಯುವವರು ಹಗ್ಗಗಳನ್ನು ಹಿಡಿದು ಹೊಂಡಕ್ಕೆ ನೆಗೆಯುತ್ತಿರುವುದರಿಂದ ನೀರು ತುಂಬಿದ ಮರಿಗೆ ಹೆಚ್ಚಿನ ಪ್ರಯಾಸವಿಲ್ಲದೆ ಕೆರೆಯಿಂದ ಮೇಲೆ ಬರುತ್ತದೆ. ಒಟ್ಟಿನಲ್ಲಿ ಮೂರು ಮಂದಿಯ ಶ್ರಮ ಇದಕ್ಕೆ ಅಗತ್ಯವಿದೆ. ನೀರು ಮೊಗೆಯುವವನಿಗೆ 'ನೀರ್ ಮಗುಪ್ಪುನಾಯೆ' ಮತ್ತು ನೀರೆಳೆಯುವವರಿಗೆ 'ನೀರೊಯಿಪುನಕುಲು' ಎಂದು ಹೇಳುತ್ತಾರೆ. ಗಂಡಸರು, ಹೆಂಗಸರು ಸಮಾನವಾಗಿ ಇದರಲ್ಲಿ ದುಡಿಯುವರು. ಆದರೆ ನೀರು ಮೊಗೆಯುವ ಕೆಲಸ ಗಂಡಸರದ್ದೇ ಆಗಿತ್ತು. ಹೆಚ್ಚು ಶ್ರಮ ಹಾಗೂ ಬಲಿಷ್ಟ ವ್ಯಕ್ತಿತ್ವದ ಅಗತ್ಯವಿತ್ತು".[೬]

ಏತವನ್ನು ಸಿದ್ಧಗೊಳಿಸಲು ಪರಿಣಿತ ಕೃಷಿಕನಿಗೆ ಬಡಗಿಯ ಸಹಕಾರದಿಂದ ಸಾಧ್ಯವಾಗುತ್ತದೆ. ಮುಖ್ಯವಾಗಿ ಮರಾಯಿಗೆ ಹಲಸು, ಹೆಬ್ಬಲಸು, ಈಚಲು ಅಥವಾ ತಾಳೆಮರದ ಕಾಂಡವನ್ನೂ ಉಪಯೋಗಿಸುವರು. ದಂಬೆ,

ನೊಗ, ಬೆರ್ಸೋಲ್‌ಗಳಿಗೆ ತೇಗ, ಹೀಗೆ ಏತವೊಂದರಲ್ಲಿ ಪ್ರಯೋಗಿಸಲ್ಪಡುವ ವಿವಿಧ ಪರಿಕರಗಳಾದ ಪಣೆ, ನಾವು, ಕರಿ, ಗಿರ್ ಗೋಲು, ಮರಾಯಿ, ಬರೋಣಿ, ನೊಗ, ಬೆರ್‌ಸೋಲ್, ಕುಂಡಜ್ಜೆ, ಬಲ್ಲ್, ಕಡೆಬಲ್ಲ್, ತೂಕದ ಕಲ್ಲ್, ಅಟ್ಟೆ, ಗರೆ, ಕುಂಞಾಲಿ, ಪಣೆಕುತ್ತಿ, ನೊಗಪಣೆ, ಕಲ್ಲ್, ಕುಟ್ಟೆ, ಮುದಲೆ ಇತ್ಯಾದಿ ಒಂದಕ್ಕೊಂದು ಪೂರಕ. ನೀರು ಹಾಯಿಸಬೇಕಾದರೆ ಇವೆಲ್ಲವೂ ಅಗತ್ಯ.

ಪಣೆಯ ಗಾತ್ರವು ಆಯಾ ವ್ಯಕ್ತಿಯ ಆರ್ಥಿಕ, ಸಾಮಾಜಿಕ ಹಾಗೂ ಅವನಲ್ಲಿದ್ದ ಹಿಡುವಳಿಗನುಸಾರವಾಗಿರುತ್ತಿತ್ತು. ದೊಡ್ಡ ಗಾತ್ರದ ಮರಾಯಿ ದೊಡ್ಡ ಹಿಡುವಳಿದಾರರಲ್ಲಿರುತ್ತಿತ್ತು. ಸಾಮಾಜಿಕ ಅಂತಸ್ತುಗಳು ತಾವು ಬಳಸುವ ವಸ್ತುಗಳ ಸ್ವರೂಪವನ್ನು ಅವಲಂಭಿಸಿಕೊಂಡಿತ್ತು.

ಭೌತಿಕ ವಸ್ತುಗಳ ಐತಿಹಾಸಿಕತೆಯನ್ನು ನಿರ್ಧರಿಸಲು ಮೌಖಿಕ ಸಂಪ್ರದಾಯದ ಪಾಡ್ದನಗಳು ಪ್ರಮುಖ ಆಕರಗಳಾಗಿವೆ. ಹಾಗಾಗಿ ಪಾಡ್ದನ ಪಠ್ಯಗಳಲ್ಲಿ ಕೃಷಿ ಪರಿಕರಗಳ ಉಲ್ಲೇಖ ಬಳಸುವ ಕುರಿತಂತೆ ಇರುವ ನಂಬಿಕೆಗಳನ್ನು ಅಗತ್ಯವಾಗಿ ಗಮನಿಸಬೇಕಾಗಿದೆ. ಏತಗಳನ್ನು ಕುರಿತಂತೆ ಹೆಚ್ಚಿನ ಎಲ್ಲಾ ಪಾಡ್ದನಗಳಲ್ಲಿ ಉಲ್ಲೇಖವಿದೆ. ತುಳುನಾಡಿನ ಪಾಡ್ದನಗಳಾದ ಬಾಮಕುಮಾರ ಸಂಧಿ, ಪಂಜುರ್ಲಿ ಪಾಡ್ದನ, ಸಿರಿ ಪಾಡ್ದನ ಹಾಗೂ ಇನ್ನಿತರ ಪಾಡ್ದನಗಲ್ಲಿ ಈಶ್ವರ ದೇವರು ಆಕಾಶದೆತ್ತರದ ಪಣೆ ಮರದಿಂದ ಪಾತಾಳದಡಿಯಲ್ಲಿರುವ ಹನಿ ನೀರನ್ನು ಮೇಲೆತ್ತಿ ಜಳಕ ಮಾಡಿರುವ ವಿವರಣೆಗಳು ದೊರೆಯುತ್ತವೆ. ಆದ್ದರಿಂದ ಪಣೆಯೆಂಬುದು ಅತ್ಯಂತ ಪ್ರಾಚೀನ ಕಾಲದಿಂದಲೆ ತುಳುನಾಡಿನಲ್ಲಿ ಬಳಸುತ್ತಿದ್ದ ನೀರಾವರಿ ಸಾಧನ ಎಂಬ ಊಹೆಯಿದೆ.[೭]

ಗಿಡಿಕೆರೆ ರಾಮಕ್ಕ ಮುಗೇರ್ತಿ ಕಟ್ಟಿದ ಸಿರಿಪಾಡ್ದನದಲ್ಲಿ ಪಣೆಯ ಉಲ್ಲೇಖ ಹೀಗೆ ಬರುತ್ತದೆ – "ದೂರದಿಂದ ಅಜ್ಜರು ಬರುತ್ತಿರುವುದನ್ನು ಕಂಡ ಕಾಂತಣಾಳ್ವ ಸಂಭ್ರಮದಿಂದ ಹಾಕಿದ ಏತದಡೆ ಓಡಿದನು. ತೋಡಿದ ಬಾವಿಯ ಬಳಿ ಬಂದನು. ಕೌಚಿ ಹಾಕಿದ ಕಲ್ಲಮರಿಗೆಯನ್ನು ಅಂಗಾತ ಇರಿಸಿದನು. ಆಕಾಶದೆತ್ತರದ ಏತ ಮರವನ್ನು ಬಗ್ಗಿಸಿದನು. ಪಾತಾಳದ ಒಂದು ಮರಿಗೆ ಹನಿ ನೀರನ್ನು ಎತ್ತಿದನು. ಕಲ್ಲಮರಿಗೆಗೆ ಸುರಿದನು."[೮] ಕೃಷಿಗೆ ಮಾತ್ರವಲ್ಲ, ಮನೆಯ ನೀರಿನ ಅವಶ್ಯಕತೆಗೆ ಕೂಡ ಏತದ ಬಳಕೆಯಾಗುತ್ತಿತ್ತು. ವಿವಿಧ ಆಕಾರದ, ಮಾದರಿಯ ಪಣೆ, ಮರಾಯಿ ಉಪಯೋಗಿಸಲ್ಪಡುತಿತ್ತು ಎನ್ನುವುದಕ್ಕೆ ಸ್ಪಷ್ಟತೆಯನ್ನು ನೀಡುತ್ತದೆ. ಕಲ್ಲ ಮರಿಗೆಯು ಅಕ್ಕಿಯ ಅಕ್ಕಚ್ಚು ತೆಗೆಯುವಾಗಲೂ ಬಳಕೆಯಾಗುತ್ತಿದ್ದುದಾಗಿ ಕ್ಷೇತ್ರಾಧ್ಯಯನ ಸಂದರ್ಭದಲ್ಲಿ ತಿಳಿದುಬಂದಿದೆ. ದಿನವೊಂದಕ್ಕೆ ಮುಡಿಗಟ್ಟಲೆ ಅಕ್ಕಿ ಬಳಕೆಯಾಗುತ್ತಿದ್ದ ದೊಡ್ಡ ಕುಟುಂಬಗಳಿದ್ದ ಮನೆಯಲ್ಲಿ ಅಕ್ಕಚ್ಚಿನ ಜೊತೆಗೆ ಕಲ್ಲಮರಿಗೆಯಲ್ಲಿ ಸಂಗ್ರಹವಾದ ಕೆಲವು ಪಾವುಗಳಷ್ಟು ಅಕ್ಕಿಯನ್ನು ಒಕ್ಕಲು ಮನೆಗಳವರು ಕೊಂಡೊಯ್ದು ತಮ್ಮ ಅನ್ನ ಬೇಯಿಸಿಕೊಳ್ಳುತ್ತಿದ್ದುದಾಗಿಯೂ ಮಾಹಿತಿ ದೊರೆತಿದೆ.[೯]

ಕೊಂತ ಅಥವಾ ಕೊಂತು

ಏತ ಮಾತ್ರವಲ್ಲದೆ ಕೊಂತ ಎನ್ನುವ ಇನ್ನೊಂದು ಉಪಕರಣದಿಂದಲೂ ಬೇಸಾಯದ ಗದ್ದೆಗಳಿಗೆ ನೀರನ್ನು ಹಾಯಿಸಲಾಗುತ್ತಿತ್ತು. ಇದು ಒಬ್ಬನೇ ವ್ಯಕ್ತಿಯ ಕಾಯಕ. ಸಮಾನ ಉದ್ದವುಳ್ಳ ಮೂರು ಬಿದಿರು ಇಲ್ಲವೇ ನೇರವಾಗಿದ್ದು ಹೆಚ್ಚು ತೋರವಾಗಿರದ ಗಟ್ಟಿ ಮರದ ಮೂರು ತುಂಡುಗಳನ್ನು ತ್ರಿಕೋನಾಕೃತಿಯಾಗಿ ಜೋಡಿಸಿ, ಅವುಗಳ ಬುಡಗಳನ್ನು ಕೆರೆಯ ಅಥವಾ ತೋಡಿನ ತಳಭಾಗದಲ್ಲಿ ನೆಟ್ಟು, ತ್ರಿಕೋನದ ತುದಿಗೆ ಗಟ್ಟಿಯಾದ ಹಗ್ಗ ಕಟ್ಟಿ ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಕೆಳಗೆ ಜೋತು ಬಿಡಲಾಗುತ್ತದೆ. ಹಾಗೆ ಜೋತು ಬಿಟ್ಟ ಹಗ್ಗಕ್ಕೆ 'ದಂಬೆ' ಎನ್ನುವ ಉಪಕರಣವನ್ನು ಕೊಕ್ಕೆಯ ಮೂಲಕ ಸಿಕ್ಕಿಸಿ, ಕೆರೆಯ ಮೇಲ್ಭಾಗದಲ್ಲಿ ಏತಕ್ಕೆ ರಚಿಸಿದಂತೆಯೇ ರಚಿಸಿರುವ ಅಡ್ಡ ಪಟ್ಟಿಯ ಮೇಲೆ ಒಂದು ನಿರ್ದಿಷ್ಟ ದೂರದ ಸಮತೂಕದಲ್ಲಿ ನಿಂತು ದಂಬೆಯನ್ನು ಹಿಂದಕ್ಕೆಳೆದು ನೀರಲ್ಲಿ ಮುಳುಗಿಸಿ ಮತ್ತೆ ಮುಳುಗಿಸಿ ಮತ್ತೆ ಮೇಲೆತ್ತಿ ಮುಂದಕ್ಕೆ ದೂಡಲಾಗುತ್ತದೆ. ಆಗ 'ದಂಬೆ'ಯಲ್ಲಿ ನೀರು ತುಂಬಿಕೊಂಡು ಗದ್ದೆಗೆ ಹರಿಯಲ್ಪಡುತ್ತದೆ. ನೀರಿನ ಲಭ್ಯತೆ ಮತ್ತು ಶ್ರಮದ ಅಗತ್ಯತೆಗೆ ಅನುಗುಣವಾಗಿ ಈ ಸಾಧನ ಬಳಕೆಯಾಗುತ್ತದೆ. ಈ ಸಾಧನವನ್ನು ಸಣ್ಣ ಪ್ರಮಾಣದಲ್ಲಿ ನೀರು ಹಾಯಿಸಲು ಉಪಯೋಗಿಸಲಾಗುತ್ತಿತ್ತು.

ಕೊಂರ್ಗೆ

ತುಳು ನಿಘಂಟುವಿನಲ್ಲಿ ಕೊರಿಂಗೆಯನ್ನು ನೀರು ಹಾಯಿಸಲು ಮರದಿಂದ ಮಾಡಿದ ದಂಬೆ ಎಂದು ವಿವರಿಸಲಾಗಿದೆ. ಇಷ್ಟು ಮಾತ್ರವಲ್ಲದೆ ಬೈನೆ ಮರದ ಸೋಗೆಯ ಬುಡದಿಂದ ರಚಿಸಲ್ಪಟ್ಟ ಕೊಂರ್ಗೆ ಎಂಬ ಉಪಕರಣದಿಂದಲೂ ಮತ್ತು ದೊಡ್ಡ ಪಾತ್ರೆ, ಡಬ್ಬಿಗಳಿಂದಲೂ ಕೆರೆ, ತೋಡುಗಳಲ್ಲಿರುವ ನೀರನ್ನು ಬೇಸಾಯಗಾರರು ತಮ್ಮ ಗದ್ದೆಗಳಿಗೆ ಹಾಯಿಸುತ್ತಿದ್ದರು. ಗೊಬ್ಬರ ಬಲವಿದ್ದರೂ ಅದನ್ನು ಭತ್ತದ ಸಸಿಗಳಿಗೆ ಕೊಡುವಲ್ಲಿ ಬೆಳೆಯ ಜೀವಾಳ ನೀರು. ಹೀಗಾಗಿ ಸುಗ್ಗಿ ಕೊಳಕೆ ಬೆಳೆಗಳು ಹಾನಿಗೊಳಗಾಗದಂತೆ ಬೆಳೆಯ ಬೇಕಾದರೆ ಕನಿಷ್ಠ ಪಕ್ಷ ೭೫–೮೦ ದಿವಸಗಳ ನೀರು ಅವುಗಳಿಗೆ ಅಗತ್ಯವಾಗಿತ್ತು. ಭತ್ತದ ಬೆಳೆಯಿರುವ ಗದ್ದೆಯನ್ನು ಒಮ್ಮೆ ನೀರಿನಿಂದ ತುಂಬಿಸಿದ ಬಳಿಕ ಮತ್ತೆ ಯಾವುದೇ ಕಾರಣಕ್ಕೆ ಅದರಲ್ಲಿ ನೀರು ಬರಿದಾಗದಂತೆ ನೋಡಿಕೊಳ್ಳಲಾಗುತ್ತಿತ್ತು. ಬಿಸಿಲಿನಿಂದ ಗದ್ದೆಯ ಮಣ್ಣು ಒಣಗುವುದರಿಂದ ಮತ್ತು ನೀರು ಕಡಿಮೆಯಾದಾಗ ಸಸಿಗಳ ಬುಡದಲ್ಲಿರುವ ಮಣ್ಣಿಗೆ ಗಾಳಿ ಸೋಂಕುವುದರಿಂದ ಬೆಳೆ ತುಂಬಿದ ಗದ್ದೆ ಒಮ್ಮೆ ನೀರಿಲ್ಲದೆ ಬರಿದಾಯಿತೆಂದರೆ ಮತ್ತೆ ಆ ಗದ್ದೆಗಳಿಗೆ ಎಷ್ಟೇ ನೀರುಣಿಸಿದರೂ ಅದರಲ್ಲಿ ನೀರು ನಿಲ್ಲುತ್ತಿದ್ದಿಲ್ಲ. ಸೂರ್ಯೋದಯಕ್ಕೆ ಮುನ್ನ ಪ್ರಾತಃಕಾಲದಲ್ಲಿ ಹಾಗೂ ಇಳಿಸಂಜೆಯಲ್ಲಿ ಬೇಸಾಯದ ಗದ್ದೆಗಳಿಗೆ ನೀರು ಸೇದುವ ಕೆಲಸಗಳು ಹಳ್ಳಿಗಳಲ್ಲಿ ಒಂದೇ ಸವನೆ ನಡೆಯುತ್ತಿದ್ದವು.

ಆಧುನಿಕತೆ ಮತ್ತು ನೀರಾವರಿ ಸಲಕರಣೆ

ಆಧುನಿಕತೆಯ ಪ್ರವೇಶವು ಪಾರಂಪರಿಕ ಬದುಕಿನ ವಿನ್ಯಾಸವನ್ನೇ ಬದಲುಮಾಡಿತು ಎಂದು ಹೇಳಬಹುದು. ಪಾಶ್ಚಾತ್ಯ ಆಧುನಿಕತೆಯ ತಾತ್ವಿಕತೆಯೇ ವೈಜ್ಞಾನಿಕತೆ ಮತ್ತು ವೈಚಾರಿಕತೆಯ ಮೂಲಕ ಪೂರ್ವವನ್ನು ಸುಧಾರಣೆಯ ಪಥದಲ್ಲಿ ಮುನ್ನಡೆಸುವುದು. ಬಹುಶಃ ಇದಕ್ಕೆ ಹಿನ್ನೆಲೆಯಾಗಿ ಮೊತ್ತಮೊದಲ ಕನ್ನಡ ಪತ್ರಿಕೆ ಮಂಗಳೂರು ಸಮಾಚಾರವನ್ನೇ ಗಮನಿಸಬಹುದು. ಹಾಗಾಗಿ ಆಧುನಿಕತೆಯ ಪಾರಂಪರಿಕ ಬದುಕನ್ನು ಯಂತ್ರ ನಾಗರೀಕತೆಯ ಮೂಲಕ ಪರಿವರ್ತಿಸಲು ಆರಂಭಿಸಿತು. ಇದರಿಂದ ಕೃಷಿ ಆಶ್ರಯಿತ ಬದುಕು, ಕೃಷಿಯಲ್ಲಿ ಬಳಸುತ್ತಿದ್ದ ಪರಿಕರಗಳೂ ಸಹ ಬದಲಾವಣೆಗೆ ಒಳಪಟ್ಟಿತು. ಸುಲಭ ಮತ್ತು ಸರಳ ಮಾದರಿಯ, ಬೇಗ ಫಸಲನ್ನು ಪಡೆವ ಕೃಷಿ ಅವಿಷ್ಕಾರಗಳ ಶೋಧ ನಡೆಯಿತು. ಇದರಿಂದಾಗಿ ಏತ, ಕೊಂತ, ಕೊರಂಗೆ ಮೊದಲಾದ ವಸ್ತುಗಳ 'ಸ್ಥಳ' (space) ವನ್ನು ಯಂತ್ರಗಳು ಆಕ್ರಮಿಸಿಕೊಂಡವು.

ಇಂದು ಏತ–ಕೊಂತ–ಕೊರಂಗೆ ಎಂಬ ಪದಗಳೇ ಬಳಕೆಯಲ್ಲಿಲ್ಲ. ಅಂತಿರುವಲ್ಲಿ ಇವುಗಳ ತಯಾರಿಕೆಗೆ ಬೇಕಾದ ವಿವಿಧ ಪರಿಕರಗಳ ಹೆಸರುಗಳ ಅಗತ್ಯವಾದರೂ ಏನು? ಉದಾಹರಣೆಗೆ ಈ ಪಾರಿಭಾಷಿಕ ಪದಗಳಾದ ನೊಗಮರ, ಬೆರಿಮರ, ಗಿರ್ಗೊಲು, ನಾವು, ಕರಿ, ಕುಂಡಚೆ, ಬರೋಣಿ, ಅಡ್ಡಕರಿ, ಪನೆಬಲ್ಸ್, ಉಂಡ್ಯೆ, ಕುಂಜಾಲಿ, ಕೀಲ್, ಗುಮ್ಮೆ (ಕಲ್ಲ್), ಪಣೆತ್ತಗುರಿ, ಮರಾಯಿ, ಮುಟ್ಟಿಮರ, ಕಂಡಿ ಇತ್ಯಾದಿಗಳ ಅಗತ್ಯವೆ ಇಲ್ಲವಾಗಿದೆ. ಕೆಳಭಾಗದಿಂದ ಮೇಲಕ್ಕೆ ನೀರು ಹಾಯಿಸುತ್ತಿದ್ದ ಕೊಂತ, ಕೊರಂಗೆ ಇಂದಿನವರಿಗೆ ಗೊತ್ತೇ ಇಲ್ಲ.

ಆಧುನಿಕ ಪೂರ್ವದಲ್ಲಿ ಕೃಷಿಯನ್ನೆ ಅವಲಂಬಿಸಿದ್ದ ಜಗತ್ತಿನ ಬೇರೆ ಬೇರೆ ಪ್ರದೇಶದ ಜನರು ನೀರಾವರಿಗಾಗಿ ತುಳುವರು ಬಳಕೆ ಮಾಡುತ್ತಿದ್ದ ಪಣೆ, ಕೊಂತ, ಕೊರಂಗೆ ಮೊದಲಾದುವುಗಳಿಗೆ ಸಮಾನಂತರವಾದ ವಸ್ತುಪರಿಕರಗಳನ್ನೆ ಸಾಮಾನ್ಯವಾಗಿ ಬಳಸುತ್ತಿದ್ದರು. ಆದರೆ, ಪ್ರಾದೇಶಿಕ ಭಿನ್ನತೆಯ ಕಾರಣದಿಂದ ಬೇರೆ ಬೇರೆ ಪ್ರದೇಶದ ಜನರು ಬಳಸುತ್ತಿದ್ದ ನೀರಾವರಿಯ ತಾಂತ್ರಿಕತೆಯಲ್ಲಿ ನಿರ್ದಿಷ್ಟವಾದ ಭಿನ್ನತೆಯನ್ನು ಕಾಣ ಬಹುದು. ಹಾಗೇನೆ, ಈ ಭಿನ್ನತೆಗಳ ಹೊರತಾಗಿಯೂ ಹಲವಾರು ಸಾಮ್ಯತೆಗಳನ್ನು ಸಹ ಕಂಡುಕೊಳ್ಳಬಹುದು. ನೀರಾವರಿಗಾಗಿ ಕೆಲವು ಪ್ರದೇಶಗಳಲ್ಲಿ ಸಾಕು ಪ್ರಾಣಿಗಳನ್ನು (ಎತ್ತು, ಕೋಣ) ಬಳಸುವುದೂ ಇತ್ತು. ಗಂಡು–ಹೆಣ್ಣುಗಳೆಂಬ ಭೇದವಿಲ್ಲದೆ ನೀರು ಹಾಯಿಸುವ ಈ ಕಾಯಕಕ್ಕೆ ಮನೆಮಂದಿಯೆಲ್ಲ ಕೈ ಜೋಡಿಸುತ್ತಿದ್ದರು. ಇಂದು ಅದರ ಬಳಕೆ ನಿಂತು ಹೋಗಿದ್ದರೂ ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಅನನ್ಯತೆಯನ್ನು ಉಳಿಸಿಕೊಂಡಿದೆ.

ಈ ನೀರಾವರಿ ವ್ಯವಸ್ಥೆಯು ಅಂದಿನ ಕೃಷಿಕರ ಶ್ರಮದ ವಿವರಣೆಯನ್ನು, ಶ್ರಮದ ವಿಭಜನೆಯನ್ನು ಮನೆಮಂದಿ ಆಳುಕಾಳುಗಳು ಸೇರಿ ಮಾಡುತ್ತಿದ್ದ ಕೆಲಸದ ಚಿತ್ರಣವನ್ನು ನೀಡುವುದಲ್ಲದೆ, ಪರಿಕರಗಳ ತಾಂತ್ರಿಕ ಜೋಡನೆಯು ಪ್ರಕ್ರಿಯೆಯ ಮಾಹಿತಿಯನ್ನು ಒದಗಿಸುತ್ತದೆ. ಆಯಾ ಪರಿಕರಗಳ ರಚನೆಯಲ್ಲಿ ನಿರ್ದಿಷ್ಟ ಮರಗಳನ್ನು ಬಳಸಲಾಗುತ್ತಿತ್ತೆನ್ನುವುದನ್ನೂ ಗಮನಿಸಬಹುದು. ದೊಡ್ಡ ಜಮೀನುದಾರರಾಗಿದ್ದರೆ ಹೆಚ್ಚು ಆಳು ಕಾಳುಗಳು ಮತ್ತು ದೊಡ್ಡ ಬರೊನಿಯ ಸಹಕಾರದಿಂದ ನೀರು ಮೇಲೆತ್ತಲಾಗುತ್ತಿತ್ತು. ವರ್ತಮಾನದಲ್ಲಿ ಉಪಯುಕ್ತತೆಯನ್ನು ಕಳೆದು

ಕೊಂಡಿರುವುದರಿಂದ ಈ ಪಾರಂಪರಿಕ ನೀರಾವರಿ ವ್ಯವಸ್ಥೆಯ ಪರಿಕರಗಳು ವಸ್ತುಸಂಗ್ರಹಾಲಯಕ್ಕೆ ಸೇರ್ಪಡೆಗೊಂಡಿದೆ. ಇದಕ್ಕೆ ಪರ್ಯಾಯವಾಗಿ ಆಧುನಿಕ ಪದ್ಧತಿಗಳು ಬಂದಿವೆ. ಗುಂಡಿ ಒತ್ತಿದೊಡನೆ ಚಿಮ್ಮೆಂದು ಪಾತಾಳದಿಂದ ಆಳೆತ್ತರಕ್ಕೆ ಹರಿಯುವ ನೀರಾವರಿ ವ್ಯವಸ್ಥೆಗೆ ರೂಪಾಂತರಗೊಂಡಿದೆ. ಯಾವುದೇ ಪಲ್ಲಟಕ್ಕೆ ಹಿಂದಣ ಹೆಜ್ಜೆ ಮಹತ್ವಪೂರ್ಣ. ಭಾಷೆ ಮತ್ತು ಸಂಸ್ಕೃತಿಗೆ ಪೆಟ್ಟು ನೀಡಿದರೂ ಪಲ್ಲಟ ಅನಿವಾರ್ಯ. ಇದು ಬದುಕಿನ ಕ್ರಮದಲ್ಲಾದ ಪಲ್ಲಟವೆನ್ನುವುದನ್ನು ಗಮನಿಸತಕ್ಕದ್ದು. ಯಂತ್ರ ನಾಗರಿಕತೆಯ ಪ್ರವೇಶಕ್ಕೆ ಗಾಂಧೀಜಿಯವರ ವಿರೋಧವಿದ್ದರೂ, ನೆಹರು ಮತ್ತು ಮುಂದಿನವರು ಯಂತ್ರ ನಾಗರಿಕತೆಗೆ ತೆರೆದುಕೊಳ್ಳುತ್ತಲೇ ಹೋಗಿರುವುದು ಗಮನಿಸಬೇಕಾದ ಅಂಶ.

ಪಣೆ, ಕೊಂತ, ಕೊರಂಗೆ ಐತಿಹಾಸಿಕ ವಸ್ತುವಾಗಿ ಪ್ರಾಮುಖ್ಯತೆಯನ್ನು ಪಡೆದುಕೊಂಡದ್ದು ಬೇರೆ ಬೇರೆ ದಾಖಲೆಗಳ ಮೂಲಕ ಸ್ಪಷ್ಟವಾಗುತ್ತದೆ. ಆಧುನಿಕ ಪೂರ್ವದ ಕೃಷಿ ಬದುಕಿನಲ್ಲಿ ನೀರಾವರಿಗಾಗಿ ಬಳಸುತ್ತಿದ್ದ ಸಾರ್ವತ್ರಿಕ ಭೌತಿಕ ವಸ್ತು ಪಣೆಯಾಗಿದೆ. ಹಾಗಾಗಿ ಐತಿಹಾಸಿಕ ವಸ್ತು ಪರಿಕರ ಪಣೆಯ ಸುತ್ತ ಆ ಕಾಲದ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಮತ್ತು ಭಾಷಿಕ ಸಂಗತಿಗಳು ಹೆಣೆದು ಕೊಂಡಿವೆ. ಸಾಮಾಜಿಕ ಬದುಕಿನ ಸ್ಥಿತ್ಯಂತರಗಳು, ಐತಿಹಾಸಿಕ ಸಂಗತಿಗಳು ನೀರಾವರಿಯಲ್ಲಿ ಬಳಕೆಯಾಗುತ್ತಿದ್ದ ಈ ಭೌತಿಕ ವಸ್ತುಗಳನ್ನು ಚಾರಿತ್ರಿಕಗೊಳಿಸಿದೆ. ಒಟ್ಟಿನಲ್ಲಿ, ಕೃಷಿ ಚರಿತ್ರೆಯಲ್ಲಿ ನೀರಿನ ಪಾತ್ರ ಮತ್ತು ಅದರ ನಿರ್ವಹಣೆಯತ್ತ ಪೂರ್ವಿಕರು ನೀಡಿದ ಮಹತ್ವವನ್ನು ಅರಿಯಲು ಈ ಸಾಧನಗಳು ಮಹತ್ವಪೂರ್ಣವಾಗಿವೆ.

೩.೨.೨ ಉಳುಮೆಯ ಸಾಧನಗಳು

ಅಲೆಮಾರಿಯಾಗಿದ್ದ ಆದಿಮಾನವ ಗೆಡ್ಡೆಗೆಣಸು ಅಗೆಯಲು ಬಳಸಿದ ಕೋಲು ಮುಂದೊಂದು ಹಂತದಲ್ಲಿ ಬೀಜಬಿತ್ತನೆಗೂ ಬಳಕೆಯಾಗತೊಡಗಿತು. ಈ ಹಂತ ಮಾನವನ ನಾಗರಿಕ ಬದುಕಿನ ಬೆಳವಣಿಗೆಯಲ್ಲಿ ಪ್ರಮುಖವಾದ ಘಟ್ಟವೆನ್ನಬಹುದು. ಮುಂದೊಂದು ದಿನ ಇದೇ ಕೋಲು ಎತ್ತುಗಳಿಂದ ಎಳೆಯಲ್ಪಡುವ ನೇಗಿಲಿನ ಕಲ್ಪನೆಗೆ ನಾಂದಿಯಾಯಿತು. ಇದನ್ನೆ 'Hoe culture transformed into plough culture' ಅನ್ನುವುದು. ಇದು ಈಜಿಪ್ತರ ಕೊಡುಗೆ. ಆದುದರಿಂದಲೇ ಈಜಿಪ್ತಿಯನ್ನರನ್ನು ಆಧುನಿಕ ಕೃಷಿ ವ್ಯವಸ್ಥೆಯ ಸಂಸ್ಥಾಪಕರು ಎನ್ನಲಾಗುತ್ತದೆ. ತುಳುನಾಡಿನಲ್ಲಿ ಮನುಷ್ಯ ಆಹಾರ ಸಂಗ್ರಹಣಾ ಹಂತದಿಂದ ಉತ್ಪಾದನಾ ಹಂತಕ್ಕೆ ಯಾವಾಗ ಕಾಲಿರಿಸಿದ ಎಂದು ಸ್ಪಷ್ಟವಾಗಿ ಹೇಳಲಾಗದು. ಆದರೂ ತುಳುನಾಡಿನಲ್ಲಿ ಪತ್ತೆಯಾದ ಬೃಹತ್ ಶಿಲಾಯುಗದ ನಿವೇಶನಗಳ ಕಾಲವನ್ನು ಖ್ಯಾತ ಇತಿಹಾಸತಜ್ಞರಾದ ಪಾದೂರು ಗುರುರಾಜ ಭಟ್, ಪುಂಡಿಕಾಯಿ ಗಣಪಯ್ಯ ಭಟ್ ಮೊದಲಾದವರು ಅದನ್ನು ಕ್ರಿ. ಪೂ. ೮೦೦ ರಿಂದ ಕ್ರಿ. ಪೂ. ೬೦೦ರ ವರೆಗೆ ಕೊಂಡೊಯ್ಯುತ್ತಾರೆ. ಆದುದರಿಂದ ಆಹಾರಸಂಗ್ರಹಣಾ ಹಂತವನ್ನು ಸುಮಾರು ೨೦೦೦ ವರ್ಷಗಳಷ್ಟು ಹಿಂದಕ್ಕೆ ಕೊಂಡೊಯ್ಯಬಹುದು.

ನೇಗಿಲಿನ ಉಲ್ಲೇಖ ಪುರಾಣದಲ್ಲಿಯು ಇದೆ. ಸೀತೆಯ ಹುಟ್ಟಿಗೆ ಸಂಬಂಧಪಟ್ಟಂತೆ, ಜನಕ ಮಹಾರಾಜ ಉಳುಮೆ ಮಾಡುವಾಗ ನೇಗಿಲಿನ ತುದಿಯಿಂದ ಸೀಳಿದ ಭೂಮಿಯ ಬರೆಯಿಂದ ಸೀತೆ ಹುಟ್ಟಿ ಬಂದಳು ಎಂಬ ಪುರಾಣದ ಕತೆ ಜನಜನಿತ. ನೇಗಿಲಿನ ಮೊನೆಗೆ ಸೀತೆ ಎಂದು ಹೆಸರು. ಆದುದರಿಂದಲೆ ಜನಕ ಮಹಾರಾಜನ ಮಗಳು ಸೀತೆಯಾದಳು. ಅಂತೆಯೆ, ಬಲರಾಮನ ಆಯುಧ ಹಲ. ಆದುದರಿಂದಲೆ ಅಂದರೆ ನೇಗಿಲನ್ನೆ ಆಯುಧವನ್ನಾಗಿಸಿಕೊಂಡವನೆಂದು ಹಲಧರ ಅಥವಾ ಹಲಾಯುಧನೆಂದು ಅವನಿಗೆ ಹೆಸರು.

ಋಗ್ವೇದದಲ್ಲಿಯೂ ನೇಗಿಲಿನ ಕುರಿತ ಉಲ್ಲೇಖ ಕಂಡು ಬರುತ್ತದೆ. ಮಳೆಗಾಲದ ನಾಲ್ಕು ತಿಂಗಳ ಕಾಲ ವೈದಿಕರೂ ಆ ಕಾಲದಲ್ಲಿ ಉಳುಮೆ ಮಾಡುತ್ತಿದ್ದು ಆ ಸಂದರ್ಭದಲ್ಲಿ ಜನಿವಾರವನ್ನು ವಿಸರ್ಜನೆ ಮಾಡುತ್ತಿದ್ದರು. ಮುಂದೆ ಇದಕ್ಕೆ ಪ್ರಾಯಶ್ಚಿತವಾಗಿ ಶ್ರಾವಣ ಮಾಸದ ಹುಣ್ಣಿಮೆ (ನೂಲ ಹುಣ್ಣಿಮೆ) ಯಂದು ಮತ್ತೆ ಜನಿವಾರ ಧಾರಣೆ ಮಾಡುವ ಸಂಪ್ರದಾಯ ಬೆಳೆದು ಬಂದಿದೆ.

ಡಿ.ಡಿ. ಕೊಸಾಂಬಿಯವರು ತನ್ನ 'ಪ್ರಾಚೀನ ಭಾರತದ ಸಂಸ್ಕೃತಿ ಮತ್ತು ನಾಗರೀಕತೆ'[೧೦] ಎಂಬ ಪುಸ್ತಕದಲ್ಲಿ ವಿವಿಧ ನೇಗಿಲು ಮತ್ತು ಉಳುಮೆಯ ಕುರಿತು ವಿವರಿಸುತ್ತಾರೆ. ಪ್ರಾಚೀನ ಕಾಲದಿಂದಲೂ ಭೂಮಿಯನ್ನು ಭೂತಾಯಿ, ಜನ್ಮದಾತೆಯೆಂದೂ, ಸಕಲ ಜೀವರಾಶಿಗಳ ಪೋಷಕಳೆಂದು ನಂಬಿಕೊಂಡು ಬರಲಾಗಿದೆ. ತುಳುನಾಡಿನಲ್ಲೂ, ಕೃಷಿಕರ ಪ್ರತಿಯೊಂದು ಆಚರಣೆ, ಆರಾಧನೆ, ನಂಬಿಕೆ ಪ್ರಕೃತಿ ಸಂಬಂಧಿತವಾಗಿರುವುದು ಇಲ್ಲಿ ಉಲ್ಲೇಖನೀಯ. ಅವನ ಪ್ರತಿಯೊಂದು ವಸ್ತು ರಚನೆಯಲ್ಲೂ ಭೂಮಾತೆಯನ್ನು ಕಾಣುವ ದೃಷ್ಟಿಕೋನವಿದೆ. ಉದಾಹರಣೆಗೆ ಪ್ರಾರಂಭದಲ್ಲಿ ಅವನು ಬೀಳಲು, ಬಿದಿರು, ಮರದಿಂದ ರಚಿಸುತ್ತಿದ್ದ ಕಲಸೆ, ಸೇರು ಅಥವಾ ಪಾವುಗಳೆಂಬ ದವಸ ಧಾನ್ಯಗಳ ಅಳತೆಯ ಸಾಧನಗಳು ನೋಡುಗರಿಗೆ ಭೂಮಿಯ ಕಲ್ಪನೆಯನ್ನೆ ಕೊಡುತ್ತದೆ. ಅಂದರೆ ಮಂಡಲಾಕೃತಿಯ ಚಲನೆ ಸ್ಪಷ್ಟವಾಗಿ ಗೋಚರಿಸುತ್ತದೆ.

ಇಂದು ಯಾಂತ್ರಿಕ ಯುಗದಲ್ಲಿ ಸಾಂಪ್ರದಾಯಿಕತೆ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದೆ. ಉಳುಮೆಯ ಪಾರಂಪರಿಕ ಸಾಧನಗಳಾದ ನೇಗಿಲು, ನೊಗ, ಮೊಟ್ಟೆಪಲಯಿ ಕಣ್ಮರೆಯಾಗಿ ಆ ಜಾಗವನ್ನು ಟ್ರಾಕ್ಟರ್, ಟಿಲ್ಲರ್ ಆಕ್ರಮಿಸಿಕೊಂಡಿದೆ. ಈ ವಸ್ತುಗಳ ತಯಾರಿಯಲ್ಲಿ ತುಳುವರು ಕೇವಲ ಅದರ ಪ್ರಯೋಜನ ದೃಷ್ಟಿಯನ್ನಲ್ಲದೆ ಅವರ ಕಲಾತ್ಮಕತೆಯನ್ನು ಮೆರೆದಿರುವುದನ್ನು, ಕಲಾತ್ಮಕತೆಗೂ ಮೀರಿದ ಆ ವಸ್ತುಗಳ ಮೇಲಿನ ಪವಿತ್ರ ಭಾವನೆಯನ್ನು, ಅದಕ್ಕೆ ನೀಡಿರುವ ಮಹತ್ವವನ್ನು ಗಮನಿಸಬಹುದು. ಕಮ್ಮಾರರ ವೃತ್ತಿಪರತೆ ಈ ವಸ್ತುಗಳ ರಚನೆಯಲ್ಲಿ ಕಂಡುಬರುತ್ತದೆ.

ಭೌತಿಕ ವಸ್ತುವೊಂದನ್ನು ತಯಾರಿಸುವ ಪ್ರದೇಶವಾಗಿ ಹೆಚ್ಚು ಜನಪ್ರಿಯತೆಯನ್ನು ಗಳಿಸಿದ ಕಾರಣದಿಂದ ಊರೊಂದರ ಹೆಸರಿನ ಮೂಲವಾಗಿದ್ದುದಕ್ಕೆ ಆಧಾರ ದೊರೆಯುತ್ತದೆ. ನೇಗಿಲ ಕುಳಕ್ಕೆ ತುಳುವಿನಲ್ಲಿ 'ಪನೋರು' ಎಂಬ ಪದವನ್ನು ಬಳಸುತ್ತಿದ್ದು, ಪನೋರುವನ್ನು ತಯಾರಿಸುತ್ತಿದ್ದ ಸ್ಥಳವು ಪಾಣೆರ್ ಆಗಿ ಇವತ್ತಿನ ಪಾಣೆಮಂಗಳೂರು ಆಗಿರಬಹುದೆಂದು ಹಲವು ಕ್ಷೇತ್ರದರ್ಶಿಗಳು ಮಾಹಿತಿ ನೀಡುತ್ತಾರೆ.[೧೧]

ನೊಗ ನೇಗಿಲಿನ ಹಿಂದಿರುವ ನಂಬಿಕೆಗಳು ಹಲವಾರು: ಇವನ್ನು ಕಾಲಿನಿಂದ ಮೆಟ್ಟಬಾರದು, ದಾಟಬಾರದು ಮತ್ತು ಅದು ತುಂಡಾಗಬಾರದು. ತುಂಡಾದರೆ ಅದು ಅನಾಹುತದ ಮುನ್ಸೂಚನೆ ಎಂದು ತಿಳಿಯಲಾಗುತ್ತದೆ. ಅಂದು ಮನೆಯೊಡೆಯ ಒಪ್ಪತ್ತಿನ ಊಟಮಾಡಿ ದೇವಸ್ಥಾನಕ್ಕೆ ಹೋಗಿ ಸೂತಕ ಕಳೆದುಕೊಂಡು ಬರತಕ್ಕದ್ದು ಎಂಬ ನಂಬಿಕೆಯಿದೆ. ನೊಗನೇಗಿಲುಗಳನ್ನು ಸುಡಬಾರದು. ಆದರೆ ಕೃಷಿಕನೊಬ್ಬ ಸತ್ತಾಗ ಆತನ ಚಿತೆಗೆ ತುಂಡಾದ ನೇಗಿಲನ್ನು ಹಾಕಬೇಕೆಂಬ ಬಲವಾದ ನಂಬಿಕೆ ತುಳುವರಲ್ಲಿದೆ.

ತುಳು ನಿಘಂಟಿನಲ್ಲಿ ನುಗ/ನೊಗ ಉಲ್ಲೇಖವು ಈ ರೀತಿ ಬರುತ್ತದೆ. "ಅಮಾಸೆದಾನಿ ಎರ್ಲೆ ಪುಗೆಲ್ ದೀಪಿ ನುಗನ್ ಈರೆ ಪುಗೆಲ್ ಗ್ ದೀವೊಡಿಯೆ ಬುದ್ಯಂತೆರೆ ಪಂಡೆರ್ ಜೋಕುಲು ಕೋಟ್ಯನ್ನಾಯೆರ್" (ಅಮಾವಾಸ್ಯೆಯ ದಿನ ಎತ್ತು ಕೋಣಗಳ ಹೆಗಲಿಗೆ ಇಡುವ ನೊಗವನ್ನು ನಿಮ್ಮ ಹೆಗಲಿಗೆ ಇಡಬೇಕು ಬುದ್ಯಂತರೆ ಎಂದರು ಹುಡುಗರು ಕೋಟಿಚೆನ್ನಯರು). ಪಾಡ್ದನಗಳ ಆಧಾರದಲ್ಲಿ ಇತಿಹಾಸ ರಚಿಸಲು ಸಾಧ್ಯವಿದೆ ಎನ್ನುವುದಕ್ಕೆ ನೊಗ ನೇಗಿಲಿನ ಚಿತ್ರಣವನ್ನು ಬಿಎ ಸಾಲೆತ್ತೂರು (೧೯೩೭) ಅವರು ಅಭಿಪ್ರಾಯಪಟ್ಟಿದ್ದಾರೆ.[೧೨]

ನೊಗವನ್ನು ಹೊನ್ನೆ, ಕುಂಬುರಗ ಅಥವಾ ಹಲಸಿನ ಮರದಿಂದಲೇ ತಯಾರಿ ಮಾಡಲಾಗುತ್ತದೆಂದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ವೆಂಕಣ್ಣಚಾರ್ಯ (೭೫ ವರ್ಷ) ತಿಳಿಸಿದರು. ಇದನ್ನು ಕೆತ್ತುವಾಗ ಆಕಾರ ಉದ್ದಳತೆ ಸರಿಯಾಗಿರಬೇಕು ಅಂದರೆ, ಆಯ ಪ್ರಕಾರವಿರಬೇಕು. ಇಲ್ಲದಿದ್ದರೆ ಕೋಣಗಳ ಭುಜಕ್ಕೆ ನೋವುಂಟಾಗುತ್ತದೆ ('ಪುಗೆಲ್' ಬರುವುದು) ಎನ್ನುತ್ತಾರೆ. ಅಂದರೆ ನೊಗದ ತಿಕ್ಕಾಟದಿಂದ ಉಳುವ ಎತ್ತಿನ ಹೆಗಲು ಉಬ್ಬುವುದಕ್ಕೆ "ಪುಗೆಲ್ ಬರ್ಪುನಿ" ಎನ್ನುವರು

ನೇಗಿಲಿನ ರಚನೆಗೆ ಮುಖ್ಯವಾಗಿ ಕಾಯೆರ್, ಗೋಳಿ, ಮರುವ. ಮಾವು, ಬೋವಿನ ಮರಗಳನ್ನು ಬಳಸಲಾಗುತ್ತದೆ. ನೀರಿಗೆ ಉಳುವಾಗ ಮತ್ತು ಹುಡಿ ಮಣ್ಣಿಗೆ ಉಳುವಾಗ ಬೇರೆ ಬೇರೆ ಗಾತ್ರದ ನೇಗಿಲನ್ನು ಉಪಯೋಗಿಸಲಾಗುವುದು. ನೆಲದ ಮಣ್ಣಿನ ಗುಣಕ್ಕನುಸಾರ ಮತ್ತು ಎಷ್ಟು ಸಲ ಹೂಡಬೇಕು (ಇರ್ಲ– ಒರ್ಲ= ಒಂದು ಸಲ–ಎರಡು ಸಲ) ಎನ್ನುವ ಆಧಾರದಲ್ಲಿ ನೇಗಿಲಿನ ರಚನೆಯಾಗುತ್ತಿತ್ತು.

ಮಾನವನ ಶಕ್ತಿ, ಸಾಮರ್ಥ್ಯ, ಪ್ರಾಮಾಣಿಕತೆ ಹಾಗೂ ದೈಹಿಕ ಶಕ್ತಿಗೆ ಹೆಸರಾಗಿ ಜನಮಾನಸದಲ್ಲಿ ನೆಲೆಯಾದ ವ್ಯಕ್ತಿ ಅಗೋಳಿ ಮಂಜಣ್ಣ. ಅಗೋಳಿ ಮಂಜಣ್ಣನದ್ದೆಂದು ಹೇಳಲಾಗುವ ನೊಗಗಳ ಗಾತ್ರ, ಅದರಲ್ಲಿನ ಕೆತ್ತನೆ ಚಾರಿತ್ರಿಕ ದೃಷ್ಟಿಯಿಂದ ಮಹತ್ವಪಡೆದುಕೊಳ್ಳುತ್ತದೆ. ಅಗೋಳಿ ಮಂಜಣ್ಣನ ಶಾರೀರಿಕ ದಾರ್ಢ್ಯತೆ ಮಾತ್ರ ಗಣನೆಗೆ ಬರುವುದಲ್ಲ, ನೇಗಿಲಿನ ಕೆತ್ತನೆ, ಅದರ ಕಲಾತ್ಮಕತೆ ಸಾಮಾಜಿಕ ಪ್ರತಿಷ್ಠೆಯೂ ಆಗಿತ್ತು. ಸಣ್ಣ ಹಿಡುವಳಿದಾರರು ತಮ್ಮ ಆರ್ಥಿಕ ಸ್ಥಿತಿಗೆ ಹೊಂದುವಂತ ನೇಗಿಲುಗಳನ್ನು ರಚಿಸಿಕೊಂಡು ಹೂಡುತ್ತಿದ್ದುದನ್ನು ಗಮನಿಸಬಹುದಾಗಿದೆ. ಮನುಷ್ಯನ ಶಾರೀರಿಕ ಬದಲಾವಣೆಯು ಕಾಲದಿಂದ ಕಾಲಕ್ಕೆ ವ್ಯತ್ಯಾಸಕ್ಕೆ ಒಳಪಟ್ಟಿರಬಹುದೆನ್ನುವುದನ್ನು ಊಹಿಸಬಹುದು.

ಪಾಶ್ಚಾತ್ಯ ಅಧ್ಯಯನಕಾರ ಬುಕನನ್ ಹೇಳುವಂತೆ, ಶ್ರೀಮಂತ ಹಿಡುವಳಿದಾರರ ಮನೆಯಲ್ಲಿ ೨೦-೨೫ ನೇಗಿಲುಗಳಿದ್ದುದನ್ನು ಹೇಳುತ್ತಾ, ೨-೩-೪ ನೇಗಿಲುಗಳಿರುವುದು ಸಾಮಾನ್ಯವಾಗಿತ್ತೆಂದೂ, ಸುಮಾರು ಅರ್ಧದಷ್ಟು ರೈತರಲ್ಲಿ ಒಂದೇ ನೇಗಿಲು ೧೮೦೭ ಹಿಂದೆಯೇ ಇತ್ತು ಎಂಬುದನ್ನು ದಾಖಲಿಸಿದ್ದಾರೆ.[೧೩] ನಾಲ್ಕು ನೇಗಿಲುಗಳಿರುವಲ್ಲಿ ಎಂಟು ಎತ್ತುಗಳು, ಆರು ಗಂಡಾಳುಗಳು ಹಾಗೂ ನಾಲ್ಕು ಹೆಣ್ಣಾಳುಗಳ ಅವಶ್ಯಕತೆಯಿತ್ತು ಎಂದೂ ಅಲ್ಲಿ ಉಲ್ಲೇಖಿಸಿದ್ದಾರೆ.

ವರ್ತಮಾನದ ಸಾಮಾಜಿಕತೆ

ಇಂದು ಮರದ ನೇಗಿಲಿನ ಬದಲಿಗೆ ಟ್ರಾಕ್ಟರ್ ಬಂದಿದೆ. ಕೈಕಾಲಿಗೆ ಕೆಸರನ್ನು ಮೆತ್ತಿಕೊಳ್ಳುವ ಭಯವಿಲ್ಲದೆ ಶೀಘ್ರದಲ್ಲಿ ಕೃಷಿಕಾರ್ಯ ಪೂರೈಸಿಕೊಳ್ಳಬಹುದಾದ ಯಂತ್ರಗಳು ಬಂದಿವೆ. ನೆರೆಹೊರೆಯವರ, ಹೆಚ್ಚಿನ ಆಳುಕಾಳುಗಳ ಸಹಕಾರವಿಲ್ಲದೆಯೂ ಕೆಲಸಕಾರ್ಯಗಳನ್ನು ಪೂರೈಸಿಕೊಳ್ಳಬಹುದಾಗಿದೆ. ಹಿಂದಿಗಿಂತಲೂ ದುಪ್ಪಟ್ಟು ಫಸಲು ತೆಗೆಯಬಹುದಾಗಿದೆ. ವರ್ತಮಾನದ ತುಳುನಾಡಿನಲ್ಲಿ ೯೦ ಶೇಕಡಾ ಕೃಷಿಕಾರ್ಯ ನಿಂತು ಹೋಗಿದೆ. ಶ್ರಮ ಜೀವಿಗಳಾದ ತುಳುವರು ಆಧುನಿಕತೆಯತ್ತ ಮುಖ ಮಾಡಿದ್ದಾರೆ. ಅಧುನಿಕತೆಯ ಧಾವಂತದಲ್ಲಿ ಕೃಷಿ ಬದುಕಿನ ಅವಿಭಾಜ್ಯ ಅಂಗವಾಗಿದ್ದ ನೊಗ-ನೇಗಿಲು ಮರೆಗೆ ಸರಿಯುತ್ತಿರುವಂತೆ ಕೃಷಿಬದುಕು ಕೂಡಾ ಮರೆಯಾಗುತ್ತಿದೆ.

ಆಧುನಿಕತೆಯ ಯಂತ್ರ ನಾಗರೀಕತೆಯ ಪ್ರವೇಶದೊಂದಿಗೆ ಕೃಷಿ ಬದುಕಿನ ಕಣ್ಮರೆಯಾಯಿತು. ಜೊತೆಗೆ ಅವುಗಳಿಗೆ ಸಂಬಂಧಿಸಿದ ವಿವಿಧ ಪಾರಿಭಾಷಿಕ ಪದಗಳು ಮರೆವಿಗೆ ಸಂದಿತು. ಉದಾಹರಣೆಗೆ ಗುಂಡಲ, ಪತ್ತ್, ಪುಡ್ಕಾಯಿ, ಮುನೆ, ಪಣೊರು, ಕಲ್ಯಟ, ಪೊನಕೆ, ಸುಡ, ಮಾಕಾಲಿ ಇತ್ಯಾದಿ.

ಪಾರಂಪರಿಕ ಕೃಷಿ ಬದುಕಿನಲ್ಲಿ ಬಳಸುತ್ತಿದ್ದ ಭೌತಿಕ ವಸ್ತು ಪರಿಕರಗಳು ೧೯ ನೇಯ ಶತಮಾನ ಕೊಡಮಾಡಿದ ಉದ್ಯೋಗ ಕ್ರಾಂತಿಯ ಪರಿಣಾಮವಾಗಿ ತನ್ನ ಬಳಕೆಯ ಸ್ತರದಿಂದ ಹಿನ್ನೆಲೆಗೆ ಸರಿದುದನ್ನು ಅಧ್ಯಯನದ ಸಂದರ್ಭದಲ್ಲಿ ಗುರುತಿಸಿಕೊಳ್ಳಬಹುದು. ಐತಿಹಾಸಿಕವಾಗಿ ಕೃಷಿ ಜನರು ಬಳಸುತ್ತಿದ್ದ ವಸ್ತು ಪರಿಕರಗಳಿಗೆ ಸುದೀರ್ಘವಾದ ಇತಿಹಾಸವಿದೆ. ಅಧ್ಯಯನಕಾರರು, ಕ್ಷೇತ್ರಕಾರ್ಯದ ಮಾಹಿತಿದಾರರು ನೀಡಿದ ದಾಖಲೆಗಳ ಆಧಾರದಲ್ಲಿ ವೇದಗಳ ಕಾಲದಲ್ಲೂ ಕೃಷಿ ಪರಿಕರಗಳನ್ನು ಬಳಸುತ್ತಿದ್ದರು ಎಂಬುವುದನ್ನು ದೃಢೀಕರಿಸಬಹುದಾಗಿದೆ. ಹಾಗಾಗಿ ವೇದ ಕಾಲದಷ್ಟು ಹಿಂದಕ್ಕೆ ಚಲಿಸುವ ಈ ನೊಗ ನೇಗಿಲು ಮೊದಲಾದ ಕೃಷಿ ಪರಿಕರಗಳು ಕಾಲ, ದೇಶಕ್ಕೆ ಅನುಗುಣವಾಗಿ ಪರಿಷ್ಕಾರವನ್ನು ಹೊಂದಿರಬಹುದು. ಹಾಗಾಗಿಯೇ ಅಧ್ಯಯನದ ಸಂದರ್ಭದಲ್ಲಿ ದೊರೆತ ಮಾಹಿತಿಗಳು ಬಿನ್ನಬಿನ್ನವಾಗಿರುತ್ತದೆ. ಅಂದರೆ, ಕೃಷಿಯು ಮಾನವನ ಬದುಕಿನ ಜತೆಗೆ ಸುದೀರ್ಘಕಾಲದ ಸಂಬಂಧವನ್ನು ಹೊಂದಿದೆ. ಯಾವಾಗ ಆಧುನಿಕತೆಯ ಪ್ರವೇಶ ಆಯಿತೋ ಅಂದಿನಿಂದ ಮನುಷ್ಯ ಮತ್ತು ಅವನು ವಾಸ ಮಾಡುವ ಪ್ರಕೃತಿಯ ಜೊತೆಗೆ ಕಂದರ ಏರ್ಪಟ್ಟಿತು. ತಂತ್ರಜ್ಞಾನ ಕೇಂದ್ರಿತ ಆಧುನಿಕತೆಯು ಕೃಷಿ ಬದುಕಿನ ಪಲ್ಲಟಕ್ಕೆ ಕಾರಣವಾಯಿತು.

೩.೨.೩ ಉತ್ತ ಗದ್ದೆಯನ್ನು ಸಮತಟ್ಟು ಮಾಡುವ ಪರಿಕರಗಳು

ಪಲಯಿ/ ಹಲಗೆ

ತುಳುನಾಡು ಭೌಗೋಳಿಕವಾಗಿ ಏರು ತಗ್ಗುಗಳನ್ನೊಳಗೊಂಡ ಗುಡ್ಡಗಾಡು ಪ್ರದೇಶ. ಮೂಲತ ಕೃಷಿ ಯೋಗ್ಯ ಭೂಮಿಯೆಂದು ಹೇಳಲಾಗದು. ಕಾಲಾಂತರದಲ್ಲಿ ಇದನ್ನು ಕೃಷಿ ಯೋಗ್ಯ ಭೂಮಿಯಾಗಿ ಪರಿವರ್ತಿಸಿರುವುದು ಸ್ಪಷ್ಟ. ಮುಖ್ಯವಾಗಿ ಭತ್ತದ ಬೆಳೆ ಬೆಳೆಯುವ ಗದ್ದೆಗಳು ಸಮತಟ್ಟಾಗಿರಬೇಕು. ಈ ಗದ್ದೆಗಳಲ್ಲಿ ಮೂರು ಬೆಳೆ ತೆಗೆಯುವ ಪರಿಪಾಟವಿದೆ. ಇದಕ್ಕೆ, ಜನಪದರಲ್ಲೊಂದು ಗಾದೆ ಮಾತಿದೆ. 'ಏಣೇಲ್ಗ್ ಮೇಲ್ ನೀರ್, ಸುಗ್ಗಿಗ್ ಒಡ್ಡ ನೀರ್, ಕೊಳಕೆಗ್ ಅಡಿನೀರ್' ಎಂದು. ಏಣೇಲ್ ಬೆಳೆಗೆ ಹಿಂದಿನ ಕಾಲದಲ್ಲಿ ನೀರಿನ ಸಮಸ್ಯೆ ಇರುತ್ತಿರಲಿಲ್ಲ. ಆದರೆ, ಸುಗ್ಗಿ ಮತ್ತು ಕೊಳಕೆಗೆ ಮಳೆರಹಿತವಾದ ನೀರಿನ ಇತರ ಮೂಲಗಳಿಂದ ಬಳಸಲ್ಪಡುವ ನೀರಿನಿಂದಲೆ ಬೆಳೆ ಬೆಳೆಯುತ್ತಿದ್ದರು. ಈಗಾಗಲೆ ಹೇಳಿದಂತೆ, ಪರಿಶ್ರಮದಿಂದ ಸಮತಟ್ಟುಗೊಳಿಸಲಾಗಿರುವುದರಿಂದ ಗದ್ದೆಗಳಲ್ಲಿ ಏರು ತಗ್ಗು ಸಾಮಾನ್ಯ. ನೀರಿನ ಕೊರತೆ ಇರುವ ಸಂದರ್ಭದಲ್ಲಿ ಏರಿಕೆ ಇದ್ದ ಜಾಗದಲ್ಲಿ ನೀರು ನಿಲ್ಲದೆ ಒಣಗುವ ಪ್ರಸಂಗವಿರುತ್ತಿತ್ತು. ಈ ಕಾರಣಕ್ಕಾಗಿಯೆ ದ.ಕ ಜಿಲ್ಲೆಯ ಭತ್ತ ಬೆಳೆಯುವ ಕೃಷಿಕರು, ಕೆಸರು ಗದ್ದೆಯನ್ನು ಏರುಪೇರಾಗದಂತೆ, ಉಳುಮೆ ಮಾಡಿದ ಗದ್ದೆಯನ್ನು ಸಮತಟ್ಟುಗೊಳಿಸಲು ವಿಶೇಷವಾಗಿ ಈ ಹಲಗೆಯನ್ನು ಬಳಸುತ್ತಾರೆ. ಜೋಡೆತ್ತುಗಳಿಗೆ, (ಮುಖ್ಯವಾಗಿ ಕೋಣಗಳನ್ನೆ ಬಳಸಲಾಗುತ್ತದೆ) ಹಲಗೆಯನ್ನು ಕಟ್ಟಿ ಸಮತಟ್ಟುಗೊಳಿಸಲು ಪರಿಣಿತ ಉಳುಮೆಗಾರನಿಂದ ಮಾತ್ರ ಸಾಧ್ಯ. ಇಂತಹ ಹಲಗೆ ಹಾಕುವ ಪದ್ಧತಿ ದಕ್ಷಿಣಕನ್ನಡ ಜಿಲ್ಲೆಯ ಹೊರತಾಗಿ ಇತರೆಡೆಗಳಲ್ಲಿ ಕಂಡು ಬರುವುದಿಲ್ಲ. ಹಲಗೆ ಹಾಕುವ ಮೊದಲು ಮೇಲಿನ ಗದ್ದೆಯಿಂದ ನೀರು ಹರಿದು ಬಂದು ರಾಶಿ ಬಿದ್ದ ಮಣ್ಣನ್ನು, ತಗ್ಗು ಪ್ರದೇಶಕ್ಕೆ ಎಳೆದೊಯ್ಯಲು ವಿಶೇಷವಾದ ಓಡಮರಾಯಿ ಎಂಬ ಅರ್ಧ ದೋಣಿಯಾಕೃತಿಯ ಮರದ ಸಾಧನವೊಂದನ್ನು ಬಳಸುತ್ತಾರೆ. ಒಂದು ಗದ್ದೆಯನ್ನು ನೇಜಿ ನೆಡಲು, ಸೂಕ್ತವಾಗುವಂತೆ ೭ ಬಾರಿ ಉಳುವುದಿತ್ತು (ಏಲ್ ಸಾಲ್ ದಪ್ಪುನಿ) ಅಥವಾ ಅದಕ್ಕಿಂತಲೂ ಹೆಚ್ಚು ಬಾರಿ ಉಳುವುದಿತ್ತು. ಹೆಚ್ಚೆಚ್ಚು ಬಾರಿ ಉಳುಮೆ ಮಾಡಿದಂತೆ ಮಣ್ಣಿನ ಹೆಂಟೆಗಳೆಲ್ಲಾ ಕರಗಿ ಹಲಗೆ ಹಾಕುವುದರೊಂದಿಗೆ, ಮೇಲ್ಭಾಗದಲ್ಲಿ 'ಬಾವೆ' ಮಣ್ಣು ನಿಲ್ಲುವಂತೆ ಮಾಡಿ ನೀರು ಹಿಂಗದಂತೆ ಮಾಡುವುದೂ ಹಲಗೆ ಹಾಕುವುದರ ಉದ್ದೇಶ. ಹಾಗೆಯೇ ನೀರಿನ ಲಭ್ಯತೆ ಕಡಿಮೆಯಿರುವ ('ನೀರೊತ್ತಾಯ') ಗದ್ದೆಗಳಿಗೆ ಇದು ಅನಿವಾರ್ಯ. ಗದ್ದೆಗಳ ಹುಣಿಯನ್ನು ಕೆತ್ತಿ, ಕೆಸರು ಮಣ್ಣನ್ನು ಮೆತ್ತಿ (ಪುಣಿ ಪೂಜುನೆ) ಅಲ್ಲಿಯೂ ನೀರು ಹಿಂಗದಂತೆ ನೋಡಿಕೊಳ್ಳಲಾಗುತ್ತದೆ.

ಈ ಹಲಗೆಯನ್ನು ಸಾಮಾನ್ಯವಾಗಿ ಮಾವಿನಮರದಿಂದ ಮಾಡಲಾಗುತ್ತದೆ. ಇದರ ಮಧ್ಯಭಾಗದಲ್ಲಿ ಒಂದೂವರೆ ಅಡಿ ಅಗಲದಲ್ಲಿ, ಸುಮಾರು ಕಾಲು ಅಡಿ ಎತ್ತರದ ಭಾಗವಿರುತ್ತದೆ. ಇಲ್ಲಿ ರಂಧ್ರ ಮಾಡಿ ನಡು ಭಾಗಕ್ಕೆ ಮುನೆ ಜೋಡಣೆ ಮಾಡಲಾಗುತ್ತದೆ. ಈ ಮುನೆಯು, ಸುಮಾರು ೮-೯ ಅಡಿ ಉದ್ದವಿದ್ದು, ಇದರ ತುದಿಭಾಗವನ್ನು ಜೋಡೆತ್ತುಗಳ ನೊಗಕ್ಕೆ ಜೋಡಣೆ ಮಾಡಿ ಹಲಗೆ ಹಾಕುತ್ತಿದ್ದರು. ನೀರಿನ ಗದ್ದೆಗಳಿಗಲ್ಲದೆ

ಉಳುಮೆ ಮಾಡಿದ ಹುಡಿಗದ್ದೆಗೂ ದೊಡ್ಡ ದೊಡ್ಡ ಮಣ್ಣಿನ ಹೆಂಟೆಗಳನ್ನು ಹುಡಿ ಮಾಡುವ ಉದ್ದೇಶದಿಂದ ಹಲಗೆ ಹಾಕುವುದಿತ್ತು (ಪೊಡಿಕ್ ಪಲಯಿ ಪಾಡುನಿ). ಈ ರೀತಿ ಹುಡಿಗದ್ದೆಗೆ ಹಲಗೆ ಹಾಕುವಾಗ ಸಣ್ಣ ಹುಡುಗರನ್ನು, ಹಲಗೆಯ ಮಧ್ಯಭಾಗದಲ್ಲಿ ಕೂರಿಸುತ್ತಿದ್ದರು. ಉದ್ದೇಶವೆಂದರೆ, ಹೆಚ್ಚಿನ ಭಾರಕ್ಕೆ ಹೆಂಟೆಗಳು ಹುಡಿಯಾಗಿ ಗದ್ದೆ ಸಮತಟ್ಟಾಗುತ್ತಿತ್ತು. ಈಗಾಗಲೆ ಹೇಳಿರುವಂತೆ ಹಲಗೆ ಹಾಕುವ ಕೆಲಸವನ್ನು ನುರಿತ ಉಳುಮೆಗಾರನೆ ಮಾಡಬೇಕು. ಇಲ್ಲದಿದ್ದರೆ, ಅಪಾಯ ಕಟ್ಟಿಟ್ಟ ಬುತ್ತಿ. ಒಂದು ವೇಳೆ ಅಪ್ಪಿತಪ್ಪಿ ಕೋಣಗಳು ಹಲಗೆಯನ್ನೆಳೆಯುವ ಸಂದರ್ಭದಲ್ಲಿ ಕಾಲು ಜಾರಿ ಎದುರು ಭಾಗಕ್ಕೆ ಬಿದ್ದರೆ ಕಾಲು ಮುರಿತ ಖಂಡಿತ. ಒಟ್ಟಿನಲ್ಲಿ ಜಿಲ್ಲೆಯ ಭೌಗೋಳಿಕ ಲಕ್ಷಣಕ್ಕನುಗುಣವಾಗಿ ಇಲ್ಲಿಯ ಭತ್ತದ ಗದ್ದೆಯನ್ನು ಸಮತಟ್ಟುಗೊಳಿಸಲು ಇಲ್ಲಿಯ ಜನರು ಕಂಡುಕೊಂಡ ಉಪಾಯ ಹಾಗೂ ಶೋಧಿಸಿದ ವಿಶೇಷವಾದ ಒಂದು ಭೌತಿಕ ವಸ್ತು. ಏತ, ನೊಗ, ನೇಗಿಲು ಇತ್ಯಾದಿ ಕೃಷಿ ಪರಿಕರಗಳು ಭಾರತದಲ್ಲಿ ಕೃಷಿಬಳಕೆಯಿರುವ ಇತರ ಕಡೆಗಳಲ್ಲಿಯೂ ಕಂಡುಬರುತ್ತವೆ. ಆದರೆ ಅಲ್ಲೆಲ್ಲೂ ಈ ಹಲಗೆಯು ಕಂಡು ಬರುವುದಿಲ್ಲ. ಸಾವಿರ ನೇಗಿಲಲ್ಲಿ ಮಾಡಿದ ಉಳುಮೆಯನ್ನು ಒಂದು ಹಲಗೆ ಸಮತಟ್ಟು ಮಾಡಿತು (ಸಾವಿರ ನಾಯೆರ್‌ಡ್ ದತ್ತಿನವೆನ್ ಒಂಜಿ ಪಲಯಿ ಸಮತಟ್ಟ್ ಮಲ್ಪುಂಡ್) ಎನ್ನುವ ಗಾದೆ ಮಾತು ಹಲಗೆಯ ಮಹತ್ವವನ್ನು ಸಾರಿ ಹೇಳುತ್ತದೆ.

ಓಡಮರಾಯಿ

ತುಳುನಾಡಿನ ಬಹುತೇಕ ಗದ್ದೆಗಳು ಗುಡ್ಡ ಬೆಟ್ಟವನ್ನು ಕಡಿದು ಸಮತಟ್ಟಾಗಿಸಿದವುಗಳೇ ಆಗಿವೆ. ಭತ್ತದ ಗದ್ದೆಗಳಲ್ಲಿ ನಾಟಿ ಕೆಲಸದ ನಂತರ ಸುಮಾರು ೪ ಇಂಚು ನೀರು ನಿಲ್ಲಬೇಕು. ಹಾಗಾಗಿ ಗದ್ದೆಗಳು ಸಮತಟ್ಟಾಗಿರಬೇಕು. ಏರುಪೇರು ಇದ್ದಲ್ಲಿ ನೀರು ನಿಲ್ಲದೆ ಆ ಭಾಗ ಒಣಗಿ ಗದ್ದೆ ಒಡೆಯುವುದು, ಪೈರಿನ ಗದ್ದೆಯಲ್ಲಿ ಇತರ ಕಳೆಗಳು ಬೆಳೆಯುವ ಇತ್ಯಾದಿ ಸಮಸ್ಯೆಗಳು ಉಂಟಾಗುತ್ತವೆ. ಎತ್ತರ ಭಾಗದಲ್ಲಿ ಗದ್ದೆ ಒಡೆದಾಗ ಮತ್ತೊಮ್ಮೆ ನೀರು ಎಷ್ಟೆ ಹಾಯಿಸಿದರೂ ನೀರು ನಿಲ್ಲದೆ ಸಮಸ್ಯೆ ಹುಟ್ಟಿಕೊಳ್ಳುತ್ತದೆ. ಅದೂ ಕೂಡಾ ಸುಗ್ಗಿ ಮತ್ತೆ ಕೊಳಕೆಯ ಬೆಳೆಯ ಸಂಧರ್ಭದಲ್ಲಿ ನೀರಿನ ಸಮಸ್ಯೆ ಸಾಮಾನ್ಯವಾಗಿ ಇರುತ್ತದೆ. ಆದ್ದರಿಂದ, ಉಳುಮೆಯಾಗಿ ನಾಟಿ ಕಾರ್ಯಕ್ಕೆ ಸಿದ್ಧಗೊಳ್ಳುವ ಸಂದರ್ಭದಲ್ಲಿ ಗದ್ದೆ ಸಮತಟ್ಟಾಗಿರಬೇಕು. ಈಗಾಗಲೆ ಹೇಳಿದಂತೆ ಗುಡ್ಡಗಳನ್ನು ಸಮತಟ್ಟಾಗಿ ಕಡಿದು ರಚಿಸಿರುವುದು ಒಂದೆಡೆಯಾದರೆ, ಮೇಲಿನ ಗದ್ದೆಯಿಂದ ಕೆಳಗಿನ ಗದ್ದೆಗೆ ಹುಣಿಯನ್ನು ಕಡಿದು ನೀರು ಬಿಡುವ ಸಂದರ್ಭದಲ್ಲಿ ಮೇಲಿನ ಗದ್ದೆಯ ಮಣ್ಣು ಈ ನೀರಿನ ಮುಖಾಂತರ ಕೆಳಗಿನ ಗದ್ದೆಗೆ ಬಂದು ಒಂದೇ ಕಡೆ ರಾಶಿ ಬೀಳುವ ಪ್ರಸಂಗವಿರುತ್ತದೆ. ಅಲ್ಲದೆ ಇತರೆ ಕಾರಣಗಳಿಂದಲೂ ಒಂದೇ ಕಡೆ ಈ ಮಣ್ಣು ರಾಶಿ ಬೀಳುವುದಿದೆ. ಇಂತಹ ಸಂದರ್ಭಗಳಲ್ಲಿ ಒಂದೇ ಕಡೆ ಎತ್ತರವಾಗಿರುವ ಮಣ್ಣನ್ನು ತಗ್ಗು ಜಾಗಕ್ಕೆ ಸರಿಸಲು ಈ ಓಡಮರಾಯಿ ಎಂಬ ಈ ಸಾಧನವನ್ನು ಬಳಸಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ, ತಾಳೆಯ ಮರದ ಗರಿಯನ್ನು ಹೆಣೆದು ಈ

ರೀತಿ ಮಣ್ಣು ಜಾರಿಸಲು ಬಳಸುವುದಿದೆ. ನೆರೆಯ ಕೊಡಗು ಜಿಲ್ಲೆಯಲ್ಲಿ ಈ ರೀತಿ ಎತ್ತರವಾಗಿ ಬಿದ್ದ ಮಣ್ಣನ್ನು ಜಾರಿಸಲು ಕಾಡೆಮ್ಮೆಯ ಚರ್ಮವನ್ನು ಬಳಸುವುದಿದೆ.[೧೪]

ಇದು ಅರ್ಧ ದೋಣಿಯ ಆಕಾರದಲ್ಲಿದೆ. ಅದಕ್ಕಾಗಿಯೇ ಇದರ ಹೆಸರು ಓಡಮರಾಯಿ ಎಂದು ಬಂದಿರಬೇಕು. ಇದರ ಮೂತಿಯ ಭಾಗದಲ್ಲಿ ಹಗ್ಗ ಹಾಕಿ ಎಳೆಯಲು ಅನುಕೂಲವಾಗುವಂತೆ ತೂತೊಂದಿರುತ್ತದೆ. ಈ ಸಾಧನವನ್ನು ಮಾವು ಅಥವಾ ಕಾಸರಕದ ದೊಡ್ಡಗಾತ್ರದ ಮರವನ್ನು ಕೆತ್ತಿ ಮಾಡಲಾಗುತ್ತದೆ. ಸಾಮಾನ್ಯವಾಗಿ ಒಬ್ಬನು ಗದ್ದೆಯ ಎತ್ತರ ಭಾಗದಲ್ಲಿ ಮಣ್ಣನ್ನು ತುಂಬಿಸುವ ಕೆಲಸ ಮಾಡಿದರೆ ಉಳಿದಿಬ್ಬರು ಹಗ್ಗದ ಸಹಾಯದಿಂದ ತಗ್ಗು ಪ್ರದೇಶಕ್ಕೆ ಎಳೆದು ಸಮತಟ್ಟುಗೊಳಿಸುತ್ತಾರೆ. ಕೆಸರು ಗದ್ದೆಗಷ್ಟೆ ಇದರ ಬಳಕೆ ಸೀಮಿತ. ಇದು ಈ ಹಿಂದೆ ಕೃಷಿ ಕಾರ್ಯಕ್ಕೆ ತುಳುನಾಡಿನ ಕೃಷಿಕರು 'ಪಲಾಯಿಯನ್ನು ಗದ್ದೆ ಸಮತಟ್ಟುಗೊಳಿಸಲು ಬಳಸಿದಂತೆ ಓಡಮರಾಯಿಯನ್ನು ಈ ಪ್ರದೇಶದಲ್ಲಿ ರೈತರು ಹೆಚ್ಚಾಗಿ ಬಳಸುವುದು ವಿಶೇಷ. ಇದು ಸುಮಾರು ೪ ಅಡಿ ಉದ್ದ ಎರಡೂವರೆ ಅಡಿ ಅಗಲವಿರುತ್ತದೆ.

ಕುರುಂಟು ಅಥವಾ ಕಂಜಿ

ಇದೊಂದು ಕಲ್ಲಿನ ಸಾಧನ. ಇದು ನೋಡಲು ಸಾಂಬಾರು ಅರೆಯುವ ಕಲ್ಲಿನ ಗುಂಡು ಕಲ್ಲಿನಂತಿದೆ. ಇದು ಸುಮಾರು ಒಂದು ಒಂದೂವರೆ ಅಡಿ ಉದ್ದ, ಮುಕ್ಕಾಲು ಅಡಿ ಅಗಲದ ದುಂಡಗಿನ ಕಲ್ಲಾಗಿರುತ್ತದೆ. ತುದಿ ಭಾಗದ ಮೂತಿಯಲ್ಲಿ ಹಗ್ಗ ಹಾಕಿ ಎಳೆಯಲು ಅನುಕೂಲವಾಗುವಂತೆ ತೂತ ಕೊರೆದಿರುತ್ತಾರೆ. ಈ ಸಾಧನ ತುಳುನಾಡಿನ ತುಳುವರ ವಿಶೇಷ ವಸ್ತು. ಬಿತ್ತನೆಗೆ ಸಿದ್ದವಾದ ಗದ್ದೆಯ ನೀರು ಇಂಗಿಸುವ ಕೆಲಸಕ್ಕೆ ಇದನ್ನು ಬಳಸಲಾಗುತ್ತದೆ. ಈ ಸಂದರ್ಭದಲ್ಲಿ ಗದ್ದೆಯ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಸರಳ ರೇಖಾ ರೀತಿಯಲ್ಲಿ ಈ ಕುರುಂಟನ್ನು ಹಗ್ಗಹಾಕಿ ನೇರವಾಗಿ ಎಳೆಯುತ್ತಾರೆ. ಹೀಗೆ ಆರು ಅಥವಾ ಎಂಟು ಅಡಿ ಅಂತರದಲ್ಲಿ ಗದ್ದೆಯ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ನೇರವಾಗಿ ಎಳೆಯುತ್ತಾರೆ. ಈ ರೀತಿ ಎಳೆದಾಗ ನಿರ್ಮಾಣವಾದ 'ಬರ್ಜೆ'ಯ ಮುಖಾಂತರ ನೀರು ಹರಿದು ಕೆಸರು ಗದ್ದೆ ಬಿತ್ತನೆಗೆ ಸಿದ್ಧವಾಗುತ್ತದೆ. ಹೀಗೆ ಮಾಡದಿದ್ದಲ್ಲಿ ನೀರು ನಿಂತ ಕಡೆಗಳಲ್ಲಿ ಬೀಜ ಬಿತ್ತಿದ ಸಂದರ್ಭದಲ್ಲಿ ಆ ಜಾಗದಲ್ಲಿ ನೀರು ಬಿಸಿಯೇರಿ ಬೀಜ ನಾಶವಾಗುತ್ತದೆ (ಬೆಂದ್ರಕೊಡಿಪು). ಇದನ್ನು ತಪ್ಪಿಸುವ ಸಲುವಾಗಿ ಈ ಕುರುಂಟು ಎಳೆಯುವ ಕಾರ್ಯ ನಡೆಯುತ್ತದೆ.

ಹಲಗೆ ಹಾಕುವ ಸಂಪ್ರದಾಯ, ಅದೇ ರೀತಿ ಕುರುಂಟು ಅಥವಾ ಓಡಮಾರಾಯಿಯ ಬಳಕೆ ತುಳುನಾಡಿನಲ್ಲಿ ವಿಶೇಷವಾಗಿ ಕಂಡು ಬರುವ ವಸ್ತು ಪರಿಕರವಾಗಿದೆ.

ಉರಬಡು

ಉಳುಮೆಯ ಸಂದರ್ಭದಲ್ಲಿ ಕೋಣಗಳಿಗೆ ಹೊಡೆಯಲು 'ಉರಬಡು' ಎಂಬ ಬೆತ್ತವನ್ನು ಉಪಯೋಗಿಸುವರು. ಇದನ್ನು ಕಾಸರಕ ಅಥವಾ ಕೊರಜಿ ಜಾತಿಯ ಮರದ ಗೆಲ್ಲಿನಿಂದಲೇ ತಯಾರಿಸುತ್ತಾರೆ. ಮುಖ್ಯವಾಗಿ ಕಾಸರಕದ ಬೆತ್ತ ಬೇಗನೆ ತುಂಡಾಗುವುದಿಲ್ಲ, ಇದರ ಹೊಡೆತದಿಂದಾಗುವ ಗಾಯ ಬೇಗನೆ ವಾಸಿಯಾಗುತ್ತದೆ. ಅಲ್ಲದೆ, ಅದರಿಂದ ಹೊಡೆದರೆ ದೋಷ ಬರುವುದಿಲ್ಲವೆನ್ನುವ ನಂಬಿಕೆ ಕೂಡಾ ಇದೆ. ಇದಲ್ಲದೆ ಒಂದು ಬೆತ್ತದ ಉದ್ದ ಇಂತಿಷ್ಟೆ ಇರಬೇಕು ಎನ್ನುವ ನಿಯಮವಿದೆ. ಅದಕ್ಕೂ ನಿರ್ದಿಷ್ಟವಾದ ಆಯವಿದೆ. ಕೊಣಕ್ಕೆ ಹೊಡೆಯುವ ಹೊಡೆತ ಅದರ ತೊಡೆ ಭಾಗವನ್ನು ಮೀರಬಾರದು, ಮೀರಿದರೆ ಹೊಟ್ಟೆಯ ಭಾಗಕ್ಕೆ ಪೆಟ್ಟಾಗುವುದು, ಅದಕ್ಕಾಗಿ ಈ ಜಾಗ್ರತೆ. ಹೀಗೆ ಪ್ರತಿಯೊಂದರ ತಯಾರಿಯಲ್ಲೂ ವೈಜ್ಞಾನಿಕ ಚಿಂತನೆಯಿತ್ತು ಎನ್ನುವುದನ್ನು ಇಲ್ಲಿ ಗಮನಿಸಬಹುದು. ಚಂದಳಿಕೆ ಗಿಡದಿಂದಲೂ ಉಳುಮೆಯ ಬೆತ್ತವನ್ನು ತಯಾರಿಸುವುದಿದೆ. ಉರಬಡು ಕಲ್ಲಿಕಟ್ಟಿ ಹಾಕಿದ ಕಾಸರಕನ ಬೆತ್ತದಂತಹ ಸಾಧನಗಳ ತಯಾರಿಯಲ್ಲಿಯೂ ಕಲಾತ್ಮಕತೆಯಿತ್ತು. ಸಾಮಾನ್ಯವಾಗಿ ಮನುಷ್ಯರು ತಪ್ಪು ಮಾಡಿದರೆ ಅವನಿಗೆ ಉರಬಡುವಿನಲ್ಲಿ ಹೊಡೆಯಬೇಕೆಂದು ಹೇಳುವುದಿದೆ. ಇದರ ಪೆಟ್ಟು ಬಹಳ ತೀಕ್ಷ್ಣ. ತಪ್ಪು ಮಾಡಿದಾಗ ಈ ಬೆತ್ತದ ಪೆಟ್ಟು ಒಬ್ಬನಿಗೆ ಬಿದ್ದರೆ ಇದರ ರುಚಿ ಇನ್ನೊಬ್ಬನೂ ಅನುಭವಿಸಬೇಕಾದೀತು ಎಂಬುವುದಕ್ಕೆ ಕಾಲನಿಗೆ ಬಿದ್ದ ಪೆಟ್ಟು ಬೊಲ್ಲನಿಗೂ ಬೀಳಬಹುದು ('ಕಾಲಗ್ ಬತ್ತ್‌ನವು ಬೊಲ್ಲಗ್‌ಲಾ ಬರು') ಎಂದು ಹೇಳುವುದಿದೆ.

೩.೨.೪ ದವಸಧಾನ್ಯಗಳ ಸಂರಕ್ಷಣಾ ವಿಧಾನ

ಅಕ್ಕಿಭತ್ತವಿದ್ದಲ್ಲಿ ಇಲಿಹೆಗ್ಗಣಾಗಳು ಕಡಿಮೆಯೇನಲ್ಲ ('ಅರಿ ಬಾರ್ ಇತ್ತ್‌ಂಡ ಎಲಿ ಪೆರ್‌ಗುಡೆಗ್ ಕಮ್ಮಿಯೊ') –ಎಂಬುದೊಂದು ಗಾದೆ ಮಾತು. ಹಿಂದಿನ ಕಾಲದಲ್ಲಿ ಈಗಿನಂತೆ ಮನೆಮಠಗಳಿಗೆ ಕಾಂಕ್ರೀಟು ಹಾಕಿ ಗಟ್ಟಿಮುಟ್ಟಾಗಿ ಕಟ್ಟಲು ಅವಕಾಶವಿರಲಿಲ್ಲ. ಹಾಗಾಗಿ ಇಲಿ ಹೆಗ್ಗಣಗಳು ಸುಲಭದಲ್ಲಿ ಬಿಲಗಳನ್ನು ಕೊರೆದು ಒಳನುಗ್ಗಿ ಅಕ್ಕಿಭತ್ತಗಳನ್ನು ತಿಂದು ನಾಶ ಮಾಡುವುದು ಸಾಮಾನ್ಯ ವಿಚಾರ. ಅಕ್ಕಿ ಭತ್ತವಿದ್ದಲ್ಲಿ ಇಲಿ ಹೆಗ್ಗಣಗಳ ಕಾಟ ತಪ್ಪಿದ್ದಲ್ಲ. ಹಾಗೆಯೇ ಸಮೃದ್ಧಿ ತುಂಬಿದ ಮನೆಗೆ ನೆಂಟರಿಷ್ಟರು ಹೆಚ್ಚು ಎನ್ನುವ ಅರ್ಥವನ್ನೂ ಈ ಗಾದೆ ಮಾತು ಸೂಚಿಸುತ್ತದೆ.

ಅಕ್ಕಿ ಯಾ ಭತ್ತವನ್ನು ಬಹಳ ಕಾಲದವರೆಗೆ ಕೆಡದಂತೆ ಸಂರಕ್ಷಿಸಿಡುವ ತುಳುವರ ಕಲಾವಂತಿಕೆ ಮೆಚ್ಚುವಂಥದ್ದು. ಬೈಹುಲ್ಲಿನಲ್ಲಿ ಮಾಡಲ್ಪಟ್ಟ ದುಂಡಗಿನ ಆಕಾರದ ರಚನೆಯಲ್ಲಿ ಅಕ್ಕಿಯನ್ನು ಸುತ್ತಿ ಮುಡಿ ಕಟ್ಟುತ್ತಾರೆ. "ಅಕ್ಕಿಯನ್ನು ಭತ್ತದ ಹುಲ್ಲಿನ ಮೂಟೆಗಳಲ್ಲಿ ಸುತ್ತಿ ಮೇಲೆ ಹುರಿ ಮಾಡಿದ ಹಗ್ಗದಿಂದ ಕಟ್ಟುತ್ತಾರೆ. ಹೀಗೆ ಮೂಟೆಗಳಲ್ಲಿ ಸಂಗ್ರಹಿಸಲ್ಪಟ್ಟ ಅಕ್ಕಿ ಅತ್ಯುತ್ಕೃಷ್ಟವಾಗಿರುತ್ತಿತ್ತು" – ಎಂದು ಕ್ರಿ. ಶ. ೧೫೮೩ರಲ್ಲಿ ಇಂಗ್ಲೆಂಡಿನಿಂದ ಬಂದಿದ್ದ ಲಿನ್‌ಸ್ಕೊತೆನ್ ಉಲ್ಲೇಖಿಸಿದ್ದಾರೆ.[೧೫] ತುಳುನಾಡಿನ ಹಳೆಯ ಶಾಸನಗಳಲ್ಲಿಯೂ ಮುಡಿಗಳ ಪ್ರಸ್ತಾಪವಿದೆ.[೧೬]

ಹರಪ್ಪ, ಮೊಹೆನ್-ಜೋ-ದಾರೊ ನಾಗರೀಕತೆಗೆ ಸೇರಿದ ವಿಶಾಲ ಪ್ರದೇಶದಲ್ಲಿನ ಕಣಜಗಳಲ್ಲಿ (ಗ್ರಾನೆರಿ) ಆಹಾರಧಾನ್ಯ ಸಂಗ್ರಹಣೆಗೆ ವ್ಯವಸ್ಥೆಯಿದ್ದುದು ಕಂಡುಬರುತ್ತದೆ. ಅಲ್ಲದೆ ಸಂಗ್ರಹಿಸಲ್ಪಟ್ಟ ಕಣಜದಲ್ಲಿ ಗಾಳಿ ಆಡುವಂತೆ ಮತ್ತು ಇಲಿಗಳು ಒಳಸೇರದಂತೆ, ಯಾವುದೇ ತೆರನಾದ ಕೀಟ, ಪ್ರಾಣಿಗಳ ಹಾವಳಿ ಇರಲಾರದಂತೆ ಈ ವ್ಯವಸ್ಥೆಯನ್ನು ಸಿದ್ಧಪಡಿಸಲಾಗಿದ್ದುದು ಕಂಡುಬರುತ್ತದೆ.

ಅಕ್ಕಿಮುಡಿ ಕಟ್ಟುವುದು ಸುಲಭದ ಕೆಲಸವಲ್ಲ. ಗದ್ದೆ ಬಿತ್ತಲು ಮತ್ತು ಮುಡಿ ಕಟ್ಟಲು ಕಲಿತವರು ಬೇಸಾಯದ ಕೆಲಸಗಳಲ್ಲಿ ಪರಿಪೂರ್ಣರೆಂದು ತಿಳಿಯಲಾಗಿದೆ. ಮೊದಲು ತೌಡು ಅಥವಾ ಹೊಯಿಗೆಯ ಮುಡಿಗಳನ್ನು ಕಟ್ಟಿ ಅಭ್ಯಾಸ ಮಾಡಿದ ಮೇಲೆ ಅಕ್ಕಿ ಅಥವಾ ಭತ್ತದ ಮುಡಿ ಕಟ್ಟಲು ಆರಂಭಿಸುತ್ತಿದ್ದರು.

ಮುಡಿ ಕಟ್ಟುವ ಸಂದರ್ಭದಲ್ಲಿ ಬೇಕಾಗುವ ಹುರಿಹಗ್ಗಕ್ಕೆ ಮೊರಜ್ಜ ಎನ್ನುತ್ತಾರೆ. ಪರಿಪೂರ್ಣ ಅಕ್ಕಿ ಮುಡಿಯಲ್ಲಿ ೨೪ 'ಕಲ'ಗಳು [=ಹಗ್ಗದ ಚೌಕಗಳು] ಭತ್ತದ ಮುಡಿಯಲ್ಲಿ ೧೬ ಕಲಗಳು ಇರುತ್ತವೆ. ಮೊರಜ್ಜಕ್ಕಾಗಲಿ, ಅಕ್ಕಿ ಮುಡಿ ತಯಾರಿಕೆಯಲ್ಲಾಗಲಿ ಎಲ್ಲಾ ಜಾತಿಯ ಭತ್ತದ ಹುಲ್ಲುಗಳನ್ನು ಬಳಸಲಾಗುವುದಿಲ್ಲ. ಎತ್ತರವಾಗಿ ಬೆಳೆಯುವ ತಳಿಗಳಾದ ಅತಿಕರ, ಕಯಮೆ, ಗಂಧಸಾಲೆ ಇತ್ಯಾದಿ ತಳಿಗಳ ಬೈಹುಲ್ಲು ಇದಕ್ಕೆ ಸೂಕ್ತವೆಂದು ಪರಿಗಣಿಸಲಾಗುತ್ತದೆ. ಮುಡಿ ಕಟ್ಟಿಯಾದ ಬಳಿಕ ಅದರ ಅಂದ ಹೆಚ್ಚಲು ಮುಡಿಯಲ್ಲಿ ಎದ್ದು ತೋರುವ ಬೈಹುಲ್ಲನ್ನು ಬುಡದಿಂದ ಕತ್ತರಿಸಬೇಕು. ಇದನ್ನು 'ದುಂಬಿ ಕುದ್ಪುನು' ಎಂದೆನ್ನುವರು. ಇದಕ್ಕೆಂದೇ ಪ್ರತ್ಯೇಕ ಚೂರಿ (=ಕುತ್ತೊಲು) ಇರುತ್ತದೆ. ಇಷ್ಟಾದ ಬಳಿಕ ಅಕ್ಕಿ ಮುಡಿಗೆ ಸರಿಯಾದ ಆಕಾರ ಬರಲು ಅದನ್ನು ನೆಲದಲ್ಲಿ ಹೊರಳಿಸುತ್ತಿದ್ದರು. ಅಕ್ಕಿ ಮುಡಿಯನ್ನು ಕಟ್ಟಿದ ನಂತರ ಕೋಣೆಯೊಳಗೆ ಭದ್ರವಾಗಿಡುವುದು ಕ್ರಮ. ಈ ಕುರಿತಂತೆ 'ಹೊಡೆದು ಕಟ್ಟಿದರು ಕೋಣೆಗೆ ನೂಕಿದರು' ('ಗುದ್ದ್‌ದ್ ಕಟ್ಯೆರ್ ಕೋಣೆಗ್ ನೂಕ್ಯೆರ್') ಎಂಬ ತುಳುಒಗಟು ಇಲ್ಲಿ ಉಲ್ಲೇಖನೀಯ.

ಒಬ್ಬ ವ್ಯಕ್ತಿ ಅಥವಾ ಕುಟುಂಬದ ಘನಸ್ಥಿಕೆಯನ್ನು ಅವನು ಸಾಗೋಳಿ ಮಾಡುವ ಭೂಮಿಯ ವಿಸ್ತೀರ್ಣದ ಮೇಲೆ ತಿರ್ಮಾನಿಸಲಾಗುತ್ತಿತ್ತು. ಕೃಷಿ ಬಿತ್ತನೆಗೆ ಬಳಸುವ ಬೀಜದ ಲೆಕ್ಕಾಚಾರವನ್ನು ಮುಡಿಯ ಲೆಕ್ಕದಲ್ಲಿ ಮಾಡಲಾಗುತ್ತಿತ್ತು. ಉದಾಹರಣೆಗೆ ಎರಡು ಮುಡಿ ಸಾಗುವಳಿ ಭೂಮಿ ಹತ್ತು ಮುಡಿ ಸಾಗುವಳಿ ಭೂಮಿ ಇತ್ಯಾದಿ. ಈ ಅಳತೆಗೋಲು ಕೃಷಿಕನ ಸ್ಥಾನಮಾನವನ್ನು ಸೂಚಿಸುತ್ತದೆ. ಅಂತೆಯೇ ಜಮೀನುದಾರನ ಸ್ಥಾನಮಾನ ಮುಡಿಯ ಲೆಕ್ಕದಲ್ಲಿ ಪಡೆಯುವ ಗೇಣಿಯನ್ನಾಧರಿಸಿತ್ತು. ಹಿಂದಿನ ಕಾಲದಲ್ಲಿ ಕೌಟುಂಬಿಕ ಸಂಬಂಧ ಬೆಳೆಸುವ ಸಂಧರ್ಭದಲ್ಲಿ ಇದು ಪ್ರಮುಖ ಮಾನದಂಡವಾಗಿತ್ತು.

ಮುಡಿಯ ರಚನೆಯ ಸಂದರ್ಭದಲ್ಲಿ ಮುಖ್ಯವಾಗಿ 'ಕಲ್ಲೆ' ಮತ್ತು 'ಕೊದಂಟಿ' ಎಂಬ ಸಾಧನಗಳನ್ನು ಬಳಸಲಾಗುತ್ತದೆ. ಇವುಗಳಲ್ಲಿ 'ಕಲ್ಲೆ' ಹುರಿಹಗ್ಗದ ಒಂದು ವೃತ್ತಾಕಾರದ ರಚನೆಯಾಗಿದ್ದು, ಮುಡಿಯ ಗಾತ್ರವನ್ನು ನಿರ್ದೇಶಿಸುತ್ತದೆ. 'ಕಲ್ಲೆ ಹಾಕದೆ ಮುಡಿ ಕಟ್ಟಬೇಡ, ನಾಳೆಗೂ ಇಡದೆ ಇವತ್ತೆ ಮುಗಿಸಬೇಡ' ('ಕಲ್ಲೆ ಪಾಡಂದೆ ಮುಡಿ ಕಟ್ಟಡ, ಎಲ್ಲೆಗ್ ದೀಡಂದೆ ಇನಿಯೆ ಮುಗಿಪಡ'). ಅಂದರೆ ಕಲ್ಲೆ ಹಾಕದೆ ರಚಿಸಿದ ಮುಡಿ ಆಕಾರವಿಲ್ಲದೆ

ಗಟ್ಟಿಮುಟ್ಟಾಗಿರದೆ ಪ್ರಯೋಜನಕ್ಕೆ ಬಾರದು ಮತ್ತು ನಾಳೆಯ ಯೋಚನೆ ಇಲ್ಲದೆ ಆಡಂಬರದ ಬದುಕು ನಡೆಸುವವರಿಗೆ ಇದೊಂದು ಕಿವಿಮಾತು. ಹಾಗೆಯೇ 'ಕಲ್ಲೆ ಹಾಗೂ ಹಗ್ಗಕ್ಕೆ ಸಿಗುವುದಿಲ್ಲ' ('ಕಲ್ಲೆಗ್ ಬಲ್ಲ್‌ಗ್ ತಿಕ್ಕಾಯೆ') ಎಂದು ಎಲ್ಲಿಯೂ ಸಿಕ್ಕಿ ಬೀಳದ ಸೂಕ್ಷ್ಮಮತಿಯರನ್ನು ಸೂಚಿಸಿ ತುಳು ಗಾದೆ ಮಾತಿದೆ.

'ಕೊದಂಟಿ' ಸಾಮಾನ್ಯವಾಗಿ ತುಸು ಬಾಗಿದ ಕುಡುಗೋಲಿನಾಕಾರದಲ್ಲಿದ್ದು ಅದರ ಒಳಬಾಗಿದ ಭಾಗ ಕತ್ತಿಯ ಅಲಗಿನ ಆಕಾರವನ್ನು ಹೋಲುತ್ತದೆ. ಇದನ್ನು ವಿಶೇಷವಾಗಿ ಹುಣಿಸೆ ಮರದ ತಿರುಳಿನಿಂದ ಅಥವಾ ಹಲಸಿನ ಮರದ ತಿರುಳಿನಿಂದ ತಾಳೆಯ ಮರದಿಂದಲೂ ರಚಿಸಲಾಗುತ್ತದೆ. ಇದು ಸುಮಾರು ಒಂದು ಅಡಿ ಉದ್ದವಿರುತ್ತದೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಬ್ರಿಟಿಷರ ವಿರುದ್ಧ ನಡೆದ 'ಕಲ್ಯಾಣಪ್ಪನ ಕಾಟಕಾಯಿ' ಎಂದು ಪ್ರಖ್ಯಾತವಾದ ೧೮೩೭ರ ದಂಗೆಯ ಸಂದರ್ಭದಲ್ಲಿ ರೈತಾಪಿ ವರ್ಗ ಮುಡಿಕಟ್ಟುವ ಕೊದಂಟಿಯನ್ನು ಅಸ್ತ್ರದಂತೆ ಬಳಸಿದ್ದರೆಂಬ ಮಾಹಿತಿ ದೊರೆತಿದೆ.[೧೭]

ಒಂದು ಅಕ್ಕಿ ಮುಡಿಗೆ ಮೂರು ಕಳಸೆ ಅಕ್ಕಿಯನ್ನು ಹಾಕಲಾಗುತ್ತದೆ. ಕಳಸೆಗೆ ಹಾಕಿದ ಅಕ್ಕಿಯನ್ನು ಅಳತೆಗೆ ಸರಿದೂಗಿಸಲು 'ಗೀಸುಕೋಲು' ಎಂಬ ಸಾಧನವನ್ನು ಬಳಸಲಾಗುತ್ತದೆ. ಮುಡಿಯೊಳಗಿರುವ ಅಕ್ಕಿಯನ್ನು ಸ್ವಲ್ಪವೇ ಪರೀಕ್ಷಿಸಲೆಂದು ತೆಗೆಯಲು ಬಳಸುವ ಸಾಧನಕ್ಕೆ 'ಮುರ್ನಾಲಿ' ಎನ್ನಲಾಗುತ್ತದೆ. 'ಅಟ್ಟದಲ್ಲೊಂದು ಅಕ್ಕಿ ಮುಡಿ ಇಟ್ಟಿದ್ದೇನೆ, ಅದು ಕೆಂಪಕ್ಕಿಯೊ, ಬೆಳ್ತಿಗೆಯೊ ಎಂದು ಗೊತ್ತಿಲ್ಲ' ('ಅಟ್ಟೊಡ್ ಒಂಜಿ ಮುಡಿ ದಿತೆ ಅವು ಉರ್ಪೆಲೋ ಬೊಳಂತೆನೊ ಗೊತ್ತಿಜ್ಜಿ') ಎನ್ನುವ ಒಗಟು ಮುಡಿಯೊಳಗಿಂದ ಅಕ್ಕಿಯನ್ನು ತೆಗೆದು ಪರೀಕ್ಷಿಸುವ ಈ ಪರಿಕರಕ್ಕೆ ಕುರಿತಂತೆ ಈ ಮಾತು ಹುಟ್ಟಿ ಕೊಂಡಿದೆ.

ಅಕ್ಕಿ ಮುಡಿಯನ್ನು ಬಿಚ್ಚದೆ, ಬೇಕಾದಷ್ಟು ಪ್ರಮಾಣದ ಅಕ್ಕಿಯನ್ನು ಮುಡಿಯಿಂದ ತೆಗೆಯುವ ನಳಿಗೆಯಾಕಾರದ ಸಾಧನಕ್ಕೆ 'ಓಟೆ' ಎನ್ನುತ್ತಾರೆ. ಇದನ್ನು ಬಿದಿರು, ಕಂಚು ಮತ್ತು ತಾಮ್ರದಿಂದಲೂ ರಚಿಸುತ್ತಿದ್ದರು.

ಅಕ್ಕಿಮುಡಿಯ ಬಗೆಗೆ ಬುಕನನ್ ಕೂಡ ವಿವರ ನೀಡಿದ್ದಾರೆ. ಅಲ್ಲದೆ, ಅದು ಮಸ್ಕತ್, ಮುಂಬೈ, ಗೋವಾ ಹಾಗೂ ಮಲಬಾರ್‌ಗಳಿಗೆ ರಫ್ತು ಮಾಡಲ್ಪಡುತ್ತಿತ್ತು ಎಂದೂ ಮೇಜರ್ ಮುನ್ರೋ ಅದರ ಮೇಲಿನ ತೆರಿಗೆಯನ್ನು ಕಡಿಮೆ ಮಾಡಿದ್ದರು. ೪೨ ಮುಡಿಗಳಿಗೆ (ಒಂದು ಕೋರ್ಜಿ) ೨೪ರಿಂದ ಹದಿನೆಂಟುವರೆ ಪಗೋಡಾಗಳಿಗೆ ಮಾರಾಟವಾಗುತ್ತಿತ್ತು–ಎಂಬ ವಿವರಗಳೂ ಅಲ್ಲಿ ದೊರೆಯುತ್ತವೆ.[೧೮] ಅಕ್ಕಿಮುಡಿಗಳನ್ನು ಸಾಮಾನ್ಯವಾಗಿ ಕುತ್ತಟ್ಟದಲ್ಲಿಡುತ್ತಿದ್ದರು. ಇದು ಅಡುಗೆಕೋಣೆಯ ಮೇಲಿನ ಹೊಗೆಯಾಡುವ ಜಾಗ. ಇದು ಅಕ್ಕಿಯನ್ನು ಕೆಡದಂತೆ ಬಹಳ ಸಮಯದವರೆಗೆ ಇಡುವ ಪ್ರಶಸ್ತವಾದ ಜಾಗ. ಇನ್ನೊಂದು ಕ್ರಮದಲ್ಲಿ ನಾಲ್ಕು ಕಂಬಗಳ ಮೇಲೆ ಅಟ್ಟಳಿಗೆ ನಿರ್ಮಾಣ ಮಾಡಿ ಅದರಲ್ಲಿ ಅಕ್ಕಿ ಮುಡಿಗಳನ್ನಿಟ್ಟು ಅದರ ಮೇಲೆ ಬೈಹುಲ್ಲನ್ನಿಟ್ಟೂ ಮಾಡಿನಂತೆ ಮಾಡಿ ಸಂಗ್ರಹಿಸುವುದಿದೆ. ಈ ರೀತಿ ರಾಶಿ ಮಾಡಿ ಸಂಗ್ರಹಿಸುವ ಕ್ರಮಕ್ಕೆ 'ಕೂಟಾಯಿ' ಎನ್ನುವರು. 'ಕೂಟಯಿ' ಪದಕ್ಕೆ ಎಂ. ಮರಿಯಪ್ಪ ಭಟ್ಟರ ತುಳು –ಇಂಗ್ಲೀಷ್ ನಿಘಂಟಿನಲ್ಲಿ– ಪ್ಲೇಸ್ ಫಾರ್ ಸ್ಟೋರಿಂಗ್ ರೈಸ್– ಎಂದಿದೆ.

ಭೂಮಾಲೀಕನ ಮನೆಗೆ ಗೇಣಿ ರೂಪದಲ್ಲಿ ಸಂದಾಯವಾಗುವ ನೂರಾರು ಅಕ್ಕಿಮುಡಿಗಳನ್ನು ಪಿರಮಿಡ್ ಆಕಾರದಲ್ಲಿ ವ್ಯವಸ್ಥಿತವಾಗಿ ಜೋಡಿಸಿಡಲಾಗುವ 'ಕೂಟಾಯಿ' ನೋಡಲು ಆಕರ್ಷಣೀಯ.

ಭತ್ತವನ್ನು ಬಿಸಿಲು ಮಳೆಯಿಂದ ರಕ್ಷಿಸಲು ಮನೆಯಂಗಳದಲ್ಲಿಯೇ 'ತುಪ್ಪೆ' ಎಂದು ಕರೆಯಲಾಗುವ ಬೈಹುಲ್ಲಿನ ಆವರಣದ ವ್ಯವಸ್ಥೆ ಮಾಡುತ್ತಾರೆ. ಮನೆಯೊಳಗೆ ಬಿದಿರಿನ ತಡಿಕೆಗಳಿಂದ ರಚಿತವಾದ 'ಕದಿಕೆ'ಯಲ್ಲಿಯೂ ಭತ್ತವನ್ನು ಶೇಖರಿಸಿಡಲಾಗುತ್ತಿತ್ತು. ಕದಿಕೆಯ ತಡಿಕೆಯನ್ನು ತಯಾರಿಸುತ್ತಿದ್ದುದು ಹೆಚ್ಚಾಗಿ ಬೈರ ಸಮುದಾಯದವರು. ಬಿದಿರನ್ನು ಎರಡು ಬೆಟ್ಟು ಅಗಲವಾಗಿ ಸೀಳಿ ಕೊಳ್ಳುತ್ತಾರೆ. ನಂತರ ನಯವಾಗುವಂತೆ ಕತ್ತಿ ಚಾಕುವಿನಿಂದ ಸಿಬರು ತೆಗೆಯುತ್ತಾರೆ. ಕದಿಕೆಗಳ ಜೋಡನೆಗೆ ಬೇಕಾದಷ್ಟು ಉದ್ದ ಅಗಲಗಳನ್ನು ಕತ್ತರಿಸಿ ಸಿದ್ಧ ಪಡಿಸಿಕೊಂಡು ಕದಿಕೆಯನ್ನು ಹೆಣೆಯಲಾಗುತ್ತದೆ. 'ಕದಿಕೆ ಕಟ್ಟಿದವನಲ್ಲಿ ಗಂಟು ಕಟ್ಟಿದವನು ಸೆಣಸಾಡಿದಂತೆ' ಅಂದರೆ ಸಬಲರಲ್ಲಿ ದುರ್ಬಲರು ಸಂಘರ್ಷಕ್ಕಿಳಿದಂತೆ ಎಂಬ ಗಾದೆ ಮಾತು ಶ್ರೀಮಂತರು ಹಾಗೂ ಬಡಜನರನ್ನು ನಿರ್ದೇಶಿಸಿ ಹೇಳುತ್ತದೆ.

ದೊಡ್ಡ ಗಾತ್ರದ ಮರದ ಪತ್ತಾಯಗಳಲ್ಲಿಯೂ ಭತ್ತವನ್ನು ಸಂರಕ್ಷಿಸಲಾಗುತ್ತಿತ್ತು. ಅಲ್ಲದೆ ಬಿತ್ತನೆಗೆ ಅಥವಾ ಗೃಹಬಳಕೆಗೆ ಅಗತ್ಯವಾದ ದವಸಧಾನ್ಯಗಳನ್ನು 'ಕುರುಂಟು' (ಸಣ್ಣ ಮುಡಿ) ಕಟ್ಟಿ ಸಂರಕ್ಷಿಸಿಡಲಾಗುತ್ತಿತ್ತು. ಹುಣಸೆ ಹುಳಿಯನ್ನು ಅಕ್ಕಿ ಮುಡಿಯಂತೆ (ಪುಳಿತ ಕುರುಂಟು) ಬಾಳೆ ಹಗ್ಗದಲ್ಲಿ ಸುತ್ತಿಡುತ್ತಿದ್ದರು. ಗೆಣಸಿನ ಬಾಳುಕವನ್ನೂ ಮುಡಿಕಟ್ಟಿ ಇಡುವ ಕ್ರಮವಿತ್ತು.

ಸಣ್ಣ ರೈತರು ಮಣ್ಣಿನ ಮಡಕೆಯೊಳಗೆ ಬೂದಿ ಮಿಶ್ರಮಾಡಿ ಅದರ ಮೇಲ್ಭಾಗಕ್ಕೆ ಬೈಹುಲ್ಲನ್ನಿಟ್ಟು, ಸೆಗಣಿ ಮೆತ್ತಿ ಇಡುವ ಕ್ರಮವೂ ಇತ್ತು. ಈ ರೀತಿಯಾಗಿ ಅನೇಕ ವಿಧದಲ್ಲಿ ಆಹಾರಧಾನ್ಯ ಸಂರಕ್ಷಣೆ ಮಾಡಲಾಗುತ್ತಿತ್ತು. ಇದರಿಂದ ಎಲ್ಲಾ ಋತುಗಳಲ್ಲೂ ದವಸಧಾನ್ಯಗಳು ಕೆಡದಂತೆ ಸಂರಕ್ಷಿಸಲ್ಪಡುತ್ತಿದ್ದವು.

ವರ್ತಮಾನದ ಸಾಮಾಜಿಕತೆ

ಮುಡಿಯ ರಚನೆಯು ಅಕ್ಕಿ, ಭತ್ತ ಮೊದಲಾದ ಧಾನ್ಯಗಳನ್ನು ರಕ್ಷಿಸಿಡುವ ಸಾಧನವಾಗಿದೆ. ಪಾರಂಪರಿಕವಾದ ಕೃಷಿ ಬದುಕಿನ ಪಲ್ಲಟದೊಂದಿಗೆ ಮುಡಿಯ ಬಳಕೆಯೂ ಕಡಿಮೆಯಾಗಿದೆ. ಮುಡಿಯ ಬಳಕೆಯ ಸ್ಥಳದಲ್ಲಿ ಬೇರೆ ಬಗೆಯ ಆಧುನಿಕ ಶೇಕರಣೆಯ ವಸ್ತುಗಳು ಬಳಕೆಯಾಗುತ್ತವೆ. ಯಾಕೆಂದರೆ ಒಂದು, ಮುಡಿಯ ರಚನೆಗೆ ಸಂಬಂಧಿಸಿದ ಉಪ ಪರಿಕರಗಳು ಲಭ್ಯವಾಗುತ್ತಿಲ್ಲ. ಎರಡು, ಮುಡಿಯ ರಚನೆ ಹೆಚ್ಚು ಶ್ರಮ, ತಾಳ್ಮೆ ಮತ್ತು ಕಲಾವಂತಿಕೆಯನ್ನು ಬಯಸುವಂತದ್ದು. ಹಾಗಾಗಿ, ಮುಡಿ ಕಟ್ಟುವ ವ್ಯವಧಾನ ಯಾರಲ್ಲೂ ಉಳಿದಿಲ್ಲ. ಆದರೆ ದೈವ ದೇವಸ್ಥಾನಗಳಿಗೆ ನೀಡುವಾಗ ಹೊರೆಕಾಣಿಕೆಗಳನ್ನು ಇಂದೂ ಮುಡಿ ರೂಪದಲ್ಲಿ ಅರ್ಪಿಸುವುದನ್ನು ಗಮನಿಸಬಹುದು. ಗೃಹಪ್ರವೇಶದ ಸಂದರ್ಭದಲ್ಲೂ ಅಕ್ಕಿಮುಡಿಯನ್ನು ಮನೆಯೊಳಗೆ ಹೊರಳಿಸಿ ಪ್ರವೇಶ ಮಾಡುವುದನ್ನು ಕಾಣಬಹುದು.

೩.೨.೫ ಕಾಡುಪ್ರಾಣಿಗಳಿಂದ ಪೈರಿನ ಸಂರಕ್ಷಣೆ

ಹಿಂದಿನ ಕಾಲದಲ್ಲಿ ತಾವು ಕಷ್ಟಪಟ್ಟು ಬೆಳೆಸಿದ ಬೆಳೆಯನ್ನು ಕಾಡುಪ್ರಾಣಿಗಳ ಹಾವಳಿಯಿಂದ ರಕ್ಷಿಸಿಕೊಳ್ಳುವುದೇ ಜನರಿಗೆ ದೊಡ್ಡ ಸವಾಲಾಗಿತ್ತು. ಇದಕ್ಕಾಗಿ ಅವರು ಹಲವು ಉಪಾಯಗಳನ್ನು ಬಳಸಿದರು. ಇವುಗಳಲ್ಲಿ ಹುಲಿ ಓಡಿಸುವ, ಹಂದಿ ಓಡಿಸುವ, ಹಕ್ಕಿ ಓಡಿಸುವ ಸಾಧನಗಳು ಉಲ್ಲೇಖನೀಯ. ಈ ಸಾಧನಗಳನ್ನು ಬಳಸಿದಾಗ ಉಂಟಾಗುವ ಸದ್ದಿನಿಂದ ಪ್ರಾಣಿಗಳು, ಪಕ್ಷಿಗಳು ದೂರಹೋಗುತ್ತವೆಯೆಂಬುದು ಗಮನಾರ್ಹ ವಿಷಯ. ಇಲ್ಲಿ ಭೌತಿಕ ವಸ್ತುವೊಂದು ನಿರ್ದಿಷ್ಟ ಉದ್ದೇಶಕ್ಕಾಗಿ ಸಿದ್ಧಗೊಂಡಿದ್ದರೂ ಕೂಲಂಕಷವಾಗಿ ಗಮನಿಸಿದಾಗ ಹಲವು ಮಾಹಿತಿಗಳು ದೊರೆಯುತ್ತವೆ: ೧. ಇದರ ಸರಳ ತಂತ್ರಗಾರಿಕೆ. ೨. ಇದರ ಬಳಕೆಯ ಕಾಲದ ಭೌಗೋಳಿಕ ಚಿತ್ರಣವನ್ನು ಕಲ್ಪಿಸಿಕೊಳ್ಳಲು ಸಹಕಾರಿಯಾಗುತ್ತದೆ. ಈ ಕೆಳಗೆ ಹೆಸರಿಸಿರುವ ಸಾಧನಗಳ ಮೂಲಕ ನಮ್ಮ ಪೂರ್ವಿಕರು ತಮ್ಮ ಮತ್ತು ಕೃಷಿ ಸಂರಕ್ಷಣೆಗಾಗಿ ಸಂಶೋಧನಾ ಪ್ರವೃತ್ತಿಯ ಮೂಲಕ ಬಳಕೆಗೆ ತಂದ ವಸ್ತುಗಳು ಸಮಗ್ರ ಚಿತ್ರಣ ನೀಡುವ ಪ್ರಯತ್ನ ಮಾಡಲಾಗಿದೆ.

ಹುಲಿಮೊಂಟೆ

ಮನೆಯಲ್ಲಿ ಹುಲಿ ಓಡಿಸುವ ಸಾಧನವಿರಬೇಕಾದರೆ ಆ ಕಾಲದಲ್ಲಿ ಎಷ್ಟೊಂದು ಕಾಡು ಹಾಗೂ ಕಾಡುಪ್ರಾಣಿಗಳ ಹಾವಳಿಯಿರಬಹುದೆಂದು ಊಹಿಸಬಹುದು. ಈ ವಸ್ತು ಕಂಡುಬಂದ ಮನೆಯನ್ನು ಮುಖ್ಯವಾಗಿ ಗಮನಿಸಬೇಕಾಗಿದೆ. ಜೈನ ಬೀಡೊಂದರಲ್ಲಿ ಈ ಉಪಕರಣ ಕಂಡುಬಂದಿರುವುದರಿಂದ ಅವರ ಧಾರ್ಮಿಕ ನಿಲುವು ಸ್ಪಷ್ಟವಾಗುತ್ತದೆ. ಹುಲಿಗಳ ಉಪದ್ರವಿದ್ದರೂ ಅವುಗಳನ್ನು ಕೊಲ್ಲುತ್ತಿರಲಿಲ್ಲ, ಬದಲಾಗಿ ಅವುಗಳನ್ನು ಹೆದರಿಸಿ ಓಡಿಸುತ್ತಿದ್ದರು. ಹಿರಿಯರೊಬ್ಬರು ತಿಳಿಸಿದಂತೆ ಹುಲಿಗಳು ಬಹಳ ಹೆದರಿಕೆಯುಳ್ಳ ಪ್ರಾಣಿ ಮತ್ತು ಹೆಂಗಸಿನಷ್ಟು ಕೂಡಾ ಧೈರ್ಯವಿಲ್ಲದ ಪ್ರಾಣಿ.[೧೯] ಅದಕ್ಕಾಗಿಯೆ ಏನೋ ಪ್ರತಿಯೊಂದು ದನದ ಹಟ್ಟಿಯ ಬಾಗಿಲಿಗೆ ಅರೆಮಡಲನ್ನು ಕಟ್ಟುತ್ತಿದ್ದುದು. ಇದು ಬರಬರ ಎಂಬ ಶಬ್ದವನ್ನು ಮಾಡುತ್ತದೆ. ಆ ಶಬ್ದಕ್ಕೆ ಹುಲಿಗಳು ಓಡುತ್ತವೆ.

ತುಳುನಾಡನ್ನು ಸುಮಾರು ೧೪ ರಾಜಮನೆತನಗಳಾದ ಬಂಗಾಡಿಯ ಬಂಗರು, ವೇಣೂರಿನ ಅಜಿಲರು, ಸುರಾಲಿನ ತೋಳಹರು, ಹೊನ್ನೆಕಂಬಳಿ, ಪುತ್ತಿಗೆಯ ಚೌಟರು, ಕುಂಬಳೆಯರಸರು, ವಿಟ್ಲದ ದೊಂಬ ಹೆಗ್ಗಡೆ, ಮುಂತಾದವರು ಆಡಳಿತೆಯನ್ನು ಮಾಡಿದ್ದರು. ಇವರಲ್ಲಿ ೧೨ ಮನೆತನಗಳು ಜೈನ ವಂಶಕ್ಕೆ ಸೇರಿದ್ದಾಗಿ ದಾಖಲೆಯಿಂದ ಮಾಹಿತಿ ಲಭ್ಯವಿದೆ. ಹುಲಿಗಳನ್ನು ಕೊಲ್ಲುತ್ತಿರಲಿಲ್ಲ, ಹೆದರಿಸಿ ಓಡಿಸುತ್ತಿದ್ದರು ಎನ್ನುವ ಮಾಹಿತಿಯು ಕ್ಷೇತ್ರಕಾರ್ಯ ಸಂದರ್ಭದಲ್ಲಿ ದೊರಕಿದೆ. ಆದುದರಿಂದ ಅರಸೊತ್ತಿಗೆಯ ಧಾರ್ಮಿಕ ನಿಲುವು ಪ್ರಜೆಗಳ ಮೇಲೆ ಪ್ರಭಾವ ಬೀಳುತ್ತಿದ್ದದನ್ನು ನಾವು ಗಮನಿಸಬಹುದು.

ಈ ಪ್ರದೇಶದಲ್ಲಿ ಆಡಳಿತ ನಡೆಸುತ್ತಿದ್ದ ಅರಸರುಗಳು ವಿಶೇಷ ಸಂದರ್ಭಗಳಲ್ಲಿ ಮಾತ್ರ ಅರಣ್ಯವನ್ನು ಪ್ರವೇಶಿಸುತ್ತಿದ್ದರು. ಇದನ್ನು ಕೆಡ್ಡಸದ ಬೊಂಟೆ (ಬೊಂಟೆ=ಬೇಟೆ)ಎಂದು ಕರೆಯಲಾಗುವುದು(ಕೋಟಿ ಚೆನ್ನಯ

ಪಾಡ್ದನದಲ್ಲಿ ಪೆರುಮಾಳ ಬಳ್ಳಾಲ ಬೇಟೆಗೆ ಹೊರಡುವ ಸಂದರ್ಭದ ವಿವರಣೆಯಿದೆ). ಸಾಮಾನ್ಯವಾಗಿ ಶಿವರಾತ್ರಿಯ ಆಸುಪಾಸಿನಲ್ಲಿ ಮೂರು ದಿನಗಳ ಕಾಲ ಈ ಬೇಟೆಕಾರ್ಯ ನಡೆಯುತ್ತದೆ. ಬೇಟೆ ಎನ್ನುವುದು ತುಳುವರಿಗೆ ವೈಯಕ್ತಿಕ ಆಸಕ್ತಿಯ ಕ್ರಿಯಾಚರಣೆ ಮಾತ್ರ ಆಗಿರಲಿಲ್ಲ. ಗ್ರಾಮಸ್ಥರ ಕೋರಿಕೆಯ ಮೇರೆಗೆ, ಕೃಷಿ ಭೂಮಿಯ ಮೇಲೆ ವನ್ಯಮೃಗಗಳಿಂದ ಆಗಬಹುದಾದ ಆಕ್ರಮಣವನ್ನು ನಿಯಂತ್ರಿಸುವ ಸಲುವಾಗಿಯೂ ಈ ಬೇಟೆ ಕಾರ್ಯ ನಡೆಯುತ್ತದೆ.

ಸುಳ್ಯ ಪರಿಸರದಲ್ಲಿ ಫಕೀರ ಗೌಡ ಸುಮಾರು ೪೮ ಹುಲಿ ಮದುವೆ ಮಾಡಿಕೊಂಡಿದ್ದಕ್ಕೆ ದಾಖಲೆ ಇದ್ದು ಬ್ರಿಟಿಷರ ಆಗಮನದ ನಂತರ ಈ ಬೇಟೆ ಸಂಸ್ಕೃತಿಗೆ ಇನ್ನಷ್ಟು ಬೆಂಬಲ ಸಿಕ್ಕಿತು. ಒಂದು ಹುಲಿ ಮದುವೆಯೆಂದರೆ ಆ ವ್ಯಕ್ತಿ ೪೦ ಹುಲಿಗಳನ್ನು ಕೊಂದಿರಬೇಕು.[೨೦] ಇಂದು ಆ ಕಾಲದಲ್ಲಿ ಅಷ್ಟು ಹುಲಿಗಳ ಸಂಖ್ಯೆ ಇದ್ದಿರಬಹುದೇ ಎಂಬ ಅನುಮಾನ ಮೂಡುತ್ತದೆ. ಆದರೆ ಮಂಗಳೂರಿನ ಪಿಲಿಕುಲ, ಪುತ್ತೂರಿನ ಪಿಲಿಪಾದೆ, ಪಿಲಿಬೈಲು, ಬೆಳ್ತಂಗಡಿಯ ಪಿಲಿಗೂಡು, ಪಿಲಿಗುಂಡಿ, ಬಂಟ್ವಾಳದ ಹುಲಿಮೇರು, ಪಿಲಿಂಗಳ, ಪಿಲಿಕಲ, ಪಿಲಿಕಾಜೆ, ಪಿಲಿಕೂರು (ವಿಟ್ಲ), ಪಿಲಿ ಪಂಜರ ಎಂಬಿತ್ಯಾದಿ ತುಳುನಾಡಿನಲ್ಲಿ ಹುಲಿಗೆ ಸಂಬಂದಪಟ್ಟ ಸ್ಥಳನಾಮಗಳು ಒಂದು ಕಾಲದಲ್ಲಿ ಹುಲಿಗಳ ಸಂಖ್ಯೆ ಹಾಗೂ ಈ ಪ್ರದೇಶಗಳಲ್ಲಿ ಅವುಗಳ ಚಲನವಲನ ಇದ್ದುದಕ್ಕೆ ಸಮರ್ಥನೆಯನ್ನು ನೀಡುತ್ತವೆ.

ನೀರಮೊಂಟೆ

ಬೆಳೆದುನಿಂತ ಪೈರನ್ನು ಹಂದಿಗಳ ಹಿಂಡು ನಾಶಪಡಿಸುತ್ತಿದ್ದುದು ಸರ್ವೇ ಸಾಮಾನ್ಯ. ಅವುಗಳನ್ನು ಹೆದರಿಸಿ ಓಡಿಸುವುದಕ್ಕೂ ಅವರೊಂದು ಉಪಾಯವನ್ನು ಕಂಡುಹಿಡಿದಿದ್ದರು. 'ನೀರಮೊಂಟೆ' ಎಂಬ ಹೆಸರಿನ ಈ ಸಾಧನವನ್ನು ಬಿದಿರಿನಿಂದ ತಯಾರಿಸುತ್ತಿದ್ದರು. ನಳಿಗೆ ಆಕಾರದಲ್ಲಿರುವ ಇದನ್ನು ಮೇಲಿನ ಗದ್ದೆಯಿಂದ ಕೆಳಗಿನ ಗದ್ದೆಗೆ ನೀರು ಹರಿಯುವಲ್ಲಿ ಇಡಲಾಗುತ್ತದೆ. ರಾತ್ರಿಯ ನಿಶ್ಶಬ್ದದಲ್ಲಿ ಈ ನಳಿಗೆಯಲ್ಲಿ ಪ್ರತಿಬಾರಿ ನೀರು ತುಂಬಿದಾಗ ಅದು ಹಿಂಭಾಗದಲ್ಲಿಟ್ಟ ಕಲ್ಲುಚಪ್ಪಡಿಗೆ ಬಡಿದು ಶಬ್ದ ಮಾಡುವಾಗ ಹಂದಿಗಳು ಹೆದರಿ ಓಡಿಹೋಗುತ್ತಿದ್ದವು. ಇದು ಕಡಿಮೆ ಖರ್ಚಿನಲ್ಲಿ ಸಿದ್ಧವಾದ ತಂತ್ರಗಾರಿಕೆ.

ತುಳುನಾಡಿನಲ್ಲಿರುವ ಪಂಜಿಮೊಗರು, ಪಂಜಿಕಲ್ಲ್, ಪಂಜಾಲ್, ಪಂಜಿಮೂಲೆ, ಪಂಜಿಬಲೆ, ಪಂಜಿಪಾಡಿ ಮುಂತಾದ ಹೆಸರುಗಳುಲ್ಲ ಸ್ಥಳನಾಮಗಳು ಹಂದಿಗಳ ಅಗಾಧತೆಯನ್ನು ಸೂಚಿಸುತ್ತದೆ.

ಮೊಲ, ಹಕ್ಕಿ ಮುಂತಾದವುಗಳ ಬಾಧೆಯಿಂದ ತಪ್ಪಿಸಿಕೊಳ್ಳಲು 'ಮುಡ್ಕಣೆ' ಅಥವಾ ಉರುಳು ಇಡುವುದು ಸಾಮಾನ್ಯವಾಗಿತ್ತು.

ಕಾಪು/ಕಳ್ಳಿಕುತ್ತುವಿಕೆ

ಆಟಿ ಅಮಾವಾಸ್ಯೆಯ ದಿನ ಕಾಪು ಅಥವಾ ಕಳ್ಳಿಯನ್ನು ನೇಜಿ ನೆಟ್ಟ ಗದ್ದೆಗೆ, ತರಕಾರಿ ಚಪ್ಪರಗಳಿಗೆ, ಹಟ್ಟಿ, ಗೊಬ್ಬರದ ರಾಶಿಗೆ ಇಡುವ ಅಥವಾ ಊರಿಡುವ ಕ್ರಮವಿದೆ. ನಾಟಿಯಾದ ಗದ್ದೆಯ ಮಧ್ಯದಲ್ಲಿ ಕಾಪು ಇಡುವುದು, ಕಾಸರಕ–ಮುಂಡೇವು ನೆಡುವುದು ಕೂಡಾ ಪೈರಿನ ಸಂರಕ್ಷಣೆಯ ಉದ್ದೇಶವೆ ಆಗಿದ್ದಿರಬೇಕು. 'ಕಾಪು' ಎಂದರೆ ಉದ್ದನೆಯ ಮೂರು ಕೋಲುಗಳನ್ನು (ಮುಕ್ಕಾರು) ಜೋಡಿಸಿ, ತುದಿಭಾಗದಲ್ಲಿ ಮಾದೇರು ಬಿಳಲಿನಿಂದ ಗೂಡಿನಾಕಾರ ಹೆಣೆದು 'ಕೋರಿಪಂತಿ'ಯೆಂಬ ಹುಲ್ಲನ್ನಿಟ್ಟು ಅದರಲ್ಲಿ ಕಳ್ಳಿಯ ತುಂಡೊಂದನ್ನು ಇಡಲಾಗುತ್ತದೆ.[೨೦]

ಕಾಪು ಎನ್ನುವ ಹೆಸರೇ ಸೂಚಿಸುವಂತೆ ರಕ್ಷಣೆಯೇ ಇದರ ಉದ್ದೇಶ. ಒಂದೆಡೆ ಕಣ್ಣಿನ ದೃಷ್ಟಿ ಬೀಳಬಾರದೆಂಬ ನಂಬಿಕೆಯಾದರೆ ಇನ್ನೊಂದೆಡೆ ಹಕ್ಕಿಗಳು ಇದರಲ್ಲಿ ಗೂಡುಕಟ್ಟಿ ಗದ್ದೆಯಲ್ಲಿರುವ ಹುಳಹುಪ್ಪಟೆಗಳನ್ನು ತಿಂದು ಪೈರಿಗೆ ಒದಗುವ ಹಾನಿಯನ್ನು ತಪ್ಪಿಸುವ ಉದ್ದೇಶವಿತ್ತೆಂದು ತಿಳಿಯಬಹುದು. ದವಸಧಾನ್ಯಗಳನ್ನು ಇಲಿ ಮತ್ತಿತರ ಜಂತುಗಳಿಂದ ರಕ್ಷಿಸಲು ಮರದಿಂದ ಮಾಡಿದ ಇಲಿಗೂಡು ಮತ್ತು ಕಬ್ಬಿಣದಿಂದ ಮಾಡಿದ ಇಲಿಕತ್ತರಿಯನ್ನು ಇಡಲಾಗುತ್ತಿತ್ತು.

ಬಿರು

ಬೆಳೆದ ಪೈರುಗಳು ಆಳೆತ್ತರವಿದ್ದು, ತೆನೆಯ ಭಾರಕ್ಕೆ ಪೈರು ಬಾಗಿ ಗದ್ದೆ ಹುಣಿಯ ಮೇಲೆ ಬಾಗುವುದು ಸ್ವಾಭಾವಿಕ. 'ಬಿರು' ಎಂಬ ಸಾಧನದಿಂದ ಗದ್ದೆಯ ಹುಣಿಯಲ್ಲಿರುವ ತೆನೆಗಳು ನಡೆದಾಡುವಾಗ ಕಾಲಡಿಗೆ ಸಿಕ್ಕಿ ಹಾಳಾಗದಂತೆ ಸರಿಸಲಾಗುತ್ತಿತ್ತು. ಎರಡು ಉದ್ದನೆಯ ಕೋಲುಗಳನ್ನು ಜೋಡಿಸಿ ಮಾಡಿದ ಸಾಧನವೇ ಬಿರು. ಅಲ್ಲದೆ, ಹುಣಿಬದಿಗೆ ಕೋಲುಗಳನ್ನು ಊರಿ, ಕೋಲಿನಿಂದ ಕೋಲಿಗೆ 'ಮೊರಜ್ಜ'ವನ್ನು ಕಟ್ಟಿಯೂ ಪೈರು ಹುಣಿಗೆ ಬೀಳದಂತೆ ಮಾಡುತ್ತಿದ್ದರು.

ಬಿಸಿಲು ಮಳೆಯಿಂದ ರಕ್ಷಿಸಿಕೊಳ್ಳುವ ಪರಿಕರಗಳು

ಗದ್ದೆ ಉಳುವಾಗ, ನೇಜಿ ನೆಡುವಾಗ– ಮಳೆಯಿಂದ ತಮ್ಮನ್ನು ರಕ್ಷಿಸಿಕೊಳ್ಳಲು ತೆಂಗಿನ ಗರಿಯಿಂದ ಹೆಣೆಯಲ್ಪಡುತ್ತಿದ್ದ ಸಾಧನ ಕೆಡೆಂಜೊಲು, ಬಿದಿರಿನ ಜಾತಿಯ ಓಟೆ ಹಾಗೂ ಚಿಪುಲು ಎಂಬ ಜಾತಿಯ ಎಲೆಯನ್ನು ಬಳಸಿ ರಚಿಸಲಾಗುತ್ತಿದ್ದ ಗೊರಬು ಅಥವಾ ಕೊರಂಬು, ತಾಳೆ ಮರದ ಜಾತಿಯ ಪನೋಲಿ ಗಿಡದ ಗರಿಯಿಂದ ರಚಿತವಾಗುತ್ತಿದ್ದ ಪನೋಲಿ ಇಂದು ಸಂಪೂರ್ಣವಾಗಿ ಕಣ್ಮರೆಯಾಗಿವೆ.

ಬಿಸಿಲಿನ ಝಳಕ್ಕೆ ತಲೆಯ ರಕ್ಷಣೆಗಾಗಿ, ಗೊಬ್ಬರ, ಮಣ್ಣು, ಕೊಯ್ದ ಪೈರು ಅಥವಾ ನೇಜಿ ಹೊರುವ ಸಂದರ್ಭಗಳಲ್ಲಿ ಉಪಯೋಗಿಸಲ್ಪಡುತ್ತಿದ್ದ ಮುಟ್ಟಾಲೆಯು ಇಂದು ಮರೆಯಾಗಿದೆ. ಅಡಿಕೆ ಹಾಳೆ ಹಾಗೂ ನೇಯ್ಗೆಗೆ ಈಚಲ ಮರದ ಕನ್ನಿಯನ್ನು ಬಳಸಿ ರಚಿತವಾಗುತ್ತಿದ್ದ ಈ ಮುಟ್ಟಾಲೆ ತುಳುವರ ವಿಶಿಷ್ಟವಾದ ತೊಡುಗೆಯೂ

ಹೌದು. ಇದರಲ್ಲಿಯೂ ಹಲವು ಹೆಸರಿನ, ವಿವಿಧ ಮಾದರಿಯ, ಗಂಡಸರು–ಹೆಂಗಸರು ಪ್ರತ್ಯೇಕವಾಗಿ ಬಳಸುವ ಮುಟ್ಟಾಲೆಯನ್ನು ಕಾಣಬಹುದು. ಪಾಡ್ದನಗಳಲ್ಲಿ ಇದರ ಉಲ್ಲೇಖ ಕಾಣಸಿಗುತ್ತದೆ.[೨೨]

ಮುಟ್ಟಾಲೆಯ ತಯಾರಿಕೆ ಹಾಗೂ ವಿವಿಧ ಬಗೆಯದ್ದನ್ನೂ ಬಿ.ಎ.ಸಾಲೆತ್ತೂರು ಅವರ ಏನ್ಸೆಂಟ್ ಕರ್ನಾಟಕದಲ್ಲಿ ವಿವರಣೆ ಲಭ್ಯವಿದೆ.[೨೩] ಒಣಗಿದ ಅಡಿಕೆ ಹಾಳೆಯಿಂದ ಮಾಡಲ್ಪಡುವ ಈ ಮುಟ್ಟಾಳೆ ದೋಣಿಯಾಕಾರದಲ್ಲಿದ್ದು ಸುಮಾರು ೫–೬ ಇಂಚು ಉದ್ದವಿದ್ದು, ೩–೪ ಇಂಚಿನಷ್ಟು ಅಗಲವಿರುವುದು. ತಲೆಯ ಮುಂಭಾಗದಿಂದ ಹಿಂಭಾಗದವರೆಗೆ ಇದ್ದು, ಬಿಸಿಲು, ಮಳೆಗೆ ಕೆಲಸಕಾರ್ಯ ಮಾಡಲು ಒಳ್ಳೆಯ ಸಾಧನ ಇದಾಗಿದೆ. ಈ ರೀತಿಯ ಟೊಪ್ಪಿಗೆ ಬೇರೆ ಯಾವುದೇ ಪ್ರದೇಶದಲ್ಲೂ ಕಾಣಸಿಗುವುದಿಲ್ಲ. ಒಕ್ಕಲಿಗರ ಕನ್ನಿ ಮುಟ್ಟಾಲೆಗೆ ಹಿಂದಿನಿಂದ ಗಂಟುನೇಯ್ಗೆ, ಹೊಲೆಯರ ಕನ್ನಿ ಮುಟ್ಟಾಲೆಗೆ ಮುಂಭಾಗದಲ್ಲಿ ಗಂಟು, ಕೈಪುಡರ ಅಡ್ಡ ತಿಪ್ಪಿ ಮುಟ್ಟಲೆ ಮತ್ತು ಕೊರಗರ ನೆರಿ ಮುಟ್ಟಾಲೆ ಹೀಗೆ ವೈವಿಧ್ಯಮಯ ರಚನೆಯ ಮುಟ್ಟಾಲೆಗಳಿದ್ದವು.

ಅಲ್ಲದೆ ಗಂಡಸರು ಧರಿಸುವ ದೊಡ್ಡ ಮುಟ್ಟಾಲೆಗೆ ಗೊಂಪರು ಎಂಬ ಹೆಸರಿದೆ. ದೈವಾರಾಧನೆಯಲ್ಲಿ ತನ್ನಿಮಾನಿಗ ಧರಿಸುವ ಮುಟ್ಟಾಲೆಯಲ್ಲಿ ಎರಡೂ ಕಡೆಯಲ್ಲಿ ನೇಯ್ಗೆ ಇರುತ್ತದೆ. ಪಾಡ್ದನವೊಂದರಲ್ಲಿ ಮುಟ್ಟಾಲೆಯ ಉಲ್ಲೇಖ ಈ ರೀತಿ ಇದೆ:

'ಓ ಕಣಿಯುಳ್ಳ ಮುಟ್ಟಾಳೆ–––ಓಬೇಲೆ

ಓ ದೀಯೆಗೆ ಬಬ್ಬು–––ಓ ಬೇಲೆ'

ಮುಂಡಾಸಿನವನು ಬರುವುದಿಲ್ಲ, ಮುಟ್ಟಾಲೆಯವನಿಗೆ ಕೊಡುವುದಿಲ್ಲ (ಮುಂಡಾಸ್ ದಾಯೆ ಬರ್ಪುಜೆ, ಮುಟ್ಟಾಲೆದಾಯಗ್ ಕೊರ್ಪುಜಿ). ಅಂದರೆ, ಸ್ಥಿತಿವಂತರ ಸಂಬಂಧ ಬರುವುದಿಲ್ಲ ಮತ್ತು ಸಾಮಾನ್ಯದವನಿಗೆ ಕೊಡುವುದಿಲ್ಲ ಎನ್ನುವ ಗಾದೆ ಮುಟ್ಟಾಲೆ ಧರಿಸುವವರು ಶ್ರಮಿಕ ವರ್ಗದವರು. ಈ ಶ್ರೀಮಂತ ಮತ್ತು ಬಡವರ ಅಂತರವು ಮುಂಡಾಸು ಮತ್ತು ಮುಟ್ಟಾಲೆ ಈ ಎರಡು ಭೌತಿಕ ವಸ್ತುಗಳು ಸಮರ್ಥವಾಗಿ ಬಿಂಬಿಸುತ್ತವೆ. ತುಳುನಾಡಿನಲ್ಲಿ ಆರಾಧನೆಗೊಳ್ಳುವ ಕೊರಗಜ್ಜ ದೈವದ ಆರಾಧನೆಯ ಸಂಧರ್ಭದಲ್ಲಿ ತಲೆಗೆ ಮುಟ್ಟಾಲೆಯನ್ನು ಇಟ್ಟು ಕೋಲ ನಡೆಯುವುದನ್ನು ಇಂದಿಗೂ ಕಾಣಬಹುದು. ಅಂದರೆ ಕೊರಗಜ್ಜ ದೈವವಾಗಿ ಆರಾಧನೆಗೆ ಒಳಪಟ್ಟರೂ ಕೂಡ ಮುಟ್ಟಾಲೆ ಸಾಂಕೇತಿಕವಾಗಿ ಬಳಸಲ್ಪಡುತ್ತದೆ. ಪೂರ್ವದಲ್ಲಿ ಕೊರಗಜ್ಜ ದೈವದ ಕೋಲದ ಸಂದರ್ಭದಲ್ಲಿ ಅಡಿಕೆ ಹಾಳೆಯ ಮುಟ್ಟಾಲೆಯನ್ನು ಬಳಸಿದ್ದರೂ ಸಹ ಆಧುನಿಕ ಸಂದರ್ಭದಲ್ಲಿ ಜನರು ಆರ್ಥಿಕವಾಗಿ ಸದೃಡರಾದಂತೆ ಚಿನ್ನ, ಬೆಳ್ಳಿಯ ಮುಟ್ಟಾಲೆಗಳು ಆರಾಧನಾ ಪರಿಕರಗಳಾಗಿ ಬಳಸಲ್ಪಡುತ್ತಿದೆ, ಆದರೆ ಮುಟ್ಟಾಲೆಯ ಸಾಂಕೇತಿಕತೆ ಬದಲಾಗಿಲ್ಲ.

ಆಧುನಿಕ ಪೂರ್ವದ ಜನರು ಬದುಕುತ್ತಿದ್ದ ಸಾವಯವ ಪರಿಸರದಲ್ಲಿ ಎದುರಾಗುವ ಸವಾಲುಗಳನ್ನು ಎದುರಿಸಲು, ತನ್ನ ರಕ್ಷಣೆಗಾಗಿ ಮತ್ತು ದಿನನಿತ್ಯದ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಕೆಲವು ವಸ್ತು ಪರಿಕರಗಳನ್ನು ಬಳಸುತ್ತಿದ್ದುದಕ್ಕೆ ಈ ಮೇಲಿನ ವಸ್ತು ಪರಿಕರಗಳೆ ಆಧಾರವಾಗಿದೆ. ಮಾನವನು ತನ್ನ ಪ್ರಾಕೃತಿಕ ಪರಿಸರದಲ್ಲಿ

ದೊರೆಯುವ ವಸ್ತುಗಳನ್ನು ಬಳಸಿ ತನಗೆ ಬೇಕಾದ ಪರಿಕರಗಳನ್ನು ರೂಪಿಸುತ್ತಿದ್ದ. ಇದರಲ್ಲಿ ಮಾನವನ ಕೌಶಲ, ಬುದ್ಧಿವಂತಿಕೆ ವ್ಯಕ್ತವಾಗುತ್ತದೆ. ತನ್ನ ಅಗತ್ಯತೆಗಾಗಿ ಬಳಸಿದ ವಸ್ತುಗಳು ಆ ಸಾಮಾಜಿಕ ಬದುಕು ಪಲ್ಲಟದೊಂದಿಗೆ ಕಣ್ಮರೆಯಾಯಿತು ಎಂಬುದು ಇಲ್ಲಿ ಉಲ್ಲೇಖನೀಯ.

೩.೨.೬ ಕೆಲಸಗಳ ನಿರ್ವಹಣೆಗೆ ಅನುಕೂಲವಾಗುವ ಪರಿಕರಗಳು

ಪೊರಕೆ (ಹಿಡಿಸೂಡಿ) ಅಥವಾ ಮೈಪುಸೂಡಿ

ದ.ಕ ಜಿಲ್ಲೆಯ, ಕೃಷಿ ಕಾರ್ಯಕ್ಕೆ ಬಹಳವಾಗಿ ಉಪಯೋಗಿಸಲ್ಪಡುವ ವಸ್ತುಗಳಲ್ಲಿ ತೆಂಗಿನ ಗರಿಯ ಕಡ್ಡಿಯಿಂದ ಮಾಡಲ್ಪಟ್ಟ ಹಿಡಿಸೂಡಿಯು ಒಂದು. ಕಲ್ಪವೃಕ್ಷವೆಂದು ಕರೆಯಲ್ಪಡುವ ತೆಂಗು ಬಹೂಪಯೋಗಿ ಮರ. ಜಿಲ್ಲೆಯಲ್ಲಿ ಇದರ ಗರಿಯಿಂದ ಕಡ್ಡಿಯನ್ನು ಬೇರ್ಪಡಿಸಿ ರಚಿಸಲಾದ ಹಿಡಿಸೂಡಿ ಅಥವಾ ಪೊರಕೆ ತುಳುವರ ದಿನನಿತ್ಯದ ಬದುಕಿನಲ್ಲಿ ಅದೂ ಕೃಷಿ ಕಾರ್ಯದಲ್ಲಿ ಬಳಸಲ್ಪಡುವ ಒಂದು ಪ್ರಮುಖವಾದ ವಸ್ತು. ಪೊರಕೆಯನ್ನು ಇನ್ನಿತರ ಸೋಗೆ ಅಥವಾ ಹುಲ್ಲಿನಿಂದ ರಚಿಸುವುದಿದೆಯಾದರೂ, ತೆಂಗಿನಕಡ್ಡಿ ಹಿಡಿಸೂಡಿ ಬಹು ವಿಶೇಷವಾದುದು ಅಲ್ಲದೆ ಯೋಗ್ಯವಾದುದು.

ತೆಂಗಿನ ಗರಿಯಿಂದಲೇ ಹಿಡಿಸೂಡಿ ರಚಿಸಲಾಗುತ್ತದೆಯಾದರೂ, ನಾಜೂಕಿನ ಕೆಲಸಗಳಿಗೆ ಗರಿಯ ತುದಿ ಹಾಗೂ ಕಡೆಯ ಭಾಗದ ಕಡ್ಡಿಗಳನ್ನು ಬಳಸಲಾಗುತ್ತದೆ. ಹಿಡಿಸೂಡಿಯು ಪೈರಿನಿಂದ ಭತ್ತವನ್ನು ಬೇರ್ಪಡಿಸುವ ಸಂದರ್ಭದಿಂದ ತೊಡಗಿ ಭತ್ತವನ್ನು ಬೇಯಿಸಿ, ಒಣಗಿಸಿ ಅಕ್ಕಿ ಮಾಡುವಲ್ಲಿವರೆಗೂ ಅನಿವಾರ್ಯ ಹಾಗೂ ಅತ್ಯಗತ್ಯವಾಗಿ ಬೇಕಾದ ವಸ್ತುವಾಗಿದೆ. ಭತ್ತ ಒಣಗಿಸುವ ಸಂದರ್ಭದಲ್ಲಿ ಒಬ್ಬನೆ ವ್ಯಕ್ತಿ ಎರಡೆರಡು ನಮೂನೆಯ ಹಿಡಿಸೂಡಿಯನ್ನು ಬಳಕೆ ಮಾಡಿ ಭತ್ತ ಒಣಗಿಸುತ್ತಿದ್ದ ಆ ದೃಶ್ಯ ಈ ಜಿಲ್ಲೆಯಲ್ಲಿ ಇನ್ನು ಅಲಭ್ಯ. ಸೆಗಣಿ ಸಾರಿಸಲು, ಕಸ ಗುಡಿಸಲು, ದಿನ ನಿತ್ಯ ಬಳಕೆಯಾದ ವಸ್ತು ಇದಕ್ಕೆ ಮಾತ್ರ ಸೀಮಿತವಲ್ಲದೆ ಇನ್ನೂ ಅನೇಕ ಕಾರಣಗಳಿಂದ ಇದು ಅಪೂರ್ವವೆನಿಸಿದೆ. ಇಂದು ಕಾಲ ಬದಲಾಗಿದೆ. ಕೃಷಿ ಕಾರ್ಯ ಹೊಸ ಸ್ವರೂಪವನ್ನು ಪಡೆದಿದೆ. ತೆಂಗಿನಗರಿಯ ಪೊರಕೆಯ ಬಳಕೆಯೂ ಕ್ಷೀಣಿಸಿದೆ. ಇದರ ಬದಲಿಗೆ, ಈ ಜಿಲ್ಲೆಯಲ್ಲೂ ತಂಗೀಸು, ಈಚಲು ಮತ್ತು ಹುಲ್ಲಿನಿಂದ ರಚಿಸಲ್ಪಟ್ಟ ಪೊರಕೆಗಳು ಅದರ ಸ್ಥಾನವನ್ನು ಆಕ್ರಮಿಸಿಕೊಂಡಿದೆ.

ಈ ಹಿಡಿಸೂಡಿಯ ಕುರಿತಂತೆ ಜನಪದರಲ್ಲಿ ಅದೆಷ್ಟೊ ಗಾದೆಗಳು, ಒಗಟುಗಳು, ನಂಬಿಕೆಗಳು ಜನಜನಿತವಾಗಿದೆ. 'ಸಾವಿರ ಮಕ್ಕಳಿಗೆ ಒಂದೇ ಉಡಿದಾರ' ('ಸಾರ ಜೋಕ್ಲೆಗ್ ಒಂಜೇ ಒಕ್ಕನೂಲು') ಎಂಬ ಗಾದೆಯನ್ನು ಹೇಳಿ ಮಕ್ಕಳನ್ನು ಹಿರಿಯರು ತಬ್ಬಿಬ್ಬಾಗಿಸಿದರೆ, ಅದರ ಮೌಲ್ಯವೇನೆಂಬುವುದನ್ನು ತಿಳಿಸುವ 'ಸಾವಿರ ಸಲ ಗುಡಿಸಿ ಎಸೆದ ಸಣ್ಣ ಹಿಡಿಸೂಡಿಯೂ ಒಂದು ದಿನ ಬೇಕಾಗಬಹುದು ('ಸಾರ ಸರ್ತಿ ಅಡಿತ್‌ದ್ ದಕ್ಕಿನ ಕುಂಟಿ ಮೈಪುಲಾ ಒಂಜಿ ದಿನ ಬೋಡಾಪುಂಡ್') –ಗಾದೆಯ ಮೂಲಕ ಅದರ ಮಹತ್ವವೇನೆಂದು ವಿವರಿಸುತ್ತಾರೆ. ಏನಾದರು ತಪ್ಪು ಕೆಲಸ ಮಾಡಿದವನಿಗೆ ಹಿಡಿಸೂಡಿಯಲ್ಲಿ (ಪೊರಕೆ) ಹೊಡೆಯಬೇಕು ಎಂದು ಹೇಳುವುದು

ಸಾಮಾನ್ಯ. 'ಕೆಯಿತ ಸೂಡಿಡ್ ಹಾಕ್‌ಂಡ ಬಾರ್ ಉದುರು, ಮೈಪು ಸೂಡಿಡ್ ಹಾಕ್‌ಂಡ ಅಬುರು ಉದುರು'ಎಂಬ ಗಾದೆಯಿಂದ ಹಿಡಿಸೂಡಿಯಿಂದ ಹೊಡೆಸಿಕೊಂಡವನ ಮಾನ ಹೋಗುತ್ತದೆ ಎನ್ನುವ ಆಶಯ ಇಲ್ಲಿದೆ. ಅಂದಿನ ಶ್ರೇಣಿಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಮುಂದುವರಿದವರು ಬಳಸುತ್ತಿದ್ದ ಪರಿಕರಗಳು ಶೋಷಿತ ವರ್ಗಕ್ಕೆ ಕನ್ನಡಿಯೊಳಗಿನ ಗಂಟು. ಸಂಧಿ–ಪಾಡ್ದನಗಳಲ್ಲಿ ಬರುವ ಉಲ್ಲೇಖದಂತೆ ಶ್ರೀಮಂತ ವರ್ಗ ತಲೆ ಬಾಚಲು ಚಿನ್ನ, ಬೆಳ್ಳಿ, ಕಂಚು, ದಂತ ಅಥವಾ ಎಮ್ಮೆಯ ಕೋಡಿನಿಂದ ರಚಿಸಲಾದ ಬಾಚಣಿಕೆಯ ಬಳಕೆಯ ಉಲ್ಲೇಖ ದೊರಕುತ್ತದೆ. ಆದರೆ ಕೆಳಸ್ತರದ ಶೋಷಿತ ಜನಾಂಗದ ಮಂದಿ ಇದರಿಂದ ವಂಚಿತರಾಗಿದ್ದರು. ಸಿಕ್ಕು ಕಟ್ಟಿದ, ಎಣ್ಣೆ ಕಾಣದ ಅವರ ತಲೆಯನ್ನು ಅವರು ಬಾಚುತ್ತಿದ್ದುದು ನೆಲಗುಡಿಸಿ, ಸೆಗಣಿ ಸಾರಿಸಿ ಚೂಪಾದ ಕಡ್ಡಿಯ ಹಿಡಿಸೂಡಿಯನ್ನು ಇನ್ನಷ್ಟು ಗಿಡ್ಡವಾಗಿಸಿ, ಅದರಿಂದ ತಮ್ಮ ತಲೆಯನ್ನು ಬಾಚುತ್ತಿದ್ದರು ಎನ್ನುವುದು ನಂಬಲಸಾಧ್ಯವಾದರೂ, ಶೋಷಿತ ವರ್ಗದ ಮಂದಿಗೆ ಇದು ಸತ್ಯದ ಮಾತಾಗಿತ್ತು. ಇಂದಿನ ಪ್ಲಾಸ್ಟಿಕ್ ಯುಗದ ಮುಂದುವರಿದ ಸಮಾಜದಲ್ಲಿ ನಿಂತು ಹಿಡಿಸೂಡಿಯಿಂದ ರಚಿತವಾದ ಬಾಚಣಿಕೆಗಳು ತಲೆ ಬಾಚಲು ಬಳಸಲ್ಪಡುತ್ತಿತ್ತು ಎಂಬ ವಿಚಾರ ನಂಬಲಸಾಧ್ಯ.[೨೪]

ಹಿಡಿಸೂಡಿಯ ಹಿನ್ನೆಲೆಯಲ್ಲಿ ನಂಬಿಕೆಗಳು ಮತ್ತು ವಿಧಿನಿಷೇಧಗಳು ಹತ್ತುಹಲವು ಇವೆ: ಮನೆಯಿಂದ ಯಾರಾದರೂ ಕಾರ್ಯಪ್ರಯುಕ್ತ ಹೊರಡುವ ಸಂದರ್ಭದಲ್ಲಿ ಗುಡಿಸಬಾರದು; ರಾತ್ರಿಯ ಹೊತ್ತು ಮನೆಯೊಳಗೆ ಗುಡಿಸುವ ಹಾಗಿಲ್ಲ; ಅಸೌಖ್ಯದ ವ್ಯಕ್ತಿಯ ಚಾಪೆಯಡಿಯಲ್ಲಿ ಹಿಡಿಸೂಡಿಯನ್ನು ಇಟ್ಟರೆ ದುಷ್ಟ ಶಕ್ತಿಗಳು ಆಚೆ ಸುಳಿಯದು. ಹಿಡಿಸೂಡಿಯನ್ನು ಒಲೆಗೆ ಹಾಕಬಾರದು. ಗಂಡಸಿಗೆ ಹಿಡಿಸೂಡಿಯಿಂದ ಹೊಡೆಯಬಾರದು.

ಮಗು ಮಲಗುವಲ್ಲಿ ತೊಟ್ಟಿಲಿನಡಿಗೂ ಹಿಡಿಸೂಡಿಯನ್ನಿಡುತ್ತಾರೆ. ಕೆಟ್ಟ ದೃಷ್ಟಿಯನ್ನು ಹಿಡಿಸೂಡಿ ಕಡ್ಡಿಯಿಂದ ನಿವಾಳಿಸಿ ತೆಗೆಯುವ ಪದ್ಧತಿ ಇದೆ. ಫಲ ನೀಡದ ತೆಂಗಿನ ಮರಕ್ಕೆ ಹಿಡಿಸೂಡಿ ಹಾಗು ಚಪ್ಪಲಿ ಕಟ್ಟುವ ಪದ್ದತಿಯಿದೆ. ಸಮೃದ್ಧವಾಗಿ ಬೆಳೆದು ನಿಂತ ತರಕಾರಿ ಹಿತ್ತಲಿಗೂ ಹಿಡಿಸೂಡಿ ಕಟ್ಟುವುದಿದೆ. ಹಿಡಿಸೂಡಿಯನ್ನು ಕೈಯಲ್ಲಿ ಕೊಡುವುದು ಜಗಳಕ್ಕೆ ಕಾರಣವಂತೆ. ತುದಿ ಮೇಲೆ ಹಾಕಿ ಹಿಡಿಸೂಡಿಯನ್ನು ಇಡುವುದು ನಿಷಿದ್ಧ. ಹಿಡಿಸೂಡಿಗೆ ಹುರಿಹಗ್ಗದ ಕಟ್ಟಹಾಕುವುದು ಅನಿಷ್ಟ.

ವೈದ್ಯಕೀಯ ದೃಷ್ಟಿಯಿಂದಲೂ ಇದು ಅಪೂರ್ವವೆ. ಎಳೆಯ ಮಕ್ಕಳಲ್ಲಿ ಕುರು ಉಂಟಾದಲ್ಲಿ ಅದಕ್ಕೆ ಹಿಡಿಸೂಡಿ ಕಡ್ಡಿಯನ್ನು ಸುಟ್ಟು ಹಚ್ಚಿದರೆ ನಿವಾರಣೆಯಾಗುವುದು. ಹಾಗೇಯೆ 'ಬೆಸುರ್ಪು' ಬಿದ್ದಾಗಲೂ ನಿವಾರಣೆಗೆ ಹಿಡಿಸೂಡಿಯನ್ನು ಬಳಸಲಾಗುತ್ತದೆ. ಮಹಿಳೆಯರ ಆಯುಧವೆಂದೆ ಬಿಂಬಿಸಲ್ಪಡುವ ಪೊರಕೆ ಇತಿಹಾಸದಲ್ಲೂ ಉಲ್ಲೇಖನೀಯ. ೧೭೫೭ರ ಪ್ಲಾಸಿ ಕದನ ಸಂದರ್ಭದಲ್ಲಿ ಸೀಮಿತ ಸಂಖ್ಯೆಯ ಸೈನಿಕರ ಬ್ರಿಟಿಷ್ ಸೈನ್ಯ ಗೆಲುವು ಸಾಧಿಸಿದ ಸಂದರ್ಭದಲ್ಲಿ ಬಂಗಾಳದ ಮಹಿಳೆಯರೆಲ್ಲರೂ ಹಿಡಿಸೂಡಿ ಹಿಡಿದು ಬೀದಿಗಿಳಿಯುತ್ತಿದ್ದರೆ ನಮ್ಮ ಸೋಲು ಖಚಿತ ಎಂಬ ರೊಬರ್ಟ್ ಕ್ಲೈವನ ಮಾತು ಇಲ್ಲಿ ಉಲ್ಲೇಖನೀಯ. ಒಟ್ಟನಲ್ಲಿ ಈ ಜಿಲ್ಲೆ ಹಿಡಿಸೂಡಿಗೆ ನೀಡಿದ ಮಾನ್ಯತೆ ಅನನ್ಯವಾದುದು.

ಪೊರಕೆಯನ್ನು 'ಮಡಿ–ಮೈಲಿಗೆ' ಎನ್ನುವ ದ್ವಿಪಾತ್ರದಲ್ಲಿ ಕಾಣುತ್ತೇವೆ. ಒಂದೆಡೆ ಶುಚಿಗೊಳಿಸಲು ಪೊರಕೆಯನ್ನು ಬಳಸಿದರೆ ಮತ್ತೊಂದೆಡೆ ಮೈಲಿಗೆಯಾಗಿ/ ನಿಷೇಧಾತ್ಮಕವಾಗಿಯೂ ಇದು ಬಳಕೆಯಲ್ಲಿದೆ. ಅಂದರೆ ಮೈಲಿಗೆ ಎಲ್ಲಾವನ್ನು ತನ್ನೊಳಗೆ ಇಟ್ಟುಕೊಂಡು ಮಡಿ ಮಾಡುವ ಕಲ್ಪನೆ (ಉದಾ: ಕೊರಗ ಜನಾಂಗ) ಹಿಡಿಸೂಡಿ ಅಪಶಕುನವನ್ನು ಕಳೆಯುವುದು. ಶಕುನದಲ್ಲಿ ಮೈಲಿಗೆ–ಕೆಟ್ಟದ್ದನ್ನು ಕಳೆದು ಪಾವಿತ್ರ್ಯವನ್ನು ತಂದು ಕೊಡುವುದು, ಲಾಳದ ಕೆಲಸವು ಕೂಡ ಹಿಡಿಸೂಡಿಯ ಹಾಗೆ. ಪಣೋರು ಕೂಡಾ ನಾಲ್ಕು ದಿಕ್ಕಿಗೂ–ಸವೆದಿರಬೇಕು. ಪತ್ತ್ ಕೂಡಿನಲ್ಲಿ ಮುತ್ತು ಉಂಡು: ನಾಲ್ಕು ಜನ ನಡೆದಾಡಿದಲ್ಲಿ ಅದಕ್ಕೂ ಪಾವಿತ್ರ್ಯತೆ ಬರುವುದು.

ಇಂದಿಗೂ ಪ್ರಸ್ತುತವಾಗಿರುವ ಈ ಪೊರಕೆಯ ಬಳಕೆ, ಇಂದು ಹುಲ್ಲು, ತಂಗೀಸುಗಳಿಂದ ಮಾಡಿರುವಂತಹುದನ್ನು ಕಾಣಬಹುದು. ಆದರೆ ಗುಡಿಸುವ ಪ್ರಕ್ರಿಯೆಯನ್ನು ಯಾವುದರಿಂದಲೂ ಮರೆಮಾಚಲು ಸಾಧ್ಯವಾಗಿಲ್ಲ.

ಹೊಡೆ ಮಂಚ (ಪಡಿ ಮಂಚ)

ಭತ್ತವನ್ನು ಪೈರಿನಿಂದ ಬೇರ್ಪಡಿಸಲು ಕರಾವಳಿ ಕರ್ನಾಟಕದಲ್ಲಿ ಬಳಸುವ ಸಾಧನವನ್ನು ಪಡಿಮಂಚ ಅಥವಾ ಆನೆಪಡಿ ಎನ್ನುತ್ತಾರೆ. ಇದನ್ನು ಹಲಸು, ತೇಗ ಮೊದಲಾದ ಗಟ್ಟಿಮುಟ್ಟಾದ ಮರಗಳಿಂದ ತಯಾರಿಸಲಾಗುತ್ತದೆ. ತಾಳೆ ಮರದಿಂದಲೂ ರಚಿಸುವುದಿದೆ. ಕಾಡಿನ ಬೀಳಲಿನಿಂದಲೂ ರಚಿಸುವುದಿದೆ. ಸಾಧರಣವಾಗಿ ಇದು ಮೂರುವರೆ ಅಡಿ ಅಗಲ, ಐದು ಅಡಿ ಉದ್ದ ಹಾಗೂ ಮೂರು ಅಡಿ ಎತ್ತರವಿರುತ್ತದೆ. ನಾಲ್ಕು ಕಾಲುಗಳನ್ನು ಹೊಂದಿದ ಈ ಸಾಧನ ಆಯತಾಕಾರದಲ್ಲಿದ್ದು, ಇದಕ್ಕೆ ಒಂದೊಂದು ಇಂಚು ಅಂತರ ಬಿಟ್ಟು ಮರದ ಅಥವಾ ತಾಳೆ ಮರದ ರೀಪರನ್ನು ಬಳಸಿ ರಚಿಸಲಾಗುತ್ತದೆ. ಪೈರಿನ ಸೂಡಿಯನ್ನು ಇದಕ್ಕೆ ಬಡಿಯುವಾಗ ರೀಪರುಗಳ ಮಧ್ಯ ಭಾಗದಲ್ಲಿ ಭತ್ತ ಉದುರುತ್ತದೆ. ಈ ಸಾಧನ ಕೃಷಿಕರಿಗೆ ಮೂರೂ ಬೆಳೆಗೂ ಅಗತ್ಯವಾದ ವಸ್ತುವಾಗಿದೆ. ಒಂದೇ ಮಂಚದಲ್ಲಿ ಐದಾರು ಜನರು ಭತ್ತದ ಸೂಡಿಯನ್ನು ಬಡಿಯಲು ಸಾಧ್ಯವಾಗುತ್ತದೆ. ಈ ರೀತಿ ಭತ್ತದ ಸೂಡಿಯನ್ನು ಅದಕ್ಕೆ ಬಡಿದಂತೆ, ತಳಭಾಗದಲ್ಲಿ ಭತ್ತದ ರಾಶಿ ಮೇಲೇರುತ್ತಾ ಪಡಿಯ ಮೇಲ್ಭಾಗದವರೆಗೆ ಬರುವುದಿದೆ. ಇದನ್ನು ಸಮೃದ್ಧಿಯ ಸಂಕೇತವಾಗಿ ಭಾವಿಸುವುದಿದೆ. ಈ ರೀತಿ ಭತ್ತ ಪಡಿಗೆ ತಾಗಿದೊಡನೆ ತೆಂಗಿನಕಾಯಿಯನ್ನೊಡೆಯುವ ಸಂಪ್ರದಾಯವಿದೆ. ಕೆಲವೊಂದು ಕಡೆಗಳಲ್ಲಿ ಆನೆಪಡಿಯ ಬದಲಿಗೆ, ಬೀಳಲಿನಿಂದ ನೇಯ್ದು ಮಾಡಿದ ಪಡಿಯಾಕಾರದ ಸಾಧನವನ್ನು ಬಳಸುವುದಿದೆ.

ಈ ಪಡಿಮಂಚವು ಬಹುಪಯೋಗಿ ಸಾಧನವು ಹೌದು. ಮುಂದೆ ಭತ್ತದಿಂದ ಜಳ್ಳನ್ನು ಬೇರ್ಪಡಿಸಲು ಇದನ್ನು ಬಳಸಲಾಗುತ್ತದೆ. ಈ ಪಡಿಯ ಮೇಲೆ ದೊಡ್ಡ ಬುಟ್ಟಿ (ಕಾಂಟ್ಯ) ಯನ್ನಿಟ್ಟು ಅದಕ್ಕೆ ಭತ್ತ ತುಂಬಿಸಲಾಗುತ್ತದೆ. ಈ ಮಂಚವನ್ನು ರಾತ್ರಿ ಹೊತ್ತು ಮಲಗಲು ಉಪಯೋಗಿಸುವುದಿದೆ. ಮನೆಗೆ ಹೆಣ್ಣು ನೋಡಲು ಅತಿಥಿಗಳು ಮನೆಗೆ ಬಂದ ಸಂದರ್ಭದಲ್ಲಿ ನಿಶ್ಚಯ ಕಾರ್ಯವನ್ನು ಇದರ ಮೇಲೆ ಕುಳಿತು

ನಡೆಸಲಾಗುತ್ತಿತ್ತು. ಅಲ್ಲದೆ, ನ್ಯಾಯ ತೀರ್ಮಾನ ಸಂದರ್ಭದಲ್ಲಿಯೂ ಹಿರಿಯರು ಇದರ ಮೇಲೆ ಕೂತು ತೀರ್ಮಾನ ನೀಡುವುದಿದೆ. ಸತ್ಯವನ್ನು ಸಾಬೀತು ಪಡಿಸುವ ಸಂದರ್ಭದಲ್ಲಿ ಆನೆಪಡಿಯನ್ನು ಮುಟ್ಟಿ ಆಣೆ ಮಾಡುವುದಿದೆ. ಒಟ್ಟಿನಲ್ಲಿ, ಇದಕ್ಕೊಂದು ಪಾವಿತ್ರ್ಯ ಸ್ಥಾನವಿದೆ.

ಕೈಸಟ್ಟಿ

ಭತ್ತವನ್ನು ಪೊಳ್ಳು-ಜಳ್ಳುಗಳಿಂದ ಬೇರ್ಪಡಿಸಲು ಉಪಯೋಗಿಸುವ ಮರದ ಸಾಧನವನ್ನು ತುಳುವಿನಲ್ಲಿ 'ಕೈಸಟ್ಟಿ' ಎನ್ನುವರು. ಸಾಧಾರಣವಾಗಿ ಒಬ್ಬ ಪುರುಷ ಕೃಷಿಕಾರ್ಮಿಕ ಮರದಿಂದ ರಚಿಸಲಾದ 'ಕೈಸಟ್ಟಿ'ಯ ಮುಖಾಂತರ ಬುಟ್ಟಿಯಿಂದ ಭತ್ತವನ್ನು ಗೋರಿ ರಭಸದಿಂದ ಅಂಗಳದಲ್ಲಿ ಎಸೆದಾಗ ಅರ್ಧ ಚಂದ್ರಾಕೃತಿಯಲ್ಲಿ ಅದು ಹಂತ ಹಂತವಾಗಿ ಬೀಳುವುದು. ಕೈಸಟ್ಟಿಯಿಂದ ಭತ್ತವನ್ನು ಬೀಸಿ ಎಸೆಯುವಾಗ ಅವನು ನಿಂತಲ್ಲಿ ಕಾಲಿನ ಹತ್ತಿರದಲ್ಲಿ ಬೀಳುವ ಭತ್ತಕ್ಕೆ 'ನೊಕ್ಕೆ' ಎಂದು ಕರೆಯುವರು, ಅದರ ನಂತರದ ಹಂತದಲ್ಲಿ ಬೀಳುವ ಭತ್ತಕ್ಕೆ 'ಬಲ್ಲ್‌ದಡ್ಡ್' ಎಂದು ಕರೆಯಲಾಗುತ್ತದೆ. ನಂತರದ ಹಂತದಲ್ಲಿ 'ದಡ್ಡ್' ಬಿದ್ದರೆ, ನಂತರದಲ್ಲಿ ಒಳ್ಳೆಯ ಭತ್ತ ಹಾಗೂ ಕೊನೆಯ ಹಂತದಲ್ಲಿ ಬೀಳುವ ಭತ್ತದಲ್ಲಿ ಕಲ್ಲು ಸೇರಿರುವದರಿಂದ ಇದನ್ನು 'ಕಲ್ಲ್‌ಬಾರ್' (ಕಲ್ಲಿನಿಂದ ಕೂಡಿದ ಭತ್ತ). ಹೀಗೆ ಒಂದು ಸಣ್ಣ ಮರದ ಸಾಧನದ ಮುಖಾಂತರ ಭತ್ತದ ವಿಂಗಡಣೆ ಸಾಧ್ಯವಾಗುತ್ತದೆ. ಯಾವುದೇ ಯಾಂತ್ರಿಕ ಸಲಕರಣೆಗಳನ್ನು ಉಪಯೋಗಿಸದೆ ಭತ್ತದ ಪರಿಮಾಣವನ್ನು ನಿರ್ಧರಿಸಲು ಸಾಧ್ಯವಾಗುತ್ತದೆ. ನೊಕ್ಕೆ ಯಾವುದಕ್ಕೂ ಪ್ರಯೋಜನವಿಲ್ಲದ ಜಳ್ಳು. ಬಲ್ಲ್‌ದಡ್ಡ್ ಮತ್ತು ದಡ್ಡನ್ನು ಎತ್ತು ಕೋಣಗಳಿಗೆ ಅಥವಾ ಕೋಳಿ ಮುಂತಾದ ಮನೆಯಲ್ಲಿ ಸಾಕಿದ ಸಾಕು ಪ್ರಾಣಿಗಳಿಗೆ, ಪಕ್ಷಿಗಳಿಗೆ ಆಹಾರವಾಗಿ ಉಪಯೋಗಿಸಲಾಗುತ್ತದೆ.

ಗೆರಸೆ

'ತಡ್ಪೆಗ್ ಅಂಬಿದ ಬಲ, ಪರಬೆರೆಗ್ ಗಂಜಿದ ಬಲ' ಎಂಬ ಒಂದು ಸಾಮಾನ್ಯ ಗಾದೆ ಇದೆ. ಪ್ರಾಯಸ್ಥರಿಗೆ ಹೊತ್ತು ಹೊತ್ತಿಗೆ ಅನ್ನ ಸೇವನೆಯಿಂದ ಶಕ್ತಿಯುತವಾಗಿ ಆರೋಗ್ಯದಿಂದಿರಲು ಸಾಧ್ಯವೊ ಹಾಗೆಯೇ ಕೃಷಿಕರ ಬದುಕಿನ ಅವಿಭಾಜ್ಯ ಅಂಗವಾಗಿರುವ ಗೆರಸೆಯು ಪದೇ ಪದೆ ಸೆಗಣಿ ಲೇಪನದೊಂದಿಗೆ ಉತ್ತಮ ಸ್ಥಿತಿಯಲ್ಲಿದ್ದು ಬಳಕೆ ಯೋಗ್ಯವಾಗಿರುತ್ತದೆ ಎಂಬುವುದೇ ಗಾದೆ ಮಾತಿನ ತಾತ್ಪರ್ಯ. ಸೆಗಣಿ ಲೇಪನವಿಲ್ಲದ ಗೆರಸೆ ಉಪಯೋಗ್ಯವಲ್ಲ. ಇದನ್ನು ಕೊರಗ ಜನಾಂಗದವರು ಬಿದಿರಿನಿಂದ ರಚಿಸುತ್ತಾರೆ. ಸುಮಾರು ಎರಡೂವರೆ ಅಡಿ ಉದ್ದ, ಅಷ್ಟೆ ಉದ್ದ ಅಗಲವನ್ನು ಹೊಂದಿರುವ ಇದು ಸುಮಾರು ಚೌಕಾಕಾರದಲ್ಲಿ ಇರುತ್ತದೆ. ಇದರ ಮುಖ್ಯ ಬಳಕೆ ಎಂದರೆ, ಜಳ್ಳನ್ನು ಭತ್ತದಿಂದ ಬೇರ್ಪಡಿಸಲು ನಿಂಗಳ್ (ತುಂಡಾದ) ಅಕ್ಕಿಯನ್ನು, ಅಕ್ಕಿಯಿಂದ ಬೇರ್ಪಡಿಸಲು ಬಳಸಲಾಗುತ್ತದೆ. ಗೆರೆಸೆಗೆ ಸಂಬಂಧಪಟ್ಟಂತೆ ತುಳುವರಲ್ಲಿ ಅನೇಕ ನಂಬಿಕೆಗಳಿವೆ: ಗೆರಸೆಗೆ ತುಳಿಯಬಾರದು, ಕವುಚಿ ಹಾಕಬಾರದು, ಜೀರ್ಣಗೊಂಡ ಗೆರಸೆಯನ್ನು ಒಲೆಗೆ ಹಾಕಬಾರದು. ಇದೊಂದು ಬಹುಪಯೋಗಿ ಸಾಧನವೂ

ಹೌದು. ಹಿಂದಿನ ಕಾಲದಲ್ಲಿ ಮುಖ್ಯವಾಗಿ, ಶ್ಯಾವಿಗೆ ಅಡ್ಯ ಮಾಡುವ ಸಂದರ್ಭದಲ್ಲಿ ಶ್ಯಾವಿಗೆಯನ್ನು ಹಾಕಲು ಬಳಸಿದರೆ, ಹೋಳಿಗೆ ಮಾಡುವ ಸಂದರ್ಭದಲ್ಲಿ ಕೂಡ ಇದೇ ಗೆರಸೆಯನ್ನು ಬಳಸಲಾಗುತ್ತದೆ. ಈ ಕ್ರಮವನ್ನು ಇಂದಿನ ಆಧುನಿಕ ದಿನದಲ್ಲಿಯೂ ಕಾಣುತ್ತೇವೆ. ತುಳುವರ 'ಪಜೆಮಡಿಕೆ ಅಡ್ಯ'ಕ್ಕೆ ಇದನ್ನು ಬಳಸಲಾಗುತ್ತದೆ. ತುಳುನಾಡಿನಲ್ಲಿ ವಿವಿಧ ದೈವಾರಾಧನೆಗೆ ಸಂಬಂದ ಪಟ್ಟಂತೆ ದೈವಾರಾಧನೆಯ ಸಾಮಾಗ್ರಿಗಳನ್ನು ಕೊಂಡೊಯ್ಯಲು, ಬಡಿಸಲು ಇದನ್ನು ಬಳಸಲಾಗುತ್ತದೆ. ಹಾಗೆಯೇ ಬೊಜ್ಜದ ದಿನ ಕಾಗೆಗೆ ಎಡೆ ಇಡಲು ಗೆರಸೆಯೇ ಬೇಕು.

ಈ ಗೆರಸೆಯಿಂದ ದವಸ ಧಾನ್ಯಗಳನ್ನು ಶುದ್ಧಿಗೊಳಿಸುವುದಾಗಲಿ, ಭತ್ತದಿಂದ ಜಳ್ಳನ್ನು ಬೇರ್ಪಡಿಸುವುದಕ್ಕಾಗಲಿ, ಅಕ್ಕಿಯನ್ನು ಶುದ್ಧಿಕರಿಸುವುದಕ್ಕಾಗಲಿ, ಅಷ್ಟು ಸುಲಭದ ಕೆಲಸವಲ್ಲ ಮತ್ತು ಪರಿಣಿತ ಮಹಿಳೆಯಿಂದಷ್ಟೆ ಸಾಧ್ಯ. ಗೆರಸೆಯಿಂದಾಗುವ ಕೆಲಸ ಏನಿದ್ದರೂ ಮಹಿಳೆಯಿಂದ. ಉದಾಹರಣೆಗೆ, ಅಕ್ಕಿ ಶುದ್ಧಿಕರೀಸುವಾಗ ಅದರಲ್ಲಿ ಉತ್ತಮ ಅಕ್ಕಿ, ನಿಂಗಳ್ ಅಕ್ಕಿ, ಮೂಂಕ್ ನಿಂಗಲ್ ಅಕ್ಕಿಯಾಗಿ ಬೇರ್ಪಡಿಸುತ್ತಾರೆ. ದವಸ ಧನ್ಯಗಳಲ್ಲಿ ಕಲ್ಲು ಸೇರಿದ್ದರೆ ಕಲ್ಲೆಲ್ಲಾ ಒಂದೇ ಬದಿಗೆ ಬರುವ ರೀತಿಯಲ್ಲಿ ಹಾರಿಸುವುದು ಪರಿಣಿತ ಮಹಿಳೆಯಿಂದಷ್ಟೆ ಸಾಧ್ಯ. ಇದಕ್ಕೆ ತುಳುವಿನಲ್ಲಿ 'ಪುಡೆಪ್ಪುನೆ' ಅಂತ ಹೇಳುತ್ತಾರೆ. ಕರಾವಳಿ ಕರ್ನಾಟಕದಲ್ಲಿ ಗೆರಸೆ ಇಲ್ಲದೆ ಕೃಷಿ ಬದುಕನ್ನು ಕಲ್ಪಿಸುವುದೂ ಅಸಾಧ್ಯ. ಭತ್ತವನ್ನು ತೆಳುವಾಗಿ ಹರಡಲು ಗೆರಸೆಯನ್ನು ಬಳಸಲಾಗುವುದು.

ಗಾದೆಗಳು

'ತಡ್ಪೆ ಬೊಟ್ಟುದೇ ಪಿಲಿಬೆರಿ ಪತ್ತಿಲೆಕೊ' (ಗೆರೆಸೆ ಬಡಿದೇ ಹುಲಿ ಓಡಿಸಿದ ಹಾಗೇ) 'ತನಕ್ ಪೊಗ್ಗೆರೆ ಇಡೆ ಇಜ್ಜಿಂಡಲಾ ಪೀಂಕಣಿಗ್ ತಡ್ಪೆ ಕಟ್ಟೊಂದೆಗೆ' (ತನಗೆ ಪ್ರವೇಶ ಮಾಡುವುದಕ್ಕೆ ಅವಕಾಶ ಇಲ್ಲದಿದ್ದರೂ ಅಬ್ಬರದ ತಯಾರಿ ಮಾಡಿದ್ದನಂತೆ) ಇಲ್ಲಿ ತಡ್ಪೆ ಅಂದರೆ ಕನ್ನಡದಲ್ಲಿ ಇದನ್ನು ಗೆರಸೆ ಎನ್ನುತ್ತಾರೆ. ಈ ರೀತಿಯ ಗಾದೆ ಮಾತುಗಳಲ್ಲಿ ಅವಕಾಶವಂಚಿತ ಮತ್ತು ಶ್ರೀಮಂತವರ್ಗದ ಮಧ್ಯದ ಸಾಮಾಜಿಕತೆಯು ಪ್ರಕಟಗೊಳ್ಳುತ್ತದೆ.

ಉಜ್ಜೆರ್/ ಒನಕೆ

'ಒನಕೆಯಿಂದ ನಾರು ತೆಗೆದಂತೆ'; 'ಉಗುರುಸುತ್ತಿನ ಮೇಲೆ ಒನಕೆ ಪೆಟ್ಟು'; 'ಭತ್ತದ ಗುಂಡಿಯಲ್ಲಿ ಕುಳಿತು ಒನಕೆ ಪೆಟ್ಟು ತಪ್ಪಿಸಲು ಸಾಧ್ಯವೇ?' 'ಒನಕೆಗೆ ಅಣಸು ಬೇಕು; ಸಂದುಗಳಿಗೆ ಎಣ್ಣೆ ಬೇಕು' (ಉಜ್ಜೆರ್ಡ್ ನಾರ್ ದೆತ್ತಿ ಲೆಕೊ; ಉಗುರು ಸುತ್ತುದ ಮಿತ್ತ್ ಉಜ್ಜೆರ್‌ದ ಪೆಟ್ಟ್; ಗುರಿಟ್ ಕುಲ್ಲುದ್ ಉಜ್ಜೆರ್‌ದ ಪೆಟ್ಟ್ ತಪ್ಪಾವೊಲಿಯಾ?; ಉಜ್ಜೆರ್‌ಗ್ ಸುತ್ತು ಬೋಡು ಮಜ್ಜೆಲ್ಗ್ ಎಣ್ಣೆ ಬೋಡು.) –ಎಂಬಿತ್ಯಾದಿ ಗಾದೆಮಾತುಗಳ ಮೂಲವಾಗಿರುವ ಒನಕೆ ಕೃಷಿ ಬದುಕಿನ ಒಂದು ಅವಿಭಾಜ್ಯ ಅಂಗ. ಪರಂಪರಾಗತವಾಗಿ ಭತ್ತವನ್ನು ಕುಟ್ಟಿ ಅಕ್ಕಿ ಮಾಡಲು ಬಳಸುತ್ತಿದ್ದ ಈ ಸಾಧನ ತುಳುನಾಡಿನಲ್ಲಿ ಮಾತ್ರವಲ್ಲ ದೇಶದ ವಿವಿಧ ಭಾಗಗಳಲ್ಲಿ ಇದು ಬಳಕೆಯಲ್ಲಿತ್ತು. ಬೇಯಿಸಿದ ಭತ್ತವನ್ನು

ಒಣಗಿಸಿದ ನಂತರ ಕುಟ್ಟುವಾಗ ನಾಲ್ಕು ನಮೂನೆಯ ಅಕ್ಕಿ ಅಲ್ಲಿ ರೂಪುಗೊಳ್ಳುವುದು. ಇದನ್ನು ತುಳುವಿನಲ್ಲಿ 'ಅರಿ' (ಅಕ್ಕಿ), ಕಡಿ ಅರಿ (ತುಂಡಾದ ಅಕ್ಕಿ), ನಿಂಗಲ್ (ಸ್ವಲ್ಪ ಜಾಸ್ತಿ ಹುಡಿಯಾದ ಅಕ್ಕಿ) ಮತ್ತು ಮೂಂಕುನಿಂಗಲ್ (ಅತೀ ಹುಡಿಯಾದದ್ದು) ಎಂದು ಕರೆಯಲಾಗುತ್ತದೆ. ನಿಂಗಲ್ ಮತ್ತು ಮೂಂಕುನಿಂಗಲ್ ತಿನ್ನಲು ಯೋಗ್ಯವಾಗಿರುವುದಿಲ್ಲ. ಆದರೂ ಅಂದು ಹೆಚ್ಚಿನ ಒಕ್ಕಲಿನವರಿಗೆ ತಿನ್ನಲು ತತ್ವಾರವಿತ್ತು. ಇದನ್ನು ತಿಂದು ಬದುಕಿದ ದ್ರಷ್ಟಾಂತವನ್ನು ಕ್ಷೇತ್ರ ಕಾರ್ಯ ಸಂಧರ್ಭದಲ್ಲಿ ಹಲವರು ಅಭಿಪ್ರಾಯ ಮಂಡಿಸಿದರು.

ಆದರೆ ಇಂದಿನ ಆಧುನಿಕ ದಿನಗಳಲ್ಲಿ ಭತ್ತವನ್ನು ಈ ರೀತಿಯಾಗಿ ಕುಟ್ಟುವುದು ಬಹುತೇಕ ಕಣ್ಮರೆಯಾಗುತ್ತಿದೆ. ಒಂದೇ ಗುಳಿಯಲ್ಲಿ ಮೂರು ನಾಲ್ಕು ಜನ ಭತ್ತ ಕುಟ್ಟುವ ದೃಶ್ಯ ನೋಡುಗನಲ್ಲಿ ರೋಮಾಂಚನ ಹುಟ್ಟಿಸುತ್ತದೆ. ಒಂದಿನಿತು ಏಕಾಗ್ರತೆ ತಪ್ಪಿದರೂ ಅಪಾಯ ತಪ್ಪಿದ್ದಲ್ಲ. ಶ್--ಶ್---ಶ್ ಎಂಬ ಸೊಲ್ಲಿನೊಂದಿಗೆ ಭತ್ತಕುಟ್ಟುವ ಈ ತ್ರಾಸದಾಯಕವಾದ ಕೆಲಸ ಹೆಚ್ಚಾಗಿ ಮಹಿಳೆಯರದ್ದೆ.

ಒನಕೆಯನ್ನು ಮುಖ್ಯವಾಗಿ ತಾಳೆಮರ ಮತ್ತು ಹುಣಿಸೆ ಮರದ ತಿರುಳಿನಿಂದ ಮಾಡಲಾಗುತ್ತದೆ. ಸುಮಾರು ಆರು ಅಡಿ ಉದ್ದದ ಒನಕೆಯ ತುದಿ ಭಾಗಕ್ಕೆ ಕಬ್ಬಿಣದ ಸುತ್ತನ್ನು ಹಾಕಲಾಗುತ್ತದೆ. ಇದರಲ್ಲಿಯೂ ವಿವಿಧ ನಮೂನೆಯ ಸುತ್ತುಗಳಿರುತ್ತದೆ. ಸಾಧರಣವಾಗಿ ಒಂದು-ಒಂದೂವರೆ ಇಂಚು ಸುತ್ತಿನಿಂದ ಹಿಡಿದು ಸುಮಾರು ನಾಲ್ಕು ಇಂಚು ಅಗಲದ 'ಕೊಂಡೆ ಸುತ್ತು' ಎನ್ನಲಾಗುವ ಒನಕೆಗಳು ಬಳಕೆಯಲ್ಲಿದ್ದವು. ಸುತ್ತಿನ ಒಳಭಾಗದಲ್ಲಿ 'ಉಜ್ಜೆರ್‌ದ ಕೂಲಿ' ಎನ್ನಲಾಗುವ ಕಬ್ಬಿಣದಿಂದ ಮಾಡಲಾದ ಸಣ್ಣ ತುಂಡನ್ನು ಒನಕೆಯ ತುದಿ ಭಾಗಕ್ಕೆ ಹೊಡೆದಿರುತ್ತಾರೆ. ಒನಕೆಯಿಂದ ಭತ್ತ ಕುಟ್ಟುವುದು ಬಹಳ ತ್ರಾಸದಾಯಾಕ ಮತ್ತು ಅಪಾಯದ ಕೆಲಸ. ಹಿಂದಿನ ಕಾಲದಲ್ಲಿ ಕಿರಿಯರಿಗೆ ಚಿಕ್ಕ ಪ್ರಾಯದಲ್ಲಿಯೇ ಭತ್ತ ಕುಟ್ಟಲು ತರಬೇತಿ ನೀಡಲಾಗುತ್ತಿತ್ತು. ಅವರಿಗಾಗಿಯೇ ಸಣ್ಣ ಗಾತ್ರದ ಕಬ್ಬಿಣದ ಸುತ್ತು ಇಲ್ಲದ ಒನಕೆಯನ್ನು ಕೊಡಲಾಗುತ್ತಿತ್ತು. ಅಂದಿನ ಕಾಲದಲ್ಲಿ ಭತ್ತ ಕುಟ್ಟುವುದಕ್ಕಾಗಿ ಪ್ರತ್ಯೇಕವಾದ ಒಂದು ಕೊಟ್ಟಿಗೆ ಇರುತ್ತಿತ್ತು. ಇದಕ್ಕೆ ತುಳುವರು 'ಬಾರ್ ದ ಕೊಟ್ಯ' ಎನ್ನುತ್ತಾರೆ. ಬತ್ತ ಕುಟ್ಟುವ ಕೆಲಸ ಕಾರ್ಯ ಮುಗಿದ ನಂತರ ಬೀಳಲಿನಿಂದ ವೃತ್ತಾಕಾರವಾಗಿ ನಿರ್ಮಾಣ ಮಾಡಿ ಕೊಟ್ಟಿಗೆಯ ಮಾಡಿಗೆ ಕಟ್ಟಿದ ಆ ಸಾಧನದೊಳಗೆ ಅಡ್ಡಲಾಗಿ ಇಡಲಾಗುತ್ತದೆ.

'ಉಗುರು ಸುತ್ತುದ ಮಿತ್ತ್ ಉಜ್ಜೆರ್ ದ ಪೆಟ್ಟ್,'ಎಂಬ ಗಾದೆ ಮಾತು ಭತ್ತಕುಟ್ಟುವ ಸಂದರ್ಭದಲ್ಲಿ ಆಯ ತಪ್ಪಿ ಕಾಲ ಬೆರಳಿಗೆ ಒನಕೆಯ ಪೆಟ್ಟು ಬಿದ್ದರೆ ಏನಾಗಬಹುದೆಂಬುದನ್ನು ಸೂಚಿಸುತ್ತದೆ. ಕಾಲ ಬೆರಳಿಗೆ ಬರುವ ಉಗುರು ಸುತ್ತೆಂಬ ರೋಗ ಬಹಳ ನೋವಿನಿಂದ ಕೂಡಿದ್ದು. ಕಬ್ಬಿಣದ ಸುತ್ತನ್ನು ಹೊಂದಿದ ಬಾರವಾದ ಈ ಒನಕೆಯ ಪೆಟ್ಟು ಅದಕ್ಕೆ ಬಿದ್ದರೆ ಅಸಹನೀಯವಾದ ನೋವುಂಟಾಗುವುದನ್ನು ಈ ಗಾದೆ ಸೂಚಿಸುತ್ತದೆ. ಚಿತ್ರದುರ್ಗದ ಕೋಟೆಯನ್ನು ಮುತ್ತಿದ ಹೈದಾರಳಿಯ ಸೈನಿಕರನ್ನು ಇದೇ ಒನಕೆಯಿಂದ 'ಒನಕೆ ಓಬವ್ವ' ಹೊಡೆದುರುಳಿಸಿದ ಕತೆ ಜನಜನಿತ.

'ತಂದೆ ಒನಕೆಯ (ಉಜ್ಜೇರ್) ಹಾಗೆ, ತಾಯಿ ಮೊರದ (ತಡ್ಪೆ) ಹಾಗೆ' ಎನ್ನುವ ಗಾದೆಯು ಒನಕೆಯ ಕಠಿಣತೆಯನ್ನು ತಂದೆಗೆ ಹೋಲಿಸಲಾಗಿದೆ. 'ಆಕಾಸೊಡುರಾಪಿನ ಗಿಡಿ ಐತ್ತಕಾರ್‌ಗ್ ಬೊಳ್ಳಿದ ಕಡಗೊ' ಎನ್ನುವ ಒಗಟಿಗೆ ಉತ್ತರ ಒನಕೆ. ಈ ಪರಿಕರದ ಸುತ್ತಮುತ್ತ ಇಂಥಹ ಹತ್ತಾರು ಗಾದೆಗಳು, ಒಗಟುಗಳು ಇವೆ.

ಕತ್ತಿಗಳಲ್ಲಿನ ವೈವಿಧ್ಯತೆ

ಪಾರಂಪರಿಕ ಕೃಷಿ (ಬೇಸಾಯ)ದಲ್ಲಿ ನಿರ್ದಿಷ್ಟವಾಗಿ ಬಳಕೆಯಾಗುತ್ತಿದ್ದ ಕತ್ತಿಗಳಿದ್ದವು. ನಿರ್ದಿಷ್ಟ ಬೆಳೆಯ ಕೊಯಿಲು, ಕಟಾವುಗಳಿಗಾಗಿ ಕೃಷಿಕಾರ್ಮಿಕರು ಕತ್ತಿಗಳನ್ನು ಬಳಸುತ್ತಿದ್ದರು. ಕೃಷಿಕಾರ್ಯಕ್ಕೆ ಬಳಕೆಯಾಗುತ್ತಿದ್ದ ಕತ್ತಿಗಳಲ್ಲಿ ಅನೇಕ ವಿಧಗಳಿವೆ: ಅಮೆ ಕತ್ತಿ, ಇಡೆ ಕತ್ತಿ, ಉಳಕತ್ತಿ, ಒಡ್ಕತ್ತಿ, ಕೊಯಿಲತ್ತಿ, ಪರ್ದತ್ತಿ, ಕಡ್ಪತ್ತಿ, ಅಂಡೆಕತ್ತಿ, ಮೊಟ್ಟತ್ತಿ, ಕಯಿಕತ್ತಿ, ಕಸಿಕತ್ತಿ, ಕಿರ್ಗತ್ತಿ, ಕುಂಞತ್ತಿ, ಚಾಕತ್ತಿ, ನಾರೆಕತ್ತಿ, ಕುಮ್ಮಯ ಕತ್ತಿ, ಗಾರೆ ಕತ್ತಿ, ಕೊಡಂಕತ್ತಿ, ಸೂಟೆಕತ್ತಿ, ತರ್ಕತ್ತಿ, ನಾರತ್ತಿ, ಪಂತಿ ಕತ್ತಿ, ಪಿಂಚೆಲ್ ಕತ್ತಿ, ಗೆಜ್ಜತ್ತಿ ಇತ್ಯಾದಿ.

ಹುಲ್ಲು ಹೆರೆಯುವ ಕೊಯಿಲತ್ತಿ, ಪೈರು ಕೊಯ್ಯುವ ಪರ್ದತ್ತಿ/ಪರ್ಕತ್ತಿ, ದೊಡ್ಡ ಗೆಲ್ಲು ಕಡಿಯುವ ನಾರೆಕತ್ತಿ, ತೆಂಗಿನಕಾಯಿ ಸುಲಿಯುವ ಕಡ್ಪತ್ತಿ, ಬಿದಿರಿನ ಮುಳ್ಳು ಕೊಯ್ಯುವ ಅಂಡೆಕತ್ತಿ, ತರಕಾರಿ ಹೆಚ್ಚುವ ಮೆಟ್ಟುಕತ್ತಿ, ಮೂರ್ತೆಗಾರಿಕೆಗೆ ಬಳಕೆಯಾಗುವ ತರ್ಕತ್ತಿ, ಕೊರಗರು ನಾರು ಬೇರು ಸಿಗಿಯುವ ಕುಂಞತ್ತಿ, ತಾಳೆ ಮರದ ಮುಳ್ಳು ಸೀಳುವ ಚಾಕತ್ತಿ, ಮೀನು ಕಡಿಯುವ ಸೂಟೆಕತ್ತಿ, ಇಂದಿನ ಮದುಮಗಳು ದೃಷ್ಟಿ ತಾಗದಂತೆ ಹಿಡಿಯುವ ಗೆಜ್ಜತ್ತಿ, ಇತ್ಯಾದಿ... ಕತ್ತಿಯ ಹಿಡಿಕೆಗಿಂತ ಮೇಲೆ ಸಣ್ಣ ಉಬ್ಬು ಇದ್ದರೆ ಅದು ಗಂಡು ಕತ್ತಿ, ಇಲ್ಲವಾದರೆ ಹೆಣ್ಣು ಕತ್ತಿ ಎಂದು ಗುರುತಿಸಲಾಗುತ್ತಿತ್ತು.

ಕತ್ತಿಗಳನ್ನು ಒಂದೆಡೆ ತೂಗುಹಾಕುವ ಪರಿಕರಕ್ಕೆ 'ಕಣ್ಣಜೆ' ಎನ್ನುತ್ತಾರೆ. ಇದನ್ನು ಬಿದಿರಿನಿಂದ ತಯಾರಿಸಲಾಗುತ್ತಿದ್ದು, ಎಲ್ಲಾ ನಮೂನೆಯ ಕತ್ತಿಗಳನ್ನೂ ಇದರಲ್ಲಿಡಬಹುದಾಗಿದೆ. ಇಂದು ಕೃಷಿಕಾರ್ಯ ಅಥವಾ ಇತರ ಕಸುಬುಗಳಲ್ಲಿ ತೊಡಗಿಕೊಂಡವರು ಬಳಕೆ ಮಾಡುವ ಕತ್ತಿಗಳಲ್ಲಿ ವೈವಿಧ್ಯತೆಯಿಲ್ಲ. ಅದನ್ನು ಹಿಂದಿನ ಮಂದಿ ಹರಿತಗೊಳಿಸುವ ರೀತಿಯೂ ಈಗಿನವರಿಗೆ ತಿಳಿದಿಲ್ಲ. ಹಿಂದಿನ ಕಾಲದಲ್ಲಿ ಕತ್ತಿಗಳನ್ನು ಹರಿತಗೊಳಿಸಲು ಕಾಸರಕನ ಮರದಿಂದ ತಯಾರು ಮಾಡಿದ 'ಒಟ್ಟೆದ ಮರ'ದ ಮೇಲೆ ಬೆಣಚುಕಲ್ಲಿನ ಹುಡಿ ಬಳಸಿ ಕತ್ತಿಯನ್ನು ಹರಿತಗೊಳಿಸುತ್ತಿದ್ದ ಸಾಮಾನ್ಯ ಜಾಣ್ಮೆ ಹಾಗೂ ಜ್ಞಾನ ಇಂದಿನವರಿಗೆ ತಿಳಿದಿಲ್ಲ.

ಅಳತೆ ಸಾಮಗ್ರಿಗಳು

ದಶಮಾಂಶ ಪದ್ಧತಿಯ ಅಳತೆ ಹಾಗೂ ಹಣದ ವ್ಯವಹಾರಗಳು, ಅಸ್ತಿತ್ವಕ್ಕೆ ಬರುವ ಪೂರ್ವದಲ್ಲಿ, ನಮ್ಮ ದೇಶದಲ್ಲಿ ನೂರಾರು ರೀತಿಯ ಅಳತೆಯ ವಿಧಾನಗಳು ರೂಢಿಯಲ್ಲಿದ್ದವು. ದವಸ ಧಾನ್ಯಗಳನ್ನು ಅಳತೆಮಾಡಲು ಮುಡಿ, ಕಳಸೆ, ಸೇರು, ಪಾವುಗಳೆಂಬ ಪ್ರಮಾಣಗಳಿದ್ದವು. ಒಂದು ಮುಡಿಗೆ ಮೂರು ಕಳಸೆ; ಒಂದು ಕಳಸೆಗೆ

ಹದಿನಾಲ್ಕು ಸೇರು; ಒಂದು ಸೇರು ಎಂದರೆ ನಾಲ್ಕು ಪಾವು; ಒಂದು ಬಳ್ಳಕ್ಕೆ ಮೂರು ಪಾವು. ಅಲ್ಲದೆ, ಗದ್ದೆಯ ಕೆಲಸಮಾಡಿದ ಆಳುಕಾಳುಗಳಿಗೆ ಅಕ್ಕಿ ಅಥವಾ ಭತ್ತವನ್ನೇ ಸಂಬಳ ರೂಪದಲ್ಲಿ ನೀಡುತ್ತಿದ್ದರು. ಹೆಚ್ಚಾಗಿ ಈ ಮಾಪನಗಳನ್ನು ಮರದಿಂದ ತಯಾರಿಸುತ್ತಿದ್ದರು. ಅದರಲ್ಲೂ ವಿಶೇಷವಾಗಿ ಹೆಬ್ಬಲಸಿನಿಂದ ತಯಾರಿಸುತ್ತಿದ್ದರು. ಯಾಕೆಂದರೆ, ಇದು ಗಟ್ಟಿ ಮಾತ್ರವಲ್ಲ, ಕೆಳಗೆ ಬಿದ್ದರೆ ತುಂಡಾಗುವುದಿಲ್ಲ. ಬಿದಿರಿನಿಂದಲೂ ಪಾವು ಮತ್ತು ಸೇರುಗಳನ್ನು ಮಾಡುತ್ತಿದ್ದರು. ಒಂದು ಕಲಸೆ ೧೪ ಅಂಗುಲ ಅಗಲ ಮತ್ತು ೧೪ ಅಂಗುಲ ಎತ್ತರವಿರುತ್ತದೆ. ಒಂದೇ ಮರದಿಂದ ಕಲಸೆ, ಸೇರು ಮತ್ತು ಪಾವನ್ನು ತಯಾರಿಸಿದರೆ ಬಹಳ ಉತ್ತಮ ಎಂದು ಹೇಳಲಾಗುತ್ತದೆ.

ದವಸಧಾನ್ಯಗಳನ್ನು ಅಳತೆ ಮಾಡಲು ಉಪಯೋಗಿಸುತ್ತಿದ್ದ ಚಟಕ್, ಕೊಂಡೆ, ಪಾವು, ಬಳ್ಳ, ಸೇರು, ಪಾಣೆ, ಕಲಸೆ, ಅಜಲೆ ಮೊದಲಾದ ವಿವಿಧ ಪ್ರಮಾಣದ ಅಳತೆಯ ಸಾಧನಗಳನ್ನು ಬಿದಿರು, ಮರ, ತಾಮ್ರ, ಹಿತ್ತಾಳೆಗಳಿಂದಲೂ ಮಾಡಲಾಗುತ್ತಿತ್ತು. ಹಾಲು, ಎಣ್ಣೆ ಮುಂತಾದ ದ್ರವಪದಾರ್ಥಗಳನ್ನು ಅಳತೆ ಮಾಡಲು ಬಳಕೆಯಾಗುತ್ತಿದ್ದ ಪರಿಕರಗಳನ್ನು ಹಿತ್ತಾಳೆ, ತಾಮ್ರಗಳಿಂದಲ್ಲದೆ ತೆಂಗಿನ ಗೆರಟೆ, ಬಿದಿರುಗಳಿಂದಲೂ ಮಾಡುತ್ತಿದ್ದುದನ್ನು ಗಮನಿಸಬಹುದು. ಇವುಗಳಲ್ಲೂ ಕುಶಲಕರ್ಮಿಗಳು ತಮ್ಮ ಕಲಾತ್ಮಕತೆಯನ್ನು ವ್ಯಕ್ತಪಡಿಸುತ್ತಿದ್ದರು. ಅಲ್ಲದೆ, ಈ ಸಾಧನಗಳು ಶ್ರೇಣೀಕೃತ ಸಮಾಜದ ಮುಖವನ್ನೂ ಪರಿಚಯಿಸುತ್ತವೆ. ಇಲ್ಲಿ ಪ್ರತಿಯೊಂದಕ್ಕೂ ಲೆಕ್ಕವಿತ್ತು, ಅಳತೆಯಿತ್ತು, ನಿಖರತೆಯಿತ್ತು ಎನ್ನುವುದನ್ನು ಮನಗಾಣಬಹುದು.

ಕೆಲವೊಂದು ಗುತ್ತುಬರ್ಕೆಯವರು ಅಥವಾ ಶ್ರೀಮಂತ ಹಿಡುವಳಿದಾರರು ಆಳುಕಾಳುಗಳಿಗೆ ಅವರ ಮಜೂರಿ ನೀಡುವಾಗ ಎರಡು ರೀತಿಯ ಮಾಪನಗಳನ್ನು ಉಪಯೋಗಿಸುತ್ತಿದ್ದರೆಂದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಮಾಹಿತಿ ದೊರಕಿತು. ರಾಮ ಕಲಸೆ ಮತ್ತು ಲಕ್ಷಣ ಕಲಸೆ ಎಂಬುದು. ಮಜೂರಿ ನೀಡುವಾಗ ಲಕ್ಷಣ ಕಲಸೆಯನ್ನು ಹಾಗೇಯೇ ಪಡೆಯುವಾಗ ರಾಮ ಕಲಸೆಯನ್ನು ಉಪಯೋಗಿಸುತ್ತಿದ್ದರು. ಲಕ್ಷಣ ಕಲಸೆ ಸ್ವಲ್ಪ ಅಳತೆಯಲ್ಲಿ ಚಿಕ್ಕದಾಗಿರುತ್ತದೆ. ಅದೇ ರೀತಿ ಲಕ್ಷಣ ಸೇರಿನಲ್ಲಿ ನಾಲ್ಕು ಪಾವು ಇರಬೇಕಾದಲ್ಲಿ ಕೇವಲ ಮೂರು ಪಾವು ಇರುತ್ತಿದ್ದುದಾಗಿ ಮಾಹಿತಿ ದೊರಕಿತು. ಕೊಡುವಾಗಿನ ಮಾಪನ ಬೇರೆ ಮತ್ತು ಸ್ವೀಕರಿಸುವಾಗಿನ ಮಾಪನ ಇನ್ನೊಂದಾಗಿರುತ್ತಿತ್ತು. ಇಲ್ಲಿ ಶೋಷಣೆಯ ಮುಖವನ್ನು ಗಮನಿಸಬೇಕಾಗುತ್ತದೆ.

ಎತ್ತಿನ ಗಾಡಿ

ಹಿಂದಿನ ಕಾಲದಲ್ಲಿ ಒಂದೂರಿನಿಂದ ಇನ್ನೊಂದೂರಿಗೆ, ಮುಖ್ಯವಾಗಿ ಘಟ್ಟದ ಮೇಲಿನಿಂದ ಸಾಮಾನು ಸರಂಜಾಮುಗಳನ್ನು ಹೊತ್ತು ಬರುತ್ತಿದ್ದ ಗಾಡಿಗಳ ಸಂಖ್ಯೆ ೬೦–೭೦ಕ್ಕೆ ಮೀರುತ್ತಿತ್ತು. ಈ ರೀತಿ ಸಾಗಿ ಬಂದ ಗಾಡಿಗಳಿಗೆ ತಂಗುದಾಣಗಳಿದ್ದವು. ಬಂಟ್ವಾಳದ ಈಗಿನ ಬಡ್ಡಕಟ್ಟೆ ಹಿಂದಿನ ಕಾಲದ ಬಂಡಿಕಟ್ಟೆಯೆಂದು ಹೇಳಲಾಗುತ್ತದೆ. ಎತ್ತಿನ ಕಾಲುಗಳಿಗೆ ಲಾಳ ಹೊಡೆಯುವ, ಹುರುಳಿ ತಿನ್ನಿಸುವ, ನೀರು ಕುಡಿಸುವ ವ್ಯವಸ್ಥೆಯೂ ಇಲ್ಲಿರುತ್ತಿತ್ತು. ಗಾಡಿಗ್ ಬಿರಿ ಬೋಡು, ನಾಲಾಯಿ ಸರಿ ಬೋಡು ಎಂಬ ತುಳುವರ ಗಾಡಿಯ ಕುರಿತಾದ ಗಾದೆ

ಗಾಡಿಗೆ ಬ್ರೇಕ್ ನ ಅಗತ್ಯ ಹಾಗೆಯೇ ಮನುಷ್ಯನೊಬ್ಬನಿಗೆ ತನ್ನ ನಾಲಿಗೆಯ ಮೇಲೆ ಹಿಡಿತ ಎಷ್ಟು ಅಗತ್ಯವೆನ್ನುವುದನ್ನು ಸೂಚ್ಯವಾಗಿ ಹೇಳುತ್ತದೆ. ಯಾರಾದರು ನಿರಂತರವಾಗಿ ಮಾತು ನಿಲ್ಲಿಸದೆ ಮಾತನಾಡುವವನಿಗೆ ಗಾಡಿಯೆತ್ತು ಉಚ್ಚೆ ಹೊಯ್ದಂತೆ ಎಂದು ಗೇಲಿ ಮಾಡುವುದಿದೆ. ಎತ್ತಿನ ಗಾಡಿ ತಯಾರು ಮಾಡಬೇಕಾದರೆ ಪರಿಣಿತರೆ ಮಾಡ ಬೇಕಾಗುತ್ತದೆ. ಎತ್ತಿನ ಗಾಡಿಯ ಪರಿಕರಗಳನ್ನು ಉಗ್ಗಪ್ಪ ಪೂಜಾರಿಯವರು ಈ ರೀತಿ ನೀಡುತ್ತಾರೆ:

ಎರಡು ಮರದ ಚಕ್ರಗಳು, ಚಕ್ರದ ಸುತ್ತ ಕಬ್ಬಿಣದ ಪಟ್ಟಿ, ಗಾಡಿಯ ನುಗ, ನೊಗದ ಕೋಲು, ಗಾಡಿಯ ಬೆರ್ಮರ, ಗಾಡಿಯ ಸೊಂಡಿಲು, ಗಾಡಿಯ ದರಿ, ಗಾಡಿಯ ಮಂಡೆ, ತಿರಿ (ಬ್ರೇಕ್), ಎರಡು ಎತ್ತುಗಳು, ಎತ್ತುಗಳಿಗೆ ಗೆಜ್ಜೆ ಸರಪಳಿ, ಕಾಲಿಗೆ ಕಬ್ಬಿಣದ ಲಾಲ, ಗೂಂಟ, ಅಡ್ಡಮರ, ಕಬ್ಬಿಣದ ಸಬ್ಬಾಲ್, ಚಕ್ರದ ಒರೆಸಿಲ್, ತಡೆ ಗೂಂಟ, ಲಾಟೀನು, ಬಾಲ್ದಿ, ಚಾಟಿ, ತಿರಿ ಹಗ್ಗ, ಚಕ್ರದ ಪಣೋರು, ಬಿಸಿಲು–ಮಳೆಗೆ ಮೇಲೆ ಮಾಡು ಇತ್ಯಾದಿ.

"ಉತ್ತರ ಕರ್ನಾಟಕ ಭಾಗಗಳಲ್ಲಿ ಎತ್ತಿನ ಗಾಡಿಯನ್ನು ಚಕ್ಕಡಿ ಬಂಡಿ ಎಂದು ಕರೆಯುತ್ತಾರೆ ಎನ್ನುವ ವ ನಂ ಶಿವರಾಮು (೨೦೦೦) ಗಾಡಿಗಳಲ್ಲಿ ನಾಲ್ಕಾರು ನಮೂನೆಗಳಿವೆ. ಹಳೆ ಮೈಸೂರು ಭಾಗದಲ್ಲಿ ಗಂಜಾಂಗಾಡಿ ಹೆಸರಾದುದು. ಚಿಕ್ಕದು ಗುಜ್ಜರಿ ಗಾಡಿ, ಕಮಾನುಗಾಡಿ ಪಯಣಕ್ಕೆ. ಗ್ರಾಮ ದೇವತೆಯ ಹಬ್ಬದ ಸೌದೆ ತುಂಬಿ ತರುವುದು ಕೊಂಡದ ಬಂಡಿ. ಅರೆಕೋಲು, ಗುಂಬ, ಪುಟ್ಟಿಮರ, ಇರಚಿ, ವಾಲೆಬಳೆ, ಉಳಬಳೆ, ಕಡಾಣಿ, ಕಡಗೂಟ, ಮೂಕಿ, ಪಾರಿ, ತಡಿಕೆ, ತಡಿಕೆಗೂಟ, ಇವೆಲ್ಲಾ ಎತ್ತಿನ ಗಾಡಿಯ ಬೇರೆ ಬೇರೆ ಭಾಗಗಳು, ಗಾಡಿಯ ಕೆಳಭಾಗದಲ್ಲಿ ಮಧ್ಯೆ ಇರಚಿಯಮೇಲೆ ಇಟ್ಟಿರುವ ಮರ ಹೊಟ್ಟೆ ಮರ. ಹೊಟ್ಟೆಮರ ಮತ್ತು ಚಕ್ರಗಳ ಮಧ್ಯೆ ವಾಷರ್‌ಗಳಂತೆ ಇರುವ ಬಳೆಗಳು ವಾಲೆಬಳೆ. ಚಕ್ರ ಕಳಚಿಕೊಳ್ಳದಂತೆ ತಡೆಯಲು ಇರಚಿಯ ತುದಿಯ ಕೊನೆಗೆ ಸಿಕ್ಕಿಸಿದ ಕಬ್ಬಿಣದ ಆಣಿ ಕಡಾಣಿ. ಚಕ್ರದ ಅರೆಕಾಲುಗಳನ್ನು ಅಳವಡಿಸಿರುವ ಗಡಿಗೆಯಾಕಾರದ ಮಧ್ಯದ ಮರ ಗುಂಬ. ಇಂತಹ ಸಾವಿರಾರು ಶಬ್ದಗಳ ಅರ್ಥ, ನಿಷ್ಪತ್ತಿ, ಕನ್ನಡ ನಿಘಂಟುಗಳಲ್ಲಿ ದೊರೆಯುವುದಿಲ್ಲ. ಈಗಲಾದರೂ ಇಂತಹ ಶಬ್ದ ಸಂಪತ್ತನ್ನು ಜನಪದರಿಂದಲೇ ಅರ್ಥ ವಿವರಣೆಗಳೊಂದಿಗೆ ಸಂಗ್ರಹಿಸದೇ ಹೋದರೆ ಭಾಷೆಯ ಕ್ಷೇತ್ರಕ್ಕೆ ಅಪಾರ ನಷ್ಟವಾಗುತ್ತದೆ."[೨೫] ಪ್ರಾದೇಶಿಕ ಬಿನ್ನತೆಯಿದ್ದರೂ ಸಹ ವಸ್ತುವಿನ ಬಳಕೆ ಒಂದೇ ತೆರನಾಗಿರುತ್ತದೆ. ಇಂದಿಗೂ ಈ ಎಲ್ಲಾ ಕಡೆ ಎತ್ತಿನ ಗಾಡಿಯ ಬಳಕೆ ಮುಂದುವರಿದಿದೆ. ತುಳುನಾಡಿನಲ್ಲಿ ಮಾತ್ರ ಸಂಪೂರ್ಣವಾಗಿ ಅಳಿದಿದೆ.

ಬೊಂಕ

ದಕ್ಷಿಣಕನ್ನಡ ಜಿಲ್ಲೆ ಕೃಷಿ ಪ್ರಧಾನವಾದ ಜಿಲ್ಲೆ. ಕೃಷಿಗೆ ಪೂರಕವಾಗಿ ಅದಕ್ಕೆ ಅಷ್ಟೇ ಪ್ರಮಾಣದಲ್ಲಿ ಕಾಡು ಸಂಪತ್ತಿತ್ತು ಮತ್ತು ಹಟ್ಟಿಯಲ್ಲಿ ದನಕರುಗಳಿದ್ದವು. ಮುಂಜಾನೆ ದನಕರುಗಳನ್ನು ಮೇಯಲು ಕಾಡಿಗೆ ಬಿಟ್ಟರೆ ಮತ್ತೆ

ಹಿಂದಿರುಗುವುದು ಇಳಿಸಂಜೆಗೆ. ಕಾಡಿನಲ್ಲಿ ಹೋದ ದನಕರುಗಳು ಯಾವ ದಿಕ್ಕಿನಲ್ಲಿದೆ, ಎಷ್ಟು ದೂರದಲ್ಲಿದೆ ಎನುವುದನ್ನು ಪತ್ತೆ ಹಚ್ಚಲು ಕಷ್ಟವಾಗುತ್ತದೆ. ಈ ಕಾರಣಕ್ಕಾಗಿ ಅದರ ಕುತ್ತಿಗೆಗೆ 'ಮೊಂಟೆ' ಅಥವಾ 'ಬೊಂಕ' ವನ್ನು ಕಟ್ಟಲಾಗುತ್ತದೆ. 'ಬೊಂಕ' ಎಂದರೆ ಬಿದಿರಿನಲ್ಲಿ ತಯಾರು ಮಾಡಿದ ಅಲುಗಾಡುವಾಗ ಸದ್ದು ಮಾಡುವ ಉಪಕರಣ. ತುಳುನಾಡಿನ ಬೆಳ್ತಂಗಡಿಯ ಮೊಂಟೆತಡ್ಕ ಎಂಬ ಸ್ಥಳನಾಮದ ಉಗಮಕ್ಕೂ ಇದೇ 'ಮೊಂಟೆ' ಕಾರಣವೆಂಬ ಮಾಹಿತಿ ಹಾಗೂ ಮೇಯಲು ಹೋಗಿರುವ ದನಕರುಗಳು ತಪ್ಪಿಹೋದಲ್ಲಿ ಅವುಗಳು ಸಿಗುವಂತೆ ಮೊಂಟೆಯನ್ನು ಸಂದಾಯ ಮಾಡುವ ಹರಕೆ ಹೇಳಲಾಗುತ್ತಿತ್ತು– ಎಂಬ ಮಾಹಿತಿ ದೊರೆತಿದೆ.[೨೬]

"ಸಾವಿರಾರು ವರ್ಷಗಳ ಹಿಂದೆ ಕೃಷಿ ಸಂಸ್ಕೃತಿ ಪ್ರಾರಂಭವಾದಾಗ ಕೃಷಿ ವಿದ್ಯಾನಿಲಯಗಳೇ ಇರಲಿಲ್ಲ. ಆಧುನಿಕ ಕೃಷಿ ವಿಜ್ಞಾನ ಹಿಂದಿನ ಜಾನಪದ ಹಿಂದಿನ ಸಂಶೋಧನೆಗಳನ್ನೆಲ್ಲಾ ಗರ್ಭೀಕರಿಸಿಕೊಂಡು, ಅದರ ಮೇಲೂ ತನ್ನ ಮುದ್ರೆಯನ್ನು ಒತ್ತಿದೆ. ನೇಗಿಲು, ಕೂರಿಗೆ, ಹಲುಬು, ಕುಂಟೆ, ಬಂಡಿ, ಗುದ್ದಲಿ, ಹಾರೆ, ಕುಡುಗೋಲು, ಬೆಟ್ಟುಗತ್ತಿ, ಕೊಡಲಿ, ಕೊಳಗ, ಗಳಗೆ, ವಾಡೆ, ಹರಬಿ, ಇವೇ ಮೊದಲಾದ ವ್ಯವಸಾಯದ ಮುಟ್ಟುಗಳೆಲ್ಲ ನಮ್ಮ ಪೂರ್ವಜರಿಗೆ ತಿಳಿದಿದ್ದುವೇ ಆಗಿವೆ. ಇಂದಿನ ಯಂತ್ರಗಳು ಅವುಗಳ ಪರಿಷ್ಕೃತ ರೂಪಗಳೇ ಹೊರತು ಬೇರೆಯಲ್ಲ. ಅಂತೆಯೇ ತಕಲಿ, ರಾಟೆ, ನೇಯ್ಗೆ ಮುಟ್ಟುಗಳು; ಕೋಳಿ ಬಲೆ ಮೊದಲಾದ ಬೇಟೆಯ ಸಾಮಾನುಗಳು; ಇವಕ್ಕೆಲ್ಲಾ ಮೂಲ ಜಾನಪದ ಯಂತ್ರಗಳೇ. ಹಿಂದಿನ ಹಲವು ಯಂತ್ರಗಳು ಸಂಪೂರ್ಣ ರೂಪಾಂತರಗೊಂಡಿದ್ದರೂ ಬಂಡಿ ಕೂಳಿ ಬಲೆ ಮೊದಲಾದ ಮುಟ್ಟುಗಳು ಪ್ರಾಚೀನ ಸ್ಥಿತಿಯಲ್ಲಿಯೇ ಇರುವುದು ಜಾನಪದ ಯಂತ್ರ ಕೌಶಲ್ಯಕ್ಕೂ ಅವುಗಳ ಉಪಯುಕ್ತತೆಗೂ ಸಾಕ್ಷಿಯಾಗಿವೆ."[೨೭] ದೇ. ಜವರೇಗೌಡರ ಈ ಮಾತುಗಳು ನಾಗರೀಕತೆ ಚಲಿಸಿದ ಹಾದಿಯನ್ನು ಸೂಚಿಸುತ್ತದೆ.

೩.೩ ಬಿಡುವಿನ ಕಾಲಕ್ಷೇಪಗಳು

ಆಧುನಿಕಪೂರ್ವದ ಕಾಲವನ್ನು ವರ್ತಮಾನದ ದೇಶ ಕಾಲ ಸ್ಥಿತಿಯಲ್ಲಿ ನಿರ್ಧರಿಸಲು ಸಾಧ್ಯವಿಲ್ಲ. ಆಧುನಿಕ ಪೂರ್ವದ ಕಾಲದಲ್ಲಿ ಕೃಷಿ ಕೆಲಸ, ಬಿಡುವಿನ ವೇಳೆ ಎಂದು ನಿರ್ದಿಷ್ಟವಾಗಿ ಕಾಲದ ವಿಭಜನೆ ಇರಲಿಲ್ಲ. ಮನೋರಂಜನೆ ಬಿಡುವು ಎನ್ನುವುದು ಆಧುನಿಕ ಜ್ಞಾನ ಪರ್ವದ ಸಂದರ್ಭದಲ್ಲಿ ಕಾಣಿಸಿಕೊಂಡ ಪರಿಕಲ್ಪನೆಗಳಾಗಿದ್ದಾವೆ. ಬಿಡುವಿನ ವೇಳೆ ಎಂಬುದು ವಿಭಜಿತಗೊಳ್ಳದೆ, ಶ್ರಮ ಮತ್ತು ಬಿಡುವು ಒಂದರೊಳಗಿನ್ನೊಂದು ಬೆರೆತ ಸಾವಯವ ಸ್ಥಿತಿಯಲ್ಲಿ ಕಾಣಿಸುತ್ತದೆ. ಹಾಗಾಗಿ ಶ್ರಮದ ಕೆಲಸದ ಜೊತೆಗೆ ಮನೋರಂಜಿತ ಚಟುವಟಿಕೆಗಳು ಕೃಷಿಕೆಲಸದ ಜೊತೆಗೆ ನಡೆಯುತ್ತಿದ್ದುದನ್ನು ಕಾಣಬಹುದು. ಹಾಗಾಗಿ ಬಿಡುವಿನ ಕಾಲಕ್ಷೇಪಗಳು ಆಧುನಿಕ ಕಾಲ ವಿಭಜನೆಯ ಸರಳ ರೇಖಾತ್ಮಕ ಕ್ರಮದಲ್ಲಿ ನಿರ್ಧರಿಸಲು ಸಾಧ್ಯವಿಲ್ಲ. ಅಧ್ಯಯನದ ದೃಷ್ಟಿಯಿಂದ ಜನಪದರ ಹಾಡು, ಕುಣಿತ, ಪಾಡ್ದನ, ಕಬಿತಗಳನ್ನು ಮನೋರಂಜನೆಗಳಾಗಿ ಪರಿಗಣಿಸಬಹುದಾಗಿದೆ.

ಕರಾವಳಿ ಕರ್ನಾಟಕದಲ್ಲಿ ಕೃಷಿ ಕುಟುಂಬಗಳಿಗೆ ಬಿಡುವೆಂಬುವುದು ಇಲ್ಲ. ಮುನ್ನೂರೈವತ್ತು ದಿನವೂ ಒಂದಿಲ್ಲ ಒಂದು ಕೆಲಸದ ಒತ್ತಡವೂ ಅವರನ್ನು ಬಾಧಿಸುತ್ತಿರುತ್ತದೆ. ಆದರೂ ತಮ್ಮ ಮನಸ್ಸಿನ ಬೇಸರವನ್ನು ಕಳೆಯಲು ಸಿಕ್ಕಿದ ಸಂದರ್ಭವನ್ನು ಬಳಸಿಕೊಂಡು, ದೇಹಾಲಸ್ಯ ಮತ್ತು ಮನಸ್ಸಿನ ಬೇಸರವನ್ನು ಕಳೆಯಲು ಒಂದಿಲ್ಲವೊಂದು ಕ್ರೀಡೆ ಅಥವಾ ಆಚರಣೆ, ಆರಾಧನೆಗಳಲ್ಲಿ ತೊಡಗಿಸುಕೊಳ್ಳುತ್ತಿದ್ದರು. ವಿಶೇಷವಾಗಿ ಏಣೇಲು ಕೃಷಿ ಕಾರ್ಯ ಮುಗಿದೊಡನೆ ಆಟಿ ತಿಂಗಳು ಪೂರ್ತಿ ಅವರ ಬಿಡುವಿನ ಕಾಲವೆಂದು ತಿಳಿಯಲಾಗುತ್ತದೆ. ಈ ಹೊತ್ತಿಗೆ ನಿರಂತರವಾಗಿ ಬೀಳುವ ಮಳೆಯ ಕಾರಣದಿಂದಾಗಿ ಹೊರಹೋಗುವುದು ಅಸಾಧ್ಯವಾದ ಪರಿಸ್ಥಿತಿ ಇರುತ್ತದೆ. ಇಂತಹ ಸಂದರ್ಭದಲ್ಲಿ ಮನೆಯೊಳಗೆ ಕುಳಿತುಕೊಂಡು ಗಾದೆ ಒಗಟುಗಳನ್ನು ಹೇಳುವುದು ಒಂದೆಡೆಯಾದರೆ ಚೆನ್ನೆಮಣೆಯ ಆಟಗಳನ್ನು ಆಡುವುದು ರೂಢಿಯಲ್ಲಿತ್ತು.

ಚೆನ್ನೆಮಣೆಯಲ್ಲಿ ಚೆನ್ನೆ ಕಾಯಿಯೊಂದಿಗೆ ಆಡುತ್ತಿದ್ದ ಆಟವೇ ಚೆನ್ನೆಮಣೆಯಾಟ. ತುಳುನಾಡಿನ ಒಳಾಂಗಣ ಆಟಗಳಲ್ಲಿ ಚೆನ್ನೆಯಾಟಕ್ಕೆ ವಿಶೇಷ ಸ್ಥಾನಮಾನ. ಇದರಲ್ಲಿ ಚೆನ್ನೆ ಮಣೆ ಮತ್ತು ಆಟದ ಕಾಯಿ ಮುಖ್ಯ ವಸ್ತುಗಳು. ವಿವಿಧ ಗಾತ್ರ, ಆಕಾರಗಳ, ವೈವಿಧ್ಯಮಯ ಕುಸುರಿಯ ಮಣೆಗಳಲ್ಲಿ ಅನೇಕ ವಿಧದ ಕಾಯಿಗಳನ್ನು (ಮಂಜೊಟ್ಟಿ, ಹುಣಸೇಬೀಜ, ಹೊಂಗಾರಕನಕಾಯಿ, ಕವಡೆ, ಬೆಳ್ಳಿಯ ಕಾಯಿ ಇತ್ಯಾದಿ) ಬಳಸಿ ಈ ಆಟವನ್ನು ಆಡುತ್ತಿರುವ ಬಗೆಗೆ ದಾಖಲೆಗಳಿವೆ. ಹೆಂಗಸರ ಬಿಡುವಿನ ಆಟವಿದು. ಗಂಡಸರು ಆಡುತ್ತಿರಲಿಲ್ಲವೆಂದೇನಿಲ್ಲ. ಸಾಮಾನ್ಯವಾಗಿ ಮಳೆಗಾಲದಲ್ಲಿ ಕೃಷಿ ಕಾರ್ಯ ಮುಗಿದೊಡನೆ ಅಟ್ಟದಿಂದ ಚೆನ್ನೆಮಣೆಯನ್ನು ಇಳಿಸಿ ಆಡಲಾಗುತ್ತಿತ್ತು. ಸುಮಾರಾಗಿ ಗೋಕುಲಾಷ್ಟಮಿಯವರೆಗೆ ಆಡುತ್ತಿದ್ದರೆನ್ನಲಾಗಿದೆ. ಮತ್ತೆ ಅಟ್ಟ ಸೇರಿದರೆ ಮತ್ತೆ ಮರು ವರ್ಷವೇ ಅದರ ದರ್ಶನ.

ಪಾಡ್ದನಗಳಲ್ಲಿ ಚೆನ್ನೆಯ ಆಟದಷ್ಟು ವಿಜೃಂಭಿಸಿದ್ದು ಬೇರೆ ಯಾವ ಆಟವೂ ವಿಜೃಂಭಿಸಿಲ್ಲವೆನ್ನಬಹುದು. "ಎಕ್ಕಡೆ ಪೊಕ್ಕಡೆ ಚೆನ್ನೆ ಬುದ್ಧಿಗೆಡ್ಡೆ ಕೇಂಡಾರ" (ಎಕ್ಕಡೆ ಆಟಕ್ಕಿಂತ ಚೆನ್ನೆ ಬುದ್ಧಿ ಚುರುಕಾಗಲು ಒಳ್ಳೆಯದು) (ಬಳಜೇಯಿ ಮಾಣಿಗ ಪಾಡ್ದನ) ಚೆನ್ನೆಮಣೆ– ಒಂದು ಚೆನ್ನೆಮಣೆಯನ್ನು ತಯಾರಿಸುವ ಬಡಗಿಗೆ ಒಂದು ಮುಡಿ ಅಕ್ಕಿಯನ್ನು ಪಡಿಯಾಗಿ ನೀಡಲಾಗುತ್ತಿತ್ತು– ಪ್ರಾದೇಶಿಕ ಭಿನ್ನತೆ ಇರಬಹುದು.

ಕೃಷಿಬದುಕಿಗೆ ತುಳುವರು ಪ್ರಾಧಾನ್ಯತೆ ನೀಡಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು. ಬದುಕಿಗೆ ಅನ್ನ ನೀಡುವಲ್ಲಿ ಸಹಕರಿಸುವ ಪರಿಕರಗಳಿಗೆ ಅನ್ನಕ್ಕೆ ನೀಡುವ ಪ್ರಾಧಾನ್ಯತೆಯನ್ನೇ ಕೊಡಲಾಗುತ್ತದೆ. ಋಗ್ವೇದ ಕಾಲದಿಂದ ಈಗಿನವರೆಗೆ ಸಾರ್ವಕಾಲಿಕವಾಗಿ ಕೃಷಿಪರಿಕರಗಳ ವಿನ್ಯಾಸ ಅಥವಾ ಬಳಕೆಯ ಮೂಲ ಕಲ್ಪನೆ ಹಾಗೂ ಒಟ್ಟು ಆಶಯಗಳ ಹೆಚ್ಚಿನ ಬದಲಾವಣೆ ಕಂಡುಬಂದಿಲ್ಲ (ಆಧುನಿಕ ಯಂತ್ರಯುಗವು ಇದಕ್ಕೆ ಹೊರತಾಗಿದೆ). ಕೃಷಿ ಬದುಕಿನಲ್ಲಿ ದುಡಿಯುವ ಶ್ರಮಿಕರಿಗೆ ಹಣದ ರೂಪದಲ್ಲಿ 'ಪಡಿ'ಯನ್ನು ನೀಡುವ ಸಂಪ್ರದಾಯವಿರಲಿಲ್ಲ. ವಿನಿಮಯವಾಗಿ ಬೆಳೆಯ ಫಸಲನ್ನು ನೀಡಲಾಗುತ್ತಿತ್ತು. ಹಣದ ವಿನಿಮಯದ ಅಗತ್ಯವಿರಲಿಲ್ಲ. ಬದುಕಿನ ಕ್ರಮವೇ ಕೃಷಿಯ ಜೊತೆಗೆ ಸಾವಯವ ಸಂಬಂಧ ಹೊಂದಿತ್ತು.

ನೀರಾವರಿ ಸಾಧನಗಳನ್ನು ಸಮಯ ಮತ್ತು ಸಂದರ್ಭಗಳಿಗೆ ಅನುಸಾರವಾಗಿ ರೂಪಿಸಲಾಗುತ್ತಿತ್ತು. ಏತ, ಕೊಂತ, ಕೊರುಂಗೆಗಳು ವಿವಿಧ ಸಂದರ್ಭಗಳಲ್ಲಿ ಬಳಕೆಯಾಗುವುದು ಇದಕ್ಕೆ ಪುಷ್ಟಿನೀಡುತ್ತದೆ. ಇಂದು ಏತ–ಕೊಂತ–ಕೊರಂಗೆ ಎಂಬ ಪದಗಳೇ ಬಳಕೆಯಲ್ಲಿಲ್ಲ. ಅದಕ್ಕೆ ಪೂರಕವಾದ ನೊಗಮರ, ಬೆರಿಮರ, ಗಿರ್ಗೊಲು, ನಾವು, ಕರಿ, ಕುಂಡಚೆ, ಬರೋಣಿ, ಅಡ್ಡಕರಿ, ಪನೆಬಲ್ಲ್, ಉಂಡ್ಯೈ, ಕುಂಜಾಲಿ, ಕೀಲ್, ಗುಮ್ಮೆ(ಕಲ್ಲ್), ಪಣೆತ್ತಗುರಿ, ಮರಾಯಿ, ಮುಟ್ಟೆಮರ, ಕಂಡಿ ಇತ್ಯಾದಿಗಳ ಅಗತ್ಯವೆ ಇಲ್ಲವಾಗಿದೆ. ಅಂದರೆ ಕೃಷಿ ಬದುಕಿನ ಪಲ್ಲಟವು ಈ ಮೊದಲಾದ ವಸ್ತು ಪರಿಕರಗಳ ಕಣ್ಮರೆಗೂ ಕಾರಣವಾಗಿದೆ. ನೀರಾವರಿ ವ್ಯವಸ್ಥೆಯು ಕೃಷಿಕರ ಶ್ರಮದ ವಿವರಣೆಯನ್ನು, ಶ್ರಮದ ವಿಭಜನೆಯನ್ನು ಮನೆಮಂದಿ ಆಳುಕಾಳುಗಳು ಸೇರಿ ಮಾಡುತ್ತಿದ್ದ ಕೆಲಸದ ಚಿತ್ರಣವನ್ನು ನೀಡುವುದಲ್ಲದೆ, ಪರಿಕರಗಳ ತಾಂತ್ರಿಕ ಜೋಡಣೆಯ ಪ್ರಕ್ರಿಯೆಯ ಮಾಹಿತಿಯನ್ನು ಒದಗಿಸುತ್ತದೆ. ವರ್ತಮಾನದಲ್ಲಿ ಉಪಯುಕ್ತತೆಯನ್ನು ಕಳೆದು ಕೊಂಡಿರುವುದರಿಂದ ಈ ಪಾರಂಪರಿಕ ನೀರಾವರಿ ವ್ಯವಸ್ಥೆಯ ಪರಿಕರಗಳು ವಸ್ತುಸಂಗ್ರಹಾಲಯಕ್ಕೆ ಸೇರ್ಪಡೆಗೊಂಡಿದೆ. ಪಣೆ, ಕೊಂತ, ಕೊರಂಗೆ ಐತಿಹಾಸಿಕ ವಸ್ತುವಾಗಿ ಪ್ರಾಮುಖ್ಯತೆಯನ್ನು ಪಡೆದುಕೊಂಡದ್ದು ಬೇರೆ ಬೇರೆ ದಾಖಲೆಗಳ ಮೂಲಕ ಸ್ಪಷ್ಟವಾಗುತ್ತದೆ. ಆಧುನಿಕ ಪೂರ್ವದ ಕೃಷಿ ಬದುಕಿನಲ್ಲಿ ನೀರಾವರಿಗಾಗಿ ಬಳಸುತ್ತಿದ್ದ ಸಾರ್ವತ್ರಿಕ ಭೌತಿಕ ವಸ್ತು ಪಣೆಯಾಗಿದೆ. ಹಾಗಾಗಿ ಐತಿಹಾಸಿಕ ವಸ್ತು ಪರಿಕರ ಪಣೆಯ ಸುತ್ತ ಆ ಕಾಲದ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಮತ್ತು ಭಾಷಿಕ ಸಂಗತಿಗಳು ಹೆಣೆದು ಕೊಂಡಿವೆ. ಸಾಮಾಜಿಕ ಬದುಕಿನ ಸ್ಥಿತ್ಯಂತರಗಳು, ಐತಿಹಾಸಿಕ ಸಂಗತಿಗಳು ನೀರಾವರಿಯಲ್ಲಿ ಬಳಕೆಯಾಗುತ್ತಿದ್ದ ಈ ಭೌತಿಕ ವಸ್ತುಗಳನ್ನು ಚಾರಿತ್ರಿಕಗೊಳಿಸಿದೆ. ಒಟ್ಟಿನಲ್ಲಿ, ಕೃಷಿ ಚರಿತ್ರೆಯಲ್ಲಿ ನೀರಿನ ಪಾತ್ರ ಮತ್ತು ಅದರ ನಿರ್ವಹಣೆಯತ್ತ ಪೂರ್ವಿಕರು ನೀಡಿದ ಮಹತ್ವವನ್ನು ಅರಿಯಲು ಈ ಸಾಧನಗಳು ಮಹತ್ವಪೂರ್ಣ.

ಉಳುಮೆಯ ಸಂದರ್ಭ ಬಳಕೆಯಾಗುವ ಪರಿಕರಗಳು ಅಧುನಿಕತೆಯ ಧಾವಂತದಲ್ಲಿ ಮರೆಗೆ ಸರಿಯುತ್ತಿದೆ. ನೊಗ, ನೇಗಿಲು, ಪಲಾಯಿ, ಓಡಮರಾಯಿ, ಕುರುಂಟು, ಇತ್ಯಾದಿ ಪರಿಕರಗಳಲ್ಲದೆ ಜೊತೆಗೆ ಅವುಗಳಿಗೆ ಸಂಬಂಧಿಸಿದ ವಿವಿಧ ಪಾರಿಭಾಷಿಕ ಪದಗಳು ಮರೆವಿಗೆ ಸಂದಿವೆ. ಉದಾಹರಣೆಗೆ ಗುಂಡಲ, ಪತ್ತ್, ಪುಡ್ಕಾಯಿ, ಮುನೆ, ಪಣೊರು, ಕಲ್ಯಟ, ಪೊನಕೆ, ಸುಡ, ಮಾಕಾಲಿ ಇತ್ಯಾದಿ. ತುಳುನಾಡಿನ ಕೃಷಿ ಪರಿಕರಗಳಲ್ಲಿ 'ಪಲಾಯಿ' ಹಾಗೂ 'ಓಡಮರಾಯಿ'ಗಳು ವಿಶೇಷವಾಗಿವೆ. ಕರಾವಳಿ ಕರ್ನಾಟಕದ ಭೌಗೋಳಿಕ ಪರಿಸರವು ಉಳಿದೆಡೆಗಳಿಗಿಂತ ಭಿನ್ನವಾಗಿರುವುದನ್ನು, ಹಾಗೂ ಆ ಭಿನ್ನತೆಗೆ ಪರ್ಯಾಯವಾಗಿ ತುಳುವರು ಅಗತ್ಯ ಪರಿಕರಗಳಾಗಿ ಇವೆರಡನ್ನು ರೂಪಿಸಿಕೊಂಡು ಬಳಕೆಗೆ ತಂದಿರುವುದನ್ನು ಇಲ್ಲಿ ಗುರುತಿಸಬಹುದು. ಕೃಷಿ ಬದುಕಿಗೆ ತುಳುವರು ಬಹುಮಾನ್ಯತೆಯನ್ನು ನೀಡಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು. ಬದುಕಿಗೆ ಅನ್ನ ನೀಡುವಲ್ಲಿ ಸಹಕರಿಸುವ ಪರಿಕರಗಳಿಗೆ ಅನ್ನಕ್ಕೆ ನೀಡುವ ಪ್ರಾಧಾನ್ಯತೆಯನ್ನೇ ಕೊಡಲಾಗುತ್ತದೆ. ನೇಗಿಲು ಮುರಿದರೆ ಮನೆ ಯಜಮಾನನು ಒಪ್ಪೊತ್ತು ಊಟ ಮಾಡಬೇಕೆಂಬ ನಿಯಮವಿರುವುದು ಇದಕ್ಕೆ ಪುಷ್ಟಿಯನ್ನೀಯುತ್ತದೆ. ಹಲವಾರು ನಂಬಿಕೆಗಳು ಕೃಷಿ ಬದುಕಿನ ಭಾಗವಾಗಿ ಬೆಳೆದು ಬಂದಿರುವುದನ್ನು ಗಮನಿಸಬಹುದು. ಕೃಷಿ ಕೆಲಸ ಯಾಂತ್ರೀಕರಣಗೊಂಡಿರುವ ಈ

ದಿನಗಳಲ್ಲಿ ನೊಗ, ನೇಗಿಲು, ಕಲಸೆ, ಮುಂತಾದ ಪರಿಕರಗಳ ಅಗತ್ಯವಿಲ್ಲದಿದ್ದರೂ, ಅದನ್ನು ಮನೆಯವರು ಇನ್ನೊಬ್ಬರಿಗೆ ಕೊಡಲೊಪ್ಪುವುದಿಲ್ಲ, ಪೂಜನೀಯ ಭಾವ ಹೊಂದಿರುವರು.

ದವಸಧಾನ್ಯಗಳ ಸಂರಕ್ಷಣೆಯ ವಿಧಾನದಲ್ಲಿ ಮುಡಿ, ಕೂಟಾಯಿ ಮತ್ತು ಕದಿಕೆ ಪ್ರಾಮುಖ್ಯತೆಯನ್ನು ವಹಿಸುತ್ತದೆ. ಇದು ಅಕ್ಕಿ, ಭತ್ತ ಮೊದಲಾದ ಧಾನ್ಯಗಳನ್ನು ರಕ್ಷಿಸಿಡುವ ಸಾಧನವಾಗಿದೆ. ಮುಡಿಯ ಸಂರಚನೆಯಲ್ಲಿ ಬಳಸಲಾಗುವ ಕಲ್ಲೆ, ಮೊರಜ್ಜ, ಕೊದಂಟಿ, ಗೀಸುಕೋಲು, ಮುರ್ನಾಲಿ, ಓಟೆ, ಇತ್ಯಾದಿ ಪರಿಕರಗಳು ಮೂಲೆಗುಂಪಾಗಿದೆ. ಪಾರಂಪರಿಕವಾದ ಕೃಷಿ ಬದುಕಿನ ಪಲ್ಲಟದೊಂದಿಗೆ ಇವುಗಳ ಬಳಕೆಯೂ ನಿಂತಿದೆ. ಇವುಗಳ ರಚನೆ ಹೆಚ್ಚು ಶ್ರಮ, ತಾಳ್ಮೆ ಮತ್ತು ಕಲಾವಂತಿಕೆಯನ್ನು ಬಯಸುವಂತಹದ್ದು. ಹಾಗಾಗಿ, ಈ ಸಂರಕ್ಷಣೆಯ ಪರಿಕರಗಳನ್ನು ಉಳಿಸಿಕೊಳ್ಳುವ ವ್ಯವಧಾನ ಯಾರಲ್ಲೂ ಉಳಿದಿಲ್ಲ. ಕೃಷಿಸಂಪತ್ತನ್ನು ರಕ್ಷಿಸುತ್ತಿದ್ದ ರೀತಿಯು ಕೂಡ ತುಳುನಾಡಿನ ಭೌಗೋಳಿಕ ಪರಿಸರಕ್ಕೆ ಹೊಂದಿಕೊಂಡಂತೆ ಇದ್ದು, ಬೇರೆಡೆಯಲ್ಲಿ ಕಾಣಸಿಗದ ಮುಡಿ, ತುಪ್ಪೆ, ಕೂಟಾಯಿಗಳನ್ನು ಇಲ್ಲಿ ಮಾತ್ರ ಕಾಣಬಹುದು.

ಕಾಡು ಪ್ರಾಣಿಗಳಿಂದ ರಕ್ಷಿಸಲು ಬಳಸುತ್ತಿದ್ದ ಪರಿಕರಗಳಾದ ಹುಲಿಮೊಂಟೆ, ನೀರಮೊಂಟೆ, ಹಕ್ಕಿಮೊಂಟೆ, ಕಾಪು, ಬಿರು ಇವುಗಳು ಸುಲಭ ತಾಂತ್ರೀಕತೆಯನ್ನು ಹೊಂದಿರುವ ಪರಿಸರದಲ್ಲಿ ಲಭ್ಯವಾಗುವ ಬಿದಿರು, ಮರಗಳಿಂದ ರಚಿತವಾಗಿರುವವುಗಳು. ಇವುಗಳ ಅಧ್ಯಯನದಿಂದ ಅಂದಿನ ಕರಾವಳಿ ಕರ್ನಾಟಕದ ಭೌಗೋಳಿಕ, ರಾಜಕೀಯ, ಸಾಮಾಜಿಕ, ಐತಿಹಾಸಿಕ ಹಾಗೂ ಪ್ರಾಣಿ–ಪಕ್ಷಿಗಳ ಗುಣಧರ್ಮವನ್ನು ತಿಳಿಯುವುದು. ಕೃಷಿಸಂಪತ್ತನ್ನು ಸಂರಕ್ಷಣೆ ಮಾಡಲು ಬಳಸುವ ಪರಿಕರಗಳು ಆ ಕಾಲದ ಭೌಗೋಳಿಕ ಚಿತ್ರಣವನ್ನು ಹಾಗೂ ಮೃಗಪಕ್ಷಿಗಳ ಸಂಖ್ಯೆ ಮತ್ತು ಅವುಗಳಿಂದಾಗುವ ತೊಂದರೆಗಳು ಬಹಳವಾಗಿದ್ದುದನ್ನು ಸೂಚಿಸುತ್ತವೆ. ಅಲ್ಲದೆ ರಕ್ಷಣೆಗೆ ಬಳಸುತ್ತಿದ್ದ ಪರಿಕರಗಳು ಅವನ್ನು ಬಳಸುತ್ತಿದ್ದವರ ಸಾಮಾಜಿಕ ಸ್ಥಾನಮಾನ, ಅವರು ಅನುಸರಿಸುತ್ತಿದ್ದ ಮತಧರ್ಮಗಳು, ಆಗಿನ ಕಾಲದ ರಾಜಕೀಯ ಸ್ಥಿತಿಗತಿಯನ್ನೂ ತೋರಿಸುತ್ತವೆ ಎಂಬುದಕ್ಕೆ ಸಾಕ್ಷಿಯಾಗುತ್ತದೆ

ಕೃಷಿ ಕಾರ್ಯ ಸಂದರ್ಭದಲ್ಲಿ ಬಿಸಿಲು ಮಳೆಯಿಂದ ರಕ್ಷಿಸಿಕೊಳ್ಳಲು ಉಪಯೋಗಿಸುತ್ತಿದ್ದ ಗೊರಬು, ಮುಟ್ಟಾಲೆಗಳು ರಚನೆಯಲ್ಲಿನ ವೈವಿಧ್ಯತೆ ಮತ್ತು ಸರಳತೆಯನ್ನು ಮಾತ್ರ ತಿಳಿಯಪಡಿಸುವುದಲ್ಲದೆ ಮಾನವನ ಕೌಶಲ ಮತ್ತು ಬುದ್ಧಿವಂತಿಕೆ ಗಮನಿಸಬೇಕಾಗುತ್ತದೆ.

ಕೃಷಿ ಕೆಲಸಗಳ ನಿರ್ವಹಣೆಗೆ ಅನುಕೂಲವಾಗುವ ಪರಿಕರಗಳಾದ, ಹೊಡೆಮಂಚ, ಕೈಸಟ್ಟೆ, ಒನಕೆ, ಮಾಪನಗಳು, ಎತ್ತಿನಗಾಡಿ, ಬೊಂಕ, ಇತ್ಯಾದಿ ಬಳಕೆಯಿಂದ ದೂರ ಸರಿದಿದೆ. ಆದರೆ, ಹಿಡಿಸೂಡಿ ಕತ್ತಿ, ಗೆರಸೆ ಇತ್ಯಾದಿ ಇವತ್ತಿಗೂ ಅಲ್ಪ ಪ್ರಮಾಣದ ಬದಲಾವಣೆಯೊಂದಿಗೆ ಬಳಕೆಯಲ್ಲಿದೆ.

ಕೃಷಿ ಬದುಕು ಪಲ್ಲಟಗೊಂಡಂತೆ ಕೃಷಿಯಲ್ಲಿ ಹಾಗೂ ಅದರ ಪರಿಕರಗಳಲ್ಲಿ ಬಳಕೆಯಾಗುತ್ತಿದ್ದ ಹಲವಾರು ಪಾರಿಭಾಷಿಕ ಪದಗಳು ನಷ್ಟವಾಗಿವೆ. ಹಾಗಾಗಿ ಭಾಷೆಯ ಹಲವಾರು ಪದಗಳ ಬಳಕೆ ನಿಂತುಹೋಗಿದೆ. ಒಂದು

ಭೌತಿಕ ವಸ್ತುವಿನ ಜೊತೆಗೆ ಭಾಷೆಯ ಕಣ್ಮರೆಯು ನಡೆಯುತ್ತದೆ. ಹಾಗಾಗಿ ಭಾಷೆ ದೇಶ ಕಾಲವನ್ನು ನಿರ್ಧರಿಸುವ ಮಾನದಂಡವೂ ಆಗಿದೆ.

ಮೌಖಿಕ ಸಾಹಿತ್ಯವು ತುಳುನಾಡಿನ ಇತಿಹಾಸಕ್ಕೆ ಪ್ರಮುಖ ಆಕರವಾಗಿರುವ ಈ ಸಂದರ್ಭದಲ್ಲಿ ಕಬಿತಗಳು, ಪಾಡ್ದನಗಳು ಕೃಷಿ ಬದುಕಿನೊಡನೆ ಬೆಸೆದುಕೊಂಡಿರುವುದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಈ ಮೌಖಿಕ ಸಾಹಿತ್ಯದಲ್ಲಿ ಉಲ್ಲೇಖಗೊಂಡಿರುವ ಕೆಲವು ಭೌತಿಕ ವಸ್ತುಪರಿಕರಗಳು ಚಾರಿತ್ರಿಕ ದೃಷ್ಟಿಯಿಂದ ಮುಖ್ಯವಾಗುತ್ತದೆ.

ಕೃಷಿ ಬದುಕು ಪ್ರಕೃತಿಗೆ ಹೊಂದಿಕೊಂಡಂತೆ ಬೆಳೆದು ಬಂದಿರುವುದರಿಂದ ಅಲ್ಲಿ ಬಳಕೆಯಾಗುತ್ತಿದ್ದ ವಸ್ತುಗಳೂ ಕೂಡಾ ಸರಳ ಹಾಗೂ ಸುಲಭ ಸಾಧನಗಳಾಗಿದ್ದವು. ನಿರಂತರವಾದ ಪರಿಷ್ಕಾರವೇ ಮಾನವ ನಾಗರೀಕತೆಯ ಕಡೆಗೆ ಚಲಿಸಿದ ಹಾದಿ ಎಂಬುವುದನ್ನು ಇವುಗಳು ನಿಚ್ಚಳವಾಗಿ ತೋರಿಸುತ್ತದೆ. ಅಲ್ಲದೆ, ಕೃಷಿಪರಿಕರಗಳನ್ನು ಅನುಭವದಿಂದ ರೂಢಿಸಿಕೊಂಡಿರುವುದು ಹಾಗೂ ಔಷಧೀಯ ಗುಣಗಳನ್ನು ಹೊಂದಿರುವ ಮರಗಳನ್ನು ಅಗತ್ಯವಿದ್ದಲ್ಲಿ ಬಳಕೆ ಮಾಡುವುದನ್ನು-'ಉರಬಡು'ವನ್ನು ಮಾಡಲು ಕಾಸರಕ ಅಥವಾ ಕೊರಜ್ಜಿ ಮರಗಳನ್ನು ಬಳಸುವರು ಮತ್ತು ಅದರ ಅಳತೆಯ ನಿಖರತೆಯು ಉಳಲು ಬಳಸುವ ಪಶುಗಳಿಗೆ ಪೆಟ್ಟು ಬೀಳಬೇಕಾದಲ್ಲಿ ಮಾತ್ರ ಬೀಳುವಂತೆ ಮಾಡುವಲ್ಲಿ ಸಫಲವಾಗುತ್ತದೆ ಎಂಬುದನ್ನು ಗುರುತಿಸಬಹುದು.

ಈ ಅಧ್ಯಾಯದಲ್ಲಿ ಸಾಂಕೇತಿಕವಾಗಿ ಕೆಲವೊಂದು ವಸ್ತುಗಳನ್ನು ಸಂದರ್ಭಾನುಸಾರ ವಿಶ್ಲೇಷಿಸಲಾಗಿದೆ. ಈ ವಸ್ತುಗಳು ಶತಶತಮಾನಗಳಿಂದ ಬಳಕೆಯಲ್ಲಿದ್ದು, ಅದರ ಬಳಕೆ ನಿಂತಿದ್ದರೂ ಅದರೊಂದಿಗೆ ಮಿಳಿತವಾದ ಅವಿನಾಭಾವ ನಂಬಿಕೆ ಸಂಪ್ರದಾಯಗಳು ಮುಂದುವರಿಯುತ್ತಿವೆ. ಉದಾಹರಣೆಗೆ ಒಂದು ತೊಟ್ಟಿಲು ಅದೆಷ್ಟೊ ಮಕ್ಕಳು ಅದರಲ್ಲಿ ಮಲಗಿದ್ದಿರಬಹುದು. ಆ ತೊಟ್ಟಿಲಿನ ಬಳಕೆ ಸ್ಥಗಿತಗೊಂಡಿದ್ದರು, ರೂಪ ಮಾರ್ಪಾಡಾಗಿದ್ದರೂ ನಂಬಿಕೆ ಸಂಪ್ರದಾಯಗಳು ಮುಂದುವರಿಯುತ್ತಿದೆ.

ಯಾವಾಗ ವಸ್ತುವೊಂದು ಉಪಯೋಗದ ನಿಟ್ಟಿನಲ್ಲಿ ಸ್ಥಗಿತಗೊಳ್ಳುವುದೋ ಆಗ ಅದು ಇತಿಹಾಸದ ಭಾಗವಾಗಿ ಬಿಡುತ್ತದೆ. ಈ ವಸ್ತುಗಳು ಸಾಂಸ್ಕೃತಿಕ ಇತಿಹಾಸದ ಪುಟಗಳನ್ನು ತೆರೆದಿಡುತ್ತವೆ. ಒಬ್ಬ ರಾಜನ ಸಾಹಸಗಾಥೆ ಇನ್ನೊಬ್ಬನಿಗೆ ಸ್ಫೂರ್ತಿ ನೀಡಿ ಮುಂದಿನ ಹೆಜ್ಜೆಯನ್ನಿಡಲು ಅನುಕೂಲ ಮಾಡಿಕೊಡುವಂತೆ, ಭೌತಿಕ ವಸ್ತು ಕೂಡಾ ವಸ್ತುವಿನ ಪುನರ್ ರಚನೆಯಲ್ಲಿ ಪ್ರಮುಖವಾದ ಮೈಲಿಗಲ್ಲು ಆಗಬಲ್ಲದು. ರಾಜ ಮಹಾರಾಜರುಗಳ ಇತಿಹಾಸ ರಾಜಕೀಯ ಇತಿಹಾಸವನ್ನು ಬಿನ್ನವಿಸಿದರೆ, ಭೌತಿಕ ವಸ್ತುಗಳು ಅನಕ್ಷರರ, ಅಂಚಿನ ಜಗತ್ತಿನ ಪ್ರತಿನಿಧಿಯಾಗಿ ಸಾಂಸ್ಕೃತಿಕ ಇತಿಹಾಸವನ್ನು ನಿರೂಪಿಸುವುದರಲ್ಲಿ ಅನುಮಾನವಿಲ್ಲ. ಇವತ್ತು ಏತದ ಉಪಯೋಗವಿಲ್ಲದಿದ್ದರೂ, ಇಂದಿನ ಪಂಪುಸೆಟ್ಟಿನ ಅವಿಷ್ಕಾರಕ್ಕೆ ಹಿಂದಿನ ಪಾತಾಳದಿಂದ ಆಳೆತ್ತರಕ್ಕೆ ಚಿಮ್ಮಿಸುವ ಏತಗಳೆ ಮೂಲಪ್ರೇರಣೆ ಎಂದೂ ಯಾರೂ ಅಲ್ಲಗಳೆಯಲಾರರು. ಅವಿಭಜಿತ ದೊಡ್ಡ ಕುಟುಂಬಗಳಲ್ಲಿ ಸಾಕಷ್ಟು ಮನೆ ಮಂದಿ ಆಳುಕಾಲುಗಳೊಂದಿಗೆ ಸೇರಿ ಕೆಲಸ ನಿರ್ವಹಿಸುವುದು ಅಂದು ಸಾಧ್ಯವಾಗಿತ್ತು. ಇಂದಿನ ವಿಭಕ್ತ

ಕುಟುಂಬಗಳಲ್ಲಿ, ಕೃಷಿಕಾರ್ಯ ಮಾಡುವುದೇ ದೊಡ್ಡ ಸಾಹಸವಾಗುತ್ತಿರುವಾಗ ಯಂತ್ರ–ತಂತ್ರಗಳ ಬಳಕೆ ಅನಿವಾರ್ಯ. ಕೃಷಿ ಪರಿಕರಗಳ ಅಧ್ಯಯನದ ಮೂಲಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಚರಿತ್ರೆಯನ್ನು ತೆರೆದಿಡುತ್ತದೆ.

ಕೊನೆ ಟಿಪ್ಪಣಿ

[೧] ಬುಕಾನನ್ ಫ್ರಾನಿಸ್, ಎ ಜರ್ನಿ ಫ್ರಮ್ ಮದ್ರಾಸ್ ತ್ರೂ ದಿ ಕಂಟ್ರೀಸ್ ಆಫ್ ಮೈಸೂರು, ಕೆನರಾ ಮತ್ತು ಮಲ್ಬಾರ್, ಸಂಪುಟ ೩, ೧೮೦೭.

[೨] ಬುಕಾನನ್ ಫ್ರಾನಿಸ್, ಎ ಜರ್ನಿ ಫ್ರಮ್ ಮದ್ರಾಸ್ ತ್ರೂ ದಿ ಕಂಟ್ರೀಸ್ ಆಫ್ ಮೈಸೂರು, ಕೆನರಾ ಮತ್ತು ಮಲ್ಬಾರ್, ಸಂಪುಟ ೩, ೧೮೦೭, ಪ್ಲೇಟ್ ಥಥತ.

[೩] ಸ್ಟರಕ್ ಜೊನ್, ಸೌತ್ ಕೆನರ ಮೆನ್ಯುಲ್, ೧೮೯೪.

[೪] ಉಪಾಧ್ಯಾಯ ಯು.ಪಿ (ಸಂ) ತುಳು ನಿಘಂಟು, ಗೋವಿಂದ ಪೈ ಸಂಶೋಧನಾ ಕೇಂದ್ರ, ಉಡುಪಿ, ಪು:೧೯೦೪.

[೫] ಪೂಜಾರಿ ತುಕಾರಾಂ, ದಕ್ಷಿಣ ಕನ್ನಡ ಜಿಲ್ಲೆಯ ವಸ್ತು ಸಂಗ್ರಹಾಲಯಗಳು, ದ.ಕ.ಜಿಲ್ಲೆಯ ಪುರಾತತ್ವ ಮತ್ತು ಇತಿಹಾಸ(ಸಂ. ಡಾ ಆರ್. ಗೋಪಾಲ್), ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ಪು:೩೪೦.

[೬] ದಲ್ಲೋಡಿ ದೇಜಪ್ಪ, ಬಿಲ್ಲವ: ಸಾಂಸ್ಕೃತಿಕ ಸಂಪದ, ಆಕೃತಿ ಆಶಯ ಪಬ್ಲಿಕೇಶನ್, ಮಂಗಳೂರು, ೨೦೧೨.

[೭] ಕೇನಾಜೆ ಸುಂದರ, ಭತ್ತದ ಲೋಕ, ಸಿಂಚು ಮಲ್ಟಿಗ್ರಾಫ್, ಮೈಸೂರು, ೨೦೦೯, ಪುಟ:೩೪೨.

[೮] ನಾವಡ ಎ.ವಿ , ಸಿರಿ ಪಾಡ್ದನ, ಪುಟ ೬೮.

[೯] ಮಾಹಿತಿ : ತೋಕೂರುಗುತ್ತು ಹರಿಣಾಕ್ಷಿ ಶೆಟ್ಟಿ, ವಯಸ್ಸು ೭೨ ವರ್ಷ.

[೧೦] ಕೊಸಾಂಬಿ ಡಿ.ಡಿ., ಪ್ರಾಚೀನ ಭಾರತದ ಸಂಸ್ಕೃತಿ ಮತ್ತು ನಾಗರೀಕತೆ,(ಅನು) ಟಿ.ಎಸ್. ವೇಣುಗೋಪಾಲ ಮತ್ತು ಶೈಲಜಾ, ಚಿಂತನ ಪುಸ್ತಕ, ೨೦೧೧.

[೧೧] ಮಾಹಿತಿ: ಕೇಶವ ಉಚ್ಚಿಲ, ಸಂಶೋಧಕರು, ಪ್ರಾಯ ೭೫.

[೧೨] ಸಾಲೆತ್ತೂರು ಬಿ.ಎ, ದಿ ಎನ್ಸೆಂಟ್ ಹಿಸ್ಟರಿ, ಓರಿಯೆಂಟಲ್ ಬುಕ್ ಏಜನ್ಸಿ, ಪೂನಾ, ೧೯೩೬.

[೧೩] ಬುಕಾನನ್ ಫ್ರಾನಿಸ್, ಎ ಜರ್ನಿ ಫ್ರಮ್ ಮದ್ರಾಸ್ ತ್ರೂ ದಿ ಕಂಟ್ರೀಸ್ ಆಫ್ ಮೈಸೂರು, ಕೆನರಾರ್ಮತ್ತು ಮಲ್ಬಾರ್, ಸಂಪುಟ ೩, ಪುಟ:೩೫.

[೧೪] ಮಾಹಿತಿ: ಅಪ್ಪಯ್ಯ, ನಿವೃತ್ತ ಪೋಲಿಸಧಿಕಾರಿ ವಯಸ್ಸು ೭೨ ವರ್ಷ..

[೧೫] ಎಚ್.ಎಲ್.ನಾಗೇಗೌಡ, ಸುದರ್ಶನ- ಪ್ರವಾಸಿ ಕಂಡ ದಕ್ಷಿಣಕನ್ನಡ, ವಿಜಯಾಕಾಲೇಜ್ ಟ್ರಸ್ಟ್, ಪುಟ ೮೦-೮೧, ೧೯೭೭.

[೧೬] ಭಟ್ಟ ಶ್ರೀನಿವಾಸ ಪು, ಜಾನಪದ ಶತಪಥ, ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ, ೨೦೦೫.

[೧೭] ಮಾಹಿತಿ: ಡಾ. ದುರ್ಗಾಪ್ರಸಾದ್, ಸುಳ್ಯ, ಪ್ರಾಯ ೬೮.

[೧೮] ಬುಕಾನನ್ ಫ್ರಾನಿಸ್, ಎ ಜರ್ನಿ ಫ್ರಮ್ ಮದ್ರಾಸ್ ತ್ರೂ ದಿ ಕಂಟ್ರಿಸ್ ಆಫ್ ಮೈಸೂರು, ಕೆನರಾ ಮತ್ತು ಮಲ್ಬಾರ್, ಸಂಪುಟ ೩, ೧೮೦೭, ಪುಟ: ೫೮.

[೧೯] ಮುಡೆಂಕಿಲ, ಪ್ರಾಯ ೭೫, ಹನುಮಾಜೆ, ಬಂಟ್ವಾಳ.

[೨೦] ರೈ ಸಂಜೀವ ಸಾಂತ್ಯ, ಹಳಬರ ಜೋಳಿಗೆ, ಕಾವ್ಯ ಕಾವೇರಿ ಸಾಹಿತ್ಯ ಸಂದೀಪನಿ, ಸುಳ್ಯ, ಸೆಪ್ಟೆಂಬರ ೧೯೯೬ ಪುಟ ಸಂಖ್ಯೆ ೩೦.

[೨೧] ದಿವಾಕರ ಕೆ., ತುಳುನಾಡಿನ ಆಚರಣೆಗಳು ವಾರ್ಷಿಕ ಆವರ್ತನದ ಸಾಂಸ್ಕೃತಿಕ ಅಧ್ಯಯನ,ಕನ್ನಡ ಮತ್ತು ಸಂಸ್ಕೃತಿ ಇಲಾಖೆ , ಬೆಂಗಳೂರು, ಪುಟ ೭೯–೮೦.

[೨೨] ಸಾಲೆತ್ತೂರು ಬಿ.ಎ., ಓರಿಯೆಂಟಲ್ ಬುಕ್ ಏಜನ್ಸಿ, ಪೂನಾ ೧೯೩೭ ಪು:೪೯೦.

[೨೩] ಸಾಲೆತ್ತೂರು ಬಿ.ಎ, ದಿ ಎನ್ಸೆಂಟ್ ಹಿಸ್ಟರಿ, ಓರಿಯೆಂಟಲ್ ಬುಕ್ ಎಜನ್ಸಿ, ಪೂನಾ, ೧೯೩೬ ಪುಟ: ೪೮೦.

[೨೪] ಮಾಹಿತಿ: ಚಂದ್ರಾವತಿ, ಪೆರ್ನೆ, ಬಂಟ್ವಾಳ, ಪ್ರಾಯ ೮೯.

[೨೫] ಶಿವರಾಮು ವನಂ, ಜಾನಪದ ವಸ್ತು ಸಂಗ್ರಹಾಲಯಗಳು, ಪ್ರಸಾರಾಂಗ, ಕನ್ನಡ ವಿ.ವಿ, ಹಂಪಿ, ೨೦೦೦, ಪು: ೩೨.

[೨೬] ಮಾಹಿತಿ: ಅಜಿತ್ ಉಪ್ಪಿನಂಗಡಿ, ೬೦ ವರ್ಷ.

[೨೭] ಜವರೇಗೌಡ ದೇ, ಜಾನಪದ ಅಧ್ಯಯನ, ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೧, ಪುಟ:೮.

ಅಧ್ಯಾಯ ೪

ಗೃಹೋಪಯೋಗಿ ವಸ್ತುಗಳು ಮತ್ತು ಸಾಂಸ್ಕೃತಿಕ ಇತಿಹಾಸ

೪.೧ ತುಳುವರ ಮನೆ ಮತ್ತು ಪರಿಕರಗಳು

ಮನುಷ್ಯನ ಮೂಲಭೂತ ಅವಶ್ಯಕತೆಗಳಲ್ಲಿ ಎಂದಿಗೂ ಉಳಿದುಕೊಂಡು ಬಂದಿರುವಂತಹದ್ದೆಂದರೆ ಅವನ ವಾಸಸ್ಥಾನ. ಮಳೆ, ಗಾಳಿ ಮತ್ತಿತರ ವಾತಾವರಣದ ವೈಪರೀತ್ಯದಿಂದ ಅಥವಾ ಪ್ರಾಣಿಗಳಿಂದ ರಕ್ಷಣೆ ಪಡೆಯಲು, ಮಾನ–ಪ್ರಾಣ ಉಳಿಸಲು, ಗಳಿಸಿದ ಸಂಪತ್ತನ್ನು ಕಾಪಿಡಲು ಒಂದು ಸೂರಿನ ಅವಶ್ಯಕತೆ ಪ್ರತಿಯೋರ್ವನಿಗೂ ಇದ್ದೇ ಇರುವುದು. ಬಡವ ಬಲ್ಲಿದನೆಂಬ ಬೇಧವಿಲ್ಲದೆ ಮನೆಯೆಂಬುದು ಎಲ್ಲರಿಗೂ ಅತ್ಯವಶ್ಯಕವಾದರೂ ಇದರ ಸ್ವರೂಪ ಮಾತ್ರ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗತಿಗನುಸಾರ ಅಂದಿನಿಂದಲೂ ವ್ಯತ್ಯಾಸವನ್ನು ಕಂಡಿದೆ. ಇದಕ್ಕೆ ತುಳುವರ ಮನೆಗಳು ಹೊರತಲ್ಲ, ಬೇರೆ ಬೇರೆ ಸಾಮಾಜಿಕ ಸ್ತರಗಳಲ್ಲಿರುವ ಜನರ ಮನೆಗಳನ್ನು ಬೇರೆ ಬೇರೆ ಹೆಸರುಗಳಿಂದ ಗುರುತಿಸಲಾಗುತ್ತದೆ. ಮೇರ, ಕೊರಗ, ಬಾಕುಡರ ಮನೆಗಳನ್ನು ಜೋಂಪುಡಿ, ಗುಡಿಸಲು, ಪಟ್ಟ, ಕೊಪ್ಪ ಕೇರಿ, ಕೊಟ್ಯ, ಜೇರ, ದಟ್ಟಿಗೆ, ಕೇಲ್ ಎಂದು ಕರೆಯಲಾಗುವುದು. ಅದೇ ಬಂಟರ, ಜೈನರ ಅಥವಾ ಬಿಲ್ಲವರ ಮನೆಗಳಿಗೆ ಗುತ್ತು, ಬಾರಿಕೆ, ಪರಾರಿ, ಬಾವ, ಬೂಡು, ಅರಂತಡೆ ಎಂದು ಕರೆಯುವುದಿದೆ.

ಮನೆ ಯಾವುದೇ ಆಗಿರಲಿ ಸಾಮಾನ್ಯವಾಗಿ ಒಂದು ಮನೆ ಎಂದರೆ ಅಲ್ಲಿ ಅಡುಗೆ ಮನೆ, ನಡು ಮನೆ, ಚಾವಡಿ ಇದ್ದೇ ಇರುವಂತಹದು. ಮನೆಯನ್ನು ಡಾ. ವಾಮನ ನಂದಾವರರವರು ೬ ವಿಭಾಗಗಳಲ್ಲಿ ವರ್ಗೀಕರಣ (ಕೊಡಿಪು, ೨೦೦೬) ಮಾಡುತ್ತಾರೆ.[೧] ಅವೆಂದರೆ:

೧. ಅಡುಗೆ ಮನೆ

೨. ತೊಟ್ಟಿಲ ಕೋಣೆ

೩. ಅಂಗಳ

೪. ಚಾವಡಿ

೫. ಹಟ್ಟಿ

೬. ಕೊಟ್ಟಿಗೆ

ಇದು ಸಾಮಾನ್ಯವಾಗಿ ಹೆಚ್ಚಿನ ತುಳುವರ ಮನೆಯ ಸಂಯೋಜನೆ. ಅವುಗಳಿಗೆ ಸಂಬಂಧಪಟ್ಟ ಗೃಹೋಪಯೋಗಿ ಪರಿಕರಗಳನ್ನು ಅಲ್ಲಿಯೇ ಜೋಡಿಸಿಡಲಾಗುತ್ತಿತ್ತು. ತುಳುವರ ಬದುಕು ಅತ್ಯಂತ ಸರಳವಾಗಿತ್ತು. ಎಷ್ಟೇ ವೈಭೋವೋಪೇತ ಮನೆಯಾದರೂ ಉಪಯೋಗಿಸಲ್ಪಡುತ್ತಿದ್ದ ವಸ್ತುಗಳು ಮಿತಿಯಲ್ಲಿದ್ದವು. ಇಂದಿನವರಂತೆ ಬೇಕು ಬೇಡದ ವಸ್ತುಗಳನ್ನು ತಂದು ಪೇರಿಸಿ ಇಡುತ್ತಿರಲಿಲ್ಲ. ಶ್ರೀಮಂತ ಹಿಡುವಳಿದಾರರು ಸಕಾಲದಲ್ಲಿ ಗೇಣಿ

ಸಲ್ಲಿಸದ ಒಕ್ಕಲಿನವನನ್ನು ಗದರಿಸುವ ಮಾತೆಂದರೆ 'ನಿನ್ನ ಮಡಿಕೆ ಸೌಟುಗಳನ್ನು ಹೊರಗೆಸೆಯುವೆ' ('ನಿನ್ನ ಕರ ಕೈಲ್ ಪಿದಾಯಿ ದಕ್ಕುವೆ') ಎಂಬುವುದು. ಈ ಮಾತಿನಿಂದ ಸಾಮಾನ್ಯ ಕೃಷಿಕನೊಬ್ಬನ ಮನೆಯಲ್ಲಿರಬಹುದಾದ ಗರಿಷ್ಠ ಭೌತಿಕ ವಸ್ತು ಪರಿಕರಗಳ ಚಿತ್ರಣ ಸಿಗುತ್ತದೆ. ಮಾತ್ರವಲ್ಲದೆ ಅವನ ಬಡತನದ ಸ್ಪಷ್ಟ ಅರಿವಾಗುತ್ತದೆ. ಇದರಿಂದ ನಿಜವಾಗಿಯೂ ಓರ್ವ ಸಾಮಾನ್ಯನ ಮನೆಯಲ್ಲಿ ಇದಕ್ಕಿಂತ ಹೆಚ್ಚಿನ ಪರಿಕರಗಳು ಇದ್ದಿರಲಿಲ್ಲ ಎಂಬುದನ್ನು ಅರ್ಥೈಸಿಕೊಳ್ಳಬಹುದು.

ಅಡುಗೆ ಮನೆಯ ಸ್ವರೂಪ

ಅಡುಗೆ ಕೋಣೆಯಲ್ಲಿ ಒಲೆಸಾಲು, ಅದರ ಮೂಲೆಯಲ್ಲಿ ಸೌದೆ ಹಾಕಿಡಲು ಸ್ಥಳ, ಒಲೆ ಮೇಲ್ಗಡೆಯಲ್ಲಿ ಗೋಡೆಗೆ ಜೋಡಿಸಿದ ಮರದ ಎರಡು ಕೈಗಳ ಮೇಲೆ ಇರಿಸಲಾದ ಹಲಗೆ ಅಥವಾ ರಿಪೀಸುಗಳು, ಅದರ ಮೇಲೆ ಇಡಲ್ಪಟ್ಟ ಮಣ್ಣಿನ ಮಡಕೆ (ಕರ, ಬಿಸಲೆ ಇತ್ಯಾದಿ), ತೊಂದುರುಕರ ಇತ್ಯಾದಿ ಅಡುಗೆ ಸಾಮಗ್ರಿಗಳು, ಅಂತಹದೇ ವ್ಯವಸ್ಥೆಯ ಮೇಲೆ ಅಥವಾ ಗೋಡೆಯ ಕಪಾಟಿನಲ್ಲಿಡಲ್ಪಟ್ಟ ಸಂಬಾರ ಪದಾರ್ಥಗಳು ಹಾಗೂ ಅಡುಗೆ ವಸ್ತುಗಳು, ಮೇಲ್ಗಡೆಯಿಂದ ನೇತಾಡಿಸಲ್ಪಟ್ಟಿರುವ 'ಬಲ' ಹಾಗೂ ಅದರಲ್ಲಿಡಲ್ಪಟ್ಟಿರುವ ಮೊಸರು, ಮಜ್ಜಿಗೆ, ಬೆಣ್ಣೆ ಇತ್ಯಾದಿ ಕ್ಷೀರೋತ್ಪನ್ನಗಳು, ಪಕ್ಕದಲ್ಲೇ ರುಬ್ಬುವ ಕಲ್ಲು, ಬೀಸುಕಲ್ಲು, ಬದಿಯಲ್ಲಿ ಇರಿಸಲಾಗಿರುವ ಮುಕ್ಕಾಲಿಗೆ ಇತ್ಯಾದಿ; ಕುತ್ತಟ್ಟಕ್ಕೆ ಹತ್ತಲು ಇರಿಸಲ್ಪಟ್ಟ ಏಣಿ; ಕುತ್ತಟ್ಟದಲ್ಲಿಟ್ಟಿರುವ ಅಕ್ಕಿ ಮುಡಿ; ಭತ್ತದ ಬೀಜದ ಮುಡಿ, ಹುಣಿಸೆ ಹಣ್ಣಿನ ಕುರುಂಟು, ಬೆಲ್ಲದ ಭರಣಿ ಇತ್ಯಾದಿ. ನೀರು ಹಾಕಿಡುವ ನೀರಡ್ಯರ, ಗಂಜಿ ತಿಳಿ ಬಸಿಯಲು ಉಪಯೋಗಿಸುವ 'ಓಡಮರಾಯಿ' ಕುಡ್ಪು-ತಂಬುರ್ಚ್ಚಿಗಳು; ಕಾವಲಿಗಳು, ಸೌಟು ಇತ್ಯಾದಿ ಪರಿಕರಗಳು, ಮೆಟ್ಟುಕತ್ತಿ, ಹೆರೆಮಣೆ, ಕತ್ತಿ ಇತ್ಯಾದಿ ಸಾಧನಗಳು- ಇವೆಲ್ಲವೂ ಇದ್ದವು. ಕತ್ತಲು ತುಂಬಿರುವ ಅಡುಗೆ ಕೋಣೆಯಲ್ಲಿ ಬೆಳಕಿಗಾಗಿ ದೀಪದ ವ್ಯವಸ್ಥೆಯನ್ನೂ ಮಾಡಿಡಲಾಗುತ್ತಿತ್ತು.

ತುಳುವರ ದೈನಂದಿನ ಬದುಕಿನಲ್ಲಿ ಹಾಸುಹೊಕ್ಕಾಗಿದ್ದ ಪರಿಕರಗಳನ್ನು 'ಈಜೋ ಮಂಜೊಟ್ಟಿಗೋಣ' ಪಾಡ್ದನದಲ್ಲಿ ಗುರುತಿಸಬಹುದು:

'ಬೇಗನೇ ಇನ್ನು ಮನೆಯೊಡತಿ ಬಂದೂ '
ಹಾಕಿದ ಹಾಸಿಗೆ ಮಡಿಸಿ ಇಟ್ಟರು
ಬೇಗನೇ ಇನ್ನು ಬಂಗಾರದ ಹಿಡಿಸೂಡಿಯಲ್ಲಿ
ಒಳಗೆ ಅಂಗಣ ಗುಡಿಸುತ್ತಾ ಬಂದರು
ಈಜೋ ಮಂಜಟ್ಟಿ ಗೋಣಾ
ಬೆಳ್ಳಿಯ ಹಿಡಿಯ ಹಿಡಿಸೂಡಿ ಹೊರಗಿನ ಅಂಗಣಕ್ಕೆ
ಹೊರಗಿನ ಅಂಗಣ ಗುಡಿಸುತ್ತಾ ಬರುತ್ತಾರೆ

ಈಜೋ ಮಂಜಟ್ಟಿ ಗೋಣಾ
ಒಲೆಯ ಸಿರಿಬೂದಿ ಬೆಳ್ಳಿಯ ಬಟ್ಟಲಿಗೆ
ಬೇಗನೆ ಇನ್ನು ತೆಗೆದರು ಬಂದೂ
ಬೇಗನೆ ಇನ್ನು ಹೋದರು ಬಂದೂ
ಹಟ್ಟಿಕೊಟ್ಟಿಗೆಗೆ ಹೋದರು ಬಂದೂ
ಕಪಿಲೆ ದನದ ಹಸಿಸೆಗಣಿ ತೆಗೆದರು
ಈಜೋ ಮಂಜೊಟ್ಟಿಗೋಣಾ
ಬೆಳ್ಳಿಯ ಉರುಳಿಗೆ ಹಾಕಿದರು ಬಂದೂ
ಬೇಗನೆ ಇನ್ನು ತರುತ್ತಾರೆ ಬಂದೂ
ಒಳಗೆ ಸೂತ್ರಕ್ಕೆ ಉಗುರಿನಿಂದ ಸಿಂಪಡಿಸಿದರು
ಈಜೋ ಮಂಜಟ್ಟಿ ಗೋಣಾ
...ಬೇಗನೆ ಇನ್ನು ಬೆಳ್ಳಿಯ ಬಿಂದಿಗೆಯಲ್ಲಿ
ಓ ಬೆಳ್ಳಿಯ ಪಾತ್ರೆಯನ್ನು ಬೆಳ್ಳಿಯ ಬಿಂದಿಗೆಯನ್ನು
ಬೇಗನೆ ಇನ್ನು ತೆಗೆದುಕೊಂಡು ಹೋಗುತ್ತಾರೆ
ಬೂದಿಯ ಹೊಂಡಕ್ಕೆ ಬೂದಿಯನ್ನು ಹಾಕಿದರು
ಗಟ್ಟಿಯಾಗಿ ಕಟ್ಟಿ ಕಟ್ಟಿದ ಬಾವಿಕಟ್ಟೆಗೆ
ಹೋಗುತ್ತಾರೆ ಬಂದೂ
ಬೋರಲಿದ್ದ ಮರಿಗೆಯನ್ನು ಅಂಗಾತ ಮಾಡಿದರು
ಏತದ ಅಟ್ಟೆಮರ ಹಾರಿಸಿ ಹಿಡಿದರು
ಒಂದು ಬಿಂದಿಗೆ ನೀರೆಂದು ತೆಗೆದರು ಬಂದೂ
ಈಜೋ ಮಂಜಟ್ಟಿ ಗೋಣಾ
ಬೇಗನೆ ಇನ್ನು ಬೆಳ್ಳಿಯ ಬಿಂದಿಗೆಯನ್ನು
ಬಿಳಿಕಲ್ಲಿನ ಹುಡಿ ಹಾಕಿ ಬೆಳ್ಳನೆ ಬೆಳಗಿಸಿದರು
ತಾಮ್ರದ ಬಿಂದಿಗೆಯನ್ನು ಕೆಂಪಾಗಿ ಬೆಳಗಿಸಿದರು
ಎರಡೂ ಕೈಗಳಲ್ಲಿ ಸೊಂಟದಲ್ಲಿ ನೀರನ್ನು ತರುತ್ತಾರೆ
ಈಜೋ ಮಂಜಟ್ಟಿ ಗೋಣಾ
ಓ ಬೇಗಾನೆ ಬನ್ನಿ ಬರುತ್ತಾರೆ ಬಂದೂ

ಸೊಂಟದ ನೀರನ್ನು ಹಲಗೆಯಲ್ಲಿ ಇಟ್ಟರು

ಎರಡೂ ಕೈಗಳಲ್ಲಿನ ಬಿಂದಿಗೆಯ ನೀರನ್ನು ಒಲೆಯಲ್ಲಿ ಇಟ್ಟರು

ಮೇಲೆ ಮುಚ್ಚಳ ಮುಚ್ಚಿದರು ಬಂದೂ

ಅಡಿಯಿಂದ ಬೆಂಕಿ ಉರಿಸಿದರೂ ಬಂದೂ

ಈಜೋ ಮಂಜಟ್ಟಿ ಗೋಣಾ

ಬೇಗನೆ ಇನ್ನೂ ಹೋಗುತ್ತಾರೆ ಬಂದೂ

ಅಟ್ಟಕ್ಕೆ ಮುಟ್ಟೇಣಿ ಬೇಗನೆ ಇಡುತ್ತಾರೆ

ಬೇಗನೆ ಇನ್ನು ಅಟ್ಟಕ್ಕೆ ಹೋಗುತ್ತಾರೆ

ಮುಡಿಗೆ ಚುಚ್ಚಿ ರಂಧ್ರ ಮಾಡಿ ಮೂರು ಸೇರು ಅಕ್ಕಿ ತೆಗೆದರು ಬಂದೂ

ಬೇಗನೆ ಇನ್ನೂ ಬರುತ್ತಾರೆ ಬಂದೂ

ಬೇಗನೆ ಇನ್ನು ಕುಟ್ಟಿ ಗೇರಿ

ಬೇಗನೆ ಇನ್ನು ಮೂರು ಸೇರು ಅಕ್ಕಿ ಮಾಡಿದರು

ಬೇಗನೆ ಇನ್ನು ಅನ್ನದ ಮಡಿಕೆಗೆ

ಬೇಗನೆ ಇನ್ನು ಹಾಕಿದರು ಬಂದೂ

ಮೇಲಿಂದ ನೀರು ಸೇರಿಸಿದರು

ಅಡಿಭಾಗಕ್ಕೆ ಕೈ ಹಾಕಿ ಅಕ್ಕಚ್ಚು ತೆಗೆದರು

ಈಜೋ ಮಂಜಟ್ಟಿ ಗೋಣಾ

ಬೇಗನೆ ಇನ್ನು ಅನ್ನದ ಮಡಿಕೆಗೆ

ಬೇಗನೆ ಹಾಕಿದರು ಬಂದು

ಅಡಿಭಾಗಕ್ಕೆ ತೆಂಗಿನ ಕರಟದ ಸೌಟು ಬೇಗನೆ ಹಾಕಿದರು

ಬೇಗನೆ ಇನ್ನು ಹೋಗುತ್ತಾರೆ ಬಂದೂ

ಬೆಳ್ಳಿಯ ಎಸರುತಟ್ಟೆ ಹಿಡಿದರು ಬಂದು

ಗೆಜ್ಜೆಕತ್ತಿ ಹಿಡಿದುಕೊಂಡೂ ಹೋಗುತ್ತಾರೆ

ಪಡುವಣದ ನಂದನವನದ ಹಿತ್ತಲಿಗೆ ಹೋದರು

ಈಜೋ ಮಂಜಟ್ಟಿ ಗೋಣಾ.....

ಬೇಗನೆ ಇನ್ನೂ ಬರುತ್ತಾರೆ ಬಂದೂ

ಅನ್ನದ ಪಾತ್ರೆಯ ಮುಚ್ಚಳ ತೆಗೆದರೂ ಬಂದೂ

ಬೇಗನೆ ತೆಂಗಿನ ಕರಟದ ಸೌಟು ಹಾಕಿ ನೋಡಿದರು ಬಂದೂ
ಬೇಗನೆ ಇನ್ನು ಅನ್ನ ಬಸಿದರು
ಬೇಗನೆ ಇನ್ನು ಹೋದರು ಬಂದೂ
ನಡುವಿನ ದಾರಿಯಲ್ಲೇ ಇಟ್ಟರು ಮೆಟ್ಟುಕತ್ತಿ
ಮೆಟ್ಟುಕತ್ತಿ ಇಟ್ಟು ಪದಾರ್ಥದ ತಯಾರಿಗೆ
ಬೇಗನೆ ಇನ್ನು ಪದಾರ್ಥದ ತಯಾರಿಗೆ...'

ಈ ಪಾಡ್ದನದ ಪಠ್ಯಭಾಗದಲ್ಲಿ – ಹಾಸುಗೆ, ಮನೆಯ ಒಳಗೆ ಗುಡಿಸುವ ಬಂಗಾರದ ಹಿಡಿಸೂಡಿ, ಮನೆಯ ಹೊರಸುತ್ತನ್ನು ಗುಡಿಸುವ ಬೆಳ್ಳಿಯ ಹಿಡಿಯಿರುವ ಹಿಡಿಸೂಡಿ, ಒಲೆಯ ಬೂದಿ ತೆಗೆಯಲು ಬೆಳ್ಳಿಯ ಬಟ್ಟಲು, ದನದ ಸೆಗಣಿ ತೆಗೆದು ಹಾಕಲು ಬೆಳ್ಳಿಯ ಉರುಳಿ, ಬೆಳ್ಳಿಯ ಬಿಂದಿಗೆ, ಮರಿಗೆ, ಏತ, ತಾಮ್ರದ ಬಿಂದಿಗೆ, ಮುಟ್ಟೇಣಿ, ಮುಡಿ, ಅನ್ನದ ಮಡಿಕೆ, ತೆಂಗಿನ ಕರಟದ ಸೌಟು, ಬೆಳ್ಳಿಯ ಎಸರುತಟ್ಟೆ, ಅನ್ನದ ಪಾತ್ರೆಯ ಮುಚ್ಚಳ, ಮೆಟ್ಟುಕತ್ತಿ –ಇವಿಷ್ಟು ವಸ್ತುಗಳ ಉಲ್ಲೇಖ ಮಾತ್ರವಲ್ಲದೆ ಆ ವಸ್ತುಗಳನ್ನು ಬಳಸುತ್ತಿದ್ದ ರೀತಿಯನ್ನು ವಿವರಿಸಲಾಗಿದೆ. ಇಲ್ಲಿ ಉಲ್ಲಿಖಿತವಾದ ವಸ್ತುಗಳು ಜನರ ಬದುಕಿನೊಂದಿಗೆ ಹಾಸುಹೊಕ್ಕಾಗಿರುವವುಗಳು; ಕೆಲವೊಂದು ಕಡೆ ತಮ್ಮ ದಿನನಿತ್ಯದ ವಸ್ತುಗಳನ್ನು ಬಳಸಿದ್ದರೂ, ಕಾವ್ಯಾತ್ಮಕವಾಗಿ ಬಂಗಾರ/ಬೆಳ್ಳಿಗಳಿಂದ ಮಾಡಲ್ಪಟ್ಟ ವಸ್ತುಗಳ ಬಳಕೆ ಮಾಡಿದೆ ಎಂಬ ಜನಪದರ ಕಲ್ಪನೆಯ ವೈಭವವನ್ನು ಅಥವಾ ಉಪಮೆಯನ್ನು ಗುರುತಿಸಬಹುದು.

ತುಳುನಾಡಿನ ಬಲಭೀಮ ಎಂದು ಗುರುತಿಸಲ್ಪಟ್ಟ ಐತಿಹಾಸಿಕ ಪುರುಷ–ಅಗೋಳಿ ಮಂಜಣ – ಹೇಳುವ ವಿವರ ಹೀಗಿದೆ:

'ಕಾರ್ಕಳದಲ್ಲಿರುವ ಬಾಕಿಮಾರುಗದ್ದೆ ಬಟ್ಟಲಾಗಬೇಕು
ಕೊಡಿಂಜೆಕಲ್ಲು ಉಡರಿಗೆ ಎಂಬ ತಿಂಡಿಯಾಗಬೇಕು
ಗುಜ್ಜರಕೆರೆ ಹಾಲಾಗಬೇಕು
ನನ್ನಮ್ಮ ದುಗ್ಗು ಬಡಿಸಬೇಕು'

ನಾನು ಮಗ ಮಂಜಣ ಉಣಬೇಕು = ಕಾರ್ಕಳದ ಬಾಕಿಮಾರು ಗದ್ದೆಯಷ್ಟು ದೊಡ್ಡ ಬಟ್ಟಲಿನಲ್ಲಿ, ಕೊಡಿಂಜೆ ಕಲ್ಲಿನಷ್ಟು ದೊಡ್ಡ 'ಉಡರಿಗೆ' ಎಂಬ ಅಕ್ಕಿಯ ತಿಂಡಿ ಹಾಗೂ ಅದರ ಮೇಲೆ ಗುಜ್ಜರಕೆರೆಯಲ್ಲಿರುವ ನೀರಿನಷ್ಟು ತೆಂಗಿನ ಸಿಹಿಹಾಲನ್ನು ತನ್ನ ತಾಯಿ ದುಗ್ಗಮ್ಮ ಬಡಿಸಬೇಕು, ಮಗನಾದ ತಾನು–ಮಂಜಣ ಉಣಬೇಕು– ಎಂಬ ಆತನ ಬಯಕೆ ಇಲ್ಲಿ ವ್ಯಕ್ತವಾಗಿದೆ.

(ಕಾರ್ಲದ ಬಾಕ್ಯಾರ್ ಕಂಗಣ ಆತೊಡು
ಕೊಡಿಂಜೆದ ಕಲ್ಲ್ ಉಡರಿಗೆ ಆತೊಡು
ಗುಜ್ಜರಕೆದು ಪೇರಾತೊಡು

ಎನ್ನಪ್ಪೆ ದುಗ್ಗು ಬಲಸೊಡು ಯಾನ್ ಮಗೆ ಮಂಜಣೆ ಉನೊಡು). ಇಲ್ಲಿ ಮಂಜಣ್ಣನ ಹೊಟ್ಟೆಬಾಕತನದೊಂದಿಗೆ ಆ ಕಾಲದ ಜನರ ಮೆಚ್ಚಿನ ಆಹಾರ ಪದಾರ್ಥಗಳು ಹಾಗೆಯೇ ಸೇವನೆ ಮಾಡುವ ಪಾತ್ರೆ ಪಗಡೆಗಳ ಗಾತ್ರದ ನಿಚ್ಚಳ ಚಿತ್ರಣ ಸಿಗುತ್ತದೆ. ಒಂದು ಪ್ರದೇಶದ ಆಹಾರ-ಆಹಾರ್ಯ ಕ್ರಮಗಳು ಕಾಲಾಂತರದಲ್ಲಿ ಪರ ಸಂಸ್ಕೃತಿಯ ಪ್ರಭಾವದಿಂದಾಗಿ ಹೇಗೆ ಬದಲಾವಣೆಗೊಳ್ಳುತ್ತದೆ ಎಂಬುವುದನ್ನು ಗಮನಿಸಬಹುದು ಅಂಗೈ ಅಗಲದ ತಟ್ಟೆಗಳಲ್ಲಿ ಲಭ್ಯವಾಗುವ ಆರೋಗ್ಯ ಕೆಡಿಸುವ ಕೃತಕ ಆಹಾರ ಪದಾರ್ಥಗಳ ಸೇವನೆ ದಾಸ್ಯ ಸಂಸ್ಕೃತಿಯನ್ನು ಸಂಕೇತಿಸುತ್ತದೆ.

೪.೧ ಅಡುಗೆ ಕೋಣೆಯ ಪರಿಕರಗಳು

ಒಲೆ

ಸಾಮಾನ್ಯವಾಗಿ ಅಡುಗೆ ಕೋಣೆಯ ಪೂರ್ವಭಾಗದಲ್ಲಿ ನೆಲದಲ್ಲಿಯೇ ಮಣ್ಣಿನಿಂದ ನಿರ್ಮಿತವಾದ ಒಲೆಸಾಲಿರುವುದು. ಈ ಒಲೆಗಳಿಗೆ ಸೆಗಣಿಗೆ ಕರಿಯನ್ನು ಸೇರಿಸಿ ಚೆನ್ನಾಗಿ ಪೂಸಿ ಸ್ವಚ್ಛವಾಗಿಡುತ್ತಿದ್ದರು. ಇದರಲ್ಲಿ ಎರಡು ಒಲೆಗಳ ನಡುವೆ ಒಂದು ಸಣ್ಣ ಒಲೆಯನ್ನೂ ನಿರ್ಮಿಸುವರು. ಇದಕ್ಕೆ 'ಕೂಡುದಿಕ್ಕೆಲ್' ಅಥವಾ 'ಕೋರಿದಿಕ್ಕೆಲ್' 'ಸೂವೆ' ಎಂದು ಕರೆಯಲಾಗುವುದು. ಒಂದರಲ್ಲಿ ಅನ್ನ ಬೇಯಿಸಿದರೆ, ಇನ್ನೊಂದರಲ್ಲಿ ಪದಾರ್ಥ ಇತ್ಯಾದಿಗಳನ್ನು ಮಾಡಲಾಗುತ್ತದೆ ಮತ್ತು ನಡುವಿನ 'ಕೂಡು ದಿಕ್ಕೆಲ'ಲ್ಲಿ ಹಾಲು ಮತ್ತು ನೀರು ಬಿಸಿ ಮಾಡಲಾಗುತ್ತಿತ್ತು. ಈ ಕೂಡು ದಿಕ್ಕೆಲಿಗೆ (ಕೂಡು ಒಲೆ) ಪ್ರತ್ಯೇಕವಾಗಿ ಕಟ್ಟಿಗೆ ಇಡುವ ಅವಶ್ಯಕತೆ ಇರುವುದಿಲ್ಲ. ಆಚೀಚೆ ಇರುವ ಎರಡು ಒಲೆಗಳ ಶಾಖವೇ ಸಾಕಾಗುತ್ತದೆ. ಈರೀತಿ ಸೌದೆ ಪೋಲಾಗುತ್ತಿರಲಿಲ್ಲ. ಈ ಒಲೆಗಳ ಪಕ್ಕದ ಜಾಗದಲ್ಲಿ ಆಯಾ ದಿನದ ಅಡುಗೆಗೆ ಬೇಕಾಗುವಷ್ಟು ಸೌದೆಯನ್ನು ಶೇಖರಿಸಿಡಲಾಗುತ್ತಿತ್ತು. ಒಲೆಯನ್ನು ತುಳುವರು ಅತ್ಯಂತ ಪವಿತ್ರ ದೃಷ್ಟಿಯಿಂದ ಕಾಣುತ್ತಿದ್ದರು. ಹಾಗಾಗಿಯೇ ಯಾವುದೇ ಕಾರಣಕ್ಕೂ ಒಲೆಯನ್ನು ತುಳಿಯಬಾರದೆಂಬ ನಿಷೇಧವಿದೆ. ಮುಂಜಾನೆ ಎದ್ದಕೂಡಲೆ ಮನೆಯೊಡತಿ ಮೊದಲ ಕೆಲಸವಾಗಿ ಒಲೆಯ ಬೂದಿಯನ್ನು ತೆಗೆದು ಸ್ವಚ್ಚವಾಗಿಡುತ್ತಿದ್ದುದನ್ನು ಹಿರಿಯರು ಜ್ಞಾಪಿಸಿಕೊಳ್ಳುತ್ತಾರೆ. 'ನಡಾರ್' ಎನ್ನುವ ಬೇಕಾದಲ್ಲಿಗೆ ಕೊಂಡೊಯ್ಯಬಲ್ಲ ಒಲೆಯನ್ನೂ ಬಳಸಲಾಗುತ್ತಿತ್ತು. ಇದನ್ನು ಕುಂಬಾರರು ತಯಾರಿಸಿ ಕೊಡುತ್ತಿದ್ದರು.

ಮಣ್ಣಿನ ಪಾತ್ರೆಗಳಾದ ಕೊಪ್ಪರಿಗೆ, ನುಪ್ಪುದ ಕರ, ಬಂಡಿಬಿಸಲೆ, ಒಗ್ಗಿಬಿಸಲೆ, ಪೇರಸಲೆ, ನೆಸಲೆ, ಕಿನ್ನಿಸಲೆ, ತೊಂದುರುದ ಕರ ಪಲ್ಲಾಯಿ, ಗದ್ದಾವ್, ಕಿಂಞಿ ಗದ್ದಾವು, ಕುದ್ಪೆ, ಬಾವಡೆ, ಅಡ್ಯಾರ, ನೀರಡ್ಯರ, ಮಣ್ಣ್‌ದ ಓಡು. ವೈವಿಧ್ಯ ಹೆಸರುಗಳುಳ್ಳ ಮಣ್ಣಿನ ಪಾತ್ರೆಗಳಿದ್ದವು.

ಕಲ್ಲು ಯಾ ಲೋಹದ ವಸ್ತುಗಳಾದ ಅಪ್ಪದ ಕಾವೊಲಿ (ಕಾವಲಿ), ದೋಸೆಯ ಕಾವಲಿ, ದೋಸೆದ ಕಲ್ತ್, ಅರೆಯುವ ಕಲ್ಲು, ಬೀಸುಕಲ್ಲು, ಗುದ್ದುವ ಕಲ್ಲು (ಉಜಿಡೆ) ಇತ್ಯಾದಿಗಳಿದ್ದರೆ, ಮರದ ಸಾಮಗ್ರಿಗಳಾದ ಸಂಬಾರದ ಮರಾಯಿ; ಓಡಮರಾಯಿ, ಮರಾಯಿ, ನಾಗಂದಿಗೆ/ದೆಂಗ, ಶಾವಿಗೆ ಮಣೆ, ಚಕ್ಕುಲಿಯ ಅಂಡೆ, ಉಜ್ಜೆರ್, ಬಲಾಯಿ, ಮುಳ್ಕಲಿಗೆ, ಮಣೆ, ಕೈಸಟ್ಟ್, ಕುಡುಪು ಮುಂತಾದವುಗಳಲ್ಲದೆ, ಮೆಟ್ಟುಕತ್ತಿ, ಹೆರೆಮಣೆ, ಕತ್ತಿ, ಬಿಸತ್ತಿ ಹಾಗೆಯೇ

ವಿವಿಧ ಗಾತ್ರದ ಭರಣಿಗಳು ಇದ್ದವು. ಚೀನೀ ತಯಾರಿಕೆಯದೆಂದು ಹೇಳಲಾಗುವ ಉಪ್ಪಡ್‌ದ ಭರಣಿ, ನೀರುಪ್ಪಡ್‌ದ ಭರಣಿ, ಬೆಲ್ಲದ ಭರಣಿ, ಎಣ್ಣೆ ತುಂಬಿಡುವ ಭರಣಿಗಳು ಪ್ರಮುಖವಾದುದು. ಈ ಭೌತಿಕ ಪರಿಕರಗಳು ಸಾಮಾನ್ಯವಾಗಿ ಎಲ್ಲಾ ಮನೆಗಲಲ್ಲೂ ಯಾವುದೇ ತಾರತಮ್ಯವಿಲ್ಲದೆ ಇರುತ್ತಿತ್ತೆನ್ನುವುದು ವಿಶೇಷ.

ರುಬ್ಬುವ ಕಲ್ಲು

ರುಬ್ಬುವ ಕಲ್ಲನ್ನು ಕಗ್ಗಲ್ಲಿನಿಂದ ನಿರ್ಮಿಸಲಾಗುತ್ತದೆ. ಅಂದಿನಿಂದ ಇಂದಿನವರೆಗೂ ಬಡವ ಶ್ರೀಮಂತನೆಂಬ ವರ್ಗಬೇಧವಿಲ್ಲದೆ ಎಲ್ಲರೂ ಬಳಸುತ್ತಿದ್ದ ಬಹೂಪಯೋಗಿ ಸಾಧನವಿದು. ಮನೆಮಂದಿಯ ಅಗತ್ಯಗಳಿಗೆ ತಕ್ಕಂತೆ ವಿವಿಧ ಗಾತ್ರಗಳ ರುಬ್ಬುಕಲ್ಲುಗಳು ಬಳಕೆಯಲ್ಲಿದ್ದವು. ಸುಮಾರು ಒಂದೂವರೆ ಅಡಿ ವ್ಯಾಸದ ಕಲ್ಲಿನಿಂದ ಹಿಡಿದು ಸುಮಾರು ನಾಲ್ಕು ಅಡಿ ವ್ಯಾಸದ ರುಬ್ಬುವ ಕಲ್ಲುಗಳನ್ನು ಕಾಣಬಹುದು. ಇಂದಿಗೂ ಗುತ್ತು ಬೀಡುಗಳ ಮುಂಭಾಗದಲ್ಲಿ ಭೀಮಗಾತ್ರದ ರುಬ್ಬುವ ಕಲ್ಲುಗಳು ಅನಾಥವಾಗಿ ಬಿದ್ದುಕೊಂಡಿರುವುದನ್ನು ಕಾಣಬಹುದು. ಈ ಸಾಧನಕ್ಕೆ ಇಂದಿನ ಯಾವುದೇ ಆಧುನಿಕ ರುಬ್ಬುವ ಸಾಧನಗಳು ಸರಿಗಟ್ಟಲಾರವು. ಇಂದಿಗೂ ಅದರಲ್ಲಿ ಅರೆದು ಮಾಡಿದ ಸಾಂಬಾರಿನ ರುಚಿಯನ್ನು ಅರಿತಿರುವವರು ಆಧುನಿಕ ದಿನಗಳ ಬಹುಮಹಡಿ ಕಟ್ಟಡಗಳಲ್ಲಿಯೂ ಇದನ್ನಿಟ್ಟುಕೊಂಡು ಬಳಸುತ್ತಿದ್ದಾರೆ. ಮೇಲ್ಭಾಗದಲ್ಲಿರುವ ರುಬ್ಬುವ ಗುಂಡನ್ನು ತುಳುವಿನಲ್ಲಿ 'ಕಂಜಿ' ಎಂದು ಗುರುತಿಸಲಾಗುತ್ತದೆ. ಅಡಿಭಾಗದ ದೊಡ್ಡ ಕಲ್ಲನ್ನು 'ಕಲ್ಲು' ಎಂದೇ ಗುರುತಿಸಲಾಗುತ್ತದೆ. ಕೆಲವು ಕಡೆಗಳಲ್ಲಿ ಅಡಿಗೆಕೋಣೆಯ ಮೂಲೆಯಲ್ಲಿ ಈ 'ಕಲ್ಲ'ನ್ನು ಅರ್ಧ ಹೂತಿಟ್ಟು ಬಳಸುತ್ತಿದ್ದರು. ಅಡುಗೆಗೆ ತೆಂಗಿನ ಕಾಯಿಯ ಬಳಕೆ ಹೆಚ್ಚು ಇರುವ ತುಳುನಾಡಿನಲ್ಲಿ ರುಬ್ಬುಕಲ್ಲು ಅಡುಗೆ ಮನೆಯಲ್ಲಿರಬೇಕಾದ ಅತ್ಯಗತ್ಯ ವಸ್ತುವಾಗಿತ್ತು. ದೊಡ್ಡ ಕಲ್ಲುಗಳ ಕಂಜಿಗಳನ್ನು ಒಬ್ಬರಿಗೆ ತಿರುಗಿಸಲು ಕಷ್ಟವಿದ್ದುದರಿಂದ ಅದರ ಮೇಲ್ಬದಿಗೆ ಮರದ ಕುಟ್ಟಿಯೊಂದನ್ನು ಹಾಕಿ ಇಬ್ಬರು ತಿರುಗಿಸುತ್ತಿದ್ದರು. ಬಳಕೆಯಿಂದ ತೀರಾ ನುಣ್ಣಗಾದ ಕಲ್ಲಿಗೆ 'ಚೇಣಿ' ಹಾಕುವ ಕೆಲಸಗಾರರೂ ಇದ್ದರು. ಮನೆಮನೆ ತಿರುಗಿ ಈ ಕೆಲಸವನ್ನು ಮಾಡುತ್ತಿದ್ದವರು ತಮಿಳುನಾಡಿನ ಕುಶಲಕರ್ಮಿ ಕಲ್ಲುಕುಟ್ಟಿಗರು. ವೃತ್ತಾಕಾರದ ಈ ಕಲ್ಲು ಮಧ್ಯಭಾಗದಲ್ಲಿ ಸುಮಾರು ಅರ್ಧ ಅಡಿ ಆಳಕ್ಕೆ ಕೊರೆದ ಗುಂಡಿಯಿರುತ್ತದೆ. ಗುಂಡಿಯ ಮೇಲ್ಭಾಗದಲ್ಲಿ ಸುಮಾರು ಅರ್ಧ ಅಡಿ ಅಗಲಕ್ಕೆ ಕಲ್ಲನ್ನು ಕೆತ್ತಿ, ಅದರ ಸುತ್ತಕ್ಕೆ ಅಂದರೆ ತೀರಾ ಹೊರಬದಿಗೆ ಬದುವಿನಂತೆ ಹೊರ ಆವರಣವಿರುತ್ತದೆ. ಇದರಿಂದ ಅರೆಯುವ ಪದಾರ್ಥವು ಹೊರಚೆಲ್ಲುವುದಿಲ್ಲ. ಶಿವಲಿಂಗದಾಕಾರದಲ್ಲಿ ಇರುವ 'ಕಂಜಿ' ಕಲ್ಲಿನ ಆಳ, ಎತ್ತರ, ಅಗಲಗಳಿಗೆ ಹೊಂದಿಕೊಂಡ ಗಾತ್ರದಲ್ಲಿರುತ್ತದೆ. ಇದನ್ನು ನಡುವಿನ ಗುಂಡಿಯಲ್ಲಿಟ್ಟು ಬಲದಿಂದ ಎಡಕ್ಕೆ ತಿರುಗಿಸಲಾಗುತ್ತದೆ. ಇವತ್ತು ವಿದ್ಯುತ್ ಅಳವಡಿಸಿದ ರುಬ್ಬುವ ಕಲ್ಲಲ್ಲದೆ ಸಣ್ಣ ಪುಟ್ಟ ಅರೆಯುವ ಯಾಂತ್ರಿಕ ಮಿಕ್ಸಿಗಳು ದೊಡ್ಡ ದೊಡ್ಡ ರುಬ್ಬುವ ಕಲ್ಲುಗಳನ್ನು ಮರೆಗೆ ಸರಿಸಿವೆ.

ಅರೆಯುವ ಕಲ್ಲು

ಆಂಗ್ಲ ಭಾಷೆಯಲ್ಲಿ (Saddle quern) ತುಳುನಾಡಿನಲ್ಲಿ ಸಾಮಾನ್ಯವಾಗಿ ರುಬ್ಬುವ ಕಲ್ಲನ್ನು ಬಳಸಾಗುತ್ತದೆಯಾದರೂ ಅರೆಯುವ ಕಲ್ಲನ್ನೂ ಬಳಸುವುದಿದೆ. ಸುಮಾರು ಎರಡು–ಎರಡೂವರೆ ಅಡಿ ಉದ್ದ, ಒಂದೂವರೆ ಅಡಿ ಅಗಲದ ಕಲ್ಲನ್ನು ನಡುಭಾಗದಲ್ಲಿ ಸ್ವಲ್ಪ ತಗ್ಗಿರುವಂತೆ ಮಾಡಿ, ದೋಣಿಯಾಕಾರದಲ್ಲಿ ಅಥವಾ ಆಯತಾಕಾರದಲ್ಲಿ ತಯಾರಿಸಲಾಗುತ್ತಿತ್ತು. ಕಾಲು ಅಡಿ ವ್ಯಾಸದ ಒಂದು ಅಡಿ ಉದ್ದದ ದುಂಡಗಿನ ಕಲ್ಲನ್ನು ಅರೆಯುವುದಕ್ಕಾಗಿ ಬಳಸಲಾಗುತ್ತದೆ. ಇದರ ಎರಡೂ ಬದಿಯು ಸ್ವಲ್ಪ ಮಟ್ಟಿಗೆ ಸಪುರವಾಗಿದ್ದು ಕೈಯ ಹಿಡಿತಕ್ಕೆ ಅನುಕೂಲವಾಗುವಂತಿರುತ್ತದೆ. ಈ ಸಾಧನವು ನಾಗರೀಕತೆಯ ಪ್ರಾರಂಭದ ಶೋಧೆ. ಅಲ್ಲದೆ ಅಂದಿನಿಂದ ಇಂದಿನ ವರೆಗೂ ವಿನ್ಯಾಸ, ರಚನೆಗಳಲ್ಲಿ ಒಂದಿಷ್ಟೂ ಬದಲಾವಣೆಯಾಗದೆ ಉಳಿದಿರುವ ಏಕೈಕ ಗೃಹಬಳಕೆಯ ವಸ್ತು. ಆದರೆ ತುಳುನಾಡಿನಲ್ಲಿ ಮಸಾಲೆ ಅರೆಯಲು ಅಪರೂಪಕ್ಕೆ ಬಳಕೆಯಾಗುತ್ತಿದ್ದ ಇದು, ಮದ್ದು ಅರೆಯಲು ಸಾಮಾನ್ಯವಾಗಿ ಬಳಕೆಯಾಗುತ್ತಿತ್ತು.

ಬೀಸುವ ಕಲ್ಲು

ದವಸಧಾನ್ಯಗಳನ್ನು ಹಿಟ್ಟು ಮಾಡಲು, ಬೇಳೆ ಮಾಡಲು ಇದನ್ನು ಬಳಸಲಾಗುತ್ತಿತ್ತು. ಕಗ್ಗಲ್ಲಿನಿಂದ ತಯಾರಿಸಿದ ಸಾಮಾನ್ಯವಾಗಿ ಒಂದು–ಒಂದೂವರೆ ಅಡಿ ಅಗಲ ವ್ಯಾಸದ ಚಕ್ರಾಕಾರದ ಸಾಧನವಿದು. ಬೀಸುವ ಕಲ್ಲಿನಲ್ಲಿ ಎರಡು ಭಾಗಗಳಿದ್ದು. ಅಡಿ ಮತ್ತು ಮೇಲ್ಭಾಗಗಳೆರಡೂ ಸಾಮಾನ್ಯವಾಗಿ ಅರ್ಧ ಅಡಿ ದಪ್ಪವಾಗಿದ್ದು ಒಂದೆ ಗಾತ್ರದಲ್ಲಿರುತ್ತದೆ. ಕೆಳಭಾಗದ ಕಲ್ಲಿನ ನಡುವಿನಲ್ಲಿ ಮರದ ಕುಟ್ಟಿಯೊಂದನ್ನು ಅಳವಡಿಸಲಾಗುತ್ತದೆ. ಇದೇ ರೀತಿ ಮೇಲ್ಭಾಗದ ಕಲ್ಲಿನ ಮಧ್ಯೆಯೂ ರಂಧ್ರವಿದ್ದು, ಆ ರಂಧ್ರದ ಮೇಲ್ಭಾಗ ಸುಮಾರು ಒಂದು ಇಂಚು ಆಳ ಎರಡು ಇಂಚು ಅಗಲದಲ್ಲಿ ಬೋಗುಣಿಯಾಕಾರದಲ್ಲಿರುತ್ತದೆ. ಅಡಿಭಾಗದ ಮರದ ಕುಟ್ಟಿಗೆ ಮೇಲ್ಭಾಗದ ಕಲ್ಲನ್ನು ಜೋಡಿಸಲಾಗುತ್ತದೆ. ಮೇಲ್ಭಾಗದ ಕಲ್ಲಿಗೆ ಅಷ್ಟೇ ದಪ್ಪದ ಕಿವಿಯಾಕಾರದ ರಚನೆಯಿರುತ್ತದೆ. ಇದರಲ್ಲಿ ಒಂದು ಕಿವಿಗೆ ಕುಟ್ಟಿಯನ್ನು ಜೋಡಿಸಲಾಗಿ, ಒಂದು ಕೈಯಲ್ಲಿ ಕುಟ್ಟಿಯನ್ನು ತಿರುಗಿಸುತ್ತಾ ಇನ್ನೊಂದು ಕೈಯಲ್ಲಿ ಕಲ್ಲನ್ನು ತಿರುಗಿಸುವ ಸಂದರ್ಭದಲ್ಲಿ ಇನ್ನೊಂದು ಬದಿಯ ಕಿವಿಯಾಕಾರದ ಕಲ್ಲನ್ನು ಸಹಾಯಕ್ಕೆ ಬಳಸಿಕೊಳ್ಳಲಾಗುತ್ತದೆ.

ಹಿಂದಿನ ಕಾಲದಲ್ಲಿ ಬೀಸಿದ ಹಿಟ್ಟು ಶೇಖರಗೊಳ್ಳುವರೇ ಬೀಸುಗಲ್ಲಿನ ಅಡಿಭಾಗಕ್ಕೆ ಮುಖ್ಯವಾಗಿ ಜಿಂಕೆಯ ಚರ್ಮವನ್ನು ಅಗಲಕ್ಕೆ ಹಾಸುತ್ತಿದ್ದರು. ಇಂದಿನಂತೆ ಆಗ ಪೇಪರ್ ಅಥವಾ ಪ್ಲಾಸ್ಟಿಕ್ ಹಾಳೆಗಳ ಲಭ್ಯತೆಯಿರಲಿಲ್ಲ. ಅದರ ಬದಲಿಗೆ ಆಹಾರಕ್ಕಾಗಿ ಬಳಸುತ್ತಿದ್ದ ಪ್ರಾಣಿಗಳ ಚರ್ಮವನ್ನು ಬಳಸಲಾಗುತ್ತಿತ್ತು. ಇದು ಪ್ರಕೃತಿಗೆ ಸಮೀಪವಾಗಿ ಬದುಕುತ್ತಿದ್ದ ಜನರ ರೀತಿ.

ಋಗ್ವೇದದಲ್ಲಿ ಬರುವ – ನನ್ನ ತಂದೆ ಒಬ್ಬ ವೈದ್ಯ, ನನ್ನ ತಾಯಿ ದವಸಧಾನ್ಯ ಬೀಸುವಾಕೆ, ನಾನೊಬ್ಬ ಕವಿ, ನಾವು ಜೊತೆಯಲ್ಲಿ ವಾಸಿಸುತ್ತೇವೆ– ಎಂಬ ಉಲ್ಲೇಖವು ಬೀಸುಕಲ್ಲಿನ ಪ್ರಾಚೀನತೆಗೆ ಸಾಕ್ಷಿಯಾಗುತ್ತದೆ ಹಾಗೂ

ಮಹಿಳೆಯರೇ ಬೀಸುವ ಕೆಲಸವನ್ನು ನಿರ್ವಹಿಸುತ್ತಿದ್ದರು ಎಂಬುದು ತಿಳಿಯುಬರುತ್ತದೆ. ಉತ್ತರ ಕನ್ನಡದ ಕಡೆಗಳಲ್ಲಿ ರಾಗಿ ಬೀಸುವಾಗ ಹಾಡುತ್ತಿದ್ದ ಜನಪದ ಹಾಡುಗಳು ನಿತ್ಯವೂ ಹಾಡಲ್ಪಡುತ್ತಿದ್ದವು.

ಹೊಸ್ತೂಟ ಮಡಕೆ – ಪುದ್ವಾರ್ ಕರ

ಸುಗ್ಗಿ ಹಬ್ಬದ ಸಂದರ್ಭದಲ್ಲಿ ಹೊಸ ಊಟಕ್ಕೆ ಈ ಪಾತ್ರೆಯನ್ನು ಬಳಸಲಾಗುವುದು. ವರ್ಷದಲ್ಲಿ ಒಮ್ಮೆ ಮಾತ್ರ ಈ ಪಾತ್ರೆಯನ್ನು ಅಟ್ಟದಿಂದ ತೆಗೆದು ಚೆನ್ನಾಗಿ ತೊಳೆದು ಹೊಸತು ಅಕ್ಕಿಯನ್ನು ಬೇಯಿಸಲಾಗುವುದು. ಹಲವಾರು ನಂಬಿಕೆಗಳು ಇದರೊಂದಿಗೆ ಸೇರಿಕೊಂಡಿರುವುದನ್ನು ಗಮನಿಸಬಹುದು. ಕೆಲವೆಡೆ ಪಾತ್ರೆಗಳಲ್ಲಿ ಕೆಲವೊಂದು ಚಿತ್ತಾರಗಳಿರುವುದನ್ನು ಗಮನಿಸಬಹುದು. ತುಳಸಿ ಕಟ್ಟೆ, ಬಡಿಸುವ ಸೌಟು ಹಾಗೂ ಇನ್ನಿತರ ಚಿತ್ರಗಳನ್ನು ಗಮನಿಸಿದರೆ ಇದೊಂದು ವಿಶೇಷ ಸಂದರ್ಭಕ್ಕಾಗಿಯೆ ಇರುವ ಪಾತ್ರೆ ಎಂದು ಗೋಚರಿಸುತ್ತದೆ. ಈ ಪಾತ್ರೆ ತಪ್ಪಿಯೂ ಒಡೆಯಬಾರದು. ಒಡೆದರೆ ಕೆಲವೊಂದು ಪರಿಹಾರಗಳನ್ನು ಕೈಗೊಳ್ಳಬೇಕಾಗುತ್ತದೆ. ಹೊಸತು ಊಟದ ನಂತರ ಮತ್ತೆ ಬಳಕೆ ಮಾಡುವಂತದು, ಮುಂದಿನ ವರ್ಷವೇ. ಅಲ್ಲಿಯವರೆಗೆ ಅದು ಜೋಪಾನವಾಗಿ ಮೇಲೆ ಅಟ್ಟದಲ್ಲಿರುವುದು. ತುಳುವರ ನಂಬಿಕೆಗಳಲ್ಲಿ ಅನನ್ಯತೆಯಿತ್ತು. ಹೊಸ ಪೈರನ್ನು ಗದ್ದೆಯಿಂದ ತಂದು, ಅದಕ್ಕೆ ಪೂಜೆ ಸಲ್ಲಿಸಿ, ತಮ್ಮ ಕೃತಜ್ಞತೆಯನ್ನು ಸಲ್ಲಿಸುವ ದಿನದಂದೆ ಕೆಲವರು ಈ ಪುದ್ವಾರ್‌ನ್ನು ಆಚರಿಸುತ್ತಾರೆ. ಅಂದು ಕೇವಲ ಸಾಂಕೇತಿಕವಾಗಿ ಐದು ಅಥವಾ ಏಳು ಅಕ್ಕಿಯನ್ನು ಪೈರಿನಿಂದ ಬೇರ್ಪಡಿಸಿ ಪುದ್ವಾರ್ ಪಾತ್ರೆಗೆ ಹಾಕಿ ಹೊಸತು ಊಟ ಮಾಡುವ ಕ್ರಮ ಹಲವರಲ್ಲಿದೆ. ಮತ್ತೆ ಕೆಲವರು ಹೊಸತು ಅಕ್ಕಿಯಾದ ನಂತರವೇ ಈ ಕ್ರಮವನ್ನು ಅನುಸರಿಸುವರು. ಹೊಸ ಅಕ್ಕಿ ಊಟ ಮಾಡುವ ಪುದ್ವಾರ್ ಪ್ರತಿ ಮನೆಯಲ್ಲೂ ಆಚರಿಸುವ ವಿಶಿಷ್ಟ ಪದ್ಧತಿ ತುಳುವರಲ್ಲಿರುವುದನ್ನು ಗಮನಿಸಬಹುದು. ಹೊಸತು ಊಟಕ್ಕೆ ಕೆಸುವಿನ ಮತ್ತು ಹರಿವೆ ದಂಟು ಅವಶ್ಯವಾಗಿ ಬೇಕೆ ಬೇಕು. ಹೊಸತು ಊಟದ ಸಂದರ್ಭದಲ್ಲಿ ಯಜಮಾನನ ಊಟದಲ್ಲಿ ಕಲ್ಲು ಸಿಗಬಾರದೆಂಬ ನಂಬಿಕೆ ಕೂಡ ಇದೆ. ಒಂದು ಪಾತ್ರೆಯನ್ನು ಕೂಡಾ ಪವಿತ್ರ ದೃಷ್ಟಿಯಿಂದ ಕಾಣುವ ಜನಪದರ ನಂಬಿಕೆ ಬಡವ ಬಲ್ಲಿದನೆಂಬ ಬೇಧವಿಲ್ಲದೆ ಪ್ರಚಲಿತದಲ್ಲಿತ್ತು.

ಒಗ್ಗಿ ಬಿಸಲೆ

ಮೂರು ಸಣ್ಣ ಬಿಸಲೆಗಳನ್ನು ಒಂದೆ ಕೈ ಹಿಡಿಯಿಂದ ಜೋಡಿಸಲಾದ ಮಣ್ಣಿನ ಪಾತ್ರೆ. ಇದನ್ನು ಸಾಮಾನ್ಯವಾಗಿ ಮೂರು ವಿವಿಧ ಪದಾರ್ಥಗಳನ್ನು ಬಡಿಸಲು ಉಪಯೋಗಿಸಲಾಗುವುದು. ಭೂತದ ಆರಾಧನೆಯ ಸಂದರ್ಭಗಳಲ್ಲಿ ಎಲ್ಲರೂ ಒಟ್ಟಾಗಿ ಊಟ ಮಾಡುವಾಗ ಬಡಿಸಲು ಅನುಕೂಲಕರವಾಗಿರಲು ಈ ಪಾತ್ರೆಯನ್ನು ಬಳಸುತ್ತಿದ್ದರೆನ್ನಲಾಗಿದೆ. ಹೆಚ್ಚಾಗಿ ಉಪ್ಪಿನ ಕಾಯಿ, ಪಚ್ಚಡಿ ಹಾಗೂ ಯಾವುದಾದರೂ ಪಲ್ಯ ಬಡಿಸಲು

ಉಪಯೋಗಿಸಲಾಗುತ್ತದೆ. ಇದೀಗ ಇದನ್ನು ಬೇರೆ ಲೋಹಗಳಿಂದ ಮಾಡಿ (ಸ್ಟೀಲ್, ಕಂಚು, ಹಿತ್ತಾಳೆ) ಹೋಟೇಲುಗಳಲ್ಲಿ ಉಪಯೋಗಿಸುತ್ತಿರುವುದನ್ನು ಗಮನಿಸಬಹುದಾಗಿದೆ.

ಓಡ ಮರಾಯಿ

ಮರದ ಪರಿಕರಗಳ ಬಳಕೆ ಗ್ರಾಮೀಣ ಪ್ರದೇಶದಲ್ಲಿ ಹಿಂದೆ ಸಾರ್ವತ್ರಿಕವಾಗಿತ್ತು. ಮಣ್ಣಿನ ಮಡಿಕೆಯಲ್ಲಿ ಮಾಡಿದ ಗಂಜಿಯನ್ನು ಸುರಕ್ಷಿತವಾಗಿ ಬಸಿಯಲು ದೋಣಿಯ ಆಕಾರದ ಮರದ ಪಾತ್ರೆಯನ್ನು ಬಳಸುತ್ತಿದ್ದರು. ಗಂಜಿಯ ನೀರು ಸೋರಬಾರದೆಂದು ಒಂದೇ ಮರವನ್ನು ಕೊರೆದು ಈ ಓಡ ಮರಾಯಿಯನ್ನು ನಿರ್ಮಿಸುತ್ತಿದ್ದರು. 'ಓಡ' ಅಂದರೆ ದೋಣಿ. ದೋಣಿ ಆಕಾರದ ಈ ಮರಾಯಿಯನ್ನು ಹಲಸಿನ ಮರದ ಗಟ್ಟಿಯಾದ ಕಾಂಡದಿಂದ ತಯಾರಿಸುತ್ತಿದ್ದರು. ಜಾನುವಾರುಗಳಿಗೆ ಕುಡಿಯುವ ನೀರಿಡಲು, ಮಗುವನ್ನು ಸ್ನಾನ ಮಾಡಿಸಲು ಮುಂತಾದವುಗಳಿಗೆ ಸಾಧನಗಳನ್ನು ಬಳಸುತ್ತಿದ್ದರು.

ತೊಂದುರು

ಒಂದು ವಸ್ತು ಕಾಲಂತರದಲ್ಲಿ ರೂಪಾಂತರಗೊಂಡಿರುವುದಕ್ಕೆ ಉತ್ತಮ ನಿದರ್ಶನವೆಂದರೆ ಇಲ್ಲಿ ಬಳಕೆಯಾಗುವ ಇಡ್ಲಿಯ ಪಾತ್ರೆ. ಇದನ್ನು 'ತೊಂದುರು' ಎಂದು ಕರೆಯುತ್ತಾರೆ. ತುಳುವರಿಗೆ ಇಡ್ಲಿ ಬೇಯಿಸುವ ಪಾತ್ರೆಯ ಈಗಿನ ಮಾದರಿಯ ಪರಿಚಯವಿರಲಿಲ್ಲ. ತುಳುವರ ಅಡ್ಯ ಪ್ರಕಾರಗಳಾದ ಗಟ್ಟಿ, ಪುಂಡಿ ಮುಂತಾದವುಗಳು ಅವರ ಪ್ರಿಯವಾದ ತಿಂಡಿ. ಇದನ್ನು ಸಾಮಾನ್ಯವಾಗಿ 'ಸಿಕೆತಡ್ಯ' ಎಂದು ಹೇಳಲಾಗುವುದು. ಅಂದರೆ ಹಬೆಯಲ್ಲಿ ತಯಾರಿಯಾಗುವ ಈ ತಿಂಡಿಗಳನ್ನು ಬೇಯಿಸುವ ಇಡ್ಲಿ ಪಾತ್ರೆಯ ಬಳಕೆ ಸಾರ್ವತ್ರಿಕವಾಗಿರಲಿಲ್ಲ. ಪ್ರಾರಂಭಿಕ ಹಂತದಲ್ಲಿ ಅಗಲ ಬಾಯಿಯ ಸುಮಾರು ಒಂದೂವರೆ ಅಡಿ ಎತ್ತರದ ಮಣ್ಣಿನ ಮಡಕೆಯ ತಳಭಾಗದಲ್ಲಿ ನಾಲ್ಕು ಗೆರಟೆಗಳನ್ನು ಕವುಚಿ ಹಾಕಿಟ್ಟು ಗೆರಟೆ ಮುಕ್ಕಾಲು ಭಾಗ ಮುಳುಗುವಷ್ಟು ನೀರು ಹಾಕಿ ನೀರು ಕುದಿ ಬಂದಾಗ ಗೆರಟೆಯ ಮೇಲೆ ತೆಂಗಿನ 'ಚೆಪ್ಪ'ನ್ನು ಇಟ್ಟು ಅದರ ಮೇಲೆ ಗಟ್ಟಿ ಅಥವಾ ಪುಂಡಿ ಮುಂತಾದವನ್ನು ಇಟ್ಟು ಆ ಪಾತ್ರೆಯ ಮೇಲ್ಬಾಗಕ್ಕೆ ಇನ್ನೊಂದು ಅಗಲ ಬಾಯಿಯ ಪಾತ್ರೆಯನ್ನು ಕವುಚಿ ಹಾಕಿ 'ಅಡ್ಯ'ವನ್ನು ಬೇಯಿಸಲಾಗುತ್ತಿತ್ತು. ಈ ರೀತಿಯ ವ್ಯವಸ್ಥೆಗೆ 'ಕೊಲಾಯಿ' ಹಾಕುವುದು ಎಂದು ಹೇಳಲಾಗುತ್ತಿತ್ತು. ಮುಂದಿನ ದಿನಗಳಲ್ಲಿ ಈ ಒರಟಾದ ಬಳಕೆಯ ಮೊದಲ ಹಂತ ಮುಂದೆ ತುಳುವರ ಇಡ್ಲಿ ಬೇಯಿಸುವ ಪಾತ್ರೆಯ ಶೋಧೆಗೆ ನಾಂದಿಯಾಗುತ್ತದೆ. ವಾಸ್ತವವಾಗಿ ಉಗಿ ಹಾಯುವ ಪಾತ್ರೆಗಳು ಭಾರತದಲ್ಲಿ ಇರಲಿಲ್ಲ ಎಂಬುದನ್ನು ಕ್ರಿ.ಶ ೭ ನೇ ಶತಮಾನದ ಚೀನಿ ಇತಿಹಾಸಕಾರ ಯುವಾಂಗ್ ಝುಂಗ್ ಸ್ಪಷ್ಟವಾಗಿ ಹೇಳಿದ್ದಾನೆ. ಹಬೆಯಾಡುವ ಪಾತ್ರೆಯಲ್ಲಿ ಬೇಯಿಸುವ ಪದ್ಧತಿಯನ್ನು ಭಾರತಕ್ಕೆ ಪರಿಚಯಿಸಿದ ವ್ಯಕ್ತಿ ಇಂಡೋನೇಶಿಯಾದ ಹಿಂದೂ ದೊರೆ. ಕ್ರಿ.ಶ ೮೦೦ರಿಂದ ೧೨೦೦ರ ಮಧ್ಯದ ಅವಧಿಯಲ್ಲಿ ಈತನ ಬಾಣಸಿಗರು ಭಾರತಕ್ಕೆ ಬೇಟಿ ನೀಡಿದಾಗಲೇ ಹಬೆಯಾಡುವ

ಪಾತ್ರೆಯ ಉಪಯೋಗ ಇಲ್ಲಿನವರಿಗೆ ತಿಳಿದಿದ್ದು ಎಂದು ಡಾ. ಆಚಾರ್ಯ ಬರೆಯುತ್ತಾರೆ (ಭಾರತೀಯ ಆಹಾರ ಪದ್ಧತಿ, ತಮಿಳಿನಲ್ಲಿ ಡಿ. ಬಾಲಸುಬ್ರಮಣಿಯನ್, ಕಸ್ತೂರಿ, ಜನವರಿ ೨೦೧೭).

ತುಳುನಾಡಿನ ಕುಂಬಾರರು ರಚಿಸಿದ ಇಡ್ಲಿ ಬೇಯಿಸುವ ಪಾತ್ರೆಯ ಸ್ವರೂಪವನ್ನು ಗಮನಿಸಿದಾಗ ಮೂರು ಹಂತದಲ್ಲಿ ಅದು ರೂಪಾಂತರಗೊಂಡಿರುವುದನ್ನು ಗುರುತಿಸಬಹುದು. ಮೊದಲ ಹಂತದ ಇಡ್ಲಿ ಪಾತ್ರೆಯಲ್ಲಿ ಕುಂಬಾರನು ರಚಿಸಿದ ಮಣ್ಣಿನ ಇಡ್ಲಿ ಬೇಯಿಸುವ ಪಾತ್ರೆಯು ಸುಮಾರು ಎರಡು ಅಡಿ ಎತ್ತರವಿದ್ದು ವೃತ್ತಾಕಾರದ ಈ ಪಾತ್ರೆಯ ಬಾಯಿಯ ಅಗಲವು ಸುಮಾರು ಒಂದೂವರೆ ಅಡಿ ಇರುತ್ತಿತ್ತು. ಇದರ ತಳಭಾಗದಲ್ಲಿ ನೀರು ನಿಂತರೆ ಅದರ ಮೇಲ್ಭಾಗದಲ್ಲಿ ಪಾತ್ರೆಗೆ ಅಂಟಿಕೊಂಡೆ ರಂಧ್ರಗಳನ್ನೊಳಗೊಂಡ ತಟ್ಟೆ ಇರುತ್ತದೆ. ಇದರ ಮೇಲ್ಭಾಗದಲ್ಲಿ ಬೇಯಿಸಬೇಕಾದ ಪದಾರ್ಥಗಳನ್ನಿಡುವುದು. ಇದರ ಮೇಲ್ಭಾಗಕ್ಕೆ ದೊಡ್ಡ ಗಾತ್ರದ ಬಾವಡೆ ಎಂಬ ಸಾಧನವನ್ನಿಟ್ಟು ಹಬೆ ಹೊರಹೋಗದಂತೆ ಮಾಡಲಾಗುತ್ತದೆ. ಹಿಂದಿನ ಕಾಲದಲ್ಲಿ ಕೂಡು ಕುಟುಂಬ ವ್ಯವಸ್ಥೆಯಲ್ಲಿ ಮನೆಯಲ್ಲಿ ಹತ್ತಾರು ಜನ ಸದಸ್ಯರಿದ್ದು ಒಮ್ಮೆ ಅಡ್ಯ ಬೇಯಲು ಪ್ರಾರಂಭ ಮಾಡಿದರೆ ನಿರಂತರವಾಗಿ ಈ ಬೇಯಿಸುವ ಪ್ರಕ್ರಿಯೆ ಮುಂದುವರಿಯುತ್ತಿತ್ತು. ಪಾತ್ರೆಯ ಕೆಳ ಭಾಗದಲ್ಲಿ ನೀರು ಕಡಿಮೆಯಾದಂತೆಲ್ಲಾ ನೀರು ಹಾಕಲು ಮನುಷ್ಯನ ತುಟಿ ಆಕಾರದ ರಂಧ್ರವೊಂದಿದ್ದು ಅದರ ಮುಖಾಂತರ ನೀರು ಹಾಕಿ ರಂಧ್ರದಿಂದ ಹಬೆ ಹೊರಗೆ ಹೋಗದಂತೆ ಒದ್ದೆ ಬಟ್ಟೆಯ ಬಿರಡೆಯನ್ನಿಡಲಾಗುತ್ತಿತ್ತು. ಈ ರೀತಿಯ ಇಡ್ಲಿ ಬೇಯಿಸುವ ಪಾತ್ರೆಯ ಮೊದಲ ಹಂತದ ಕಾಲಘಟ್ಟದಲ್ಲಿ ಅನಾಹುತವೊಂದು ನಡೆದು ಹೋಗಿ ಕುಂಬಾರನು ಇಡ್ಲಿ ಪಾತ್ರೆಯ ಸ್ವರೂಪವನ್ನೆ ಬದಲಾಯಿಸುವ ಅನಿವಾರ್ಯತೆ ಒದಗಿ ಬಂತು. ಒಮ್ಮೆ ಇಡ್ಲಿ ಬೇಯಿಸಿ ಪಾತ್ರೆಯನ್ನು ಮನೆಯ ಹಿಂಭಾಗದಲ್ಲಿ ಕವುಚಿಡಲಾಗಿತ್ತು. ಅಡ್ಯೆ ಮಾಡುವುದಕ್ಕಾಗಿ ಅದನ್ನು ಸ್ವಚ್ಛಗೊಳಿಸಿ ನೀರು ಸುರಿದು ಅಡ್ಯೆ ಮಾಡಲಾಗಿ, ಬೆಂದ ಇಡ್ಲಿಯನ್ನು ತಿಂದ ಎರಡು ಮಕ್ಕಳು ಅಸುನೀಗಿದ ಘಟನೆ ಸಂಭವಿಸಿತು. ದಿಗಿಲುಗೊಂಡು ಕಾರಣ ಹುಡುಕಿದಾಗ ಪಾತ್ರೆಯ ಅಡಿಭಾಗದಲ್ಲಿ ನೀರು ಹೊಯ್ಯಲು ತುಟಿಯಾಕಾರದ ರಂಧ್ರದೊಳಗೆ ವಿಷದ ಹಾವೊಂದು ಒಳ ಸೇರಿ ಹೊರಬರಲಾಗದೆ ಬೆಂದು 'ವಿಷದ ಕಾವು' ಇಡ್ಲಿಯೊಂದಿಗೆ ಸೇರಿ ಇಡ್ಲಿ ತಿಂದ ಮಕ್ಕಳ ಸಾವಿಗೆ ಕಾರಣವಾಗಿತ್ತು. ಈ ಘಟನೆಯ ಐತಿಹ್ಯ ತುಳುನಾಡಿನ ಉದ್ದಗಲಕ್ಕೂ ಇಂದಿಗೂ ಜನಜನಿತ. ಈ ದುರ್ಘಟನೆಯ ನಂತರ ಕುಂಬಾರ ಎರಡನೇಯ ಹಂತದ ಪಾತ್ರೆಯ ಪ್ರಯೋಗ ಮಾಡಿದ. ಇದರ ಪ್ರಕಾರ ಕೆಳಭಾಗದ ತುಟಿಯಾಕಾರಾದ ರಂಧ್ರದ ಮುಖಾಂತರ ನೀರು ಹಾಕುವ ಬದಲು ಅದರ ಮೇಲ್ಭಾಗದಿಂದಲೆ ನೀರು ಹಾಕುವ ವ್ಯವಸ್ಥೆ ಮಾಡಲಾಯಿತು. ಆದರೂ ಇಡ್ಲಿ ಬೇಯಲು ಇಡುವ ತಟ್ಟೆಯು ಪಾತ್ರೆಯ ಮಧ್ಯ ಭಾಗಕ್ಕೆ ಅಂಟಿಕೊಂಡೆ ಇದ್ದು, ಕೆಳಭಾಗದಲ್ಲಿ ಏನಾದರೂ ಜಂತುಗಳು ಸೇರಿಕೊಂಡರೆ ಸುಲಭದಲ್ಲಿ ಕಾಣುವ ಸಾಧ್ಯತೆ ಇಲ್ಲ. ಆದ್ದರಿಂದ ಹಿಂದೊಮ್ಮೆ ನಡೆದ ದುರ್ಘಟನೆಯು ಮುಂದಕ್ಕೂ ನಡೆಯುವ ಸಾಧ್ಯತೆ ಇದ್ದುದರಿಂದ ಕುಂಬಾರನು ಎಚ್ಚರ ವಹಿಸಿ ಅಂತಹ ದುರ್ಘಟನೆ ನಡೆಯಬಾರದೆಂದು ಯೋಚಿಸಿ ಇಡ್ಲಿ ಬೇಯಲಿಡುವ ಮಣ್ಣಿನ ತಟ್ಟೆಯನ್ನು ಶುಚಿಗೊಳಿಸಲು ಅಥವಾ ನೀರು ನಿಲ್ಲುವ ಜಾಗದಲ್ಲಿ ಏನಾದರು ಜಂತುಗಳು ಸೇರಿಕೊಳ್ಳದಂತೆ ನೋಡಲು ಅನುಕೂಲವಾಗುವ ರೀತಿ ತಟ್ಟೆಯನ್ನು ತೆಗೆದಿಡುವ

ವ್ಯವಸ್ಥೆಯನ್ನು ಮಾಡಲಾಯಿತು. ಈ ರೀತಿ ವಿವಿಧ ಹಂತದಲ್ಲಿ ರೂಪಾಂತರಗೊಂಡ ಇಡ್ಲಿಯ ಪಾತ್ರೆಯೆ ಇಂದು ಸಾರ್ವತ್ರಿಕವಾಗಿ ಬಳಕೆಯಾಗುತ್ತಿರುವುದು. ಪ್ರಾರಂಭದಲ್ಲಿ ಮಣ್ಣಿನಿಂದ ಮಾಡಿದ್ದರೂ, ನಾಗರೀಕತೆ ಬೆಳೆದಂತೆ ತಾಮ್ರ, ಅಲ್ಯುಮಿನಿಯಂ ಅಥವಾ ಸ್ಟೀಲೀನ ಇಡ್ಲಿ ಬೇಯಿಸುವ ಪಾತ್ರೆಗಳು ಬಳಕೆಯಲ್ಲಿರುವುದನ್ನು ಕಾಣಬಹುದಾಗಿದೆ. ಇಡ್ಲಿ ತಯಾರಿಕೆಯ ವಿವಿಧ ಮಜಲುಗಳನ್ನು ಈ ಅಧ್ಯಯನದಿಂದ ಗುರುತಿಸಬಹುದಾಗಿದೆ.

ಶ್ಯಾವಿಗೆ ಮಣೆ

'ಶ್ಯಾವಿಗೆ ಅಡ್ಯ' ಅಥವಾ 'ಸೇಮಾಯಿದಡ್ಯ' ತುಳುನಾಡಿನ ಬಹು ಪ್ರಚಲಿತವಾದ ತಿನಸು. ಸೇಮಿಗೆ ಮಾಡುವ ಉಪಕರಣಕ್ಕೆ 'ಸೇಮಿಗೆ ಮಣೆ' ಎಂದು ಕರೆಯಲಾಗುತ್ತದೆ. ಈ ಮಣೆಗಳಲ್ಲಿ ಎರಡು ನಮೂನೆಗಳಿರುತ್ತವೆ. ತಿರುಗುವ ಸೇಮಿಗೆ ಮಣೆ ಮತ್ತು ಒತ್ತು ಸೇಮಿಗೆ ಮಣೆ ಎಂದು. ಮರದಲ್ಲಿ ಇಲ್ಲವೆ ಕಬ್ಬಿಣದಲ್ಲಿ ಹಳ್ಳಿಯ ಕಮ್ಮಾರ ಇವುಗಳನ್ನು ಮಾಡಿ ಕೊಡುತ್ತಿದ್ದ. ಈಗೀಗ ಕಂಚಿನಲ್ಲಿ ಇಲ್ಲವೆ ಸ್ಟೈನ್‌ಲೆಸ್ ಸ್ಟೀಲಿನಲ್ಲಿರುವುದನ್ನು ನೋಡಬಹುದು. ಆಯಾ ಬಡಗಿಯ ಇಲ್ಲವೆ ಕಮ್ಮಾರನ ಕೈ ಚಳಕಕ್ಕೆ ತಕ್ಕಂತೆ ಇವುಗಳ ಆಕಾರ ಬದಲಾಗುತ್ತ ಹೋಗುತ್ತದೆ.

ಶ್ಯಾವಿಗೆ ಸಂಸ್ಕೃತಿ ನಮ್ಮದಲ್ಲ. ಇದರ ಮೂಲ ಅರೇಬಿಯಾ ಎನ್ನಲಾಗುತ್ತದೆ. ಇಸ್ಲಾಂ ಸಂಸ್ಕೃತಿಯಂತೆ ಬಕ್ರಿದ್ ಹಬ್ಬದಂದು ಇಂದಿಗೂ ಸೇವಿಯಾ ಸೇವಿಸಿ ಹಬ್ಬ ಆಚರಣೆ ಮಾಡುತ್ತಾರೆ. ಸೇವಿಯಾ ಅನ್ನುವ ಪದ ಪರ್ಷಿಯನ್ ಮೂಲದ್ದು ಎನ್ನಲಾಗುತ್ತದೆ. ಹಿಂದಿಯಲ್ಲೂ ಸೇವಿಯಾ ಅಂದರೆ ಸೇವಿಗೆ ಎಂದೇ ಅರ್ಥ. ಇದೇ ತುಳುವಿನಲ್ಲೂ 'ಸೆಮಾಯಿ' ಆಗಿರುವ ಸಾಧ್ಯತೆ ಇದೆ. ಮೇಲಿನ ಶ್ಯಾವಿಗೆ ಮಣೆಯ ಉದಾಹರಣೆ ಮುಸ್ಲಿಂ ಸಂಸ್ಕೃತಿ ಎಷ್ಟರ ಮಟ್ಟಿಗೆ ಈ ನೆಲದ ಸಂಸ್ಕೃತಿಯೊಂದಿಗೆ ಹಾಸು ಹೊಕ್ಕಾಗಿತ್ತು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಅರಬರೊಂದಿಗೆ ಈ ಕರಾವಳಿ ಪ್ರದೇಶದ ಜನರು ನಿಕಟ ಸಂಪರ್ಕವನ್ನು ಹೊಂದಿದ್ದರು. ಇದಕ್ಕೆ ಕಾಸರಗೋಡಿನ ಅರೆಬಿಕ್ ಶಾಸನ (ಕ್ರಿ.ಶ ೧೮೦೮) ವೊಂದು ಮಲಿಕ್–ಬಿನ್–ದಿನಾರ್‌ಎಂಬ ಮುಸ್ಲಿಂ ಮತ ಪ್ರಚಾರಕ ಅರೇಬಿಯಾದಿಂದ ೭–೮ನೇ ಶತಮಾನದಲ್ಲಿ ಭಾರತದ ಪಶ್ಚಿಮ ಕರಾವಳಿಯ ಕಾಂಚರ್ ಕೋಟ (ಕಾಸರಗೋಡು)ಗೆ ಬಂದು ಮಸೀದಿಯನ್ನು ಸ್ಥಾಪಿಸಿ, ಇಸ್ಲಾಂ ಮತ ಪ್ರಚಾರ ಮಾಡಿದನೆಂದು ತಿಳಿಸುತ್ತದೆ. ಇದಕ್ಕೆ ಸಾಕ್ಷಿಯಾಗಿ ಕ್ರಿ.ಶ ೭೪೮ರಲ್ಲಿ ನಿರ್ಮಾಣವಾಯಿತೆಂದು ಹೇಳಲಾಗುವ ಕಾಸರಗೋಡಿನ ಮಾಲಿಕ್ ದಿನಾರ್ ದರ್ಗಾ ಮತ್ತು ಜುಮಾ ಮಸೀದಿ ಸಾಕ್ಷಿಯಾಗುತ್ತದೆ. ಈ ದೀರ್ಘ ಅವಧಿಯಲ್ಲಿ ಮುಸ್ಲಿಂ ಸಂಸ್ಕೃತಿ ತುಳು ಸಂಸ್ಕೃತಿಯೊಂದಿಗೆ ಮಿಲಿತವಾದುದರಲ್ಲಿ ಆಶ್ಚರ್ಯವೇನಿಲ್ಲ.

ತುಳುವರ ಅಡುಗೆ ಮನೆಯಲ್ಲಿ ಬಳಸಲಾಗುವ ಶ್ಯಾವಿಗೆ ಮಣೆಯ ರಚನೆ, ರಚಿಸಲು ಬಳಸಿದ ಮರ ಅದರಲ್ಲಿನ ಕಾಷ್ಠ ಶಿಲ್ಪ ಎಲ್ಲವೂ ಸಾಂಸ್ಕೃತಿಕ ಇತಿಹಾಸಕಾರರ ಚಿಕಿತ್ಸಕ ಬುದ್ಧಿಗೆ ಸವಾಲಾಗುತ್ತದೆ. ಇದರ ಕುರಿತಂತೆ ಜನಪದರಲ್ಲಿ ಮನೆಮಾತಾಗಿರುವ ಒಂದು ಎದುರುಕಥೆ ತಮಾಷೆಯೆನಿಸಿದರೂ ಆ ಕಾಲದ ಒಟ್ಟು ಒಂದು

ಸಾಮಾಜಿಕ ಬದುಕಿನ ಚಿತ್ರಣವನ್ನು ಅನಾವರಣಗೊಳಿಸುತ್ತದೆ. "ಅನ್ನೊರ ಕರಡಿಗೆ, ಮುನ್ನೊರ ಪದ್ದೆಯಿ ಅವೆನೊರ ಕೊರೊಡುಗೆ, ನಿಕ್ಲು ಒರ ಬರೊಡುಗೆ". ಈ ತುಳು ಎದುರುಕಥೆ ಯಾವ ಕಾಲ ಘಟ್ಟದಲ್ಲಿ ಹುಟ್ಟಿ ಕೊಂಡಿತು, ಯಾಕೆ ಹುಟ್ಟಿಕೊಂಡಿತು ಎಂದು ಹೇಳಲಾಗದು. ಒಟ್ಟಿನಲ್ಲಿ ಆ ಕಾಲದ ಸಾಮಾಜಿಕ ಒಗ್ಗಟ್ಟು, ಪರಸ್ಪರ ಸೌಹಾರ್ದಯುತವಾಗಿ ಬದುಕುತ್ತಿದ್ದ ಚಿತ್ರಣವನ್ನು ನೀಡುತ್ತದೆ. ಇನ್ನೊಂದು ಗಾದೆ ಹೀಗಿದೆ 'ಕರಕರಿತ ಸೇಮಯಿಡ್ದ್ ನಿರ್ಮಲದ ಪುಂಡಿ ಎಡ್ಡೆ' ಅಂದರೆ ಶ್ಯಾವಿಗೆ ತಿಂಡಿಯನ್ನು ಮಾಡಲು ತುಂಬಾ ಕೆಲಸ ಮತ್ತು ತ್ರಾಸದಾಯಕ ಕೂಡ. ಇದಕ್ಕೆ ಹಲವು ಜನರ ಸಹಕಾರದ ಅಗತ್ಯವೂ ಇದೆ. ಆದುದರಿಂದ ಸುಲಭದಲ್ಲಿ ತಯಾರಿಸಬಹುದಾದ ಪುಂಡಿ ಲೇಸು.

'ಉಳ್ಳಯಾನ ಮಣೆಟ್ ಪಿರಿ ಪಿರಿ ಜಪ್ಪುಂಡು, ಎನ್ನೈಟ್ ದಾನೆ ಜಪ್ಪುಜಿ' (ಒಡೆಯನ ಮಣೆಯಲ್ಲಿ ಒತ್ತಿದಾಗ ಶ್ಯಾವಿಗೆ ಇಳಿಯುತ್ತದೆ ನಾನೂ ಅದೆ ರೀತಿ ಒತ್ತುತ್ತೇನೆ ಎಂದು ಎಂದೊಬ್ಬಾಕೆ ಎರಡು ಮಣೆಗಳನ್ನಿಟ್ಟು ಒತ್ತಿದಳು. ಆದರೆ ಅವಳು ಒತ್ತಿದ ಮಣೆಯಿಂದ ಏನೇನೂ ಇಳಿಯಲಿಲ್ಲ). ಈ ಶ್ಯಾವಿಗೆ ಮಣೆ ಕೇವಲ ಆರ್ಥಿಕವಾಗಿ ಪ್ರಭಲರಾಗಿದ್ದವರಲ್ಲಿದ್ದು ಉಳಿದವರ ಹತ್ತಿರ ಇಲ್ಲದಿದ್ದುದಕ್ಕೆ ಈ ಮಾತುಗಳು ಸಾಕ್ಷಿಯಾಗುತ್ತವೆ.

ತುಳುವರಲ್ಲಿ ಇದಕ್ಕೆ ಇನ್ನೊಂದು ಹೆಸರು 'ನೂಕಅಡ್ಯ' ಎಂದು. ವಿಶೇಷವಾದ ಅತಿಥಿಗಳು ಮನೆಗೆ ಬಂದಾಗ ಈ ತಿನಿಸನ್ನು ಮಾಡುತ್ತಾರೆ. ಜೊತೆಗೆ ಮನೆಗೆ ಬಂದ ನೆಂಟ ತುಂಬಾ ದಿನದವರೆಗೂ ಹೊರಡದಿದ್ದರೆ ಈ ತಿನಸನ್ನು ತಿಂದ ನಂತರ ಯಾವುದೇ ಕಾರಣಕ್ಕೂ ಹೆಚ್ಚುದಿನ ಆ ಮನೆಯಲ್ಲಿ ಉಳಿಯಬಾರದು ಎಂಬ ಕಾರಣಕ್ಕೂ ನೂಕಡ್ಯೆ ಎಂದು ಕರೆಯಲಾಗುವುದು. ಸೇಮಿಗೆಯ ಕುರಿತಂತೆ ಹೀಗೆ ಅನೇಕ ಅಪಹಾಸ್ಯ – ಉಪಹಾಸ್ಯಗಳು ಇದೆ.

ಇಂದು ಕೇವಲ ತಿಂಡಿಯಾಗಿ ಅದರ ಸ್ವರೂಪ ಬದಲಾಗಿಲ್ಲ. ಮಾನವ ಶ್ರಮ ಬದಲಾಗಿದೆ, ಆಹಾರದ ಗಾತ್ರ ಚಿಕ್ಕದಾಗಿದೆ. ಹಿಂದೆ ಕೇವಲ ಅಕ್ಕಿಯಿಂದ ತಯಾರಿಸುತ್ತಿದ್ದದ್ದು ಇಂದು ಗೋಧಿಯಲ್ಲಿ. ರಾಗಿಯಲ್ಲಿ, ಬೆಳ್ತಿಗೆ ಅಕ್ಕಿಯಲ್ಲಿ ಹೀಗೆ ಬೇರೆ ರೂಪದಲ್ಲಿ ಸೇಮಿಗೆ ಮಾರುಕಟ್ಟೆಯಲ್ಲಿ ಲಭ್ಯವಾಗಿದೆ. ಆಧುನಿಕತೆಯ ಪ್ರಭಾವ ಮತ್ತು ಅದರ ಮೂಲಕ ಅದು ಕಟ್ಟಿಕೊಡುವ ಚಿಂತನೆಯ ಸ್ವರೂಪ ಬೇರೆ–ಮೊದಲು ಕೇವಲ ಹೊಟ್ಟೆಗಾಗಿ ಸಿದ್ಧಪಡಿಸುತ್ತಿದ್ದ ಸೇಮಿಗೆ ಇಂದು ಹೊಟ್ಟೆಯಿಂದ ಮಾರುಕಟ್ಟೆಗೆ ಪಲ್ಲಟಗೊಂಡ ರೀತಿ ವಿಶಿಷ್ಟವಾದದ್ದು ಇವತ್ತು. ಮ್ಯಾಗಿ, ಪಾಸ್ತಾ, ಇಪ್ಪಿ ನೂಡಲ್ಸ್ ಬೇರೆ ಹೆಸರಿನಲ್ಲಿ ರೆಡಿ, ವೆರ್ಮಿಸೆಲ್ಲಿಗಳು ಲಭ್ಯ. ಇವತ್ತು ಹಿಂದಿನವರ ತಾಳ್ಮೆಯಾಗಲಿ, ಶಕ್ತಿಯಾಗಲೀ ವ್ಯವಧಾನವಾಗಲಿ ಆಧುನೀಕರಲ್ಲಿ ಇಲ್ಲ. ಇಂದು ತಾನು ತಿನ್ನುವ, ರುಚಿಯಲ್ಲಿ ಆಯ್ಕೆಗೆ ಅವಕಾಶವಿರುವ ಆಹಾರಗಳು ಮಾರುಕಟ್ಟೆಯಲ್ಲಿ ಎಲ್ಲೆಂದರಲ್ಲಿ ಸಿಗುತ್ತವೆ. ಆದ್ದರಿಂದಲೇ ಅದರ ಉತ್ಪಾದನೆಯ ಮೂಲ, ಕಷ್ಟ ನಷ್ಟಗಳ ಬಗೆ ಅರಿಯುವ ಮನಸ್ಥಿತಿ ಇಲ್ಲವಾಗಿದೆ. ಸೇಮಿಗೆ ಒತ್ತುವ ಶ್ಯಾವಿಗೆ ಮಣೆಯಲ್ಲಿ ಮಾಡುವವರ ಅನುಭವ ಮಾರುಕಟ್ಟೆಯಲ್ಲಿ ರೆಡಿ ವೆರ್ಮಿಸೆಲ್ಲಿ, ಮ್ಯಾಗಿ ಪ್ಯಾಕೆಟ್ ಪಡೆದು ಬಳಸುವವರಿಗಾಗಲೂ ಸಾಧ್ಯವಿಲ್ಲ. ಇಂದಿನ ತಲೆಮಾರು. ನೆಲಮೂಲದಿಂದ ದೂರ ಸರಿಯುತ್ತಿರುವುದಕ್ಕೆ ಇದೊಂದು ಉದಾಹರಣೆ. ಆಹಾರವನ್ನು ಸುಲಭಗೊಳಿಸುವ ಅಥವಾ ಅವುಗಳ ಸರಳ, ಬಹುರೂಪಿ, ಸರ್ವವ್ಯಾಪಿ ಲಭ್ಯತೆಯ ಹಿಂದೆ ಹಣ

ಮತ್ತು ಯಂತ್ರದ ಪಾಲು ಗಣನೀಯ. ಈಗಾಗಲೇ ಹೇಳಿರುವಂತೆ ಭೂಮಿಯ ಮೇಲೆ ಆಹಾರ ಉತ್ಪಾದಿಸುವವ ಮನುಷ್ಯ ಮಾತ್ರ ಉಳಿದವುಗಳೆಲ್ಲಾ ಆಹಾರ ಹುಡುಕುತ್ತವೆ. ಉತ್ಪಾದಿಸುವ ಅಹಂ ಮನುಷ್ಯನಲ್ಲಿ ಮಿತಿಮೀರಿ ಸ್ಪರ್ಧೆಯನ್ನು ಉಂಟು ಮಾಡಿದೆ. ಹಣದಿಂದ ಆಹಾರವನ್ನು ಖರೀದಿಸಬಹುದು. ಎಂಬ ಕಾರಣಕ್ಕಾಗಿಯೇ ಆಹಾರ ಉತ್ಪಾದನೆ ಉದ್ಯಮವಾಯಿತು.

ಆದ್ದರಿಂದ ಶ್ಯಾವಿಗೆ ತಿನಿಸು ಮತ್ತು ಶ್ಯಾವಿಗೆ ಅಚ್ಚು ಮಾತ್ರ ಬದಲಾದದ್ದಲ್ಲಾ. ಆಧುನಿಕತೆಯ ಪ್ರಭಾವ, ಅದರ ಮೂಲಕ ಅದು ಕಟ್ಟಿಕೊಡುವ ಚಿಂತನೆ ಹೊಟ್ಟೆಯಿಂದ ಮಾರುಕಟ್ಟೆಗೆ ಆದ ಪಲ್ಲಟ. ಜನಪದರ ಆಹಾರ ಕ್ರಮ, ಆಹಾರದ ಚರಿತ್ರೆ, ಸಲಕರಣೆಯ ಜೊತೆಗೆ ಆಹಾರದ ವೈಶಿಷ್ಟ್ಯ ಹೇಗೆ ರೂಪಾಂತರಗೊಂಡಿದೆ ಎಂಬುದನ್ನು ತಿಳಿಯುವುದರ ಜೊತೆಗೆ ಆಹಾರ ಕ್ರಮ ಬದಲಾದ ಸ್ಥಿತಿಯನ್ನು ನಿರೂಪಿಸುವುದೇ ಈ ಪ್ರಬಂಧ ಫಲಿತ. ಇಂದು ಮನುಷ್ಯ, ಮನುಷ್ಯನ ಜೊತೆಗಿನ ಸಾಹಚರ್ಯ ಮತ್ತು ಬಾಂಧವ್ಯ ಬದಲಾಗಿದೆ. ಹಿಂದೆ ಸೇಮಿಗೆ ಒಂದು ತಿನಿಸು ಮಾತ್ರ ಆಗಿರಲಿಲ್ಲ. ಅಕ್ಕಿ ಅರೆಯುವಾಗ ಎರಡು ಮನಸ್ಸುಗಳು ತಮ್ಮ ಮನಸ್ಸಿನ ತುಮುಲಗಳನ್ನು ಹಂಚಿಕೊಂಡು ಪರಸ್ಪರ ಹಗುರವಾಗುತ್ತಿದ್ದರು. ಮಾನಸಿಕವಾಗಿ ಪರಸ್ಪರ ಹತ್ತಿರವಾಗುತ್ತಿದ್ದರು. ಇಂದು ಮನೆಯಲ್ಲಿ ಜನವು ಇಲ್ಲ. ಇದ್ದರೂ ಯಾರಿಗೂ ಇನ್ನೊಬ್ಬರ ಮಾತಿಗೆ ಕಿವಿಯಾಗಲೂ, ದನಿಯಾಗಲೂ ಪುರುಸೊತ್ತಿಲ್ಲ. ಹಿಂದೆ ಸೇಮಿಗೆ ಮಾಡುವ ಪ್ರಕ್ರಿಯೆಯ ಜೊತೆಗೆ ಮನುಷ್ಯ-ಮನುಷ್ಯರು ಹತ್ತಿರವಾಗಿದ್ದರೂ, ಹೊಟ್ಟೆಯ ಪ್ರಶ್ನೆಯ ಜೊತೆಗೆ ಬಂಧುತ್ವ ಕೂಡ ಗಾಢವಾಗಿತ್ತು. ಇಂದು ಮಾರುಕಟ್ಟೆಯ ತಂತ್ರದಿಂದಾಗಿ ಆಹಾರದ ಜೊತೆ ಮನುಷ್ಯ ಬಾಂಧವ್ಯ, ಬಂಧುತ್ವವು ಕಳಚಿದೆ. ಆದ್ದರಿಂದ ಸೇಮಿಗೆ ತಿಂಡಿ ಮತ್ತು ಅದನ್ನು ಮಾಡುವ ಸಲಕರಣೆ ಮಾತ್ರ ಬದಲಾದದ್ದಲ್ಲ. ಮನುಷ್ಯ-ಮನುಷ್ಯನ ಜೀವನ-ಬಾಂಧವ್ಯ-ಸಂಬಂಧ ಬದಲಾಗಿದೆ.

'ತಾಲಿ' ಅಥವಾ 'ತಾಲ'

ಮುಸ್ಲಿಂ ಸಮುದಾಯದವರು ಸಾಮೂಹಿಕವಾಗಿ ವಿಶೇಷ ಸಂದರ್ಭಗಳಲ್ಲಿ ಉಪಯೋಗಿಸುತ್ತಿದ್ದ ಬಟ್ಟಲು 'ತಾಲಿ' ಅಥವಾ 'ತಾಲ'. ಈ ತಾಲಿ ಪದ ಯಾವ ಮೂಲದ್ದು ಎಂಬ ಜಿಜ್ಞಾಸೆ ಉಂಟಾಗಿದೆ. ೧೧೩೨-೧೧೪೯ರ ಹೊತ್ತಿಗೆ ಮಂಗಳೂರಿನಲ್ಲಿ ಅಬ್ರಾಹಂ ಬೆನ್ ಈಜೂ ಎಂಬ ಯುಹೂದಿ ವ್ಯಾಪಾರಿ ಇಜಿಪ್ಟ್, ಅಡೆನ್ ಮತ್ತು ಭಾರತದಲ್ಲಿ ವ್ಯಾಪಾರ ಮಾಡುತ್ತಿದ್ದ ವಿಚಾರ ಬೆಳಕಿಗೆ ಬಂದಿದೆ (ವಿವೇಕ್ ರೈ, ೨೦೧೪, ಅಮಿತಾಬ್ ಘೋಶ್). ೧೧೩೨ರಲ್ಲಿ ಮಂಗಳೂರಿನಲ್ಲಿಅವನು ಹಿತ್ತಾಳೆ ಮತ್ತು ಕಂಚಿನ ಒಂದು ಕಾರ್ಖಾನೆಯನ್ನು ಹೊಂದಿದ್ದ ಎನ್ನುವ ಮಾಹಿತಿ ದೊರೆಯುತ್ತದೆ. ಅವನು ವ್ಯಾಪಾರದ ನಿಮಿತ್ತ ಮಾಡಿದ ಪತ್ರವ್ಯವಹಾರದಲ್ಲಿ ತಾಲಿಯಂ, ತಾಲಂ ಎನ್ನುವ ಪದಗಳ ಉಲ್ಲೇಖವಿದ್ದು, ಇದು ಅರಬ್ ಪದಗಳಲ್ಲ. ಈ ಪದ ತುಳುವಿನದ್ದು ಆಗಿರುವ ಸಾಧ್ಯತೆ ಇದೆ. ಭೌತಿಕ ವಸ್ತುವೊಂದು ಭಾಷೆ ಮತ್ತು ಸಾಂಸ್ಕೃತಿಕ ಸಂಬಂಧವನ್ನು ಭೌಗೋಳಿಕ ಗಡಿಯನ್ನೂ ಮೀರಿ ನಿಲ್ಲುವ ಸಾಧ್ಯತೆಯನ್ನು ವ್ಯಕ್ತಪಡಿಸುತ್ತದೆ. ಇದೆ ಅಭಿಪ್ರಾಯವನ್ನು ಇಂಗ್ಲೆಂಡಿನ ಭಾಷಾಶಾಸ್ತ್ರಜ್ಞೆ ಎಲಿಜಬೆತ್ ಲಂಬಾನ್ಸ್ ಕೂಡ ಹೊಂದಿದ್ದಾರೆ.

ಈ ಸಂಶೋಧಕಿಯ ಪ್ರಕಾರ ತುಳುನಾಡಿನಲ್ಲಿ ಬಳಕೆಯಾಗುತ್ತಿದ್ದ ಪತ್ತಾಯ, ಪೆಠಾರಿಗೂ ಹಿಬ್ರೂ ಮತ್ತು ಅರೆಬಿಕ್ ಭಾಷೆಯಲ್ಲಿ ಇದೇ ಪದವನ್ನು ಬಳಸಲಾಗುತ್ತದೆ. ಅಂದರೆ, ಭಾಷೆ ಮತ್ತು ಸಂಸ್ಕೃತಿಗಳ ಕೊಡುಕೊಳ್ಳುವಿಕೆ ಸರ್ವೇಸಾಮಾನ್ಯವೆಂಬುದು ವೇದ್ಯವಾಗುತ್ತದೆ.

ಒಂದು ಸಂಸ್ಕೃತಿಯ ಪರಿಸರದಲ್ಲಿ ರೂಪುಗೊಂಡ ವಸ್ತುವಿಶೇಷಗಳು ಒಂದು ಜನಾಂಗದ ಅಥವಾ ಒಂದು ಪ್ರದೇಶದ ಚಾರಿತ್ರಿಕ, ಸಾಮಾಜಿಕ, ಸಾಂಸ್ಕೃತಿಕ ಅಧ್ಯಯನ ಮಾಡುವವರಿಗೆ ಮೂಲಸಾಮಗ್ರಿ ಎನಿಸುತ್ತದೆ. ವಸ್ತು ಸಂಗ್ರಹಾಲಯದಲ್ಲಿರುವ ಅತ್ಯಂತ ಕನಿಷ್ಠ ಎಂದು ಭಾವಿಸಬಹುದಾದ ವಸ್ತುವೂ ಕೂಡ ಸಾಂಸ್ಕೃತಿಕ ಇತಿಹಾಸದ ದೃಷ್ಟಿಯಿಂದ ಅತ್ಯಂತ ಮುಖ್ಯವೆನಿಸುತ್ತದೆ. ಪರಂಪರಾಗತ ಸಂಸ್ಕೃತಿಯ ವಿವಿಧ ಸ್ತರಗಳನ್ನು ಗುರುತಿಸಲು, ನಮ್ಮ ಪೂರ್ವಜರ ಜೀವನ ಕಲೆ, ಕುಶಲ ಕಲೆ ಮುಂತಾವುದುಗಳನ್ನು ತಿಳಿಯಲು ಇಂತಹ ವಸ್ತುಗಳು ಮಾತ್ರವೇ ಅಧಿಕೃತ ಮಾಹಿತಿ ಒದಗಿಸಬಲ್ಲವು.

ಜನಪದ ಸಾಹಿತ್ಯ, ಸಂಗೀತ, ನಂಬಿಕೆ, ಸಂಪ್ರದಾಯ, ಹಬ್ಬ, ಆಚರಣೆ, ಕಲೆ, ಕಸುಬು ಹೀಗೆ ಒಟ್ಟಾರೆ ಜನಪದ ಜೀವನದ ಸಮಸ್ತ ವಿಷಯಗಳಿಗೂ ಸಂಬಂಧಿಸಿದಂತೆ ವಸ್ತು ವಿಷಯಗಳಿರುತ್ತವೆ. ಇಂಥವನ್ನೆಲ್ಲ 'ಭೌತಿಕ ಜಾನಪದ' ವರ್ಗದಲ್ಲಿ ಗುರುತಿಸಲಾಗಿದೆ.[೩]

ಕಡೆಗೋಲು (ಮಂತ್)

ಮಜ್ಜಿಗೆ ಕಡೆದು ಬೆಣ್ಣೆ ಮಾಡುವ ಕಡೆಗೋಲು ಮರದ ಸಾಧನ ಮಂತ್. ಇದನ್ನು ನಮ್ಮ ಬಡಗಿಗಳು ತಯಾರಿಸುತ್ತಿದ್ದರು. ಇದನ್ನು ಹಿಂದಿನ ಕಾಲದಲ್ಲಿ ಅಡ್ಕರೆ ಗಿಡದ ಕಾಂಡದಿಂದಲೇ ತಯಾರಿಲಾಗುತ್ತಿತ್ತು. ಅಡ್ಕರೆ, ನಂತರ ಯೋಗ್ಯ ಮರವೆಂದರೆ ಪೇರಳೆ ಅಥವಾ ಕೊರಜಿ ಹಾಗೂ ಗೊಸಂಪಿಗೆ. ಈ ಮರಗಳ ಗುಣದಂತೆ ಬೆಣ್ಣೆ ಅದಕ್ಕೆ ಅಂಟಿಕೊಳ್ಳುವುದಿಲ್ಲ. ಇದರಲ್ಲಿ ಮರದ ಎಣ್ಣೆಯಂಶ ಇರುವುದಿಲ್ಲ. ಹೀಗೆ ತಯಾರಿಸಿದ ಕಡೆಗೋಲಿಗೆ ಏಳು ಚಡಿಗಳಿರುತ್ತವೆ. ಚಡಿಯಿಂದ ಚಡಿಗೆ ಪೆತ್ತ/ ಪಿಲಿ (ಹಸು/ಹುಲಿ) ಅಥವಾ ಪೆತ್ತ /ಕಂಜಿ (ದನ/ಕರು) ಎಂಬ ಲೆಕ್ಕ ಹಾಕುತ್ತಾರೆ ಮತ್ತು ಪೆತ್ತದಿಂದ ಆರಂಭಗೊಂಡು ಏಳನೇ ಗುಳಿ ಪೆತ್ತದಲ್ಲಿ ಕೊನೆಗೊಳ್ಳಬೇಕು. ಇದರ ಉದ್ದಳತೆ ಅಥವಾ ಗಾತ್ರ ಸರಿಸಮಾನವಾಗಿರಬೇಕು. ಇದನ್ನೆ 'ಆಯ' ವೆನ್ನುವುದು. ಯಾವುದೆ ವಸ್ತುಗಳು ಈ ರೀತಿಯಾಗಿ ಆಯ ಪ್ರಕಾರ ರಚನೆಗೊಂಡಾಗ ಮಾತ್ರ ಅದು ಉಪಯೋಗಕ್ಕೆ ಬರುತ್ತದೆ. ಆಯ ತಪ್ಪಿದರೆ ವಸ್ತುವೊಂದು ಹೇಗೆ ನಿಷ್ಪ್ರಯೋಜಕವಾಗುತ್ತದೆ ಎಂಬುವುದಕ್ಕೆ ಇಲಿ ಹಿಡಿಯುವ ಗೂಡೊಂದರ ಉದಾಹರಣೆಯನ್ನು ಪದ್ಮನಾಭ ದೇವಾಡಿಗರು ನೀಡುತ್ತಾರೆ.[೪] ಅವರು ಹೇಳುವಂತೆ ಅನನುಭವಿ ಬಡಗಿಯೊಬ್ಬ ಸಿದ್ದಪಡಿಸಿದ ಇಲಿ ಹಿಡಿಯುವ ಗೂಡಿನಲ್ಲಿ, ಇಲಿಗಳು ಗೂಡಿಗೆ ಬಿದ್ದರೂ ನಿರಂತರವಾಗಿ ತಪ್ಪಿಸಿಕೊಳ್ಳುತ್ತಿದ್ದವಂತೆ. ಕಾರಣ ಹುಡುಕಿದಾಗ ಅನುಭವಿ ಬಡಗಿಯೊಬ್ಬರು ಈ ಗೂಡನ್ನು ಕಂಡ ತಕ್ಷಣ ಇದು ಸುಖ ಆಯದ ಗೂಡು. ಇಲಿ ಹಿಡಿಯುವ ಗೂಡು ಯಾವಾಗಲೂ ಮರಣ ಆಯದ್ದಾಗಿರಬೇಕು ಎಂದರಂತೆ. ಆ ನಂತರ ಮರಣ ಆಯದ ಪ್ರಕಾರ ರಚಿಸಿದ ಗೂಡಿನಲ್ಲಿ

ಇಲಿಗಳು ಬಿದ್ದವೆಂದು ಈ ಹಿರಿಯರು ಹೇಳುತ್ತಾರೆ. ಆಯವೆಂದರೆ ನಮ್ಮ ಬಡಗಿಗಳು ಸಾಂಪ್ರದಾಯಿಕವಾಗಿ ಇಲ್ಲಿಯ ಅಳತೆಯ ಮಾಪನವಾದ ಆಯದ ಕೋಲಿನ ಲೆಕ್ಕಾಚಾರದಲ್ಲಿ ವಸ್ತುಗಳು ಸಿದ್ಧವಾಗಬೇಕು. ಇದು ಮಗು ಮಲಗುವ ತೊಟ್ಟಿಲಿಗಾಗಲಿ, ಮರಣದ ಪೆಟ್ಟಿಗೆಗಾಗಲಿ, ಹಾರೆ ಪಿಕ್ಕಾಸುಗಳಿಗಾಗಲಿ, ಮನೆಯ ಪಂಚಾಂಗವೇ ಆಗಲಿ ಈ ಆಯದ ಕೋಲಿನ ಲೆಕ್ಕಾಚಾರದಲ್ಲಿ ನಡೆಯುತ್ತಿದ್ದವು. ಇಂದು ಪಾಶ್ಚಿಮಾತ್ಯ ಅಳತೆ ಪದ್ಧತಿಯಾದ ಮೀಟರ್ ಅಥವಾ ಫೀಟ್ ಲೆಕ್ಕಾಚಾರದಲ್ಲಿ ನಡೆಯುತ್ತದೆ. ಆದುದರಿಂದಲೇ ಆಯ ತಪ್ಪುತ್ತದೆ ಎನ್ನುತ್ತಾರೆ."

ಗೆರಟೆಯ ಸೌಟು

'ಸೌಟನೊಡನೆ ಪಾಕ ಹೇಗಿದೆಯೆಂದು ರುಚಿ ಕೇಳಿದಂತೆ' (ಕೈಲ್‌ಡ ಪಾಕದ ರುಚಿ ಕೇಂಡಿ ಗಾದೆ). ಇದನ್ನು ಮಾಡುವಾಗಲೂ ಆಯದ ಲೆಕ್ಕದಲ್ಲಿಯೇ ಮಾಡತಕ್ಕದ್ದು. ಗೆರಟೆಯ ಸೌಟಿನಲ್ಲಿಯೂ ವಿವಿಧ ಮಾದರಿಯದಿರುತ್ತದೆ. ಉಪ್ಪಿನ ಕಾಯಿ ಬಡಿಸುವ ಸೌಟಿನಿಂದ ತೊಡಗಿ ಪಲ್ಯ, ಸಾಂಬಾರು, ಅನ್ನ ಬಡಿಸುವ ಸೌಟುಗಳನ್ನು ತಯಾರಿಸಲಾಗುತ್ತದೆ. ಹಾಗೆಯೆ, ಭತ್ತ ಬೇಯಿಸುವ ಮಂಡೆಯಿಂದ ಭತ್ತ ತೆಗೆಯುವ 'ಬಾರ್‌ದ ಕೈಲು' (ಇದು ದೊಡ್ಡ ಗಾತ್ರದ್ದು) ಇದೆಲ್ಲವನ್ನು ಸಾಮಾನ್ಯವಾಗಿ ಬಿದಿರಿನ ಸಲಾಕೆ ಮತ್ತು ಗೆರಟೆಯಿಂದ ತಯಾರಿಸಲಾಗುವುದು. ಇದರ ಅಗಲ ಹಾಗೂ ಆಳ ಕೂಡ ಬಡಿಸುವ ಖಾದ್ಯಕ್ಕನುಗುಣವಾಗಿರುತ್ತದೆ. ಹಿಂದಿನ ಕಾಲದಲ್ಲಿ ಸ್ನಾನ ಮಾಡಲು ಬಿಸಿ ನೀರಿನ ಹಂಡೆಯಿಂದ ನೀರು ತೆಗೆದು ಸ್ನಾನ ಮಾಡಲು ಕೂಡಾ ದೊಡ್ಡ ಗಾತ್ರದ ಗೆರಟೆಯನ್ನು ಬಳಸಿ ಮರದ ಹಿಡಿಯಿಂದ ರಚಿಸಲಾದ 'ರೊಂಕ'ವನ್ನು ಬಳಸಲಾಗುತ್ತಿತ್ತು. ಇದನ್ನು ತಯಾರಿಸಲು ವಿಶಿಷ್ಟವಾದ ಗೆರಟೆಯನ್ನೆ ಬಳಸಲಾಗುತ್ತಿತ್ತು. ಅಂದರೆ ಬಣ್ಣಂಗಾಯಿ ಎಂದು ಹೇಳಲಾಗುವ ಅತ್ತ ಸೀಯಾಳವೂ ಅಲ್ಲದ, ಬಲಿತ ತೆಂಗಿನಕಾಯಿಯೂ ಅಲ್ಲದ ದೊಡ್ಡ ಗಾತ್ರದ ಕಾಯಿಯನ್ನು ತೆಗೆದು, ಬಳಸಲಾಗುತ್ತಿತ್ತು. ರೊಂಕ ಅಥವಾ ಸೌಟುಗಳಿಗಾಗಿ ಸಾಮಾನ್ಯವಾಗಿ ನಿರ್ದಿಷ್ಟದ ತೆಂಗಿನ ಮರದ ಗೆರಟೆಗಳನ್ನೆ ಆಯ್ಕೆ ಮಾಡಾಲಾಗುತ್ತಿತ್ತು. ಯಾಕೆಂದರೆ ಇದನ್ನು ನಿರ್ದಿಷ್ಟ ಆಕಾರದಲ್ಲಿ ಕತ್ತರಿಸಲು, ತೂತು ಮಾಡಲು ಅನುಕೂಲವಾಗುತ್ತದೆ.ಇದನ್ನು ತಯಾರಿಸುತ್ತಿದ್ದ ಬಡಗಿಗಳು ಅಥವಾ ಇತರ ಕುಸುರಿ ಕೆಲಸದ ಜನರು ಎಷ್ಟು ಸೂಕ್ಷ್ಮವಾಗಿ ಸಿದ್ಧಪಡಿಸುತ್ತಿದ್ದರೆಂದರೆ ಒಂದು ತೊಟ್ಟು ನೀರು ಸೋರದ ರೀತಿಯಲ್ಲಿ ರಚಿಸಿ ತಮ್ಮ ಜಾಣ್ಮೆಯನ್ನು ಪ್ರದರ್ಶಿಸುತ್ತಿದ್ದರು. ಇಂತಹ ಸೌಟುಗಳನ್ನು ಜೋಪಾನ ವಾಗಿ ಇಡುವುದಕ್ಕಾಗಿ ಮರದಿಂದ ಸಿದ್ದವಾದ ಸಾಧನವನ್ನು ಬಳಸುತ್ತಿದ್ದರು. ಆ ಸಾಧನವು ಶಿಲುಬೆಯ ಆಕಾರದಲ್ಲಿ ಇದ್ದು, ಮೇಲ್ಭಾಗದಲ್ಲಿ ಸೌಟುಗಳನ್ನು ತೂರಿಡಲಾಗುತ್ತಿತ್ತು. ಅಥವಾ ಮಣಿಪು ಹಗ್ಗದಿಂದ ರಚಿತವಾದ ಸಾಧನವನ್ನು ತಯಾರಿಸಿ ಅದಕ್ಕೆ ಸಿಕ್ಕಿಸಿ ಹತ್ತು ಹದಿನೈದು ಸೌಟುಗಳನ್ನು ಅಡುಗೆ ಕೋಣೆಯಲ್ಲಿ ಜೋತು ಹಾಕಲಾಗುತ್ತಿತ್ತು. ಸಾಮಾನ್ಯವಾಗಿ ಸಾಧಾರಣ ಸ್ಥಿತಿವಂತರ ಮನೆಯಲ್ಲಿ ಹೆಚ್ಚುವರಿ ಸೌಟುಗಳನ್ನು ಅಟ್ಟದಲ್ಲಿ ಜೋಪಾನವಾಗಿ ಇಡುತ್ತಿದ್ದರು. ಯಾಕೆಂದರೆ ಇದು ದಿನ ನಿತ್ಯ ಬಳಕೆಯ ಅನಿವಾರ್ಯ ವಸ್ತುವಾಗಿತ್ತು. ಹಾಗಾಗಿ ತೊಂದರೆಯಾಗದಂತೆ ಮೊದಲೆ ಹೆಚ್ಚುವರಿ ಸೌಟುಗಳನ್ನು ದಾಸ್ತಾನು ಮಾಡಿಡುತ್ತಿದ್ದರು. ಇನ್ನೊಂದು ಮುಖ್ಯ

ವಿಚಾರವೆಂದರೆ ತುಳುವರ ಹೊಸ ಅಕ್ಕಿ ಊಟ ಮಾಡುವ ಸಂದರ್ಭ ವಿಶೇಷವಾದುದು. ಆ ದಿನದಂದು ಹೊಸ ಅನ್ನವನ್ನು ಬಡಿಸುವ ಸಲುವಾಗಿಯೇ ವಿಶಿಷ್ಟವಾದ ಮರದಿಂದ ರಚಿಸಲಾದ ಸೌಟನ್ನೇ ಬಳಸಲಾಗುತ್ತಿತ್ತು. ಸಾಮಾನ್ಯವಾಗಿ ಇದಕ್ಕೆ ಹಲಸಿನ ಮರವನ್ನು ಬಳಸುತ್ತಿದ್ದರು. ಗುತ್ತು ಬೀಡುಗಳಲ್ಲಿ ಕಂಚಿನಿಂದ ತಯಾರಿದ ಈ ರೀತಿಯ ಸೌಟುಗಳನ್ನು ಬಳಸಲಾಗುತ್ತಿತ್ತು. ತುಳುವರ ಬದುಕಿನಲ್ಲಿ ಸೌಟಿಗೆ ಪವಿತ್ರ ಸ್ಥಾನ ವಿದೆ. ಅಪರೂಪಕ್ಕೆ ಸೌಟಿನ ಹಿಡಿಯ ಕೊನೆಯ ಭಾಗದಲ್ಲಿ ಸೂರ್ಯಚಂದ್ರರ ಚಿತ್ತಾರವನ್ನು ಕೆತ್ತಲಾಗುತ್ತಿತ್ತು. ಸಾಮಾನ್ಯವಾಗಿ ಹೊಸ ಅಕ್ಕಿ ಊಟ ಸಂದರ್ಭದಲ್ಲಿ ಎಲ್ಲಾ ಖಾದ್ಯಗಳನ್ನು ಬಡಿಸುವುದಕ್ಕೆ ಹೊಸ ಸೌಟನ್ನೆ ಬಳಸುತ್ತಿದ್ದರು. ಇದು ಈ ರೀತಿಯ ಸೌಟುಗಳನ್ನು ಎಲ್ಲಾ ವರ್ಗದ ಜನರು ಸಮಾನವಾಗಿ ಬಳಸುತ್ತಿದ್ದುದನ್ನು ಗಮನಿಸುತ್ತೇವೆ. ಇದರಲ್ಲಿ ಮೇಲು ಕೀಳೆಂಬ ತಾರತಮ್ಯವಿರಲಿಲ್ಲ. ಇವು ಆರೋಗ್ಯಕ್ಕೆ ಯಾವ ರೀತಿಯಲ್ಲೂ ಮಾರಕವಲ್ಲ. ಹಿಂದಿನ ಕಾಲದಲ್ಲಿ ಅನುಕೂಲವಂತರು ತಾಮ್ರ ಅಥವಾ ಹಿತ್ತಾಳೆಯಿಂದ ತಯಾರಿಸಲ್ಪಟ್ಟ ಸೌಟುಗಳನ್ನು ಬಳಸುತ್ತಿದ್ದರಾರೂ ಇದಕ್ಕೆ ಕಿಲುಬು ಹಿಡಿದು ಆರೋಗ್ಯಕ್ಕೆ ಮಾರಕವಾಗುವ ಸಾಧ್ಯತೆ ಇರುತ್ತಿತ್ತು. ಮುಖ್ಯವಾಗಿ ತಾಮ್ರದ ಸೌಟುಗಳಿಗೆ ಕಲಾಯಿ ಹಾಕುವುದು ಅನಿವಾರ್ಯವಾಗುತ್ತಿತ್ತು. ಆದರೆ ಇಂದು ಕಲಾಯಿ ಹಾಕುವ ಕ್ರಮವೇ ಪೂರ್ತಿಯಾಗಿ ನಿಂತು ಹೋಗಿದೆ. ಆಧುನಿಕ ದಿನಗಳಲ್ಲಿಯೂ ಮೇಲುಕೀಳುಗಳೆಂಬ ಭೇದಭಾವವಿಲ್ಲದೆ ಗೆರಟೆ ಸೌಟುಗಳನ್ನು ಬಳಸಲಾಗುತ್ತಿದೆ. ಈ ಸೌಟುಗಳನ್ನು ಸಿದ್ದ ಪಡಿಸುವಾಗಲೂ ಹಲವು ನಿಯಮಗಳಿವೆ.

ಮಣೆ

ಹಿಂದಿನ ಕಾಲದಲ್ಲಿ ಸಾಮಾನ್ಯರಿಂದ ಹಿಡಿದು ಅಸಾಮಾನ್ಯರ ವರೆಗೆ ಮಣೆಗೆ ಒಂದು ವಿಶೇಷವಾದ ಸ್ಥಾನ ಮಾನವಿತ್ತು. ಇಂದು ಕೂಡ ಆಡುನುಡಿಯಲ್ಲಿ "ಅವನ ಮಾತಿಗೆ ನಾನು/ ಅವರು ಮಣೆ ಹಾಕಲಿಲ್ಲ" ಎನ್ನುವ ಮಾತಿದೆ. ಇಲ್ಲಿ ಮಣೆಯೆಂದರೆ ಗೌರವ ಸ್ಥಾನ ನೀಡುವಿಕೆ. ಸಾಮಾನ್ಯವಾಗಿ ನೋಡುವುದಿದ್ದರೆ ಮಣೆ ಒಂದು ಸುಮಾರು ಅರ್ಧ ಅಡಿ ಎತ್ತರ ಮುಕ್ಕಾಲು ಅಡಿ ಅಗಲ, ಒಂದೂವರೆ ಅಡಿ ಉದ್ದದ ಮರದ ಕುಳಿತುಕೊಳ್ಳುವ ಪೀಠ. ಒಂದು ಮನೆಗೆ ಅತಿಥಿಯಾಗಿ ಹೋದರೆ ಈಗಿನ ಹಾಗೆ ಪೀಠೋಪಕರಣಗಳು ಇರುತ್ತಿರಲಿಲ್ಲ. ಸಾಮಾನ್ಯವಾಗಿ ಮಣ್ಣಿನಿಂದಲೇ ರಚಿತವಾದ ಸೆಗಣಿ ಸಾರಿದ ದಿಡ್ಡೆಗಳು, ಜಗಲಿಗಳು ಇಂಥ ಮನೆಗೆ ಅತಿಥಿಯಾಗಿ ಹೋದರೆ ಮೊದಲಿಗೆ ಸಿಗುವ ಗೌರವವೆಂದರೆ ಬಂದ ಅಥಿತಿಗೆ ಮಣೆ ನೀಡುವುದು. ಈ ಮಣೆ ಈಗಾಗಲೇ ಹೇಳಿದ ಹಾಗೆ ಗೌರವ ಸ್ಥಾನವನ್ನು ಪಡೆದಿರುತ್ತದೆ. ಹಿಂದಿನ ಕಾಲದ ಜಾತಿವ್ಯವಸ್ಥೆಯಂತೆ ತಮಗಿಂತ ಕೆಳವರ್ಗದ ವ್ಯಕ್ತಿಯೋರ್ವ ಮನೆಗೆ ಬಂದರೆ ಅಲ್ಲಿ ಪೀಠೋಪಕರಣಗಳಿದ್ದರೂ ಪ್ರತ್ಯೇಕ ಮಣೆಕೊಟ್ಟು ಕುಳಿತುಕೊಳ್ಳುವಂತೆ ಹೇಳಲಾಗುತ್ತಿತ್ತು. ಹಿಂದೆ, ಆಡಳಿತ ವ್ಯವಸ್ಥೆಯ ಉಸ್ತುವಾರಿಯನ್ನು ನೋಡುತ್ತಿದ್ದ ಮನೆಯ ಯಜಮಾನ ಅಥವಾ ಪ್ರಾಂತ್ಯಾಧಿಕಾರಿ ಕುಳಿತುಕೊಳ್ಳಲಾಗುತ್ತಿದ್ದ ಪೀಠೋಪಕರಣಕ್ಕೂ ಪಟ್ಟದ ಮಣೆ ಎನ್ನಲಾಗುತ್ತಿತ್ತು.

ಕಲೆಂಬಿ

ನಿಘಂಟುವಿನಲ್ಲಿ ಮರದ ಅಥವಾ ಕಲ್ಲಿನ ದೊಡ್ಡ ಪೆಟ್ಟಿಗೆ ಎಂದು ಉಲ್ಲೇಖಿಸಲಾಗಿದೆ. ಕಲೆಂಬಿಯು ತುಳುವರ ಮನೆಯ ಪ್ರತಿಷ್ಠೆಯನ್ನು ಸಾರಿ ಹೇಳುವ ಸಾಧನ. ಪ್ರತಿಯೊಂದು ಗುತ್ತು, ಬೀಡುಗಳಲ್ಲಲ್ಲಿ ಇದು ಇದ್ದೇ ಇರುತ್ತದೆ. ಆರ್ಥಿಕವಾಗಿ ಬಲಿಷ್ಠರೆನಿಸಿ ಕೊಂಡರೆ, ಕಲೆಂಬಿಯೊಂದನ್ನು ನಿರ್ಮಿಸಿ ತಮ್ಮ ಆರ್ಥಿಕ ಶಕ್ತಿಯನ್ನು ಪ್ರದರ್ಶಿಸುತ್ತಾರೆ. ಇದನ್ನು ಹಲಸು ಅಥವಾ ತೇಗದ ಮರದಿಂದಲೇ ಹೆಚ್ಚಾಗಿ ರಚಿಸುವುದು. ಇದು ಪ್ರತಿಷ್ಠಿತ ತುಳುವರ ಮನೆಯ ಬಹುಪಯೋಗಿ ಸಾಧನ. ಸಾಮಾನ್ಯವಾಗಿ ಕಲ್ಲಕಲೆಂಬಿ ಎಂದೇ ಹೇಳುವುದು. ಕಲ್ಲಕಲೆಂಬಿ ಎಂದಿದ್ದರೂ ಮರದಿಂದಲೇ ರಚಿತವಾದ ಸಾಧನವು ಅಧ್ಯಯನ ಸಂದರ್ಭದಲ್ಲಿ ದೊರೆತಿರುತ್ತದೆ (ಕಲ್ಲಕಲೆಂಬಿ=ಕಲ್ಲು+ಕಲೆಂಬಿ, ಅಂದರೆ ಪ್ರಾಚೀನದಲ್ಲಿ ಕಲ್ಲಿನಿಂದ ರಚಿತವಾದ ಕಲೆಂಬಿಯು ಇದ್ದಿರಬಹುದು ಎಂದು ನಿಷ್ಪತ್ತಿಯನ್ನು ಹೇಳಬಹುದು. ಇನ್ನೊಂದು ರೀತಿಯಲ್ಲಿ ಕ್ಷೇತ್ರ ಕಾರ್ಯ ಸಂದರ್ಭದಲ್ಲಿ ದೊರೆತ ಮಾಹಿತಿಯನ್ನು ಆಧರಿಸಿ ಹೇಳುವುದಾದರೆ– ಕಲ್ವ ಕೀಲಿ ಪೆಟ್ಟಿಗೆ ಅಂದರೆ ಈ ಕಲೆಂಬಿಯ ರಚನೆಯ ಕೌಶಲ್ಯವನ್ನು ಹೇಳುತ್ತದೆ. ಯಜಮಾನ ಮಾತ್ರ ಬಳಸುವ ಮತ್ತು ತೆರೆಯುವ ತಂತ್ರಗಾರಿಕೆಯನ್ನು ಕಾಣಬಹುದು). ಇದನ್ನು ಬಟ್ಟೆಬರೆ, ಆಭರಣ ಅಲ್ಲದೆ ಇತರ ಮೌಲ್ಯಯುತ ವಸ್ತುಗಳನ್ನು ಜೋಪಾನವಾಗಿಡಲು ಬಳಸುತ್ತಾರೆ. ಹೆಚ್ಚಿನ ಪ್ರಮುಖ ಪಾಡ್ದನಗಳಲ್ಲಿ ಕಲ್ಲಕಲೆಂಬಿಯ ಉಲ್ಲೇಖ ಬಂದೇ ಬರುತ್ತದೆ. ಉದಾಹರಣೆಗೆ ಸಿರಿ ಪಾಡ್ದನ, ಕೋಟಿ ಚೆನ್ನಯ ಪಾಡ್ದನಗಳಲ್ಲಿ ಇದರ ಉಲ್ಲೇಖ ಗಮನೀಯ. ಇದನ್ನು ಮನೆಯ ಚಾವಡಿಯಲ್ಲಿ ಇರಿಸಿರುತ್ತಾರೆ. ಇದು ಸಾಧಾರಣವಾಗಿ ೬ ಅಡಿ ಉದ್ದ, ೪ ಅಡಿ ಅಗಲವನ್ನು ಹೊಂದಿರುತ್ತದೆ. ಇದನ್ನು ರಚಿಸುವಾತ, ತನ್ನ ಅಭಿರುಚಿಗೆ ಸರಿಯಾಗಿ ಕುಸುರಿ ಕೆಲಸವನ್ನು ಅಭಿವ್ಯಕ್ತಿಗೊಳಿಸಿ ತನ್ನ ಸೌಂದರ್ಯ ಪ್ರಜ್ಞೆಯನ್ನು ಮೆರೆಯುತ್ತಾನೆ. ಈಗಾಗಲೆ ಹೇಳಿದ ಹಾಗೆ, ಇದರ ಒಳಭಾಗದಲ್ಲಿ ಬಟ್ಟೆಬರೆ, ಆಭರಣಗಳು ಹಾಗೂ ಇತರೆ ಸಾಮಾನುಗಳನ್ನಿಡಲು ಬೇರೆ ಬೇರೆ ಅಂಕಣಗಳಿವೆ. ನಗನಗದುಗಳನ್ನಿಡುವ ಅಂಕಣಕ್ಕೆ ವಿಶಿಷ್ಟವಾದ ಕಳ್ಳ ಬೀಗವನ್ನು ಅಳವಡಿಸಿರುತ್ತಾರೆ. ಇದನ್ನು ಮುಖ್ಯವಾಗಿ ಮನೆಯ ಯಜಮಾನ ಮಲಗುವುದಕ್ಕಾಗಿಯೂ ಬಳಸುವುದಿದೆ. ಕೆಲವೊಂದು ಸಂದರ್ಭಗಳಲ್ಲಿ ಇದಕ್ಕೆ 'ಸೈರನ್' ಬೀಗವನ್ನು ಅಳವಡಿಸುವುದಿದೆ. ಇದರ ಬೀಗದ ಗೊಂಚಲು ಮನೆಯ ಯಜಮಾನ/ನಿ ಯ ಕೈಯಲ್ಲಿಯೆ ಇರುತ್ತದೆ.

ಪತ್ತಾಸ್

ಇದು ಕೂಡಾ ಪ್ರತಿಷ್ಠಿತ ತುಳುವರ ಮನೆಯಲ್ಲಿ ಸಾಮಾನ್ಯವಾಗಿ ಬಳಕೆಯಾಗುತ್ತಿದ್ದ ಮರದ ಸಾಧನ. ಇದನ್ನು ಕೂಡಾ ಹಲಸು ಅಥವಾ ತೇಗದ ಮರದಿಂದಲೇ ರಚಿಸುತ್ತಿದ್ದರು. ಇದನ್ನು ಮುಖ್ಯವಾಗಿ ಅಕ್ಕಿ ಮತ್ತು ಭತ್ತವನ್ನು ಹಾಗೂ ಇತರ ದಾಸ್ತಾನು ಮಾಡಲು ಬಳಸುತ್ತಿದ್ದರು.ಇದರಲ್ಲಿ ಕೂಡಾ ಅಂಕಣಗಳಿದ್ದು, ಕೆಲವೊಂದು ಅಂಕಣಗಳಿಗೆ ಬೀಗವನ್ನು ಅಳವಡಿಸುತ್ತಿದ್ದರು. ಇದನ್ನು ಮಲಗಲು ಬಳಸುತ್ತಿದ್ದರು. ಕಲೆಂಬಿಯಂತೆ ಇದರಲ್ಲಿ ಧರಿಗಳಿರುವುದಿಲ್ಲ. ಬೋಳಾಗಿ ಸಾಮಾನ್ಯ ಮರದ ಪೆಟ್ಟಿಗೆಯಂತೆ ಕಾಣುತ್ತದೆ. ಇದನ್ನು ಮನೆಯೊಳಗೆ ಒಂದು

ಭಾಗದಿಂದ ಇನ್ನೊಂದು ಭಾಗಕ್ಕೆ ಎತ್ತಿಡಲು ಯುವಕರೆ ಆಗಬೇಕು. ಮನೆಯ ಪಡಸಾಲೆಯಲ್ಲಿ ಇಡಲಾಗುತ್ತಿದ್ದು, ಕುಳಿತುಕೊಳ್ಳಲು ಬಳಸುತ್ತಿದ್ದರು. ಇದರ ಗಾತ್ರ ಮನೆಯ ಅಂತಸ್ತಿಗೆ ಸರಿಯಾಗಿರುತ್ತಿತ್ತು. ಸಾಮಾನ್ಯವಾಗಿ ೨-೩ ಫೀಟು ಎತ್ತರ, ೪-೬ ಅಡಿಗಳಷ್ಟು ಉದ್ದ, ೨-೪ ಅಡಿಗಳಷ್ಟು ಅಗಲವಿರುತ್ತಿತ್ತು. ಭತ್ತ ಸಂಗ್ರಹಿಸಿಡಲು ಬೃಹತ್ ಗಾತ್ರದ ಪತ್ತಾಯಗಳನ್ನು ನಿರ್ಮಿಸುವುದಿತ್ತು. ಸಂಪಾಜೆಯ ದೇವಿಪ್ರಸಾದರ ಮನೆಯಲ್ಲಿ ಆಳೆತ್ತರದ ಕೆಲವು ಪತ್ತಾಯಗಳನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ದಾಖಲಿಸಲಾಗಿದೆ. ಇದರ ರಚನೆಯಲ್ಲಿ ಕುಸುರಿ ಕೆಲಸಕ್ಕೆ ಪ್ರಾಧಾನ್ಯತೆ ಇಲ್ಲ.

ಕಮೋಡ್

ಮೂಲತ: ಕೊಮೊಡ್/ಕಮೊಡಾ ತುಳುವರದಲ್ಲ ಎಂಬ ವಾದ ಇದೆ. ಇದು ವಸಾಹತುಶಾಹಿಗಳ ಕೊಡುಗೆ ಎಂದು ತಿಳಿಯಲಾಗಿದೆ. ಅದರಲ್ಲಿಯೂ ವೆಸ್ಟರ್ನ ಕೊಮೊಡ್ ಎಂದು ಹೇಳಲಾಗುವ ಮಂಡಿಯೂರಿ ಬಳಸುವ ಕೊಮೊಡ್ ವಿದೇಶಿಗರದ್ದೆ ಎಂದು ನಂಬಿದ್ದೇವೆ. ಕೊಮೊಡದ ಬಳಕೆ ಸಾರ್ವತ್ರಿಕವಾದುದು. ವೆಸ್ಟರ್ನ್ ಕೊಮೊಡ್‌ದ ಬಳಕೆ ಮುಖ್ಯವಾಗಿ ಅನಾರೋಗ್ಯಪೀಡಿತರ/ವಯಸ್ಸಾದವರ ಅನುಕೂಲಕ್ಕಾಗಿ ರಚನೆಯಾಗಿರುವುದು ಎನ್ನುವುದರಲ್ಲಿ ಸಂದೇಹವಿಲ್ಲ. ಪ್ರಾಯ ಸಂದ ಹಿರಿಯರಿದ್ದ ಮನೆಯಲ್ಲಿ ಸಾಮಾನ್ಯ ಸ್ಟೂಲ್ ಅಥವಾ ಕುರ್ಚಿಗೆ ರಂಧ್ರವನ್ನು ಮಾಡಿ ಅದರ ಕೆಳಭಾಗದಲ್ಲಿ ಮಲಶೇಖರಣೆಗೆ ನೀರು ತುಂಬಿದ ಪಾತ್ರೆಯನ್ನಿಡುತ್ತಾರೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಮಂಗಳೂರಿನ ಕುತ್ತಾರು ಸಮೀಪದ ಕೋಟೆದಡಿಗುತ್ತಿನ ಮನೆಯಲ್ಲಿ ಸುಮಾರು ೧೫೦ ವರ್ಷ ಹಿಂದಿನ ಆಧುನಿಕ ಕೋಮೋಡನ್ನು ಹೋಲುವ ತೇಗದ ಮರದಿಂದ ರಚಿತವಾದ ೪ ಕಾಲನ್ನು ಹೊಂದಿ ೨ ಆಡಿ ಎತ್ತರದ ವೃತ್ತಾಕಾರದ ಪೂರ್ಣ ಜೀರ್ಣಾವಸ್ಥೆಯಲ್ಲಿದ್ದ ಕೊಮೊಡ ಒಂದನ್ನು ಪತ್ತೆ ಹಚ್ಚಲಾಯಿತು. ಇದೇ ಮಾದರಿ ಮಣ್ಣು ಮತ್ತು ಕಲ್ಲಿನಿಂದ ನಿರ್ಮಿತವಾದ ಕೊಮೊಡ ಬಾರಕೂರಿನಲ್ಲಿ ೧೫ ನೇಯ ಶತಮಾನಕ್ಕೆ ಸೇರಿದ ವಿಜಯನಗರ ಕಾಲದ ಪ್ರಾಂತ್ಯಾಧಿಕಾರಿಗಳ ಬಂಗಲೆಗಳ ಉತ್ಖನನ ಸಂದರ್ಭದಲ್ಲಿ ದೊರೆತಿದೆ. ಇದರಿಂದ ಕೊಮೊಡವು ವಿದೇಶಿಗರಿಂದಾಗಿ ನಮಗೆ ಪರಿಚಯಿಸಲ್ಪಟ್ಟಿತ್ತು ಎಂಬ ವಾದವನ್ನು ಸಾರಾಸಗಟಾಗಿ ತಳ್ಳಿ ಹಾಕಬಹುದು. ವಸಾಹತು ಪೂರ್ವದಲ್ಲೆ ಇದರ ಬಳಕೆ ನಮ್ಮಲ್ಲಿತ್ತು ಎನ್ನುವುದು ನಿರ್ವಿವಾದ.[೬]

ತಾಂಬೂಲ ಪರಿಕರಗಳು

ವೀಳ್ಯದೆಲೆ, ಅಡಿಕೆ, ಸುಣ್ಣ ಇವಿಷ್ಟು ತಾಂಬೂಲಕ್ಕೆ ಬೇಕಾದರೆ ಇವುಗಳನ್ನು ಇಡಲು, ಗುದ್ದಲು, ಉಗಿಯಲು ಪ್ರತ್ಯೇಕವಾದ ಪರಿಕರಗಳಿದ್ದವು. ಇವುಗಳಿಗೆ ತುಳುವಿನಲ್ಲಿ ಕುಬಾಲ್ ಪೆಟ್ಟಿಗೆ, ಹರಿವಾಣ, ಪೀಕದಾನಿ, ಉಜಿಡೆ ಎಂದು ಕರೆಯಲಾಗುತ್ತಿತ್ತು.

ವೀಳ್ಯದೆಲೆ

ಸ್ಕಂದ ಪುರಾಣದ ನಾಗರಖಂಡದಲ್ಲಿ ತಾಂಬೂಲೋತ್ಪತ್ತಿಯ ವರ್ಣನೆ ಇದೆ. "ನಾಗಲೋಕಸ್ಯವಲ್ಲೀ" ಎಂದು ಈ ಗ್ರಂಥದಲ್ಲಿ ಉಲ್ಲೇಖಿಸುವುದರಿಂದ ನಾಗಲೋಕವೆಂದು ಕರೆಯಲ್ಪಡುತ್ತಿದ್ದ ತುಳುನಾಡಿನಲ್ಲಿ ವೀಳ್ಯದ ಹುಟ್ಟು ಆಗಿರಬಹುದೆಂದು ಊಹಿಸಬಹುದಾಗಿದೆ.[೭] ಆಫ್ರಿಕಾದ ಮೊರೊಕ್ಕೊದಿಂದ ಕ್ರಿ.ಶ. ೧೩೩೩ರಲ್ಲಿ ಭಾರತಕ್ಕೆ ಬಂದು ಮಂಗಳೂರು, ಹೊನ್ನಾವರ ಬಂದರುಗಳನ್ನು ಕಂಡಿದ್ದ ಪ್ರವಾಸಿ ಇಬ್–ನೆ–ಬತೂತ ವೀಳ್ಯದೆಲೆಯ ಬಳ್ಳಿಯನ್ನು ಕಂಡು ದ್ರಾಕ್ಷಿ ಬಳ್ಳಿಗೆ ಹೋಲಿಸಿದ್ದಾನೆ.

ತುಳುನಾಡಿನ ಹಳ್ಳಿಗಳಲ್ಲಿ ಮನೆಗಳೆದುರು ಇರುವ ಹಲಸು, ಮಾವು, ತೆಂಗಿನ ಮರಗಳಿಗೆ ವೀಳ್ಯದೆಲೆಯ ಬಳ್ಳಿಯನ್ನು ಹಬ್ಬಿ ಬೆಳೆಸಲಾಗುತ್ತಿತ್ತು. ಈ ವೀಳ್ಯದೆಲೆಯು ಶುಭಾವಸರಗಳೆಲ್ಲದರಲ್ಲಿಯೂ ಬಳಕೆಯಾಗುತ್ತಿದ್ದುದು ಮಾತ್ರವಲ್ಲದೆ, ಜೀವನಾವರ್ತನದ ಪ್ರತಿ ಹಂತಗಳಲ್ಲಿಯೂ ತುಳುವರ ಜೊತೆಯಾಗುತ್ತಿತ್ತು. ಮಗುವಿಗೆ ಮದ್ದಾಗಿ ಬಳಕೆಯಾಗುತ್ತಿದ್ದ ವೀಳ್ಯವು ಅಡಕೆಯೊಡನೆ ವ್ಯಕ್ತಿ ಬೆಳೆಯುವ ಸಂದರ್ಭದಲ್ಲಿ ಕೈಯಲ್ಲಿ ಹಿಡಿಯಬೇಕಾದ ಶುಭವಸ್ತುವಾಗಿ ಬಳಸಲ್ಪಡುತ್ತಿತ್ತು.

"ಮಾತು ಮುಗಿಸಿದರು, ಮುಹೂರ್ತ ಕಟ್ಟಿದರು, ಅಡಿಕೆ ವೀಳ್ಯ ಬದಲಿಸಿಕೊಂಡರು, ಮದುವೆಯ ನಿಶ್ಚಯ ಮಾಡಿದರು"[೮] ತುಳುವರ ಮದುವೆ ನಿಶ್ಚಯ ಪ್ರಕ್ರಿಯೆಯಲ್ಲಿ ವೀಳ್ಯ ಬದಲಾಯಿಸಿಕೊಳ್ಳುವುದು ಪ್ರಮುಖ ಅಂಗ. ಪಾಡ್ದನಗಳಲ್ಲಿ ಮದುವೆಗೆ ವೀಳ್ಯದೆಲೆಯ ಚಪ್ಪರವನ್ನು ಹಾಕುತ್ತಿದ್ದ ಬಗೆಗೆ ಉಲ್ಲೇಖಗಳು ದೊರೆಯುತ್ತವೆ:

"ಆ ಸಮಯದಲ್ಲಿ ಬಸರೂರು ಬತ್ತಕೇರಿ ಅರಮನೆಯಲ್ಲಿ ಬೆಲ್ಲದಲ್ಲಿ ಒಲೆ ಹಾಕಿಸಿದರು, ಪಂಚವಳ್ಳಿ ವೀಳ್ಯದಲ್ಲಿ ಚಪ್ಪರ ಹಾಕಿಸಿದರು ತಳಿರು ತೋರಣ ಕಟ್ಟಿಸಿದರು".[೯] ಮದುಮಕ್ಕಳು ಮದುವೆ ವಿಧಿಗಳ ಆರಂಭದಿಂದ ಕೊನೆಯವರೆಗೆ ಐದು ವೀಳ್ಯದೆಲೆ ಹಾಗೂ ಒಂದು ಅಡಿಕೆಯನ್ನು ತಂತಮ್ಮ ಕೈಯಲ್ಲಿ ಹಿಡಿದುಕೊಳ್ಳಬೇಕಾಗಿತ್ತು. ಇದು ಅವರು ವ್ರತಬದ್ಧರೆಂಬುದನ್ನು ಸೂಚಿಸುವಂತಿದೆ. ಪ್ರೌಢಾವಸ್ಥೆಯಲ್ಲಿ ವೀಳ್ಯದೊಡನೆ ಹಿಂದಿನ ತುಳುವರ ನಿತ್ಯ ಸಂಪರ್ಕವಿತ್ತು. ವೀಳ್ಯ ಮೆಲ್ಲುವುದರಲ್ಲಿ ವರ್ಗಬೇಧವಿರಲಿಲ್ಲ. ಸಾವಿನ ಸಂದರ್ಭದಲ್ಲಿಯೂ ವೀಳ್ಯವನ್ನು ಜಜ್ಜಿ, ಶವದ ಬಾಯಿಗೆ ಇಡುವ ಕ್ರಮವಿದೆ.

ಪೀಕದಾನಿ

ಪೀಕದಾನಿಗೆ ತುಳುವಿನಲ್ಲಿ 'ಪಡ್ಯ' ಎಂದು ಹೇಳಲಾಗುತ್ತದೆ ಹಾಗೂ ಇದು ಮುಖ್ಯವಾಗಿ ಎಲೆ ಅಡಿಕೆ ತಿನ್ನುವ ಸಂದರ್ಭದಲ್ಲಿ ಬಳಕೆಯಾಗುತ್ತಿತ್ತು. ಪೀಕದಾನಿಗಳು ಪ್ರತಿಷ್ಠೆಯ ಸಂಕೇತವಾಗಿಯೂ ಬಳಸಲ್ಪಡುತ್ತಿದ್ದವು. ಎರಡು, ಎರಡೂವರೆ ಅಡಿ ಎತ್ತರದ ಪೀಕದಾನಿಗಳೂ ಬಳಕೆಯಲ್ಲಿದ್ದವು. ಎಲೆ ಅಡಿಕೆಗಳನ್ನು 'ಬಚ್ಚಿರೆದ ಪೆಟ್ಟಿಗೆ'ಯಲ್ಲು ಇಡಲಾಗುತ್ತಿತ್ತು. ಅದರೊಂದಿಗೆ ಸುಣ್ಣದ ಕರಡಿಗೆ, ಅಡಕತ್ತರಿಗಳೂ, ಹೊಗೆಸೊಪ್ಪಿನ 'ಅಂಡೆ'ಯೂ ಇರುತ್ತಿದ್ದವು. ಈ ಪೆಟ್ಟಿಗೆಯನ್ನು 'ಕುಬಲ್ ಪೆಟ್ಟಿಗೆ' ಎಂದೂ ಕರೆಯಲಾಗುತ್ತಿತ್ತು. ಸಾಮಾನ್ಯವಾಗಿ ಕುಬಲ್

ಪೆಟ್ಟಿಗೆಯು ಆಭರಣಗಳನ್ನಿಡಲು ಅಥವಾ ಗಲ್ಲಾ ಪೆಟ್ಟಿಗೆಯಾಗಿಯೂ ಬಳಸಲ್ಪಡುತ್ತಿತ್ತು. ಪುಣೆಯ ಕೇಳ್ಕರ್ ಮ್ಯೂಸಿಯಂನಲ್ಲಿ ನೂರಾರು ರೀತಿಯ ಅಡಕತ್ತರಿಯ ವೈವಿಧ್ಯಮಯ ಕೆತ್ತನೆ ಹಾಗೂ ರಚನೆಯನ್ನು ನೋಡಬಹುದು. ವೀಳ್ಯದೆಲೆ, ಅಡಿಕೆಗಳನ್ನು ತಮ್ಮ ಜೊತೆಯಲ್ಲೇ ಇರಿಸಿಕೊಳ್ಳಲು ಸಂಚಿಗಳನ್ನು ಬಳಸಲಾಗುತ್ತಿತ್ತು. ಇವುಗಳನ್ನು ಬಟ್ಟೆಯಿಂದ ಅಥವಾ ಮುಂಡೇವು ಎಲೆಯಿಂದ ತಯಾರಿಸಲಾಗುತ್ತಿತ್ತು. ರಾತ್ರಿ ಹೊತ್ತು ಉಚ್ಚೆಹೊಯ್ಯಲು ಹೊರಗೆ ಹೋಗಬೇಕಾದಂತಹ ಸಂದರ್ಭಗಳಲ್ಲಿ ಅದಕ್ಕೆ ಪರ್ಯಾಯವಾಗಿ ಮನೆಯೊಳಗೆ ಉಚ್ಚೆ ಹೊಯ್ಯಲು ಬಳಸುತ್ತಿದ್ದ ಪಾತ್ರೆಗೂ ಪಡ್ಯವೆಂಬ ಹೆಸರಿತ್ತು. {ಪಡಿಕೆ= ವರ್ಜ್ಯವಾಗಿರುವುದು– ಇದನ್ನು ಒಂದೆಡೆ ಇಟ್ಟು ಹೊರಹಾಕಲು ಬಳಸುವ ಪಾತ್ರೆಗೆ 'ಪಡ್ಯ'ವೆಂಬ ಹೆಸರು ಬಂದಿರಬಹುದು.} ಆಂಗ್ಲ ಭಾಷೆಯ ಕೊಮೊಡ್ ಪದಕ್ಕೆ ಪರ್ಯಾಯವಾಗಿ ತುಳುವಿನಲ್ಲಿ 'ಪಡ್ಯ'ವೆಂಬ ಪದ ಬಳಕೆಯಲ್ಲಿತ್ತು–ಎಂಬ ಮಾಹಿತಿ ದೊರೆತಿದೆ. [೧೦]

ಜಾರು ಹರಿವಾಣ

ಇದರ ಕೆಳಭಾಗದಲ್ಲಿ ಚಕ್ರಗಳಿದ್ದು, ಯಜಮಾನ ಕುಳಿತಲ್ಲಿಂದ ಇನ್ನೊಂದೆಡೆಗೆ ಜಾರಿಸುವ ಅಥವಾ ಸಭೆ ಸಮಾರಂಭಗಳಲ್ಲಿ ಒಬ್ಬರೆಡೆಯಿಂದ ಇನ್ನೊಬ್ಬರೆಡೆಗೆ ಜಾರಿಸುವ ವ್ಯವಸ್ಥೆಗಾಗಿ ಇದನ್ನು ಬಳಸಲಾಗುತ್ತಿತ್ತು.

ವೀಳ್ಯದೆಲೆ ಗುದ್ದುವ ಕಲ್ಲು

ಉಜಿಡೆ ಕಲ್ಲು–ಎಂದು ಕರೆಯಲ್ಪಡುವ ಈ ಕಲ್ಲನ್ನು ಹಲ್ಲಿಲ್ಲದ ಮುದುಕರು ವೀಳ್ಯದೆಲೆ, ಅಡಿಕೆ, ಸುಣ್ಣಗಳನ್ನು ಸೇರಿಸಿ ಗುದ್ದಿ ತಿನ್ನಲು ಬಳಸುತ್ತಿದ್ದರು. ಇದರ ವಿನ್ಯಾಸವು ರುಬ್ಬುವ ಕಲ್ಲಿನ ಸಣ್ಣ ಸ್ವರೂಪದಲ್ಲಿತ್ತು.

ಕಾಲಕಳೆದಂತೆ, ಜೀವನ ಕ್ರಮ ಬದಲಾದಂತೆ, ಅಂದಂದಿಗೆ ತಕ್ಕಂತೆ ಮಾರ್ಪಾಟುಗಳನ್ನು ಪಡೆದಿರುವ ಈ ವಸ್ತುಗಳ ಜಾಗದಲ್ಲಿ ಮತ್ತೊಂದು ಹುಟ್ಟಿಕೊಂಡಿರಬಹುದು, ವಿಭಿನ್ನ ರೂಪ ವ್ಯತ್ಯಾಸಗಳನ್ನು ಪಡೆದಿರಬಹುದು.[೧೧]

ಅಳತೆ ಮಾಡುವ ಸಾಧನಗಳು

ದಶಮಾಂಶ ಪದ್ಧತಿಯ ಅಳತೆ ಹಾಗೂ ಹಣದ ವ್ಯವಹಾರಗಳು, ಅಸ್ತಿತ್ವಕ್ಕೆ ಬರುವ ಪೂರ್ವದಲ್ಲಿ, ನಮ್ಮ ದೇಶದಲ್ಲಿ ನೂರಾರು ರೀತಿಯ ಅಳತೆಯ ವಿಧಾನಗಳು ರೂಢಿಯಲ್ಲಿದ್ದವು. ದವಸ ಧಾನ್ಯಗಳನ್ನು ಅಳತೆ ಮಾಡಲು ಕೋರ್ಜಿ, ಮುಡಿ, ಕಳಸೆ, ಸೇರು, ಪಾವುಗಳೆಂಬ ಪ್ರಮಾಣಗಳಿದ್ದವು. ೪೨ ಮುಡಿ = ಒಂದು ಕೋರ್ಜಿ, ಒಂದು ಮುಡಿಗೆ ಮೂರು ಕಳಸೆ (೪೨ ಸೇರು), ಒಂದು ಕಳಸೆಗೆ ಹದಿನಾಲ್ಕು ಸೇರು, ಒಂದು ಸೇರು ಎಂದರೆ ನಾಲ್ಕು ಪಾವು, ಒಂದು ಪಾವು ಎರಡು ಕುಡ್ತೆ, ಒಂದು ಬಳ್ಳ ಮೂರು ಪಾವು. ಅಕ್ಕಿಯನ್ನು ಮಾಪನ ಮಾಡಿ ಎಷ್ಟು ಬೇಕೊ ಅಷ್ಟೆ ಅಡುಗೆಗೆ ಉಪಯೋಗಿಸುತ್ತಿದ್ದರು. ಅಲ್ಲದೆ, ಗದ್ದೆಯ ಕೆಲಸಮಾಡಿದ ಆಳುಕಾಳುಗಳಿಗೆ ಅಕ್ಕಿ ಅಥವಾ ಭತ್ತವನ್ನೇ ಸಂಬಳ ರೂಪದಲ್ಲಿ ನೀಡುತ್ತಿದ್ದರು. ಹೆಚ್ಚಾಗಿ ಈ ಮಾಪನಗಳನ್ನು ಮರದಿಂದ ತಯಾರಿಸುತ್ತಿದ್ದರು.

ಅದರಲ್ಲೂ ವಿಶೇಷವಾಗಿ ಹೆಬ್ಬಲಸಿನಿಂದ ತಯಾರಿಸುತ್ತಿದ್ದರು. ಯಾಕೆಂದ್ರಎ ಇದು ಗಟ್ಟಿ ಮಾತ್ರವಲ್ಲ, ಕೆಳಗೆ ಬಿದ್ದರೆ ತುಂಡಾಗುವುದಿಲ್ಲ. ಬಿದಿರಿನಿಂದಲೂ ಪಾವು ಮತ್ತು ಸೇರುಗಳನ್ನೂ ಮಾಡುತ್ತಿದ್ದರು.

ಎಣ್ಣೆ /ದ್ರವ ಪದಾರ್ಥ(ಹಾಲನ್ನು, ಎಣ್ಣೆಯನ್ನು ಮಾಪನ ಮಾಡಲು ಬಳಸುವ ಸಾಧನ)

ಒಂದು ಮಣ–೧೦ ಕುತ್ತಿ

ಒಂದು ಕುತ್ತಿ= ೯ ಕುಡ್ತೆ

ಕಳಸೆ, ಸೇರು, ಪಾವುಗಳನ್ನು ಕವುಚಿ ಹಾಕಬಾರದು. ಅದನ್ನು ಯಾವ ಕಾರಣಕ್ಕೂ ತುಳಿಯಬಾರದು. ಸಮೃದ್ಧಿಯ ಸಂಕೇತವೆಂದು ತಿಳಿಯಲಾಗಿತ್ತು.

ಕಳಸೆ, ಸೇರು, ಪಾವು ಈ ಮೂರನ್ನು ಒಂದೆ ಮರದ ತುಂಡಿನಿಂದ ರಚಿಸುತ್ತಿದ್ದರು. ಅಂದರೆ ಉತ್ತಮ ಜಾತಿಯ ಕಾಂಡ ಭಾಗದ ಮರದ ತುಂಡನ್ನು ಕೊರೆದು, ಕಲಸೆ ನಿರ್ಮಿಸಿದರೆ ಅದೆ ಕಲಸೆಯ ಒಳಭಾಗದಿಂದ ಸೇರು, ಸೇರಿನ ಒಳಭಾಗದ ಮರದಿಂದ ರಚಿಸಿದ ಪಾವು ಅತ್ಯುತ್ತಮವಾದುದೆಂದು ಪರಿಗಣಿಸುತ್ತಿದ್ದರು.

ಜಲ ಗಡಿಯಾರ

ದಿನ ಹಾಗೂ ಸಮಯ ಸೂಚಿಗಳ ಬಳಕೆ ರೂಢಿಗೆ ಬಂದಿದ್ದು ನಿನ್ನೆ ಮೊನ್ನೆಯಿಂದಲ್ಲ. ನವಶಿಲಾಯುಗ ಕಾಲದಿಂದ ಆರಂಭವಾಗಿ, ತಾಮ್ರ–ಕಬ್ಬಿಣದ ಯುಗಗಳನ್ನು ದಾಟಿ ಆಧುನಿಕ ತಂತ್ರಜ್ಞಾನ ಯುಗದವರೆಗೆ ಅಸಂಖ್ಯ ರೂಪತಳೆದರೂ ಪ್ರಸ್ತುತತೆಯನ್ನು ಕಾಪಾಡಿಕೊಂಡು ಬಂದಿರುವ ಹೆಗ್ಗಳಿಕೆ ಗಡಿಯಾರದ್ದು. ಭಾರತೀಯ ಕಾಲಮಾನದ ಕ್ರಿ.ಶ ೧೧೫೦ರಲ್ಲಿ ಭಾಸ್ಕರಾಚಾರ್ಯರ "ಸಿದ್ಧಾಂತ ಶಿರೋಮಣಿ" ಎಂಬ ಪ್ರಸಿದ್ಧ ಖಗೋಳ ಗ್ರಂಥದ ಪ್ರಕಾರ ಸಂವತ್ಸರದ ಅವಧಿ– ೩೬೫ ದಿನಗಳು, ೧೫ ಗಳಿಗೆಗಳು, ೩೦ ವಿಗಳಿಗೆಗಳು, ೨೨ ಪರಗಳಿಗೆಗಳು ಮತ್ತು ೩೦ ಸೂಕ್ಷ್ಮಗಳಿಗೆಗಳು. ಕ್ರಿ.ಪೂ ೪೦೦೦ ಚೀನಾದಲ್ಲಿ ನೀರು ಗಡಿಯಾರಗಳು ಉಪಯೋಗಿಸಲ್ಪಡುತ್ತಿತ್ತೆಂದು ಹೇಳಲಾಗುವುದು.

ತಳದಲ್ಲಿ ಸೂಕ್ಷ್ಮ ರಂಧ್ರವಿರುವ ಬಟ್ಟಲನ್ನು ನೀರು ತುಂಬಿದ ಬೋಗುಣಿಯಲ್ಲಿ ತೇಲಿಬಿಟ್ಟು, ರಂಧ್ರದ ಮೂಲಕ ನೀರು ಮೇಲೆ ಬಂದು ಬೋಗುಣಿ ಮುಳುಗುವ ಸಮಯವನ್ನು ಲೆಕ್ಕ ಹಾಕಲಾಗುತ್ತಿತ್ತು. ಬಟ್ಟಲಿನ ಗಾತ್ರ, ತೂಕ, ರಂಧ್ರ ಗಾತ್ರಗಳು ನಿಖರವಾಗಿರಬೇಕು. ಇದನ್ನು ಘಟಿಕಾ ಪಾತ್ರೆ ಎಂದು ಕರೆಯಲಾಗುತ್ತದೆ. ಮದುವೆ, ಮುಂಜಿ ಅಥವಾ ಇನ್ನಿತರ ಶುಭ ಮುಹೂರ್ತವನ್ನು ನಿರ್ಧರಿಸಲು ಈ ಘಟಿಕಾ ಪಾತ್ರೆ ತುಳುನಾಡಿನಲ್ಲಿ ಹಲವೆಡೆ ಬಳಕೆಯಲ್ಲಿತ್ತು. ಮುಖ್ಯವಾಗಿ ಇದು ಗುತ್ತಿನ ಮನೆಗಳಲ್ಲಿ ಇರುವಂತಹ ಒಂದು ಪಾತ್ರೆ. ಪ್ರಸಿದ್ಧ ಖಗೋಲಶಾಸ್ತ್ರಜ್ಞ ಭಾಸ್ಕರಾಚರ್ಯನ ಮಗಳ ಮದುವೆಯ ಮುಹೂರ್ತದ ಲೆಕ್ಕಾಚಾರ ತಪ್ಪಿಹೋಗಲು ಕಾರಣ ಅವಳ ಮೂಗಿನಬೊಟ್ಟು ಘಟಿಕಾ ಪಾತ್ರೆಗೆ ಬಿದ್ದು ಗಳಿಗೆ ತಪ್ಪಿ ಹೋದುದು.

ಗೃಹೋಪಯೋಗಿ ವಸ್ತುಗಳನ್ನು ಮಣ್ಣು, ಲೋಹ ಹಾಗೂ ಮರದಿಂದ ಮಾಡಲಾಗುತ್ತಿತ್ತು. ಜನಪದರು ನಾಗರಿಕತೆಯ ಕಡೆಗೆ ಪ್ರವೇಶ ಪಡೆದಂತೆ ತಾವು ಬಳಸುವ ವಸ್ತು ಪರಿಕರಗಳಲ್ಲಿಯೂ ಪರಿಷ್ಕಾರಗಳನ್ನು ಮಾಡಿಕೊಂಡು ಬಂದಿದ್ದಾರೆ. ಹಾಗಾಗಿ ಮಣ್ಣು, ಲೋಹ, ಮತ್ತು ಮರದ ಪರಿಕರಗಳು ನಿರ್ದಿಷ್ಟ ದೇಶ ಕಾಲದ ಚಿತ್ರಣವನ್ನು ನೀಡುತ್ತವೆ. ಅಡುಗೆ ಕೋಣೆಯಲ್ಲಿ ಉಪಯೋಗಿಸಲ್ಪಡುವ ಪ್ರತಿಯೊಂದು ಸಣ್ಣ-ದೊಡ್ಡ ಪಾತ್ರೆಗೂ ಹೆಸರುಗಳಿವೆ. ಕೊಪ್ಪರಿಗೆ, ಅನ್ನ ಬೇಯಿಸುವ (ನುಪ್ಪುದ ಕರ), ಬಂಡಿಬಿಸಲೆ, ಒಗ್ಗಿಬಿಸಲೆ, ಪೇರಸಲೆ, ನೆಸಲೆ, ಕಿನ್ನಿಸಲೆ, ತೊಂದುರುದ ಕರ ಪಲ್ಲಾಯಿ, ಗದ್ದಾವ್, ಕಿಂಞಿ ಗದ್ದಾವು, ಕುದ್ವೆ, ಬಾವಡೆ, ಅಡ್ಯಾರ, ನೀರಡ್ಯರ, ಮಣ್ಣ್‌ದ ಓಡು. ಹೊಸ್ತೂಟದ ಮಡಕೆ- 'ಪುದ್ವಾರ್ ಕರ' ಸುಗ್ಗಿ ಹಬ್ಬದ ಮೊದಲ ಊಟಕ್ಕೆ ಬಳಸುವ ವಿಶೇಷವಾದ ಪಾತ್ರೆ. ಇದರ ಬಳಕೆಯಲ್ಲಿರುವ ನಂಬಿಕೆ, ಸಂಭ್ರಮ ವಿಶೇಷವಾದುದು.

'ತೊಂದುರು'ವಿನಲ್ಲಿ ತಯಾರಿಸಲ್ಪಡುವ ಇಡ್ಲಿ, ಕಡುಬುಗಳು ಎಲ್ಲ ಕಡೆಯಲ್ಲಿ ಬಳಸಲ್ಪಡುತ್ತಿದ್ದರೂ, ಉಳಿದೆಡೆಯಲ್ಲಿಲ್ಲದ ಮೂಡೆ, ಕೊಟ್ಟಿಗೆ, ಗುಂಡ, ಉಡರಿಗೆಗಳನ್ನು, ಪತ್ರೊಡೆಯನ್ನು ತುಳುವರು ತಯಾರಿಸುತ್ತಾರೆ. ಅದೇ ರೀತಿ ಶ್ಯಾವಿಗೆ ಮಣೆಯಿಂದ ಮಾಡುವ ಇಲ್ಲಿನ ಬಹು ಪ್ರಚಲಿತ ತಿನಸು. ಇದು ಕರಾವಳಿ ಕರ್ನಾಟಕಕ್ಕೆ ಮಧ್ಯ ಪ್ರಾಚ್ಯ ರಾಷ್ಟ್ರಗಳೊಂದಿಗಿನ ವ್ಯಾಪಾರಿ ಸಂಪರ್ಕದ ಮುಖೇನ ಬಂದಿರುವ ಸಾಧ್ಯತೆ ಇದೆ.

ಅನ್ನ ಬಸಿಯಲು ಬಳಸುತ್ತಿದ್ದ 'ಓಡಮರಾಯಿ' ಹಾಗೂ ಗುಳಿಯಪ್ಪ ಮಾಡುತ್ತಿದ್ದ 'ಅಪ್ಪದ ಕಲ್ಲು/ಕಾವಲಿ' ತುಳುವರ ಅಡುಗೆಮನೆಯಲ್ಲಿ ಇರುತ್ತಿದ್ದ, ಬೇರೆಡೆಯಲ್ಲಿ ಕಾಣಸಿಗದ ಪರಿಕರಗಳು. ಕುಚ್ಚಲಕ್ಕಿಯ ಅನ್ನ ಮಾಡಿದಾಗ ಗಂಜಿ ಬಸಿಯಲೇಬೇಕಾಗಿದ್ದು, ಬಸಿದ ಗಂಜಿ ಕುಡಿಯಲು ಹಾಗೂ ಜಾನುವಾರುಗಳಿಗೆ ಆಹಾರವಾಗಿ ಬಳಸಲ್ಪಡುತ್ತಿದ್ದುದು ಅದರ ಬಳಕೆಗೆ ಕಾರಣವಾಗಿದೆಯೆನ್ನಬಹುದು.

ಮುಸ್ಲಿಂ ಸಮುದಾಯದವರು ಸಾಮೂಹಿಕವಾಗಿ ವಿಶೇಷ ಸಂದರ್ಭಗಳಲ್ಲಿ ಉಪಯೋಗಿಸುತ್ತಿದ್ದ ಬಟ್ಟಲು 'ತಾಲಿ' ಅಥವಾ 'ತಾಲ' ದ ಕುರಿತಾದ ಮೂಲವನ್ನು ಜಾಲಾಡಿಸುವಾಗ ೧೧೩೭ರಲ್ಲಿ ಮಂಗಳೂರಿನಲ್ಲಿ ಬೆನ್ ಯುಹೂದಿ ಎನ್ನುವವನು ಹಿತ್ತಾಳೆ ಮತ್ತು ಕಂಚಿನ ಒಂದು ಕಾರ್ಖಾನೆಯನ್ನು ಹೊಂದಿದ್ದ ಎನ್ನುವ ಮಾಹಿತಿ ದೊರೆಯುತ್ತದೆ. ಅವನು ವ್ಯಾಪಾರದ ನಿಮಿತ್ತ ಮಾಡಿದ ಪತ್ರವ್ಯವಹಾರದಲ್ಲಿ ತಾಲಿಯಂ, ತಾಲಂ ಎನ್ನುವ ಪದಗಳ ಉಲ್ಲೇಖವಿದ್ದು, ಇದು ಅರಬ್ ಪದವಲ್ಲ. ತುಳು ಭಾಷೆಯಾಗಿದ್ದಿರಬೇಕು.

ಮನೆಯಲ್ಲಿ ಬೆಲೆಬಾಳುವ ವಸ್ತುಗಳನ್ನಿಡಲು ಬಳಸಲ್ಪಡುವ ಕಲೆಂಬಿಯ ಸ್ವರೂಪವು ಆ ಮನೆಯ ಆರ್ಥಿಕ ಸ್ಥಿತಿಗತಿಯನ್ನು ತಿಳಿಸುತ್ತದೆ. ಸಾಮಾನ್ಯವಾಗಿ ಗುತ್ತು, ಬೀಡು, ಬರ್ಕೆ, ಬಾವದ ಚಾವಡಿಗಳಲ್ಲಿ ಕಲೆಂಬಿಯನ್ನು ಕಾಣುತ್ತೇವೆ.

ಅಡುಗೆ ಮನೆಯ ಮುಖ್ಯ ಪರಿಕರ ಅರೆಯುವ ಕಲ್ಲು ಮಹಿಳೆಯರಿಂದಲೇ ಬಳಸಲ್ಪಡುತ್ತಿತ್ತು. ತುಳು ಜನಪದ ಮಾತ್ರವಲ್ಲದೆ ಪ್ರಾಚೀನ ಋಗ್ವೇದದಲ್ಲಿಯೂ ಇದರ ಉಲ್ಲೇಖವಿದೆ. ಪಾಡ್ದನ, ಕಬಿತಗಳಲ್ಲಿಯೂ ಉಲ್ಲೇಖಗೊಂಡಿದೆ.

ತೆಂಗಿನ ಗೆರಟೆಯಿಂದ ತಯಾರಿಸಲ್ಪಡುವ ಸೌಟುಗಳು ತುಳುನಾಡಿನಲ್ಲಿ ತೆಂಗಿನ ಬೆಳೆ ಹೆಚ್ಚಿರುವುದನ್ನು ಸೂಚಿಸುತ್ತವೆ. ತುಳುನಾಡಿನಲ್ಲಿ ಬಳಕೆಯಾಗುವ ಪರಿಕರಗಳು ಹಾಗೂ ಕಟ್ಟಡಗಳು 'ಆಯ' ಪ್ರಕಾರವೇ ತಯಾರಿಸಲ್ಪಡುತ್ತಿದ್ದವು.

ಹಿಂದಿನ ದಿನಗಳಲ್ಲಿ ಆಯಾ ಕುಟುಂಬದ ಆರ್ಥಿಕ ಸಾಮರ್ಥ್ಯಕ್ಕನುಸಾರವಾಗಿ ವಸ್ತುಗಳ ರಚನೆಯಾಗುತ್ತಿತ್ತು. ಪರಿಸರದಲ್ಲಿ ಸುಲಭದಲ್ಲಿ ಲಭ್ಯವಾಗುವ ಬಿದಿರು, ಮರ, ಮಣ್ಣು, ಮುಂತಾದುವುಗಳನ್ನೆ ಮುಖ್ಯವಾಗಿ ಬಳಸಲಾಗುತ್ತಿತ್ತು. ಶ್ರೀಮಂತ ಕುಟುಂಬವೊಂದರ ಬಳಕೆಯ ವಸ್ತುಗಳಿಂದಲೇ ಅವರ ಸ್ಥಾನಮಾನವು ಪ್ರತಿಬಿಂಬಿತವಾಗುತ್ತಿತ್ತು. ಉದಾಹರಣೆಗೆ ಜನಸಾಮಾನ್ಯನೊಬ್ಬ ಬಿದಿರಿನಿಂದ ನಿರ್ಮಿತ ಕಲಸೆಯೊಂದನ್ನು ಬಳಸಿದರೆ, ಗುತ್ತು ಬೀಡಿನವರು ಸುಂದರವಾಗಿ ಜಾತಿಮರದಿಂದ ಸುಂದರ ಚಿತ್ತಾರವನ್ನೊಳಗೊಂಡ 'ಕಲಸೆ' ನಿರ್ಮಿಸಿ, ಅದಕ್ಕೆ ಬೆಳ್ಳಿ, ತಾಮ್ರ ಅಥವಾ ಕಂಚಿನ ಚೌಕಟ್ಟುಗಳನ್ನು ಹಾಕಿ ನಿರ್ಮಿಸುತ್ತಿದ್ದರು. ಅದರ ರೂಪುರೇಷೆ ಏನೇ ಇದ್ದರೂ ಉದ್ದೇಶ ಒಂದೇ. ವಸ್ತುಗಳನ್ನು ನಿರ್ಮಿಸುವಾಗ ತುಳುನಾಡಿನ ಲೆಕ್ಕಾಚಾರದ 'ಆಯ' ಪದ್ಧತಿಯನ್ನು ಗಮನದಲ್ಲಿಟ್ಟುಕೊಳ್ಳುತ್ತಿದ್ದರು. ಆಯ ತಪ್ಪಿದರೆ ವಸ್ತುವೊಂದು ಹೇಗೆ ನಿಷ್ಪ್ರಯೋಜಕವಾಗುತ್ತದೆ ಎಂಬುವುದಕ್ಕೆ ಇಲಿ ಹಿಡಿಯುವ ಗೂಡೊಂದರ ಉದಾಹರಣೆಯನ್ನು ಪದ್ಮನಾಭ ದೇವಾಡಿಗರು ನೀಡುತ್ತಾರೆ. ಅವರು ಹೇಳುವಂತೆ ಅನನುಭವಿ ಬಡಗಿಯೊಬ್ಬ ಸಿದ್ದಪಡಿಸಿದ ಇಲಿ ಹಿಡಿಯುವ ಗೂಡಿನಲ್ಲಿ, ಇಲಿಗಳು ಗೂಡಿಗೆ ಬಿದ್ದರೂ ನಿರಂತರವಾಗಿ ತಪ್ಪಿಸಿಕೊಳ್ಳುತ್ತಿದ್ದವು. ಕಾರಣ ಹುಡುಕಿದಾಗ ಅನುಭವಿ ಬಡಗಿಯೊಬ್ಬರು ಈ ಗೂಡನ್ನು ಕಂಡ ತಕ್ಷಣ ಇದು ಸುಖ ಆಯದ ಗೂಡು. ಇಲಿ ಹಿಡಿಯುವ ಗೂಡು ಯಾವಾಗಲೂ ಮರಣ ಆಯದ್ದಾಗಿರಬೇಕು ಎಂದರಂತೆ. ಆ ನಂತರ ಮರಣ ಆಯದ ಪ್ರಕಾರ ರಚಿಸಿದ ಗೂಡಿನಲ್ಲಿ ಇಲಿಗಳು ಬಿದ್ದವೆಂದು ಈ ಹಿರಿಯರು ಹೇಳುತ್ತಾರೆ. ಸಾಂಪ್ರದಾಯಿಕವಾಗಿ ಇಲ್ಲಿಯ ಅಳತೆಯ ಮಾಪನವಾದ ಆಯದ ಕೋಲಿನ ಲೆಕ್ಕಚಾರದಲ್ಲಿ ವಸ್ತುಗಳು ಸಿದ್ದವಾಗಬೇಕು. ಇದು ಮಗು ಮಲಗುವ ತೊಟ್ಟಿಲಾಗಲಿ, ಮರಣದ ಪೆಟ್ಟಿಗೆಯಾಗಲಿ, ಹಾರೆ ಪಿಕ್ಕಾಸುಗಳಿಗಾಗಲಿ, ಮನೆಯ ಪಂಚಾಂಗವೇ ಆಗಲಿ ಈ ಆಯದ ಕೋಲಿನ ಲೆಕ್ಕಾಚಾರದಲ್ಲಿ ನಡೆಯುತ್ತಿದ್ದವು. ಇಂದು ಪಾಶ್ಚಿಮಾತ್ಯ ಅಳತೆ ಪದ್ಧತಿಯಾದ ಮೀಟರ್ ಅಥವಾ ಫೀಟ್ ಲೆಕ್ಕಾಚಾರದಲ್ಲಿ ನಡೆಯುತ್ತದೆ. ಆದುದರಿಂದಲೇ ಆಯ ತಪ್ಪುತ್ತದೆ ಎನ್ನುತ್ತಾರೆ. ಆಯವೆಂದರೆ, ಸ್ಥೂಲವಾಗಿ ಆದಾಯವೆಂಬ ಅರ್ಥವನ್ನು ನೀಡುತ್ತದೆಯಾದರೂ ಇದನ್ನು ಆಯಾಮಗಳಲ್ಲಿ ಪರಿಗಣಿಸಲಾಗುತ್ತಿತ್ತು. ಆಯ ಪ್ರಕಾರವಾಗಿರದ ವಸ್ತುವಾಗಲಿ, ಮನೆಯೆ ಆಗಲಿ ಬಳಕೆ ಯೋಗ್ಯ ಅಥವಾ ವಾಸ ಯೋಗ್ಯವಲ್ಲವೆಂದು ಪರಿಗಣಿಸಲಾಗುತ್ತಿತ್ತು. ಅಂದು ನಮ್ಮ ಪೂರ್ವಜರ ಬದುಕು ಪ್ರಕೃತಿಗೆ ಪೂರಕವಾಗಿ ಪ್ರಕೃತಿ ಸಮೀಪವಾದ ಪರಿಸರಸ್ನೇಹಿ ಬದುಕಾಗಿತ್ತು. ಮನೆಯಲ್ಲಿ ನಿತ್ಯಬಳಕೆಯ ವಸ್ತುವೊಂದು ರಚನೆಯಾದರೆ ಅದರೊಂದಿಗೆ ಮನೆಮಂದಿಗೆ ಒಂದು ಭಾವನಾತ್ಮಕವಾದ ಬೆಸುಗೆ ಇರುತ್ತಿತ್ತು. ಅದು ತಲೆಮಾರಿನಿಂದ ತಲೆಮಾರಿಗೆ ಹಿರಿಯರ ಆಸ್ತಿಯಾಗಿ ಉಳಿಯುತ್ತಿತ್ತು. ಸೀಮಿತ ವಸ್ತುಗಳ ಮಧ್ಯೆಯೆ ಹಸನಾದ ಬದುಕು ಹಿರಿಯರದ್ದಾಗಿತ್ತು.

ಕೊನೆ ಟಿಪ್ಪಣಿ

[೧] ನಂದಾವರ ವಾಮನ, *ಸಂಸ್ಕೃತಿ ಗ್ರಾಮ ಕಲ್ಪನೆ*, ಕೊಡಿಪು(ಸಂ), ವಿಶ್ವ ತುಳು ಸಮ್ಮೇಳನ, ನೆನಪಿನ ಸಂಚಿಕೆ, ೨೦೦೯.

[೨] ನಾವಡ ಎ.ವಿ. (ಸಂ) ಅನುವಾದ: ಡಾ. ಬಿ.ಎ.ವಿವೇಕ ರೈ, ಡಾ. ರಾಜಶ್ರೀ, ಈಜೋ ಮಂಜಟ್ಟಿ ಗೋಣಾ.

[೩] ಶಿವರಾಮು ವ. ನಂ., *ಜಾನಪದ ವಸ್ತು ಸಂಗ್ರಹಾಲಯಗಳು*,ಪ್ರಸರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

[೪] ಮಾಹಿತಿ: ಪದ್ಮನಾಭ ದೇವಾಡಿಗ, ಪ್ರಾಯ ೬೫, ಮಂಗಳದೇವಿ, ಮಂಗಳೂರು.

[೫] ಮಾಹಿತಿ: ವೆಂಕಣ್ಣ ಆಚಾರಿ, ಪ್ರಾಯ ೬೮, ವಾಸಪ್ಪ ಆಚಾರಿ, ಪ್ರಾಯ ೬೦.

[೬] ಮಾಹಿತಿ: ಡಾ. ಜಗದೀಶ ಶೆಟ್ಟಿ, ಸಂಶೋಧಕ, ಉಡುಪಿ, ಡಾ. ಪಿ.ಎನ್.ಎನ್. ಮೂರ್ತಿ.

[೭] ಆಚಾರ್ ಪಾಲ್ತಾಡಿ ರಾಮಕೃಷ್ಣ, ಸುಪ್ರಿಯಾ ಪ್ರಕಾಶನ, ದರ್ಬೆ ಪುತ್ತೂರು, ೧೯೯೭, ಪುಟ ೧೦೨.

[೮] ಪ್ರಸಾದ ಲಕ್ಷ್ಮೀ. ಜಿ., *ತುಳುವ ಸಂಸ್ಕಾರಗಳು ಮತ್ತು ವೃತ್ತಿಗಳು*, ಮಾತೃಶ್ರೀ ಪ್ರಕಾಶನ, ಬೆಂಗಳೂರು, ೨೦೧೦, ಪುಟ ೩೪.

[೯] ಸೋಮೇಶ್ವರ ಅಮೃತ, *ತುಳು ಪಾಡ್ದನ ಸಂಪುಟ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೩೫೨.

[೧೦] ಮೌಖಿಕ ಮಾಹಿತಿ– ಹರಿಣಾಕ್ಷಿ ಶೆಟ್ಟಿ, ತೋಕೂರುಗುತ್ತು, ೬೩ ವರ್ಷ.

[೧೧] ಶಿವರಾಮು ವ. ನಂ., *ಜಾನಪದ ವಸ್ತು ಸಂಗ್ರಹಾಲಯಗಳು*, ಪ್ರಸರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೮.

ಅಧ್ಯಾಯ ೫

ಗ್ರಾಮೀಣ ಕರಕುಶಲ ಸಾಧನಗಳು ಹಾಗೂ ಐತಿಹಾಸಿಕ ಅಂಶಗಳು

೫.೧ ಗ್ರಾಮೀಣ ಬದುಕಿನಲ್ಲಿ ಕರಕುಶಲಕರ್ಮಿಗಳು

ಜನಪದರಲ್ಲಿ ಬಳಕೆಯಲ್ಲಿದ್ದ ಪರಿಕರಗಳು ತಮ್ಮದೇ ಜನರಿಂದ ಸೃಷ್ಟಿಗೊಂಡು ತಮ್ಮದೇ ಸಮುದಾಯದ ಬಳಕೆಗೆ ಬರುವಂಥವು. ಹಾಗಾಗಿ ಅವುಗಳ ತಯಾರಿಯೂ ಸ್ಥಳೀಯವಾಗಿದ್ದು, ಅವೆಲ್ಲವೂ ತಂತಮ್ಮ ಸಂಸ್ಕೃತಿಯನ್ನು ಬಿಂಬಿಸುತ್ತವೆ.

ಕೈ ಮನಸ್ಸುಗಳ ಚಾತುರ್ಯದಿಂದ ರೂಪುಗೊಳ್ಳುವ ಕಲೆಯನ್ನು ಕರಕುಶಲ ಕಲೆಯೆಂದು ಗುರುತಿಸಲಾಗುತ್ತದೆ. ಮನುಷ್ಯನ ಅತಿಸೂಕ್ಷ್ಮ ಹಾಗೂ ಸಂಕೀರ್ಣ ಸಂವೇದನೆಯ ವ್ಯಕ್ತಿತ್ವದ ಜಾಣ್ಮೆಯ ಅಭಿವ್ಯಕ್ತಿಯೇ ಕುಶಲಕಲೆಯೆನ್ನಬಹುದು. ಒಂದು ಪರಿಸರದಲ್ಲಿ ಬೆಳೆದುಬರುವ ಜನಪದರು ತಮ್ಮ ಸಂಸ್ಕೃತಿಯಲ್ಲಿ ಅದರ ಸುತ್ತಲಿನ ಪ್ರಕೃತಿಯನ್ನು ಮೇಳೈಸಿಕೊಂಡು ಅವೆರಡನ್ನೂ ತಮ್ಮ ಬದುಕಿನ ಅವಿಭಾಜ್ಯ ಅಂಗವಾಗಿ ಬೆಳೆಸಿ ತರುತ್ತಿರುವುದಕ್ಕೆ ಕರಕುಶಲಕಲೆ ಸಾಕ್ಷಿಯಾಗಿದೆ. ಕರಕುಶಲತೆಯು ಮನೆಯೊಳಗಿನ ಪರಿಕರಗಳಲ್ಲಿ ಮಾತ್ರವಲ್ಲ, ಕೃಷಿ, ಆರಾಧನೆ, ಮನರಂಜನೆ ಇವೆಲ್ಲದರಲ್ಲಿ ಬಳಕೆಯಾಗುವ ಪರಿಕರಗಳಲ್ಲಿಯೂ ಕಂಡುಬರುತ್ತದೆ. ಒಟ್ಟಂದದಲ್ಲಿ ಹೇಳುವುದಾದರೆ ಜನಪದ ಜೀವನದ ಒಟ್ಟು ಪರಿಕಲ್ಪನೆಯನ್ನು ಕರಕುಶಲ ವಸ್ತುಗಳು ನಮ್ಮ ಮುಂದಿಡುತ್ತವೆ.[೧]

ಒಂದು ಜನಾಂಗದ ಆಚರಣೆ, ನಂಬಿಕೆ, ಸಂಪ್ರದಾಯ ಮುಂತಾದವುಗಳ ಅಧ್ಯಯನ ಮಾಡುವ ಮಾನವಶಾಸ್ತ್ರಜ್ಞನಾಗಲಿ, ಅದರ ಸಾಮಾಜಿಕವಾದ ಸ್ಥಾನಮಾನಗಳನ್ನು ಅಭ್ಯಸಿಸುವ ಸಮಾಜ ಶಾಸ್ತ್ರಜ್ಞನಾಗಲಿ, ಎಲ್ಲಾ ರೀತಿಯ ಸಂಪ್ರದಾಯ ಸಾಹಿತ್ಯಗಳನ್ನು ಅಭ್ಯಾಸ ಮಾಡುವ ಜಾನಪದ ತಜ್ಞನಾಗಲಿ, ಜನಾಂಗ ತನ್ನ ಹೊಟ್ಟೆಯಲ್ಲಿ ಅರಗಿಸಿಕೊಂಡಿರುವ ಕುಶಲಕಲೆಗಳನ್ನು ಅಭ್ಯಾಸ ಮಾಡದಿದ್ದರೆ ಸತ್ಯಶೋಧನೆಯಾಗದು; ಬಹುಮುಖಿ ನೆಲೆಗಳ ಪರಿಚಯವಾಗದು– ಎಂದಿದ್ದಾರೆ ಕೋಡಿರಾಂಪುರ ರಂಗರೆಡ್ಡಿ. ಕುಶಲಕಲೆಗಳನ್ನು ಅಧ್ಯಯನ ಮಾಡುವುದರ ಅಂಗಗಳಾಗಿ ಕುಶಲತೆಯಿಂದ ರೂಪಿಸಲ್ಪಟ್ಟ ವಸ್ತುಪರಿಕರಗಳು ಹಾಗೂ ಕೌಶಲ್ಯದಿಂದ ಅವನ್ನು ರೂಪಿಸಿದ ಕುಶಲಕರ್ಮಿಗಳನ್ನು ಕುರಿತಾಗಿಯೂ ತಿಳಿದುಕೊಳ್ಳಬೇಕಾಗುತ್ತದೆ.

ತುಳುವರು ಮೂಲತಃ ಕೃಷಿಕರು. ಕೃಷಿಗೆ ಪೂರಕ ಹಾಗೂ ಪೋಷಕವೆನಿಸುವ ಕಸುಬುಗಳು ಕೃಷಿಯೊಂದಿಗೇ ಬೆಳೆದುಬಂದವು. ಕೃಷಿಯಲ್ಲದೆ ಆಹಾರದ ಮೂಲದ ಅನ್ವೇಷಣೆಯಲ್ಲಿ ಅದಕ್ಕಿಂತ ಹಿಂದಿನ ಬೇಟೆ ಹಾಗೂ ಮೀನುಗಾರಿಕೆಗಳೂ ಬೆಳೆದುಬಂದವು. ಎಲ್ಲಾ ಕಸುಬುಗಳಲ್ಲಿ ಬಳಸಲ್ಪಡುವ ಪರಿಕರಗಳು ಕೂಡ ನಿಪುಣ ತಯಾರಕರಿಂದ, ಅವರ ಪಾರಂಪರಿಕ ಜ್ಞಾನವನ್ನು ಸೇರಿ ತಯಾರಾಗಿರುವುದರಿಂದ ಮೊದಲಾಗಿ ಕಸುಬುದಾರರ ಪರಿಚಯ ಅಗತ್ಯವಾಗುತ್ತದೆ.

ಕುಶಲಕರ್ಮಿಗಳನ್ನು ಕಸುಬುಗಳ ಮೂಲಕ, ತನ್ಮೂಲಕ ಅವರ ಕುಟುಂಬಗಳನ್ನೂ ಅದೇ ಹೆಸರಿನಲ್ಲಿ ಗುರುತಿಸುವ ಹಂತದಲ್ಲಿ ಜಾತಿಗಳು ಸೃಷ್ಟಿಗೊಂಡವು. ಕಾಲಕ್ರಮೇಣ ಸಾಮಾಜಿಕವಾಗಿ ಈ ಜಾತಿಗಳು ಮೇಲುಕೀಳೆಂಬ ತಾರತಮ್ಯದಲ್ಲಿ ಶ್ರೇಣೀಕರಣಗೊಂಡವು. ಆದರೆ ಕಸುಬಿನ ಕುಶಲತೆ ಶ್ರೇಣೀಕರಣವನ್ನು ಮೀರಿನಿಂತು, ಎಲ್ಲಾ ಕಸುಬುದಾರರಲ್ಲಿಯೂ ಪಾರಂಪರಿಕ ಮತ್ತು ನೈಪುಣ್ಯದ ಜ್ಞಾನವನ್ನು ವಿಸ್ತರಿಸಿದ್ದರಿಂದ ಕುಸುರಿಕೆಲಸಗಳು ಎಲ್ಲ ಕಸುಬುಗಳಲ್ಲಿಯೂ ಕಂಡುಬರುತ್ತವೆ.

ಕುಲಕಸುಬುಗಳನ್ನು ಮಾಡುವ ಕುಶಲಕರ್ಮಿಗಳು, ತಮ್ಮ ಕೆಲಸದಲ್ಲಿ ನಿಪುಣರಾಗಿದ್ದರೂ ಆರ್ಥಿಕವಾಗಿ ಬಡತನದಲ್ಲಿದ್ದುದನ್ನು ಕೆಲವು ಗಾದೆಗಳ ಮೂಲಕ ತಿಳಿದುಕೊಳ್ಳಬಹುದು:

'ಸಾಲದ ಅರಿ; ಗಾಲದ ಮೀನ್' ಸಾಲ ತಂದಿರುವ ಅಕ್ಕಿ ಹಾಗೂ ಗಾಳ ಹಾಕಿ ತಂದಿರುವ ಮೀನು – ಎಂಬ ಈ ಗಾದೆಯಲ್ಲಿ ಉಳ್ಳವರಿಂದ ವಾಯಿದೆಗೆ ಅಕ್ಕಿ ತಂದು ಅನ್ನ ಮಾಡಿ, ಮಳೆಗಾಲದಲ್ಲಿ ಕಡಲಿನ ಮೀನು ಹಿಡಿಯಲಾಗದಿರುವ ಸ್ಥಿತಿಯಲ್ಲಿ ಗಾಳ ಹಾಕಿ ಹಿಡಿದ ಮೀನಿನ ಮೇಲೋಗರ ಮಾಡಿ ಉಣ್ಣುವ ಕಷ್ಟದ ದಿನಗಳನ್ನು ಇಲ್ಲಿ ಹೇಳಲಾಗಿದೆ.

'ಆಚಾರಿಗ್ ಕುಲ್ಲೆರೆ ಮಣೆ ಇಜ್ಜಿ' ಎನ್ನುವ ಗಾದೆ ಬಡಗಿಗೆ ಕುಳಿತುಕೊಳ್ಳಲು ಮಣೆ ಇಲ್ಲ ಅಂದರೆ ಮರದ ಕೆಲಸ ಮಾಡುವ ಬಡಗಿಗೇ ಕುಳಿತುಕೊಳ್ಳುವಂತಹ ಮಣೆಗೆ ತತ್ವಾರ ಎಂಬ ಅರ್ಥದೊಡನೆ, ಹೋದಲ್ಲಿಯೂ ಕುಶಲಕೆಲಸಗಾರನಿಗೆ ಹೆಚ್ಚಿನ ಮರ್ಯಾದೆಯಿರಲಿಲ್ಲ ಎಂಬ ಧ್ವನಿಯೂ ಇಲ್ಲಿದೆಯೆನ್ನಬಹುದು.

'ಕೊಲ್ಲನ ಇಲ್ಲಡ್ ಕತ್ತಿ ಇಜ್ಜಿ' ಕಮ್ಮಾರನ ಮನೆಯಲ್ಲಿ ಕತ್ತಿಯಿಲ್ಲ – ಕಬ್ಬಿಣದ ಕೆಲಸ ಮಾಡುವ ಕಮ್ಮಾರನ ಮನೆಯಲ್ಲಿ ಗೃಹಬಳಕೆಗೆ ಕತ್ತಿಯಿಲ್ಲ ಎಂಬಲ್ಲಿ ಆತನ ಕಷ್ಟದ ಬದುಕಿನ ಚಿತ್ರಣವಿದೆ.

'ಮಡ್ಡೆಲಗ್ ತುತ್ತೆರೆ ಕುಂಟು ಇಜ್ಜಿ' ಮಡಿವಾಳನಿಗೆ ಉಡಲು ಬಟ್ಟೆಯಿಲ್ಲ – ಊರಿನವರೆಲ್ಲರ ಬಟ್ಟೆ ಮಡಿ ಮಾಡುವ ಮಡಿವಾಳರ ಬದುಕು ಅವರಿಗೆ ಉಡಲು ಬಟ್ಟೆಯಿಲ್ಲದಷ್ಟು ಕಷ್ಟಕರವಾಗಿತ್ತು ಎಂಬುದನ್ನು ಈ ಗಾದೆ ತಿಳಿಸುತ್ತದೆ.

ಈ ಭೂಮಿಯ ಮೇಲೆ ಮಾನವನ ಜೀವನ ಆರಂಭಗೊಂಡಂದಿನಿಂದ ಕಲ್ಲು, ಮರಗಳು ಆನಂತರ ಲೋಹಗಳು ಬಳಕೆಗೆ ಬಂದಿರುವುದು ಸರ್ವವಿದಿತ. ಕಲ್ಲು, ಮರ, ಲೋಹಗಳಿಂದ ವಸ್ತುಪರಿಕರಗಳನ್ನು ತಯಾರುಮಾಡುವ ಕೌಶಲ್ಯವನ್ನು ಸಾಧಿಸಿಕೊಂಡವರು 'ಆಚಾರಿ'ಗಳು.

ಕಲ್ಕುಡ ಪಾಡ್ದನದಲ್ಲಿ ಬರುವ ಈ ಮಾತು ಉಲ್ಲೇಖನೀಯ:

ಐವರು ಮಕ್ಕಳಿಗೆ ಐದು ಬಿನ್ನಾಣದ ಕೆಲಸ
ಒಬ್ಬನಿಗೆ ಮರದ ಕೆಲಸ ಒಬ್ಬನಿಗೆ ಬಂಗಾರದ ಕೆಲಸ
ಒಬ್ಬನಿಗೆ ಕಬ್ಬಿಣದ ಕೆಲಸ ಒಬ್ಬನಿಗೆ ತಾಮ್ರದ ಕೆಲಸ

ಒಬ್ಬನಿಗೆ ಕಲ್ಲಿನ ಕೆಲಸ

ಮರದ ಕೆಲಸ ಕಲಿತವನು ಮಲೆನಾಡಚ್ಚವ

ಬಂಗಾರದ ಕೆಲಸ ಕಲಿತವನು ಯಾರಣ್ಣ

ಕಬ್ಬಿಣದ ಕೆಲಸ ಕಲಿತವನು ಕರ್ಬೊಟಿಗಾರ

ತಾಮ್ರದ ಕೆಲಸ ಕಲಿತವನು ಚೆಂಬುಟಿಗಾರ

ಕಲ್ಲಿನ ಕೆಲಸ ಕಲಿತವನು ಕಲ್ಕುಡ ೨

ಎಂಬ ವಿವರ ಕಲ್ಕುಡ ಪಾಡ್ದನದಲ್ಲಿ ದೊರೆಯುತ್ತದೆ.

ಐದು ಕಲಾಕಾರರ ಗುಂಪುಗಳಾದ ಅಕ್ಕಸಾಲಿಗ, ಕಮ್ಮಾರ, ಕಂಚುಗಾರ, ಬಡಗಿ, ಶಿಲ್ಪಗಾರರನ್ನು ಹೊಂದಿರುವುದರಿಂದ ಇವರನ್ನು ಪಂಚಾಳರೆಂದು ಕರೆಯಲಾಗುತ್ತದೆ. ಐತಿಹಾಸಿಕವಾಗಿ ಕುಲಕಸುಬುಗಳ ಉಲ್ಲೇಖವು ಸಾಂದರ್ಭಿಕವಾಗಿ ಕಂಡುಬರುತ್ತದೆ. ಕುಲಕಸುಬುಗಳ ಮೂಲ 'ಜಾತಿ'ಯ ನಿರ್ಣಯಿತಗೊಂಡಿರಬಹುದು ಎಂಬುವುದನ್ನು ಇಲ್ಲಿ ಕಾಣಬಹುದಾಗಿದೆ. ಶ್ರಮ ಜೀವಿಗಳಾದ ಇವರು ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದಿದ್ದರು ಎಂಬುದು ಸಹ ಪಾಡ್ದನಗಳ ಉಲ್ಲೇಖ, ಗಾದೆ, ಒಗಟು ಮೊದಲಾದ ಮೌಖಿಕ ಆಕರಗಳು ತಿಳಿಸಿಕೊಡುತ್ತವೆ.

ತುಳುವಿನ ಒಂದು ಗಾದೆ ಮಾತು ಕುಶಲಕರ್ಮಿಗಳ ಆಗತ್ಯತೆಯ ಕುರಿತಾಗಿ ಈ ರೀತಿ ಇದೆ 'ಕೈದಾಂತಿ ಸಟ್ಟುಗಯೇ, ಕೂಲಿ ದಾಂತಿ ಪೆರೆದಣೆ, ಬಾಯಿದಾಂತಿ ಕತ್ತಿನ್ ಪತ್ತೊಂದು ಮಲ್ಪುನು ದಾನೆ ಮಾದಿರ' (ಹಿಡಿ ಇಲ್ಲದ ಸಟ್ಟುಗ(ಬಡಿಸಲು ಅಥವಾ ಭತ್ತ ಹಾರಿಸಲು ಬಳಸುವ ಸಾಧನ), ಹಲ್ಲಿಲ್ಲದ ಹೆರೆಮಣೆ ಹಾಗೂ ಹರಿತವಿಲ್ಲದ ಕತ್ತಿ ಇದ್ದು ಏನು ಪ್ರಯೋಜನ)[೩].

ಬಡಗಿಗಳ ನೈಪುಣ್ಯ

ಬಡಗಿಗಳು – ಉಲಿ, ಕೊದಂಟಿ/ ಸುತ್ತೆ, ಗರ್ಗಸ್, ಕೀಸುಲಿ, ಇರೆಉಲಿ – ಇಂತಹ ಅನೇಕ ಸಾಧನಗಳಿಂದ ಮರದಿಂದ ತಯಾರಿಸಲಾಗುವ ವಸ್ತುಗಳನ್ನು ಜಾಣ್ಮೆಯಿಂದ ತಯಾರಿಸುತ್ತಿದ್ದರು. ಕೃಷಿ ಪರಿಕರಗಳು, ಗೃಹೋಪಯೋಗಿ ವಸ್ತುಗಳು, ಆರಾಧನಾ ಪರಿಕರಗಳು ಇವೆಲ್ಲವುಗಳ ತಯಾರಿಯಲ್ಲಿ ಬಡಗಿಗಳ ಕೈವಾಡ ಇದ್ದೇ ಇತ್ತು. ಹುಟ್ಟಿದ ಮಗುವನ್ನು ಮಲಗಿಸಲು ಬಳಸುವ ತೊಟ್ಟಿಲಿನಿಂದ ಜೀವನದ ಕೊನೆಯ ಹಂತವಾದ ಸಾವಿನ ವರೆಗಿನ ಜೀವನಾವರ್ತನ ಆಚರಣೆಗಳಲ್ಲಿ ಮಾತ್ರವಲ್ಲದೆ, ವಾರ್ಷಿಕಾವರ್ತನದ ಆಚರಣೆಗಳಲ್ಲಿಯೂ ತುಳುಜನಪದರ ಬದುಕಿನಲ್ಲಿ ತಮ್ಮ ಕಸುಬನ್ನು ಹಾಸುಹೊಕ್ಕಾಗುವಂತೆ ಬೆಳೆಸಿದವರು ಬಡಗಿಗಳು.

ತುಳುನಾಡಿನ ಗುತ್ತಿನ ಮನೆಗಳ, ದೊಡ್ಡ ದೇವಸ್ಥಾನಗಳ ಮಾಡಿನ ಭಾರವನ್ನು ಹೊತ್ತು ನಿಲ್ಲುವ ಬೋದಿಗೆ ಕಂಬಗಳಲ್ಲಿರುವ ಕುಸುರಿ ಕೆಲಸ ಬಹಳ ಕುಶಲತೆಯಿಂದ ಕೂಡಿದೆ. ಬೋದಿಗೆ ಕಂಬವನ್ನು

ನಿರ್ಮಿಸುವುದರಲ್ಲಿ ಕುಶಲತೆಯನ್ನು ತೋರಿಸಿದವರಲ್ಲಿ ಬಡಗಿಗಳ ಪಾತ್ರ ಮಹತ್ವಪೂರ್ಣ. ಹಿಂದಿನ ಕಾಲದಲ್ಲಿ ಅಕ್ಷರಾಭ್ಯಾಸ ಇಲ್ಲದ ಸೂಕ್ಷ್ಮ ಕರಕುಶಲ ಕೆಲಸಗಾರರ ಕೆಲಸದ ನೈಪುಣ್ಯತೆಯನ್ನು ಪರೀಕ್ಷಿಸಲು ಜಾಣ್ಮೆ ಪರೀಕ್ಷೆ ಸಾಧನವೊಂದನ್ನು ಬಳಸಲಾಗುತ್ತಿತ್ತು. ಇದು ಸುಮಾರು ಮುಕ್ಕಾಲು ಅಡಿ ಉದ್ದದ ನಾಗರಬೆತ್ತವೊಂದರ ನಡುವೆ ನಾಗರಬೆತ್ತವನ್ನೇ ಸುತ್ತಿ ಅ ಆಕಾರದಲ್ಲಿ ಹೆಣೆಯಲಾಗಿರುವ ಒಂದು ಸರಳ ಪರಿಕರ. ನಡುವಿನ ನಾಗರಬೆತ್ತಕ್ಕೆ ಕಟ್ಟಿರುವ ಹಗ್ಗವನ್ನು ನಿರ್ದಿಷ್ಟ ಸಮಯದೊಳಗೆ ಬೆತ್ತದ ಮಧ್ಯಭಾಗದಿಂದ ಜಾಣ್ಮೆಯನ್ನುಪಯೋಗಿಸಿ ಹಗ್ಗವನ್ನು ಹೊರತೆಗೆದು, ಮತ್ತೆ ಮರಳಿ ಹಿಂದಿನಂತೆಯೇ ಜೋಡಿಸಬೇಕು. ಈ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಕುಶಲ ಕೆಲಸಗಳನ್ನು ಮಾಡಲು ಸಾಧ್ಯ ಎಂಬ ನಂಬಿಕೆಯಿಂದ ಅರಳದ ಇರ್ನಿಬೀಡುವಿನಲ್ಲಿ.[೪] ಎರಡು ಕಂಬಗಳನ್ನು ಇಬ್ಬರು ಬಡಗಿಗಳಿಗೆ ಕೊಟ್ಟು (ಇಬ್ಬರೂ ಪರಸ್ಪರ ಬೇಟಿಯಾಗದೆ ಕೇವಲ ಗಾತ್ರದ ಲೆಕ್ಕಾಚಾರ ನೀಡಿ) ಮಾಡಿಸಿದ ಕಂಬಗಳು ದೂರದಿಂದ ಒಂದೇ ರೀತಿಯಾಗಿ ಕಂಡರೂ ಹತ್ತಿರ ಬಂದು ನೋಡಿದಾಗ ಒಂದರಿಂದೊಂದು ಬೇರೆಯೇ ರೀತಿಯ ಕುಸುರಿ ಕೆಲಸದಿಂದ ಕೂಡಿವೆ. ಅಂದರೆ ಅಷ್ಟು ನಿಪುಣ ಕುಶಲಕರ್ಮಿಗಳಿದ್ದರು ಎನ್ನುವುದನ್ನು ಈ ಕಂಬಗಳು ಸೂಚಿಸುತ್ತವೆ.

ಕಮ್ಮಾರರ ಚಾತುರ್ಯ

ಉಲೆ, ತಿದಿ, ಸುತ್ತೆ, ಅಡ್ಯಲ್‌ಗಳೆಂಬ ಮುಖ್ಯ ಪರಿಕರಗಳನ್ನು ತಮ್ಮ ಸಾಧನಗಳಾಗಿಟ್ಟುಕೊಂಡು ಕಬ್ಬಿಣವನ್ನು ಕಾಯಿಸಿ, ಜನರಿಗೆ ಅಗತ್ಯವಾದ ಸಾಧನಗಳನ್ನು ತಯಾರಿಸಿಕೊಡುತ್ತಿದ್ದ ಕಮ್ಮಾರರು ಕೂಡ ತುಳುವರೆಲ್ಲರ ಬದುಕಿಗೆ ಬೆಂಬಲವಾದವರು. 'ಒಂಜಿ ಕಾಯ್ಪುಗು ರಡ್ ಕೊಡಪುಗು ಎಂಟ್ ಕೊಳಿಕೆಗ್ ಪದನಾಜಿ ದಾರೆದ ಕೋಡಂಬು ಮಲ್ತೆ ಆಚಾರಿ' (ಕುಪ್ಪೆ ಪಂಜುರ್ಲಿ ಪಾಡ್ದನ) ಒಂದು ಬಿಸಿಗೆ ಎರಡು ಹೊಡೆತಕ್ಕೆ ಎಂಟು ಕೊಳಿಕೆಯ ಹದಿನಾರು ಎಳೆಯ ಸಕೋದಂಡ ಮಾಡಿದ ಆಚಾರಿ. ಬಿಲ್ಲುಬಾಣ ಮೊದಲಾದ ಆಯುಧ ವಿಶೇಷಗಳ ರಚನೆಯಲ್ಲಿ ಎಂತಹ ಕಲಾನೈಪುನ್ಯತೆ ಇತ್ತು ಎಂಬುದಕ್ಕೆ ಈ ಸಾಲು ಉದಾಹರಣೆಯಂತಿದೆ.

ಅಕ್ಕಸಾಲಿಗನ ಕುಶಲತೆ

ಅಕ್ಕಸಾಲಿಗರು ಚಿನ್ನವನ್ನು ಕರಗಿಸಿ, ಜನರಿಗೆ, ಅವರು ಆರಾಧಿಸುವ ದೈವದೇವರಿಗೆ ಬೇಕುಬೇಕಾದ ಆಭರಣಾದಿಗಳನ್ನು ತಯಾರು ಮಾಡುವವರು. ಚಿನ್ನ, ಅದನ್ನು ತೂಗಲು ಗುಲಗಂಜಿ, ಮಂಜೊಟ್ಟಿಗಳು, ಸಣ್ಣ ತೂಕದ ಬಟ್ಟುಗಳು, ತೂಕ, ಚಿನ್ನದ ಕೆಲಸವನ್ನು ಮಾಡಲು ಉಲೆ, ತಿದಿ, ಇತ್ಯಾದಿಗಳು ಅವರು ಕಸುಬಿನಲ್ಲಿ ಬಳಸುತ್ತಿದ್ದ ಪರಿಕರಗಳು.

ಪ್ರತಿಯೊಂದು ಆಭರಣ ರಚನೆಯಲ್ಲೂ ಸ್ವಂತಿಕೆಯ ಮುದ್ರೆಯೊತ್ತುವುದು ಆಭರಣ ಶಿಲ್ಪಿಯ ವಿಶೇಷ. ಆದ್ದರಿಂದಲೇ ಒಂದೇ ಹೆಸರಿನ ಎರಡು ಆಭರಣಗಳಲ್ಲೂ ವ್ಯತ್ಯಾಸ ಗೋಚರ. ಆಭರಣ ಶಿಲ್ಪಿಯ ಮನೋಗತಿಯ

ಸೂಕ್ಷ್ಮತೆ ಹೀಗಿರುವಾಗ ಕಾಲಕಾಲದಲ್ಲೂ ಆಭರಣಗಳು ತಮ್ಮ ರೂಪವನ್ನು ಬದಲಾಯಿಸುವುದು ಅಸಹಜವೇನೂ ಅಲ್ಲ... ಒಂದೂವರೆ ಗುರುಗುಂಜಿ ತೂಕದ ಚಿನ್ನದಲ್ಲಿ ಮಂಜೊಟ್ಟಿ (ಒಂದು ಮರದ ಬೀಜ-ವ್ಯಾಸ ೦.೪ ಸೆಂ.ಮೀ) ಯ ಒಳಗೆ ತೂರಬಹುದಾದ (ಬೆಸುಗೆಯಿಂದ ಬೆಸೆದ) ೧೨ ಇಂಚು ಉದ್ದದಸರವನ್ನು ಸಿದ್ಧಪಡಿಸಿದಂತಹ ಕರಕುಶಲಿಗಳೂ ಇರುವುದು ಈ ಜಿಲ್ಲೆಯ ವಿಶೇಷ.[೫] ಆಭರಣ ಶಿಲ್ಪಿಯು ಪ್ರಕೃತಿಯ ಫಲ-ಪುಷ್ಪ, ಖಗ-ಮೃಗ, ಪತಂಗ, ಧಾನ್ಯ, ತರಕಾರಿ ಹೀಗೆ ಎಲ್ಲವನ್ನೂ ತನ್ನ ಒಳಗಣ್ಣಿನಲ್ಲಿ ಕಂಡು, ಅವುಗಳನ್ನು ಆಭರಣಗಳಲ್ಲಿ ಸುಂದರವಾಗಿ ಕಂಡರಸುತ್ತಾನೆ.

ತುಳುವರ ಆಭರಣಗಳಲ್ಲಿ ಮುಖ್ಯವಾಗಿ ಗುರುತಿಸಲ್ಪಡುವುದು ಗೆಜ್ಜೆಟಿಕೆ ಎಂಬ ಹಾರ. "ಈ ಹಾರದಲ್ಲಿ ಜೋಡಣೆಯ ತಂತ್ರ ಬಹು ಕ್ಲಿಷ್ಟಕರವಾದುದು. ಕಾಲು ನೀಡಿದ ಒನ ಹತ್ತಾರು ತುಣುಕುಗಳು, ಹೊರಮೈಯಲ್ಲಿ ಮೂರು ಗುಂಡುಗಳ ಸಾಲು, ಒಳಮೈಯಲ್ಲಿ ಕರಿಮಣಿ ಸಾಲು, ಇವುಗಳಿಗೆಲ್ಲ ಆಧಾರ ಒಳಗಿಂದೊಳಗೆ ಹಾದುಹೋಗುವ ಐದು ನೂಲುಗಳು[೬]. ಗೆಜ್ಜೆಟಿಕೆಯ ತಯಾರಿಕೆಯ ಬಗೆಗೆ ಈ ವಿವರಣೆ ದೊರೆಯುತ್ತದೆ. ಆಧುನಿಕ ದಿನಗಳಲ್ಲಿ ಸೂಕ್ಷ್ಮ ಕೆಲಸಗಳನ್ನು ಯಂತ್ರಗಳ ಸಹಾಯದಿಂದ ಮಾಡಿದರೂ, ಇಂತಹ ಕೆಲಸಗಳಿಗೆ ನುರಿತವರ ಕೈಚಳಕವೇ ಬೇಕಾಗುತ್ತದೆಯೆಂಬುದನ್ನು ಗಮನಿಸಬಹುದು.

ಕರಿಮಣಿ, ಚಕ್ರಸರ, ಗೋಧಿಸರ, ಮಾವಿನಕಾಯಿಸರ, ಟೀಕಿ, ಮೋಹನಮಾಲೆ, ಬುಗರಿಕಾಯಿಸರ, ಪುತ್ತಳಿ ಸರ, ಕೊರಳ ಸರದ ಮಾಲೆ-ಇತ್ಯಾದಿ ಕುತ್ತಿಗೆಗೆ ಧರಿಸುವ ಹಾರಗಳು. ಕೈಗೆ: ವಂಕಿ, ತೋಳಬಂದಿ, ನಾಗಮುರ್ಗಿ, ಬೆರಳಿಗೆ ಒಡ್ಡಿಉಂಗಿಲವನ್ನೂ ಸೇರಿದಂತೆ ವಿವಿಧ ರೀತಿಯ ಉಂಗುರಗಳು.

ಕಲ್ಲುರ್ಟಿ ಪಾಡ್ದನದಲ್ಲಿ ಹೆಣ್ಣು ಸಿಂಗಾರವಾಗುವ ಪರಿಕರಗಳನ್ನು ಗುರುತಿಸಲಾಗಿದೆ: "ತಲೆ ಬಾಚಿದಳು, ಮುತ್ತಿನ ಮುಂದಲೆಯನ್ನಿಟ್ಟಳು, ಕೊರಳಿಗೆ ಪದಕ, ಕಿವಿಗೆ ಎಣ್ಣೆವ್ತೋಲೆ, ಎಸಳುಬುಗುಡಿ, ಕೊಪ್ಪುಸರ, ಇಡೆಕಾಜಿ, ಚಲಕಿಗಳನ್ನು ಧರಿಸಿ, ಕಾಲಿಗೆ ಪಿಲ್ಲಿಮೆಂಟಿ, ಕಣ್ಣಿಗೆ ಕೋಲುಕಾಡಿಗೆ, ಕಪ್ಪುಬೊಟ್ಟು ಇಟ್ಟಳು, ಒಳ್ಳೆಯ ಸೀರೆಯುಟ್ಟಳು. ಪಟ್ಟೆಯ ರವಿಕೆ ಹಾಕಿ ಸಿಂಗಾರವಾದಳು. ಸಿರಿ ಪಾಡ್ದನದಲ್ಲಿ ಸೊನ್ನೆಗೆ ಮಾಡಿಸಿದ ಚಿನ್ನಾಭರಣಗಳ ಪಟ್ಟಿ ಹೀಗಿದೆ: ನೆತ್ತಿಗೆ ನೆತ್ತಿ ಬೈತಲೆ, ಜಡೆಗೊಂಡೆ, ಒಂಕಿ-ಪೈಜಣ, ಉರಿಗೆಜ್ಜೆ, ಸೊಂಟಕ್ಕೆ ಸೊಂಟಪಟ್ಟಿ, ಒಂಕಿ, ಮುತ್ತು ಹವಳದ ಬಳೆ, ಕಾಲುಂಗುರ, ಮುದ್ರೆಯುಂಗುರ, ಚಕ್ರಸರ, ಚಂದ್ರಸರ, ಹವಳದ ಸರ, ಮುತ್ತಿನ ಸರ ಇವೆಲ್ಲವುಗಳ ಜೊತೆಗೆ ಗೆಜ್ಜೆತ್ತಿ. ಗೆಜ್ಜೆತ್ತಿ ಎಂಬ ಸಣ್ಣ ಕತ್ತಿ ಅಲಂಕಾರವೂ ಹೌದು, ಆಯುಧವೂ ಹೌದು".[೭]

ಅಂತೆಯೇ ಸಿರಿಯ ಮದುವೆಯ ಶೃಂಗಾರದ ವಿವರಣೆಯಲ್ಲೂ ಮಾಹಿತಿಗಳು ಲಭ್ಯ ವಿದೆ-"ಬಾಲಕ್ಕೆ ಸಿರಿಯನ್ನು ಚಿಕ್ಕ ಚಾವಡಿ ಚದುರ ಮಂಟಪಕ್ಕೆ ಅಜ್ಜರು ಕರೆ ತಂದರು. ಮೂರು ಕಾಲಿನ ಪೀಠದಲ್ಲಿ ಆಕೆಯನ್ನು ಕುಳ್ಳಿರಿಸಿದರು. ಬೆಳ್ಳಿಯ ಎಣ್ಣೆಪಾತ್ರೆ, ಬಂಗಾರದ ಬಾಚಾಣಿಗೆಯನ್ನು ಊರ ಹೆಂಗಸರು ಹಿಡಿದರು. ನಾಲ್ಕು ಜನ ಮುತ್ತೈದೆ ಹೆಂಗಸರು ಸಿರಿಯ ತಲೆಕೂದಲು ಬಿಡಿಸಿ ಬಾಚಿ ಬೆನ್ನಿನ ಮೇಲೆ ಹರವಿದರು. ನೆತ್ತಿಗೆ ನೆಯ್ಯೆಣ್ಣೆ, ಕೂದಲೆಳೆಗೆ ಹನಿಯೆಣ್ಣೆಸವರಿದರು. ತಲೆಬಾಚಿ 'ಬಾಲ್ ಮುಡಿ' ಹಾಕಿದರು. ಮದುಮಗಳ ಹಣೆಗೆ ವೃತ್ತಾಕಾರದ

ಸುಂದರ ಕುಂಕುಮದ ಬೊಟ್ಟು ಇರಿಸಿದರು. ಕಣ್ಣಿಗೆ ಕೊಲ್‌ಮಯ್ ಎಳೆದರು. ಮುಗುಳು ಮಲ್ಲಿಗೆಯ ಹಾರವನ್ನು ತಲೆಗೇರಿಸಿದರು....ಬಂಗಾರದ್ ಪೆಟ್ಟಿಗೆಯೊಳಗಿಂದ ಆಭರಣಗಳನ್ನು ತೆಗೆದು ಅಲಂಕರಿಸಿದರು. ನೆತ್ತಿಗೆ ನೆತ್ತಿ ಬಗ್ತಲೆ, ಜಡೆಗೆ ಜಡೆ ಬಂಗಾರ ಇರಿಸಿದರು"[೮]. ಗಂಡುಸರು ಧರಿಸುತ್ತಿದ್ದ ಒಡವೆ ವಸ್ತ್ರಗಳ ವಿವರವು ದೇವುಪೂಂಜ ಸಂಧಿಯ ಚೆನ್ನೆಯಾಟದ ಸಂದರ್ಭದಲ್ಲಿ ದೊರೆಯುತ್ತದೆ:

"ಒಂದಾಟವಾಡಿದ ಪೂಂಜ ಅಂಗೈ ಬಳೆ ಕಳೆದುಕೊಂಡ
ಎರಡಾಟವಾಡಿದ ಮುಂಗೈ ಸರಪಳಿ ಕಳೆದುಕೊಂಡ
ಉಡಿದಾರ, ಕೊರಳಸರ, ಕೈಯ ಉಂಗುರ
ಪಟ್ಟೆ ಧೋತರ, ಪಟ್ಟೆಯಂಗಿ, ತಲೆವಸ್ತ್ರವೆಲ್ಲ ತೆಗೆದಳು"[೯೧೦]

ತೊಡುಕುಕ್ಕಿನಾರ್ ಪಾಡ್ದನದಲ್ಲಿಯೂ ಗಂಡಿನ ಶೃಂಗಾರದ ವರ್ಣನೆ ದೊರೆಯುತ್ತದೆ........ "ಏಳು ಪೆಟ್ಟಿಗೆಯ ಬಂಗಾರದ ಆಭರಣ ತರಿಸಿದರು. ಬಾಟ್ಲಿಯಲ್ಲಿದ್ದ ಪರಿಮಳದ ದ್ರವ್ಯವನ್ನು ತಂದಿರಿಸಿದರು. ಧರ್ಮ ಅರಸರು ಪರಂಗಿ ಮಣೆಯಲ್ಲಿ ಕುಳ್ಳಿರಿಸಿದರು. ಕೊರಳಿಗೆ ಪದಕವನ್ನು ಏರಿಸಿದರು. ನಡುವಿಗೆ ಡಾಬು ಇರಿಸಿದರು. ಕಿವಿಗೆ ಮುತ್ತಿನ ಆಭರಣ ಏರಿಸಿಕೊಂಡರು. ಬೆರಳಿಗೆ ಸೂರ್ಯ ಮುದ್ರೆಯ ಮುತ್ತಿನ ಉಂಗುರ ಇರಿಸಿದರು. ಕೊರಳಿಗೆ ಚಕ್ರಸರವನ್ನು ಹಾಕಿಕೊಂಡರು. ಕೈಗೆ ಬಳೆಯನ್ನು ಇಟ್ಟರು. ತಲೆಯಿಂದ ಕಾಲಬುಡದವರೆಗೆ ಅಂಗಸಿಂಗಾರವಾಯಿತು".[೧೧]

ಈ ಪಾಡ್ದನದ ಉಲ್ಲೇಖಗಳು ವಸ್ತುಗಳ ಐತಿಹಾಸಿಕ ಮಹತ್ವವನ್ನು ಗುರುತಿಸಲು ನೆರವಾಗುತ್ತದೆ. ಮೇಲಿನ ಭಾಗದಲ್ಲಿ ವರ್ಣಿತಗೊಂಡ ಆಭರಣಗಳ ಉಲ್ಲೇಖ ಬಹುಶ: ಫರಂಗಿಗಳು ಭಾರತಕ್ಕೆ ಬಂದ ನಂತರದ ಸಂದರ್ಭದ್ದು ಎಂಬುದನ್ನು ಊಹಿಸಬಹುದಾಗಿದೆ. ಸುಗಂಧ ದ್ರವ್ಯ, ಪರಂಗಿ ಮಣೆ ಮೊದಲಾದ ಉಲ್ಲೇಖಗಳು ಫಿರಂಗಿಗಳ ಸಂಪರ್ಕವನ್ನು ಶ್ರುತಪಡಿಸುತ್ತದೆ.

ಕಂಚುಗಾರ ಪೇಟೆ (ಕಂಚುಕಾರ ಕೂಟೆಲ್)

ಬಂಟ್ವಾಳದ ಬಸ್ತಿಪಡ್ಪು ಸಮೀಪದ ಕಾಳಿಕಾಂಭ ದೇವಸ್ಥಾನದ ಈ ಪ್ರದೇಶವನ್ನು ಕಂಚುಕಾರ ಪೇಟೆ ಎಂದು ಕರೆಯುತ್ತಾರೆ. ಇಲ್ಲಿ ಮೂಲತ: ಕಂಚು ಹಿತ್ತಾಳೆಯ ಪಾತ್ರೆ ಪಗಡೆಗಳನ್ನು ತಯಾರಿಕಯ ವಿಶ್ವಕರ್ಮ ಸಮುದಾಯದ ಕುಟುಂಬಿಕರು ವಾಸ್ತವವಿದ್ದರು. ಅವರು ತಮ್ಮ ಕುಲಕಸುಬಲ್ಲಿ ನಿರತರಾಗಿದ್ದರು.

ಕಂಚುಕಾರ ಪೇಟೆಯ ಕೆಳಭಾಗದಲ್ಲಿ ಜಟ್ಟಿಪಲ್ಲವೆಂಬ ಕಡವಿದ್ದು ಇಲ್ಲಿಂದ ಮಂಗಳೂರು ಬಂದರಿಗೆ ಶತಮಾನದ ಹಿಂದೆ ವಸ್ತುಗಳು ರವಾನೆಯಾಗುತ್ತಿದ್ದವು. ಅಂದರೆ ವ್ಯಾಪಾರ ವಹಿವಾಟು ನಡೆಯುತ್ತಿದ್ದ ಸ್ಥಳವಾಗಿತ್ತು.

ಈ ಭಾಗದ ಮಾಗಣೆ ದೈವ ಕನಪಾಡಿತ್ತಾಯದ ನುಡಿಗಟ್ಟಿನಲ್ಲಿ ಈ ರೀತಿಯಾಗಿ ಉಲ್ಲೇಖವಿದೆ: 'ಅರ್ಕುಲದ ತಾರ್ಡ್ದ ಕಂಚಿಕಾರ ಕುಟೇಲ್ ಮುಟ್ಟ' ಎಂದು ತನ್ನ ಅಧಿಕಾರದ ವ್ಯಾಪ್ತಿಯನ್ನು ಹೇಳುವುದು ಇದೆ. ಹಾಗಾಗಿ ಈ ಕಂಚಿಕಾರ ಪೇಟೆ ಎನ್ನುವುದು ಒಂದು ಐತಿಹಾಸಿಕವಾದ ದಾಖಲೆಯಾಗಿದೆ.

ಕಂಚು, ಹಿತ್ತಾಳೆಯ ಕೆಲಸ ಮಾಡಲು ಉಲೆ, ತಿದಿ, ಇದ್ದಿಲು, ಅಚ್ಚೆ, ಹಿತ್ತಾಳೆ, ಚೆಂಬು, ಕಂಚು ಇತ್ಯಾದಿಗಳನ್ನು ಬಳಸಿಕೊಂಡು ಪಾತ್ರೆಪಡಿಗೆಗಳಲ್ಲದೆ ದೈವದೇವರ ಮುಖವಾಡ, ಮೂರ್ತಿಗಳನ್ನು ಮಾಡಿಕೊಡುತ್ತಿದ್ದವರು ಮೂಚಾರಿಗಳೆಂದು ಕರೆಯಲ್ಪಡುತ್ತಿದ್ದರು.

ಕೆತ್ತನೆಯ ಶಿಲ್ಪಿಗಳು

“ಬಾಜಿ ತೆಗೆದು ಬಗಲಲ್ಲಿರಿಸಿದ ಭೀಮಸುತ್ತಿಗೆ ತಕ್ಕೊಂಡ
ಉಳಿ ಮಸೆದು ಚೀಲದಲ್ಲಿರಿಸಿದ
ಅಳೆಯುವ ನೂಲು ಲೆಕ್ಕದ ಕೋಲು ಹಿಡಕೊಂಡ”[೧೨]

ಹೀಗೆ ಸನ್ನದ್ಧರಾದ ಶಿಲ್ಪಿಗಳು ತುಳುನಾಡಿನ ಹೆಚ್ಚಿನ ಕಡೆ ಲಭ್ಯವಾಗುವ ಶಿಲೆಕಲ್ಲನ್ನು ಉಳಿ, ಬಾಜಿ, ಸುತ್ತಿಗೆಗಳನ್ನು ಬಳಸಿ, ಬೇಕಾದ ಆಕಾರಕ್ಕೆ ತಿರುಗಿಸುತ್ತಿದ್ದ ಜಾಣ್ಮೆಯ ಕೆಲಸವನ್ನು ಮಾಡುತ್ತಿದ್ದರು. ಅವರು ಮಾಡುತ್ತಿದ್ದ ಕೆಲಸಕಾರ್ಯಗಳ ವಿವರಣೆಯೂ ಅದೇ ಪಾಡ್ದನದ ಮುಂದಿನ ಭಾಗದಲ್ಲಿ ದೊರೆಯುತ್ತದೆ:

ಧಾರೆ ನೋಡಿ ಕಲ್ಲ ಸೆರೆಗೆ ಉಳಿಯಿಕ್ಕಿದ
ತೆಂಗಿನ ಗರಿ ಸೀಳಿದಂತೆ ಸೀಳಿತು ಬಾಳೆ ಹೊದಿಕೆಯಂತೆ ಭಾಗವಾಯಿತು
ಮಾಡಲಾಗದ ಕೆಲಸ ಮಾಡಿದ ಶಂಭುಕಲ್ಕುಡ
ದೇವರಿಗೆ ದೇಗುಲದ ಕೆಲಸ ಮಾಡಿದ
ಸಾವಿರ ಕಂಬದ ಬಸದಿಯ ಕೆಲಸ ಮಾಡಿದ
ನೂರಿಪ್ಪತ್ತು ಬೊಂಬೆಗಳ ಕೆಲಸ ಮಾಡಿದ
ಏಳುಗುಡಿಗಳಲ್ಲಿ ಏಳು ದೇವರ್ಕಳನ್ನು ನಿರ್ಮಿಸಿದ
ಅಂಗಳದಲ್ಲಿ ಆನೆಕಲ್ಲಿನ ಕೆಲಸಗೈದ
ಗುಮ್ಮಟಸ್ವಾಮಿಯ ಕೆಲಸಗೈದ[೧೩]

ಗೊಮ್ಮಟ ವಿಗ್ರಹ, ಮೂಡಬಿದ್ರೆಯ ಜೈನ ಬಸದಿಗಳು, ಕದ್ರಿ ದೇವಸ್ಥಾನ ಇವುಗಳು ಇಲ್ಲಿನ ಶಿಲ್ಪಿಗಳ ಚಾತುರ್ಯವನ್ನು ಪ್ರಕಟಗೊಳಿಸುತ್ತದೆ.

ಕೊರಗರ ಕುಶಲತೆ

“ಆ ಕಾಲದಲ್ಲಿ ನನ್ನ ಕುಲಜನ್ಮದ ಕೆಲಸ ಕಲಿಯುವೆನೆಂದ
ನನಗೊಂದು ಪೀಂಪಿಲಿ ಕತ್ತಿ ಕೊಡಿ ಎಂದ, ಕತ್ತಿ ತಂದುಕೊಟ್ಟರು
ಬಿದಿರ ಮಲೆಗೆ ಹೋದ ಒಂದು ತುಂಡು ಬಿದಿರು ತಂದ
ಬಿದಿರಿನ ಒಳಭಾಗ ಕಡಿದ, ಹೊರಸಿಪ್ಪೆ ಎಬ್ಬಿಸಿದ
ದಿಣ್ಣೆಯಲ್ಲಿ ಕುಳಿತ, ಅತ್ತರಿಗೆ ಅಡಿ, ಬಳ್ಳಕ್ಕೆ ಬಾಯಿ,
ಗೆರಸೆಗೆ ಮೂಲೆ ಗಾಟಿಕೆಕುಕ್ಕೆಗಳಿಗೆ ಕೈ ಇರಿಸಿದ

ಕಣಜಬುಟ್ಟಿ ‘ಕೈಕುಡುಪು’ ಸಿದ್ಧಗೊಳಿಸಿದ”[೧೪] ‘ಕೊರಗತನಿಯ ಪಾಡ್ದನ’ದ ಈ ಭಾಗ ಕೊರಗ ಸಮುದಾಯಕ್ಕೆ ಸೇರಿದ ಕೊರಗತನಿಯನ ಕುಲಕಸುಬಿನ ಕುರಿತು ವಿವರಣೆಯನ್ನು ಒದಗಿಸುತ್ತದೆ.

ಹುಲ್ಲಿನಿಂದ ಚಾಪೆಯನ್ನು ಸಾಮಾನ್ಯವಾಗಿ ತುಳುನಾಡಿನಲ್ಲಿ ಜೋಗಿ ಜನಾಂಗದವರೂ (ಪುರುಸೆರ್) ತಯಾರಿಸುತ್ತಿದ್ದರು. ತುಳುನಾಡಿನಲ್ಲಿ ಹೆಚ್ಚಾಗಿ ಬಳಕೆಯಲ್ಲಿದ್ದ ಮುಂಡೇವು ಚಾಪೆಯನ್ನು ಮುಂಡೇವು ಪೊದೆಯ ಗರಿಯಿಂದ ಸಿದ್ಧಪಡಿಸಲಾಗುತ್ತದೆ. ಇದನ್ನು ಎಲ್ಲಾ ಜಾತಿ ವರ್ಗದವರು ಸ್ವತ: ತಯಾರಿಸುತ್ತಾರೆ.

ಕುಂಬಾರಿಕೆ

ಮಣ್ಣಿನಿಂದ ತಯಾರಿಸಲಾಗುವ ವಸ್ತುಗಳನ್ನು ಕುಂಬಾರರು ಮಾಡುತ್ತಿದ್ದರು. “ಮಣ್ಣ ಮಣ್ಣಿನೊಳುದಿಸಲದರಲಿ ಮಣ್ಣ ಬೊಂಬೆಗಳಾಗಿ ರಂಜಿಸಿ ಮಣ್ಣಿನಾಹಾರದಲಿ ಜೀವವ ಹೊರೆದು ಉಪಚರಿಸಿ। ಮಣ್ಣಿನಲಿ ಬಂಧಿಸಿದ ದೇಹವ ಮಣ್ಣುಗೂಡಿಸಬೇಡ ಜ್ಞಾನದ ಕಣ್ಣ ದೃಷ್ಟಿಯನಿತ್ತು ರಕ್ಷಿಸು”ಎಂಬುದು ಕನಕದಾಸರ ಕೀರ್ತನೆಯ ಸಾಲುಗಳು. ತುಳುವರು ಮಣ್ಣಿನಲ್ಲಿ ಹುಟ್ಟಿ, ಮಣ್ಣಿನ ಮಕ್ಕಳಾಗಿ ಬೆಳೆದು, ಮಣ್ಣಿನಲ್ಲಿಯೇ ಹೆಣಗಾಡಿ ಜೀವನವನ್ನು ಸಾಗಿಸಿದವರು. ಈ ಮಣ್ಣಿನ ಬೆಲೆ ತಿಳಿದಿದ್ದ ಅವರು ಮಣ್ಣಿನ ಪಾತ್ರೆಗಳಲ್ಲಿಯೇ ಬೇಯಿಸಿ ಆಹಾರವನ್ನು ಬಳಸುತ್ತಿದ್ದುದು ಸಾಮಾನ್ಯವಾಗಿತ್ತು. ಇದು ಆರೋಗ್ಯದಾಯಕವೆಂಬುದನ್ನು ಅವರು ತಿಳಿದಿದ್ದರು. ತುಳುವರೆಲ್ಲರ ಮಣ್ಣಿನ ಪಾತ್ರೆಗಳ, ಅಥವಾ ಮಣ್ಣಿನಲ್ಲಿ ವಿವಿಧ ಬಗೆಯ ಪರಿಕರಗಳನ್ನು ಮಾಡಿಕೊಡುತ್ತಿದ್ದವರು ‘ಒಡಾರಿ’ ಎಂಬ ಸಮುದಾಯದವರು. ಇವರನ್ನು ‘ಮೂಲ್ಯ’ರೆಂದೂ ಕರೆಯುವುದಿದೆ. ‘ಒಡು’= ಹೆಂಚು. ಇದನ್ನು ಮಾಡುವಾತ ‘ಒಡಾರಿ’ ಎಂಬ ಪದನಿಷ್ಪತ್ತಿ ದೊರೆಯುತ್ತದೆ. “ಒಡಾರದಲ್ಲಿ ದುಡಿಯುವಾತ” ಎಂಬ ಅರ್ಥಕ್ಕೆ ‘ಗಡಿಗೆ ಮಾಡುವ ಕರ್ಮಶಾಲೆಯಾತ’ ಎಂಬ ಅರ್ಥ ದೊರೆಯುತ್ತದೆ. ತುಳುವರ ದೊಡ್ಡದೊಡ್ಡ ಸಮಾರಂಭಗಳಲ್ಲಿ ಅಡುಗೆಯ ಕೆಲಸವನ್ನೂ ಇವರೇ ನಿರ್ವಹಿಸುತ್ತಿದ್ದರು.

“ಕುಂಬಾರನಿಗೆ ತನ್ನ ಚಕ್ರ ಸಾಧಾರಣ ಚಕ್ರವಲ್ಲ. ಅದು ಅವನಿಗೆ ಅನ್ನ ಕೊಡುವ ತಾಯಿ, ಶಕ್ತಿಯ ಸ್ವರೂಪ. ಸ್ವತ: ಪಾರ್ವತಿದೇವಿಯೆ ಮಾಡಿಕೊಟ್ಟ ಚಕ್ರವದು. ‘ತಿಗರಿ’ ಎಂದು ಇದರ ಹೆಸರು. ಚಕ್ರದ

ಅರೆಕಾಲುಗಳಿಗೆ ಶಕ್ತಿಯ ತೋಳ ಬಲವಿದೆ. ಚಕ್ರ ತಿರುಗಲು ಅನುಕೂಲವಾಗುವಂತೆ ಚಕ್ರದ ಮಧ್ಯೆ ಕೆಳಭಾಗಕ್ಕೆ ಅಳವಡಿಸಿರುವ ಬುಗುರಿ ಶಕ್ತಿ ಅಥವಾ ಶಕ್ತಿಯಿಂದ ಹತಳಾದ ರಾಕ್ಷಸಿಯ ಮೊಳೆ ಎಂದೇನೋ ಹೇಳುತ್ತಾರೆ. ಹಾಗೆಯೇ ತಿಗರಿಕೋಲು, ತಿಗರಿಪೀಠ, ಮಣ್ಣು ಹೆರೆಯುವ ಬಳೆ, ಹಸಿ ಮಡಕೆಯನ್ನು ಚಕ್ರದಿಂದ ಬೇರ್ಪಡಿಸಲು ಬಳಸುವ ಸೂಜಿ, ಆಕಾರ ಕೊಡಲು ಬಳಸುವ ಬಟ್ಟೆಯ ತುಂಡು, ತಟ್ಟುವ ಕೊಡತಿ, ಗುಂಡು, ಸುಡುವ ಆವಿಗೆ ಇವಕ್ಕೆಲ್ಲಾ ಕತೆಗಳಿವೆ, ನಂಬಿಕೆ ಸಂಪ್ರದಾಯ ಆಚರಣೆಗಳಿವೆ. ಪ್ರತಿಯೊಂದು ವಸ್ತುವನ್ನೂ ಅದರದೇ ಆದ ಹೆಸರಿನಿಂದ ಕರೆಯಲಾಗುತ್ತದೆ. ಗಾದೆ, ಒಗಟು, ಹಾಡುಗಳಲ್ಲಿ ಇವನ್ನು ಕುರಿತು ಹೇಳಲಾಗಿದೆ".[೧೫] ಕುಂಬಾರಿಕೆಯಲ್ಲಿ ಬಳಸುವ ಪರಿಕರಗಳ ಸವಿಸ್ತಾರವಾದ ವಿವರಣೆ ಶಿವರಾಮು ನೀಡಿದ್ದಾರೆ.

ನೇಕಾರಿಕೆ

ಕಾಳೂರ ಕರಿಯ ಪಟ್ಟೆ, ಬೋಳೂರ ಬೊಳಿಯ ಪಟ್ಟೆ, ಮದವೂರ ಮಂಜಲ್ ಪಟ್ಟೆ, ಮೂಂಕುದ ಸುಯ್ಲಗ್ ಮುನ್ನೂರು ಗಾವುದ ಪಾರಿಪಟ್ಟೆ, ಕಣ್ಣನೀರ್ಡ್ ನೆನಪಿಪಟ್ಟೆ, ಉಗುರುದ ನಾಲೆಡ್ ದೆಂಗಿ ಪಟ್ಟೆ. ಇಂತಹ ಕುಶಲ ಕುಸುರಿಯ ನಾಜೂಕಾದ ಬಟ್ಟೆಗಳನ್ನು ತಯಾರಿಸುತ್ತಿದ್ದರು. ಸಿಂಧೂನದಿಯ ನಾಗರೀಕತೆಯ ಕಾಲದಲ್ಲಿಯೇ ಭಾರತವು ಹತ್ತಿ, ಹತ್ತಿ ಬಟ್ಟೆಯ ಉತ್ಪಾದನೆಗಳಿಗೆ ಹೆಸರುವಾಸಿಯಾಗಿತ್ತೆಂದು ತಿಳಿದುಬರುತ್ತದೆ. ಗ್ರೀಕರು ಇದನ್ನು 'ಸಿಂಧೂನ್' ಎಂದು ಕರೆಯುತ್ತಿದ್ದರು.

ತಾಲಿಯೆರು ತಯಾರಿಸುತ್ತಿದ್ದ ಬಗೆ ಬಗೆಯ ವಸ್ತ್ರದ ವಿವರಣೆ ಪಾಡ್ದನಗಳಲ್ಲಿ ದೊರೆಯುವುದು–

"ಕಾವೂರ ಕರಿಯ ಪಟ್ಟೆ
ಬೋಳೂರ ಬೊಲಿಯ ಪಟ್ಟೆ
ಮದವೂರ ಮಂಜಲ್ ಪಟ್ಟೆ
ಮೂಂಕುದ ಸುಯಿಲ್‌ಗ್ ಮುನ್ನೂದು
ಗಾವುದ ರಾಪಿ ಪಟ್ಟೆ
ಕಣ್ಣ ನೀರ್‌ಡ್ ನೆನೆಪಿ ಪಟ್ಟೆ
ಉಗುರುದೆಡೆಟ್ ಅಡಂಗು ಪಟ್ಟೆ"[೧೬]

'ಕಾವೂರು, ಬೋಳೂರು, ಇರ್ವದೂರು (ಪೆರ್ಡೂರು ಬಳಿ) ಬಟ್ಟೆ ಉತ್ಪಾದನೆಯ ಕೇಂದ್ರಗಳಾಗಿದ್ದವು. ಬೋಳೂರಿನಲ್ಲಿ ಸಾಂಪ್ರದಾಯಿಕ ನೇಯ್ಗೆಗಾರರಿದ್ದುದನ್ನು ಸ್ಮರಿಸಬಹುದು. ಪಾಡ್ದನಗಳಲ್ಲಿ ಕಾವೂರು ಮತ್ತು ಬೋಳೂರು ರೇಷ್ಮೆ ಬಟ್ಟೆಗಳಿಗೆ ಪ್ರಸಿದ್ದವಾಗಿತ್ತು. ಕೊಟಿ ಚೆನ್ನಯರಿಗೆ ಪದುಮಲೆ ಬಲ್ಲಾಳ ಊಟೋಪಚಾರದ ವ್ಯವಸ್ಥೆ ಮಾತ್ರವಲ್ಲ ಅವರಿಗೆ ಪಚ್ಚಡೆ ಬಟ್ಟೆ, ಮಂದಿರಿ ಕೊಡಿಸಿದನು. ಅಲ್ಲದೆ ಬೋಳೂರಿನಿಂದ ತರಿಸಿದ ಬಿಳಿಯ

ರೇಷ್ಮೆ ಬಟ್ಟೆ ಕಾವೂರಿನ ಕರಿಯ ಬಟ್ಟೆಯನ್ನು ನೀಡಿದ ವಿವರಣೆಯನ್ನು ಪಾಡ್ದನಗಳಲ್ಲಿ ಲಭ್ಯವಾಗಿದೆ ಎಂದು ಬಿ.ಎ ಸಾಲೆತ್ತೂರು ತಿಳಿಸುತ್ತಾರೆ'[೧೬]

ಮೀನುಗಾರಿಕೆ

ತುಳುನಾಡಿನ ಹಳ್ಳ-ಕೊಳ್ಳಗಳಲ್ಲಿ, ನದಿ ತೋಡುಗಳಲ್ಲಿ ಸಿಹಿನೀರ ಮೀನು ಹಿಡಿಯುವುದು ವಾಡಿಕೆ. ಕೆಲವು ದಶಕಗಳ ಹಿಂದೆ ಇಲ್ಲಿ ವಿವಿಧ ತಳಿಯ ಮೀನುಗಳು ವಿಪುಲವಾಗಿ ದೊರೆಯುತ್ತಿದ್ದವು. ಇದೊಂದು ತುಳುವರ ಮುಖ್ಯ ಆಹಾರವೂ ಆಗಿತ್ತು. ಪಾಡ್ದನಗಳಲ್ಲಿಯೂ ಮೀನು ಹಿಡಿಯುವಿಕೆಯ ಕುರಿತು ಮಾಹಿತಿ ಲಭ್ಯವಿದೆ.

ಮುಖ್ಯವಾಗಿ ಗಾಳ ಹಾಕುವ ಮುಖಾಂತರ ಮೀನು ಹಿಡಿಯಲಾಗುತ್ತಿತ್ತು. ಗಾಳಕ್ಕೆ ಈಚಲು ಸಸಿಯ ಸೋಗೆಯ ದಂಡನ್ನು ಬಳಸುತ್ತಾರೆ. ಸುಮಾರು ೬ ಅಡಿ ಉದ್ದದ ಒಣಗಿಸಲಾದ ಈ ದಂಡಿಗೆ ಸುಮಾರು ೮ ಅಡಿ ಉದ್ದದ ತಂಗೀಸನ್ನು ಕಟ್ಟಿ ಇನ್ನೊಂದು ಬದಿಗೆ ಕಬ್ಬಿಣದಿಂದ ತಯಾರಿಸಲಾದ 'ಯು' ಆಕಾರದಲ್ಲಿರುವ ಕಬ್ಬಿಣದ ಗಾಳವನ್ನು ಪರಿಣಿತರು 'ಕಾಂಬು' ಹಾಕಿ ಜೋಡಿಸುತ್ತಾರೆ. ಕಾಂಬು ಎಂದರೆ ಗಾಳವನ್ನು ಜಾರದಂತೆ ಗಟ್ಟಿಯಾಗಿ ಕಟ್ಟುವ ಒಂದು ವಿಧಾನ. ಇದೊಂದು ಸರಳವಾದ ವಿಧಾನ.

ಇಲ್ಲಿ ಮೀನು ಹಿಡಿಯಲು ಮಕ್ಕೇರಿ, ಕುಂಜೋಲು, ಕೂರಿ, ಬಲೆ ಮುಂತಾದ ವಿವಿಧ ಪರಿಕರಗಳನ್ನು ಬಳಸುತ್ತಾರೆ. ಇದಲ್ಲದೆ ಮೀನು ಹಿಡಿಯಲು ಟೊಕೊಲು ಹಾಕುವುದು, ಪುಂಡಿ ಕಲ, ಕಡು ಹಾಕುವುದು ಮುಂತಾದ ಕ್ರಮದಲ್ಲಿಯೂ ಹಿಡಿಯಲಾಗುತ್ತಿತ್ತು. ಆಧುನಿಕ ದಿನಗಳಲ್ಲಿ ಗರ್ನಾಲ್, ತೋಟೆಗಳನ್ನು ಬಳಸಿ ಮೀನು ಹಿಡಿಯುತ್ತಾರೆ.

ಮಕ್ಕೇರಿ, ಕುಂಜೋಲು, ಕೂರಿಗಳನ್ನು ಮುಖ್ಯವಾಗಿ ತೋಡುಗಳ ಬದಿಗಳಲ್ಲಿ ದೊರೆಯುವ ಬಿದಿರಿನ ಜಾತಿಯ ಓಟೆಯಿಂದ ರಚಿಸಲಾಗುತ್ತದೆ.

ಉಬಾರ್ ಬರ್ತುನಿ

ಮೀನುಗಳು ವಿಪುಲವಾಗಿದ್ದ ಆ ದಿನಗಳಲ್ಲಿ ಮಳೆಗಾಳದ ಮೊದಲ ನೀರು ಹರಿಯುವ ಸಂದರ್ಭದಲ್ಲಿ ನದಿಯಿಂದ, ತೋಡುಗಳಲ್ಲಿ ಮೀನುಗಳು ಮೇಲ್ಮುಖವಾಗಿ ಹರಿದು ಬಂದು ಹಳ್ಳಕೊಳ್ಳಗಳನ್ನು ಸೇರುತ್ತಿದ್ದವು. ಈ ರೀತಿ ಮೀನುಗಳು ಬಹಳಷ್ಟು ಸಂಖ್ಯೆಯಲ್ಲಿ ಮೇಲ್ಮುಖವಾಗಿ ಹರಿದು ಬರುವ ತೀವ್ರತೆಯನ್ನು ಪುಷ್ಟೀಕರಿಸಲು ತುಳುವರಲ್ಲಿ ಗಾದೆಯೊಂದಿದೆ. 'ಉಬಾರು ಬತ್ತಿನ ಕಲ್‌ಂಬುರ ಮೀನು ತಾರೆದ ಕುಬೆಲ ಸೇರು' (ಉಬಾರು ಹತ್ತಿದ ಕಲ್‌ಂಬುರ ಮೀನು ತಾಳೆ ಮರದ ತುದಿಯನ್ನು ಸೇರಬಹುದು).

ಸಮುದ್ರ ಮೀನುಗಾರಿಕೆ

ತುಳುನಾಡಿನಲ್ಲಿ 'ಬಂಡಿಯ ಬೋವತನ' [ಕುಮಾರವ್ಯಾಸ] ವನ್ನೂ ನಿರ್ವಹಿಸುತ್ತಿದ್ದ ಮೊಗವೀರ (ಮರಕಾಲ)ರ ಮುಖ್ಯ ಕಸುಬು ಮೀನುಗಾರಿಕೆ. ಈ "ಮೊಗೆಯ" = ದೋಣಿಯಲ್ಲಿ ವ್ಯವಹರಿಸುವವನು. ದಿನಗಟ್ಟಲೆ ಕಡಲಿನಲ್ಲಿದ್ದು ಮೀನು ಹಿಡಿದು, ತಂದು ಬಳಕೆಗೆ ಒದಗಿಸುತ್ತಿದ್ದ ಮೀನುಗಾರರು ತಮ್ಮ ಜೀವನದ ಅಗತ್ಯಗಳನ್ನು ತಾವೇ ಪೂರೈಸಿಕೊಳ್ಳುತ್ತಿದ್ದರು. ಮೀನು ಹಿಡಿಯಲು ದೋಣಿ, ಜಲ್ಲ, ಮತಾಯಿ, ಕಾನೆಕೋಲು, ರಂಪೋನಿ (ಮಾರಿಬಲೆ), ಗೋರುಬಲೆ, ಕೈರಂಪನಿ, ಕೈಬಲೆ, ಕಂತಲೆ, ಪಟ್ಟೆಬಲೆ, ಕಂಪಬಲೆ, ಬೀಸುಬಲೆ, ಬೇಪು ಇವೆಲ್ಲವನ್ನು ಬಳಸುತ್ತಿದ್ದರು.

ಮೀನುಗಾರಿಕೆಗೆ ಅಗತ್ಯವಿದ್ದ ಎಲ್ಲ ಪರಿಕರಗಳನ್ನೂ ಅವರೇ ಸಿದ್ಧಪಡಿಸುತ್ತಿದ್ದರು. ಕೆಲವೊಮ್ಮೆ ಬಡಗಿಗಳ, ಮತ್ತಿತರರ ಸಹಾಯವನ್ನೂ ಪಡೆಯುತ್ತಿದ್ದರು. ಒಂದೇ ಮರದಿಂದ ಕೊರೆದು ದೋಣಿಗಳನ್ನು ತಯಾರಿಸುತ್ತಿದ್ದರು. ತುಂಡು ಜೋಡನೆ ಮತ್ತು ಬಿರುಕುಗಳನ್ನು ಮುಚ್ಚಲು ಪತ್ತೆ ಮತ್ತು ಜಿಡ್ಡನ್ನು ತೆಂಗಿನ ನಾರಿನ ಹಗ್ಗದಿಂದ ಕಟ್ಟಲಾಗುತ್ತಿತ್ತು. ದೋಣಿಯ ಮುಂಭಾಗವನ್ನು 'ಅನ್ಯ' ಮತ್ತು ಹಿಂಭಾಗವನ್ನು 'ಅಬರ'ವೆಂದು ಕರೆಯಲಾಗುತ್ತದೆ. ದೋಣಿಯ ಚಾಲನೆಗೆ ಮರದ ಹುಟ್ಟುಗಳನ್ನು ಉಪಯೋಗಿಸಲಾಗುತ್ತದೆ.

ಮೀನು ಹಿಡಿಯಲು ಬಲೆಯನ್ನು ವ್ಯಾಪಕವಾಗಿ ಬಳಸಲಾಗುತ್ತದೆ. ಬಲೆ ನೇಯುವಿಕೆಯ ಜಾಣ್ಮೆ ಅವರದೇ ಆಗಿತ್ತು. ಬಲೆಗಳು ಸೆಣಬಿನ ನಾರಿನಿಂದ ತಯಾರಾಗುತ್ತಿದ್ದವು. ಸೆಣಬು ಗಿಡದ ತುದಿ ಮತ್ತು ಬುಡವನ್ನು ಕತ್ತರಿಸಿ ಒಣಗಿಸಿ ನಂತರ ನೀರಲ್ಲಿ ನೆನೆಸಲಾಗುತ್ತದೆ. ಮತ್ತೊಮ್ಮೆ ಒಣಗಿಸಿ ನಾರನ್ನು ಬೇರ್ಪಡಿಸಿ ಬಲೆಯನ್ನು ತಯಾರಿಸಲಾಗುತ್ತದೆ. ಬಲೆ ನೀರಿನಲ್ಲಿ ಮುಳುಗುವಂತೆ ಮಾಡಲು ಸೀಸದಿಂದ ತಯಾರಾದ ಸುರುಳಿಗಳನ್ನು ಉಪಯೋಗಿಸಲಾಗುತ್ತಿತ್ತು ಮತ್ತು ಇನ್ನೊಂದು ಬದಿ ತೇಲುವಂತಾಗಲು ವಿಶೇಷ ಮರದಿಂದ ತಯಾರಾದ 'ಗಲಿ'ಯನ್ನು ಉಪಯೋಗಿಸಲಾಗುತ್ತಿತ್ತು. ಬಲೆಯನ್ನು ಸಂರಕ್ಷಿಸಲು ಮತ್ತು ಅದರ ಬಾಳಿಕೆ ಹೆಚ್ಚಾಗಲು 'ಪನ್ಪು' ಎನ್ನುವ ಮರದಿಂದ ತಯಾರಿಸಲ್ಪಟ್ಟ ರಸವನ್ನು ಉಪಯೋಗಿಸುತ್ತಿದ್ದರು.

ಬೀಸುಬಲೆ

ಇದು ವೃತ್ತಾಕಾರದಲ್ಲಿರುವ ಸೆಣಬಿನ ಬಲೆ. ಇದನ್ನು ಸಮುದ್ರದ ತೀರ ಪ್ರದೇಶದಲ್ಲಿ, ನದಿ ಮತ್ತು ಕೆರೆಗಳಲ್ಲಿ ಉಪಯೋಗಿಸಲಾಗುತ್ತದೆ. ತೆಪ್ಪದ ಮೀನನ್ನು ಹಿಡಿಯಲು ದೋಣಿಯ ಮುಂದಿನ ತುದಿಯಲ್ಲಿರುವ್ ಆಡ್ಡ ಹಲಗೆಯಲ್ಲಿ ನಿಂತು ಬೀಸಲಾಗುತ್ತದೆ. ಬಲೆಗಳಲ್ಲಿ ಸಣ್ಣ ಕಣ್ಣಿನ ಬಲೆಗೆ ಚಿಕ್ಕಲೆ, ದೊಡ್ಡ ಕಣ್ಣಿನ ಬಲೆಗೆ ತರ್ಬಲೆ, ತಗ್ಗದ ಬಲೆ, ತೂಲ್ದ ಬಿಸನದ ಬಲೆ, ವೈಬಲೆ, ಪಟ್ಟೆಬಲೆ ಇತ್ಯಾದಿ ಅನೇಕ ನಮೂನೆಯ ಬಲೆಗಳನ್ನು ಉಪಯೋಗಿಸಲಾಗುತ್ತಿತ್ತು. ಭಾರಿ ಮೀನುಗಳನ್ನು ಹಿಡಿಯಲು ಗಟ್ಟಿಮುಟ್ಟಾದ ಬಲೆಗಳ ಅವಶ್ಯಕತೆ ಇತ್ತು.

ರಂಪಣಿ ಬಲೆ

ರಂಪಣಿಯ ಬಳಕೆ ೧೯೧೦ರಿಂದ ಆರಂಭಗೊಂಡಿತು. ರಂಪಣಿಯನ್ನು ಗೋವಾ ತೀರಕ್ಕೆ ಪರಿಚಯಿಸಿದವರು ಕ್ರೈಸ್ತ ಪಾದ್ರಿ ರಂಪನ್ ಮತ್ತು ಅವರ ಹೆಸರಿನಲ್ಲಿಯೇ ರಂಪಣಿಯೆಂದು ಕರೆಯಲ್ಪಟ್ಟಿತು. ಕರ್ನಾಟಕ ಕರಾವಳಿಗೆ ರಂಪಣಿ ಗೋವಾದಿಂದ ಬಂದಿತ್ತೆನ್ನಲಾಗುತ್ತದೆ. ಈ ವಿಧಾನದ ಮೀನುಗಾರಿಕೆಯನ್ನು ತೀರಕ್ಕೆ ಹತ್ತಿರವಿರುವ ಆಳವಿಲ್ಲದ ಪ್ರದೇಶದಲ್ಲಿ ತೆಪ್ಪದ ಮೀನನ್ನು ಹಿಡಿಯಲು ಬಳಕೆಯಾಗುತ್ತಿತ್ತು. ಈ ಪದ್ಧತಿಯನ್ನು ಬೃಹತ್ ಮೀನುಗಾರಿಕಾ ವಿಧಾನವೆಂದೂ ಕರೆಯಬಹುದು (ಎಸ್.ಕೆ. ಉಚ್ಚಿಲ, ಮೋಗವೀರರ ವೃತ್ತಿಗಳು, ಮೋಗವೀರ ಸಮಾಜ ಒಂದು ಅಧ್ಯಯನ, ೨೦೧೪ ಪು ೭೮-೭೯). ಕೈ ರಂಪಣಿ ಚಿಕ್ಕ ಪ್ರಮಾಣದ ಮೀನುಗಾರಿಕಾ ವಿಧಾನ.

೧೯೫೯ ರಲ್ಲಿ ಯಾಂತ್ರಿಕ ಮೀನುಗಾರಿಕೆ ಆರಂಭಗೊಂಡಿತು. ಮೊದಲಿಗೆ ಟ್ರಾಲರುಗಳು ಬಂದವು. ಇದನ್ನು ಅನುಸರಿಸಿಕೊಂಡು ಪರ್ಸೀನ್ ನೆಟ್ ಬೋಟುಗಳ ಆಗಮನವಾಯಿತು. ಯಾಂತ್ರಿಕೃತ ದೋಣಿ ಹಾಗೂ ಗಿಲ್ ನೆಟ್ ಗಳು ಪಾರಂಪರಿಕ ಮೀನುಗಾರಿಕಾ ವಿಧಾನವನ್ನು ಬದಿಗೆ ಸರಿಸಿತು. ಈಗೀಗ ದೊಡ್ಡ ಪ್ರಮಾನದಲ್ಲಿ ಮೀನುಗಾರಿಕೆ ವರ್ಷಪೂರ್ತಿ ನಡೆಯುತ್ತಿದೆ. ಬಲೆಯ ಕಣ್ಣುಗಳ ಅಗಲ ಕಡಿಮೆಯಾಗಿರುವುದರಿಂದ ಸಣ್ಣ ಮೀನುಗಳು ಕೂಡಾ ಬಲೆಗೆ ಬೀಳುತ್ತಿದೆ.

ಸಾಂಪ್ರದಾಯಿಕ ಮೀನುಗಾರಿಕೆಯಲ್ಲಿ ಹಲವಾರು ನಿಯಂತ್ರಣಗಳಿದ್ದವು. ರಾತ್ರಿ ವೇಳೆ ಮೀನುಗಾರಿಕೆ ಮಾಡುವಂತಿರಲಿಲ್ಲ. ಮೀನುಗಾರರು ತೀರದಿಂದ ಸ್ವಲ್ಪವೇ ದೂರ ಹೋಗಬಹುದಾಗಿತ್ತು. ಮಳೆಗಾಲದಲ್ಲಿ ಮೀನು ಹಿಡಿಯುವುದಕ್ಕೆ ನಿಷೇದವಿತ್ತು. ಆದುದರಿಂದ ಮೀನುಗಳ ವಿಪುಲ ಸಂತಾನೋತ್ಪತ್ತಿಯಾಗಲು ಅವಕಾಶವಿತ್ತು. ಆದರೆ ಯಾಂತ್ರಿಕೃತ ಮೀನುಗಾರಿಕೆಯ ಪ್ರವೇಶದ ನಂತರ ನಿಯಂತ್ರಣಗಳು ಧೂಳಿಪಟಗೊಂಡಿತು. ವರ್ಷದ ೩೬೫ ದಿನಗಳಲ್ಲಿಯೂ ಯಥೇಚ್ಚವಾಗಿ ಮೀನುಗಾರಿಕೆ ನಡೆಯುತ್ತದೆ. ಮತ್ಸ್ಯೋಧ್ಯಮ ಇವತ್ತು ಲಾಭಾದಾಯಕವಾದ ಬೃಹತ್ ಉಧ್ಯಮವಾಗಿ ಬೆಳೆದಿದೆ.

ಮೂರ್ತೆಗಾರಿಕೆ

ಮೂರ್ತೆಗಾರಿಕೆಯಲ್ಲಿ ಕೈತಲೆ, ಕಾರ್ತಲೆ, ಕುಜಿಲಿ, ಕಡ್ಯ, ಮುಟ್ಟಾಳೆ, ತರ್ಕತ್ತಿ, ಬೊಂದೆ ಗುದ್ದುವ ಕಲ್ಲು ಇತ್ಯಾದಿಗಳು ಬಳಕೆಯಲ್ಲಿದೆ. ಇವುಗಳಲ್ಲಿ ಕೈತಲೆ, ಕಾರ್ತಲೆ, ಮುಟ್ಟಾಳೆ, ಇತ್ಯಾದಿಗಳನ್ನು ಮೂರ್ತೆಗಾರನೇ ತಯಾರಿಸುತ್ತಿದ್ದನು. ಸೋರೆಬುರುಡೆಯ ಕುಜಿಲಿಯನ್ನು ಮನೆಯಲ್ಲಿಯೆ ರೂಪಕೊಟ್ಟು ತಯಾರಿಯಾಗುತ್ತಿತ್ತು. ಕೋಟಿಚೆನ್ನಯರು ಅನಿಲಜೆ ಬಯಲಲ್ಲಿ ಮೂರ್ತೆಗಾರಿಕೆ ಮಾಡಿದರೆ ಸಂಕಮಲೆ ಕಾಡಿನಲ್ಲಿ ಮೂರ್ತೆ ವೃತ್ತಿಯನ್ನು ನಡೆಸುತ್ತಿದ್ದರೆನ್ನುವುದಕ್ಕೆ ಪಾಡ್ದನಗಳು ದೊರಕುವವು. ಮೂರ್ತೆ ಕೆಲಸಕ್ಕೆ ಚೆನ್ನಯನು ಹೊರಡುವ ವರ್ಣನೆ ಹೀಗಿದೆ: "ತೆಂಕು ಮನೆಯ ಬದಿಗೆ ಹೋದ. ಮಾಡಿಗೆ ಕೈ ಹಾಕಿ ಪಲ್ಲೆ ತೊಡಂಕ್ ತೆಗೆದ. ಅಜಕೋಲಿಗೆ ಕೈ ಹಾಕಿ ಆರು ಮೊಳ ಕಪ್ಪು ಬಣ್ಣದ ಸೊಂಟಕ್ಕೆ ಸುತ್ತುವ ಬಟ್ಟೆ ತೆಗೆದ. ಸೊಂಟ ಸುತ್ತ ಸುತ್ತಿದ. ಪಲ್ಲೆ ತೊಡಂಕ್ ತೆಗೆದು ಸೊಂಟಕ್ಕೆ

ಸಿಕ್ಕಿಸಿದ. ಬೆಳ್ಳಿಯ ಚೀಲಕ್ಕೆ ಕೈ ಹಾಕಿ ತರ್ಕತ್ತಿ ತೆಗೆದ. ಮಾಡಿಗೆ ಕೈ ಹಾಕಿ ಹಾಳೆ ಮರದ ಒಟ್ಟೆ (ಒರೆ) ತೆಗೆದ. ಸಣ್ಣ ಸಣ್ಣ ಬೆಳುಗಲ್ಲ ಹುಡಿ ಚೆಲ್ಲಿ ತರ್ಕತ್ತಿಯನ್ನು ಅಂಗೈ ಕೊಟ್ಟು ಮಸೆದ. ಮುಂಗೈಯಲ್ಲಿ ಹೊಳಪು ಬರಿಸಿದ...ಮದ್ಯಾಹ್ನದ ಹೊರೆ ಮೂರ್ತೆ ಮಾಡಿ ಬೆಳಗ್ಗಿನ ಕಂದೇಲ್ ಗಡಿಗೆಯ ಕಳ್ಳುತೋಳಿಗೆ ಹಾಕಿಕೊಂಡು ಮಂಜಕೊಟ್ಯಕ್ಕೆ ಬಂದು ಇಳಿಸಿದ. ಕೊಂಬಿನ ಕಲ್ಲ ತೊಡಂಕ್ ತೆಗೆದು ಸೊಟಕೆ ಕಟ್ಟಿದ. ಮಣ್ಣು ಹಿಡಿದ ತರ್ಕತ್ತಿಯನ್ನು ತೊಡಂಕಿಗೆ ಸಿಕ್ಕಿಸಿದ. ಕಳ್ಳು ಇರಿಸುವ ಕೊಟ್ಯದಲ್ಲಿರುವ ದೊಡ್ಡ ಗಡಿಗೆಗೆ ತಂದ ಕಳ್ಳನ್ನು ಸುರಿದು ಖಾಲಿ ಗಡಿಗೆಯನ್ನು ತೂಗಾಡಿಸಿ ತರ್ಕತ್ತಿ ತೊಡಂಕುಗಳನ್ನು ಮೇಲೆ ಮಾಡಿನಲ್ಲಿರಿಸಿದ." (ವಾಮನ ನಂದಾವರ, ಕೋಟಿ ಚೆನ್ನಯ, ಹೆಮಾಂಶು ಪ್ರಕಾಶನ, ಪುಟ ೯೯). ಇದರಲ್ಲಿ ಮೂರ್ತೆಗೆ ಬಳಸುವ ಪರಿಕರದ ವಿವರಣೆ ದೊರೆಯುವುದಲ್ಲದೆ, ಪರಿಕರಗಳನ್ನು ಎಲ್ಲಿ ಇಡುತ್ತಿದ್ದರು ಎನ್ನುವ ಮಾಹಿತಿಯೂ ಲಭ್ಯವಾಗುತ್ತದೆ.

ಹೀಗೆ ಯಾವುದೇ ಸಮುದಾಯವೂ ತನ್ನ ಕಸುಬಿನಲ್ಲಿ ನಿಪುಣತೆಯನ್ನು ಸಾಧಿಸಿಕೊಳ್ಳುತ್ತಿದ್ದುದಲ್ಲದೆ, ಆ ಸಮುದಾಯದ ಮಂದಿ ತಮ್ಮ ಜಾಣ್ಮೆಯನ್ನೂ ಸೇರಿಸಿಕೊಂಡು ತಮ್ಮ ಅಗತ್ಯ ಪರಿಕರಗಳಲ್ಲಿ ತಮಗೆ ಬೇಕಾದ ರೀತಿಯ ಸೂಕ್ಷ್ಮ ಕೆಲಸಗಳನ್ನು ಅಳವಡಿಸಿಕೊಳ್ಳುತ್ತಿದ್ದರು. ಪರಿಣಿತರು ಮಾಡುವ ಯಾವುದೇ ಸಾಧನಗಳು ವಿಶೇಷವಾಗಿರುತ್ತವೆ. ಮಾಡುವವರ ಕೈಚಳಕ ಅವುಗಳಲ್ಲಿ ಸ್ಪಷ್ಟವಾಗಿ ಗುರುತಿಸಲ್ಪಡುವುದು.

ತುಳುವರು ಬಳಸುತ್ತಿದ್ದ ಪರಿಕರಗಳನ್ನು ಈ ಪಟ್ಟಿಯಲ್ಲಿರುವಂತೆ ವಿಂಗಡಿಸಿಕೊಳ್ಳಬಹುದು:

ಕೃಷಿಯಲ್ಲಿ ಬಳಸುವ ಪರಿಕರಗಳು	**ಗೃಹೋಪಯೋಗಿ ಪರಿಕರಗಳು**	**ಆರಾಧನಾ ರಂಗದ ಪರಿಕರಗಳು**	**ಕಸುಬಿನ ಪರಿಕರಗಳು**	**ಇತರೆ**
ಕುರ್ವೆ / ಕಾಂಟ್ಯ, ಗೆರಸೆ ಮೊದಲಾದವುಗಳು	ವಿವಿಧ ರೀತಿಯ ಮಣ್ಣಿನ ಪಾತ್ರೆಗಳು	ಗಗ್ಗರ	ಉಳಿ, ಬಾಜಿ ಇತ್ಯಾದಿ	ಜಂಬುಲಿ
ಮುಟ್ಟಾಲೆ ಮೊದಲಾದವುಗಳು	ಪೆಟ್ಯ, ಪೆಟಾರಿ, ಕಲೆಂಬಿ	ಅಣಿ	ತಿಗರಿ, ನೂಲು	(ಕೋಳಿ ಹಾಕುವ) ಕೂಂಟಾಯಿ
ಮಣಿಪು ಹಗ್ಗ ಮೊದಲಾದವುಗಳು	ತಟ್ಟಿಕುಡ್ಪು, ಕುಡ್ಪು, ತಂಬುರ್ಚ್ಚಿ, ತೆರಿಯ	ಧೂಪದ ಬಟ್ಟಲು	ದೋಣಿ, ಜಲ್ಲ, ಮತಾಯಿ, ಕೂರಿ, ಮಕ್ಕಿರಿ, ವಿವಿಧ ರೀತಿಯ ಬಲೆ ಇತ್ಯಾದಿ	ಪನೋಲಿ/ಕೊರಂಬು/ ಕಡೆಂಜೊಲ್ ಇತ್ಯಾದಿ ಮಳೆಗಾಲದಲ್ಲಿ ಮಾತ್ರ ಬಳಸುವ ಪರಿಕರಗಳು
ಗೊಬ್ಬರಬಟ್ಟಿ, ಕುರ್ಕಿಲ್ ಇತ್ಯಾದಿ	ಸೌಟು, ಕೈಲ್, ಮಂತ್,	ದೀವಟಿಗೆ, ತೂಟೆ, ಸಾನಾದಿಗೆ, ದೀಪಗಳು, ಬಳಕ್ಕಿಮರ ಇತ್ಯಾದಿ	ಕೊದಂಟಿ/ ಸುತ್ತೆ, ಗರಗಸ, ವಿವಿಧ ಬಗೆಯ ಉಳಿಗಳು ಇತ್ಯಾದಿ	ಚೆನ್ನೆಮಣೆ, ಚೆಂಡು, ಕುಟ್ಟಿ, ದೊಣ್ಣೆ, ಇತ್ಯಾದಿ ಆಟದ ಪರಿಕರಗಳು
ಕತ್ತಿ, ಹಾರೆ- ಪಿಕ್ಕಾಸಿ, ಈಸ್‌ಮುಳ್ಳು	ತೊಟ್ಟಿಲು	ದೈವದೇವರ ಮುಖವಾಡ- ಮೂರ್ತಿಗಳು,	ಉಳಿ, ಬಾಜಿ, ಉಲೆ, ತಿದಿ, ಸುತ್ತೆ ಇತ್ಯಾದಿ	ತೆಂಬರೆ, ದುಡಿ, ಡೋಲು, ತಾಸೆ, ಚೆಟ್‌ಕಿ ಇತ್ಯಾದಿ

ಇತ್ಯಾದಿಗಳು		ದೈವದೇವರ ಆಭರಣಾದಿಗಳು		ವಾದ್ಯಪರಿಕರಗಳು
ಪಡಿಮಂಚ, ಕೈಸಟ್ಟಿ, ಬೈತಡ್ ಮೊದಲಾದವುಗಳು	ಚಾಪೆ- ಹಾಸಿಗೆ ಬಟ್ಟೆಬರೆಗಳು	ಕೂಚೆ, ಮೂರಿ ಇತ್ಯಾದಿ	ಕೈತಲೆ, ಕಾರ್ತಲೆ, ಕುಜಿಲಿ, ಕಡ್ಯ, ಮುಟ್ಟಾಳೆ, ತರ್ಕತ್ತಿ, ಬೊಂದೆ ಗುದ್ದುವ ಕಲ್ಲು ಇತ್ಯಾದಿ	ತೆಂಗಿನ ಹೆಣೆದ ಮಡಲು, ಕಂಬ, ಪಕ್ಕಾಸು ಮೊದಲಾದ ಮನೆ ಕಟ್ಟುವ ಸಾಮಗ್ರಿಗಳು.
ಮುಡಿ, ತುಪ್ಪೆ, ಕೂಟಾಯಿ, ಕದಿಕೆ, ಪತ್ತಾಯ, ಕಲೆಂಬಿ ಇತ್ಯಾದಿಗಳು	ವಿವಿಧ ರೀತಿಯ ಲೋಹದ ಪಾತ್ರೆಗಳು	ಕೋಲ-ನೇಮದ ಸಂದರ್ಭಗಳಲ್ಲಿ ತೆಂಗಿನ ಎಳೆಗರಿಯಿಂದ ಸಿದ್ಧಪಡಿಸಲಾಗುತ್ತಿದ್ದ ಅನೇಕ ಪರಿಕರಗಳು	ಮಗ್ಗ, ಹಾಸು, ಲಾಳಿ, ನೂಲು, ಚರಕ ಇತ್ಯಾದಿ	ಮೂಡೆ, ಕೊಟ್ಟಿಗೆ, ಗುಂಡ, ಉಡರಿಗೆ, ಸೇಮಿಗೆ ಮಣೆ ಇತ್ಯಾದಿ ಅಡುಗೆ, ತಿಂಡಿ ಮಾಡುವ ಪರಿಕರಗಳು
ನೊಗ-ನೇಗಿಲು-ಹಲಗೆಗಳು	ವಿವಿಧ ಮರಿಗೆಗಳು, ಭರಣಿಗಳು ಇತ್ಯಾದಿ	ಕೋಲ-ನೇಮದ ಸಂದರ್ಭಗಳಲ್ಲಿ ಬಾಳೆಯ ದಿಂಡಿನಿಂದ ಸಿದ್ಧಪಡಿಸಲಾಗುತ್ತಿದ್ದ ಪರಿಕರಗಳು	ಕವಣೆ, ಬಿಲ್ಲು, ಬಾಣ, ಈಟಿ, ಕೋವಿ, ತೋಪು ಇತ್ಯಾದಿಗಳು	ಯಕ್ಷಗಾನದ ವೇಷಭೂಷಣಗಳು, ಮರದ ಕಿರೀಟ ಇತ್ಯಾದಿ

೫.೨ ಕೃಷಿ ಸಂಬಂಧಿ ಸಾಧನಗಳು

ಕೃಷಿಯನ್ನು ಪ್ರಧಾನ ವೃತ್ತಿಯನ್ನಾಗಿಸಿಕೊಂಡ ತುಳುವರು ಕೃಷಿಬದುಕಿಗೆ ಸಂಬಂಧಪಟ್ಟಹಾಗೆ ವಿವಿಧ ಪರಿಕರಗಳನ್ನು ಬಳಕೆ ಮಾಡುತ್ತಿದ್ದರು. ಇವುಗಳು ಮಣ್ಣು, ಮರ, ಬಿದಿರು, ಕಬ್ಬಿಣ, ತಾಮ್ರ ಮುಂತಾದವುಗಳಿಂದ ಮಾಡಲ್ಪಡುತ್ತಿದ್ದವು. ಇವುಗಳನ್ನು ತಯಾರಿಸುವ ವಿವಿಧ ಜಾತಿಯ ವೃತ್ತಿ ಪರಿಣತರು ತುಳುನಾಡಿನಲ್ಲಿದ್ದರು. ಕೆಲವೊಮ್ಮೆ ಇವುಗಳ ತಯಾರಿ ಜಾತಿ ಅಥವಾ ನಿರ್ದಿಷ್ಟ ಕುಲಕಸುಬಿನವರದ್ದೇ ಆಗದೆ, ಎಲ್ಲಾ ಸಮುದಾಯದವರೂ ತಮ್ಮ ದಿನನಿತ್ಯದ ಬದುಕಿನ ಅಗತ್ಯಕ್ಕೆ ಸರಿಯಾಗಿ ತಾವೇ ಸಿದ್ಧಪಡಿಸುತ್ತಿದ್ದುದನ್ನೂ ಕಾಣುತ್ತೇವೆ. ಇಲ್ಲಿ ಎಲ್ಲ ನಮೂನೆಯ ವಸ್ತುಗಳು ಕೇವಲ ತುಳುನಾಡಿಗೆ ಸೀಮಿತವಾಗದೆ, ಸಾರ್ವತ್ರಿಕವಾಗಿ ಬಳಕೆಯಲ್ಲಿದ್ದುದನ್ನು ಕಾಣುತ್ತೇವೆ. ಎಲ್ಲಾ ವಸ್ತುಗಳ ಉದ್ದೇಶ ಒಂದೇ ಆದರೂ ಅದರ ರಚನೆ ವಿನ್ಯಾಸಗಳಲ್ಲಿ ಒಂದಿಷ್ಟು ವ್ಯತ್ಯಾಸಗಳನ್ನಷ್ಟೇ ಗಮನಿಸಬಹುದು.

ಜಾನ್ ಸ್ಟರಕ್ ಹತ್ತೊಂಭತ್ತನೆಯ ಶತಮಾನದ ಉತ್ತರಾರ್ಧದಲ್ಲಿ ದ.ಕ.ದಲ್ಲಿ ಬಳಕೆಯಲ್ಲಿದ್ದ ಕೃಷಿ ಉಪಕರಣಗಳ ಪಟ್ಟಿ ಹಾಗೂ ಆ ಕಾಲದಲ್ಲಿ ಅವುಗಳ ಮಾರಾಟಮೌಲ್ಯವನ್ನೂ ದಾಖಲಿಸಿದ್ದಾರೆ. ನೇಗಿಲು, ನೊಗ, ಮುಟ್ಟುಪಲಯಿ, ಕುಂದಾಪುರ ತಾಲೂಕಿನಲ್ಲಿ ನೆಲ ಸಮತಟ್ಟುಗೊಳಿಸಲು ಬಳಸುತ್ತಿದ್ದ 'ಮಾರಣನಲ್ಲೆ', 'ಹಲಕೆ',

ಕುದಂಟಿ, ಕೊರಡು, ಮಮೋಟಿ, ಕೊಡಲಿ, ಕೊರ್ಗಿ, ಪೈರಿನಿಂದ ಭತ್ತವನ್ನು ಬೇರ್ಪಡಿಸಲು ಬಳಸುವ ಮರದ ಚೌಕಟ್ಟಿರುವ ಪರಿಕರ (ಪಡಿ); ಈಸ್‌ಮುಲ್ಲು, (ಮುಡಿಕಟ್ಟಲು ಬಳಸುವ) ಕೊದಂಟಿ, ಕತ್ತಿ, ಬಾಗಿದ ಕೊಕ್ಕೆ, ಗೊಬ್ಬರ ಎಳೆಯಲು ಬಳಸಲ್ಪಡುವ ಕೊಕ್ಕೆ, ಕೈಪುಳು, ಒನಕೆ, ಜಾನುವಾರುಗಳಿಗೆ ನೀರಿಡಲು ಬಳಸುತ್ತಿದ್ದ ಬಾನಿ, ಕುಕ್ಕೆ, ಚೂರಿ, ಕೈಪಲಯಿ– ಈ ಎಲ್ಲಾ ವಸ್ತುಗಳು ಆ ಪಟ್ಟಿಯಲ್ಲಿವೆ.

ಅಂದಿನ ಕಾಲದಲ್ಲಿ ಬಳಕೆಯಲ್ಲಿದ್ದ ಅಕ್ಕಿಯ ತಳಿಗಳನ್ನು ಆತ ವಿವರಿಸುತ್ತಾನೆ: ಜೀರ್ಸಲೆ, ಗಂದಸಾಲೆ, ಮೆಂತೆಸಾಲೆ, ಸೋಮಸಾಲೆ, ಅಜಿಪಸಾಲೆ, ಕಳಮೆ, ಅಂಬಟೆ, ದೊಡ್ಡರೆ, ಕಿನ್ನಿಬೀಜ, ಕಾಯಮೆ, ತಮುಂಗೆ, ಮುಂಡಲೆ, ಅಲ್ಲಿಗೆ, ದಡ್ಡೆ, ಕಾಪಿಕಜೆ, ಕುದ್ರುಬೀಜ, ಸುಂಗಾಲ್, ಒಂತೆಚರೆ, ಕುಂದರಕುಟ್ಟಿ, ತೆಕ್ಕಂಬೊಳೆರಿ.[೧೮]

ಕರಂಗೋಲ್ ಕುಣಿತದ ಹಾಡಿನಲ್ಲಿ **ಉಳುಮೆಯಲ್ಲಿ** ಬಳಕೆಯಾಗುವ **ನೊಗ ನೇಗಿಲು** ಕುರಿತಂತೆ ವಿವರಗಳು ಸಿಗುತ್ತವೆ. ಅಲ್ಲದೆ ಕೃಷಿ ಕಾರ್ಯದಲ್ಲಿ ಅಗತ್ಯವಿರುವ ಪೂರಕ ಪರಿಕರಗಳ ಪರಿಚವೂ ಇಲ್ಲಿ ದೊರೆಯುತ್ತದೆ–

"ನಾಲ್ಕೆತ್ತು ತಿರುಗಿಸಲು (ಹೂಡಲು) ನೇಗಿಲು ಇರಲಿಲ್ಲ

ಕಾಸರಕನ ಮರಕಡಿದು ನೇಗಿಲು ಮಾಡಿಸಬೇಕು

ನಾಲ್ಕೆತ್ತು ಹೂಡು ಕಾನದ ಕಾಟದ

ನಾಲ್ಕೆತ್ತು ಹೂಡಲು ನೊಗ ಇರಲಿಲ್ಲ

ಹಲಸಿನ ಮರಕಡಿದು ನೊಗವೊಂದು ಕೆತ್ತಿಸಬೇಕು

ನಾಲ್ಕೆತ್ತು ಹೂಡಲು ಗುಂಡಲ ಇರಲಿಲ್ಲ

ಪಾವೊರಿ (ಒಂದು ಬಗೆಯ ಹುಳ)ಯನ್ನು ಹಿಡಿದು ಗುಂಡಲ ಹಾಕಬೇಕು

(ಗುಂಡಲ=ಕಬ್ಬಿಣದಿಂದ ಮಾಡಿದ ವರ್ತುಲ (ಬಳೆ ಅದರೊಳಗಿಂದ ಹಗ್ಗವನ್ನು ತುರುಕಿ ನೊಗವನ್ನು ಎತ್ತು ಅಥವಾ ಕೋಣಗಳ ಕೊರಳಿಗೆ ಬಿಗಿಯಲಾಗುತ್ತದೆ)

ನಾಲ್ಕೆತ್ತು ಹೂಡಲು ಕೊರಳ ಹಗ್ಗ ಇರಲಿಲ್ಲ

ಕೇರೆಯನ್ನು ಹಿಡಿದು ಕೊರಳ ಹಗ್ಗ ತೊಡಿಸಬೇಕು

ನಾಲ್ಕೆತ್ತು ಹೂಡಲು ಕೋಂಟು ಹಗ್ಗ ಇರಲಿಲ್ಲ

ಸರ್ಪವನ್ನು ಹಿಡಿದು ಕೋಂಟು ಹಗ್ಗ ಹಾಕಬೇಕು.

ನಾಲ್ಕೆತ್ತು ಹೂಡಲು ಕಟ್ಟುವ ಹಗ್ಗ ಹಿಡಿದು

ಒಳ್ಳೆ ಹಾವನ್ನು ಕಟ್ಟುವ ಹಗ್ಗ ಹಾಕಬೇಕು

ನಾಲ್ಕೆತ್ತು ಹೂಡಲು ಬೆತ್ತ ಇರಲಿಲ್ಲ

ಬುಳೆಕ್ಕರಿ ಹಾವನ್ನು ಹಿಡಿದು ಪೀಲಿ ಬೆತ್ತ ನೆಯ್ಯಬೇಕು

ನಾಲ್ಕೆತ್ತು ಹೂಡಲು ಪಣೊರು[೧೯] ಇರಲಿಲ್ಲ (ಗದ್ದೆಯನ್ನು ಸೀಳುವ ನೇಗಿಲಿನ ಚೂಪಾದ ಭಾಗಕ್ಕೆ ಹೊಂದಿಸುವ ಕಬ್ಬಿಣ ರಚನೆ)

ಅರಣೆಯನ್ನು ಹಿಡಿದು ಪಣೊರು ಬಡಿಯಬೇಕು

ನಾಲ್ಕೆತ್ತು ಹೂಡಲು ಪತ್ತೊಂಜಾನಿ (ಸಣ್ಣಮೊಳೆ) ಇರಲಿಲ್ಲ

ಉಂಬುಳು ಹಿಡಿದು ಸಣ್ಣ ಮೊಳೆ ಹೊಡೆಯಬೇಕು...

ಕೆಯ್‌ಕೊಯ್ಯಲು 'ಪರುಕತ್ತಿ ತರಬೇಕು

ಕೆಯ್ ಕಟ್ಟಲು ಸೋಣ ಬಳ್ಳಿ ತರಬೇಕು.........

ಕೆಯ್ ಹೊಡೆಯಲು ಕಲ್ಲಿನ ಮಂಚ ತರಬೇಕು

ಕುಂಟು ಪೊರಕೆಯಲಿ ಗುಡಿಸಿ ತರಬೇಕು

ಗಾಳಿಸುವ ಗೆರಸೆಯಲಿ ಗಾಳಿಸಿ ತರಬೇಕು.. ..

ಕರಂಗೋಲಿನ ಮಕ್ಕಳಿಗೆ ಗೆರಸೆ ತುಂಬಿ ಕೊಡಬೇಕು"[೨೦]

ಹೀಗೆ ಈ ಪದ್ಯದಲ್ಲಿ ವಿವಿಧ ಭೌತಿಕ ವಸ್ತುಗಳ ವಿವರಣೆ ಲಭ್ಯವಾಗುತ್ತದೆ. ತುಳುನಾಡಿನ ಈ ಕುಣಿತದ ಹಾಡುಗಳಿಂದ ಸಾಂಸ್ಕೃತಿಕವಾದ ವಿವರಗಳು ದೊರೆಯುವುದರೊಂದಿಗೆ ಆ ನಿರ್ದಿಷ್ಟ ಕಾಲದ ಕೃಷಿಕಾಯಕದ ಮಾಹಿತಿಗಳು ಲಭ್ಯವಾಗಬಲ್ಲದು.

ಹಗ್ಗ

ಕೃಷಿ ಕಸುಬಿನಲ್ಲಿ ಹಗ್ಗದ ಬಳಕೆ ಬಹಳವೆಂದು ಮೇಲ್ನೋಟಕ್ಕೆ ಅನ್ನಿಸದಿದ್ದರೂ ಒಂದನ್ನೊಂದು ಕೂಡಿಸುವ ಗುಣವಿರುವ ಹಗ್ಗವು ಈ ಕಸುಬಿನೊಂದಿಗೆ ಹೆಣೆದುಕೊಂಡು, ಗಟ್ಟಿಗೊಳಿಸಿರುವುದನ್ನು ಗಮನಿಸಬಹುದು. ತೆಂಗಿನ ಹೊರಕವಚವನ್ನು ತೆಗೆದು ನೀರಿನಲ್ಲಿ ನೆನೆಸಿ, ಗುದ್ದಿ, ಅದರಿಂದ ಬರುವ ನಾರನ್ನು ಕೈಯಿಂದ ತಿರುಚಿ ಹುರಿಹಗ್ಗವನ್ನು ತಯಾರಿಸುತ್ತಾರೆ. ಇದನ್ನು ವಿವಿಧ ಗಾತ್ರ ಹಾಗೂ ಉದ್ದಳತೆಗಳಲ್ಲಿ ತಯಾರಿಸಲಾಗುತ್ತದೆ ಹಾಗೂ ಹಾಗೆ ತಯಾರಿಸಲ್ಪಡುವ ಹಗ್ಗಗಳು ವಿವಿಧ ಕಾರ್ಯಗಳಲ್ಲಿ ಬಳಕೆಯಾಗುತ್ತದೆ. ಎರಡು ಹುರಿಗಳೊಂದು ಸೇರಿ ಆದ ಹುರಿಹಗ್ಗದಿಂದ ತೊಡಗಿ, ತೇರನ್ನೆಳೆಯುವ ಅತಿ ದಪ್ಪದ ಹಗ್ಗದ, ಅತಿ ಉದ್ದದ ಹಗ್ಗಗಳನ್ನು ತಯಾರುಮಾಡಲಾಗುತ್ತದೆ. ಬಾವಿಯಿಂದ ನೀರು ಸೇದಲು, ಹುಲ್ಲು ಹೊರೆಗೆ ಸುತ್ತಲು, ಚಪ್ಪರ ಅಥವಾ ಮಾಡಿನಲ್ಲಿ ಕೋಲು, ರೀಪುಗಳನ್ನು ಜೋಡಿಸಿ ಕಟ್ಟಲು, ಜಾನುವಾರುಗಳನ್ನು ಕಟ್ಟಲು, ತೆಂಗು, ತಾಳೆಗಳನ್ನು ಹತ್ತಲು ಬೇಕಾದ ಕೈತಲೆ, ಕಾರ್ ತಲೆ ಹೀಗೆ ವಿವಿಧ ಸಂದರ್ಭಗಳಲ್ಲಿ ಹಗ್ಗದ ಬಳಕೆಯಾಗುತ್ತದೆ. ಬೈಹುಲ್ಲಿನ ಹಗ್ಗಗಳಿಂದ ಮುಡಿ ಕಟ್ಟುವಿಕೆ, ತುಪ್ಪೆ ಕಟ್ಟುವಿಕೆಗಳನ್ನು ಮಾಡುತ್ತಾರೆ. ಬಾಳೆಹಗ್ಗವು ಹೂ ನೇಯುವಿಕೆಯಲ್ಲಿ ಬಳಕೆಯಾಗುತ್ತದೆ. ಬಾಳೆಯ ದಪ್ಪವಾದ ಹೊರಪದರವನ್ನು ಕುರುಂಟನ್ನು ತಯಾರಿಸಲು ಹಗ್ಗದಂತೆ ಬಳಸಿಕೊಳ್ಳಲಾಗುತ್ತದೆ.

ಚಪ್ಪರ ಹಾಕಲು, ಮಡಲಿನ ತಟ್ಟಿ ಕಟ್ಟಲು, ಗಟ್ಟಿ ಮುಂಡೆವು ಗಿಡದ ಎಲೆಗಳನ್ನು ಸೀಳಿ ಒಣಗಿಸಿ ಹಗ್ಗ ತಯಾರಿಸುತ್ತಿದ್ದರು ಮತ್ತು ಮುಂಡೆವು ಗಿಡದ ಬೇರುಗಲಿಂದಲೂ ಹಗ್ಗ ತಯಾರಿಸುತ್ತಿದ್ದರು.[೨೧]

ಗೊಬ್ಬರ ಹೊರುವ ಬುಟ್ಟಿ

ಕೃಷಿ ಪ್ರಧಾನವಾದ ತುಳುವರ ಬದುಕಿನಲ್ಲಿ ದನ ಕರುಗಳನ್ನು ಕಟ್ಟಿ ಹಾಕುವ ಹಟ್ಟಿ ಪ್ರಮುಖ ಪಾತ್ರವನ್ನುವಹಿಸುತ್ತದೆ. ಕೃಷಿಕಾರ್ಯಕ್ಕೆ ಅತೀ ಪ್ರಮುಖ ಗೊಬ್ಬರವೆಂದರೆ ಹಟ್ಟಿ ಗೊಬ್ಬರ. ಇದನ್ನು ಕೊಕ್ಕೆಯೆಂದು ಹೇಳಲಾಗುವ ಕಬ್ಬಿಣದ ಸಾಧನದ ಸಹಾಯದಿಂದ ಮುಖ್ಯವಾಗಿ ಮಾದೇರು ಬಳ್ಳಿಯಿಂದ ಸಿದ್ಧಪಡಿಸಲಾದ ಬಟ್ಟಿಗೆ ತುಂಬಿಸಿ ಗೊಬ್ಬರ ಹೊರಲಾಗುತ್ತಿತ್ತು. ಬಟ್ಟಿ ಗೊಬ್ಬರದ ಬಟ್ಟಿ ಆ ಕಾಲಕ್ಕೆ ಕೃಷಿಕನೊರ್ವನಿಗೆ ಬೇಕಾದ ಅತಿ ಮುಖ್ಯವಾದ ಪರಿಕರ. ಇದನ್ನು ಮಾದೇರು ಜಾತಿಯ ಬೀಳಲಿನಿಂದ ಹೆಣೆದು ತಯಾರಿಸಲಾಗುತ್ತದೆ. ನೋಡುವುದಕ್ಕೆ ಬಹಳ ಸಾಧಾರಣ ಸಾಧನ ವಾದರೂ ಇದನ್ನು ಹೆಣೆಯುವಲ್ಲಿ ಕುಶಲಕರ್ಮಿ ತನ್ನ ಜಾಣ್ಮೆಯನ್ನು ತೋರಿಸುತ್ತಾನೆ. ಇದನ್ನು ಮುಖ್ಯವಾಗಿ ಕೊರಗ ಜನಾಂಗದವರೇ ಸಿದ್ಧಪಡಿಸುತ್ತಿದ್ದರು. ಇವರು ಸಿದ್ಧ ಪಡಿಸಿದ ಬಟ್ಟಿಗೆ ಹೆಚ್ಚಿನ ಬೇಡಿಕೆ. ಇತರ ವರ್ಗದವರಾದ ಬೈರರು, ತಯಾರಿಸುವುದಿತ್ತು. ಬಟ್ಟಿಗಳಲ್ಲಿ ಮುಖ್ಯವಾಗಿ ಎರಡು ವಿಧವಿರುತ್ತಿತ್ತು. ಒಂದು ಗೊಬ್ಬರದ ಬಟ್ಟಿಯಾದರೆ ಇನ್ನೊಂದು ಮಣ್ಣು ಹೊರುವ ಬಟ್ಟಿ. ಇದರ ಹೆಣೆಯುವಿಕೆಯಲ್ಲಿ ವ್ಯತ್ಯಾಸವನ್ನು ಕಾಣಬಹುದು. ಬೀಳಲನ್ನು ಸಿಗಿದು ಮಾಡಿದ ಬಟ್ಟಿಗೆ ಬೇಡಿಕೆ ಕಮ್ಮಿ. ಕಾರಣ ಅದು ಹೆಚ್ಚಿಗೆ ಬಾಳಿಕೆ ಬರುವುದಿಲ್ಲ. ಇಂದು ಇದನ್ನು ಸಿದ್ಧಪಡಿಸುವುವವರಿಲ್ಲ. ಕಾರಣ ಕಾಡು ನಾಶದೊಂದಿಗೆ ಇದಕ್ಕೆ ಬೇಕಾಗುವ ಬೀಳಲಿನ ಕೊರತೆ ಒಂದಾದರೆ, ಇಂದು ಮಾರುಕಟ್ಟೆಯಲ್ಲಿ ಪ್ಲಾಸ್ಟಿಕ್ ಅಥವಾ ರಬ್ಬರಿನಿಂದ ತಯಾರಿಸಲಾದ ಮತ್ತು ಜಾಸ್ತಿ ಬಾಳಿಕೆ ಬರುವ ಬಟ್ಟಿ ಲಭ್ಯವಿದೆ.

ಕುರ್ವೆ/ಕಾಂಟ್ಯ

ಕುರ್ವೆಯನ್ನು ಎಂಜಿರದ ಬೀಳಲು ಅಥವಾ ಬಿದಿರನ್ನು ಸೀಳಿ ತಯಾರಿಸಲಾಗುತ್ತದೆ. ಈ ರೀತಿ ಸಿದ್ಧಗೊಂಡ ಕುರ್ವೆಗೆ ಸೆಗಣಿ ಬಳಿದು ವಿವಿಧ ಕೃಷಿಕಾರ್ಯಕ್ಕೆ ಬಳಸಲಾಗುತ್ತಿತ್ತು. ಮುಖ್ಯವಾಗಿ ಬೀಜ ಬಿತ್ತನೆಗೆ, ದವಸಧಾನ್ಯಗಳನ್ನು ಹಾಕಿಡಲು, ಕೋಣಗಳಿಗೆ ಹುರುಳಿ ಹಾಕಲು ಬಳಕೆಯಾಗುತ್ತಿತ್ತು. ಇದರಿಂದ ದೊಡ್ಡ ಗಾತ್ರದ ಕಾಂಟ್ಯಗಳು ಮುಖ್ಯವಾಗಿ ತಾಳೆ ಮರದ ಸೋಗೆಯ ತಡಿಕೆಯನ್ನೆಬ್ಬಿಸಿ ಕಾಂಟ್ಯಗಳನ್ನು ತಯಾರಿಸಲಾಗುತ್ತಿತ್ತು. ಇದು ಹೆಚ್ಚು ಗಟ್ಟಿ ಮುಟ್ಟಾಗಿದ್ದುದರಿಂದ ದೀರ್ಘ ಕಾಲ ಬಾಳಿಕೆ ಬರುತ್ತಿತ್ತು. ಬೀಳಲಿನಿಂದಲೂ ದೊಡ್ಡ ಗಾತ್ರದ ಕಾಂಟ್ಯಗಳನ್ನಿ ನಿರ್ಮಿಸಲಾಗುತ್ತಿತ್ತು. ಸಾಮಾನ್ಯವಾಗಿ ದೊಡ್ಡ ಗಾತ್ರದ ಕಾಂಟ್ಯಗಳಿಗೂ ಸೆಗಣಿ ಬಡಿಯುತ್ತಿದ್ದರು. ಇದರ ಕಾರಣವೆಂದರೆ ದವಸಧಾನ್ಯಗಳು ಸಣ್ಣ ತೂತಿನ ಮುಖಾಂತರ ಹೊರಹೋಗದಂತಾಗುವುದು.

ಸಾಮನ್ಯವಾಗಿ ತಾಳೆ ಮರದ ಸೋಗೆಯ ತಡಿಕೆಯಿಂದ ಕಾಂಟ್ಯಗಳಿಗೆ ಸೆಗಣಿ ಬಡಿಯುತ್ತಿರಲಿಲ್ಲ. ಇದನ್ನು ಮುಖ್ಯವಾಗಿ ಆ ಕಾಲದಲ್ಲಿ ದೊಡ್ಡ ದೊಡ್ಡ ಸಮಾರಂಭಗಳಲ್ಲಿ ಅನ್ನ ಬಸಿಯಲು ಬಳಸುತ್ತಿದ್ದರು.

ನೀರಾವರಿ

ಕರಾವಳಿ ಕರ್ನಾಟಕದಲ್ಲಿ ಅಡಿ ನೀರ್, ಒಡ್ಡ ನೀರ್ ಹಾಗೂ ಒಯ್ಪು ನೀರ್‌ಗಳನ್ನು ನೀರಾವರಿಗೆ ಬಳಸುತ್ತಿದ್ದರು ಎಂದು ಹಿರಿಯರು ಹೇಳುತ್ತಾರೆ. ನಿಂತ ನೀರನ್ನು ಎತ್ತಿ ಗದ್ದೆಗೆ ಹರಿಸಲು ಕೆಲವು ಸಾಧನಗಳನ್ನು ಬಳಸಲಾಗುತ್ತಿತ್ತು. ಕೊಂತವನ್ನು ತಳಭಾಗದ ನೀರನ್ನು ಮೇಲೆತ್ತಿ ಹಾಕಲು, ಕೊರ್ಗೆ ನಿಂತಲ್ಲಿಂದ ಕಾಲಡಿಯ ನೀರನ್ನು ಎತ್ತಿ ಹಾಕಲು ಬಳಸಲಾಗುತ್ತಿತ್ತು. ಏತದಿಂದ ನೀರೆತ್ತುವುದು ಸಾಮಾನ್ಯವಾಗಿತ್ತು.

ಕೃಷಿ ಪರಿಕರಗಳೆಲ್ಲದರ ಬಳಕೆ ಸಾರ್ವತ್ರಿಕವೆಂದು ಈ ಹಿಂದೆ ಹೇಳಿದ್ದರೂ ಕೆಲವೊಂದು ಸಾಧನಗಳು ತುಳುನಾಡಿನ ಪರಿಸರಕ್ಕೆ ಹೊಂದಿಕೊಂಡಂತೆ ರಚನೆಯಾಗಿದ್ದು, ಇವುಗಳ ಬಳಕೆ ಇತರೆಡೆಗಳಲ್ಲಿ ಇಲ್ಲದಿರುವುದನ್ನೂ ಗಮನಿಸಬಹುದು. ತುಳುನಾಡು ಹೆಚ್ಚು ಮಳೆಬೀಳುವ ಹಾಗೆಯೇ, ಬಿದ್ದ ನೀರು ಇಂಗುವುದಕ್ಕಿಂತ ಹೆಚ್ಚು ಹರಿದು ಹೋಗುವ ಪ್ರಕೃತಿಯನ್ನು ಹೊಂದಿರುವುದಲ್ಲದೆ ಏರು ತಗ್ಗುಗಳ, ಗುಡ್ಡ ಕಣಿವೆಗಳ, ಬೆಟ್ಟ ಬಯಲುಗಳ ಪ್ರದೇಶವಾಗಿದ್ದರಿಂದ ಉತ್ತ ನೆಲವನ್ನು ಸಮತಟ್ಟುಗೊಳಿಸಲು ಬಳಸುವ 'ಪಲಾಯಿ' ಹಾಗೂ ಉತ್ತು ಸಮತಟ್ಟುಗೊಳಿಸಿದ ಬೀಜ ಬಿತ್ತುವುದಕ್ಕಿಂತ ಮೊದಲು ನೀರು ಬಸಿದು ಹೋಗುವಂತೆ ಮಾಡಲು ಬಳಸುವ 'ಕುರುಂಟು'ಗಳು ಇಲ್ಲಿನ ಕೃಷಿಪರಿಕರಗಳಲ್ಲಿ ವಿಶಿಷ್ಟವಾದುವೆನ್ನಬಹುದು.

೫.೩ ದೈನಂದಿನ ಅವಶ್ಯಕತೆಯ ಕರಕುಶಲ ಸಾಮಗ್ರಿ

ಸಂಸ್ಕೃತಿ ಹಾಗೂ ಪ್ರಕೃತಿಗಳ ಪ್ರತಿಕೃತಿಗಳಾಗಿ ಕುಶಲಕಲೆಯನ್ನು ಬೆಳೆಸಲಾಗುತ್ತದೆ. ಹಾಗಾಗಿ ನಾಗಾರಾಧನೆಯ ಕುರುಹಾಗಿ ಅರಸರ ಕಿರೀಟದಲ್ಲಿ, ಭೂತಾರಾಧನೆಯಲ್ಲಿ ಬಳಸಲ್ಪಡುವ, ಅಣಿ, ಕಡ್ಸಲೆ, ತಲೆಪಟ್ಟ ಇತ್ಯಾದಿಗಳಲ್ಲಿ ದೈವ ದೇವಸ್ಥಾನಗಳಲ್ಲಿ ಮನೆಯ ಹಾಗೂ ಕೃಷಿಯಲ್ಲಿ ಬಳಸಲಾಗುವ ಸಾಮಾನುಗಳಲ್ಲಿ ನಾಗರ ಹೆಡೆಯ ಅಥವಾ ನಾಗನ ಚಿತ್ರಕೆತ್ತನೆಗಳು ತುಳುನಾಡೆಲ್ಲೆಡೆಯೂ ಕಾಣಸಿಗುತ್ತದೆ. ಮೂರಿಗಳೆಂದು ಆರಾಧಿಸಲ್ಪಡುವ ಮಡಕೆಗಳಲ್ಲೂ ನಾಗರಹೆಡೆಯಿರುವುದನ್ನು ಗುರುತಿಸಬಹುದು.

ಆರಾಧನೆಯಲ್ಲಿ ಹಾಗೂ ದೈನಂದಿನ ಬದುಕಿನಲ್ಲಿ ಬಳಸುವ ವಸ್ತುಗಳನ್ನು ಪ್ರಕೃತಿಯಲ್ಲಿ ಲಭ್ಯವಾಗುವುದರಿಂದಲೇ ಬಳಸಿಕೊಳ್ಳುತ್ತೇವೆಂಬುದನ್ನು ಈಗಾಗಲೇ ಉಲ್ಲೇಖಿಸಲಾಗಿದೆ. ತೆಂಗು ಈ ಕರಾವಳಿಯ ಮುಖ್ಯ ಬೆಳೆ. ತೆಂಗಿನ ನಾರಿನಿಂದ ಹಗ್ಗ, ಹಾಸುಗೆ ಇತ್ಯಾದಿ, ತೆಂಗಿನ ಚಿಪ್ಪಿನಿಂದ ಮಾಡಲ್ಪಡುವ ಸೌಟು, ಅದರ ಮಡಲಿನಿಂದ ಮಾಡಲಾಗುವ ವಿವಿಧ ರೀತಿಯ ಕೈಕುಸುರಿ ವಸ್ತುಗಳನ್ನು ನೋಡಿ ಪರವೂರಿನಿಂದ ಬಂದವರು

ಕಣ್ಣರಳಿಸಿ ನೋಡುತ್ತಾರೆ. ದೈವದ ಅಣಿಯನ್ನು ತೆಂಗಿನ ಎಳೆಗರಿಗಳಿಂದ, ಕಂಗಿನ ಹಾಳೆಗಳಿಂದ ಮಾಡುವ ರೀತಿಯನ್ನು ನೋಡಿಯೇ ತಿಳಿದುಕೊಳ್ಳಬೇಕು.

ಚಾಪೆ

ಬದುಕಿನ ಒಂದು ಅತ್ಯಗತ್ಯ ಮತ್ತು ಅನಿವಾರ್ಯದ ವಸ್ತುವೆಂದರೆ ಚಾಪೆ. ಮಲಗಲು, ಭೋಜನಕ್ಕೆ ಕುಳಿತುಕೊಳ್ಳಲು, ಅತಿಥಿಗಳು ಆಸೀನರಾಗಲು ಅಂದು, ಇಂದು ಅಗತ್ಯವಾಗಿ ಬೇಕಾದ ವಸ್ತು. ಹಿಂದಿನ ಕಾಲದಲ್ಲಿ ವಧುವರರ ನಿಶ್ಚಯ ಕಾರ್ಯವು ಹಾಸಿದ ಚಾಪೆಯ ಮೇಲೆ ಕುಳಿತುಕೊಂಡು ಶಾಸ್ತ್ರೋಕ್ತವಾಗಿ ನಡೆಯುತ್ತಿತ್ತು. ಇಂದಿನ ಆಧುನಿಕ ದಿನದಲ್ಲೂ ತುಳುವರು ಆ ಪರಂಪರೆಯನ್ನು ಬಿಟ್ಟಿಲ್ಲ. ಹುಟ್ಟಿನ ಕ್ಷಣದಿಂದಲೇ ಚಾಪೆಯ ಬಳಕೆಯ ಆರಂಭವಾಗುತ್ತದೆ. ಆದರೆ ಮನುಷ್ಯ ಸತ್ತ ಕ್ಷಣದಿಂದ ಶವವನ್ನು ಚಾಪೆಯಲ್ಲಿ ಮಲಗಿಸುವುದು ನಿಷಿದ್ಧ. ಹಿಂದೆ ಮನೆಯ ಮೂಲೆಯೊಂದರಲ್ಲಿ ಚಾಪೆಯನ್ನಿಡುವುದಕ್ಕಾಗಿ ಬಿದಿರು ಅಥವಾ ಮರದ ರೀಪರ್‌ಗಳಿಂದ ಅಟ್ಟಣಿಗೆಯನ್ನು ರಚಿಸಿ ವ್ಯವಸ್ಥೆಗೊಳಿಸಲಾಗುತ್ತಿತ್ತು. ಅಂದು ಮಂಚದ ಮೇಲಾಗಲಿ, ನೆಲದಲ್ಲಾಗಲಿ ಚಾಪೆ ಬಿಡಿಸಿಡುವುದು ನಿಷಿದ್ಧ ಮಾತ್ರವಲ್ಲ ಅದನ್ನು ಅನಿಷ್ಟವೆಂದೆ ತಿಳಿಯಲಾಗುತ್ತಿತ್ತು. ಅಸೌಖ್ಯದ ವ್ಯಕ್ತಿಗಳು ಮಾತ್ರ ಹಗಲು ಹೊತ್ತಿನಲ್ಲಿ ಚಾಪೆಯಲ್ಲಿ ಮಲಗುವರು.

ವೃತ್ತಿಯಿಂದ ನಿವೃತ್ತಿಯಾಗುವವರು ಇಂದೂ ಕೂಡಾ 'ನಾನು ಚಾಪೆ ಮಡಿಸತೊಡಗಿದ್ದೇನೆ' ಎಂದು ತನ್ನ ಅವಧಿ ಮುಗಿಯುವುದನ್ನು, ತಮಾಷೆಯಾಗಿ ಹೇಳುವುದಿದೆ. ಅಂದರೆ ತನ್ನ ಕಾಲ ಮುಗಿಯಿತು ಎಂದರ್ಥ.

ಚಾಪೆಯನ್ನು ಸಾಮಾನ್ಯವಾಗಿ ಚಾಪೆ ಹುಲ್ಲು (ಪುಲ್ಲುದ ಪಜೆ), ಮುಂಡೇವು ಗರಿ, ಈಚಲು ಗರಿ ಹಾಗೂ ತಾಳೆಮರದ ಮಡಲಿನಿಂದ ತಯಾರಿಸುತ್ತಾರೆ. ಚಾಪೆಹುಲ್ಲಿನಿಂದ ಸಾಮಾನ್ಯವಾಗಿ ತುಳುನಾಡಿನಲ್ಲಿ ಜೋಗಿ ಜನಾಂಗದವರು (ಪುರುಸೆರ್) ತಯಾರಿಸುತ್ತಿದ್ದರು. ಮುಂಡೇವು ಗರಿಯಿಂದ ಸಾಮಾನ್ಯವಾಗಿ ಮಲಗುವ ಚಾಪೆಯನ್ನು ಸಿದ್ದಪಡಿಸಲಾಗುತ್ತದೆ. ಇದನ್ನು ಎಲ್ಲಾ ಜಾತಿ ವರ್ಗದವರು ಸ್ವತಃ ತಯಾರಿಸುತ್ತಾರೆ. ಅಡ್ಡೊಲಿ, ನೀಟೊಲಿ, ದಡ್ಡೊಲಿ, ಹೀಗೆ ಬೇರೆ ರೀತಿಯಲ್ಲಿ ಚಾಪೆ ಹೆಣೆಯುತ್ತಿದ್ದರು.

ಸಾಮಾನ್ಯವಾಗಿ ಮಳೆಗಾಲದಲ್ಲಿ ಕೃಷಿ ಕಾರ್ಯ ಮುಗಿದು ತಮ್ಮ ಬಿಡುವಿನ ಸಮಯದಲ್ಲಿ ಮಹಿಳೆಯರೆ ಹೆಚ್ಚಾಗಿ ಚಾಪೆ ಹೆಣೆಯುತ್ತಿದ್ದರು. ಇದಕ್ಕೆ ಬೇಕಾದ ಕಚ್ಚಾ ವಸ್ತುವನ್ನು ಬೇಸಿಗೆ ಕಾಲದಲ್ಲಿ ಸಿದ್ದಪಡಿಸಿಟ್ಟು ಕೊಳ್ಳಲಾಗುತ್ತದೆ. ಮುಖ್ಯವಾಗಿ ಮುಂಡೆವು ಗಿಡದ ಗರಿಯನ್ನು ಆಯ್ದು ಕೊಯ್ದು ಒಣಗಿಸಿ ಅದರ ಮುಳ್ಳು ತೆಗೆದು ತಣಿಸಿ ದುಂಡಗೆ ಸುತ್ತಿ ಇಡುತ್ತಿದ್ದರು. ಮಳೆಗಾಲವೇ ಇದನ್ನು ಸಿದ್ದಮಾಡಲು ಪ್ರಸ್ತುತ ಕಾಲ. ಇದು ತಣಿದು, ಮೃದುವಾಗಿದ್ದು ಅನುಕೂಲಕರವಾದ ವಾತಾವರಣ. ಚಾಪೆ ಹೆಣೆಯುವುದು ತುಂಬಾ ಜಾಣ್ಮೆಯ ಕೆಲಸ. ಎಲ್ಲರಿಗೂ ಈ ಕಲೆ ಒಲಿಯುವುದಿಲ್ಲ. ಚಾಪೆಯೆನೋ ಹೆಣೆಯಬಹುದು ಅದರ ಬದಿ ಕಟ್ಟುವಿಕೆ ಬಹಳ ಸೂಕ್ಷ್ಮದ ಕೆಲಸ. ಒಂದು ಚಾಪೆ ಹೆಣೆಯಲು ಕೆಲವು ದಿನಗಳೆ ಬೇಕು. ಒಂದು ಚಾಪೆಯು ಆರರಿಂದ ಆರು ಫೀಟು ಉದ್ದ, ನಾಲ್ಕು

ಫೀಟು ಅಗಲವಿರುತ್ತದೆ. ಆಗಲೂ ಒಬ್ಬನೆ ಮಲಗುವ ಹಾಗೂ ಇಬ್ಬರು ಮಲಗುವ ಚಾಪೆಯನ್ನು ಹೆಣೆಯುತ್ತಿದ್ದರು. ಮಕ್ಕಳ ತೊಟ್ಟಲಿಗೆ ಹಾಕುವ ಚಾಪೆಯನ್ನು ಇದೇ ಮುಂಡೇವು ಗರಿಯಿಂದ ಹೆಣೆಯುತ್ತಿದ್ದರು. ಇದಕ್ಕೆ ತಕ್ಕಣ ವೆಂದು ಹೆಸರು. ಇಲ್ಲಿ ಒಂದು ಎದುರು ಕಥೆ ಉಲ್ಲೇಖನೀಯ. 'ಅಡಿಕ್ ತಕ್ಕಣ, ಮೇಲ್‌ಗ್ ತಕಣ, ತಕಣ ದೇವೆರ್ ಬೊಂಟೆಗ್ ಪೋತೆರ್'ಎನು ಹೇಳು? ಎಂದು ಹಿರಿಯರು ಕಿರಿಯರಿಗೆ ಹೇಳುವುದಿತ್ತು. ಉತ್ತರ, ಆಮೆ,. ಆಮೆಯ ಮೆಲ್ಮೈಯ ಚಿಪ್ಪು ಹಾಗೂ ಅಡಿಭಾಗ ನೋಡಲು ತಕ್ಕಣದಂತೆ ಕಾಣುತ್ತದೆ. ಅಂದರೆ, ಚೌಕುಳಿ ಚೌಕಳಿಯಾಗಿ ಅದು ಕಾಣುವುದರಿಂದಲೇ ಈ ಗಾದೆ ಹುಟ್ಟಿಕೊಂಡದ್ದು.

ಹೀಗೆ ತಾಳೆಯ ಮರದ ಗರಿಯಿಂದಲೂ ಚಾಪೆ ಹೆಣೆಯಲಾಗುತ್ತದೆ. ಆದರೆ, ಇದನ್ನು ಮಲಗಲು ಅಥವಾ ಇತರ ದಿನಪಯೋಗಿ ಕೆಲಸಕ್ಕೆ ಇದನ್ನು ಬಳಸುವುದಿಲ್ಲ. ಇದೇನಿದ್ದರು ಕೃಷಿಕಾರ್ಯದ ಅಗತ್ಯಗಳಿಗೆ ಅಂದರೆ ಬತ್ತ ಒಣಗಿಸಲು, ಒಣಗಿ ರಾಶಿ ಹಾಕಿದ ಬತ್ತದ ರಾಶಿಯನ್ನು ಮುಚ್ಚಲು ಬಳಸಲಾಗುತ್ತದೆ. ಅಲ್ಲದೆ ಹಪ್ಪಳ, ಸಂಡಿಗೆ ಮುಂತಾದವುಗಳನ್ನು ಒಣಗಿಸಲು ಆ ಕಾಲದಲ್ಲಿ ಸಾಮಾನ್ಯವಾಗಿ ಬಳಸುತ್ತಿದ್ದರು. ಹುಲ್ಲಿನ ಚಾಪೆಯ ಬಳಕೆ ಸಿರಿವಂತರಲ್ಲಿ ಮಾತ್ರ ಇತ್ತು. ಚಾಪೆಗೆ ಸಂಬಂಧಿಸಿದ ಕೆಲವೊಂದು ನಂಬಿಕೆಗಳನ್ನು ಇಲ್ಲಿ ನೀಡಲಾಗಿದೆ.

ಚಾಪೆ ಬಿಡಿಸಿಟ್ಟು ಬೇರೆ ಕಡೆ ಹೋಗಬಾರದು. ಅಂದರೆ ಮಲಗಿದ ಚಾಪೆಯನ್ನು ಮಡಚದಿರುವುದು ಅಪಶಕುನ. ಕಾಲ ಬದಿಯಿಂದ ಮಡಚಬಾರದು. ಅಟ್ಟದಿಂದ ಚಾಪೆಗಳು ಜಾರಿ ಬಿದ್ದರೆ ನೆಂಟರು ಬರುವರು. ಒತ್ತೊತ್ತಿಗೆ ಚಾಪೆ ಹಾಕಿ ಮಲಗಿದಾಗ ಮಧ್ಯದಲ್ಲಿ ಸ್ಥಳ ಬಿಟ್ಟರೆ ಪ್ರೇತಾತ್ಮಗಳು ಬಂದು ಮಲಗುತ್ತಾವೆ. ಈ ನಂಬಿಕೆಗಳಲ್ಲಿ ಹಲವು ಉದ್ದೇಶಗಳು ಸ್ಪಷ್ಟವಾಗುತ್ತದೆ.

ಕುತ್ತೊಲು

ಚಾಪೆ ಹೆಣೆಯಲು ಬಳಸಲಾಗುವ ಕುತ್ತೊಲು ಬಹುಪಯೋಗಿ. ಸಪುರವಾದ ಬಾಣದ ರೂಪದಲ್ಲಿರುವ ಇದನ್ನು, ಚಾಪೆ ಹೆಣೆಯುವಿಕೆಯಲ್ಲಿ ಮಾತ್ರವಲ್ಲದೆ ಇಡ್ಲಿ ಬೇಯುವಿಕೆಯನ್ನು ಪರೀಕ್ಷಿಸಲು, ಹೇನು ಕುಟ್ಟಲು, ತರಕಾರಿ ತುಂಡು ಮಾಡಲು. ಹೀಗೆ ಹಲವು ರೀತಿಯ ಗೃಹಕಾರ್ಯಗಳಲ್ಲಿ ಇದನ್ನು ಬಳಸಲಾಗುತ್ತದೆ.

ಪೆಟಾರಿ

ನಾಗರ ಬೆತ್ತದ ತಡಿಕೆಯಿಂದ ಮುಖ್ಯವಾಗಿ ಬೈರ ಜನಾಂಗ ಅಥವಾ ಇನ್ನಿತರ ವರ್ಗದ ಕುಶಲಕರ್ಮಿಗಳು ನಿರ್ಮಿಸುತ್ತಿದ್ದ ಆ ಕಾಲದ ಪ್ರಮುಖವಾದ ಬಹುಪಯೋಗಿ ವಸ್ತು. ಇದನ್ನು ಹೆಚ್ಚಿನ ಶ್ರೀಮಂತರ ಮನೆಗಳಲ್ಲಿ ಬಟ್ಟೆಬರೆಗಳನ್ನಿಡಲು ಉಪಯೋಗಿಸುತ್ತಿದ್ದರು. ಭೂತಾರಾಧನೆಗೆ ಸಂಬಂಧಪಟ್ಟಂತೆ ದೈವದ ಆಭರಣಗಳು, ಕಡ್ಸಲೆ ಮತ್ತಿತರ ದೈವಕ್ಕೆ ಸಂಬಂಧಪಟ್ಟ ಪರಿಕರಗಳನ್ನು ಭಂಡಾರದ ಮನೆಯಲ್ಲಿಡಲಾಗುತ್ತಿತ್ತು. ಹಾಗೆಯೇ ಯಕ್ಷಗಾನ

ಬಯಲಾಟದ ಮೇಳದವರು ತಮ್ಮ ವೇಷ ಭೂಷಣಗಳನ್ನು ಹೊತ್ತೊಯ್ಯಲು ಬಳಸುತ್ತಿದ್ದರು. ಹಡಗಿನಲ್ಲಿ ವಿದೇಶಕ್ಕೆ ಸಾಮಾನು ಸರಂಜಾಮುಗಳನ್ನು ಸಾಗಿಸಲು ವಿವಿಧ ಗಾತ್ರದ ಪೆಟಾರಿ ಯು ಬಳಕೆಯಾಗುತ್ತಿತ್ತು. ಇಂಗ್ಲೆಂಡ್‌ನ ಭಾಷಾಶಾಸ್ತ್ರಜ್ಞೆ ಡಾ. ಎಲಿಜಬೆತ್ ಲಾಂಬಾರ್ನ್ ಪ್ರಕಾರ ಪೆಟಾರಿ ಶಬ್ಧದ ಬಳಕೆಯು ತುಳು, ಹೀಬ್ರೂ ಮತ್ತು ಅರೆಬಿಕ್ ಭಾಷೆಗಳಲ್ಲಿ ಸಮಾನವಾಗಿದೆ.

ಇಂದು ಇವುಗಳ ಸಂಪೂರ್ಣವಾಗಿ ಬಳಕೆಯಿಂದ ದೂರ ಸರಿದಿದೆ. ಆಧುನಿಕ ವ್ಯವಸ್ಥೆಯಲ್ಲಿ ವಿವಿಧ ನಮೂನೆಯ ಸೂಟ್‌ಕೇಸ್‌ಗಳು, ಬೀರುಗಳು ಬಳಕೆಗೆ ಬಂದು ಇವುಗಳ ಅಗತ್ಯವಿಲ್ಲವಾಗಿದೆ ಮಾತ್ರವಲ್ಲ ಈ ಪೆಟಾರಿಗಳು ವಸ್ತು ಸಂಗ್ರಹಾಲಯವನ್ನು ಸೇರಿದೆ.

ತಟ್ಟಿಕುಡ್ಪು (ಜಾಲರಿ)

ಇದನ್ನು ಕೊರಗ ಜನಾಂಗದವರು ಬೀಳಲಿನಿಂದ ಹೆಣೆದು ತಯಾರಿಸುವರು. ಇದು ಶತಮಾನದ ಹಿಂದೆ ಅಡಿಗೆ ಕೋಣೆಯಲ್ಲಿ ಬಹಳ ಅಗತ್ಯವಾಗಿ ಬೇಕಾಗಿದ್ದ ವಸ್ತುವಾಗಿತ್ತು. ಮುಖ್ಯವಾಗಿ ಅನ್ನ ಬಸಿಯಲು ತರ್‌ಂಬುಚ್ಚಿ ಎಂಬ ಮರದ ಸಾಧನದ ಜೊತೆಗೆ ಬಳಸಲಾಗುತ್ತದೆ. ಇದು ಒಂದು ಗೇಣು ಅಗಲಕ್ಕೆ ವೃತ್ತಾಕಾರದಲ್ಲಿ ಇರುತ್ತದೆ. ಇದು ದೋಸೆ ಹೊಯ್ಯುವ ಸಂದರ್ಭದಲ್ಲಿ ಕಾವಲಿಯಿಂದ ದೋಸೆಯನ್ನು ತೆಗೆದು ಹಾಕಲು ಬಳಕೆಯಾಗುತ್ತಿದ್ದ ಏಕೈಕ ಸಾಧನ. ಅಲ್ಲದೆ, ಇತರೆ ತರಕಾರಿಗಳನ್ನು ಹೆಚ್ಚಿ ಹಾಕಲು, ನೀರು ಬಸಿಯಲು, ಇದನ್ನು ಬಳಸಲಾಗುತ್ತಿತ್ತು.

ತೆರಿಯ

ಆ ಕಾಲಕ್ಕೆ ಹೆಚ್ಚಿನ ಜನ ವರ್ಗ ಅನ್ನ ಪದಾರ್ಥಗಳನ್ನು ಮಣ್ಣಿನ ಮಡಕೆಗಳಲ್ಲಿ ತಯಾರಿಸುತ್ತಿದ್ದು ಒಲೆಯಿಂದ ತೆಗೆದ ಮಡಕೆಯನ್ನು ಕೆಳಗಿಡುವರೆ ತೆರಿಯ ಎಂಬ ಸಾಧನದ ಬಳಕೆಯಾಗುತ್ತಿತ್ತು. ಇದನ್ನು ಬೈಹುಲ್ಲಿನಿಂದ ನೇಯ್ದು ಮಾಡಲಾದ ಮೊರಜ್ಜವೆಂಬ ಸಾಧನದಿಂದ ಬೈಹುಲ್ಲನ್ನು ಬಳಸಿಕೊಂಡು ಸಿದ್ಧಮಾಡಲಾಗುತ್ತಿತ್ತು. ಇದರಲ್ಲಿ ಪಾತ್ರೆಗಳಿಗನುಗುಣವಾಗಿ ವಿವಿಧ ಗಾತ್ರದವುಗಳಿದ್ದವು. ಬೀಳಲಿನಿಂದ ಅಥವಾ ತೆಂಗು ಹಾಗೂ ತಾಳೆಯ ಮರದ ಪಾಂದಾಳವನ್ನು ಬಳಸಿ ಸಿದ್ಧ ಮಾಡಲಾಗುತ್ತಿತ್ತು.

ಪನೋಲಿ

ಹಿಂದಿನ ಕಾಲದಲ್ಲಿ ತುಳುನಾಡಿನ ಜನರು ಮಳೆ ಬಿಸಿಲಿನಿದ ರಕ್ಷಿಸಿಕೊಳ್ಳಲು ಪನೆ ಮರದ ಮಡಲಿನಿಂದ ತಯಾರಿಸಲಾದ ಚತ್ರಿಯನ್ನು ಬಳಸುತ್ತಿದ್ದರು. ಈಗಲೂ ದೈವದೇವರುಗಳ ಉತ್ಸವ ಸಂದರ್ಭದಂದು ಈ ಪನೆ ಚತ್ರಿಯನ್ನೆ ಬಳಸಲಾಗುತ್ತದೆ. ಪನೆ ಮರವೆಂದರೆ ತಾಳೆ ಜಾತಿಯ ಮರ. ಈ ಪ್ರದೇಶದ ಕೃಷಿಕರು, ಕೃಷಿಕಾರ್ಮಿಕರು, ಕೂಲಿಗಳು ಪನೆ ಮರದ ಗರಿಯಿಂದ ತಯಾರು ಮಾಡಿದ ಪನೋಲಿಯನ್ನು ಮುಖ್ಯವಾಗಿ ಮಳೆಯಿಂದ

ರಕ್ಷಿಸಿಕೊಳ್ಳಲು ಬಳಸುತ್ತಿದ್ದರು. ಪನೋಲಿ ಸಿದ್ಧಪಡಿಸುವಲ್ಲಿ ಪಾಣರಾರು ಎತ್ತಿದ ಕೈ. ಆದರೆ ಇದನ್ನು ಇತರ ವರ್ಗದವರೂ ಸಿದ್ಧಪಡಿಸುತ್ತಾರೆ. ಮಳೆಗಾಲದಲ್ಲಿ ಮಳೆಗೆ ತೊಯ್ದು ಹೋದ ಪನೋಲಿಯನ್ನು ತುಳುವರು ಬಚ್ಚಲು ಮನೆಯ ಮೇಲ್ಭಾಗದಲ್ಲಿ ಒಣಗಲಿಟ್ಟು ಮರುದಿನ ಅದನ್ನು ಮತ್ತೆ ಬಳಕೆ ಮಾಡುವುದು ವಾಡಿಕೆ. ಈ ಕ್ರಿಯೆ ಮಳೆಗಾಲದಲ್ಲಿ ನಿರಂತರವಾಗಿ ನಡೆದರೂ ಇದು ಹಾಳಾಗುತ್ತಿರಲಿಲ್ಲ. ಮುಂದಿನ ವರ್ಷದ ಮಳೆಗಾಲದಲ್ಲೂ ಬಳಸಲಾಗುತ್ತಿತ್ತು. ಪನೋಲಿಯಂತೆಯೆ ಮಳೆಯಿಂದ ರಕ್ಷಣೆಗಾಗಿ ತೆಂಗಿನ ಗರಿಯನ್ನು ಜಾಣ್ಮೆಯಿಂದ ಹೆಣೆದು ಮಾಡಿದ ಸಾಧನಕ್ಕೆ ಕೆಡೆಂಜೋಲು, ಬಿದಿರಿನ ಓಟೆ ಮತ್ತು ಚಂದೊಲಿಗೆ ಮರದ ಎಲೆಗಳನ್ನು ಬಳಸಿ ತಯಾರಿಸಲಾದ ಗೊರಬು ಇದೇ ಉದ್ದೇಶಕ್ಕಾಗಿ ಬಳಸಲಾಗುತ್ತಿತ್ತು.

ಕುಂಟಾಯಿ

ಇದನ್ನು ಕೊರಗರು ಹಾಗು ಬೈರ ಜನಾಂಗದವರು ಸಿದ್ಧಪಡಿಸುತ್ತಿದ್ದರು. ನೋಡಲು ಸರಳವಾಗಿ ಕಂಡರೂ ಹಿಂದಿನ ಕಾಲದಲ್ಲಿ ತುಳುವರ ಅಗತ್ಯದ ಸಾಮಗ್ರಿಯಾಗಿತ್ತು. ಇದನ್ನು ವಿವಿಧ ಜಾತಿಯ ಬೀಳಲುಗಳಿಂದ ಅಥವಾ ಬಿದಿರಿನಿಂದ ಸಿದ್ಧಪಡಿಸಲಾಗುತ್ತಿತ್ತು. ಕಾಡಿನಿಂದ ತರೆಗೆಲೆ ತರಲು, ಕೋಳಿಗಳನ್ನು ಕೂಡಿ ಹಾಕಲು ಬಳಕೆಯಾಗುತ್ತಿತ್ತು. ಹೇಂಟೆಯು ಮೊಟ್ಟೆ ಇಡುವ ಕಾಲಕ್ಕೆ ಹಟ್ಟಿಯ ಗೋಡೆಯ ಮೇಲ್ಭಾಗದಲ್ಲಿ ವಿಶಿಷ್ಟವಾಗಿ ಹೆಣೆದು ಸಿದ್ಧಪಡಿಸಲಾದ ಕೂಂಟಾಯಿಯನ್ನು ಹೇಂಟೆಯು ಮೊಟ್ಟೆಗಳಿಗೆ ಕಾವು ನೀಡಲು ಬಳಕೆಯಾಗುತ್ತಿತ್ತು.

ಕುತ್ತರಿ

ಕುಸಲ್‌ದ ಕುಡ್ಕೆಲ 'ಕುತ್ತರಿ'ಡ್ ಬೂರುಂಡು

(ಜಾಣ ನರಿಯೂ ಬೋನಿಗೆ ಬೀಳುತ್ತದೆ)

ಬಹಳ ಜಾಣ್ಮೆಯಿಂದ ಮೀನು ಹಿಡಿಯುವ ಕುತ್ತರಿಯನ್ನು ತಯಾರಿಸಲಾಗುತ್ತಿತ್ತು. ಕೋಳಿಗಳನ್ನು ಕೂಡಿ ಹಾಕಲು ಬಳಸುವ ಕೂಂಟಾಯಿಯ ರಚನೆಯಲ್ಲಿ ಮೇಲ್ಬದಿಯಲ್ಲಿ ಕೈಯೊಂದು ಒಳಹೊಕ್ಕು ಸಿಕ್ಕಿಬಿದ್ದ ಮೀನನ್ನು ಹೊರತೆಗೆಯಬಹುದಾದಷ್ಟು ದೊಡ್ಡ ತೂತಿರುವಂತೆ ರಚಿಸಿದರೆ ಅದು ಕುತ್ತರಿಯೆಂದು ಕರೆಯಲ್ಪಡುತ್ತದೆ.

ತಿತ್ತಿರಿ ತಿತ್ತಿರ್ ಮಜಲಿನಲ್ಲಿ ಹುಲ್ಲು ತುಂಬಿದೆ
ತಿತ್ತಿರಿ ತಿತ್ತಿರ್ ಮಜಲಿನಲ್ಲಿ ಹುಲ್ಲು ತುಂಬಿದೆ
ಯಾಕೆ ಎಮ್ಮೆ ಯಾಕೆ ಎಮ್ಮೆ ಹುಲ್ಲು ಮೇಯಲಿಲ್ಲ?
ನಿಮ್ಮ ಹೊಲೆಯ ಹಗ್ಗ ಬಿಡದುದಕ್ಕೆ ನಾನೇನು ಮಾಡಲಿ?
ಯಾಕೆ ಹೊಲೆಯ ಯಾಕೆ ಹೊಲೆಯ ಹಗ್ಗ ಬಿಡಲಿಲ್ಲ?
ನಿಮ್ಮ ಒಡತಿ (ಗಂಜಿ) ತಿಳಿ ಹೊಯ್ಯದ್ದಕ್ಕೆ ನಾನೇನು ಮಾಡಲಿ?

ಯಾಕೆ ಹೆಣ್ಣೆ ಯಾಕೆ ಹೆಣ್ಣೆ ಹೊಲೆಯನಿಗೆ ತಿಳಿ ಹೊಯ್ಯಲಿಲ್ಲ?
ನನ್ನ 'ಕುಡ್ಪುತಂಬುರ್ಚ್ಚಿ'ಯನ್ನು ಇಲಿ ಕೊಂಡೊಯ್ದುದಕ್ಕೆ ನಾನೇನು ಮಾಡಲಿ?
ಯಾಕೆ ಬೆಕ್ಕೆ ಯಾಕೆ ಬೆಕ್ಕೆ ಇಲಿ ಹಿಡಿಯಲಿಲ್ಲ?
ನಿಮ್ಮ ಮಗಳು ಹಾಲಿನ ಪಾತ್ರೆ ನೆಕ್ಕಲು ಬಿಡದುದಕ್ಕೆ ನಾನೇನು ಮಾಡಲಿ?
ಯಾಕೆ ಹೆಣ್ಣೆ ಯಾಕೆ ಹೆಣ್ಣೆ ಬೆಕ್ಕಿಗೆ ಹಾಲಿನ ಪಾತ್ರೆ ನೆಕ್ಕಲು ಕೊಡಲಿಲ್ಲ?
ನನ್ನ ಕಪಿಲೆ ದನವನ್ನು ಹುಲಿ ಕೊಂಡೊಯ್ದುದಕ್ಕೆ ನಾನೇನು ಮಾಡಲಿ?
ಯಾಕೆ 'ಬೆಡಿಗಾರ' ಯಾಕೆ 'ಬೆಡಿಗಾರ' ಬಂದೂಕು ಬಿಡಲಿಲ್ಲ?
ನನ್ನ ಬಂದೂಕಿಗೆ ಗೆದ್ದಲು ಹಿಡಿದಿದ್ದಕ್ಕೆ ನಾನೇನು ಮಾಡಲಿ?
ಯಾಕೆ ಕೋಳಿ ಯಾಕೆ ಕೋಳಿ ಕೋವಿಯ ಗೆದ್ದಲು ಕುಕ್ಕಲಿಲ್ಲ?
ನನ್ನ ಕೊಕ್ಕು ಮೊಂಡಾದುದಕ್ಕೆ ನಾನೇನು ಮಾಡಲಿ?
ಯಾಕೆ ಬಡಗಿ ಯಾಕೆ ಬಡಗಿ ಕೋಳಿಯ ಕೊಕ್ಕು ಕೆತ್ತಲಿಲ್ಲ?
ನನ್ನ 'ಉಳಿ ಬಾಜಿ' ಕಳ್ಳರು ಕೊಂಡೊಯ್ದುದಕ್ಕೆ ನಾನೇನು ಮಾಡಲಿ?
ಯಾಕೆ ಬೂತ ಯಾಕೆ ಬೂತ ಕಳ್ಳರನ್ನು ಹಿಡಿಯಲಿಲ್ಲ?
ವರ್ಷಕ್ಕೊಂದು ಕೋಲ ಕೊಡದಿರುವಾಗ ನಾನ್ಯಾಕೆ ಹಿಡಿಯಲಿ?

ಪ್ರಶ್ನೆಗೆ ಪ್ರಶ್ನಾರೂಪದಲ್ಲಿ ಉತ್ತರಿಸುವ ತಂತ್ರವನ್ನು ಹೊಂದಿರುವ ಈ 'ಕಬಿತ'ದಲ್ಲಿ ತುಳುನಾಡಿನಲ್ಲಿ ಬಳಕೆಯಾಗುವ ವಿವಿಧ ಪರಿಕರಗಳು, ಹಾಗೂ ಅವನ್ನು ಬಳಸುತ್ತಿದ್ದವರ, ರಚಿಸುತ್ತಿದ್ದವರ ವಿವರಗಳನ್ನು ನೀಡಲಾಗಿದೆ. ಈ ಕಬಿತದಲ್ಲಿ ತುಳುವರ ನಿತ್ಯದ ಬದುಕಿನಲ್ಲಿ ಬಳಕೆಯಾಗುವ ಮಣಿಪು ಹಗ್ಗ, ಅಡಿಗೆ ಮನೆಯೊಳಗೆ ಬಳಕೆಯಾಗುವ ಕುಡುಪು, ತಂಬುರ್ಚ್ಚಿ, ಪೇರಬಿಸಲೆ, ಬೇಟೆಗೆ ಬಳಸಲ್ಪಡುವ ಬಂದೂಕು, ಬಡಗಿಯರು ನಿತ್ಯ ಬಳಸುವ ಉಳಿ ಬಾಜಿ ಇತ್ಯಾದಿಗಳ ಚಿತ್ರಣವನ್ನು ಕಾಣಬಹುದು. ಇದೊಂದು ಶಿಶುಗೀತೆಯಾದರೂ ಒಂದಕ್ಕೊಂದು ಪೂರಕ ಕೊಂಡಿಯಿದ್ದು, ತುಳುವರ ಬದುಕಿನ ಪುಟ್ಟ ಚಿತ್ರಣ ಇಲ್ಲಿದೆಯೆನ್ನಬಹುದು. ಮನುಷ್ಯನ ಅತಿಸೂಕ್ಷ್ಮ ಹಾಗೂ ಸಂಕೀರ್ಣ ಸಂವೇದನೆಯ ವ್ಯಕ್ತಿತ್ವದ ಜಾಣ್ಮೆಯ ಅಭಿವ್ಯಕ್ತಿಯೇ ಕುಶಲಕಲೆಯೆನ್ನಬಹುದು.

ಕಸುಬಿನ ಆಧಾರದಲ್ಲಿ ಜಾತಿ ಎನ್ನುವ ಸಾಮಾಜಿಕ ಸಂರಚನೆಯು ಬಲಗೊಂಡಿತು. ಆಧುನಿಕ ಪೂರ್ವದ ಕುಲಕಸುಬುಗಳು ಜಾತಿ ಆಧಾರಿತವಾಗಿ ಮುಂದುವರಿದುಕೊಂಡು ಬಂದಿರುವುದು ಅಧ್ಯಯನ ಸಂದರ್ಭದಲ್ಲಿ ಗೋಚರವಾಗುವ ಸತ್ಯ. ಈ ಕುಲ ಕಸುಬುಗಳು ಆಧುನಿಕ ಕಾಲಘಟ್ಟದಲ್ಲಿ ತಂತ್ರಜ್ಞಾನದ ಪ್ರವೇಶದಿಂದಾಗಿ ಮೂಲದ ಸ್ವರೂಪಕ್ಕಿಂತ ಭಿನ್ನವಾಗಿ ರೂಪುಗೊಳ್ಳುತ್ತಿದೆ. ಇಂದು ಈ ವೃತ್ತಿಗಳು ಜಾತಿವಿಶಿಷ್ಟ ಕಸುಬುಗಳಾಗದೆ

ಸಾರ್ವತ್ರಿಕವಾದ ಪಾಲ್ಗೊಳ್ಳುವಿಕೆಯು ಕಂಡು ಬರುತ್ತದೆ. ಕುಲಕಸುಬುಗಳ ಕುರಿತಾಗಿ ಪಾಡ್ದನಗಳು ವಿಪುಲವಾದ ಮಾಹಿತಿ ನೀಡುತ್ತವೆ. ಐತಿಹಾಸಿಕವಾಗಿ ವೃತ್ತಿ ಆಧಾರಿತ ಜಾತಿಗಳ ರಚನೆಯಾದ ಕಾಲವು ಮುಂದಿನ ಸಂಶೋಧನೆಗೆ ಒಳ್ಳೆಯ ವಸ್ತುವಾಗುವುದು.

ಪೂರ್ವದಲ್ಲಿ ದೈವಾರಾಧನೆಯ ಸಂದರ್ಭದಲ್ಲಿ ದೈವ ಕೂರುವ ಪರಿಕರಕ್ಕೆ ಜಿಡ್ಡೆ ಎಂದು ಕರೆಯುತ್ತಿದ್ದರು. ನಂತರದಲ್ಲಿ ಮಾನವನ ಪರಿಷ್ಕಾರದಿಂದ ಜಿಡ್ಡೆ ಮೂರು ಕಾಲಿನ 'ಮುಕ್ಕಲಿಗೆ' ಎಂದಾಯಿತು. ಇದು ಪರಂಗಿಗಳ ಪ್ರವೇಶದಿಂದಾಗಿ ಅವರಿಂದ ಬಂದ ಕಾರಣ ಪರಂಗಿ ಮುಕ್ಕಲಿಗೆ ಎಂದು ಜನರಿಂದ ಗುರುತಿಸಲ್ಪಟ್ಟಿತು. ಇದಕ್ಕೆ ಪೂರಕವಾಗಿ ತುಳುವಿನಲ್ಲಿ ಪೆಲಕಾಯಿ(ಹಲಸಿನ ಹಣ್ಣು) ಇತ್ತು. ಆದರೆ ಪರಂಗಿಗಳಿಂದ ಬಂದ ಪೆಲಕಾಯಿ ಪರಂಗಿ ಪೆಲಕಾಯಿಯಾಯಿತು. ಹಾಗೇನೇ ಪೇಟೆ ನಮ್ಮಲ್ಲಿತ್ತು. ಪರಂಗಿಗಳಿದ್ದದ್ದರಿಂದ ಪರಂಗಿಪೇಟೆಯಾಯಿತು (ಬಂಟ್ವಾಳ–ಮಂಗಳೂರು ಹೆದ್ದಾರಿ ಮಧ್ಯದಲ್ಲಿ ಸಿಗುವ ಪೇಟೆ).

ರಂಪೋನಿ ಬಲೆಯು ಪೋರ್ಚುಗೀಸ್ ಕ್ರೈಸ್ತ ಪಾದ್ರಿ ರಂಪನ್‌ನಿಂದ (೧೯೧೦) ಪರಿಚಯಿಸಲ್ಪಟ್ಟಿದ್ದು, ತುಳುವ ಮೀನುಗಾರಿಕೆಯಲ್ಲಿ ಬಳಕೆಯಲ್ಲಿದೆ. ಕರಾವಳಿ ಕರ್ನಾಟಕದ ತುಳುವ ನೇಕಾರರು ಕುಶಲಕರ್ಮಿಗಳಾಗಿದ್ದರೆಂಬುದಕ್ಕೆ ಹಲವಾರು ಪಾಡ್ದನಗಳಲ್ಲಿ ದೊರೆಯುವ ವಿವಿಧರೀತಿಯ ಬಟ್ಟೆಗಳ ಹೆಸರುಗಳು ಸಾಕ್ಷಿಯಾಗುತ್ತವೆ.

ಶಿಲ್ಪಿಗಳು, ಬಡಗಿಗಳ ಕೈಕುಶಲತೆಯ ಬಗೆಗೆ ಪಾಡ್ದನಗಳು ಬಹಳ ವಿವರಣೆಯನ್ನು ನೀಡುತ್ತವೆ. ಕರ್ನಾಟಕದ ನಾಲ್ಕು ಮುಖ್ಯ ಏಕಶಿಲಾ ಗೋಮಟೇಶ್ವರ ವಿಗ್ರಹಗಳಲ್ಲಿ ಮೂರು ಮೂರ್ತಿಗಳು ತುಳುನಾಡಿನಲ್ಲಿದ್ದು ಐತಿಹಾಸಿಕ ಕೊಂಡಿಯನ್ನು ಗುರುತಿಸುವ ಪ್ರಯತ್ನವನ್ನು ಮಾಡಬಹುದು. ಇದು ಜೈನಧರ್ಮ ಕರಾವಳಿಯಲ್ಲಿ ಬಹಳ ಪ್ರಭಾವಿಯಾಗಿತ್ತೆಂಬುದನ್ನು ಸೂಚಿಸುತ್ತದೆ; ಅಲ್ಲದೆ ಇಲ್ಲಿ ಪ್ರಾಕೃತಿಕವಾಗಿ ಅಷ್ಟು ದೊಡ್ಡ ಕಲ್ಲುಗಳು ದೊರೆಯುವುದನ್ನು ಗಮನಿಸಬಹುದು.

ಕೃಷಿಯಲ್ಲಿ ಬಳಸುವ ಸಾಮಾನ್ಯ ವಸ್ತುಗಳಾದ ಕುರ್ವೆ, ಕಾಂಟ್ಯ, ಬಟ್ಟಿ, ಗೆರಸೆ, ಮುಟ್ಟಾಲೆ, ಮಣಿಪಿನ ಹಗ್ಗ, ಇತ್ಯಾದಿಗಳನ್ನು ಹೆಚ್ಚಾಗಿ ಮಹಿಳೆಯರು ಸಿದ್ಧಪಡಿಸುತ್ತಿದ್ದರು ಮತ್ತು ಇದರಲ್ಲಿನ ಕಲಾತ್ಮಕತೆ ವಿಶಿಷ್ಟವಾದುದು. ಅದೇ ರೀತಿ ಗೃಹ ಬಳಕೆಯ ವಸ್ತುಗಳಾದ ಚಾಪೆ, ತಂಬುಚ್ಚಿ, ತೆರಿಯ ಇವುಗಳಲ್ಲಿರುವ ಸಂಕೀರ್ಣ ಕಲಾತ್ಮಕತೆ ಗಮನಿಸಬೇಕು. ಕೆಲವೊಂದು ವಸ್ತುಗಳಿಗೆ ಇಂದಿಗೂ ಬೇಡಿಕೆ ಇರುವುದನ್ನು ಕಾಣಬಹುದಾಗಿದೆ.

ಕೊನೆ ಟಿಪ್ಪಣಿ

[೧] ಸಾಯಿಗೀತಾ, *ಸಿರಿಸಂಪದ*, ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರ, ೨೦೧೪.

[೨] ಸೋಮೇಶ್ವರ ಅಮೃತ, *ಪಾಡ್ದನ ಸಂಪುಟ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೧೯೯೭, ಪುಟ ೩೩೧

[೩] ಮಾಸ್ಟರ್ ದೂಮಪ್ಪ ಬಿ., *ಮಾದಿರನ ಗಾದೆ*, ಅಶೋಕನಗರ, ಮಂಗಳೂರು, ಪುಟ ೨೪.

[೪] ಮಾಹಿತಿ: ಸುರೇಶ್ ಅಧಿಕಾರಿ, ಇರ್ನಿಬೀಡು, ಅರಳ, ಪ್ರಾಯ ೬೦.

[೫] ಆಚಾರ್ಯ ಕಾ.ವಾ., *ದಕ್ಷಿಣಕನ್ನಡದ ಆಭರಣಗಳು* (ಲೇಖನ), ಸಂ: ಅಡ್ಯನಡ್ಕ ಕೃಷ್ಣ ಭಟ್, ಸುದರ್ಶನ, ೧೯೭೭, ಪುಟ ೨೧೬–೨೦೧೭.

[೬] ಆಚಾರ್ಯ ಕಾ.ವಾ., *ದಕ್ಷಿಣಕನ್ನಡದ ಆಭರಣಗಳು* (ಲೇಖನ), ಸಂ: ಅಡ್ಯನಡ್ಕ ಕೃಷ್ಣ ಭಟ್, ಸುದರ್ಶನ, ೧೯೭೭, ಪುಟ ೨೧೬–೨೦೧೭.

[೭] ಆಚಾರ್ಯ ಕಾ.ವಾ., *ದಕ್ಷಿಣಕನ್ನಡದ ಆಭರಣಗಳು* (ಲೇಖನ), ಸಂ: ಅಡ್ಯನಡ್ಕ ಕೃಷ್ಣ ಭಟ್, ಸುದರ್ಶನ, ೧೯೭೭, ಪುಟ ೨೧೬–೨೦೧೭.

[೮] ನಾವಡ ಎ.ವಿ, *ಪಾಡ್ದನಗಳಲ್ಲಿ ತುಳುವ ಸಂಸ್ಕೃತಿಯ ಪ್ರತಿನಿಧೀಕಕರಣ*, ತುಳು ಪಾಡ್ದನ ಬಂಧ ಮತ್ತು ವಿನ್ಯಾಸ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೩, ಪುಟ ೧೪೦.

[೯] ನಾವಡ ಎ.ವಿ, *ಪಾಡ್ದನಗಳಲ್ಲಿ ತುಳುವ ಸಂಸ್ಕೃತಿಯ ಪ್ರತಿನಿಧೀಕಕರಣ*, ತುಳು ಪಾಡ್ದನ ಬಂಧ ಮತ್ತು ವಿನ್ಯಾಸ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೩, ಪುಟ ೧೪೦.

[೧೦] ಸೋಮೇಶ್ವರ ಅಮೃತ, *ತುಳು ಪಾಡ್ದನ ಸಂಪುಟ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೧೯೯೭, ಪುಟ ೪೩೫.

[೧೧] ನಾವಡ ಎ.ವಿ, *ಪಾಡ್ದನಗಳಲ್ಲಿ ತುಳುವ ಸಂಸ್ಕೃತಿಯ ಪ್ರತಿನಿಧೀಕಕರಣ*, ತುಳು ಪಾಡ್ದನ ಬಂಧ ಮತ್ತು ವಿನ್ಯಾಸ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೩, ಪುಟ ೧೪೦–೧೪೧.

[೧೨] ಸೋಮೇಶ್ವರ ಅಮೃತ,*ಪಾಡ್ದನ ಸಂಪುಟ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೧೯೯೭, ಪುಟ ೩೩೧.

[೧೩] ಸೋಮೇಶ್ವರ ಅಮೃತ, *ಪಾಡ್ದನ ಸಂಪುಟ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೧೯೯೭, ಪುಟ ೩೩೨.

[೧೪] ಸೋಮೇಶ್ವರ ಅಮೃತ *ಪಾಡ್ದನ ಸಂಪುಟ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೧೯೯೭, ಪುಟ ೩೧೧.

[೧೫] ಶಿವರಾಮು ವನಂ, *ಜಾನಪದ ವಸ್ತು ಸಂಗ್ರಹಾಲಯಗಳು*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦, ಪುಟ ೩೧.

[೧೬] ಆಳ್ವ ಲಕ್ಷ್ಮಿ ನಾರಾಯಣ ಏರ್ಯ, *ಸಂಚಯ*, ಏರ್ಯ ಅಭಿನಂಧನಾ ಸಮಿತಿ, ೧೯೯೫.

[೧೭] ಸಾಲೆತ್ತೂರು ಬಿ.ಎ, *ಎನ್ಸೆಂಟ್ ಕರ್ನಾಟಕ, ಹಿಸ್ಟರಿ ಆಫ್ ತುಳುವಾಸ್*, ಒರಿಯೆಂಟಲ್ ಬುಕ್ ಏಜನ್ಸಿ, ಪೂನಾ, ೧೯೩೬, ಪುಟ ೬೮೫.

[೧೮] ಸ್ಟರಕ್ ಜಾನ್, *ಸೌತ್ ಕೆನರಾ ಮ್ಯಾನುವಲ್* –ಮೆಡ್ರಾಸ್ ಪ್ರೆಸಿಡೆನ್ಸಿ ಪ್ರಕಾಶಿತ– ೧೮೯೬, ಪುಟ ೧೯೫.

[೧೯] ರೈ ವಿವೇಕ ಬಿ.ಎ., *ತುಳು ಜನಪದ ಸಾಹಿತ್ಯ*, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜ ಪೇಟೆ, ಬೆಂಗಳೂರು ೧೯೮೫.

[೨೦] ಗೌಡ ಚಿನ್ನಪ್ಪ ಕೆ, *ಸಿರಿ, ಕರಂಗೋಲು ಕುಣಿತ:* ಪಠ್ಯ ಪ್ರದರ್ಶನ ಮತ್ತು ಅರ್ಥ, ೧೯೯೫ ಪುಟ: ೩೯೬–೩೯೫.

[೨೦] ಭಟ್ ಶ್ರೀನಿವಾಸ ಮ., *ಜನಪದ ಶತಪದ*, ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ, ೨೦೦೫.

ಅಧ್ಯಾಯ ೬

ಆಚರಣೆ ಮತ್ತು ಸಂಪ್ರದಾಯಗಳಲ್ಲಿ ಇತಿಹಾಸದ ಹೆಜ್ಜೆಗುರುತುಗಳು

೬. ಆಚರಣೆಗಳು

ನಂಬಿಕೆ ಮತ್ತು ಆಚರಣೆಗಳು ಜನಪದ ಧರ್ಮದ ಎರಡು ಮುಖ್ಯ ಅಂಶಗಳು. ತುಳುವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಚರಣೆಗಳನ್ನು ಮುಖ್ಯವಾಗಿ ಜೀವನಾವರ್ತನ ಆಚರಣೆಗಳು ಮತ್ತು ವಾರ್ಷಿಕಾವರ್ತನ ಆಚರಣೆಗಳು, ಆರಾಧನೆಯನ್ನು ಹಿನ್ನೆಲೆಯಾಗಿರಿಸಿಕೊಂಡ ಆಚರಣೆಗಳು ಎಂಬ ವಿಭಾಗಗಳನ್ನಾಗಿ ಮಾಡಬಹುದು.

ತುಳುವ ಆಚರಣೆಗಳು

ಜೀವನಾವರ್ತನ	**ವಾರ್ಷಿಕಾವರ್ತನ**	**ಆರಾಧನಾ ಹಿನ್ನೆಲೆಯುಳ್ಳ ಆಚರಣೆಗಳು**
ಜನನ ಸಂಬಂಧಿ ಆಚರಣೆಗಳು	ಬಿಸು	ಕೋಲ/ನೇಮ ಇತ್ಯಾದಿಗಳು
ನೀರಮದ್ಮೆ/ಕಜಂಬು	ಪತ್ತನಾಜೆ	ಅಗೆಲ್/ ಆವಾರ ಇತ್ಯಾದಿಗಳು
ಬದ್ಸೊ (ಮದುವೆ ನಿಶ್ಚಯ)	ಆಟಿ– ತಿಂಗಳ ಆಚರಣೆಗಳು	ಕೋರಿಗುಂಟ – ಕೋಳಿ ಅಂಕ
ಮದುವೆ	ಸೋಣ– ತಿಂಗಳ ಆಚರಣೆಗಳು	ಕಂಬಳ/ಪೂಕರೆ–ಕಾಪುಇತ್ಯಾದಿ
ಬಯಕೆ (ಸೀಮಂತ)	ಮನೆತುಂಬುಸುವುದು–ಪುದ್ವಾರ್	ಜನಪದ ಕುಣಿತಗಳು
ಮರಣಸಂಬಂಧಿ ಆಚರಣೆಗಳು	ಕಾವೇರಿ ಸಂಕ್ರಾಂದಿ	ಯಕ್ಷಗಾನ
	ಪರ್ಬ	ವೈದಿಕ ಆರಾಧನೆ
	ಕೆಡ್ಡಸ	ನಾಗಾರಾಧನೆ

ವ್ಯಕ್ತಿಯ ಬದುಕಿನ ಬೇರೆ ಬೇರೆ ಹಂತಗಳಲ್ಲಿ ರೂಢಿಗತವಾಗಿ ಆಚರಿಸಲ್ಪಡುವ ವಿಧಿವಿಧಾನಗಳನ್ನು ಜೀವನಾವರ್ತನದ ಆಚರಣೆಗಳು ಹಾಗೂ ವರ್ಷಾರಂಭದಿಂದ ವರ್ಷದ ಕೊನೆಯ ದಿನದವರೆಗೆ ಮನೆಯಲ್ಲಿ, ಕುಟುಂಬದಲ್ಲಿ, ಊರಿನಲ್ಲಿ ನಡೆಯುವ ವಿವಿಧ ರೀತಿಯ ಆಚರಣೆಗಳು ವಾರ್ಷಿಕಾವರ್ತನದ ಆಚರಣೆಗಳೆಂದು ಗುರುತಿಸಲ್ಪಡುತ್ತವೆ. ಕೆಲವೊಮ್ಮೆ ವಾರ್ಷಿಕಾವರ್ತನದೊಡನೆ ಗುರುತಿಸಲ್ಪಟ್ಟರೂ ಸ್ಪಷ್ಟ ದಿನಗಳಲ್ಲಿ ಅಲ್ಲದೆ, ಯಾವುದೋ ಸಂದರ್ಭಗಳಲ್ಲಿಯೂ ಆಚರಿಸಲ್ಪಡುವ ಸಂಪ್ರದಾಯಗಳು, ಕುಣಿತ ಇತ್ಯಾದಿಗಳು ಆರಾಧನಾ ಹಿನ್ನೆಲೆಯ ಆಚರಣೆಯೆಂಬ ಶೀರ್ಷಿಕೆಯಡಿಯಲ್ಲಿ ಗುರುತಿಸಲ್ಪಡುತ್ತವೆ.

೬.೧ ಜೀವನಾವರ್ತನ ಆಚರಣೆಗಳು

ಒಂದು ಸಂಸ್ಕೃತಿಯ ಭಾಗವಾಗಿ ಹುಟ್ಟಿ ಬೆಳೆಯುವ ಒಬ್ಬ ವ್ಯಕ್ತಿ ಹುಟ್ಟಿದಾಗಿನಿಂದ ಸಾವಿನ ವರೆಗೆ ಮುಖ್ಯ ಘಟ್ಟಗಳಲ್ಲಿ ಸಾಂಪ್ರದಾಯಿಕ ಆಚರಣೆಗಳಲ್ಲಿ ಭಾಗಿಯಾಗಬೇಕಾಗುತ್ತದೆ. ಜನನ, ವಿವಾಹ ಹಾಗೂ ಸಾವಿನ ಸಂದರ್ಭದ ಆಚರಣೆಗಳು ಜೀವನಾವರ್ತನ ಆಚರಣೆಗಳಲ್ಲಿ ಮುಖ್ಯವಾದವು.

ಹುಟ್ಟು

ಜನನದಿಂದ ಸಾವಿನವರೆಗಿನ ಜೀವನಾವರ್ತನ ಆಚರಣೆಗಳಲ್ಲಿ ಬಳಸಲ್ಪಡುವ ಭೌತಿಕ ವಸ್ತು ಪರಿಕರಗಳನ್ನು ಈ ವಿಭಾಗದಲ್ಲಿ ಪರಿಗಣಿಸಲಾಗಿದೆ.

ನೇಲೆ

ಮಗುವೊಂದರ ಆಗಮನವಾಗುತ್ತದೆ ಎನ್ನುವ ಸಂದರ್ಭದಲ್ಲಿ ಕುಟುಂಬದಲ್ಲಿ ಸಹಜವಾಗಿ ಸಂತೋಷ ಹಾಗೂ ಹೊಸಕೂಸನ್ನು ಬರಮಾಡಿಕೊಳ್ಳುವ ತಯಾರಿ ಎರಡೂ ಕಂಡುಬರುತ್ತದೆ. ಹೆರಿಗೆಯ ಸಂದರ್ಭದಲ್ಲಿ ಗರ್ಭಿಣಿಗೆ ಆಧಾರವಾಗಿ ನೇಲೆಯನ್ನು ಹಾಕಲಾಗುತ್ತಿತ್ತು.

“ಅಡಿಗಡಿಗೆ ನೋವು ಬರುವಾಗ ಉಡೆನೂಲು ಕಡಿದರು. ಕೈಹಗ್ಗ ಕಟ್ಟಿದರು, ಅಂಗೈಗೆ ಎಣ್ಣೆಹಾಕಿ ಹೊಟ್ಟೆಯನ್ನು ನೀವಿದರು. ಮೂರುಸಲ ನೀವಿದಾಗ ಮಗುವಿನ ಜನನವಾಯಿತು. ಹೆರಿಗೆ ಮನೆಯಲ್ಲಿ ಗಂಟೆ ಬಾರಿಸಿದರು. ಹೆದರಿಕೆ ಕಳೆದರು. ಹುಟ್ಟಿದ ಜಾಗದಲ್ಲಿ ಹೊಕ್ಕುಳು ಕುಯ್ದರು. ತಣ್ಣೀರಲ್ಲಿ ಮೀಯಿಸಿದರು. ಮೂರನೆಯ ದಿನ ಮುಚ್ಚಿಲಮೆಯೆಂಬ ಹೊಲೆ ಕಳೆಯುವ ವಿಧಿಯನ್ನೂ, ಐದನೆಯ ಪುರುಡನ್ನೂ, ಹನ್ನೊಂದು ಹದಿನಾರರ ಪುರುಡನ್ನೂ ಕಳೆದರು, ತೊಟ್ಟಿಲು ಕಟ್ಟಿದರು, ಚೌಕ ಹಾಸಿದರು, ನಾಲ್ಕು ಮನೆಯ ಹೆಂಗಸರು ಬಂದರು, ಹಸು ಕೊಟ್ಟಿಗೆಗೆ ಬರುವ ಹೊತ್ತಿಗೆ ತೊಟ್ಟಿಲಲ್ಲಿ ಮಗುವನ್ನು ಇರಿಸಿ, ಮೂರುಸಲ ಹೆಸರು, ಹುಟ್ಟು ಹೇಳಿ ಕರೆದರು. ಕೂಡಿದ ಸಭೆಗೆ ಅವಲಕ್ಕಿ ಕಲಸಿ ಹಂಚಿದರು”[೧]. ಆಗತಾನೇ ಹುಟ್ಟಿದ ಹಸುಗೂಸನ್ನು ಮಲಗಿಸಲು, ಆನಂತರದ ದಿನಗಳಲ್ಲಿ ಎಣ್ಣೆ ಪೂಸಿ ಮಲಗಿಸಲು ಅಡಿಕೆ ಮರದ ಹಾಳೆಯನ್ನು ಬಳಸುತ್ತಿದ್ದರು. ಮಗು ಹುಟ್ಟಿದ ಹದಿನಾರನೆಯ ದಿನದಂದು ಮಗುವಿಗೆ ಉಡಿದಾರ ಹಾಕಲಾಗುತ್ತಿತ್ತು. ಅದನ್ನು ಎಕ್ಕದ ಗಿಡದ ದಂಟಿನ ನಾರಿನಿಂದ ನೇಯ್ದು ಮಾಡಲಾಗುತ್ತಿತ್ತು. ಅದೇ ದಿನ ಮಗುವನ್ನು ತೊಟ್ಟಿಲಿಗೆ ಹಾಕುವ ಸಂಭ್ರಮವನ್ನು ಆಚರಿಸಲಾಗುತ್ತಿತ್ತು. ಈ ಸಂದರ್ಭದಲ್ಲಿ ಮುಖ್ಯವಾಗಿ ಬಳಸಲಾಗುತ್ತಿದ್ದ ಪರಿಕರ ‘ತೊಟ್ಟಿಲು’.

ತೊಟ್ಟಿಲು

ಒಂದು ತೊಟ್ಟಿಲಿನ ವಿನ್ಯಾಸದಲ್ಲಿ ಬಡಗಿಯ ಚಾಕಚಕ್ಯತೆ ಮಾತ್ರ ಪ್ರಧಾನವಲ್ಲ, ಇಲ್ಲಿಯೂ ಆಯ ಮತ್ತು ಹಿರಿಯರ ನಂಬಿಕೆಗಳಿಗೆ ವಿಶೇಷ ಮೌಲ್ಯವಿದೆ. ಹಿರಿಯರೊಬ್ಬರ ಅನುಭವದಂತೆ ಮರದ ತೊಟ್ಟಿಲಿನ ಆಯ ಅದರಲ್ಲಿ ಬಳಸಲಾಗುವ ಮರದ ವಿಶೇಷತೆ ಕುತೂಹಲಕಾರಿ. ಇದರ ರಚನೆಗೆ ಸುಮಾರು ಐದು ಜಾತಿಯ ಮರಗಳನ್ನು ಬಳಸಲಾಗುತ್ತದೆ. ಮುಖ್ಯವಾಗಿ ಹಾಲು ಬರುವ ಮರಗಳು. ಅವುಗಳೆಂದರೆ, ಹಲಸು, ಮಾವು, ಹಾಳೆ, ಕಾಸರಕ ಮತ್ತು ಕೊಂದೆ. ಸಂಸ್ಕೃತಿಯಲ್ಲಿ ಹಾಲು ಬರುವ ಮರಗಳು ಫಲವಂತಿಕೆಗೆ ಸಂಕೇತವಾಗುತ್ತದೆ (ಶಿವರಾಮ್ ಶೆಟ್ಟಿ, ೧೯೯೩). ಅದರಲ್ಲಿಯೂ, ಹಸಿ ಮಾವಿನ ಮರವನ್ನು ತುಳುವರು ಕಾಷ್ಠ ಇಡುವ ಸಂದರ್ಭದಲ್ಲಿ ಉಪಯೋಗಿಸುವರು. ಉರಿಯದೆ ಉಳಿದ ಹಸಿ ಮಾವಿನಮರದ ತೊಲೆಯ ಹಲಗೆಯನ್ನು ತೊಟ್ಟಿಲಿನ ಆಡಿ ಭಾಗಕ್ಕೆ ಉಪಯೋಗಿಸುವರು. ಇಲ್ಲಿ ಹುಟ್ಟು ಸಾವನ್ನು ಸಮೀಕರಿಸಿ ನೋಡುವ ದೃಷ್ಟಿಕೋನ ಒಂದೆಡೆಯಾದರೆ, ಮಗುವಿನ ಬೆಳವಣಿಗೆಯ ನಿಟ್ಟಿನಲ್ಲಿ ಪಾರಂಪರಿಕ ಮದ್ದಿನ ಗುಣ ವಿಶೇಷದ ಅಗತ್ಯತೆ ಮತ್ತೊಂದೆಡೆ.

ಮರ, ಬಳ್ಳಿ, ಲೋಹಗಳಿಂದ ತೊಟ್ಟಿಲನ್ನು ತಯಾರಿಸಲಾಗುತ್ತಿತ್ತು. ಒಂದೇ ತೊಟ್ಟಿಲಿನಲ್ಲಿ ನಡುವೆ ಅಡ್ಡವಿರುವ ಅವಳಿ ಮಕ್ಕಳನ್ನು ಮಲಗಿಸುತ್ತಿದ್ದ ತೊಟ್ಟಿಲು ತುಳುನಾಡಿನಲ್ಲಿ ಬಳಕೆಯಲ್ಲಿತ್ತು. ಕೋಟಿಚೆನ್ನಯ ತೊಟ್ಟಿಲು ವಿಶೇಷವಾಗಿತ್ತು.

ಇದರ ಕುರಿತಂತೆ ಪಾಡ್ದನಗಳಲ್ಲಿ ಈ ರೀತಿಯಾಗಿ ಉಲ್ಲೇಖಗೊಂಡಿದೆ: ಬಲ್ಲಾಳರು ಮೊದಲು ಹುಟ್ಟಿದ ಮಗುವಿಗೆ ಕುಡಂಗೇರಿ ಕೋಟೇಶ್ವರ ದೇವರ ಹೆಸರು ಕೋಟಿ ಎಂದು ಕರೆಯುವರು. ನಂತರ ಹುಟ್ಟಿದ ಮಗುವಿಗೆ ಚೆನ್ನದೊಟ್ಟಿ ದೇವರ ಹೆಸರು ಚೆನ್ನಯ ಎಂದು ಕರೆಯುವರು. ಮಕ್ಕಳನ್ನು ಹಿಂತಿರುಗಿಸುವಾಗ ಸಾಯನ ಕಾಂತನ ನಾನು ಕರೆದ ಹೆಸರು ಇವತ್ತು ನಾಳೆಗಲ್ಲ ಸೂರ್ಯ ಚಂದ್ರರಿರುವಷ್ಟು ಕಾಲ ಈ ಹೆಸರು ಶಾಶ್ವತವಾಗಿ ಉಳಿಯುವುದೆಂದು ಹಾರೈಸಿದರು. ಬರ್ಕೆ ಜಾತಿಯ ಹಲಸಿನ ಮರವನ್ನು ಕಡಿಸಿ ಕೆತ್ತಿಸಿ ಒಂದು ತೊಟ್ಟಿಲು ಮಾಡಿಸಿದರು. ಒಂದು ತೊಟ್ಟಿಲಿನಲ್ಲಿ ಅವಳಿ ಮಕ್ಕಳಿಗಾಗಿ ಎರಡು ವಿಭಾಗವನ್ನು ಮಾಡಿಸಿದರು[೨]. ಹಲಸಿನಲ್ಲಿ ಎರಡು ವಿಧ: ಬರ್ಕ ಮತ್ತು ತುಳುವ. ಇದರಲ್ಲಿ ಬರ್ಕ ಹಲಸು ಗಟ್ಟಿಯಾಗಿ ರುಚಿಕಟ್ಟಾಗಿರುತ್ತದೆ. ತುಳುವ ತುಂಬಾ ಮೃದುವಾಗಿದ್ದು ತಿನ್ನಲು ಬರ್ಕದಷ್ಟು ಶ್ರೇಷ್ಠವಲ್ಲ. ಇಲ್ಲಿ ಬಲ್ಲಾಳರು ಶ್ರೇಷ್ಠವಾದ ಬರ್ಕ ಮರವನ್ನೇ ಕಡಿಸಿ ಎರಡು ವಿಭಾಗವಿರುವ (ಅಮರ್/ಅವಳಿ ತೊಟ್ಟಿಲು) ತೊಟ್ಟಿಲು ರಚಿಸಲು ಆದೇಶಿಸುತ್ತಾರೆ.

ಬಾಮಕುಮಾರ ಸಂಧಿಯಲ್ಲಿ ಮಗುವಿನ ನಾಮಕರಣದ ವಿಧಿವಿಧಾನವಲ್ಲದೆ ತೊಟ್ಟಿಲಿನ ಉಲ್ಲೇಖ ಅರ್ಥಗರ್ಭಿತವಾಗಿ ನಿರೂಪಿತವಾಗಿದೆ.

"ಹನ್ನೊಂದರಂದು ಹಿತ್ತಾಳೆಯ ತೊಟ್ಟಿಲಿಗೆ
ಕಬ್ಬಿಣದ ಸಂಕಲೆ ಹಾಕಿ ಅಟ್ಟದ ಅಡ್ಡಕ್ಕೆ ಕಟ್ಟಿದರು
ತೊಟ್ಟಿಲಿಗೆ ಬಂಗಾರದ ಕಿರುಚಾಪೆ ಹಾಕಿದರು

ನಾಲ್ಕು ಮನೆಯ ಹೆಂಗಸರನ್ನು ಕರೆದರು
ಹಸುಕೊಟ್ಟಿಗೆಯ ಕಡೆ ಬರುವ ಹೊತ್ತಿಗೆ
ಹಸುಳೆಯನ್ನು ತೊಟ್ಟಿಲಿಗೆ ಹಾಕಿದರು
ಕೂಡಿದ ಮಂದಿಗೆ ಅವಲಕ್ಕಿ ಕಲಸಿ ಹಂಚಿದರು

ಊಟ ಉಪಚಾರದ ಸಡಗರ ಆಯಿತು"[೩] (ಬಾಮಕುಮಾರ ಸಂಧಿ) ಮಗುವನ್ನು ತೊಟ್ಟಿಲಿಗೆ ಹಾಕುವ ಸಂಭ್ರಮವನ್ನು ಈ ಪಾಡ್ದನದ ಭಾಗದಲ್ಲಿ ಗುರುತಿಸಬಹುದು.

ತುಳುವ ಕುಟುಂಬದಲ್ಲಿ ಈ ತೊಟ್ಟಿಲಿಗೆ ಮನೆತನದಲ್ಲಿ ಮೇಲ್ಮಟ್ಟದ ಗೌರವ ಸಲ್ಲುತ್ತಿತ್ತು. ಒಂದು ತೊಟ್ಟಿಲು ಆ ಮನೆಯ ಅಜ್ಜಪಿಜ್ಜಂದಿರು ಮಲಗಿದ್ದ ಇತಿಹಾಸವನ್ನು ಹೊಂದಿರುತ್ತಿದ್ದು, ಇಡಿಯ ಮನೆತನದ ಸಾಮಾಜಿಕ ಮತ್ತು ಆರ್ಥಿಕ ಏರುಪೇರುಗಳಿಗೆ ತೊಟ್ಟಿಲು ಮೂಕ ಸಾಕ್ಷಿಯಾಗಿರುತ್ತಿತ್ತು. ಆದುದರಿಂದ ತೊಟ್ಟಿಲನ್ನು ವಿಶೇಷ ಆಸ್ಥೆಯಿಂದ ಕಾಪಿಡುತ್ತಿದ್ದು ಅದಕ್ಕೆ 'ಪೊಲ್ಸು' ಇರುತ್ತಿತ್ತು.[೪]

ಸಿರಿಪಾಡ್ದನದಲ್ಲಿ ಸಿರಿಯು ಶಂಕರಾಳ್ವನ ಪಂಚಾತಿಕೆಯ ಮೋಸದ ಕಳದಿಂದ ಇಳಿದು ಹೋಗಿ, ತನ್ನ ಮಗನ ತೊಟ್ಟಿಲನ್ನು ದಾರುವಿನ ತಲೆಗೆ ಹೊರಿಸಿಕೊಂಡು ಹೊರಡುವಾಗ, ಸತ್ಯನಾಪುರದ ಇಡೀ ಅರಮನೆಯು ಸುಟ್ಟು ಬೂದಿಯಾಗಲಿ ಎಂದು ಶಾಪವೀಯುತ್ತಾಳೆ, ಆದರೆ "ಸತ್ಯನಾಪುರದ ಅರಮನೆಯಲ್ಲಿ ನನ್ನ ಮಗನಿಗೆ ಸತ್ಯದ ಕುಮಾರನಿಗೆ ತೊಟ್ಟಿಲು ಹಾಕಿದ ಬಂಗಾರದ ಒಂದು ಕೋಣೆ ಮಾತ್ರ ಉರಿಯದೆ ಉಳಿಯಲಿ, ಉಳಿದುದೆಲ್ಲ ಉರಿದುಹೋಗಲೆಂದರು"[೫] ತೊಟ್ಟಿಲಿನ ಬಳಕೆಯಿಲ್ಲದ ಸಂದರ್ಭದಲ್ಲಿ ಅದರಲ್ಲಿ ಇಡೀ ತೆಂಗಿನಕಾಯಿಯನ್ನು ಹಾಕಿ ಇಡಲಾಗುತ್ತಿತ್ತು. ಅಂದರೆ ಸಂತಾನ ಫಲ ಸದಾ ಇರಬೇಕು – ಎಂಬ ಆಶಯವನ್ನು ಇದು ತೋರ್ಪಡಿಸುತ್ತದೆ. ಖಾಲಿ ತೊಟ್ಟಿಲನ್ನು ತೂಗಬಾರದು, ಅದರಲ್ಲಿ ಮಲಗುವ ಮಗುವಿಗೆ ಹೊಟ್ಟೆನೋವು ಬರುತ್ತದೆ– ಎಂಬ ನಂಬಿಕೆಯಿದೆ. ಖಾಲಿ ತೊಟ್ಟಿಲನ್ನು ತೂಗುವವರು ಚಿಕ್ಕ ಮಕ್ಕಳು. ಅವರು ತೂಗಿದ ತೊಟ್ಟಿಲು ಅವರಿಗೇ ಮರಳಿ ಬಂದು ತಾಗಬಹುದು ಹಾಗೂ ಅಲ್ಲಿ ಆಚೀಚೆ ಹೋಗುವವರಿಗೆ ತೊಂದರೆಯಾಗಬಹುದು ಎಂಬ ಜಾಗರೂಕತೆಯಿಂದ ಹಾಗೂ ಮಗುವಿಗೆ ಹೊಟ್ಟೆನೋವಾಗುತ್ತದೆ– ಎಂದರೆ ಖಾಲಿ ತೊಟ್ಟಿಲು ತೂಗುವಿಕೆಗೆ ನಿಷೇಧ ಹೇರಿದಂತಾಗುತ್ತದೆ ಎಂಬ ಆಶಯವನ್ನು ಈ ನಂಬಿಕೆ ತನ್ನ ಒಡಲಲ್ಲಿ ಇಟ್ಟುಕೊಂಡಿದೆ ಎನ್ನಲಡ್ಡಿಯಿಲ್ಲ.

ಮದುವೆ

ಬೆಲ್ಲದಲ್ಲಿ ಒಲೆ ಹಾಕಿಸಿದರು, ಪಂಚವಳ್ಳಿ ವೀಳ್ಯದಲ್ಲಿ ಚಪ್ಪರ ಹಾಕಿಸಿದರು, ತಳಿರು ತೋರಣ ಕಟ್ಟಿಸಿದರು, ಮಂಗಳವಾರ ಮುಹೂರ್ತಗಳಿಗೆಯಲ್ಲಿ **ಮುಹೂರ್ತದ ಕಂಬ** ಹಾಕಿಸಿದರು ಕಾಂತುಪೂಂಜರು.[೬] ಮುಹೂರ್ತದ ಕಂಬವನ್ನು ಹಾಲೆ ಮರದಂತಹ ಹಾಲು ಬರುವ ಮರಗಳಿಂದ ತಯಾರಿಸಲಾಗುತ್ತಿತ್ತು.

"ಸತ್ಯಮಾಲೋಕದ ಬಾಲಕ್ಕೆ ಸಿರಿಯನ್ನು ಬಲು ಚೆಲುವಾಗಿ

ಉಡಿಸಿ ತೊಡಿಸಿ ಸಿಂಗರಿಸಿದರು

ರಾವನ್ನ ಗೆಜ್ಜೆಕತ್ತಿಯನ್ನು ಕೈಯಲ್ಲಿ ಕೊಟ್ಟರು

ಹನೆಮರದ ಗರಿಯ ಕೊಡೆಯನ್ನು ತಲೆಗೆ ಹಿಡಿದರು

ಸತ್ಯದ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿದರು

ವೈಭವದ ದಿಬ್ಬಣ ಹೊರಡಿಸಿದರು...

ಕೂಡಿದ ಮಂದಿ ನಾಲ್ಕೂರ ಗುರಿಕಾರರು

ಅರಿಯಬನ್ನಾಯ ಬಿರ್ಮಾಳ್ವರು

ಮೈಮುಟ್ಟಿ ಸೇಸೆ ಹಾಕಿದರು

ಕೈಮುಟ್ಟಿ ಕೈದಾರೆ ಎರೆದರು

ದಾರೆಯ ಮಂಟಪದಿಂದ ಏಳಿಸಿದರು

ಹೆಣ್ಣು ಇಳಿಸಿಕೊಟ್ಟರು ಬಿರ್ಮಾಳುವರು'–ಹೀಗೆ ಸಿರಿಪಾಡ್ದನದಲ್ಲಿ ಮದುವೆಯ ಸಂದರ್ಭದಲ್ಲಿ ಬಳಸಲಾಗುವ ವಸ್ತುಗಳ ವಿವರಣೆ ದೊರೆಯುತ್ತದೆ.

ಮರಣ

ಮರಣದ ಸಂದರ್ಭದಲ್ಲಿಯೂ ಅನೇಕ ರೀತಿ ರಿವಾಜು, ಕಟ್ಟುಕಟ್ಟಲೆ ಸಂಪ್ರದಾಯಗಳನ್ನು ಅನುಸರಿಸುವ ತುಳುವರು ವಿಧಿವತ್ತಾಗಿ ಅದನ್ನು ನೆರವೇರಿಸುತ್ತಾರೆ. ಈ ಸಂದರ್ಭದಲ್ಲಿ ವಿಶೇಷವಾಗಿ ಚಟ್ಟದ ನಿರ್ಮಾಣ, ಕಾಷ್ಠದ ರಚನೆ ಬಹುಮುಖ್ಯವಾದುದು.

ಶವ ಸಂರಕ್ಷಣಾ ಪೆಟ್ಟಿಗೆ

ಕರಾವಳಿ ಪ್ರದೇಶವನ್ನಾಳಿದ ಬಹುತೇಕ ತುಂಡರಸರು ಜೈನ ಮತಸ್ಥರು. ಅರಸ ಅಥವಾ ಬೀಡಿನ ಅಧಿಕಾರಿಯೊಬ್ಬ ನಿಧನ ಹೊಂದಿದ ಸಂದರ್ಭದಲ್ಲಿ ತಕ್ಷಣವೆ ಶವವನ್ನು ದಹನಗೊಳಿಸುವುದು ಇವರ ಸಂಪ್ರದಾಯ. ಆದರೆ, ಮುಂದಿನ ಉತ್ತರಾಧಿಕಾರಿ ಯಾರೆಂದು ತೀರ್ಮಾನವಾಗದ ಹೊರತು ಶವವನ್ನು ಸುಡುವಂತಿರಲಿಲ್ಲ. ವಿಭಿನ್ನ ಕಾರಣಗಳಿಂದಾಗಿ ಮುಂದಿನ ಉತ್ತರಾಧಿಕಾರಿ ಯಾರೆಂದು ತೀರ್ಮಾನವಾಗುವಾಗ ಕೆಲವು ದಿನ ಅಥವಾ ವಾರಗಳೆ ಕಳೆಯುತಿತ್ತು. ಕಾರಣ ಅಳಿಯಕಟ್ಟು ಪದ್ಧತಿಯ ಪ್ರಕಾರ ಮಕ್ಕಳ ಬದಲಾಗಿ ಸೋದರಳಿಯಂದಿರಿಗೆ ಅಧಿಕಾರ ವರ್ಗಾವಣೆಯಾಗಬೇಕು. ಹಲವು ಮಂದಿ ಅಳಿಯಂದಿರಲ್ಲಿ ಪಟ್ಟಕ್ಕೆ ಯೋಗ್ಯನಾದವನನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಚರ್ಚೆ, ಗೊಂದಲವುಂಟಾಗುತ್ತಿತ್ತು. ಇಂದಿನಂತೆ ಆ ಕಾಲದಲ್ಲಿ ಶವ ಸಂರಕ್ಷಣೆಯ ವ್ಯವಸ್ಥೆ ಇರಲಿಲ್ಲ. ಹಾಗಾಗಿ ಆ ಕಾಲದಲ್ಲಿ ಒಂದೇ ಮರದಿಂದ ಕೆತ್ತಲ್ಪಟ್ಟ ಶವ ಸಂರಕ್ಷಣೆಯ ಪೆಟ್ಟಿಗೆಯನ್ನು ಬಳಸುತ್ತಿದ್ದರು. ಈ ಮರದ

ಪೆಟ್ಟಿಗೆಯಲ್ಲಿ ಉಪ್ಪು ಅಥವಾ ಜೇನಿನಲ್ಲಿ ಶವವನ್ನು ಕೆಡದಂತೆ ಹಾಕಿಡಲಾಗುತ್ತಿತ್ತು. ಮುಂದೆ ಹೊಸತಾಗಿ ಆಯ್ಕೆಗೊಂಡ ಅಧಿಕಾರಿ ಯಾರೆಂದು ತೀರ್ಮಾನವಾದ ನಂತರ ಸಂರಕ್ಷಿಸಲ್ಪಟ್ಟ ಅರಸನ ಶವದ ಉಂಗುರದ ಬೆರಳಿಗೆ ದಾರವೊಂದನ್ನು ಕಟ್ಟಿ ಆ ದಾರದ ಮುಖಾಂತರ ಪಟ್ಟದ ಉಂಗುರವನ್ನು ಜಾರಿಸುತ್ತಾ ನೂತನ ಅರಸ ಅಥವಾ ಅಧಿಕಾರಿಯ ಕೈ ಬೆರಳಿಗೆ ಸೇರಿಸಲಾಗುತ್ತಿತ್ತು. ಈ ರೀತಿ ಶವದ ಉಂಗುರದ ಬೆರಳಿಗೆ ದಾರವನ್ನು ಕಟ್ಟಿ ಅದೇ ದಾರದ ಇನ್ನೊಂದು ತುದಿಯನ್ನು ಆಯ್ಕೆಗೊಂಡ ನೂತನ ಅರಸನ ಉಂಗುರದ ಬೆರಳಿಗೆ ಕಟ್ಟಿ ಈ ದಾರದ ಮುಖಾಂತರ ಉಂಗುರವನ್ನು ಜಾರಿಸುತ್ತಾ ಬೆರಳಿಗೆ ಸೇರಿಸಲಾಗುತ್ತಿತ್ತು. ಈ ವಿಧಿವಿಧಾನದ ನಂತರ ಸಂರಕ್ಷಿಸಲ್ಪಟ್ಟ ಶವವನ್ನು ಸಂಪ್ರದಾಯದಂತೆ ಸುಡುತ್ತಿದ್ದರು[೮]. ಈ ಶವ ಸಂರಕ್ಷಣೆಯ ಪೆಟ್ಟಿಗೆಯು ಈ ಪ್ರದೇಶದ ಪಟ್ಟಾಭಿಷೇಕ ಸಂದರ್ಭದ ಜೈನ ಮನೆತನದ ವಿಧಿವಿಧಾನಗಳ ಹಾಗೂ ಸಂಪ್ರದಾಯಗಳ ಬಗ್ಗೆ ಮಾಹಿತಿ ನೀಡುವುದು. ಅಲ್ಲದೆ, ಈ ಪೆಟ್ಟಿಗೆಯ ಆಧಾರದಲ್ಲಿ ಈ ಪ್ರದೇಶದ ಅಳಿಯಕಟ್ಟು ವ್ಯವಸ್ಥೆಯ ಕುರಿತಾಗಿಯೂ ಸ್ಪಷ್ಟ ಮಾಹಿತಿಯನ್ನು ಪಡೆಯಬಹುದು.

ಚಟ್ಟ

ಸುಮಾರು ಏಳು ಅಡಿ ಉದ್ದದ ಎರಡು ಬಿದಿರಿನ ತುಂಡುಗಳನ್ನು ನೆಲದ ಮೇಲೆ ಎರಡಡಿ ಅಂತರದಲ್ಲಿ ಇರಿಸುವರು. ಈ ಬಿದಿರುಗಳ ಮಧ್ಯೆ ಸಮಾನ ದೂರದಲ್ಲಿ ಬಿದಿರ ತಲಕೆಗಳನ್ನು ಐದು ಅಥವಾ ಏಳು ಕಡೆ ಇರಿಸಿ, ಹುರಿ ಹಗ್ಗದಿಂದ ಬಿಗಿಯುವರು. ಎರಡೆರಡು ತಲಕೆಗಳನ್ನು ಜೋಡಿಸುವಾಗ ಒಂದು ತಲಕೆಯನ್ನು ಒಂದು ಬದಿಯಲ್ಲಿ, ಬಿದಿರಿನ ಮೇಲಿರಿಸಿದರೆ ಅದರ ಮತ್ತೊಂದು ತುದಿಯನ್ನು ಇನ್ನೊಂದು ಬಿದಿರಿನ ಕೆಳಭಾಗದಲ್ಲಿ ಇರಿಸಬೇಕು. ಚಟ್ಟದ ಎರಡೂ ಕಡೆಗಳಲ್ಲಿ ಎತ್ತಿ ಹೆಗಲು ಕೊಡಲು ಬೇಕಾದ ಸ್ಥಳಾವಕಾಶವಿರುವುದು. ಚಟ್ಟವನ್ನು ಕಟ್ಟಿದ ಬಳಿಕ ಯಾರೂ ಅದನ್ನು ದಾಟಲಾಗದು. ಈ ಚಟ್ಟದ ಮೇಲೆ ಹೆಣೆದಿರುವ ಸೋಗೆ ಅಥವಾ ಚಾಪೆಯನ್ನು ಹಾಸುವರು.

ಕಾಷ್ಠ

ಆಚೆ ಕರೆಯಲ್ಲಿ ಮಾವು, ಈಚೆ ಕರೆಯಲ್ಲಿ ಹಲಸು ಕಡಿದರು. ಹೊಲದ ಮೂಲೆಯಲ್ಲಿ ಮಸಣದ ಚಿತೆಯನ್ನು ಹೂಡಿದರು. ಅಪಸವ್ಯವಾಗಿ ಬೆಂಕಿಕೊಟ್ಟರು.[೯] ಮರಣ ಹೊಂದಿದ ವ್ಯಕ್ತಿಯನ್ನು ದಹನ ಮಾಡುವ ಚಿತೆಗೆ ತುಳುವಿನಲ್ಲಿ 'ಕಾಟ' ಎಂಬ ಪದವನ್ನು ಬಳಸಲಾಗುತ್ತದೆ. ಅದನ್ನು ಹೂಡಲು ಕೂಡ ಪರಿಣತರು ಇರುತ್ತಿದ್ದರು.

ಗದ್ದೆಯಲ್ಲಿ ಸುಮಾರು ಎಂಟು ಅಡಿ ಉದ್ದ, ಮೂರು ಅಡಿ ಅಗಲಕ್ಕೆ ಒಂದು ಅಡಿಯಷ್ಟು ಆಳದ ಮಣ್ಣನ್ನು ತೆಗೆದು ಎರಡು ಪಕ್ಕಗಳಲ್ಲಿ ಸ್ವಲ್ಪ ಎತ್ತರಕ್ಕೆ ಉದ್ದದ ತಟ್ಟು ತಯಾರಿಸಿ, ಅದರ ಮೇಲೆ ತೋರದ ಮರದ

ದಿಮ್ಮಿಗಳನ್ನು ಜೋಡಿಸುವರು. ಇದನ್ನು ಅಡ್ಡಮರ ಎನ್ನುವರು. ಬಳಿಕ ದಿಮ್ಮಿಗಳ ಮೇಲೆ, ಉದ್ದ ಮತ್ತು ಅಗಲಕ್ಕೆ ಕಾಷ್ಠಕ್ಕೆ ಅಗತ್ಯವಿರುವ ಕಟ್ಟಿಗೆಯನ್ನು ಅಟ್ಟಿ ಇಡುವರು. ಉರಿದು ಬೂದಿ ಬೀಳಲು ಕೆಳಗಿರುವ ಹೊಂಡ ಉಪಯೋಗವಾಗುವುದು... ಕಾಷ್ಠವು ಏಳು ಅಡಿ ಉದ್ದ, ಮೂರೂವರೆ ಅಡಿ ಅಗಲ ಸರಿಯಾದ ಅಳತೆಯಾಗಿರುವುದು.[೧೦]

ನುರಿತ ಕೆಲಸಗಾರರಿಂದ ರಚಿತವಾದ ಚಿತೆಗಳಲ್ಲಿ ಮೃತದೇಹದ ಎಲ್ಲಾ ಭಾಗಗಳೂ ಸಮನಾಗಿ ಉರಿದು ಬೂದಿಯಾಗುತ್ತಿದ್ದವು. ಅಂದಿನಿಂದ ಉತ್ತರ ಕ್ರಿಯೆಯ ಕೊನೆಯ ಹಂತದ ವರೆಗೆ ಮನೆಯಲ್ಲಿ ಶವವನ್ನು ಮಲಗಿಸಿದ ಕೋಣೆಯಲ್ಲಿ ಮಣೆಯೊಂದರ ಮೇಲೆ ದೀಪ ಹಾಗೂ ಚೆಂಬಿನಲ್ಲಿ (ತಂಬಿಗೆ) ನೀರನ್ನು ಇರಿಸಲಾಗುತ್ತದೆ. ಈ ನೀರನ್ನು ಸೂರ್ಯೋದಯ ಮತ್ತು ಸೂರ್ಯಾಸ್ತ ಸಮಯದಲ್ಲಿ ವರ್ಜಿಸಿ, ಹೊಸ ನೀರನ್ನು ಇರಿಸಲಾಗುತ್ತದೆ.

ಉತ್ತರಕ್ರಿಯೆಯ ಕೊನೆಯ ದಿನವಾದ 'ಬೊಜ್ಜ'ದ ದಿನದಂದು ಮನೆಯಲ್ಲಿ ಶವ ಮಲಗಿಸಿದಲ್ಲಿ ನೀರ್ನಿರೆಲ್ ರಚಿಸಿ ಇಡಲಾಗುತ್ತಿತ್ತು. ಬಿದಿರಿನ ೪ ಕೋಲುಗಳಿಂದ ಪಿರಮಿಡ್ ಆಕಾರದಲ್ಲಿ ನೀರ್ನಿರೆಲ್‌ನ ವಿನ್ಯಾಸವನ್ನು ರೂಪಿಸಲಾಗುತ್ತಿತ್ತು. ಇದಕ್ಕೆ ಮೂಡುಬದಿಯನ್ನು ಹೊರತುಪಡಿಸಿ ಉಳಿದ ಮೂರು ಕಡೆಗಳಿಗೂ ಬಣ್ಣದ ಸೀರೆಗಳನ್ನು ಸುತ್ತಲಾಗುತ್ತಿತ್ತು. ನೀರ್ನಿರೆಲ್‌ನ ಮೇಲ್ತುದಿಗೆ 'ಮುಗುಳಿ'ಯ ರೀತಿಯ ಕೆತ್ತನೆಯೊಂದನ್ನು ಇರಿಸಲಾಗುತ್ತಿತ್ತು. ಈ ಪಿರಮಿಡ್ ಒಳಭಾಗದಲ್ಲಿ ಮೇಲಿನಿಂದ ಕೆಳಗಿನ ವರೆಗೆ ನೂಲೊಂದನ್ನು ಇಳಿಬಿಟ್ಟು, ಅದರ ತುದಿಗೆ 'ಅರಶಿನ'ದ ಕೊಂಬನ್ನು ಕಟ್ಟಲಾಗುತ್ತಿತ್ತು. ಅದರ ಕೆಳಗಡೆಗೆ ಕುರ್ದಿ ನೀರನ್ನು ಬಟ್ಟಲೊಂದರಲ್ಲಿ ಇರಿಸಿ, ಅರಶಿನದ ಕೊಂಬಿನ ಪ್ರತಿಬಿಂಬ ಅದರಲ್ಲಿ ಕಾಣುವಂತೆ ಮಾಡಲಾಗುತ್ತಿತ್ತು. ಈ ನೀರ್ನಿರೆಲ್‌ನಲ್ಲಿ ಮೃತಾತ್ಮವಿದೆಯೆಂಬ ನೋಂಪಿನಲ್ಲಿ ಅದರ ಸುತ್ತು ಕುಟುಂಬದ ಮಹಿಳೆಯರು ಕುಳಿತಿರುತ್ತಿದ್ದರು.

ಇದರಂತೆಯೇ ಶವಸಂಸ್ಕಾರ ಮಾಡಿದ ಸ್ಥಳದಲ್ಲಿ ದುರ್ಜಿಯನ್ನು ಮಾಡಲಾಗುತ್ತಿತ್ತು.ದೂಪೆ ಅಂದರೆ ಸುಟ್ಟ ಸ್ಥಳದಲ್ಲಿ ಮಾಡಿದ ಮಣ್ಣಿನ ಗುಪ್ಪೆ. ಇದರ ಮೇಲ್ಗಡೆಯಲ್ಲಿ ಅಡಿಕೆ ಮರದಿಂದ ಏಳು ಅಥವಾ ಒಂಬತ್ತು ಅಂತಸ್ತುಗಳಿಂದ ಮಾಡಿದ ಗೋಪುರಾಕೃತಿಗೆ ದುರ್ಜಿ ಎಂದು ಹೇಳುವರು. ಇದರ ಒಂದೊಂದು ಅಂತಸ್ತಿಗೆ ಒಂದೊಂದು ಬಣ್ಣದ ವಸ್ತ್ರವನ್ನು ಮಡಾಯಿಸುವರು. ಇದರ ತುದಿಗೆ ಹೊಂಗಾರಕನ ಮರದ ಕಲಶವನ್ನು ಮಾಡಿಟ್ಟು, ಚಿನ್ನದ ಬಣ್ಣದ ಕಾಗದ ಸುತ್ತುವರು. ದುರ್ಜಿಯ ಕೆಳಗಿನ ಅಂತಸ್ತಿಗೆ ಮೂರು ದಿಕ್ಕಿನಿಂದಲೂ ಬಿಳಿ ವಸ್ತ್ರವನ್ನು ಮುಚ್ಚಿ, ಮೂಡುದಿಕ್ಕಿಗೆ ಅಂದರೆ ಎದುರು ದಿಕ್ಕಿಗೆ ಅಕ್ಕಿ ಹಾಕುವಲ್ಲಿ ಕಾಲಿ ಬಿಡಬೇಕು. ಈ ದುರ್ಜಿಯ ಸುತ್ತಲೂ ಎರಡೆರಡು ಕೋಲು ದೂರಕ್ಕೆ ಬೈನಿ ಮರದ ಕಂಬಗಳನ್ನು ನಾಲ್ಕು ಮೂಲೆಗಳಲ್ಲಿ ನೆಟ್ಟು ಒಂದು ಕಂಬದಿಂದ ಇನ್ನೊಂದು ಕಂಬಕ್ಕೆ ಮಾವಿನ ಸಪ್ಪು ಸುತ್ತಿದ ಬಿದಿರನ್ನಾಗಲಿ ಅಥವಾ ಬೈನಿ ಮರದ ದಬ್ಬೆಯನ್ನಾಗಲೀ ಕಂಬದ ತಲೆಯಲ್ಲಿ ಅಡ್ಡ ಇಡುವರು. ಈ ದಬ್ಬೆಗಳಿಗೆ ಸುತ್ತಲೂ ಕುಂಬಳಕಾಯಿ, ಬಾಳೆಯಗೊನೆ ಇತ್ಯಾದಿ ನೇತಾಡಿಸುವರು ಮತ್ತು ಅದೇ ಚೌಕದ ಎದುರುಗಡೆಯಲ್ಲಿ ಬಟ್ಟಲುಗಳನ್ನು ಅಮುಕಿಸುವರು. ನಾಲ್ಕು ಮೂಲೆಗಳ ಕಂಬಗಳಿಗೆ ಪ್ರತ್ಯೇಕವಾದ ನಾಲ್ಕೈದು ಕೋಲು ಉದ್ದಕ್ಕೆ ಅಡಿಕೆ ಮರದ ತುಂಡಿಗೆ ಸಲಿಕೆಗಳಿಂದ ಮೂರು

ಅಂತಸ್ತುಗಳನ್ನು ಮಾಡಿ, ಅದಕ್ಕೆ ತುಂಬಾ ಕೇಪಳ ಹೂಗಳನ್ನು ಕಟ್ಟುವರು. ಇದಕ್ಕೆ ಪೂಕರೆ ಎನ್ನುವರು. ದುರ್ಜಿಗೆ ವಸ್ತ್ರವನ್ನು ಮುಚ್ಚುವುದು ಅಗಸ. ಪೂಕರೆಗೆ ಕೇಪಳ ಹೂವನ್ನು ಕಟ್ಟುವುದು ನಾಪಿತಗನು. ದುರ್ಜಿಯ ಮುಂದುಗಡೆ ಸುಮಾರು ನಾಲ್ಕೈದು ಮಾರು ದೂರಕ್ಕೆ ಒಂದೇ ಅಡಿಕೆ ಮರಕ್ಕೆ ಏಳು ಅಂತಸ್ತುಗಳನ್ನು ಮಾಡಿ, ಅದರ ಅಂತಸ್ತಿಗೆ ಒಂದೊಂದು ಬಣ್ಣದ ವಸ್ತ್ರದಿಂದ ಮುಚ್ಚಿ ಕಲಶ ಇಡುವರು. ಇದಕ್ಕೆ ಮೆರ್ವೆ ಎನ್ನುವರು. ದುರ್ಜಿಯನ್ನೂ ಮೆರ್ವೆಯನ್ನೂ ಅಡಿಕೆಯ ಮರದಿಂದ ಬಡಗಿಯವನು ಮಾಡುವನು. ಹೆಂಗಸರು ಸತ್ತರೆ ಅವರ ಬೊಜ್ಜಕ್ಕೆ ದುರ್ಜಿಯನ್ನು ಮಾಡುವ ಬದಲಿಗೆ ಗಾಣದ ಕೊಟ್ಟಿಗೆ ಮತ್ತು ದೇಳಗೂಡನ್ನು ಮಾಡುವರು.[೧೧] ಹೀಗೆ ತುಳುವರ ಜೀವನಾವರ್ತನ ಆಚರಣೆಗಳಲ್ಲಿ ನಿತ್ಯಬಳಕೆಯ ಪರಿಕರಗಳಲ್ಲದೆ ಆಯಾ ಸಮಯದ ಪರಿಕರಗಳಾಗಿ ಹಲವಾರು ಸಾಧನಗಳನ್ನು ಗುರುತಿಸಬಹುದು. ಅವುಗಳಲ್ಲಿ ಕೆಲವನ್ನು ಇಲ್ಲಿ ಪಟ್ಟಿ ಮಾಡಲಾಗಿದೆ:

ಜನನದ ಸಂದರ್ಭದಲ್ಲಿ ಗರ್ಭಿಣಿಯರಿಗಾಗಿ ಹಾಕಲಾಗುವ ಕೈನೇಲೆ, ಮಗುವಿಗೆ ಬಳಸಲಾಗುವ ಅಡಿಕೆಯ ಹಾಳೆಯ, ಬಳಿಕ ಮುಂಡೇವು ಎಲೆಯಿಂದ ಮಾಡಿದ ತಕ್ಕಣ-ಹಾಸು, ತೊಟ್ಟಿಲು ಮುಖ್ಯವಾದವುಗಳು.

ಮದುವೆಯಲ್ಲಿ ಮುಹೂರ್ತದ ಕಂಬ, ಕೊಂಬುಗಿಂಡಿ ಪ್ರಮುಖವಾದ ಭೌತಿಕ ಆಕರವಾದರೆ, ಮರಣದಲ್ಲಿ ಚಟ್ಟ, ಚಿತೆ, ನೀರ್ನಿರೆಲ್, ದುರ್ಜಿ, ದೇಲಗೂಡು ಇತ್ಯಾದಿ ಭೌತಿಕ ಪರಿಕರಗಳು ಅಗತ್ಯ.

೬.೨ ವಾರ್ಷಿಕಾವರ್ತನ ಆಚರಣೆ

ಭತ್ತದ ಬೆಳೆಯನ್ನೇ ಪ್ರಧಾನವಾಗಿ ಆಶ್ರಯಿಸಿರುವ ಸಮುದಾಯ ಕೃಷಿಯನ್ನು ಒಂದು ಆರಾಧನಾ ಭಾವದಿಂದ ಸ್ವೀಕರಿಸುತ್ತದೆ. ಹಾಗಾಗಿ ಆ ಸಮುದಾಯ ಬೀಜ ಹಾಕುವಲ್ಲಿಂದ ಬೆಳೆ ಕೊಯ್ಲಿನವರೆಗಿನ ಬೇರೆ ಬೇರೆ ಹಂತಗಳಲ್ಲಿ ಕೆಲವೊಂದು ವಿಧಿ-ಆಚರಣೆಗಳನ್ನು ನಡೆಸುತ್ತದೆ. ಇಲ್ಲಿನ ನಂಬಿಕೆಗಳು ಮತ್ತು ತತ್ಸಂಬಂಧಿಯಾದ ಆಚರಣೆ, ಆರಾಧನೆಗಳು ವಾರ್ಷಿಕಾವರ್ತನದ ಮತ್ತು ಋತುಮಾನಗಳ ಹಿನ್ನೆಲೆಯಲ್ಲಿ ನಡೆದು ಮಹತ್ವ ಪಡೆಯುತ್ತವೆ. ವಾರ್ಷಿಕಾವರ್ತನದಲ್ಲಿ ಜರಗುವ ತುಳುವರ ಆಚರಣೆಗಳಲ್ಲಿ, ಆರಾಧನೆ, ಕುಣಿತಗಳಲ್ಲಿ ಒಂದು ಬಗೆಯ ಚಲನಾತ್ಮಕ ಆವರ್ತನ ಕ್ರಮವಿರುವುದನ್ನು ಕಾಣುತ್ತೇವೆ.

ವಾರ್ಷಿಕಾವರ್ತನ ಆಚರಣೆಗಳೆಂದರೆ ಪ್ರತಿವರ್ಷ ಪುನರಾವರ್ತನೆಯ ನೆಲೆಯಲ್ಲಿ ಆಚರಿಸುವಂತದ್ದು. ಉದಾಹರಣೆಗೆ ತುಳುನಾಡಿನಲ್ಲಿ ಪಗ್ಗು ತಿಂಗಳಿನಿಂದ ಹಿಡಿದು ಸುಗ್ಗಿಯವರೆಗೆ ನಡೆಯುವ ವಿವಿಧ ಆಚರಣೆಗಳು, ಹಬ್ಬ ಹರಿದಿನಗಳು. ತುಳುವರ ಆಚರಣೆಗಳನ್ನು ಉದಾಹರಿಸುವುದಾದರೆ ಬಿಸು ಪರ್ಬ, ಆಟಿ ಅಮವಾಸ್ಯೆ, ಸೋಣ ಅಮವಾಸ್ಯೆ, ನಾಗರ ಪಂಚಮಿ, ಅಷ್ಟಮಿ, ಚೌತಿ, ಪುದ್ವಾರು, ದೀಪಾವಳಿ, ಕಾವೇರಿ ಸಂಕ್ರಮಣ, ಕೆಡ್ಡಸ, ಪತ್ತನಾಜೆ, ಇತ್ಯಾದಿ.

ಬಿಸು

ವರ್ಷದ ಮೊದಲ ಹಬ್ಬ, ವರ್ಷದ ಮೊದಲ ದಿನವಾದ ಬಿಸು ಎಂದು ಆಚರಿಸಲಾಗುತ್ತದೆ. ಈ ದಿನದಂದು ಕೃಷಿ ಆರಂಭದ ಸೂಚನೆಯಾಗಿ, 'ನಾಲೆರು ಮಾದಾವುನು' ಹಾಗೂ 'ಕೈಬಿತ್ತ್ ಪಾಡುನು' ಅಂದರೆ ಉಳುಮೆ ಹಾಗೂ ಬಿತ್ತನೆಯ ಈ ಎರಡು ಆಚರಣೆಗಳನ್ನೂ ನಡೆಸುವುದಿದೆ. ಇದು ಗೇಣಿ ನವೀಕರಣದ ದಿನವೂ ಆಗಿತ್ತು.

ಪತ್ತನಾಜೆ

ಬೇಷ ತಿಂಗಳ ಹತ್ತನೆಯ ದಿನದಂದು ಕೃಷಿಗೆ ಸಂಪೂರ್ಣ ತಯಾರಾಗುವಂತೆ ಮನರಂಜನೆಯ, ಆರಾಧನೆಯ ಆಚರಣೆಗಳಿಗೆಲ್ಲ ತಾತ್ಕಾಲಿಕ ನಿಲುಗಡೆಯಾಗಿ ಪತ್ತನಾಜೆಯನ್ನು ಆಚರಿಸಲಾಗುತ್ತದೆ. ದೈವಗಳ ಜಾತ್ರೆ ಆ ಬಳಿಕ ನಡೆಯುವಂತಿಲ್ಲ. ಯಕ್ಷಗಾನದ ಆ ವರ್ಷದ ತಿರುಗಾಟವೂ ಆ ದಿನದಂದು ಕೊನೆಗೊಳ್ಳುತ್ತದೆ.

ಆಟಿ

ಆಟಿಯಲ್ಲಿ ಪ್ರಮುಖವಾಗಿ ಆಟಿ ಅಮವಾಸ್ಯೆ, ಆಟಿ ಕಳೆಂಜನ ಬರುವಿಕೆ ಸಾಂಸ್ಕೃತಿಕ ಇತಿಹಾಸ ನಿರೂಪಣೆಯಲ್ಲಿ ಉಲ್ಲೇಖಗೊಳ್ಳುತ್ತದೆ. ವರ್ಷದ ಕಾಯಿಲೆಗಳಿಗೆಲ್ಲ ಮದ್ದೆಂದು ನಂಬಲಾಗುವ ಪಾಲೆ ಮರದ ಕೆತ್ತೆಯಿಂದ ತಯಾರಿಸಲಾದ ಕಷಾಯವನ್ನು ಕುಡಿದು, ಮೆಂತೆ ಗಂಜಿಯನ್ನುಂಡ ಕೃಷಿಕ ತನ್ನ ಗದ್ದೆಯ ರಕ್ಷಣೆಗೆಂದು ಕಾಸರಕನ ಮರದಿಂದ ಮಾಡಿದ ಕಾಪು ಇರಿಸುತ್ತಾನೆ. ಬಿಸಿಲು ಮಳೆಗಳ ವೈಪರೀತ್ಯದಿಂದಾಗಿ ರೋಗರುಜಿನಗಳು ಕಾಡುವುದರಿಂದ ಹಾಗೂ ಆಹಾರದ ಕೊರತೆ ಕಾಣಿಸಿಕೊಳ್ಳುವುದರಿಂದ ಆಟಿಯನ್ನು ಕಷ್ಟದ ತಿಂಗಳು ಎಂದು ಪರಿಗಣಿಸಲಾಗಿತ್ತು.

ಆಟಿ ಕಳೆಂಜ

ಜನರಿಗೆ ಬರುವ ರೋಗರುಜಿನಗಳನ್ನು ದೂರಗೊಳಿಸಲು 'ಆಟಿಕಳಂಜ'ನ ಆಗಮನವಾಗುತ್ತಿತ್ತು. ಪನೆಮರದ ಎಲೆಗಳಿಂದ ಮಾಡಲ್ಪಟ್ಟ ಛತ್ರಿಯನ್ನು ಹಿಡಿದುಕೊಂಡು, ತೆಂಗಿನ ಗರಿಗಳಿಂದ ಅಲಂಕೃತನಾಗಿ ಆಟಿಕಳೆಂಜನ ಪಾತ್ರ ಧರಿಸಿದ ನಲಿಕೆ ಸಮುದಾಯದ ಹುಡುಗನ ಕುಣಿತ ಹಾಗೂ ಅದಕ್ಕೆ ತಕ್ಕಂತೆ ಹಾಡಲಾಗುವ ಆಟಿಕಳಂಜ ಪಾಡ್ದನ ಹಾಡುವ ಹಾಗೂ ತೆಂಬರೆ ಬಾರಿಸುವ ಅವನ ಹಿರಿಯರು ಆಟಿಕಳಂಜನ ಪ್ರದರ್ಶನದಲ್ಲಿ ಭಾಗಿಗಳಾಗುತ್ತಿದ್ದರು. ತಂತಮ್ಮ ಮನೆಯಂಗಳಗಳಲ್ಲಿ ಬಂದು ಆಡಲಾಗುವ ಈ ಆಚರಣೆಯಲ್ಲಿ ವೀಕ್ಷಕರಾಗಿ ಭಾಗಿಗಳಾಗುತ್ತಿದ್ದ ಮನೆಯವರು ಕುಣಿತ ಕೊನೆಗೊಂಡ ಬಳಿಕ ಗೆರಸೆಯಲ್ಲಿ ಭತ್ತ, ಹಲಸಿನ ಬೀಜ, ಹಳದಿ ಕೊಂಬು, ಮಸಿ, ಇತ್ಯಾದಿಗಳನ್ನು ಇಟ್ಟು, ತಮ್ಮ ಮನೆಯವರಿಗೆ ನಿವಾಳಿಸಿ, ಕೆಟ್ಟದೆಲ್ಲವನ್ನೂ ಆಟಿಕಳೆಂಜ

ದೂರೀಕರಿಸುತ್ತಾನೆ ಎಂಬ ನಂಬಿಕೆಯಿಂದ ಆತನಿಗೆ ಕೊಡಲಾಗುತ್ತಿತ್ತು. ಆಟಿ ತಿಂಗಳಲ್ಲಿ ಸಂದುಹೋದ ಹಿರಿಯರಿಗೆ 'ಅಗೆಲ್' ಬಡಿಸಲಾಗುತ್ತದೆ.

ನಾಗರಪಂಚಮಿ

ಆಟಿ ಅಮಾವಾಸ್ಯೆಯ ಬಳಿಕದ ಐದನೆಯ ದಿನ ನಾಗರಪಂಚಮಿ. ಈ ದಿನದಂದು ದೂರದೂರಿನಲ್ಲಿ ಇದ್ದವರೂ ಕೂಡಾ ತಮ್ಮ ಮೂಲದ ನಾಗಬನಕ್ಕೆ ತೆರಳಿ ನಾಗನಿಗೆ ಹಾಲು, ತಂಬಿಲ ಅರ್ಪಿಸುತ್ತಾರೆ.

ಸೋಣ

ಪತ್ತನಾಜೆಯಂದು ಮುಚ್ಚಲ್ಪಟ್ಟ ದೈವಸ್ಥಾನಗಳ ಬಾಗಿಲುಗಳು ಸೋಣ ಆರಂಭದಂದು ತೆರೆದುಕೊಳ್ಳುತ್ತವೆ. ಸೋಣದಲ್ಲಿ ಪ್ರತಿದಿನ ಎಲ್ಲಾ ಆರಾಧನಾ ಸ್ಥಳಗಳಲ್ಲಿ ದೀಪ ಹಚ್ಚುವ ಸಂಪ್ರದಾಯವಿದೆ. ಹಬ್ಬಹರಿದಿನಗಳ ಸಾಲು ಸೋಣ ತಿಂಗಳ ಆರಂಭದೊಂದಿಗೆ ಕಾಣಿಸಿಕೊಳ್ಳುತ್ತದೆ.

ಸೋಣದ ಮದಿಮಾಲ್ ಕುಣಿತ ಸೋಣದಲ್ಲಿ ಪ್ರದರ್ಶಿಸಲ್ಪಡುತ್ತದೆ.

ಅಷ್ಟಮಿ: ಮಧ್ವಾಚಾರ್ಯರ ಪ್ರಭಾವದಿಂದಾಗಿ ತುಳುನಾಡಿನಲ್ಲಿ ಅಷ್ಟಮಿಯ ಆರಾಧನೆ ನಡೆಯುತ್ತಿದೆ.

ಚೌತಿ: ಗಣಪತಿಯ ವಿಗ್ರಹದ ಆರಾಧನೆಯ ಬದಲು ತೀರಾ ಕೃಷಿಪರಿಕಲ್ಪನೆಯ ನೆಲೆಗಟ್ಟಿನಲ್ಲಿ ಚೌತಿಯನ್ನು ಆಚರಿಸಲಾಗುತ್ತದೆ. ಇದೇ ದಿನದಂದು ತೆನೆ ತುಂಬಿಸುವ ಆಚರಣೆಯನ್ನೂ ಕೆಲವೆಡೆ ಮಾಡಲಾಗುತ್ತದೆ ಹಾಗೂ ಅದೇ ದಿನ ಪುದ್ವಾರ್ ಕೂಡ ಆಚರಿಸಲಾಗುತ್ತದೆ.

ತೆನೆ ತುಂಬಿಸುವ/ ಮನೆ ತುಂಬಿಸುವ ಆಚರಣೆ ಹಾಗೂ ಪುದ್ವಾರ್ ಆಚರಣೆಗಳನ್ನು ಚೌತಿಯ ದಿನದಿಂದ ನವರಾತ್ರಿಯ ದಿನಗಳ ವರೆಗೆ ಅನುಕೂಲಕರ ದಿನಗಳಲ್ಲಿ ಆಚರಿಸಲಾಗುವುದು. ಬೆಳೆಯ ಬೆಳವಣಿಗೆಯನ್ನು ಆಧರಿಸಿ ಇದನ್ನು ಆಚರಿಸಲಾಗುತ್ತದೆ.

ಕಾವೇರಿ ಸಂಕ್ರಾಂತಿ: ಬೀಜಕ್ಕಾಗಿ ಇಡುವ ಭತ್ತದ ಮುಡಿಯನ್ನು ಅಟ್ಟಕ್ಕೆ ಹಾಕುವ ಶುಭದಿನವಿದು. ಈ ದಿನದಂದು 'ಪೊಲಿ'ಕರೆಯುವ ವಿಶೇಷ ಆಚರಣೆಯೂ ಕೆಲವು ಕಡೆಗಳಲ್ಲಿದೆ.

ನವರಾತ್ರಿ

ನವರಾತ್ರಿ ಆಚರಣೆಯು ವಿಜಯನಗರದ ಪ್ರಭಾವದಿಂದ ತುಳುನಾಡಿನಲ್ಲಿ ಆಚರಿಸಲ್ಪಡುತ್ತಿದೆಯೆನ್ನಬಹುದು. ದೇವಸ್ಥಾನಗಳಲ್ಲಿ ಇದರ ಆಚರಣೆಯನ್ನು ಮಾಡಲಾಗುತ್ತದೆಯಲ್ಲದೆ ಉಳಿದಂತೆ ಆಚರಣೆಯಿಲ್ಲ. ಪುದ್ವಾರ್ ಆಚರಣೆಯನ್ನು ಈ ದಿನಗಳಲ್ಲಿ ಕೆಲವರು ಮಾಡುವುದಿದೆ.

ಪರ್ಬ (ಹಬ್ಬ)

ತುಳುವರ ಮೂಲ ಹಬ್ಬ –ಪರ್ಬ. ಮೊದಲದಿನ 'ಮೀಪಿ ಪರ್ಬ'. ಮೈಗೆ ಎಣ್ಣೆ ಹಚ್ಚಿ ಸೂರ್ಯೋದಯಕ್ಕೆ ಮುನ್ನ ಅಭ್ಯಂಜನ ಸ್ನಾನ ಮಾಡುವ ದಿನ. ಚಳಿಯ ಕಾಲಕ್ಕೆ ದೇಹಕ್ಕೆ ಎಣ್ಣೆಯುಣಿಸಿ, ಚಳಿಯನ್ನೆದುರಿಸಲು ತಯಾರುಮಾಡುವ ದಿನವಿದು. ಎರಡನೆಯ ದಿನ ಮರುದಿನದ ಹಬ್ಬದ ತಯಾರಿಯಲ್ಲಿ ಕಳೆದುಹೋಗುತ್ತದೆ. ಮೂರನೆಯ ದಿನ 'ಕೊಡಿಪರ್ಬ'. ಉಳಿದೆಡೆಯಲ್ಲಿ ದೀಪಾವಳಿ ಎಂದು ಕರೆಯಲ್ಪಡುವ ಈ ಹಬ್ಬವನ್ನು ತುಳುವಿನಲ್ಲಿ ಪರ್ಬ ಎಂದು ಕರೆಯಲಾಗುತ್ತದೆ. ಒಂದು ಕಾಲದಲ್ಲಿ ತುಳುನಾಡನ್ನು ಆಳಿದ ಬಲಿಚಕ್ರವರ್ತಿಯನ್ನು ನೆನಪಿಸಿಕೊಳ್ಳುವ, ಅವನನ್ನು ಸಾಂಪ್ರದಾಯಿಕವಾಗಿ ಹುಟ್ಟೂರಿಗೆ ಆಹ್ವಾನಿಸುವ ಆಚರಣೆಯಿದು. ಈ ಸಂದರ್ಭದಲ್ಲಿ ಹಾಲೆ ಮರದಿಂದ ತಯಾರಿಸಲಾದ 'ಬಳೆಕಿಮರ'ವನ್ನು ಇಟ್ಟು, ಅದರಲ್ಲಿ ದೀಪವಿರಿಸಿ, ಬಲಿಯನ್ನು ಕರೆಯಲಾಗುತ್ತದೆ. ಕೃಷಿ ಸಾಮಗ್ರಿಗಳೆಲ್ಲವನ್ನೂ ಶುಚಿಗೊಳಿಸಿ, ಅಲಂಕರಿಸಲಾಗುತ್ತದೆ. ಗದ್ದೆಗಳಲ್ಲಿ ದೀಪವಿರಿಸಿ ಆ ಸಮಯದಲ್ಲಿ ಕಾಡುವ ಕ್ರಿಮಿಕೀಟಗಳ ತೊಂದರೆಯನ್ನು ನಿವಾರಿಸಲಾಗುತ್ತದೆ.

ಆರೇಳು ಅಡಿ ಎತ್ತರದ ಮೂರ್ನಾಲ್ಕು ಕವಲುಗಳಿರುವ ಹಾಲೆಮರದ ಕಂಬವನ್ನು ದೈವಸ್ಥಾನದೆದುರು ಅಥವಾ ತುಳಸಿಕಟ್ಟೆಯೆದುರು ನೆಟ್ಟು, ಅದರ ಕವಲುಗಳಲ್ಲಿ ಹಣತೆಗಳಲ್ಲಿ ದೀಪ ಹಚ್ಚಿಟ್ಟು, ಬಲೀಂದ್ರ ಪಾಡ್ದನ ಹೇಳಿ ಬಲಿಯನ್ನು 'ಕೂ' ಎಂದು ಕರೆದು ಆಹ್ವಾನಿಸಲಾಗುತ್ತದೆ. ಇಲ್ಲಿ ಉಪಯೋಗಿಸಲ್ಪಡುವ ಮರ **ಬಳೆಕಿಮರ.**

ಕೆಡ್ಡಸ

ಭೂಮಿದೇವಿಯು ರಜಸ್ವಲೆಯಾಗುವ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಈ ಹಬ್ಬವನ್ನು ಮೂರು ದಿನಗಳ ಕಾಲ ತುಳುನಾಡಿನಲ್ಲಿ ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಿ ಬೇಟೆ ಹಾಗೂ ಮಾಂಸ ಸೇವನೆಗಳು ಕಡ್ಡಾಯವೆಂಬಂತೆ ಸಂಪ್ರದಾಯ ಬೆಳೆದುಬಂದಿದೆ. ಮಾಂಸ ತಿನ್ನದವರು ಮಾಂಸದಂತೆ ಭಾಸವಾಗುವ ತರಕಾರಿಗಳನ್ನು ತಿನ್ನಬೇಕೆಂಬ ನಿಯಮವಿದೆ.

ಈ ಮೇಲಿನವು ಕೃಷಿ ಆಧಾರಿತ ತುಳುವರ ವಾರ್ಷಿಕಾವರ್ತನದ ಆಚರಣೆಗಳಾಗಿವೆ. ಈ ಆಚರಣೆಗಳಲ್ಲಿ ಕೃಷಿ ಸಲಕರಣೆಗಳು, ಗೃಹ ಸಲಕರಣೆಗಳು, ಆರಾಧನೆಯ ಪರಿಕರಗಳು ಬಳಕೆಯಾಗುವುದಲ್ಲದೆ, 'ಪರ್ಬ'ದಲ್ಲಿ ಬಳಸಲಾಗುವ 'ಬಳೆಕಿಮರ'ವನ್ನು ವಿಶೇಷ ಪರಿಕರವಾಗಿ ಗುರುತಿಸಬಹುದಾಗಿದೆ.

೬.೩ ಆರಾಧನಾ ಹಿನ್ನೆಲೆಯ ಆಚರಣೆಗಳು

ತುಳುನಾಡಿನ ಆರಾಧನಾ ಪರಂಪರೆಯಲ್ಲಿ ನಾಗಾರಾಧನೆ ಹಾಗೂ ಭೂತಾರಾಧನೆಗಳು ಪ್ರಮುಖವಾದವು. ಪಾಲ್ತಾಡಿ ರಾಮಕೃಷ್ಣ ಆಚಾರ್ ಪ್ರಕಾರ ಯಕ್ಷಾರಾಧನೆ, ನಾಗಾರಾಧನೆ ಮತ್ತು ಭೂತಾರಾಧನೆ ಪ್ರಾಚೀನ ಮೂರು

ಆರಾಧನಾ ಪದ್ಧತಿಗಳು. ಆದರೆ ಬಹುತೇಕ ವಿದ್ವಾಂಸರು ಬಹು ಮುಖ್ಯವಾದ ಭೂತಾರಾಧನೆ ಮತ್ತು ನಾಗಾರಾಧನೆಯನ್ನು ಆರಾಧನಾ ಪರಂಪರೆಯಲ್ಲಿ ಸೇರಿಸಿಕೊಂಡು ಅಧ್ಯಯನ ನಡೆಸಿರುತ್ತಾರೆ.

೬.೩.೧ ಭೂತಾರಾಧನೆ

ಭೂತಾರಾಧನೆಯು ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಸಂಸ್ಕೃತಿಯ ಅರಾಧನ ಪದ್ಧತಿ. ಅದೃಶ್ಯ, ಅಮೂರ್ತ ಶಕ್ತಿಗಳ ಮೇಲೆ ನಂಬಿಕೆಯನ್ನಿಟ್ಟಿರುವ ಮಾನವ ಸ್ವಭಾವಕ್ಕೆ ಅಗಲಿದವರ ಆತ್ಮವನ್ನು ನೆನಪಿಸಿಕೊಳ್ಳುವ ಒಂದು ಪ್ರಕ್ರಿಯೆ ಎಂದು ಪರಿಭಾವಿಸಬಹುದು. ಮೊದಲಿಗೆ ಕುಟುಂಬಮಟ್ಟದಲ್ಲಿ ಆರಾಧಿಸಲ್ಪಡುತ್ತಿದ್ದ / ಪ್ರಾರ್ಥಿಸಲ್ಪಡುತ್ತಿದ್ದವುಗಳು ಮುಂದೆ ಗ್ರಾಮ ಮಟ್ಟದಲ್ಲಿ ಅಥವಾ ಮಾಗಣೆ ಮಟ್ಟದಲ್ಲಿ ಆರಾಧಿಸಲ್ಪಟ್ಟಿರಬಹುದೆಂದು ಅಂದಾಜಿಸಬಹುದಾಗಿದೆ. ಬೌದ್ಧ ತಾಂತ್ರಿಕ ಉಪಾಸನೆಯ ಒಂದು ಕವಲಾಗಿ ಭೂತಾರಾಧನೆಯನ್ನು ಪರಿಭಾವಿಸಬಹುದೆಂದು ಕೆ. ಎಂ ರಾಘವ ನಂಬಿಯಾರ್ ಅಭಿಪ್ರಾಯ ಪಡುತ್ತಾರೆ. ತಿಂಗಳಿಗೊಂದು ಆರಾಧನೆ, ನಿತ್ಯ ದೀಪವಿಡುವಿಕೆ, ಜತೆಗೆ ವರ್ಷಕ್ಕೊಮ್ಮೆ ನೇಮ ಇವು ಈ ಆರಾಧನೆಯಕೃತ್ಯಗಳು ಎನ್ನುತ್ತಾರೆ.[೨] ಫಾದರ್ ಹೆರಸ್‌ರವರು ಮೊಹೆಂಜೊದಾರೋದಲ್ಲಿ ಸಿಕ್ಕಿದ ಪ್ರಾಣಿಗಳ ವಿಗ್ರಹಗಳಿಗೂ ಭೂತಾರಾಧನೆಯ ವಿಗ್ರಹಗಳಿಗೂ ಸಂಬಂಧವನ್ನು ಕಲ್ಪಿಸಿ ಭೂತಾರಾಧನೆ ಮೊಹೆಂಜೊದಾರೊ ಸಂಸ್ಕೃತಿಯಲ್ಲಿ ಅಡಕವಾಗಿತ್ತೆಂದು ಹೇಳುತ್ತಾರೆ. ಭೂತಾರಾಧನೆಯಲ್ಲಿ ಉಪಯೋಗಿಸಲ್ಪಡುವ ಹುಲಿ, ಎತ್ತು ಮುಂತಾದ ಪ್ರತಿಮೆಗಳಿಗೂ ಮೊಹೆಂಜೊದಾರೋದಲ್ಲಿ ಸಿಕ್ಕಿದ ಅವಶೇಷಗಳಿಗೂ ಸಾಮ್ಯತೆ ಇದೆ.[೩] ಆರಾಧನೆಗೊಳ್ಳುವ ದೈವಗಳನ್ನು ಪ್ರಾಣಿಮೂಲ ಅಥವಾ ರಾಜಮೂಲಗಳೆಂಬ ಎರಡು ಪ್ರಬೇಧ ಮಾಡಬಹುದು. ಪ್ರಾಣಿಮೂಲದ ದೈವಗಳು ಮೃಗ ಲಾಂಛನವನ್ನು ಹೊಂದಿರುತ್ತದೆ. ಬೇರೆ ಬೇರೆ ಜಾತಿಧರ್ಮಗಳ ಜೀವನ ಶೈಲಿಯ ನೆಲೆಯಲ್ಲಿ ಆಚರಣೆಗಳು ಬೇರೆ ಬೇರೆ ರೀತಿ ಇರುತ್ತದೆ.

ಈ ಎಲ್ಲಾ ದೈವಗಳ ಆರಾಧನೆಯಲ್ಲಿ ವರ್ತಕತ್ವದ ಪ್ರಧಾನ ವಿಷಯವಾದ ಕೃಷಿ ಮತ್ತು ಅದನ್ನು ಅವಲಂಬಿಸುವ ಆರ್ಥಿಕ ಚಟುವಟಿಕೆಗಳಲ್ಲಿ ಮಗ್ನರಾಗುವ ಸಕಲರಿಗೂ ಸಹಭಾಗ ಇರುವುದು ಗಮನಾರ್ಹ. ಭೂತಾರಾಧನೆಯಲ್ಲಿ ನಡೆಯುವ ಮಾಸಿಕ ಮತ್ತು ವಾರ್ಷಿಕ ಆಚರಣೆಗಳ ಎಲ್ಲ ವಿಧಿ ವಿಧಾನಗಳನ್ನು ಪರಿಶೀಲಿಸಿದರೆ ಇವುಗಳಲ್ಲಿ ಕೆಲವೊಂದು ಸಾಮಾಜಿಕ ಮತೀಯ ಚರಿತ್ರೆ ಗುರುತುಗಳನ್ನು ಕಂಡುಕೊಳ್ಳಬಹುದು.

'ಭೂತಗಳ ವಾರ್ಷಿಕ ಆಚರಣೆಗಳು, ಕೋಲ ನೇಮಗಳು, ಒಂದು ಸಮಾಜದ ವ್ಯವಸ್ಥೆಯ ಪ್ರತಿಬಿಂಬ ಮಾತ್ರವಲ್ಲ ಆ ಪ್ರದೇಶದ ಪ್ರಮುಖ ಆಗುಹೋಗುಗಳನ್ನು ನಿಯಂತ್ರಿಸುವ ಕೇಂದ್ರಗಳೂ ಆಗಿವೆ. ಬದುಕಿನ ಸಮಸ್ಯೆಗಳಿಗೆ ಪರಿಹಾರ ಸೂಚಿಸಿ ಶಾಂತಿ ಸಿಗುವಂತೆ ಮಾಡುವ ಸಂಜೀವಿನಿಗಳಾಗಿವೆ. ಅದರಲ್ಲಿ ಪಾಲುಗೊಳ್ಳುವ ಎಲ್ಲರೂ ಆ ಅಲೌಕಿಕ ಶಕ್ತಿಯ ನಿರ್ಣಯಕ್ಕೆ ಬದ್ಧರಾಗಿದ್ದು ಆ ಅತಿಮಾನುಷ ಶಕ್ತಿಗಳು ತಮ್ಮ ಅನುಗ್ರಹವನ್ನು ಹಿಂತೆಗೆದುಕೊಂಡರೆ ಬದುಕು ದಾರುಣವಾಗುತ್ತದೆಂಬ ನಂಬಿಕೆಯನ್ನು ಬೆಳೆಸಿಕೊಂಡವರಾಗಿದ್ದಾರೆ. ಸಾಮಾಜಿಕ

ವ್ಯವಸ್ಥೆಯ ಶಿಸ್ತುಬದ್ಧವಾದಪರಿಪಾಲನೆಗೆ ಸಹಾಯಕವಾಗಿದೆ ಎಂದು ಅನುಭವದಿಂದ ತಿಳಿದುಕೊಂಡವರಾಗಿದ್ದಾರೆ. ಅವರ ಪಾಲಿಗೆ ಇದು ಮೂಢ ನಂಬಿಕೆಯಲ್ಲ, ಮಾಂತ್ರಿಕ ವಿಧಿಯಲ್ಲ, ನಾಟಕವಲ್ಲ, ಒಂದು ಜೀವಂತ ಸತ್ಯ'[೧೪] ಬೇರೆ ಬೇರೆ ಜಾತಿಧರ್ಮಗಳ ಜೀವನ ಶೈಲಿಯ ನೆಲೆಯಲ್ಲಿ ಆಚರಣೆಗಳು ಬೇರೆ ಬೇರೆ ರೀತಿ ಇರುತ್ತದೆ. ಕರಾವಳಿಯ ಭೂತದ ಸ್ಥಾನ/ಗುಡಿಗಳಲ್ಲಿ, ಬೈದ್ಯರ ಗರೋಡಿಗಳಲ್ಲಿ, ಮುಗೇರರ ಕೊಟ್ಯಗಳಲ್ಲಿ, ಕಂಬೆರ್ಲುಗಳ ಕಳಗಳಲ್ಲಿ ಇಡಿ ತುಳುವರ ಲೋಕದೃಷ್ಟಿಯು ಕೆಲಸಮಾಡಿರುವದನ್ನು ಗಮನಿಸಬಹುದು. ಇವು ತುಳುವರ ನಿತ್ಯ ಜೀವನದಲ್ಲಿನ ಪ್ರಯೋಗಗಳಾಗಿಯೇ ಕಾಣಿಸುತ್ತವೆ. ಮನೆಯ ಪರಿಸರದ ಕೊಟ್ಯ, ಕಳಗಳು ನಾಗರಿಕ ಬದುಕಿನ ಪರಿಸರದೊಂದಿಗೆ ನಂಟು ಹೊಂದಿದ್ದು, ಆರಾಧನೆಯನ್ನು ನಾಗರಿಕತೆಯ ಚಲನಶೀಲತೆಯೊಂದಿಗೆ ಅದರ ಐತಿಹಾಸಿಕತೆಯನ್ನು ಕಂಡು ಕೊಳ್ಳಬೇಕಾದ ಅನಿವಾರ್ಯತೆಯನ್ನು ಮುಂದಿಡುತ್ತದೆ.

ಭೂತಗಳಿಗೂ ವಾಹನಗಳಿವೆ. ಜುಮಾದಿ ಕಟ್ಟಿಗೆಯ ಹುಲಿಯನೇರಿದರೆ ಮಲರಾಯಿ, ವಾರಾಹಿ ವರಾಹವಾಹನೆಯರು. ಪಿಲಿಚಾಮುಂಡಿಯ ವಾಹನ ವ್ಯಾಘ್ರ. 'ಭೂತಾರಾಧನೆಯ ನಾಲ್ಕು ವಿಧಗಳನ್ನು ಗುರುತಿಸಬಹುದಾಗಿದೆ. ಕೋಲ, ಬಂಡಿ, ನೇಮ ಮತ್ತು ಅಗೇಲು ತಂಬಿಲ. ಕೋಲವನ್ನು ಗ್ರಾಮದ ಸ್ಥಾನಗಳಲ್ಲಿ ಊರವರಿಂದ ನಡೆಸಲಾಗುತ್ತದೆ. ಕೋಲದ ಇನ್ನೊಂದು ರೀತಿಯಲ್ಲಿ ಆರಾಧಿಸಲ್ಪಡುವ ಭೂತವನ್ನು ಬಂಡಿಯಲ್ಲಿ ಎಳೆಯುವ ಪ್ರಕ್ರಿಯೆ ನಡೆಯುತ್ತದೆ. ಇದನ್ನು ಬಂಡಿ ಎನ್ನಲಾಗುತ್ತದೆ. ವೈಯಕ್ತಿಕ ನೆಲೆಯಲ್ಲಿ ಒಂದು ಕುಟುಂಬಕ್ಕೆ ಅಥವಾ ಮನೆತನಕ್ಕೆ ಸಂಬಂಧ ಪಟ್ಟ ಆರಾಧನೆಗೆ ನೇಮ ಎಂದು ಕರೆಯುವರು ಮತ್ತು ಬೈದೆರ್ಲುಗಳ ಆರಾಧನೆಗೆ ಅಗೇಲು ತಂಬಿಲ ಎನ್ನುವರು. [೧೫]

ಭೂತಾರಾಧನಾ ಪರಿಕರಗಳನ್ನು ಈ ರೀತಿ ಗುರುತಿಸಬಹುದಾಗಿದೆ:

೧. ಭೌತಿಕ ಪರಿಕರಗಳು– ಸಾನ, ಗರೋಡಿ, ಕೊಟ್ಯ, ಕಳ, ಆಯುಧಗಳು, ಕಲ್ಲು, ಉರು, ಮಣೆ ಮಂಚ, ಕಡ್ಸಲೆ,

೨. ರಂಗ ಪರಿಕರಗಳು: ವೇಷಭೂಷಣಗಳು, ಬಣ್ಣಗಾರಿಕೆ, ಸಂಕೇತಗಳು

ಭೂತದ ಸ್ಥಾನ/ಗುಡಿ

ಬೈದೆರ್ಲುಗಳನ್ನು ಗರೋಡಿಗಳಲ್ಲಿ, ಮುಗೇರ್ಲುಗಳನ್ನು ಕೊಟ್ಯಗಳಲ್ಲಿ, ಕಂಬೆರ್ಲುಗಳನ್ನು ಕಳದಲ್ಲಿ, ಆರಾಧನ ನೆಲೆಗಳ ಮೂಲಕ ಆರಾಧಿಸಲಾಗುತ್ತದೆ. ಇಲ್ಲಿನ ಭೂತದ ಸ್ಥಾನ/ಗುಡಿಗಳಲ್ಲಿ, ಬೈದ್ಯರ ಗರೋಡಿಗಳಲ್ಲಿ, ಮುಗೇರರ ಕೊಟ್ಯಗಳಲ್ಲಿ, ಕಂಬೆರ್ಲುಗಳ ಕಳಗಳಲ್ಲಿ ಇಡಿ ತುಳುವರ ಲೋಕದೃಷ್ಟಿಯು ಕೆಲಸಮಾಡಿರುವದನ್ನು ಗಮನಿಸಬಹುದು. ಇವು ತುಳುವರ ನಿತ್ಯ ಜೀವನದಲ್ಲಿನ ಪ್ರಯೋಗಗಳಾಗಿಯೇ ಕಾಣುಸುತ್ತವೆ. ಮನೆಯ ಪರಿಸರದ ಕೊಟ್ಯ, ಕಳಗಳು ನಾಗರಿಕ ಬದುಕಿನ ಪರಿಸರದೊಂದಿಗೆ ನಂಟು ಹೊಂದಿದ್ದು, ಆರಾಧನೆಯನ್ನು ನಾಗರಿಕತೆಯ ಚಲನಶೀಲತೆಯೊಂದಿಗೆ ಅದರ ಐತಿಹಾಸಿಕತೆಯನ್ನು ಕಂಡುಕೊಳ್ಳಬೇಕಾದ ಅನಿವಾರ್ಯತೆಯನ್ನು ಮುಂದಿಡುತ್ತದೆ.

ಗರೋಡಿ

ತುಳುನಾಡಿನಲ್ಲಿ ಗರಡಿಗಳ ಸ್ಥಾಪನೆ ಹೆಚ್ಚು ಕಡಿಮೆ ೧೧ನೆಯ ಶತಮಾನದಲ್ಲಿ ಆಗಿರಬೇಕು. ಗರಡಿಗಳು ಅಂಗಸಾಧನೆಯ, ಯುದ್ಧಕಲೆಯ ಕೇಂದ್ರಗಳಾಗಿದ್ದವು. ತುಳುನಾಡಿನ ಗರಡಿ ಮತ್ತು ಕೇರಳದ ಕಳರಿಯ ರಚನೆಗಳ ಆಯದಲ್ಲಿ ಹೆಚ್ಚು ವ್ಯತ್ಯಾಸವಿಲ್ಲ. ಸಾಮಾನ್ಯವಾಗಿ ೪೨ ಅಡಿ ಉದ್ದ ೨೧ ಅಡಿ ಅಗಲ ೧೫ರಿಂದ ೨೦ ಅಡಿಗಳವರೆಗೆ ಎತ್ತರವುಳ್ಳವುಗಳು. ಯೋಧ ಕಲೆ ತರಬೇತಿ ಕೇಂದ್ರಗಳಾಗಿದ್ದ ಗರಡಿಗಳು ಆರಾಧನಾ ಕೇಂದ್ರಗಳಾಗಿ ಪರಿವರ್ತನೆಗೊಂಡದ್ದು ಯಾವಾಗ ಎಂಬುದನ್ನು ನಿಖರವಾಗಿ ಹೇಳಲು ಸಾಧ್ಯವಿಲ್ಲವೆನ್ನುತ್ತಾರೆ ವಾಮನ ನಂದಾವರ್. ಆದರೆ ಅಮೃತ ಸೋಮೇಶ್ವರರ ಪ್ರಕಾರ ಇದು ಕೋಟಿ ಚೆನ್ನಯರ ಮರಣಾ ನಂತರವೇ ಆಗಿದ್ದಿರಬಹುದು. ಒಂದು ಕಾಲದಲ್ಲಿ ಶೋಷಣೆಗೊಳಪಟ್ಟವರು ಅದರ ಹೋರಾಟದ ಪ್ರತೀಕವಾಗಿಯೆ ಗರಡಿಗಳು ಆರಾಧನ ಕೇಂದ್ರವಾಗಿ ಪರಿವರ್ತಿತವಾಗಿಬೇಕು. ೬೦ ಗರೋಡಿಗಳನ್ನು ಕೋಟಿ–ಚೆನ್ನಯರು ಕಟ್ಟಿಸಿದರೆ ಇಂದು ೨೦೦ಕೂ ಮಿಕ್ಕಿ ಗರೋಡಿಗಳಿವೆ. ಗರಡಿಗಳಲ್ಲಿ ಕೋಟಿ ಚೆನ್ನಯರ ಉರು ಅಥವಾ ಪಾಪೆ, ಮಾಯಂದಾಲ್, ಚಿಕ್ಕ ಬಲ್ಲಾಳ, ಕುಜುಂಬ ಕಾಜವ ಮೊದಲಾದವುಗಲಲ್ಲದೆ ಬ್ರಹ್ಮನ ಮೂರ್ತಿಯೂ ಇದೆ.

ಗರಡಿಯ ಬೆರ್ಮೆರ್ ಗುಡಿಯನ್ನು ಸಿಂಗದನ ಎಂದೂ ಹೇಳುವುದುಂಟು. ವ್ಯವಸಾಯ ಮತ್ತು ಮೀನುಗಾರಿಕೆ ಪ್ರಮುಖ ವೃತ್ತಿಯಾಗಿದ್ದ ಹಂತದಲ್ಲಿ ಅದಕ್ಕೆ ಸಂಬಂಧಿಸಿದ ದೈವಾರಾಧನೆಯ ನಂಬಿಕೆಗಳು ಪ್ರಮುಖವಾಗಿ ಗೋಚರಿಸುತ್ತದೆ.

ಆಯುಧಗಳು

ಭೂತಾರಾಧನೆಯಲ್ಲಿ ಅನೇಕ ಆಯುಧಗಳ ಬಳಕೆಯಾಗುತ್ತದೆ. ಕಡ್ತಲೆ, ಸುರಿಯ, ಗುರಾಣಿ, ಬೆತ್ತ, ಕತ್ತಿ, ಗೆಜ್ಜೆಕತ್ತಿ, ಬಿಲ್ಲುಬಾಣ, ಗಂಟೆ ಇತ್ಯಾದಿ. ಬೈದೆರ್ಲುಗಳಿಗೆ ಸುರಿಯ ಆಯುಧವಾದರೆ, ಮುಗೆರ್ಲುಗಳಿಗೆ ಬಿಲ್ಲುಬಾಣ, ಕಂಬೆರ್ಲುಗೆ ಅಲುಂಬುಡ ಗಿಡದ ದಂಟೆ ಇತರ ದೈವಗಳಿಗೆ ಕಡ್ಸಲೆ ಆಯುಧವಾಗಿದೆ. ಬೈದೆರ್ಲುಗಳಿಗೆ ಪಾಪೆ ರೂಪದ ಪ್ರತಿಮೆ ಮರದ ಉರುಗಳು ಇದ್ದು, ಕಂಬೆರ್ಲುಗೆ ಕಲ್ಲು ಇದೆ. ಉಳ್ಳಾಳ್ತಿ ಉರಿಯುತ್ತಿರುವ ಎರಡು ಸೂಟೆ ಹಿಡಿಯುವಳು. ಬಬ್ಬರ್ಯನ ಆಯುಧ ಕುದಂಟಿ. ಅಡ್ಯಣ ಅಥವಾ ಗುರಾಣಿ ಬಬ್ಬುವಿನ ಆಯುಧ. ಗುಳಿಗನ ಆಯುಧ ೨೧ ಇಂಚು ಉದ್ದದ ಕಬ್ಬಿಣ ಅಥವಾ ಕಂಚಿನಿಂದ ಸುಮಾರು ಒಂದು ಇಂಚು ಉರುಟಾಗಿರುವ ಊರುಗೋಲಿನ ಆಕೃತಿಯ ಆ ದೈವಗಳ ಆರಾಧನೆಯ ಸಂದರ್ಭದಲ್ಲಿ ಬಳಸುವ ಆಯುಧವಿದು.

ಖಡ್ಸಲೆ

ಖಡ್ಸಲೆಯನ್ನು ಮುಖ್ಯವಾಗಿ ರಾಜಂದೈವಗಳು ಮತ್ತು ಮಾಗಣೆ ದೈವಗಳು ಮಾತ್ರ ಬಳಸುತ್ತವೆ. ಈ ಕಡ್ಸಲೆಯ ರಚನೆಯು ಖಡ್ಗದಾಕಾರದಲ್ಲಿದ್ದು, ಕಲಾತ್ಮಕವಾಗಿರುತ್ತದೆ. ಪ್ರಾರಂಭದ ಹಂತದಲ್ಲಿ ಕಬ್ಬಿಣದಿಂದ

ತಯಾರಿಸಲಾದ ಕಡ್ಸಲೆಯನ್ನು ಬಳಸಲಾಗುತ್ತಿತ್ತು. ದೈವಸ್ಥಾನಕ್ಕೆ ಧಾರ್ಮಿಕವಾಗಿ ಶ್ರೇಷ್ಠವಾದುದು ಅಲವಿನ ಖಡ್ಸಲೆ. ಕಾಲಾಂತರದಲ್ಲಿ ಭಕ್ತರ ಆರ್ಥಿಕ ಸ್ಥಿತಿ ಉತ್ತಮಗೊಂಡಂತೆ ಇತರ ಲೋಹಗಳಿಂದ ಮಾಡಲ್ಪಟ್ಟ, ಚಿನ್ನ ಬೆಳ್ಳಿಗಳಿಂದ ಸಿಂಗರಿಸಲ್ಪಟ್ಟ ಕಡ್ಸಲೆಗಳು ಬಳಕೆಗೆ ಬಂದವು. ಆದರೆ ಕೋಲ ನೇಮಗಳಲ್ಲಿ ಗಡಿ ತೆಗೆದುಕೊಳ್ಳುವಂತಹ ವಿಶೇಷ ಸಂದರ್ಭಗಳಲ್ಲಿ ಕಬ್ಬಿಣದ ಖಡ್ಸಲೆಯನ್ನೇ ಬಳಸುವುದನ್ನು ಕಾಣಬಹುದು. ಇತರೆಡೆಯಲ್ಲಿ ಆಯುಧವಾಗಿ ಬಳಸಲ್ಪಡುವ ಖಡ್ಸಲೆ ಆರಾಧನಾ ರಂಗದಲ್ಲಿ ಅಭಯ ಚಿಹ್ನೆಯಾಗಿ ಬಳಸಲ್ಪಡುತ್ತಿದೆ. ಖಡ್ಸಲೆ ಯುದ್ಧದ ಪರಿಕರವಾದ ಖಡ್ಗವನ್ನು ಸಂಕೇತಿಸುವುದು ಎನ್ನುವ ಬನ್ನಂಜೆ ಬಾಬು ಅಮೀನ್ (೨೦೧೦) ವಿವಿಧ ದೈವಗಳ ಖಡ್ಸಲೆಗಳ ಉದ್ದಳತೆಯನ್ನು ವಿನ್ಯಾಸವನ್ನೂ ನೀಡುವರು. ಖಡ್ಸಲೆಯು ವಿನ್ಯಾಸದಲ್ಲಿ ನೇರವಾಗಿರದೆ ಹೊರಮೈ ಉಬ್ಬಾಗಿ ಬಾಗಿಕೊಂಡು, ತುದಿಭಾಗವು ಚೂಪಾಗಿ ಇರುವುದು. ತಳಭಾಗದಲ್ಲಿ ಕೈ ಹಿಡಿಕೆ ಇದ್ದು ಸಣ್ಣ ಮಣಿಗಳಿಂದ ಖಡ್ಸಲೆಯ ಹೊರಮೈಯನ್ನು ಅಲಂಕರಿಸುವರು.

ಧೂಮಾವತಿ ದೈವದ ಖಡ್ಸಲೆ	೨೯ ಇಂಚು
ಪಂಜುರ್ಲಿ (ಎಲ್ಲಾ ಪ್ರಬೇಧಗಳು)	ಹಿಡಿ ಸಮೇತ ಎತ್ತರ ೨೫ ಇಂಚು
ಪಿಲ್ಚಂಡಿ	ಹಿಡಿ ಸಮೇತ ಎತ್ತರ ೨೯ ಇಂಚು
ಜಾರಂದಾಯ	ಹಿಡಿ ಸಮೇತ ಎತ್ತರ ೩೧ ಇಂಚು
ಬಬ್ಬು	ಹಿಡಿ ಸಮೇತ ಎತ್ತರ ೨೯ ಇಂಚು
ಒಡಿಲ್ತಾಯ	ಹಿಡಿ ಸಮೇತ ಎತ್ತರ ೨೯ ಇಂಚು[೧೬]

ಸುರಿಯ

ಕೋಟಿ ಚೆನ್ನಯ ದೈವದ ಆಯುಧ ಇದಾಗಿದೆ. ಕಲ್ಕುಡ ದೈವಕ್ಕೂ ಕೋಟಿ ಚೆನ್ನಯರ ಸುರಿಯದ ತರದ ಆಯುಧವನ್ನು ಉಪಯೋಗಿಸುವರು. ರಕ್ತೇಶ್ವರಿಗೂ ಸುರಿಯದ ತರದ ಆಯುಧವಿದೆ.

ಬೆತ್ತ

ಹೆಣ್ಣು ದೈವಗಳಿಗೆ ಬೆತ್ತ ಆಯುಧ. ವರ್ತೆ, ಕಲ್ಲುರ್ಟಿ, ಸತ್ಯಮ್ಮ, ಪೊಸಭೂತ, ಮಂತ್ರದೇವತೆ, ಸ್ತ್ರ್ಯದೇವತೆ, ಮೊದಲಾದ ಹೆಣ್ಣು ಭೂತಗಳ ಆಯುಧ ಇದಾಗಿದೆ. ಜಾಲಕೊರತಿ ಎನ್ನುವ ಹೆಣ್ಣು ಭೂತಕ್ಕೆ ಗೆಜ್ಜೆಕತ್ತಿ ಆಯುಧವಾಗಿರುತ್ತದೆ. ನಾಗಬೆತ್ತವನ್ನು ಒಂದು, ಎರಡು, ಮೂರು, ಐದು, ಏಳು ಈ ರೀತಿಯಲ್ಲಿ ಒಂದು ಗೊಂಚಲು ಮಾಡಿ ಬುಡ ಮತ್ತು ಮಧ್ಯಕ್ಕೆ ಬೆಳ್ಳಿಯ ಕಟ್ಟು ಹಾಕಿ ಉಪಯೋಗಿಸುವರು.

ಮುಖವಾಡ

ಮುಖವಾಡಕ್ಕೆ ತುಳುವಿನಲ್ಲಿ 'ಮುಗ' ಎಂದು ಕರೆಯಲಾಗುತ್ತದೆ. ಮುಖವಾಡವನ್ನು 'ಬಿಂಬ', ಮೂರ್ತಿ ಎಂದೂ ಕರೆಯಲಾಗುವುದು. ಭೂತವು ಮುಖವಾಡವನ್ನು ಧರಿಸಿ, ಆರಾಧನೆಯಲ್ಲಿ ಅಭಿವ್ಯಕ್ತಿಗೊಳ್ಳುವುದು. ಮುಖವಾಡವನ್ನು ಮರ, ಹಾಳೆ, ಲೋಹದಿಂದ ನಿರ್ಮಿಸುತ್ತಾರೆ. ಕಲ್ಕುಡ, ಕಲ್ಲುರ್ಟಿ, ಪಂಜುರ್ಲಿಗೆ ಲೋಹದ ಅಥವಾ ಹಾಳೆಯ ಮುಖವಾಡವಿರುತ್ತದೆ. ಉಳ್ಳಾಳ್ತಿ, ಕೊಡಮಣಿತ್ತಾಯ, ಮಲರಾಯಿ, ಜುಮಾದಿ, ರಕ್ತೇಸರಿ ಮೊದಲಾದುವಕ್ಕೆ ಲೋಹದ ಮುಖವಾಡವಿರುತ್ತದೆ.ಅನಂತಾಡಿಯ ಉಳ್ಳಾಲ್ತಿಗೆರಡೂ ಇದ್ದು ಒಂದನ್ನು 'ಚಂದನದ ಮುಗ' ಎಂದೂ ಮತ್ತೊಂದನ್ನು ಚಿನ್ನದ ನಾಲಿಗೆಯ ಬೆಳ್ಳಿ ಮುಗ ಎಂದೂ ಕರೆಯುತ್ತಾರೆ. ಒಂದು ಭೂತದ ಮುಖವಾಡವನ್ನು ಮತ್ತೊಂದಕ್ಕೆ ಉಪಯೋಗಿಸುವಂತಿಲ್ಲ. ಈ ಮುಖವಾಡಗಳಲ್ಲಿ ಎರಡು ಬಗೆಯನ್ನು ಕಾಣಬಹುದು. ೧. ಮನುಷ್ಯರ ಮುಖವಾಡ ಮತ್ತು ೨. ಪ್ರಾಣಿಗಳ ಮುಖವಾಡ ಇವುಗಳ ರಚನೆಯಲ್ಲಿ ಭಯ, ಪೌರುಷ, ಕ್ರೌರ್ಯ, ಹಿಂಸೆ ಇತ್ಯಾದಿ ಭಾವಗಳನ್ನು ಉದ್ದೀಪಿಸುವಲ್ಲಿ ಗಮನವಿಡಲಾಗುತ್ತದೆ. ಅಗಲವಾದ ತೆಗೆದ ಬಾಯಿ, ಉದ್ದ ಚಾಚಿದ ನಾಲಗೆ, ಕೋರೆ ಹಲ್ಲುಗಳು, ದಿಟ್ಟಿಸುವ ಕಣ್ಣುಗಳು–ಇತ್ಯಾದಿ ಅಂಶಗಳು ಇಲ್ಲಿ ಕಂಡು ಬರುತ್ತವೆ. ಈ ವಿಷಯದಲ್ಲಿ ಮೀಸೆಯಿರುವ ಮುಖವಾಡವನ್ನು ಒಂದು ಹೆಣ್ಣು ಭೂತ ಧರಿಸುವುದಿದೆ. ಮಾಣಿಯ ಉಳ್ಳಾಲ್ತಿಯ ಮುಖವಾಡವನ್ನು ಹಾಳೆಯಿಂದಲೇ ರಚಿಸುತ್ತಾರೆ. ಎರಡು ದೊಡ್ಡ ಹಾಳೆಗಳನ್ನು ನಾರಿನಿಂದ ಹೆಣೆದು ಜೋಡಿಸಿ ಅದಕ್ಕೆ ಬಣ್ಣ ಹಚ್ಚಿ, ಕಣ್ಣು ಬಿಡಿಸಿ, ಉದ್ದವಾದ ಹಾಳೆಯ ನಾಲಗೆಯನ್ನು ಜೋಡಿಸುತ್ತಾರೆ. ಈ ಮುಖವಾಡಗಳು ಹೆಣ್ಣು ದೈವಗಳಾದಾದರೂ ಮೀಸೆ ಬಿಡಿಸುತ್ತಾರೆ. ಹಾಳೆಯ ಮುಖವಾಡಗಳನ್ನು ಕೋಲ ನೇಮಗಳಾದ ಮೇಲೆ ಬಿಸುಟು ಬಿಡುವರು. ಹಂದಿ, ಹುಲಿ ಮತ್ತು ಗೂಳಿ ಈ ಪ್ರಾಣಿಗಳ ಮುಖವನ್ನು ಹೋಲುವ ಮುಖವಾಡಗಳು ಕಂಡು ಬರುತ್ತವೆ. ಪಂಜುರ್ಲಿ, ಪಿಲಿಭೂತ, ಮೈಸಂದಾಯ ಇವುಗಳು ಉಗ್ರರೂಪದ ಮುಗಗಳನ್ನು ಧರಿಸುತ್ತವೆ. ವ್ಯಾಘ್ರಚಾಮುಂಡಿ, ಗುಡ್ಡ ಚಾಮುಂಡಿಯರ ಮುಖವಾಡಗಳು ಬಿಟ್ಟ ಹಲ್ಲು, ದಾಡೆಮೀಸೆಗಳಿಂದ ಕೂಡಿದ್ದು ನೋಡಲು ಭಯಾನಕವಾಗಿರುತ್ತದೆ. ಆರಾಧನೆಯಲ್ಲಿ ಮುಖವಾಡಗಳು ಎರಡು ರೀತಿಯಲ್ಲಿ ಬಳಕೆಯಾಗುತ್ತವೆ. ಕಾರ್ಕಳ ಮತ್ತು ಮಂಗಳೂರು ಕಡೆಗಳಲ್ಲಿ ಮುಖವಾಡವನ್ನು ಮುಖಕ್ಕೆ ಕಟ್ಟಿಕೊಳ್ಳದೆ ಹಿಂದಕ್ಕೆ ಅಣಿಗೆ ತಾಗಿದಂತೆ ಕಟ್ಟಿಕೊಳ್ಳುತ್ತಾರೆ. ಬಂಟ್ವಾಳ, ಬೆಳ್ತಂಗಡಿ ಕಡೆಯೆಲ್ಲಾ ಮುಖದ ಮೇಲೆ ಕಟ್ಟಿಕೊಳ್ಳುತ್ತಾರೆ. ಬಹುಶ: ಲೋಹದ ಮುಖವಾಡ ಭಾರವಾದುದರಿಂದ ತಲೆಗೆ ಏರಿಸಿಕೊಳ್ಳುವ ಸಂಪ್ರದಾಯ ರೂಢಿಗೆ ಬಂದಿರಬಹುದು ಎಂದು ಎಸ್ ಎ ಕೃಷ್ಣಯ್ಯ ಅಭಿಪ್ರಾಯಪಡುತ್ತಾರೆ[೧೭]

ಭೂತದ ಮುಖವಾಡಗಳ ಪ್ರತಿಮೆಯ ವಿನ್ಯಾಸ ರಚನೆಯ ಸೂತ್ರವು ಮೂಚಾರಿಗಳಿಗೆ ವಾಂಶಿಕವಾಗಿ ಬಂದ ಕಸುಬಿನಲ್ಲಿದೆ. ಲೋಹದ ಎರಕದಲ್ಲಿ ಭೂತ ದೈವದ ಮುಖವಾಡವನ್ನು ಮಾಡುವಾಗ ಗಣಪತಿ ಪೂಜೆ, ಧ್ಯಾನ ಮಾಡುವರು. ಮುಖವಾಡದ ತಯಾರಿಕೆಯನ್ನು ಬಹಳ ವಿಧಿವತ್ತಾಗೆ ಮಾಡುವರು ಮತ್ತು ಅದನ್ನು ತಯಾರಿಸಿದ ನಂತರ ಬಹಳ ಕ್ರಮಪ್ರಕಾರವಾಗಿ ಸ್ಥಾನದ ಪಾತ್ರಿ ಹಾಗೂ ಯಜಮಾನ ಬಂದು ಸ್ವೀಕರಿಸುವರು.

ಮುಖವಾಡವನ್ನು ಸ್ಥಾನದೊಳಗೆ ತುಂಬಿಸಿಕೊಳ್ಳುವ ಸಂದರ್ಭದಲ್ಲಿಯೂ ಹಂತ ಹಂತವಾಗಿ ಅನೇಕ ಕ್ರಮಗಳನ್ನು ನೆರವೇರಿಸಲಾಗುವುವುದು. ಕೊನೆಯಲ್ಲಿ ಮಣೆಮಂಚದಲ್ಲಿಡಲಾಗುವುದು.

ಭೂತಗಳನ್ನು ಆರಾಧಿಸುವ ಮಂದಿ ಆರ್ಥಿಕವಾಗಿ ಸಶಕ್ತರಾಗುತ್ತಾ ಹೋದ ಹಾಗೆ ಮುಖವಾಡಗಳ ಧಾತುಗಳು ಬದಲಾಗುತ್ತಾ ಹೋದುದನ್ನು ಗಮನಿಸಬಹುದಾಗಿದೆ.

ದೈವಾರಾಧನೆಯ ವೇಷಭೂಷಣ

ಅಣಿ

ಭೂತ ವೇಷಧಾರಿಯು ಬೆನ್ನಿಗೆ ಕಟ್ಟಿಕೊಳ್ಳುವ ಪ್ರಭಾವಳಿಗೆ ಅಣಿ ಎನ್ನುವರು. ಇದಕ್ಕೆ ಸಂವಾದಿಯಾಗಿ ಸೊಂಟದ ಎದುರಿಗೆ ಕಟ್ಟಿಕೊಳ್ಳುವ ಅರ್ಧವೃತ್ತಾಕಾರದ ಪರಿಕರಕ್ಕೆ ಜಕ್ಕೆಲಣಿ ಎನ್ನುವರು. ಬೆನ್ನಿಗೆ ಬಿಗಿಯುವ ಅಣಿಯು ಭೂತದ ವ್ಯಕ್ತಿತ್ವವನ್ನು ವಿಸ್ತಾರಗೊಳಿಸಿ, ಅತಿಮಾನವ ಕಲ್ಪನೆಯನ್ನುಂಟುಮಾಡುತ್ತದೆ[೧೮] ತೆಂಗಿನ ತಿರಿ, ಕವುಂಗಿನ ಹಾಳೆ, ಮರದ ಹಲಗೆ, ಲೋಹದ ತಗಡು ಇತ್ಯಾದಿಗಳಿಂದ ನಿರ್ಮಿತವಾಗುವ ಅಣಿಗಳಿವೆ. ಗರಿಯಿಂದ ಸಿದ್ದಗೊಳಿಸುವ ಅಣಿಗಳಲ್ಲೂ ಹಲವು ಆಕಾರದವು ಇವೆ. ಕೆಸುವಿನ ಎಲೆಯಾಕೃತಿ, ಆಯತಾಕಾರ, ಅರ್ಧ ವೃತ್ತಾಕಾರ, ನೀಳಾಕಾರ, ಹೆಡೆಯಾಕಾರ, ತ್ರಿಕೋಣಾಕಾರ ಇತ್ಯಾದಿ. ಸಜಿಪದಲ್ಲಿನ ನಾಲ್ಕೈತ್ತಾಯ ದೈವಕ್ಕೆ ಸಾವಿರ ಹಾಳೆಗಳ ತುಂಡುಗಳನ್ನು ಜೋಡಿಸಿದ ಬೃಹತ್ ಗಾತ್ರದ ಅಣಿಯಾಗಬೇಕು. ಉಪ್ಪಿನಂಗಡಿಯ ಮಾಕಾಳ್ದಿ ಅಬ್ಬೆಯ ಅಣಿ ಸುಮಾರು ೩೦–೪೦ ಅಡಿ ಎತ್ತರವಾಗಿದ್ದು ಹಾಳೆಯಿಂದ ರಚಿತವಾದ ನೂರಾರು ನಾಗರಹೆಡೆಯಂತಹ ವರ್ಣರಂಜಿತ ರಚನೆಗಳು ಅದರ ಭವ್ಯತೆಯನ್ನು ಹೆಚ್ಚಿಸುತ್ತದೆ.[೧೯]

ದೈವಾರಾಧನೆಯ ಸಂದರ್ಭದಲ್ಲಿ ಬಳಸಲ್ಪಡುವ ವೇಷಭೂಷಣ ಅಲಂಕಾರ ಪರಿಕರಗಳಲ್ಲಿ ಅಣಿಗೆ ಪ್ರಮುಖ ಸ್ಥಾನವಿದೆ. ಅಣಿಯನ್ನು ತೆಂಗಿನ ಎಳೆಯ ತಿರಿಯನ್ನು ಅರ್ಧ ಚಂದ್ರಾಕೃತಿಯಲ್ಲಿ ಕಲಾತ್ಮಕವಾಗಿ ಸಂಯೋಜಿಸಿ ರಚನೆ ಮಾಡಲಾಗುತ್ತದೆ. ಪ್ರಧಾನವಾಗಿ ಇದರಲ್ಲಿ ತೆಂಗಿನ ಎಳೆಗರಿಯೇ ಮುಖ್ಯ. ತೆಂಗಿನ ಗರಿಯನ್ನು ಅರ್ಧಮಂಡಲಾಕಾರದಲ್ಲಿ ಪ್ರಭಾವಳಿಯ ಹಾಗೆ ರಚಿಸಲಾಗುತ್ತದೆ. ಇದಕ್ಕೆ ಅಲಂಕಾರಕ್ಕಾಗಿ ಬೆಳ್ಳಿ ಕಟ್ಟುಗಳಿರುವ ದಂಡೆಯನ್ನು ಜೋಡಿಸಲಾಗುತ್ತದೆ. ಜೊತೆಗೆ ಅಲಂಕಾರಕ್ಕಾಗಿ ಬೆಳ್ಳಿಯ ಪರಿಕರಗಳನ್ನು ಕಟ್ಟಲಾಗುತ್ತದೆ. ಅಣಿಯ ಹಿಂದುಗಡೆ ಸೂರ್ಯ ಮತ್ತು ಚಂದ್ರ ಸಂಕೇತಿಸಲ್ಪಡುವ ಕೆಂಪು ವಸ್ತ್ರವು ತಾತ್ವಿಕವಾಗಿಯೂ ಅಲಂಕಾರವಾಗಿಯೂ ಗಮನ ಸೆಳೆಯುತ್ತದೆ. ಅಣಿಯು ಸಾಮಾಜಿಕ, ಸಾಂಸ್ಕೃತಿಕ ಕಾರಣಗಳಿಂದಾಗಿ ರಾಜಂದೈವ, ಮಾಗಣೆದೈವ, ಗ್ರಾಮದೈವಗಳೆಂಬ ದೈವಗಳ ಆರಾಧನೆಯ ಸಂದರ್ಭದಲ್ಲಿ ಬಳಸಲ್ಪಡುತ್ತದೆ. ಅಣಿಯನ್ನು ಬಳಸುವ ದೈವಗಳು ಸಾಮಾಜಿಕವಾಗಿ ಮೇಲ್‌ಸ್ತರವನ್ನು ಪ್ರತಿನಿಧಿಸುತ್ತದೆ. ಹಾಗಾಗಿ ಇದಕ್ಕೆ ಪುರಾವೆಯಾಗಿ ಕೊರಗಜ್ಜ ನುಡಿಗಟ್ಟಿನಲ್ಲಿ ಈ ಮಾತು ಬರುತ್ತದೆ. ಅಡ್ಡೊಗು ಅಣೆಯಿಜ್ಜಿ, ನೀಟೊಗು ಮುಡಿಯಿಜ್ಜಂದಿ ಬಜೀ ಪಜಿ ಮೂರ್ತಿ ಯಾನ್–ಅಂದರೆ ಅಣಿ ಮುಡಿಯನ್ನು ಹೊಂದುವ ಸಾಮರ್ಥ್ಯ ಇಲ್ಲವೆಂಬುದನ್ನು ಈ ಮಾತುಗಳಲ್ಲಿ ಗುರುತಿಸಬಹುದು.

ಪ್ರಧಾನವಾಗಿ ಪಂಜುರ್ಲಿ, ಕೊಡಮಣಿತ್ತಾಯ, ಬಗ್ಗೆದಾಯ, ಕನಪಡಿತ್ತಾಯ, ಮುಡದಾಯ, ಜಾರಂದಾಯ, ಮಲರಾಯ, ಉಳ್ಳಾಲ್ತಿ, ನಾಲ್ಕೈತ್ತಾಯ, ದೈಯೊಂಗುಳು, ಪಂಜಂದಾಯ, ಬಲಾಂಡಿ ಇತ್ಯಾದಿ ಪ್ರಧಾನ ದೈವಗಳಿಗೆ ವರ್ಣರಂಜಿತ ಅಣಿಗಳನ್ನು ರಚಿಸಲಾಗುತ್ತದೆ.

ಕೊಡಮಂದಾಯ ದೈವದ ಅಣಿಯು ಅರ್ಧಮಂಡಲಾಕಾರವಾಗಿ, ಇಲ್ಲವೇ ಚೌಕಾಕೃತಿಯಲ್ಲಿರುತ್ತದೆ. ನಾಲ್ಕೈತ್ತಾಯ ದೈವದ ಅಣಿಯು ಸಾವಿರದ ಒಂದು ಅಡಿಕೆ ಹಾಳೆಯಿಂದ ರಚನೆಯಾಗಿರುವಂತಹುದು. ಇದು ಪೂರ್ತಿ ವೃತ್ತಾಕಾರದಲ್ಲಿದ್ದು ಅಲಂಕಾರಕ್ಕಾಗಿ ಹಾಳೆಯ ಮೇಲೆ ನಾಗರಹಾವಿನ ಹೆಡೆಯ ಚಿತ್ರವನ್ನೂ ಬಿಡಿಸಿರುತ್ತಾರೆ. ಇದು ಪ್ರತಿಷ್ಠೆಯ ಸಂಕೇತ ಇರಬಹುದು. ಇದೇ ರೀತಿಯಲ್ಲಿ ಸಾವಿರದೊಂದು ಹಾಳೆಯ ಅಣಿಯನ್ನು ಬಲಾಂಡಿ ದೈವಕ್ಕೂ ಬಳಸಲಾಗುತ್ತದೆ. ಉಳ್ಳಾಕುಲು, ಉಳ್ಳಾಲ್ತಿ ದೈವಗಳ ಅಣಿಯನ್ನೂ ಅಡಿಕೆ ಹಾಳೆಯಿಂದಲೇ ತಯಾರಿಸಲಾಗುತ್ತದೆ. ದೈಯೊಂಗುಳು ದೈವದ ಅಣಿಯು ಆಕೃತಿಯಲ್ಲಿ ದೊಡ್ಡದಾಗಿರುತ್ತದೆ. ಉದ್ದಕ್ಕೆ ಅದನ್ನು ರಚನೆ ಮಾಡಲಾಗಿದ್ದು, ಅದರ ಮೇಲೆ ಕೆಂಪು ವಸ್ತ್ರದಿಂದ ಮುಚ್ಚಿರುತ್ತಾರೆ, ಆಭರಣಗಳಿಂದ ಅಲಂಕರಿಸಿರುತ್ತಾರೆ. ಹೀಗೆ ದೈವಗಳ ಹಿನ್ನೆಲೆ, ಇತಿಹಾಸಕ್ಕೆ ಸಾಮಾಜಿಕತೆಯನ್ನು ಅನುಸರಿಸಿಕೊಂಡು ಅಣಿಗಳ ರಚನೆ ಮತ್ತು ವಿನ್ಯಾಸಗಳಲ್ಲಿ ಭಿನ್ನತೆಯನ್ನು ಕಾಣಬಹುದು.

ವಿವಿಧ ಬಣ್ಣಗಳಿಂದ ಹಾಳೆಯ ಮೇಲೆ ಬರೆಯುವ ಜನಪದ ಚಿತ್ತಾರಗಳು ಈ ವರ್ಗದವರ ಕಲಾಭಿವ್ಯಕ್ತಿಯನ್ನು ಮಾಡುತ್ತದೆ.

ಗಗ್ಗರ ದೈವಾರಾಧನೆಯ ಕ್ರಿಯಾಚರಣೆಯಲ್ಲಿ ಗಗ್ಗರಸೇವೆ ಪ್ರಮುಖವಾದುದು. ತುಳುನಾಡಿನಲ್ಲಿ ಆರಾಧಿಸಲ್ಪಡುವ ದೈವಗಳಿಗೆ ಸಲ್ಲುವ ಸೇವೆಗಳಲ್ಲಿ ಗಗ್ಗರಸೇವೆಗೆ ಮಹತ್ವವಿದೆ. ದೈವಗಳ ನೇಮದ ಸಂದರ್ಭದಲ್ಲಿ 'ಎಣ್ಣೆ ತೆಗೆದುಕೊಂಡ' ಬಳಿಕ 'ಗಗ್ಗರದೆಚ್ಚಿ' ನಡೆಯುತ್ತದೆ. ಇದು ನೇಮ ವೈಭವದ ಆರಂಭಿಕ ಹಂತ. ಈ ಸಂದರ್ಭದಲ್ಲಿ ಕಟ್ಟಿಕೊಂಡ ಗಗ್ಗರವನ್ನು ನೇಮದುದ್ದಕ್ಕೂ ಧರಿಸಿಕೊಂಡಿರಬೇಕಾಗುತ್ತದೆ. ಗಗ್ಗರ ಭೂತದ ಕಾಲಿಗೆ ಕಟ್ಟುವ ಗೆಜ್ಜೆ. ಇದರಲ್ಲಿ ಎರಡು ವಿಧ. ದರ್ಶನದ ಪಾತ್ರಿಗಳು ಕಾಲಿಗೆ ಧರಿಸುವುದು ಮತ್ತು ದೈವ ನರ್ತಕರು ಕಾಲಿಗೆ ತೊಟ್ಟು ಕೊಳ್ಳುವಂತಹದ್ದು. ಪಾತ್ರಿಗಳ ಗಗ್ಗರಕ್ಕಿಂತ ದೈವ ನರ್ತಕರ ಗಗ್ಗರ ಭಾರವಾಗಿರುವುದು.

ಗಗ್ಗರಧಾರಣೆ ಎಲ್ಲಾ ಭೂತಕ್ಕೂ ಒಂದೇ ಆಗಿರುತ್ತದೆ. ಚಪ್ಪರಂಬು, ತಲೆಮಣಿ ಕಟ್ಟಿದ ನಂತರ ಕಾಲುಗಳಿಗೆ ಗಗ್ಗರ ಧಾರಣೆ (ಬೈದೆರ್ಲು ನೆಮ) ಗಗ್ಗರ ಭೂತಕ್ಕೂ ಒಂದೇ ಆಗಿರುತ್ತದೆ. ಗಗ್ಗರದ ಒಳಗೆ ಕಬ್ಬಿಣದ ಕಾಯಿಗಳಿರುತ್ತದೆ. ಚಿಕ್ಕವಾದರೆ ಐವತ್ತು, ದೊಡ್ಡವಾದರೆ ಇಪ್ಪತ್ತೈದರಿಂದ ಮೂವತ್ತು. ಹೆಚ್ಚಾಗಿ ಕಂಚಿನಿಂದ ಗಗ್ಗರ ತಯಾರಿಯಾಗುತ್ತದೆ. ಕೆಲವೆಡೆ ಬೆಳ್ಳಿಯದು ಇರುವುದು. ಗಗ್ಗರಕ್ಕೆ ಅದರದ್ದೆ ಆದ ವಿಶಿಷ್ಟ ಸ್ವರವಿರುತ್ತದೆ. ಅದು ಅಲೌಖಿಕ ಜಗತ್ತನ್ನು ನಿರ್ಮಿಸುವ ಧ್ವನಿ ಇತರ ಲೋಹಗಳಿಂದ ಇದು ಸಿಗದು. ಆರಂಭದಲ್ಲಿ ನೀರಿನಲ್ಲಿ ನೆನೆ ಹಾಕಿದ ಹಾಳೆಯನ್ನು ಬೇಕಾದಂತೆ ಕತ್ತರಿಸಿ ಕೆಳ ಅಂಚಿನಲ್ಲಿ ಕೊಚ್ಚಿ ಸಜ್ಜುಗೊಳಿಸಿ ಎರಡು ಸುತ್ತುಸುತ್ತಿ ಅದರ ಮೇಲೆ ಇನ್ನೊಂದು ತುಂಡು ಹಾಳೆ ಕಟ್ಟಲಾಗುವುದು. ಇದನ್ನು ಕಾರಪಾಳೆ' ಅಥವಾ 'ಪಾದ ಪಾಳೆ' ಎನ್ನುವರು.

ಗಗ್ಗರವನ್ನು ಅದರ ಹಿಂಬದಿಗೆ ಹಗ್ಗ ಸುರಿದು ಕಟ್ಟಿ ಇದಿರಿಗೆ ಹಗ್ಗಹಾಕಿ ಮುಂದಿನಿಂದ ಕಟ್ಟುತ್ತಾರೆ. ಗಗ್ಗರ ಧರಿಸಲು ಸಭೆಯ ಅನುಮತಿ ಬೇಡಿ ಭೂತವೇಷವು ಕೈಯಲ್ಲಿ ಗಗ್ಗರಗಳನ್ನಾಡಿಸುತ್ತಾ ಹಿಂದಕ್ಕೂ ಮುಂದಕ್ಕೂ ಹಲವು ಬಾರಿ ನಾಟ್ಯಗತಿಯಲ್ಲಿ ಚಲಿಸಿಕಡೆಗೆ 'ಕಾರಪಾಳೆ'ಯ ಮೇಲಕ್ಕೆ ಗಗ್ಗರ ತೊಡುವುದು ಕ್ರಮ. ಈ ನಾಟ್ಯವನ್ನು 'ಗಗ್ಗರಮೆಚ್ಚಿ' ಕರೆಯಲಾಗುವುದು. ಒಂದರ್ಥದಲ್ಲಿ ಇದು ಭೂತದ ರಂಗಪ್ರವೇಶ ಎನ್ನಬಹುದು. ಬಲ ಕಾಲಿಗೆ ಕಟ್ಟುವ ಕಾಲ್ಗ್‌ಡಗಕ್ಕೆ ಆಣ (ಗಂಡಸರ) ಗಗ್ಗರ ಮತ್ತು ಎಡಕಾಲಿಗೆ ಕಟ್ಟುವ ಕಾಲ್ಗ್‌ಡಗಕ್ಕೆ ಪೊಣ್ಣ (ಹೆಣ್ಣು) ಗಗ್ಗರವೆನ್ನುವರು.

ಮಣೆ–ಮಂಚ

ಮಂಚವೆಂದರೆ ದೈವ ದೇವರುಗಳನ್ನಿಟ್ಟು ಆರಾಧನೆ ಮಾಡುವ ಮರದ ಪರಿಕರ. ಇದು ಅತ್ಯಂತ ಪೂಜನೀಯವಾದುದು. ಮನೆ ದೈವಗಳಿಗೆ ಹೆಚ್ಚಾಗಿ ಮದನಕ್ಕೈ ಮಂಚ ಅಥವಾ ಕತ್ತರಿ ಮಂಚ ಅಥವಾ ಉಜ್ಜಾಲ್‌ಗಳಿರುತ್ತಿದ್ದವು. ಮದನಕ್ಕೈ ಮಂಚದಲ್ಲಿ ತುಸು ಎತ್ತರದಲ್ಲಿ ಗೋಡೆಗೆ ಎರಡು ರೀಪು ಜೋಡಿಸಿ ಅದರ ಮೇಲೆ ಹಲಸಿನ ಹಲಗೆಯನ್ನು ಜೋಡಿಸಿಡಲಾಗುವುದು. ಎಲ್ಲಾ ಆರಾಧನಾ ದೈವಗಳನ್ನು ಇದರ ಮೇಲೆ ಇಟ್ಟು ಪೂಜಿಸಲಾಗುತ್ತದೆ. ಇದನ್ನು ಮನೆಯೊಳಗೆ ಚಾವಡಿಯಲ್ಲಿ ಅಥವಾ ಕೋಣೆಯಲ್ಲಿ ಮೂಡು ಅಥವಾ ಬಡಗು ಮುಖ ಮಾಡಿ ಇಡಲಾಗುತ್ತದೆ.

ಕತ್ತರಿ ಮಂಚವು ಎರಡೂವರೆ ಅಡಿ ಎತ್ತರದ ಕಾಲುಗಳುಳ್ಳ ಮಂಚವಾಗಿದ್ದು ಹಲಸು ಅಥವಾ ಸಾಗುವಾನಿ ಮರದಿಂದ ರಚಿಸಲಾಗುವುದು. ಮಂಚದ ಹಿಂಭಾಗಕ್ಕೆ ಒರಗುವ ರೀತಿಯ ತೆಳ್ಳನೆ ಹಲಗೆ ಇರುವುದು. ಇದರ ಎರಡೂ ಬದಿಯ ಕೈಗಳಿಗೆ ವಿವಿಧ ವಿನ್ಯಾಸಗಳ ಮುಖವನ್ನು ಜೋಡಿಸಲಾಗುತ್ತದೆ. ಧೂಮಾವತಿ ದೈವಕ್ಕೆ ಸಿಂಹದ ಮುಖ, ಪಂಜುರ್ಲಿಗೆ ಹಂದಿಯ ಮುಖ, ಜಾರಂದಾಯಕ್ಕೆ ಕುದುರೆಯ ಮುಖವಿರುತ್ತದೆ. ಅಂತೆಯೇ ಪಂಜುರ್ಲಿ ಮಂಚಕ್ಕೆ ಅಡಿಬೀಮು ಹಂದಿ, ಎರಡು ಪಕ್ಕದಲ್ಲಿ ನೆಗಳೆ ಇರುವುದು. ಹಾಗೆಯೇ ಧೂಮಾವತಿ ದೈವಗಳ ಮಂಚದ ಅಡಿಬೀಮು ಆನೆ ಮತ್ತು ಎರಡು ಪಕ್ಕದಲ್ಲಿ ನೆಗಳೆ ಇರುವುದು.

ಕಾಲುಗಳನ್ನು ಹೊಂದಿರದ ಕತ್ತರಿ ಮಂಚದಂತಿರುವ ಇನ್ನೊಂದು ಮಂಚಕ್ಕೆ ಉಜ್ಜಾಲ್ ಮಂಚ ಎನ್ನುವರು. ಇದರ ವೈಶಿಷ್ಟ್ಯವೆಂದರೆ ನಾಲ್ಕು ಮೂಲೆಗಳಿಂದ ಸರಪಳಿಯನ್ನು ಜೋಡಿಸಿ ಇದನ್ನು ಮನೆಯ ಮಾಡಿನ ಜಂತಿಗೆ ತೂಗು ಹಾಕುವರು. ಇದು ಎದೆ ಮಟ್ಟದಲ್ಲಿ ತೂಗುತ್ತಿರುತ್ತದೆ.

ಪ್ರತಿಯೊಂದು ದೈವಗಳ ಮಂಚಗಳಿಗೆ ಲೆಕ್ಕಾಚಾರದಲ್ಲಿ ಅದರ ಉದ್ದಳತೆಯ ವಿನ್ಯಾಸವಿರುವುದು. ಆದರೆ ಇಂದಿನ ದಿನದಲ್ಲಿ ಹಿಂದಿನ ಆಯಾ ಪ್ರಕಾರದ ಲೆಕ್ಕಾಚಾರವನ್ನು ತಿಳಿದವರು ಅತೀ ಕಡಿಮೆ.

ಮಣೆಮಂಚದಲ್ಲಿ ಆರ್ಥಿಕವಾಗಿ ಸಶಕ್ತ ಮನೆತನಗಳು ಮಾತ್ರ ಮೊಗ ಮೂರ್ತಿಯನ್ನಿಟ್ಟು ಆರಾಧಿಸುತ್ತಿದ್ದರು. ಉಳಿದಂತೆ ಎಲ್ಲರೂ ಸಾಂಕೇತಿಕವಾಗಿ ಕಂಚಿನ ಕೂಜಿಯಲ್ಲಿ ನೀರಿಟ್ಟು ಕೈ ಮುಗಿಯುತ್ತಿದ್ದರು. ಏಣೆಲು ಬೇಸಾಯಕ್ಕೆ

ಎತ್ತು ನೊಗ ನೇಗಿಲು ಗದ್ದೆಗೆ ಇಳಿಯಬೇಕಾದರೆ ನಂಬುವ ಮಣೆಮಂಚದ ದೈವಗಳಿಗೆ ಬೋಗ ತಂಬಿಲ ಕೊಟ್ಟು ಅವರ ಅಪ್ಪಣೆ ಪಡೆಯಬೇಕು.

ಹಿಮ್ಮೇಳ ಪರಿಕರಗಳು

ದುಡಿ, ತೆಂಬರೆ, ತಾಸೆ, ಡೋಲು, ತಮ್ಮಡಿ, ಸಮ್ಮೇಳ ಶ್ರುತಿ, ನಾಗಸ್ವರ(ಸೇರೆಗಾರ) ಮುಖ್ಯವಾಗಿ ಭೂತಾರಾಧನೆಯಲ್ಲಿ ಬಳಕೆಯಾಗುವುದು.

ತೆಂಬರೆ

ಭೂತ ಮಾಧ್ಯಮದ ಜನಾಂಗಗಳಾದ ನಲಿಕೆ, ಪರವ ಮತ್ತು ಪಂಬದರಲ್ಲಿ ತೆಂಬರೆಯ ಬಳಕೆ ಇದೆ. ನಲಿಕೆಯವರ ತೆಂಬರೆ ಕುಣಿತ ಪ್ರಕಾರಗಳಲ್ಲಿಯೂ ಬಳಕೆ ಮಾಡುವರು. ಹೊನ್ನೆಮರದ 'ಕಲಸ' (ಹೊರಕವಚ) ಉಪಯೋಗಿಸಿ ತಯಾರಿಸುವ ಒಂದು ಚರ್ಮ ವಾದ್ಯ. ಕಲಶದ ಹೊರಮೈ ಉದ್ದ ಸಾಧಾರಣ ೧೪ ಇಂಚು.ವ್ಯಾಸ ಸುಮಾರು ೮ ಇಂಚು ಇರುತ್ತದೆ. ಆಡಿನ ಅಥವಾ ಕುರಿಯ ಚರ್ಮವನ್ನು ಉಪಯೋಗಿಸುವರು. ಆಡಿನ ಚರ್ಮವಾದರೆ ಲಯಕ್ಕೆ ತಕ್ಕುದಾದ ಸ್ವರ ಬರುವುದೆನ್ನುವರು.

ದೈವಾರಾಧನೆಯು ರಾತ್ರಿಯಲ್ಲಿ ನಡೆಯುವ ಪ್ರಕ್ರಿಯೆ. ಇದರಲ್ಲಿ ಹಾಡು, ಕುಣಿತ, ನಾದಗಳು ಬೆರೆತಿರುತ್ತವೆ. ತೆಂಬರೆಯು ಭೂತಾರಾಧನೆಯ ಸಂದರ್ಭದಲ್ಲಿ ಬಳಸಲಾಗುವ ಚರ್ಮವಾದ್ಯ ಪರಿಕರ. ಇದನ್ನು ಕೋಲ ನೇಮ ಕಟ್ಟುವ ಮಂದಿ ಪಾಡ್ದನ ಹೇಳುವ ಸಂದರ್ಭಗಳಲ್ಲಿ ಪಾಡ್ದನದ ಲಯಕ್ಕೆ ಅನುಸಾರವಾಗಿ ಬಡಿಯುತ್ತಾರೆ. ಪಾಡ್ದನ ಹೇಳುವಿಕೆಯಲ್ಲಿ, ತೆಂಬರೆ ಬಾರಿಸುವಿಕೆಯಲ್ಲಿ ಆ ಸಮುದಾಯದ ಪುರುಷರು ಮಾತ್ರವಲ್ಲದೆ, ಸ್ತ್ರೀಯರೂ ಪಾಲ್ಗೊಳ್ಳುತ್ತಾರೆ. ಅಂದರೆ ಇಬ್ಬರು ಪಾಡ್ದನ ಹೇಳುವಿಕೆ ಹಾಗೂ ಅವರಲ್ಲೊಬ್ಬರು ತೆಂಬರೆ ಬಾರಿಸುವಿಕೆಯಲ್ಲಿ ಪಾಲ್ಗೊಳ್ಳುತ್ತಾರೆ. ತೆಂಬರೆ ಬಾರಿಸಲು ಕೋಲನ್ನು ಉಪಯೋಗಿಸುವರು.

ದುಡಿ

ದುಡಿ ಒಂದು ಚರ್ಮ ವಾದ್ಯ. ಇದು ಮುಗೇರ, ಮನ್ಸ ಮತ್ತು ಮಾಯಿಲ ಜನಾಂಗದವರಲ್ಲಿ ಕಂಡು ಬರುವುದು. ಆ ಜನಾಂಗದ ಗಂಡಸರೇ ತಯಾರಿಸುತ್ತಾರೆ. ಗೇರು, ಕಳ್ಳಿ, ಕನಪಾಡಿ, ಹಲಸು, ಕುಮ್ರಿ, ಹೊನ್ನೆ ಮರಗಳಿಂದ ಮಾಡುತ್ತಾರೆ. ಕಾಚಿ, ಸಾಗುವಾನಿ ಮರಗಳಿಂದ ಮಾಡಲಾಗುತ್ತಿದ್ದರೂ ಇವು ಗಟ್ಟಿ ಮರ, ಕೊರೆಯುವುದಕ್ಕೆ ಕಷ್ಟ. ಕಳ್ಳಿ ಮತ್ತು ಕನಪ್ಪಾಡಿ ಮರಗಳಿಗೆ ಶಾಸ್ತ್ರ ಜಾಸ್ತಿ. ಅಂದರೆ ಇವುಗಳನ್ನು ಮುಚ್ಚುವಾಗ ಕೆಲವು ಕಟ್ಟುಪಾಡುಗಳಿವೆ. ಐದು ವೀಳ್ಯದೆಲೆ, ಅಡಿಕೆ, ಒಂದೂ ಕಾಲು ರೂಪಾಯಿ ಮತ್ತು ಸಾರಾಯಿಯನ್ನು ಇಟ್ಟು ಕುಲದೈವಗಳಾದ 'ಮುದ್ದ–ಕಳಲ' ರಿಗೆ ಕೈ ಮುಗಿದು ಪ್ರಾರ್ಥಿಸಿ ಮುಚ್ಚಬೇಕು ಮತ್ತು ಮಂಗಳವಾರ ಮಾತ್ರ

ಮುಚ್ಚಬೇಕು. ಸೂತಕದ ಹೆಂಗಸರು ಕಳ್ಳಿ, ಕನಪ್ಪಾಡಿಯಿಂದ ಮಾಡಿದ ದುಡಿಗಳನ್ನು ಮುಟ್ಟಬಾರದು. ಹೆಚ್ಚಾಗಿ ದುಡಿಗೆ ಹಲಸು ಅಥವಾ ಕುಮ್ರಿ ಮರಗಳನ್ನೇ ಉಪಯೋಗಿಸುತ್ತಾರೆ. ಸಾಕಷ್ಟು ಉದ್ದ, ದಪ್ಪದ ತುಂಡನ್ನು ಕೆಲವು ದಿನ ನೀರಿನಲ್ಲಿ ಹಾಕಿಟ್ಟು ನಂತರ ಹೊರಗಿನಿಂದ ಕೆತ್ತಿ ರೂಪ ಕೊಡುವುದಲ್ಲದೆ ಒಳಗಿನಿಂದ ಕೊರೆದು ಟೊಳ್ಳಾಗಿಸುತ್ತಾರೆ.

ದುಡಿಯ ಉದ್ದ ಸಾಮಾನ್ಯವಾಗಿ ಎರಡು ಗೇಣು ಅಂದರೆ ಸುಮಾರು ೧೪ರಿಂದ ೧೫ ಇಂಚು. ದುಡಿಯ ಎರಡೂ ಬದಿ ಅಂದರೆ ಬಾಯಿ ವೃತ್ತಾಕಾರವಾಗಿ ಅಗಲವಾಗಿದ್ದು ಇದರ ವ್ಯಾಸ ಸುಮಾರು ಒಂದು ಗೇಣು ಅಂದರೆ ೭ ರಿಂದ ಏಳೂವರೆ ಇಂಚು. ಮಧ್ಯಭಾಗ ಸಪೂರವಾಗಿದ್ದು ಇದರ ಸುತ್ತಳತೆ ಸುಮಾರು ಸುಮಾರು ೮ ರಿಂದ ೯ ಇಂಚು. ಗಾತ್ರದಲ್ಲಿ ಇದಕ್ಕಿಂತ ಚಿಕ್ಕ ದುಡಿಗಳು ಕೂಡಾ ಇರುತ್ತದೆ. ದುಡಿಯ ಗಾತ್ರ ದುಡಿ ರಚಿಸುವವನ ಕೈ ಬೆರಳಿಗೆ ಅನುಗುಣವಾಗಿ ದೊಡ್ಡದು ಅಥವಾ ಚಿಕ್ಕದು ಆಗುವುದು ಸಾಮಾನ್ಯ. ದುಡಿಯನ್ನು ಚರ್ಮದಿಂದ ಮುಚ್ಚುವ ಮೊದಲು ಅದನ್ನು ದುಡಿ ಎಂದು ಹೇಳುವುದಿಲ್ಲ. ಅದನ್ನು 'ದುಡಿಯಕರ' (ಮಡಕೆ) ಎಂದು ಹೇಳುತ್ತಾರೆ. ದುಡಿಯ ಎರಡೂ ಬಾಯಿಗಳನ್ನು ಮುಚ್ಚಿ ಅದನ್ನು ನುಡಿಸಲು ಯೋಗ್ಯವಾದ ಬಳಿಕವಷ್ಟೆ 'ದುಡಿ' ಎಂದು ಕರೆಯಲಾಗುತ್ತದೆ. ಇದನ್ನು ಮಂಗ, ಉಡು, ನರಿ, ಕಾಡುಬೆಕ್ಕು, ಮುಸುಗಳ ಚರ್ಮದಿಂದ ದುಡಿಯ ಎರಡೂ ಬದಿಯನ್ನು ಮುಚ್ಚುವರು. ಚರ್ಮವನ್ನು ಗಟ್ಟಿಯಾಗಿ ಕೂರಿಸುವುದಕ್ಕೆ ದುಡಿಯ ಬಾಯಿಗೆ ಸರಿಹೊಂದುವಂತೆ ಒಂದು ವೃತ್ತಾಕಾರದ ಬಳೆಯನ್ನು ಬಿದಿರು ಅಥವಾ ಮಾದೇರು ಬಳ್ಳಿಯಿಂದ ತಯಾರಿಸುತ್ತಾರೆ. ಇದಕ್ಕೆ ಅಟ್ಟೆ ಅಥವಾ ದುಡಿಬಳೆ ಎನ್ನುವರು. ಈ ಬಳೆಯ ಒಳಗಿನಿಂದ ತೆಳುವಾದ ಕನ್ನಿಯನ್ನು ಬೆತ್ತ ಅಥವಾ ಬಿದಿರಿನಿಂದ ಮಾಡಿ ಹೊಂದಿಸಲಾಗುತ್ತದೆ. ಚರ್ಮವನ್ನು ದುಡಿ ಬಳೆಯ ಹೊರಗಿನಿಂದ ಹೊದಿಸಿ, ದುಡಿ ಬಳೆ ಮತ್ತು ಕನ್ನಿಯ ಮಧ್ಯಭಾಗದಲ್ಲಿ ಗಟ್ಟಿಯಾಗಿ ಕೂರಿಸಲಾಗುತ್ತದೆ.

ದುಡಿಯ ಎರಡೂ ಭಾಗಕ್ಕೂ ಒಂದೇ ಜಾತಿಯ ಮೃಗಗಳ ಚರ್ಮವನ್ನು ಹೊದಿಸುವುದಿಲ್ಲ. ದನದ ಚರ್ಮ ಉಪಯೋಗಿಸುವುದಕ್ಕೆ ನಿಷೇಧವಿದೆ. ದುಡಿಯ ಸಪೂರವಿರುವ ಮಧ್ಯಭಾಗದಲ್ಲಿ ಗಾಳಿ ಹೋಗಲು ಸಣ್ಣ ರಂಧ್ರವನ್ನು ಕೊರೆಯುತ್ತಾರೆ.[೨೦]

ಮುಚ್ಚಿಗೆಯನ್ನು ದಡ್ಡಾಳದ ನಾರಿನಿಂದ ತಯಾರಿಸಿದ ಹಗ್ಗದಿಂದ ನೇಯ್ದು ಕಟ್ಟುತ್ತಾರೆ. ಇದರ ತುದಿಗೆ ಮರದ ಕುಟ್ಟಿಯನ್ನು ಜೋಡಿಸುತ್ತಾರೆ. ದುಡಿಯನ್ನು ಬಾರಿಸಲು ಬಾಗಿದ ಬೆತ್ತ ಅಥವಾ ಮರದ ಕೋಲುಗಳನ್ನು ಉಪಯೋಗಿಸುವರು. ದುಡಿಯನ್ನು ವಾರ್ಷಿಕಾವರ್ತನದ ಕುಣಿತ ಪ್ರಕಾರಗಳಲ್ಲಿಯೂ ಬಳಸಲಾಗುವುದು. ಪ್ರತಿ ಮುಗೇರ ಜನಾಂಗದ ಮನೆಯಲ್ಲೂ ದುಡಿಯನ್ನು ಗುಡಿಸಲಿನ ಕಂಬದಲ್ಲಿ ನೇತಾಡಿಸಿಡುತ್ತಿದ್ದರು. ಮನೆಯ ಗಂಡಸರು ಸತ್ತರೆ, ಅವರೊಂದಿಗೆ ದುಡಿಯನ್ನು ದಫನ ಮಾಡಲಾಗುತ್ತಿತ್ತು.

ಡೋಲು

ಮನ್ಸರು ಮತ್ತು ಕೊರಗ ಜನಾಂಗದವರು ತಮ್ಮ ಕುಣಿತಗಳಲ್ಲಿ ಉಪಯೋಗಿಸುವ ಪರಿಕರವಿದು. ಕರೆಂಗೋಲು ಕುಣಿತದಲ್ಲಿಯೂ ಉಪಯೋಗಿಸಲಾಗುವುದು. ಸಾಮಾನ್ಯವಾಗಿ ಕೊರಗರು ಡೋಲುಗಳನ್ನು ಕಂಬಳ, ಕೋಲ, ಸಾವು ಮೊದಲಾದುವುಗಳ ಸಂದರ್ಭದಲ್ಲಿ ನುಡಿಸುವುದು ವಾಡಿಕೆ. ಆದರೆ ಉಡುಪಿ ಸಮೀಪದ ಹಿರಿಯಡಕದ ಪಡ್ಡಮ ಬೀಡಿನಲ್ಲಿರುವ ಕೊರಗರು ಒಂದು ಡೋಲನ್ನು ಬೈದರ್ಲೆ ಕೋಲದಲ್ಲಿ ಮಾತ್ರ ನುಡಿಸುವರು. ಹಲಸಿನ ಕಳಸಿಗೆಯಿಂದ ಡೋಲಿನ ಹೊರ ಕವಚವನ್ನು ತಯಾರಿಸುತ್ತಾರೆ.

ಗುಜ್ಜಣಿಗೆ

ದೀವಟಿಕೆಗೆ ಹೊಯ್ಯಲಿಕ್ಕೆ ಬೇಕಾದ ಎಣ್ಣೆಯಿಂದ ತುಂಬಿರುವ ಚೂಪಾದ ಬಾಯಿಯ ಹಿತ್ತಾಳೆ ಅಥವಾ ಕಂಚಿನ ಪಾತ್ರೆ, ಕರಜನ (ಒಡವೆ ಇಡುವ ಪಾತ್ರೆ), ಸಿಂಗದನ (ಭಂಡಾರದ ಮನೆಯಿಂದ ತರಲಾಗುವ ದೈವದ ಭಂಡಾರಗಳನ್ನು ನೇಮ ನಡೆಯುವ ಸ್ಥಳದಲ್ಲಿ ಇಡಲಾಗುತ್ತದೆ) **ಕೂಚಿ** (ಕಂಚಿನ ದೈವಕ್ಕೆ ಮಂಚದಲ್ಲಿ ನೀರಿಡುವ ಪರಿಕರ, ಸಾನದಿಗೆ, ಜೀಟಿಗೆ, ಸೂಟೆ, ತೂಗುದೀಪ ವೇಷಭೂಷಣ ಇತ್ಯಾದಿ ದೈವಕ್ಕೆ ಸಂಬಂಧಪಟ್ಟ ಪರಿಕರಗಳು.

ಜಿಡ್ಡೆ

ದೈವ ನರ್ತಕರು ಕುಣಿತವಾದ ಮೇಲೆ ನಿಂತಿರುವ ಭಂಗಿಯಲ್ಲಿ ಕುಳಿತುಕೊಳ್ಳುವ ಪೀಠಕ್ಕೆ ಜಿಡ್ಡೆ ಎನ್ನಲಾಗುವುದು. ೩ ಅಡಿ ಎತ್ತರ ೧೨ ಅಂಗುಲ ವ್ಯಾಸವಿರುವ ಉತ್ತಮ ಜಾತಿಯ ಮರದಿಂದ ಇದನ್ನು ತಯಾರು ಮಾಡುವರು.

ಅಲಂಕಾರಿಕ ವಸ್ತುಗಳು

ಚಲ್ಲಣ ಗೆಜ್ಜೆ: ಕೆಂಪು ಪಟ್ಟಿಯಲ್ಲಿ ಕೋತ ಗೆಜ್ಜೆಗಳುಳ್ಳ ಸೊಂಟಕ್ಕೆ ಕಟ್ಟುವ ಆಭರಣ

ಪಾಟ್ಲೆ: ಬಲಕೈ ಬಳೆ

ಬಳೆ: ಎಡ ಕೈ ಬಳೆ

ಕೆಬಿಮಾಣಿ: ಕಿವಿಯ ಆಭರಣ

ಡಾಬು: ಸೊಂಟಕ್ಕೆ ಕಟ್ಟುವ ನೇವಳ

ತಲೆಪಟ್ಟಿ: ತಲೆಯ ಕೆಂಪು ಬಣ್ಣದ ಪಟ್ಟಿ

ತಲೆಮಣಿ: ತಲೆಯ ಆಭರಣ

ತಲೆಪಟ್ಟಿದ ಕೆಬಿ: ತಲೆಪಟ್ಟಿಯಲ್ಲಿರುವ ಕಿವಿಯಾಕಾರದ ರಚನೆ

ನಾಗರಬಾಯಿ: ತಲೆಪಟ್ಟಕ್ಕೆ ಕಟ್ಟುವ ಆಭರಣ

ಮುನ್ನಿ: ಸೊಂಟಕ್ಕೆ ಕಟ್ಟುವ ಹಾಳೆಯ ಅಲಂಕಾರ

ದೈವದ ಶಿರೋಭೂಷಣ, ಅಣಿಗಳಲ್ಲಿ ಧ್ವಜಗಳ ವಿನ್ಯಾಸ, ದೋಣಿಯ ಆಕೃತಿ ಇತ್ಯಾದಿ ಇದ್ದರೆ ಆ ದೈವಸ್ಥಾನದ ಅಧಿಕಾರಿಗಳು ಹಾಗೂ ಕುಟುಂಬದ ಮೂಲಪುರುಷರು ಹಡಗಿನ ಮೂಲಕ ವ್ಯಾಪಾರ ಇದ್ದವರು ಎಂದು ಅರ್ಥ ಮಾಡಿಕೊಳ್ಳಬಹುದು.[೨೧]

'ನೆಲಕೆ ನಿಗುರುವ ಗಂಗೆವಾಳದ

ಬಿಳಿಯ ಚೌರಿಗಳುಳಿವ ಗಂಟೆಯ

ತೊಳಪ ಬದ್ದುಗೆ ದಾರ ಕಾಂಚನಮಯದ ಗೊಂಡೆಯದ

ಉಲಿವ ಗೆಜ್ಜೆಯ ಚಲ್ಲಣದ ಹೊಂ

ಬಳಿದ ಹರಿಗೆಯ ಹೊಳೆವ ಕಡಿತಲೆ

ಗಳ ವಿಲಾಸದೊಳಂದು ಹೊಕ್ಕುದು ತುಳುವಪಡೆ ಕಡುಗಿ//ಭೀಷ್ಮ ಪರ್ವ, ಪದ್ಯ ೩೪

ಮಡವ ಮೀರುವ ಕಚ್ಚೆಮಂಡಿಯ

ಪಡಿದೊಡೆಯ ಕಲಿಮರೆಯ ಹರಿಗೆಯ

ಕಡಿತಲೆಯ ಕಲಿತುಳುವ ಪಡೆ ಹೊಯ್ದಾಡಿತಿಳೆಹಿಳಿಯೆ / ಭೀಷ್ಮ ಪರ್ವ ೩೮ ಪದ್ಯ ಪುಟ ೩೬೫

ಹಿಂದಿನ ತುಳುವ ಯೋಧರು ಬಳಸುತ್ತಿದ್ದ ಉಡುಗೆ ತೊಡುಗೆಗಳು ಇಂದಿನ ಭೂತಾರಾಧನೆಯಲ್ಲಿ ಕಂಡು ಬರುವುದು. ಒಟ್ಟಿನಲ್ಲಿ ಭೂತಾರಧನೆಯಲ್ಲಿ ಆಡಳಿತ ಕ್ರಮ, ಸಾಮಾಜಿಕ ರಚನೆಯ, ಜೀವನ ಮೌಲ್ಯಗಳ, ನಂಬಿಕೆ, ನಡವಳಿಕೆಗಳು, ಆಚಾರವಿಚಾರಗಳ ಕುರಿತಾದ ಸಮಗ್ರ ಚರಿತ್ರೆ ತಿಳಿದು ಬರುತ್ತದೆ.

೬.೩.೨ ಕಂಬಳ

ಒಂದು ಪ್ರಾಚೀನ ಕ್ರೀಡೆ. ೪ನೇಯ ಶತಮಾನದಲ್ಲಿ ಆಳಿದ್ದ ಅರಸರು ಮನೋರಂಜನೆಗಾಗಿ ಅರಸು ಕಂಬಳಗಳನ್ನು ಏರ್ಪಡಿಸುತ್ತಿದ್ದರು.[೨೨] (ವಾಮನ ನಂದಾವರ, ೧೯೮೭, ಸಿಂಗದನ) ಅಧಿಕಾರದ ಕೇಂದ್ರ ಸ್ಥಾನಗಳಾದ ಅರಸರುಗಳು, ಗುತ್ತಿನವರ, ಯಜಮಾನಿಕೆ ನಡೆಸುತ್ತಿದ್ದವರಲ್ಲಿ ದೊಡ್ಡ ಗದ್ದೆಗಳಿದ್ದು ಅವರುಗಳೇ ಹೆಚ್ಚಾಗಿ ಕಂಬಳ ನಡೆಸುತ್ತಿದ್ದರೆನ್ನಲಾಗಿದೆ.

ಕಂಬಳದ ಸ್ಪರ್ಧೆಗಳಲ್ಲಿ– ಬಲ್ಲ್‌ದವು, ನೇಗಿಲ ಓಟ, ಅಡ್ಡಪಲಯಿ, ಕನೆಪಲಯಿ ಎಂಬ ನಾಲ್ಕು ವಿಧಗಳಿವೆ. ಇವೆಲ್ಲದರಲ್ಲಿ ಬಳಸಲಾಗುವ ಪರಿಕರಗಳನ್ನು ಉಲ್ಲೇಖಿಸಿಯೇ ಸ್ಪರ್ಧೆಗಳನ್ನು ವಿಂಗಡಿಸಲಾಗಿದೆ. ಮೊದಲನೆಯದರಲ್ಲಿ ನೊಗಹೊತ್ತ ಎರಡು ಕೋಣಗಳ ನಡುವೆ ಕಟ್ಟಿರುವ ಹಗ್ಗವನ್ನು ಹಿಡಿದು ಓಡಿಸುವುದು

(ಬಲ್ಲ್‌ದವ್= ಹಗ್ಗದಿಂದ). ಇದು ಹಗ್ಗದ ಓಟ. ಎರಡನೇಯ ನೇಗಿಲ ಓಟದಲ್ಲಿ ನೊಗಕ್ಕೆ ನೇಗಿಲು ಕಟ್ಟಿ ಓಡಿಸುವುದು ರೂಡಿ. ಮೂರನೇಯ ಸ್ಪರ್ಧೆಯಲ್ಲಿ ಅಂದರೆ ಅಡ್ಡ ಪಲಾಯಿ (ಅಡ್ಡ ಹಲಗೆ) ಯಲ್ಲಿನೊಗಕ್ಕೆ ಕಟ್ಟಿದ ಹಲಗೆಯ ಮೇಲೆ ನಿಂತು ಓಡಿಸುವುದು ಮತ್ತು ನಾಲ್ಕನೇಯ ಕನೆಪಲಾಯಿ ಸ್ಪರ್ಧೆಯಲ್ಲಿ ಕಣೆಹಲಗೆಯ ಮೇಲೆ ನಿಂತು ಅದರಲ್ಲಿರುವ ತೂತುಗಳ ಮೂಲಕ ನೀರು ಮೇಲೆ ಕಟ್ಟಿದ ನಿಶಾನೆಗೆ ಹಾರುವಂತೆ ಕೋಣಗಳನ್ನು ಓಡಿಸುವುದು. ಇಲ್ಲಿ ಭೌತಿಕ ಪರಿಕರಗಳಾದ ನೊಗ, ನೇಗಿಲು, ಹಲಗೆ, ಕನೆಹಲಗೆ, ಹಗ್ಗ ಮುಂತಾದವುಗಳನ್ನು ಉಪಯೋಗಿಸಲಾಗುತ್ತದೆ.

ಸಾಧಾರಣವಾಗಿ ಉಳುಮೆಗೆ ಬಳಸುವ ನೊಗಕ್ಕಿಂತ ದೊಡ್ಡದಾದ ನೊಗಗಳನ್ನು ಕಂಬಳದಲ್ಲಿ ಬಳಸಲಾಗುತ್ತದೆ. ಕಂಬಳದ ಕೋಣಗಳಿಗೆ ಅಲಂಕಾರ ಮಾಡುವ ಸಲಕರಣೆಗಳು ಕೂಡ ವಿಶೇಷವಾಗಿವೆ. ಕೋಣದ ಬೆನ್ನಿಗೆ ಹಾಸುವ ಬಣ್ಣದ ಬಟ್ಟೆಗಳನ್ನು 'ಪಾವಡೆ' ಎಂದು ಕರೆಯಲಾಗುತ್ತದೆ. ಖಡ್ಗಕ್ಕೆ ಹಾಕುವ ರೀತಿಯ ಒರೆಯನ್ನು ಕೋಣದ ಕೋಡಿಗೆ ಕೆಲವರು ಹಾಕುತ್ತಾರೆ. ಅದಕ್ಕೆ 'ಕೋಡಣಸು' ಎಂದು ಹೆಸರು. ಕೊರಳಿಗೆ ಕಾಸರಕನ ಮರದ ಚಿಗುರನ್ನು, ದೊಡ್ಡ ಗೆಜ್ಜೆಗಳನ್ನು, ಕಟ್ಟುತ್ತಾರೆ. ಕೋಣಗಳ ನೆತ್ತಿಗೆ 'ನೆತ್ತಿ ಬಲ್ಲ್' ಎಂಬ ಹಗ್ಗವನ್ನು ಬಿಗಿಯಲಾಗುತ್ತದೆ. ಕೊರಳಿಗೆ ಕಟ್ಟುವ ಹಗ್ಗ 'ಜೂಲಿ' ಹಾಗೂ ಮೂಗಿಗೆ ಹಾಕುವ ಹಗ್ಗವು 'ಮೂಂಕುದಾರ'/ದುಡಿಪಣೆ ಹಾಕುತ್ತಾರೆ. ದೃಷ್ಟಿ ಬೀಳದಿರಲೆಂದು ಕೊರಳಿಗೆ ಅಥವಾ ಬಲದ ಕಾಲಿಗೆ ಚಪ್ಪಲಿ ಚೂರನ್ನು ಅಥವಾ ಕೊರಳಿಗೆ ತಾಯಿತವನ್ನು ಕಟ್ಟುವುದಿದೆ.

ಕಂಬುಲವು ಕೇವಲ ಓಟದ ಕೋಣಗಳ ಸ್ಪರ್ಧೆಯೂ ಅಲ್ಲ, ಜನಪದರ ಮನರಂಜನಾ ಸಾಮಾಗ್ರಿಯೂ ಅಲ್ಲ, ಬದಲಾಗಿ ಸಾಮಾಜಿಕ, ಆರ್ಥಿಕ, ರಾಜಕೀಯ ಆಯಾಮವುಳ್ಳ ಫಲವಂತಿಕೆಯ ಆಚರಣೆ ಎಂಬುದು ಖಚಿತವಾಗುತ್ತದೆ.[೨೩]

ಒಂದು ಹಳ್ಳಿಯಲ್ಲಿ ನಡೆಯುವ ಕಂಬಳದ ಸುತ್ತಮುತ್ತ ನಡೆಯುವ ಕ್ರೀಯೆಗಳನ್ನು ಈ ರೀತಿಯಾಗಿ ಗುರುತಿಸಬಹುದು. ತುಳುನಾಡಿನಲ್ಲಿ ಕಾಣ ಬರುವ ಭೂತಾರಾಧನೆ, ಕೋಳಿಕಟ್ಟ ಮತ್ತು ನಾಗಾರಾಧನೆಗೆ ನೇರ ಸಂಬಂಧವನ್ನು ಗುರುತಿಸಬಹುದು ಎನ್ನುತ್ತಾರೆ ಅಭಯ್ ಕುಮಾರ್ ಕೌಕ್ರಾಡಿ[೨೪].

"ಕಂಬಳವು ಕೇವಲ ಒಂದು ಮನೋರಂಜಕ ಕ್ರೀಡೆ ಅಲ್ಲ. ಕೃಷಿ ವಾಡಿಕೆಗಳು, ಜನಪದ ನಂಬಿಕೆಗಳು, ಸಾಮಾಜಿಕ ಶ್ರೇಣೀಕೃತ ವ್ಯವಸ್ಥೆ ಮತ್ತು ರಾಜಕೀಯಗಳು ಸೇರಿದ ಒಂದು ಆಚರಣೆ ಹಾಗೂ ಸ್ಪರ್ಧಾಪರಂಪರೆಯನ್ನು ಅದು ಬಿಂಬಿಸುತ್ತದೆ.[೨೫] ಕಂಬಳ ಗದ್ದೆಯ ಮೊದಲ ಉಲ್ಲೇಖವು ೧೫ನೆಯ ಶತಮಾನದ ಒಂದು ಶಾಸನದಲ್ಲಿ ದೊರಕುತ್ತದೆ. ಸುರಾಲು ಅರಮನೆಗೆ ಸೇರಿದ ೧೯೧೧ರ ತಾಮ್ರ ಶಾಸನವು ಹೊಸದಾಗಿ ರೂಪಿಸಲಾದ ಕಂಬಳಗದ್ದೆಯನ್ನು ಸೂಚಿಸುತ್ತದೆ.[೨೬]

ಪೂಕರೆ ಆಚರಣೆಯನ್ನು 'ಕಂಡೊದ ಮದ್ಮೆ' ಎನ್ನುವುದು ಔಚಿತ್ಯಪೂರ್ಣವಾಗಿದೆ. "ಸೂಳೆಗ್ ಏಕರೆ ಪೊರ್ಲು, ಕಂಡೊಗು ಪೂಕರೆ ಪೊರ್ಲು" ಕೃಷಿಮೂಲ ಆಚರಣೆಗಳು ಕಾಲಾನುಕ್ರಮಣಿಕೆಯ ಹಿನ್ನೆಲೆಯಲ್ಲಿ

ನಡೆಯುತ್ತವೆ. ಆ ದೃಷ್ಟಿಯಿಂದ ಕೆಡ್ಡಸ ಋತುಮತಿ ಭೂಮಿಯನ್ನು ಫಲದಾಯಿಯಾಗುವಂತೆ ಹಾರೈಸುವ ಆಚರಣೆಯಾಗಿರುವುದರಿಂದ ಅನಂತರದ ಆಚರಣೆ ಸೃಷ್ಟಿಕ್ರಿಯೆಗೆ ಕಾರಣವಾಗುವ ಮದುವೆಯ ಕಲ್ಪನೆಯಾಗಿರುವುದು ಸಹಜವಾಗುತ್ತದೆ. ಪೂಕರೆ ಆಚರಣೆಯಲ್ಲಿ ಪೂಕರೆ ಮತ್ತು ಬಂಗಾರದ ಪೆಟ್ಟಿಗೆಯನ್ನು ಮೆರವಣಿಗೆಯಲ್ಲಿ ತರುವುದು ಸಂಪ್ರದಾಯ. ಪೂಕರೆ ಕಂಬವನ್ನು ಹಳದಿ ಬಣ್ಣದ ಚೆಂಡು ಹೂವು, ಪಿಂಗಾರ, ಬಿಳಿ ಬಣ್ಣದ ಪಾದೆ ಹೂಗಳಿಂದ ಅಲಂಕಾರಿಸುವುದು, ಪೂಕರೆ ಕಂಬದ ಮೊದಲ ಅಂಕಣವನ್ನು ತೊಟ್ಟಿಲ ಅಂಕಣವೆಂದು ಕರೆಯುವುದು. ಸೃಷ್ಟಿಕ್ರಿಯೆಗೆ ಪೂರಕವಾದ 'ಮದುವೆ'ಯ ಕಲ್ಪನೆಯನ್ನು ವ್ಯಕ್ತಪಡಿಸುವ ಅಂಶಗಳಾಗುತ್ತವೆ.

ಕೆಲವು ಪ್ರದೇಶಗಳಲ್ಲಿ ಪೂಕರೆಯ ಮರ ಶಾಶ್ವತವಾದ ಕಂಬವಾದರೆ ಬಹುತೇಕ ಕಡೆಗಳಲ್ಲಿ ಆಯಾ ಸಂದರ್ಭಕ್ಕಾಗಿ ನೆಡುವ ಕಂಬವಾಗಿರುತ್ತದೆ. ಅವುಗಳು ಕಂಗಿನ ಮರದಿಂದ ತಯಾರಿಸಿದ್ದೇ ಹೆಚ್ಚಿನ ಕಡೆಗಳಲ್ಲಿ ಕಾಣಿಸುತ್ತದೆ. ಪೂಕರೆ ಹಾಕುವ ಹಿಂದಿನ ದಿನ ಸಂಜೆ ಜೀವಂತವಾಗಿರುವ ಕಂಗಿನ ಮರವೊಂದನ್ನು ಕಡಿದು ತಂದು ಪೂಕರೆ ಗದ್ದೆಯ ಮೇಲ್ಭಾಗದಲ್ಲಿ ಹಾಕುತ್ತಾರೆ. ಈ ಮರದಿಂದ ಬಡಗಿ ಜನಾಂಗದವರು ಪೂಕರೆಯನ್ನು ತಯಾರಿಸುತ್ತಾರೆ. ಉದ್ದವಾದ ಕಂಬವನ್ನು ನಯವಾಗಿ ಕೆತ್ತಿ, ಅದಕ್ಕೆ 'ನಿಲೆ' ಜೋಡಿಸುತ್ತಾರೆ. ಅದನ್ನು 'ತೊಟ್ಟಿಲುನಿಲೆ' ಎನ್ನುವರು. ತ್ರಿಭುಜಾಕೃತಿಯಲ್ಲಿ ಉಳಿದ ನಿಲೆಗಳನ್ನು ಸಿಕ್ಕಿಸುತ್ತಾರೆ. ಬಡಗಿಯ ಕೆಲಸವಾದ ಬಳಿಕ ಪೂಜಾರಿ ಜನಾಂಗದವರು ಅದರ ತುದಿಗೆ ಹಿಂಗಾರ ಇಡುತ್ತಾರೆ. ಕ್ಷೌರಿಕ ಜನಾಂಗದವರು ಚೆಂಡುಹೂ, ಪಾದೆಹೂ, ಕೇಪಳ ಹಾಗೂ ಇತರ ಹೂಗಳಿಂದ ಅಲಂಕರಿಸುತ್ತಾರೆ. ಈ ಸಂದರ್ಭದಲ್ಲಿ ಪೂಕರೆ ಕಂಬವನ್ನು ಅಡ್ಡವಾಗಿಟ್ಟು, ಅದನ್ನು ತಿರುಗಿಸಬೇಕಾಗುತ್ತದೆ. ಇದನ್ನು ಪೂಜಾರಿ ಜನಾಂಗದವರೇ ಮಾಡುತ್ತಾರೆ. ಹೂವಿನ ಅಲಂಕಾರವಾದ ನಂತರ ಬಡಗಿ ಅದರ ತುದಿಗೆ ಮುಡಿ ಇರಿಸುತ್ತಾನೆ. ಈ ಮುಡಿ ಹೊಂಗಾರೆ ಮರದ್ದಾಗಿರುತ್ತದೆ.. ಈರೀತಿ ತಯಾರಿಸಿದ ಪೂಕರೆ ಒಂದುವರ್ಷಕ್ಕೆ ಮಾತ್ರ ಸೀಮಿತವಾಗಿರುತ್ತದೆ.[೨೭]

೬.೩.೩ ಕೋಳಿ ಅಂಕ

ವೇದಕಾಲದಿಂದ ತೊಡಗಿ ಇಂದಿನವರೆಗೂ ಮಾನವ ತನ್ನ ಮನರಂಜನೆಗಾಗಿ ತನ್ನ ಸಾಕುಪ್ರಾಣಿಗಳನ್ನು, ಪಶುಪಕ್ಷಿಗಳನ್ನು ಬಳಸುತ್ತಿದ್ದುದು ಸಾಮಾನ್ಯ, ರೋಮನ್ ಸಾಮ್ರಾಜ್ಯದಲ್ಲಿ ಖಡ್ಗಮಲ್ಲರ ಕಾಳಗ ನಡೆದರೆ ಮೊಗಲರು ಗಜಕಾಳಗ ವೀಕ್ಷಿಸಿ ಸಂಭ್ರಮಿಸುತ್ತಿದ್ದರು. ಕೋಳಿ ಕಾಳಗ ಹೆಚ್ಚಿನ ನಾಗರಿಕತೆಗಳಲ್ಲಿ ಪುರಾತನ ಕಾಲದಿಂದಲೂ ನಡೆದುಬಂದ ಕಾಲಕ್ಷೇಪ.

"ತುಳುನಾಡಿನಲ್ಲಿ ಕೋರಿಕಟ್ಟವು ಒಂದು ಸಾಂಸ್ಕೃತಿಕ ಅಂತಸ್ತನ್ನು ಪಡೆದಿದೆ. ಏಕೆಂದರೆ ಅದನ್ನು ಹೆಚ್ಚಾಗಿ ದೈವಗಳ ಸಾಮೂಹಿಕ ಆರಾಧನೆಯ ಸಂದರ್ಭದಲ್ಲಿ, ಮದುವೆ ಸೀಮಂತಗಳ ವೇಳೆ ಏರ್ಪಡಿಸುತ್ತಿದ್ದರು.. ಸಾಮಾನ್ಯವಾಗಿ ಗೆದ್ದ ಹುಂಜದ ಮಾಲೀಕನು ಸೋತ ಅಥವಾ ಸತ್ತ ಕೋಳಿಯನ್ನು ಒಯ್ಯುತ್ತಿದ್ದ. ಗೆದ್ದ ಕೋಳಿಯನ್ನು 'ಬಂಟಿ ಕೋರಿ ಎಂದೂ ಸೋತದ್ದನ್ನು ಒಟ್ಟೆಕೋರಿ ಎಂದೂ ಹೇಳುತ್ತಿದ್ದರು. ಕೋಳಿ ಅಂಕಗಳು ದೈವಾರಾಧನೆಯ

ಅಂಗವಾಗಿದ್ದವು. ಅದರ ಸಂಸ್ಕರಿತ ಆಚರಣಾತ್ಮಕ ಸಾಂಕೇತಿಕತೆಯು 'ಕೋರಿಕುಂಟ' (ಕೋಳಿಗೂಟ) ದಲ್ಲಿ ವ್ಯಕ್ತವಾಗಿದೆ. ಇದನ್ನು ನೇಮದ ಮುನ್ನ ಹಾಕುತ್ತಾರೆ. ನೇಮ ಮುಗಿದ ಮೇಲೆ ಕೋಳಿಕಾಳಗ ಪ್ರಾರಂಭವಾಗುತ್ತದೆ. ಆಚರಣಾತ್ಮಕ ಉತ್ಸವಗಳಲ್ಲಿ ಆತ್ಮಾಹುತಿಗೊಂಡ ಕೋಳಿಯನ್ನು ಪದಾರ್ಥ ಮಾಡಿ ಪ್ರಸಾದ ರೂಪದಲ್ಲಿ ಹಂಚುತ್ತಾರೆ."[೨೮] ಕೋಳಿಗಳ ಕಾಲಿಗೆ 'ಬಾಲ್' ಎಂಬ ಕತ್ತಿಯನ್ನು ಕಟ್ಟಿ ಅವುಗಳನ್ನು 'ಅಂಕ'ಕ್ಕೆ ನಿಲ್ಲಿಸಲಾಗುತ್ತದೆ. ಹೀಗೆ ಕಟ್ಟಲಾಗುವ 'ಬಾಲ್'ಗಳಲ್ಲಿ ಅನೇಕ ವಿಧಗಳಿವೆ: ಏಟ್ಟಿಮುಲ್ಲು ಬಾಲ್, ಕೆರ್ಚಿ ಬಾಲ್, ಅರೆಕೊಕ್ಕೆ ಬಾಲ್, ಕೊಕ್ಕೆ ಬಾಲ್, ಗೂಂಟಬಾಲ್, ಉರಬಾಲ್, ಇಕ್ಕೇರಿ ಬಾಲ್ ಇತ್ಯಾದಿ.[೨೯]

ಬೇರೆ ಬೇರೆ ಉದ್ದೇಶಗಳಿಗಾಗಿ ಬೇರೆ ಬೇರೆ ದೈವಗಳನ್ನು ಸೃಷ್ಟಿಸಿಕೊಂಡಿರುವ ನಮ್ಮ ಜನಪದರು 'ಕಂಬಳಕ್ಕೂ' ಕಂಬಳತ್ತಾಯ ಎಂಬ ದೈವವನ್ನು ಸೃಷ್ಟಿ ಮಾಡಿ ಕೊಂಡಿದ್ದಾರೆ. ಕಂಬಳದಂದು ಈ ಭೂತಕ್ಕೂ ಆರಾಧನೆಯಾಗಬೇಕು. ಅದಲ್ಲದೆ, ಕಂಬಳಕ್ಕೆ ಮೊದಲು ನಾಗನಿಗೆ ತಂಬಿಲ ಆಗತಕ್ಕದು. ಕಂಬಳದ ಮರುದಿನ ಕೋಳಿಕಟ್ಟ ಏರ್ಪಡಿಸಲಾಗುವುದು.

ಗುತ್ತುಗಳ ಮೂಲಕ ಆಡಳಿತವನ್ನು ನಡೆಸುವ ಬಂಟ ಜನಾಂಗದ ವ್ಯಕ್ತಿಗಳು ಮನೋರಂಜನೆಗಾಗಿ ಕೋಳಿ ಅಂಕವನ್ನು ನಡೆಸಿದರು. ಈ ಜನಾಂಗದ ವ್ಯಕ್ತಿಗಳು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮುಂದುವರಿದಿದ್ದರು. ಅವರ ಕೈಯಲ್ಲಿ ಆಡಳಿತವಿರುವುದರಿಂದ ಕೋಳಿ ಅಂಕವನ್ನು ಕ್ರೀಡೆಯಾಗಿ ಊರಿನಲ್ಲಿ ನಡೆಸಿರಬಹುದು (ಸೇರಿಗೆ, ೨೦೦೦)

ಕೋಳಿ ಅಂಕವು ಹೆಚ್ಚಾಗಿ ಕೋಲ, ನೇಮ, ಮುಂತಾದ ಆಚರಣೆಯ ಸಂದರ್ಭದಲ್ಲಿ ಜರುಗುತ್ತದೆ. ಇದಲ್ಲದೆ ಮದುವೆಯ ಹಿಂದಿನ ದಿನ ಮತ್ತು ಸೀಮಂತದ ದಿನಗಳಲ್ಲಿಯೂ ಜರುಗುತ್ತದೆ.

೬.೩.೪ ಯಕ್ಷಗಾನ

ಯಕ್ಷಗಾನ ಕಲೆ ಇನ್ನೂ ತನ್ನ ಜಾನಪದ ಅಂಶವನ್ನು ಉಳಿಸಿಕೊಂಡು ತನ್ನ ಮೂಲ ಚೌಕಟ್ಟಿಗೆ ಭಂಗ ಬಾರದ ರೀತಿಯಲ್ಲಿ ಪರಿಷ್ಕರಣ ಹೊಂದುತ್ತ ನಾಡಿನ ಶ್ರೀಮಂತ ಕಲೆಯಾಗಿ ಪ್ರಪಂಚದ ಪ್ರೇಕ್ಷಕರ ಗಮನವನ್ನು ಸೆಳೆಯುತ್ತಿರುವುದು ಸಣ್ಣ ಮಾತೇನಲ್ಲ. ಯಕ್ಷಗಾನದಲ್ಲಿ ಜಾನಪದ ಸಹಜ ಸೃಜನಶೀಲ ಗುಣವೇ ಅದರ ಜೀವಂತಿಕೆಗೂ ಜನಪ್ರಿಯತೆಗೂ ಕಾರಣವೆಂಬುದನ್ನು ಮರೆಯುವಂತಿಲ್ಲ. ಕರಾವಳಿಯ ಯಕ್ಷಗಾನ ಇತ್ತೀಚೆಗೆ ತೀವ್ರಗತಿಯಿಂದ ತನ್ನ ಓರೆಕೋರೆಗಳನ್ನು ತಿದ್ದಿಕೊಂಡು ಅಭಿಜಾತದತ್ತ ದಾಪುಗಾಲು ಹಾಕುತ್ತಿದೆ.[೩೦] ಕಟೀಲು ಶ್ರೀ ದೇವಿಯ ಸನ್ನಿಧಿಯಲ್ಲಿ. ವೇಷಹಾಕಿ ಕುಣಿಯುವುದು (ಬಯಲಾಟ, ಮೊಸರುಕುಡಿಕೆ, ನವರಾತ್ರಿ ಸಂದರ್ಭ) ಇವುಗಳೆಲ್ಲ ಹರಕೆಯಾಗಿ ಭಕ್ತರಿಂದ ಸಲ್ಲುತ್ತದೆ.[೩೧] ಇದಲ್ಲದೆ ಯಕ್ಷಗಾನ ಬಯಲಾಟವನ್ನು ಆಡಿಸುವುದು ಕೂಡ ಹರಿಕೆಯಾಗಿದ್ದು, ಕಟೀಲು ಮೇಳದಂತಹ ಕೆಲವು ದೇವಸ್ಥಾನಗಳ ಮೇಳಗಳು ವರ್ಷಗಟ್ಟಲೆಯ ಕಾಲದ

ಪ್ರದರ್ಶನಗಳು ಮುಂಗಡವಾಗಿ ಕಾದಿರಿಸಿರುವುದನ್ನು ಗಮನಿಸಿದರೆ ಈ ಹರಿಕೆ ಎಷ್ಟು ಜನಪ್ರಿಯವೆಂಬುದನ್ನು ಮನಗಾಣಬಹುದು.

ಯಕ್ಷಗಾನದ ಮೇಳಗಳು ಒಂದೆಡೆಯಿಂದ ಇನ್ನೊಂದೆಡೆಗೆ ಹೋಗುವಾಗ ಕಿರೀಟಗಳು, ಚಲ್ಲಣಗಳು, ದಗಲೆಗಳು, ಬಣ್ಣದ ಸಾಮಾಗ್ರಿಗಳು ಇವೇ ಮೊದಲಾದವನ್ನು ಪೆಟಾರಿಗಳಲ್ಲಿ ತುಂಬಿ ಸಾಗಾಟ ಮಾಡುತ್ತಿದ್ದರು. ಯಕ್ಷಗಾನದ ವೇಷಗಳಲ್ಲಿ ಕೆಂಪು, ನೀಲಿ, ಹಸುರು, ಬಿಳಿ ಈ ನಾಲ್ಕು ಬಣ್ಣಗಳ ಬಟ್ಟೆಗಳನ್ನು ಉಪಯೋಗಿಸಲಾಗುತ್ತಿತ್ತು. ಬಣ್ಣ ಬಣ್ಣದ ಮಣಿ, ಮರಗಳು, ಗೊಂಡೆ ಬೇಗಡೆ, ಪೀಲಿ ಇತ್ಯಾದಿಗಳನ್ನು ಉಪಯೋಗಿಸಿ ಮಾಡಲ್ಪಟ್ಟ ಕಿರೀಟ, ಪಗಡೆ, ಕೇದಿಗೆ, ಮುಂದಲೆ, ಎದೆಹಾರ, ಭುಜಕೀರ್ತಿ, ಕೈಕಟ್ಟು, ತೋಳಬಂದಿ, ನಡುಕಟ್ಟು, ಕರ್ಣಕುಂಡಲ, ಸರಗಳು, ಸೀರೆ, ಚಲ್ಲಣ ಮುಂತಾದವುಗಳು ಯಕ್ಷಗಾನದಲ್ಲಿ ತೊಡುವ ವೇಷಭೂಷಣಗಳು. ಯಕ್ಷಗಾನದ ಕಿರೀಟಗಳ ವೈವಿಧ್ಯವನ್ನು ಗುರುತಿಸಲೇಬೇಕು. ಯಕ್ಷಗಾನದಲ್ಲಿ ಚೆಂಡೆ ಬಹುಮುಖ್ಯ ಪರಿಕರ. ಚೆಂಡೆ ಒರೊಕ್ ಪುಣನ್‌ಲಾ ಲಕ್ಕವುಂಡುಗೆ (ಒಮ್ಮೆಗೆ ಹೆಣವನ್ನೂ ಎಬ್ಬಿಸುವುದೆಂಬ ಮಾತಿದೆ.)

೬.೩.೫ ನಾಗಾರಾಧನೆ

ಕ್ರಿ.ಶ. ೬೦೨ರ ಮಹಾಕೂಟಸ್ಥಂಭಲೇಖದಲ್ಲಿ ತುಳುನಾಡಲ್ಲು ಅಲೂಕ ಎಂದು ಹೆಸರಿಸಿದೆ. ಅಲೂಕ ಎಂಬ ಸಂಸ್ಕೃತ ಶಬ್ದದ ಅರ್ಥ ನಾಗಾಧಿಪ= ನಾಗರ ಅರಸನೆಂದು. ಇದೆಲ್ಲವನ್ನೂ ಪರ್ಯಾಲೋಚಿಸುವಲ್ಲಿ ಇತಿಹಾಸಕ್ಕೂ ಶಾನೆ ಹಿಂದಣ ಆ ಬಹಳ ಹಳೆಯ ಕಾಲದಲ್ಲಿ ನಾಗರು ಪಶ್ಚಿಮ ಕರಾವಳಿಯಲ್ಲಿ ನೆಲೆಸಿದ್ದರೆಂದು ಸ್ವಯಮೇವ ವ್ಯಕ್ತವಾಗುವುದರಿಂದ, ಆಗ್ಯೆ ಈ ಕರಾವಳಿಯ ತುಳುನಾಡು ನಾಗರ ನೆಲೆಮನೆಯಾಗಿದ್ದು, ನಾಗಲೋಕವಾಗಿದ್ದಿರಬೇಕು ಎಂದು ತಿಳಿಯುತ್ತದೆ. ವೇದಗಳಲ್ಲಿ ಸರ್ಪ ಎಂಬ ಅರ್ಥದಲ್ಲಿ ನಾಗ ಎಂಬ ಪದವಿಲ್ಲದಿರುವುದರಿಂದ ನಾಗರು ಅನಾರ್ಯ ಜನರಾಗಿರಬೇಕು. ಬಹಳ ಹಳಗಾಲದಲ್ಲಿ ಆಯಾ ಜನರಿಗೆ ಆಯಾ ವಿಧದ ಲಾಂಛನಗಳು (totems) ಇದ್ದಂತೆ ನಾಗರಿಗೆ ಸರ್ಪ ಲಾಂಛನವಿದ್ದಿರಬೇಕು. ಪ್ರಾಯಶಃ ಅವರು ಸರ್ಪ ಪೂಜಕರೂ ಆಗಿರಬೇಕು. ಆ ಕಾರಣದಿಂದಲೇ ಅವರಿಗೆ ನಾಗರೆಂದು ಹೆಸರಾಗಿರಬಹುದೇನೋ.[೩೨]

ತುಳುವರು ಮೂಲತಃ ನಾಗಾರಾಧಕರು. ನಾಗ ಬಿರ್ಮೆರ್ ಇವರಿಗೆ ಕುಲ ಲಾಂಛನ ದೈವ. ಇವನು ವೈದಿಕ ಬ್ರಹ್ಮನಿಗೆ ಪರ್ಯಾಯ ದೇವತೆ. ಇವನು ಫಲದಾಯಕ ದೈವ. ಸಂತಾನ ಮತ್ತು ಸಮೃದ್ಧಿ ದೈವ ಎನ್ನುವ ಕಾರಣಕ್ಕೆ ತುಳುವರು ಅನಾದಿಯಿಂದ ನಾಗನನ್ನು ನಂಬುತ್ತಾ ಬಂದಿದ್ದಾರೆ. ಹಾಗಾಗಿ ತುಳುನಾಡಿನ ಉದ್ದಗಲಕ್ಕೂ ನಾಗನ ಆಲಡೆಗಳು ಮತ್ತು ಬನಗಳು ಕಂಡು ಬರುತ್ತವೆ. ಈ ಸಂಬಂಧವಾಗಿ ಡಕ್ಕೆಬಲಿ, ನಾಗಮಂಡಲ, ಕಾಡ್ಯನಾಟ ಇತ್ಯಾದಿ ಆಚರಣೆಗಳು ನಡೆಯುತ್ತವೆ. ಇದೇ ಬಗೆಯಲ್ಲಿ ಮೂಕರೆ ಆಚರಣೆಯು ಕೂಡಾ ನಾಗ ಸಂಬಂಧಿಯಾಗಿದೆ. ಸರ್ಪ ಮೂಕರೆ ಗದ್ದೆಗಳಲ್ಲಿ ವಾಸವಾಗಿದ್ದು, ಅದನ್ನು ರಕ್ಷಿಸುತ್ತಾನೆ; ಅವನು ಕ್ಷೇತ್ರಪಾಲ ಎನ್ನುವ ತುಳುವರ

ನಂಬಿಕೆಯ ಕಾಲ್ಪನಿಕತೆ, ಪೂಕರೆ ಗದ್ದೆಯ 'ಯಜಮಾನಿಕೆ' ನಾಗನಿಗೆ ಸೇರಿದ್ದು ಎನ್ನುವುದನ್ನು ಸೂಚಿಸುತ್ತದೆ. ಈ ದೃಷ್ಟಿಯಿಂದ ನಾಗ ಪುರುಷನ ಸಂಕೇತ. ಭೂಮಿ ಕ್ಷೇತ್ರದ (ಹೆಣ್ಣಿನ) ಸಂಕೇತ. ಹೆಣ್ಣು ಗಂಡಿನ ಸಮಾಗಮವು ಸೃಷ್ಟಿಯ ಮೂಲ. ಮದುವೆ ಅದನ್ನು ಒಪ್ಪಿಸುವ ಸಾಮಾಜಿಕ ವ್ಯವಸ್ಥೆ, ಪೂಕರೆ ಆಚರಣೆಯಲ್ಲಿ ಇದು ನಾಗನ ಆರಾಧನೆ ಮತ್ತು ಪೂಕರೆ ನೆಡುವ ಮೂಲಕ ಸಾಂಕೇತಿತವಾಗುತ್ತದೆ

ತುಳುವರು ನಾಗಸಮಾಜದವರು–ಎಂಬ ಶೀರ್ಷಿಕೆಯ ಲೇಖನದಲ್ಲಿ ಎನ್.ಎಸ್. ಕಿಲ್ಲೆಯವರು ತುಳುವರು ಆರಾಧಿಸುವ ದೈವ ದೇವರ ಆಭರಣಗಳಲ್ಲಿಯೂ, ಮರದ ಕೆಲಸಗಳಲ್ಲಿಯೂ ನಾಗನ ಹೆಡೆಯನ್ನಾಗಲೀ, ನಾಗನ ಪ್ರತಿಬಿಂಬವನ್ನಾಗಲೀ ಈಗಲೂ ಮಾಡಿಸುತ್ತಾರೆ, ಮಾತ್ರವಲ್ಲ ತುಳುವ ದೋಣಿ, ಹಡಗುಗಳಲ್ಲಿಯೂ ಮನೆ ಬಾಗಿಲುಗಳಲ್ಲಿಯೂ ಸಾಗುವಳಿಗೆ ಉಪಯೋಗಿಸುವ ಮರದ ನೊಗಕ್ಕೆ ಕೂಡಾ ಸರ್ಪನ ಹೆಡೆಯಂತೆ ಕೆತ್ತಿಸುತ್ತಾರೆ. ನೊಗ ತುಂಡಾಗಿ ಹೋದರೆ ಆ ದಿವಸ ಯಜಮಾನನು ಊಟ ಸಹಾ ಮಾಡುವುದಿಲ್ಲ.[೩೩]

ನಾಗನ ಬಿಂಬಗಳಲ್ಲಿ ವಿಶಿಷ್ಟ ವೈವಿಧ್ಯತೆಗಳಿವೆ. ಒಂದು ಹೆಡೆಯಿಂದ ಹದಿನಾರು ಹೆಡೆಗಳವರೆಗೆ ಇರುವ ನಾಗ ಕಲ್ಲುಗಳಿವೆ. ನಾಗನ ಹೆಡೆ– ಮನುಷ್ಯ ರೂಪ, ಮನುಷ್ಯನ ತಲೆಗೆ ನಾಗನ ದೇಹ ಇಂತಹ ಕಲ್ಪನೆಯಲ್ಲಿ ಮೂಡಿಬಂದ ಹಲವಾರು ಕಲ್ಲುಗಳಿವೆ. ನಾಗನ ಬಗೆಗೆ ಆಲೋಚಿಸಿದಷ್ಟು ಬೇರಾವುದೇ ವಿಷಯದ ಬಗೆಗೆ ತುಳುವರು ಹಚ್ಚಿಕೊಂಡಿಲ್ಲ. ಕೆತ್ತನೆ, ಕುಸುರಿಗಳಲ್ಲಿ ನಾಗ ವಿಜೃಂಭಿಸಿದಷ್ಟು ಇನ್ನಾವುದೇ ದೈವದೇವತೆಗಳು ಕಾಣಿಸಿಕೊಂಡಿಲ್ಲವೆಂದೇ ಹೇಳಬಹುದು. ಪಂಜಿಕಲ್ಲಿನಲ್ಲಿ ದೊರೆತ ಚತುರ್ಮುಖ ನಾಗಶಿಲ್ಪದಲ್ಲಿ ಒಂದು ಕಡೆ ಸಂಪೂರ್ಣ ನಾಗ, ಇನ್ನೊಂದು ಕಡೆ ಅಶ್ವಾರೂಢ ಹೆಡೆಯ ರೂಪದ ಕಿರೀಟವನ್ನು ಹೊಂದಿರುವ ಬೆಮ್ಮೆರ್‌ನೊಡನೆ ನಾಗಯೋಧರು, ಮತ್ತೊಂದೆಡೆ (ಬಾಲವನ್ನು ಹೊಂದಿರುವ) ನಾಗಬೆಮ್ಮೆರ್ ಬಿಂಬ, ನಾಲ್ಕನೆಯದರಲ್ಲಿ ಮೇಲ್ಭಾಗದಲ್ಲಿ ನಾಗಕನ್ನಿಕೆ, ಕೆಳಭಾಗದಲ್ಲಿ ನಾಗಬೆಮ್ಮೆರ್– ಇದನ್ನು ಗಮನಿಸಿದಾಗ ಬೆಮ್ಮೆರ್ ಹಾಗೂ ನಾಗ ಈ ಎರಡರ ಪರಿಕಲ್ಪನೆಯ ಕುರಿತು ಆಲೋಚಿಸಬೇಕಾಗುತ್ತದೆ.

೬.೪ ವಿಧಿ ನಿಷೇಧ ಮತ್ತು ಶಕುನಗಳು

ಮಾನವನ ನಾಗರಿಕತೆಯ ಚರಿತ್ರೆಯನ್ನು ಅಧ್ಯಯನ ಮಾಡುವಾಗ ಪ್ರಮುಖವಾಗಿ ಗೋಚರವಾಗುವಂತದು ವಿಧಿ ನಿಷೇಧ ಮತ್ತು ಶಕುನಗಳು. ಪ್ರಕೃತಿಯನ್ನು ಅವಲಂಬಿಸಿಕೊಂಡು ಬದುಕುತ್ತಿದ್ದ ಆದಿ ಮಾನವ ನಾಗರೀಕತೆಯ ಸ್ಪರ್ಶಕ್ಕೆ ಒಳಗಾದಂತೆ ತನ್ನ ಜೀವನ ಕ್ರಮದಲ್ಲಿ ಅನೇಕ ಸಂಸ್ಕಾರಗಳನ್ನು ರೂಢಿಸಿಕೊಂಡ. ಬಯಲಲ್ಲಿ ಇದ್ದ ಮಾನವ ಮನೆ ಮಠದ ಒಳಗೆ ಬಂದ ಹಾಗೆ ಪ್ರಕೃತಿಗಿಂತ ಭಿನ್ನವಾಗಿ ತನ್ನದೆ ಸಂಸ್ಕೃತಿಯನ್ನು ಅಳವಡಿಸಿಕೊಂಡ. ಹೀಗೆ ಸೂರಿನೊಳಗೆ ಬದುಕುವುದನ್ನು ಕಲಿತ ಮಾನವ ಕ್ರಮೇಣ ಅನೇಕ ಆಚರಣೆಗಳನ್ನು ವಿಧಿ ನಿಷೇದಗಳನ್ನು ತನ್ನ ಬದುಕಿನ ಸಂಸ್ಕಾರಕ್ಕೆ ಅನುಗುಣವಾಗಿ ಅಳವಡಿಸಿಕೊಂಡು ಬಂದಿದ್ದಾನೆ. ಪ್ರಕೃತಿಯಲ್ಲಿ ಸ್ವಾಭಾವಿಕವಾಗಿ ನಡೆಯುವ ಹಗಲು ರಾತ್ರಿ ಬಿಸಿಲು ಮಳೆ ಹುಟ್ಟು ಸಾವು, ರೋಗರುಜಿನ, ಇವುಗಳನ್ನು ಕಂಡಾಗ ಆದಿಮಾನವನಿಗೆ

ಸಹಜವಾಗಿಯೇ ಭಯ, ಆತಂಕ ಉಂಟಾಗಿರಬೇಕು. ಹಾಗಾಗಿ ಆದಿಮಾನವನು ಈ ಪ್ರಕೃತಿಯ ಕೌತಕವನ್ನು ಕಂಡು ಈ ಲೋಕವನ್ನು ಮೀರಿದ ಅದೃಶ್ಯ ಶಕ್ತಿಯೊಂದು ಇದೆ ಎಂದು ನಂಬುವುದಕ್ಕೆ ಆರಂಭಿಸಿದ. ಪ್ರಕೃತಿಯಲ್ಲಿ ಸಹಜವಾಗಿ ನಡೆಯುವ ಅನೇಕ ಸಂಗತಿಗಳನ್ನು ತನ್ನ ಬದುಕಿನ ಘಟನೆಗಳ ಜತೆಗೆ ತಳುಕು ಹಾಕಿಕೊಂಡ. ಮನುಷ್ಯನ ಸೋಲು ಗೆಲುವು, ಹುಟ್ಟು ಸಾವು, ರೋಗರುಜಿನಗಳನ್ನು ಕುರಿತು ಪ್ರಕೃತಿಯ ಅದೃಶ್ಯ ಶಕ್ತಿಯೇ ಮುನ್ಸೂಚನೆಯನ್ನು ನೀಡುತ್ತದೆ ಎಂದು ಕಲ್ಪಿಸಿಕೊಂಡ. ಹಾಗಾಗಿಯೇ ಮನುಷ್ಯನ ಬದುಕು ವಿಧಿ ನಿಷೇಧ ಮತ್ತು ಶಕುನಗಳ ನಂಬಿಕೆಯ ಸುತ್ತ ರೂಪುಗೊಂಡಿದೆ.

ಜೀವನಾವರ್ತನ ಆಚರಣೆಗಳಲ್ಲಿ ವಿಧಿ ನಿಷೇಧಗಳು

ಮಗು ಮಲಗಿಸುವ ತೊಟ್ಟಿಲು ಖಾಲಿ ತೂಗಬಾರದು, ಖಾಲಿ ತೊಟ್ಟಿಲು ಬಿಡಬಾರದು, ಸುಡಬಾರದು (ನೆರೆ ನೀರಲ್ಲಿ ಬಿಡಬೇಕು), ತೊಟ್ಟಿಲನ್ನು ಕಟ್ಟುವ ವಿಧಾನ, ಮಗುವನ್ನು ದಿಕ್ಕಿಗೆ ಅನುಗುಣವಾಗಿ ಮಲಗಿಸುವ ವಿಧಾನ ಇತ್ಯಾದಿ ಸಾಮಾನ್ಯ ನಂಬಿಕೆಗಳು ತುಳುವರಲ್ಲಿವೆ.

ತೊಟ್ಟಿಲನ್ನು ತಯಾರಿಕೆಯಲ್ಲಿ ಇರುವ ಕಟ್ಟುಪಾಡುಗಳು (ಹಾಲು ಕೊಡುವ ಮರವನ್ನೆ ಬಳಸುವುದು) ಮದುವೆಯ ಸಂದರ್ಭದಲ್ಲಿ ರಕ್ತ ಸಂಬಂಧಿಗಳಾದವರೊಂದಿಗೆ ಮದುವೆ ಕೂಡದು (ಪೂರಕವಾಗಿ ಪಂಜುರ್ಲಿ ಪಾಡ್ದನ, ಬಾಳೆಮೀನು ಮತ್ತು ಮುಗುಡು ಮೀನಿನ ಕಥೆ) ಶವ ಸಂಸ್ಕಾರದಲ್ಲಿ ಶವ ಹೊರುವ ಸಂದರ್ಭ, ಸ್ನಾನ ಮಾಡುವ ಸಂದರ್ಭದಲ್ಲಿ, ಸುಡುವ ಸಂದರ್ಭ (ಮಂಗಳವಾರ ಮರಣ ಹೊಂದಿದರೆ ಸುಡುವ ಚಟ್ಟದ ಮೇಲ್ಗಡೆ ಕೋಳಿ ಮತ್ತು ಕೊಡಲಿ ಬಿಸಾಡವ ಕ್ರಮ) ಹೆಂಗಸರು ಕೂದಲು ಬಿಚ್ಚಿಟ್ಟುಕೊಳ್ಳಬಾರದು. ಬಾಕಿಮಾರು ಗದ್ದೆಯಲ್ಲಿ ಶವ ಸಂಸ್ಕಾರ ಮಾಡುವಂತಿಲ್ಲ.

ಗ್ರಾಮದೈವದ ದಿನ ನಿಗದಿಯಾದ ನಂತರ (ಕೈಲ್ ಕಡ್ಪುನೆ, ಕೊಡಿ ಏರುವುದು, ಕೋರಿಕುಂಟ ಆದ ಬಳಿಕ ಆ ಗ್ರಾಮಕ್ಕೆ ಸಂಬಂಧ ಪಟ್ಟ ಮನೆಗಳಲ್ಲಿ ಯಾವುದೇ ಶುಭ ಕಾರ್ಯಗಳನ್ನು ಇಟ್ಟುಕೊಳ್ಳುವ ಹಾಗಿಲ್ಲ. ಹಾಗೆಯೇ ಗ್ರಾಮದಲ್ಲಿ ಯಾರಾದರೂ ಕಾಲವಾದರೆ ದೈವಸ್ಥಾನಗಳಿಗೆ ತಪ್ಪು ಕಾಣಿಕೆ ಕೊಟ್ಟು ಮುಂದಿನ ಕಾರ್ಯವನ್ನು ಜರುಗಿಸುವುದು. ಗ್ರಾಮದ ಜನರು ಈ ಸಂದರ್ಭದಲ್ಲಿ ಬೇರೆ ಊರುಗಳಲ್ಲಿ ಹೋಗಿ ವಾಸ್ತವ್ಯ ಮಾಡುವಂತಿಲ್ಲ. ಮನೆಗೆ ನೆಂಟರಿಷ್ಟರು ಬಂದರೆ ಅವರಿಗೆ ಕೋಳಿ ಕುಯ್ದು ಪದಾರ್ಥ ಮಾಡುವಂತಿಲ್ಲ. ಹಾಗಾಗಿ ಇಂತಹ ಸಂದರ್ಭಗಳಲ್ಲಿ ಗ್ರಾಮದ ಜನರು ಬೇರೊಂದು ಗ್ರಾಮದ ಗಡಿಗೆ ಹೋಗಿ ಕೋಳಿ ಕುಯ್ದು ತರುವುದು ರೂಢಿಯಲ್ಲಿದೆ.

ನಾಗಾರಾಧನೆಯಲ್ಲಿಯೂ ಕೆಲವೊಂದು ನಿಷೇಧಗಳಿವೆ. ನಾಗಬನಗಳಿಗೆ ಮೈಲಿಗೆಯ ಸ್ತ್ರೀಯರು ನಿಷೇಧ. ನಾಗ ಸಂಬಂಧಿತ ಗದ್ದೆಗಳಿಗೆ ಮೈಲಿಗೆಯ ಸ್ತ್ರೀಯರು ನಿಷೇಧ, ಸಂತಾನಕ್ಕಾಗಿ ನಾಗನ ಆರಾಧನೆ, ದೋಷ ಪರಿಹಾರ.

ಶಕುನಗಳು

- ಶುಭ ಕಾರ್ಯಗಳಿಗೆ ಹೊರಟಾಗ ಹೊಸ ಮಡಕೆಗಳನ್ನು ಹೊತ್ತ ಕುಂಬಾರ ಎದುರು ಸಿಗಬಾರದು.
- ಕಳ್ಳು ಹೊತ್ತುಕೊಂಡ ಮೂರ್ತೆಗಾರ ಎದುರು ಸಿಕ್ಕರೆ ಒಳ್ಳೇದು.
- ಒಡೆದ ತೆಂಗಿನಕಾಯಿಯನ್ನು ಮೇಲ್ಮುಖವಾಗಿ ಇಡಬಾರದು.
- ಸಂಜೆಯ ಹೊತ್ತಿಗೆ ಮುಖ್ಯದ್ವಾರದ ತಡ್ಯದಲ್ಲಿ ಕೂರಬಾರದು.
- ಕಾಂಟ್ಯವನ್ನು ಕವುಚಿ ಹಾಕಿಕೊಂಡು ಬರಬಾರದು.
- ಹೊಸ ಅಕ್ಕಿ ಬೇಯಿಸುವ (ಪುದ್ವಾರ್ ಕರ) ಒಡೆಯಬಾರದು.
- ಹೊಸ ಅಕ್ಕಿ ಊಟ ಮಾಡುವಾಗ ಕಲ್ಲು ಸಿಗಬಾರದು.
- ಉಳುವ ಸಂದರ್ಭದಲ್ಲಿ ನೊಗ ನೇಗಿಲು ತುಂಡಾಗಬಾರದು.

ರಾಜಕೀಯ ಪ್ರಭಾವ

ಕರಾವಳಿ ಕರ್ನಾಟಕವನ್ನು ವಿಜಯನಗರದ ಅರಸರು ಆಳಿರುವುದರಿಂದ ವಿಜಯನಗರದ ನಾಡಹಬ್ಬವಾದ ನವರಾತ್ರಿಯನ್ನು ಇಲ್ಲಿನ ದೇವಾಲಯಗಳಲ್ಲಿ ಆಚರಿಸಲಾಗುತ್ತದೆ. ಟಿಪ್ಪುವಿನ ಆಡಳಿತದ ಸಂದರ್ಭದಲ್ಲಿ ದೈವದೇವಸ್ಥಾನಗಳಿಗೆ ಬಿಡುಗಡೆಗೊಂಡ ತಸ್ತೀಕನ್ನು ತುಳುನಾಡಿನ ಹಲವು ದೈವದೇವಸ್ಥಾನಗಳು ಪಡೆದುಕೊಂಡಿರುವುದನ್ನು ಕೂಡ ಇಲ್ಲಿ ಉಲ್ಲೇಖಿಸಬೇಕಾಗುತ್ತದೆ.

ತುಳುನಾಡಿಗೆ ಹೊರಗಿನಿಂದ ಹಲವಾರು ಮತಧರ್ಮಗಳು ಬಂದು, ಇಲ್ಲಿ ಬೆರೆತು ಒಂದಾಗಿ, ತಮ್ಮ ಪ್ರಭಾವವನ್ನು ತುಳುವರ ಮೇಲೆ ಹಾಗೆಯೇ ತುಳು ಸಂಸ್ಕೃತಿಯ ಪ್ರಭಾವವನ್ನು ತಮ್ಮ ಮೇಲೆ ಮೂಡಿಸಿಕೊಂಡಿದ್ದಿದೆ. ತುಳುನಾಡಿನಲ್ಲಿ ಬೌದ್ಧಧರ್ಮದ ಹೆಜ್ಜೆಗುರುತುಗಳನ್ನು, ಜೈನರ ಯಕ್ಷಾರಾಧನೆಯ ಪ್ರಭಾವವಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಇದೇ ರೀತಿ ವೈದಿಕ ಮತವೂ ಇಲ್ಲಿ ಬಂದು, ಇಲ್ಲಿಯ ಪರಿಸರದಲ್ಲಿ ಬೆಳೆದಿದೆ.

ವೈದಿಕ ಆರಾಧನೆ

ಗುರುರಾಜ ಭಟ್ ಅವರ ಬರವಣಿಗೆಯ ಆಧಾರದ ಮೇರೆಗೆ ತುಳುನಾಡಿನ ಹೆಚ್ಚಿನ ದೇವಸ್ಥಾನಗಳು ೭ರಿಂದ ೧೬ನೇ ಶತಮಾನದ ಅವಧಿಯಲ್ಲಿ ಕಾಣಿಸಿಕೊಂಡವು. ವಿಜಯನಗರದ ಅರಸರ ಆಡಳಿತ ಕಾಲದಲ್ಲಿ ದೇವಸ್ಥಾನಗಳಿಗೆ ಹೆಚ್ಚಿನ ಮನ್ನಣೆ ದೊರೆಯಿತು[೩೪].

ವೈದಿಕದ ಆಚರಣೆಯ ಮೇಲೆ ತುಳುವ ಪ್ರಭಾವದಿಂದಾಗಿ 'ರಂಗಪೂಜೆ'ಯಂತಹ ದೇವರಿಗೆ 'ಅಗೆಲು' ಬಡಿಸುವಿಕೆಯ ಆಚರಣೆ ಬಂದಿದೆಯೆನ್ನುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. 'ಮೂರ್ತಿ ಪೂಜೆಯನ್ನು ಮೊದಲು ವಿರೋಧಿಸುತ್ತಿದ್ದ ವೈದಿಕ ಸಂಸ್ಕೃತಿ ಕ್ರಮೇಣ ಜಾತಿ/ವರ್ಗದ ಉಳಿವಿಗಾಗಿ ಹಾಗೂ ಧಾರ್ಮಿಕ ಅಧಿಕಾರದ ಅಸ್ತಿತ್ವಕ್ಕಾಗಿ ಅವೈದಿಕ ಸಂಸ್ಕೃತಿಯ ಮೂರ್ತಿಪೂಜೆಯನ್ನು ಒಳಗೊಳ್ಳತೊಡಗಿತು...ವೈದಿಕ, ಜೈನ, ಬೌದ್ಧ ಧರ್ಮಗಳು ಅನಿವಾರ್ಯವಾಗಿ ತಮ್ಮ ಸಂಸ್ಕೃತಿ ಚೌಕಟ್ಟನ್ನು ವಿಸ್ತರಿಸುವಾಗ ಸ್ಥಳೀಯ ದೈವ, ದೇವತೆಗಳನ್ನು ಎದುರಿಸಬೇಕಾಗಿ ಬಂತು. ಅವುಗಳನ್ನು ಬ್ರಾಹ್ಮಣೀಕರಿಸುವ ಅಥವಾ ಶಾಸ್ತ್ರೀಯಗೊಳಿಸುವ ಪ್ರಕ್ರಿಯೆಗಳು ಪ್ರಾರಂಭಗೊಂಡವು'[೩೫]

ಆಧುನಿಕ ಕಾಲದಲ್ಲಿ ವೈದಿಕ ಅಂಧಾನುಕರಣೆಯಿಂದಾಗಿ ದೈವಸ್ಥಾನಗಳಲ್ಲಿ ಬಳಕೆಯಾಗುತ್ತಿದ್ದ ಧೂಪ ಹಿಡಿಯುವ ಧೂಪದ ಬಟ್ಟಲಿನ ಸ್ಥಾನವನ್ನು ಆರತಿ ತಟ್ಟೆ ಆಕ್ರಮಿಸುತ್ತಿದೆ. ದೈವದೆದುರು ಇಟ್ಟಿರುವ ಕೂಚಿಯ ನೀರಿನ ಸೇವನೆಯ ಬದಲು, ತೀರ್ಥದ ಗಿಂಡೆಯಿಂದ ಉದ್ಧರಣೆಯಲ್ಲಿ ಹಾಕಲ್ಪಟ್ಟ ತೀರ್ಥವನ್ನು ಸೇವಿಸುವ ದಿನಗಳು ಬಂದಿವೆ. ಕೃಷಿ ಬದುಕಿಗೆ ಸಂಬಂಧಿಸಿದ ಅನೇಕ ಆಚರಣೆಗಳು ಕಣ್ಮರೆಯಾಗಿ, ಅವುಗಳಲ್ಲಿ ಅಳಿದುಳಿದ ಆಚರಣೆಗಳಿಗೆ ವೈದಿಕದ ಅಥವಾ ಇನ್ನಾವುದೋ ಪ್ರಭಾವದ ಹೊರ ಆವರಣಗಳು ಆವರಿಸಿಕೊಂಡು ಮೂಲ ಆಚರಣೆಗಳು ಕಾಣದಂತಾಗುವಷ್ಟು ಬದಲಾವಣೆಯನ್ನು ಪಡೆಯುತ್ತಿವೆ. ತತ್ಫಲವಾಗಿ ಆ ಆಚರಣೆಗಳಲ್ಲಿ ಬಳಕೆಯಾಗುತ್ತಿದ್ದ ಪರಿಕರಗಳ ಸ್ಥಾನವನ್ನು ಹೊಸ ಪರಿಕರಗಳು ಪಲ್ಲಟಗೊಳಿಸಿ, ಅಲ್ಲಿ ತಮ್ಮ ಇರವನ್ನು ತೋರುತ್ತಿವೆ.

ಜೀವನಾವರ್ತನ ಆಚರಣೆಗಳು ಮಾನವನ ಹುಟ್ಟಿನಿಂದ ಹಿಡಿದು ಸಾಯುವವರೆಗಿನ ಕಾಲದಲ್ಲಿ ಆಚರಿಸಲ್ಪಡುತ್ತದೆ. ಕರಾವಳಿ ಕರ್ನಾಟಕದ ಸಾಂಸ್ಕೃತಿಕ ಆವರಣದಲ್ಲಿ ನಿರ್ದಿಷ್ಟ ವಿಧಾನದಲ್ಲಿ ಈ ಜೀವನಾವರ್ತನ ಆಚರಣೆಗಳು ಚಾಲ್ತಿಯಲ್ಲಿದೆ. ಜನನದ ಸಂದರ್ಭ ಬಳಸಲ್ಪಡುವ ತೊಟ್ಟಿಲು, ಮದುವೆ ಸಂದರ್ಭದಲ್ಲಿನ ಮುಹೂರ್ತ ಕಂಬ ಹಾಗೇನೆ ಮರಣದ ಸಂದರ್ಭದಲ್ಲಿ ಬಳಕೆಗೊಳ್ಳುವ ಚಟ್ಟ, ಕಾಟ, ಇವುಗಳ ಬಳಕೆಯ ನಂಬಿಕೆ, ಕ್ರಿಯಾವಿಧಿಗಳು ಮತ್ತು ಆಶಯವನ್ನು ಗಮನಿಸಲಾಗಿದೆ.

ಒಂದು ನಿರ್ದಿಷ್ಟ ವರ್ಷದ ನಿಗದಿತ ಸಂದರ್ಭದಲ್ಲಿ ಆಚರಿಸಲ್ಪಡುವ ಕ್ರಿಯಾವಿಧಾನಗಳನ್ನು ವಾರ್ಷಿಕಾವರ್ತನ ಆಚರಣೆಗಳೆಂದು ಗುರುತಿಸಬಹುದು. ಬಿಸುವಿನಿಂದ ಆರಂಭಗೊಂಡು ವರ್ಷದ ಹನ್ನೆರಡು ತಿಂಗಳ ಸಂದರ್ಭದಲ್ಲಿ ಬೇರೆ ಬೇರೆ ಬಗೆಯ ಆಚರಣೆಗಳನ್ನು ಅವುಗಳ ಸಾಂಸ್ಕೃತಿಕ ವಿಶಿಷ್ಟತೆಯ ನೆಲೆಯಲ್ಲಿ ನೋಡಲಾಗಿದೆ.

ತುಳುನಾಡಿನಲ್ಲಿ ದೈವದೇವರ ಕುರಿತಾದ ನಂಬಿಕೆ, ಸಂಪ್ರದಾಯಗಳು ಕೃಷಿ–ಬದುಕಿನ ಉಳಿವಿಗಾಗಿಯೇ ಮೂಡಿ ಬಂದಿವೆ ಎನ್ನುವಲ್ಲಿ ಎರಡುಮಾತಿಲ್ಲ. ತುಳುವರ ಮೂಲ ಆರಾಧ್ಯದೈವ 'ನಾಗ'. ತುಳುವರು ಈ ದೇವರ ಬಿಂಬವನ್ನು ಪರಿಕರಗಳಲ್ಲಿ ಚಿತ್ರಿಸಿ, ಆ ಪರಿಕರಗಳನ್ನು ಪೂಜನೀಯವಾಗಿ ಕಂಡಿದ್ದಾರೆ. 'ನಾಯೆರ್ ಪೋಯಿನಲ್ಪ ನಾಗಬೀದಿಲಾ ಉಪ್ಪಂದ್'– ಎನ್ನುವಲ್ಲಿ ದೇವರಿಗಿಂತ ಕೃಷಿಬದುಕಿಗೆ ವಿಶೇಷ ಪ್ರಾಧಾನ್ಯತೆ ನೀಡಿರುವುದನ್ನು

ಗಮನಿಸಬಹುದು. ಸೂರ್ಯ–ಚಂದ್ರರ ಚಿತ್ರವನ್ನು ಅನ್ನ ಬಡಿಸುವ ಸೌಟು, ಕಲಸೆ–ಸೇರು, ತೊಟ್ಟಿಲು ಇವುಗಳಲ್ಲಿ ಪಡಿಮೂಡಿಸಿರುವುದು, ಸಂಪತ್ತು ಹಾಗೂ ಸಂತತಿ ಸೂಚಕವಾದ ಅವೆಲ್ಲವೂ ಚಿರಕಾಲವಿರಲಿ ಎಂಬ ಆಶಯವನ್ನು ಸೂಚಿಸುತ್ತದೆ.

ಭೂತಾರಾಧನೆಯಲ್ಲಿ ಬಳಸಲ್ಪಡುವ ಕಡ್ತಲೆ, ಚೌರಿ, ಗಂಟೆ ಇತ್ಯಾದಿ ಆಯುಧಗಳು ಹಾಗೂ ವೇಷ ಭೂಷಣಗಳನ್ನು ಹಿಂದೆ ತುಳುವ ವೀರರು ಯುದ್ಧಸಮಯದಲ್ಲಿ ಬಳಸುತ್ತಿದ್ದರೆಂಬುದು ಕುಮಾರವ್ಯಾಸ ಭಾರತದಿಂದ ತಿಳಿದುಬರುತ್ತದೆ. ಈ ಆಯುಧಗಳು ಪರಾಕ್ರಮ, ವೀರ ಮಾತ್ರವಲ್ಲದೆ ಅಭಯವನ್ನು ಕೊಡುವ ಸಂಕೇತವೂ ಆಗಿದೆ. ತುಳುನಾಡಿನಲ್ಲಿ ಆರಾಧನೆಗೊಳ್ಳುವ ದೈವಗಳ ಆಯುಧಗಳಲ್ಲಿ ಭಿನ್ನತೆ ಇದೆ. ಕೆಲವು ದೈವಗಳು ಕತ್ತಿಯಾಕಾರದ ಖಡ್ಸಲೆಯನ್ನು, ಇನ್ನು ಕೆಲವು ಕಡೆ ಈಟಿಯನ್ನು, ಬೆತ್ತವನ್ನು, ಬಿಲ್ಲುಬಾಣವನ್ನು ಮತ್ತು ಸುರಿಯವನ್ನು ಬಳಸುವುದು ಇದೆ. ಈ ಆಯುಧಗಳು ಐತಿಹಾಸಿಕವಾಗಿ ಮಹತ್ವದ್ದಾಗಿದೆ. ಯಾಕೆಂದರೆ ಬಿಲ್ಲು, ಕತ್ತಿ, ಬೆತ್ತ ಮೊದಲಾದ ಸ್ವರಕ್ಷಣೆಯ ಪರಿಕರಗಳು ಯಾವ ಕಾಲದಲ್ಲಿ ಹೆಚ್ಚು ಚಾಲ್ತಿಯಲ್ಲಿತ್ತು ಎಂದು ಜಿಜ್ಞಾಸೆ ನಡೆಸಿದರೆ ಚರಿತ್ರೆಗೆ ಮಹತ್ವದ ದಾಖಲೆಯಾಗುವುದರಲ್ಲಿ ಸಂದೇಹವಿಲ್ಲ.

ಕೆಲವೆಡೆ ಭೂತಾರಾಧನೆಯಲ್ಲಿ ಧೂಪದ ಬಟ್ಟಲಿನ ಬದಲಿಗೆ ಪೂಜೆಯ ಪರಿಕರ ಬಂದಿದ್ದು, ವೈದಿಕದ ಪ್ರಭಾವ ಹೆಚ್ಚಾಗಿರುವುದನ್ನು ಸೂಚಿಸುತ್ತದೆ ಮಾತ್ರವಲ್ಲ, ಕ್ರಮೇಣ ಮೂಲದ ನೆನಪು ಮಾಸುವುದಕ್ಕೆ ಕಾರಣವಾಗುತ್ತದೆ. ಸಮರ ಸಿದ್ಧತೆಯ ರಂಗಗಳಾಗಿದ್ದ ಗರಡಿಗಳು ಆರಾಧನಾ ಕೇಂದ್ರಗಳಾಗಿ ಬದಲಾವಣೆ ಹೊಂದಿ, ಅಲ್ಲಿ ವ್ಯಾಯಾಮ ಸಂಬಂಧಿ ಪರಿಕರಗಳ ಬದಲು ಆರಾಧನಾ ಪರಿಕರಗಳು ಕಂಡುಬರುತ್ತಿವೆ.

ಕರಾವಳಿ ಕರ್ನಾಟಕಕ್ಕೆ ನಾಗರಖಂಡ, ನಾಗಲೋಕ ಎಂಬ ಹೆಸರಿನಿಂದ ಕರೆದಿರುವುದು ತಿಳಿದುಬರುತ್ತದೆ. ಇದಕ್ಕೆ ಪೂರಕವಾಗಿ ಈ ಭಾಗದಲ್ಲಿ ನಾಗಾರಾಧನೆಯು ವಿಶಿಷ್ಟವಾದ ಮಾದರಿಯಲ್ಲಿ ಆರಾಧನೆಗೆ ಒಳಪಡುತ್ತಾ ಬಂದಿದೆ. ಮುಖ್ಯವಾಗಿ ಕಾಡ್ಯನಾಟ, ಢಕ್ಕೆಬಲಿಯ ಸ್ವರೂಪದ ಪ್ರಾಚೀನ ನಾಗ ಆರಾಧನೆಯು ಇಲ್ಲಿ ಕಂಡು ಬಂದಿದೆ. ಈ ಆರಾಧನಾ ಸ್ವರೂಪವು ದೇಸಿ ಮಾದರಿಯದ್ದಾಗಿದ್ದು ಸಮಾಜದಲ್ಲಿ ತಳವರ್ಗದಿಂದ ಆರಾಧನೆಗೆ ಒಳಗಾಗಿದೆ. ಹಾಗೇನೆ ಆಧುನಿಕದಲ್ಲಿ ನಾಗಮಂಡಲದಂತಹ ಪ್ರಕೃತಿ ಮತ್ತು ಪುರುಷ ಕಲ್ಪನೆಯ ಆರಾಧನೆಗಳು ಶಿಷ್ಟ ಜನವರ್ಗದಿಂದ ನಡೆಯುತ್ತಾ ಬಂದಿದೆ. ಸಾಮಾನ್ಯವಾಗಿ ಕರಾವಳಿ ಪ್ರದೇಶದಾದ್ಯಂತ ನಾಗಬನಗಳಲ್ಲಿ ವಿಶಿಷ್ಟ ಮಾದರಿಯ ನಾಗಬಿಂಬಗಳು ಕಂಡು ಬರುತ್ತದೆ.

ತುಳುವರ ಆರಾಧನೆ, ಮನರಂಜನೆಗಳ ನಡುವೆ ಅಂತಃಸಂಬಂಧವಿರುವಂತೆ ಕಂಡುಬರುತ್ತದೆ. ತುಳುವರ ಕೃಷಿ, ಮನೋರಂಜನೆ, ಆರಾಧನೆ, ಆಚರಣೆಗಳು ಒಂದು ವಾರ್ಷಿಕ ಚಕ್ರದ ರೀತಿಯಲ್ಲಿ ಸಂರಚನೆಗೊಂಡಿದೆ.

ಸಾಂಸ್ಕೃತಿಕ ಪಲ್ಲಟ ಎಲ್ಲೆಡೆಯಲ್ಲೂ ನಡೆಯುತ್ತಿರುತ್ತದೆ. ಒಂದು ಸಂಸ್ಕೃತಿ ತನ್ನ ಮೂಲ ನೆಲೆಯಿಂದ ಇನ್ನೊಂದು ನೆಲೆಯತ್ತ ಆಕರ್ಷಿತವಾಗಿ ಅಲ್ಲಿ ವಿನ್ಯಾಸಗೊಳ್ಳುವ ಕ್ರಿಯೆಯನ್ನು ಸಾಂಸ್ಕೃತಿಕ ಪಲ್ಲಟವೆಂದೆನ್ನಬಹುದು. ತುಳುನಾಡಿನ ಆಚರಣೆಗಳಲ್ಲಿ, ಆರಾಧನೆಗಳಲ್ಲಿ ಇಂದು ಅಗಾಧವಾದ ಬದಲಾವಣೆಗಳನ್ನು

ಗಮನಿಸಬಹುದಾಗಿದ್ದರೂ ಮೂಲ ಆಶಯ ಇಂದಿಗೂ ಉಳಿದುಕೊಂಡಿದೆ. ಈ ಆಚರಣೆಗಳು ಮತ್ತು ಆರಾಧನೆಗಳು ಹಿಂದಿನದನ್ನು ಉಳಿಸಿಕೊಳ್ಳಲಾರದೆ ಮತ್ತು ಇಂದಿನದನ್ನು ಬೆಳೆಸಿಕೊಳ್ಳಲಾರದೆ ಚಡಪಡಿಸುತ್ತಿದೆ. ಮೋಹನ್ ಕೃಷ್ಣ ರೈ ಎನ್ನುವಂತೆ 'ಅತ್ತ ಜಾನಪದೀಯವೂ ಅಲ್ಲ ಇತ್ತ ಶಾಸ್ತ್ರೀಯವೂ ಆಗದೆ ಅತಂತ್ರ ಸ್ಥಿತಿಯಲ್ಲಿದೆ. ಈ ಮಾತು ತುಳುನಾಡಿನ ರಂಗಪ್ರಕಾರವಾದ ಯಕ್ಷಗಾನಕ್ಕೂ ಅನ್ವಯ.ಆದರೆ ಈ ಅತಂತ್ರ ಸ್ಥಿತಿ ಆಚರಣೆಗಳಿಗಷ್ಟೆ ಸೀಮಿತವಾಗಿರದೆ ಅದರಲ್ಲಿ ತೊಡಗಿರುವ ಜನಸಮುದಾಯದ ಬದುಕಿನ ಚಿತ್ರಣವೂ ಆಗಿದೆ. ಆಚರಣೆಗಳಿಗೆ ಸಂಬಂಧಿಸಿದ ಹೊಸ ಮಡಿಮ್ಮೆಲಿಗೆ ಪರಿಕಲ್ಪನೆಗಳು ಹುಟ್ಟಿಕೊಂಡವು. ಇದು ವ್ಯವಸ್ಥೆಯನ್ನು ಇನ್ನಷ್ಟು ಸಂಕೀರ್ಣಗೊಳಿಸಿತು (ತುಳು ಸಂಸ್ಕೃತಿ ಚತುರ್ಮುಖ ಅಧ್ಯಯನ, ಪ್ರಸಾರಂಗ, ಕನ್ನಡ ವಿ.ವಿ, ೧೯೯೯).

ಇಂದು ಆಚರಣೆಗಳು ಆರಾಧನೆಗಳು ವೈಭವೀಕರಣಗೊಂಡಿದೆ. ಪ್ರತಿಷ್ಟೆಯ ಸಂಕೇತವಾಗಿದೆ. ಬಳಸುವ ಪರಿಕರಗಳ ಧಾತುವಿನಲ್ಲಿ ಬದಲಾವಣೆ ಕಂಡಿದೆ.

ಕೊನೆ ಟಿಪ್ಪಣಿ

[೧] ಸೋಮೇಶ್ವರ ಅಮೃತ, *ತುಳು ಪಾಡ್ದನ ಸಂಪುಟ*, ಪ್ರಸ್ತಾವನೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭, ಪುಟ: ೨೯.

[೨] ಕಲ್ಮಾಡಿ ದಾಮೋದರ (ಸಂ).,*ಕೋಟಿ ಚೆನ್ನಯ ಪಾರ್ದನ ಸಂಪುಟ*, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪುಟ: ೧೬೧.

[೩] ಸೋಮೇಶ್ವರಅಮೃತ (ಸಂ), *ತುಳುಪಾಡ್ದನ ಸಂಪುಟ*, ಬಾಮಕುಮಾರ ಸಂಧಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭, ಪುಟ: ೨೮೫.

[೪] ಅಮೀನ್ ಬಾಬು ಬನ್ನಂಜೆ, *ತುಳು ಜಾನಪದ ಆಚರಣೆಗಳು*, ಕೆಮ್ಮಲಜೆ ಜಾನಪದ ಪ್ರಕಾಶನ, ೨೦೦೬, ಪುಟ: ೬೭–೬೮.

[೫] ಸೋಮೇಶ್ವರ ಅಮೃತ, *ತುಳು ಪಾಡ್ದನ ಸಂಪುಟ*, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭, ಪುಟ:೩೬೫.

[೬] ಸೋಮೇಶ್ವರ ಅಮೃತ *ತುಳು ಪಾಡ್ದನ ಸಂಪುಟ*, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭, ಪುಟ: ೩೫೨.

[೭] ಸೋಮೇಶ್ವರ ಅಮೃತ, *ತುಳು ಪಾಡ್ದನ ಸಂಪುಟ*, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭, ಪುಟ: ೩೫೨–೫೩.

[೮] ಕುತ್ಯಾರು ಬೀಡಿನ ಅರಸರು,ಮಂಚಕಲ್ಲು ಪ್ರಾಯ ೭೫.

[೯] ಸೋಮೇಶ್ವರ ಅಮೃತ, *ತುಳುಪಾಡ್ದನ ಸಂಪುಟ*–ಪ್ರಸ್ತಾವನೆ, ಪುಟ: ೩೩.

[೧೦] ಅಮೀನ್ ಬನ್ನಂಜೆ ಬಾಬು, *ತುಳುನಾಡ ದೈವಗಳು ಸಾಂಸ್ಕೃತಿಕ ವಿಶ್ಲೇಷಣೆ*, ಕೆಮ್ಮಲಜೆ ಜಾನಪದ ಪ್ರಕಾಶನ, ಉಡುಪಿ, ೨೦೦೬, ಪುಟ: ೮೨–೮೩.

[೧೧] ಮುಲಯ ಪಕಿರ, *ಅಳಿಯಸಂತಾನ ಕಟ್ಟಿನ ತುಳುಜನರ ಶುಭಾಶುಭ ಕಟ್ಟುಕಟ್ಟಳೆಗಳು*, ಕರ್ನಾಟಕ ತುಳುಸಾಹಿತ್ಯ ಅಕಾಡೆಮಿ, ೨೦೦೪, (ಮೂಲ –೧೯೨೬), ಪುಟ: ೫೭–೫೮.

[೧೨] ನಂಬಿಯಾರ್ ರಾಘವ ಕೆಂಎಮ್, ದ್ರಾವಿಡ ನಾಡು–ನುಡಿ, ಅಂಕಿತ ಪುಸ್ತಕ, ೨೦೧೨.

[೧೩] ನಮಿರಾಜ ಮಲ್ಲಸೇವ, *ತುಳುವರ ಭೂತಾರಾಧನೆ*, ಸುದರ್ಶನ, ಪುಟ: ೧೫೫.

[೧೪] ಉಪಾಧ್ಯಾಯ ಯು.ಪಿ, ಏರ್ಯ ಲಕ್ಷ್ಮಿನಾರಾಯಣ ಆಳ್ವ (ಸಂ), *ಭೂತಾರಾಧನೆಯಲ್ಲಿ ದೈವ ಪರಿಕಲ್ಪನೆ*, ಮಂಗಳತಿಮರು, ೧೯೮೭.

[೧೫] ಸಾಲೆತ್ತೂರು ಬಿ.ಎ, *ಎನ್ಸೆಂಟ್ ಹಿಸ್ಟರಿ*, ಓರಿಯೆಂಟಲ್ ಪಬ್ಲಿಕೇಷನ್, ಪೂನಾ, ಪುಟ ೩೭೩.

[೧೬] ಅಮೀನ್ ಬಾಬು ಬನ್ನಂಜೆ, *ತುಳುನಾಡ ದೈವಗಳು ಸಾಂಸ್ಕೃತಿಕ ವಿಶ್ಲೇಷಣೆ*, ಕೆಮ್ಮಲಜೆ ಜಾನಪದ ಪ್ರಕಾಶನ, ಉಡುಪಿ, ೨೦೧೦.

[೧೭] ಕ ವೆಂ ರಾಜಗೋಪಾಲ, *ತುಳುವರ ಆಚರಣೆಗಳಲ್ಲಿ ಕಲಾವಂತಿಕೆ*, ಕರ್ನಾಟಕ ಲಲಿತಕಲಾ ಅಕಾಡೆಮಿ, ೧೯೯೯.

[18] ಸೋಮೇಶ್ವರ ಅಮೃತ, *ತುಳುವರ ಆಚರಣೆಗಳಲ್ಲಿ ಕಲಾವಂತಿಕೆ,* (ಸಂ) ಕ ವೆಂ ರಾಜಗೋಪಾಲ, ಕರ್ನಾಟಕ ಲಲಿತಕಲಾ ಅಕಾಡೆಮಿ ೧೯೮೯.

[19] ಸೋಮೇಶ್ವರ ಅಮೃತ, *ತುಳುವರ ಆಚರಣೆಗಳಲ್ಲಿ ಕಲಾವಂತಿಕೆ,* (ಸಂ) ಕ ವೆಂ ರಾಜಗೋಪಾಲ, ಕರ್ನಾಟಕ ಲಲಿತಕಲಾ ಅಕಾಡೆಮಿ ೧೯೮೯.

[20] ಬಾಳೆಪುಣಿ ಕೊಯಿರಾ,*ಮುಗೇರರರ ದುಡಿಕುಣಿತಗಳು ಸ್ವರೂಪ ಮತ್ತು ಸಂಸ್ಕೃತಿ,* ದುಡಿ ಪ್ರಕಾಶನ, ೨೦೧೦ ಪುಟ ೪೯.

[21] ನಂಬಿಯಾರ್ ರಾಘವ ಕೆ. ಎಂ, *ದ್ರಾವಿಡ ನಾಡು ನುಡಿ,* ಅಂಕಿತ ಪುಸ್ತಕ, ೨೦೧೨.

[22]ನಂದಾವರ ವಾಮನ, *ಸಿಂಗದನ,* ಮಂಗಳೂರು, ೧೯೮೭.

[23] ಬಿಳಿಮಲೆ ಪುರುಷೋತ್ತಮ, *ಕಂಬುಳ ಆಟವೋ ಆಚರಣೆಯೋ?,* ಸಂ: ಎ.ವಿ. ನಾವಡ, ಕರಾವಳಿ ಜಾನಪದ, ಅಖಿಲಭಾರತ ೭೪ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೨೦೦೭, ಪುಟ: ೩೫೧.

[24] ಕೌಕ್ರಾಡಿ ಅಭಯಕುಮಾರ್, *ಪನಿಯಾರ,* ತುಳುಕೂಟ, ಮಂಗಳೂರು, ೧೯೮೯ ಪುಟ: ೧೩೭.

[25] ಎಚ್. ನಾಗವೇಣಿ, *ಗಾಂಧಿಬಂದ,* ಲೋಹಿಯಾ ಪ್ರಕಾಶನ ಬಳ್ಳಾರಿ, ೧೯೯೯ ಪುಟ: ೬೧–೬೫.

[26] ರಾವ್ ಸುರೇಂದ್ರ ಬಿ., ಇತಿಹಾಸ ಮತ್ತು ಸಂಸ್ಕೃತಿಗಳಲ್ಲಿ ಬಂಟರು, ರಾ.ಗೋ.ಪೈ. ಸಂಶೋಧನಾ ಕೇಂದ್ರ ಮತ್ತು ವಿಶ್ವ ಬಂಟ ಪ್ರತಿಷ್ಠಾನ, ೨೦೧೦, ಪುಟ: ೧೭೯–೧೮೦.

[27] ಕೇನಾಜೆ ಸುಂದರ, ಬತ್ತದ ಲೋಕ, ಸಿಂಚು ಮಲ್ಟಿಗ್ರಾಫ್, ಮೈಸೂರು, ೨೦೦೯, ಪುಟ: ೨೩೪.

[28] ರಾವ್ ಸುರೇಂದ್ರ ಬಿ., *ಇತಿಹಾಸ ಮತ್ತು ಸಂಸ್ಕೃತಿಗಳಲ್ಲಿ ಬಂಟರು,* ರಾಷ್ಟ್ರೀಯ ಗೋವಿಂದ ಪೈ ಸಂಶೋಧನಾ ಕೇಂದ್ರ, ಪುಟ:೧೮೫.

[29] ಸಾಯಿಗೀತಾ, *ತುಳುನಾಡಿನಲ್ಲಿ ಜಾತಿ ಕುಲ ಕಸುಬುಗಳು,* ಸಿರಿಸಂಪದ, (ಸಂ) ಅನಂತಕೃಷ್ಣ ಭಟ್ ಮತ್ತು ತುಕಾರಂ ಪೂಜಾರಿ, ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರ, ೨೦೧೩ ಪುಟ: ೧೦೪.

[30] ನಾಯಕ್ ಎಸ್. ಆರ್., *ಯಕ್ಷಗಾನ ಕಲೆ ಜಾನಪದವೋ, ಶಾಸ್ತ್ರೀಯವೋ?* (ಲೇಖನ) ಸಂ: ಎ.ವಿ.ನಾವಡ, ಕರಾವಳಿ ಜಾನಪದ, ೭೪ನೆಯ ಅಖಿಲ ಭಾರತ ಕನ್ನಡಸಾಹಿತ್ಯ ಸಮ್ಮೇಳನ, ೨೦೦೭, ಪುಟ: ೧೪೬–೧೪೭.

[31] ಭಟ್ಟ ಪು.ಶ್ರೀನಿವಾಸ, *ಜನಪದ ಶತಪಥ,* ಯುಗಪುರುಷ ಪ್ರಕಟಣಾಲಯ, ೨೦೦೫, ಪುಟ: ೧೦೭.

[32]ಪೈ ಗೋವಿಂದ, *ಪ್ರಾಚೀನ ತುಳುನಾಡು* ಮುನ್ನುಡಿಯಲ್ಲಿ, ಎನ್ ಎಸ್ ಕಿಲ್ಲೆ ಮತ್ತು ಎನ್ ಎ ಶೀನಪ್ಪಹೆಗ್ಡೆ, ಯುನಿವರ್ಸಲ್ ಪ್ರಿಂಟರ್ಸ್ ಮತ್ತು ಪಬ್ಲಿಷರ್ಸ್ ಲಿಮಿಟೆಡ್, ೧೯೫೪, ಪುಟ: ೩.

[33] ಕಿಲ್ಲೆ ಕೃತಿ ಸಂಚಯ, ಕಿಲ್ಲೆ ದಶಮಾನೋತ್ಸವ ಸಮಿತಿ, ೨೦೦೦, ಪುಟ: ೨೧೫.

[34] ಆಚಾರ್ಯ ಸುಬ್ರಹ್ಮಣ್ಯ, *'ತುಳುನಾಡ್ದ ಭೂತೊಲು'* ಸಂ: ವಾಮನ ನಂದಾವರ, ಕಲೆಂಬಿ, ವಿಶ್ವತುಳು ಸಮ್ಮೇಳನೊ, ೨೦೦೯, ಪುಟ ೧೭೮.

[35] ರೈ ಮೋಹನ್ ಕೃಷ್ಣ, *ತುಳು ಸಂಸ್ಕೃತಿ ಚತುರ್ಮುಖ ಅಧ್ಯಯನ,* ಪ್ರಸಾರಾಂಗ, ಹಂಪಿ ವಿ.ವಿ, ೧೯೯೯.

ಅಧ್ಯಾಯ ೭

ಉಪಸಂಹಾರ

ಕರಾವಳಿ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯನ್ನು ಪುನರ್ ರಚಿಸುವ ಅಧ್ಯಯನಗಳು ಪ್ರಮುಖವಾಗಿ ಶಾಸನಗಳು, ತಾಳೆಗರಿಗಳು, ಗ್ರಂಥಗಳು ಮೊದಲಾದ ಆಕರಗಳನ್ನು ಬಳಸಿರುವುದು ಕಂಡು ಬರುತ್ತದೆ. ಈ ಬಗೆಯ ಇತಿಹಾಸ ನಿರೂಪಣೆಯು ಏಕಮುಖವಾದ ಇತಿಹಾಸವಾಗಿ ಕಂಡುಬಂದಿದೆ. ಆಧುನಿಕ ಚರಿತ್ರೆಯ ನಿರೂಪಣಾ ಕ್ರಮವು ಪಾರಂಪರಿಕ ಮಾದರಿಯ ಇತಿಹಾಸ ಬರವಣಿಗೆಯ ಕ್ರಮಗಳಿಗಿಂತ ಭಿನ್ನವಾಗಿದೆ. ಪ್ರಧಾನಧಾರೆಯ ಆಕರಗಳ ಜೊತೆಗೆ ಅಂಚಿನ ಪರಿಧಿಯ ಆಕರಗಳಾದ ಮೌಖಿಕ ಹಾಗೂ ಭೌತಿಕ ವಸ್ತುಗಳನ್ನು ಆಕರವಾಗಿ ಪರಿಗಣಿಸುವ ಪ್ರಯತ್ನಗಳು ನಡೆದು ಕೊಂಡು ಬಂದಿದೆ. ಇದರಿಂದ ಸಮಗ್ರ ನೆಲೆಯ ಇತಿಹಾಸವನ್ನೂ, ಜನಪದರ ಬದುಕಿನ ಸಾಮಾಜಿಕ, ಭಾಷಿಕ, ಜನಾಂಗೀಯ, ರಾಜಕೀಯ ಮತ್ತು ಸಾಂಸ್ಕೃತಿಕ ವಿಚಾರಗಳನ್ನು ಕೇಂದ್ರವಾಗಿರಿಸಿಕೊಂಡು ವಿವಿಧ ಆಯಾಮಗಳ ಅಧ್ಯಯನ ನಡೆಸಲಾಗಿದೆ.

ಕರಾವಳಿ ಕರ್ನಾಟಕದ ಸಾಂಸ್ಕೃತಿಕ ಇತಿಹಾಸವನ್ನು ಪುನರ್‌ರಚಿಸುವ ಸಂದರ್ಭದಲ್ಲಿ ಮೌಖಿಕ ಆಕರಗಳನ್ನು ಈವರೆಗೆ ಗ್ರಹಿಸಿದ್ದಾರೆ. ಆದರೆ ಭೌತಿಕ ವಸ್ತುಗಳು ಮತ್ತು ವಸ್ತು ಸಂಗ್ರಹಾಲಯಗಳ ಹಿನ್ನೆಲೆಯಲ್ಲಿ ಕರಾವಳಿ ಕರ್ನಾಟಕದ ಸಾಂಸ್ಕೃತಿಕ ಇತಿಹಾಸವನ್ನು ಪುನರ್‌ರಚಿಸುವ ಅಧ್ಯಯನಗಳು ಕಾಣಿಸಿಕೊಂಡಿಲ್ಲ. ಕೆಲವು ಸಂಶೋಧಕರ ಲೇಖನಗಳು ಪ್ರಾಸಂಗಿಕವಾಗಿ ಭೌತಿಕ ವಸ್ತುಗಳ ಕುರಿತು ಗಮನ ಸೆಳೆಯುವ ಸೂಚನೆಗಳನ್ನು ನೀಡುತ್ತವೆ. ಈ ಕುರಿತಂತೆ ಅಧಿಕೃತ ಅಧ್ಯಯನಗಳು ನಡೆದದ್ದು ಕಂಡುಬರುವುದಿಲ್ಲ. ಹಾಗಾಗಿ 'ಕರಾವಳಿ ಕರ್ನಾಟಕದ ಭೌತಿಕ ವಸ್ತು ಸಂಗ್ರಹಾಲಯಗಳು: ಸಾಂಸ್ಕೃತಿಕ ಇತಿಹಾಸದ ಪುನರ್‌ರಚನೆಯ ಮಾದರಿಗಳು' ಎನ್ನುವ ವಿಷಯದ ಕುರಿತ ಭೌತಿಕ ವಸ್ತುಗಳ ಹಿನ್ನೆಲೆಯಲ್ಲಿ ಕೈಗೊಂಡ ಅಧ್ಯಯನವಾಗಿದೆ. ಈ ನಿಬಂಧವು ಕ್ಷೇತ್ರಕಾರ್ಯವನ್ನು ಪ್ರಧಾನವಾಗಿ ಅವಲಂಬಿಸಿದ್ದಾಗಿದೆ. ಭೌತಿಕ ವಸ್ತುಗಳ ಸಂರಚನೆಯ ನೆಲೆಯಿಂದ ಒಂದೊಂದು ವಸ್ತುಗಳೂ ಸಹ ಗಮನ ಸೆಳೆಯುತ್ತದೆ.

ಭೌತ ವಸ್ತುಗಳನ್ನು ಆಕರವಾಗಿಟ್ಟುಕೊಂಡು ಅದರ ಚಾರಿತ್ರಿಕತೆಯನ್ನು ಹುಡುಕಲು ಗಾದೆಗಳು, ಪಾಡ್ದನಗಳು, ಒಗಟುಗಳು ಮಾತ್ರವಲ್ಲದೆ ಕುಲಕಸುಬುದಾರರು ಸಹಾಯಕ್ಕೆ ಒದಗಿ ಬಂದಿರುತ್ತಾರೆ. ಒಂದೊಂದು ಭೌತಿಕ ವಸ್ತುವಿನ ಜೊತೆಗೆ ಜನಪದ ಸಾಹಿತ್ಯದ ಪ್ರಕಾರಗಳಾದ ಗಾದೆ, ಒಗಟು, ಪಾಡ್ದನಗಳು ತಳುಕು ಹಾಕಿಕೊಂಡಿರುವುದು ಇಲ್ಲಿ ಗಮನಿಸತಕ್ಕ ಸಂಗತಿಯಾಗಿದೆ. ಜನಜೀವನದ ಅವಿಭಾಜ್ಯ ಅಂಗವಾಗಿದ್ದ ಭೌತಿಕ ವಸ್ತುಗಳನ್ನು ಕಾಲಾನುಕ್ರಮಣಿಕೆಯಲ್ಲಿ ಜೋಡಿಸುವಾಗ ಒಂದು ಕಾಲದ ಜನರು ಬಳಸುತ್ತಿದ್ದ ವಸ್ತುಗಳ ಹಿನ್ನೆಲೆಯಲ್ಲಿ ಕಾಲ ನಿರ್ಣಯಿತವಾಗುತ್ತದೆ. ತುಳುನಾಡಿನಲ್ಲಿ ಬಹುವಾಗಿ ಈ ಅಧ್ಯಯನದ ಸಂದರ್ಭದಲ್ಲಿ ಕೃಷಿ ಪ್ರಧಾನ

ವಸ್ತುಗಳನ್ನೇ ಆಕರವಾಗಿ ಗಮನಿಸಲಾಗಿದೆ. ಹಾಗಾಗಿ ಕೃಷಿಯ ಜತೆಗಿನ ನಿಕಟವಾದ ಸಂಬಂಧ ಔದ್ಯೋಗಿಕ ಪೂರ್ವದ ಬದುಕಿನ ವಿನ್ಯಾಸ ಈ ವಸ್ತುಗಳ ಅಧ್ಯಯನದಲ್ಲಿ ಸ್ಪಷ್ಟವಾಗಿ ತಿಳಿದು ಬಂದಿದೆ.

ಈ ಕೆಳಗೆ ಗುರುತಿಸಲಾದ ನಾಲ್ಕು ಹಂತಗಳು ಕರಾವಳಿ ಕರ್ನಾಟಕದ ಕೃಷಿ ಬದುಕಿನ ಮೇಲೆ, ತನ್ಮೂಲಕ ಸಾಂಸ್ಕೃತಿಕ ಬದುಕಿನ ಮೇಲೆ ನಿಚ್ಚಳ ಪರಿಣಾಮವನ್ನು ಬೀರಿದೆ. ಕರಾವಳಿ ಕರ್ನಾಟಕ ಮಾತ್ರವಲ್ಲದೆ ರಾಷ್ಟ್ರಮಟ್ಟದಲ್ಲಿ ನಡೆದ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಮತ್ತು ಕೈಗಾರಿಕಾ ಕ್ಷೇತ್ರದಲ್ಲಾದ ಪಲ್ಲಟಗಳು ಕರಾವಳಿಯ ಜನರ ಬದುಕನ್ನು ಪ್ರಭಾವಿಸಿರುವುದು ಕಂಡು ಬರುತ್ತದೆ. ಹಾಗಾಗಿ ಸಾಮಾಜಿಕ ಬದಲಾವಣೆಯೊಂದಿಗೆ ಮನುಷ್ಯನ ಬದುಕಿನ ಕ್ರಮಗಳು ವಿಕಾಸ ಹೊಂದಿರುವುದನ್ನು ಕಾಣುತ್ತೇವೆ. ಕರಾವಳಿಯ ಸಾಂಸ್ಕೃತಿಕ ಬದುಕು ಪಲ್ಲಟಗೊಳ್ಳುವುದಕ್ಕೆ ಕಾರಣವಾದ ಪ್ರಮುಖ ಅಂಶಗಳನ್ನು ಚಾರಿತ್ರಿಕವಾಗಿ ಗುರುತಿಸಲಾಗಿದೆ.

- ಬೀಡಿ ಉದ್ಯಮದ ಪ್ರವೇಶ (೧೯೩೫)
- ಭೂಮಸೂದೆ ಜಾರಿ (೧೯೭೪)
- ನಗರದ ಕಡೆಗೆ ವಲಸೆ (೧೯೭೫ ನಂತರ)
- ಶೈಕ್ಷಣಿಕ ಕ್ರಾಂತಿಯಿಂದಾಗಿ ಹೊಸಕಾಲದ ಉದ್ಯೋಗದತ್ತ ಒಲವು ಮೂಡಿದುದು.

ಈ ಅಂಶಗಳು ಕೃಷಿ ಬದುಕಿನ ಪಲ್ಲಟಕ್ಕೆ ಪ್ರಮುಖ ಕಾರಣವಾಗಿವೆ.

ಹೀಗೆ ನಿಧಾನಗತಿಯಲ್ಲಿ ಆರಂಭಗೊಂಡು, ಮುಂದುವರಿದು ತೀವ್ರತರದ ಬದಲಾವಣೆ ಹೊಂದಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು. ಕೃಷಿ ಅವಲಂಬಿತವಾಗಿದ್ದ ಎಲ್ಲಾ ಸಂಪ್ರದಾಯ–ಆಚರಣೆಗಳು, ಪ್ರದರ್ಶನ–ಕುಣಿತಗಳು, ಹಬ್ಬಹರಿದಿನಗಳು ತಮ್ಮ ಸ್ವರೂಪವನ್ನು ಬದಲಾಯಿಸಿಕೊಂಡವು. ಪೂರ್ವದ ಆರಾಧನೆ ಆಚರಣೆ, ಸಂಪ್ರದಾಯಗಳು ಇಂದು ಪ್ರತಿಷ್ಠೆಯ ಪ್ರದರ್ಶನದ ವಸ್ತುಗಳಾಗಿ ರೂಪಾಂತರಗೊಂಡಿದೆ.

ಪ್ರಸ್ತುತ ಅಧ್ಯಯನದಲ್ಲಿ ಪ್ರಾತಿನಿಧಿಕ ವಸ್ತುಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇದು ಭೌತಿಕ ವಸ್ತುಗಳ ಕುರಿತ ಅಧ್ಯಯನಕ್ಕೆ ಮೊದಲ ಹೆಜ್ಜೆಯಾಗಿದೆ.

ಒಂದು ವಸ್ತುವಿನ ಮುಖಾಂತರ ಗುರುತಿಸಬಹುದಾದ ವಿಚಾರಗಳು:

- ಸಾಹಿತ್ಯಿಕ ಮತ್ತು ಭಾಷಿಕ ವಿಚಾರಗಳು
- ವೈಜ್ಞಾನಿಕ ಅಂಶಗಳು
- ಕ್ರಿಯಾತ್ಮಕ ಅಂಶಗಳು
- ರಾಜಕೀಯ, ಭೌಗೋಳಿಕ, ಧಾರ್ಮಿಕ ಅಂಶಗಳು

ಭೌತಿಕ ವಸ್ತುಗಳು ಕರಾವಳಿ ಕರ್ನಾಟಕದಲ್ಲಿ ಇಂದು ತನ್ನ ಮೂಲಸ್ವರೂಪದಲ್ಲಿ ಬಳಕೆಗೊಳ್ಳುತ್ತಿಲ್ಲ. ಇದರಿಂದಾಗಿ ಒಂದು ಪ್ರದೇಶದ ಸಾಂಸ್ಕೃತಿಕ ಅನನ್ಯತೆಯನ್ನು ಗುರುತಿಸುವುದು ಸವಾಲಿನ ಸಂಗತಿಯಾಗಿದೆ. ವಸ್ತುಗಳ ರಚನೆಯ ಹಿನ್ನೆಲೆ ಅದರ ದೇಶ ಕಾಲದ ಸಮಗ್ರತೆಯ ನೆಲೆಯಲ್ಲಿ ಇತಿಹಾಸದ ಅಂಶಗಳನ್ನು ದಾಖಲಿಸುವ ಕೆಲಸವನ್ನು ಮಾಡಲಾಗಿದೆ. ಪ್ರತಿಯೊಂದು ವಸ್ತುಗಳ ರಚನೆಯಲ್ಲಿ ನಿರ್ಮಾತೃವಿನ ಮತ್ತು ರಚನಾಕಾರನ ಆಂತರಿಕ ಮತ್ತು ಬಾಹ್ಯ ಕಾರಣಗಳು ಮಿಳಿತವಾಗಿರುತ್ತದೆ. ಕರಾವಳಿ ಕರ್ನಾಟಕದ ಸಂದರ್ಭದಲ್ಲಿ ಅದು ಕೃಷಿ ಪರಿಕರದಿಂದ ಹಿಡಿದು ಗೃಹಬಳಕೆಯ, ಆಚರಣೆಯ ಪರಿಕರಗಳನ್ನೊಳಗೊಂಡು ವಸ್ತುವಿನ ರಚನೆ ಮಾಡುವವನು ಒಬ್ಬನಾದರೆ ಬಳಕೆಮಾಡುವವನು ಇನ್ನೊಬ್ಬನಾಗಿರುತ್ತಾನೆ. ವಸ್ತುವಿನ ಅಗತ್ಯತೆ, ಮಾಡಿಸುವವನ ಆರ್ಥಿಕ ಪರಿಸ್ಥಿತಿ, ಪ್ರತಿಷ್ಠೆ, ಧ್ಯೇಯ–ಧೋರಣೆ, ಮನೋಭಾವ ಇವೆಲ್ಲವೂ ವಸ್ತುವಿನ ರಚನೆಯಲ್ಲಿ ನೇರ ಪಾತ್ರವಹಿಸುತ್ತವೆ. ಇವುಗಳನ್ನು ಅಧ್ಯಯನಕ್ಕೊಳಪಡಿಸಿದಾಗ ಅಗಾಧವಾದ ಐತಿಹಾಸಿಕ ಪ್ರಪಂಚ ತೆಂದು ಕೊಳ್ಳುತ್ತದೆ. ಕೃಷಿ ಭೂಮಿ ಇದ್ದುದು ಒಡೆಯನಲ್ಲಾದರೆ (ಧನಿ), ಕೃಷಿ ಕಾರ್ಯ ಮಾಡುತ್ತಿದ್ದವನು ಒಕ್ಕಲಿನವನು. ಒಡೆಯನ ನಿರ್ದೇಶನದಂತೆ ಬಡಗಿ ಅಥವಾ ಕಮ್ಮಾರ (ಮುಖ್ಯವಾಗಿ ನೊಗ, ನೇಗಿಲು, ಹಲಗೆ, ಇತ್ಯಾದಿ), ಹರಿಜನ ವರ್ಗದವರು (ಬುಟ್ಟಿ, ಬಟ್ಟಿ, ಕಾಂಟ್ಯ) ಕೃಷಿಗೆ ಪೂರಕವಾದ ಅಗತ್ಯದ ವಸ್ತುವನ್ನು ತಯಾರಿ ಮಾಡಿಕೊಡುತ್ತಿದ್ದನು. ಒಕ್ಕಲಿನವನು ಮಧ್ಯವರ್ತಿಯ ನೆಲೆಯಲ್ಲಿ ಕಾಣಸಿಕೊಳ್ಳುತ್ತಿದ್ದ. ಅದೇ ರೀತಿಯಲ್ಲಿ ಗೃಹ ಬಳಕೆಯ, ಆಚರಣೆ ಮತ್ತು ಆರಾಧನಾ ಪರಿಕರಗಳನ್ನು ಬಳಸುತ್ತಿದ್ದ ವರ್ಗ ಒಂದಾದರೆ ತಯಾರಿಸುತ್ತಿದ್ದ ವರ್ಗ ಇನ್ನೊಂದಾಗಿತ್ತು.

ಕರಾವಳಿ ಕರ್ನಾಟಕದ ಬೇರೆ ಬೇರೆ ವಸ್ತು ಸಂಗ್ರಹಾಲಯಗಳನ್ನು ಸಂದರ್ಶಿಸಿದ ಸಂದರ್ಭದಲ್ಲಿ ಆ ವಸ್ತು ಸಂಗ್ರಹಾಲಯದ ಸಂಯೋಜನೆ, ನಿರ್ವಹಣೆ, ವಸ್ತುಗಳ ಲಭ್ಯತೆ ಹಾಗೂ ಜನರ ಬೇಟಿಯ ಹಿನ್ನೆಲೆಯಲ್ಲಿ ಗಮನಿಸಿದಾಗ ಕಂಡುಕೊಂಡ ಪ್ರಮುಖ ಧನಾತ್ಮಕ ಹಾಗೂ ಋಣಾತ್ಮಕ ಅಂಶಗಳನ್ನು ಗುರುತಿಸಲಾಗಿದೆ. ಪ್ರಮುಖವಾಗಿ ವಸ್ತು ಸಂಗ್ರಹಾಲಯಗಳು ಪಾಶ್ಚಾತ್ಯ ಮಾದರಿಯಂತೆ ವ್ಯವಸ್ಥಿತ ಶಿಸ್ತನ್ನು ಅನುಸರಿಸದೆ ಅದು ವೀಕ್ಷಣೆಗಷ್ಟೆ ಸೀಮಿತವಾದ ಪ್ರೇಕ್ಷಣೀಯ ಸ್ಥಳವಾಗಿದೆ. ವಸ್ತು ಸಂಗ್ರಹಾಲಯಗಳು ಕೆಲವು ವ್ಯಕ್ತಿಗಳ ವೈಯಕ್ತಿಕ ಮುತುವರ್ಜಿಯಿಂದ ರಚನೆಗೊಂಡಿದ್ದರೂ ಅವರ ಕಾಲದ ನಂತರ ವ್ಯವಸ್ಥಿತವಾದ ನೇತೃತ್ವವಿಲ್ಲದೆ ನಿರೀಕ್ಷಿತ ಪ್ರಮಾಣದ ನೆಲೆಯನ್ನು ಮುಟ್ಟಲಿಲ್ಲ. ತುಳುನಾಡಿನಲ್ಲಿ ಕಂಡು ಬರುವ ವಸ್ತು ಸಂಗ್ರಹಾಲಯಗಳು ನಿರ್ದಿಷ್ಟ ವೈಧಾನಿಕತೆಯನ್ನು ಹೊಂದಿಕೊಂಡು ಸಂಯೋಜಿಸಿದ್ದು ಕಂಡು ಬರುವುದಿಲ್ಲ. ಜನರು ಒಂದು ಕಾಲದಲ್ಲಿ ಬಳಸಿದ ಹಳೆಯ ವಸ್ತುಗಳು ಈ ವಸ್ತು ಸಂಗ್ರಹಾಲಯದಲ್ಲಿ ಕಂಡು ಬರುತ್ತದೆ. ಒಂದು ಶಿಸ್ತು ಇಲ್ಲದೆ ಒಂದು ಗೋದಾಮಿನ ರೀತಿಯಲ್ಲಿ ಇದ್ದದ್ದೆಲ್ಲವನ್ನೂ ಜೋಡಿಸುವ ಪರಿಪಾಟ ಕಂಡು ಬರುತ್ತದೆ. ಯಾವುದೇ ನಿರ್ದಿಷ್ಟ ದಿಕ್ಸೂಚಿಯನ್ನು ಕೊಡುವಲ್ಲಿ ಈ ವಸ್ತು ಸಂಗ್ರಹಾಲಯಗಳು ವಿಫಲವಾಗಿವೆ. ವಸ್ತು ಸಂಗ್ರಹಾಲಯದ ಆಧುನಿಕ ಕಲ್ಪನೆಯು ಭಾರತೀಯರಿಗೆ ಬಂದಿರುವುದು ಪಾಶ್ಚಾತ್ಯ ವಸ್ತು ಸಂಗ್ರಹಾಲಯಗಳಿಂದಾಗಿದೆ. ಈಗಾಗಲೇ ಪ್ರಸ್ತಾಪ ಮಾಡಿರುವಂತೆ

ಪಾಶ್ಚಾತ್ಯರ ವಸ್ತು ಸಂಗ್ರಹಾಲಯಗಳು ಅಗಾಧವಾದುದು ಮತ್ತು ವೈವಿಧ್ಯಪೂರ್ಣವಾದುದು. ವಸ್ತು ಸಂಗ್ರಹಾಲಯದ ಕುರಿತಂತೆ ಕಾಲಕಾಲಕ್ಕೆ ಕಂಡು ಬರುವ ಹೊಸ ಹೊಸ ಸಿದ್ಧಾಂತ ಮತ್ತು ಅನ್ವಯಿಕತೆಗಳಿಂದ ಆಧುನಿಕರಣಗೊಂಡಿದೆ. ವಸ್ತು ಸಂಗ್ರಹಾಲಯದ ರಚನೆ, ವಸ್ತುಗಳ ಸಂಯೋಜನೆ ಅವು ಮುಂದಿಡುವ ಪ್ರಮೇಯಗಳು ಮತ್ತು ವೀಕ್ಷಣೆ ಇವೆಲ್ಲವೂ ಕೂಡಾ ಆಧುನಿಕ ತಾಂತ್ರಿಕತೆಯನ್ನು ಅವಲಂಭಿಸಿರುತ್ತದೆ. ಸರಿಯಾದ ಬೆಳಕಿನ ವ್ಯವಸ್ಥೆ, ಆರ್ಥಿಕ ಸಂಪನ್ಮೂಲದ ಕ್ರೋಡೀಕರಣ ಇವುಗಳಿಂದಾಗಿ ಗಮನ ಸೆಳೆಯುತ್ತದೆ. ಜೊತೆಗೆ ಕಾಲಕಾಲಕ್ಕೆ ವಸ್ತು ಸಂಗ್ರಹಾಲಯದಲ್ಲಿ ನಡೆಯುವ ಕಮ್ಮಟಗಳು, ಕಾರ್ಯಾಗಾರಗಳು ವಸ್ತು ಸಂಗ್ರಹಾಲಯದ ವ್ಯಾಪ್ತಿಯನ್ನು ವಿಸ್ತರಿಸುವ ನೆಲೆಯಿಂದ ಮುಖ್ಯವಾಗಿದೆ. ಕರಾವಳಿ ಕರ್ನಾಟಕದಲ್ಲಿ ಈ ರೀತಿಯ ವಸ್ತು ಸಂಗ್ರಹಾಲಯದ ರಚನೆಯ ಕುರಿತ ಅರಿವು ಇಲ್ಲ. ಪಾರಂಪರಿಕ ಮಾದರಿಯ ವಸ್ತು ಸಂಗ್ರಹಾಲಯಗಳು ಇಲ್ಲಿ ಕಂಡುಬರುವುದರಿಂದ ಜನಾಕರ್ಷಣೆಯಿಂದ ದೂರ ಉಳಿದಿದೆ. ದೊಡ್ಡ ಮಟ್ಟದ ಆರ್ಥಿಕ ಬೆಂಬಲ ಇಲ್ಲದೆ ಇರುವುದರಿಂದಾಗಿ ವೈಯಕ್ತಿಕ ಆಸಕ್ತಿಯ ವಸ್ತು ಸಂಗ್ರಹಾಲಯಗಳು ಬೆಳವಣಿಗೆ ಹೊಂದದೆ ಪಾರಂಪರಿಕ ಶೈಲಿಯಲ್ಲಿ ಮುಂದುವರಿಯುತ್ತಿದೆ. ಆಧುನಿಕ ತಾಂತ್ರಿಕತೆಯ ಬಳಕೆ ಇಲ್ಲದೆ ವಸ್ತು ಸಂಗ್ರಹಾಲಯಗಳು ಸೊರಗಿವೆ.

ಕರಾವಳಿ ಕರ್ನಾಟಕದ ಜನಪದ ಮೌಖಿಕ ಸಾಹಿತ್ಯದ ಕುರಿತು ನಡೆದಷ್ಟು ಆಸಕ್ತಿಪೂರ್ಣ ಅಧ್ಯಯನ ಭೌತಿಕ ವಸ್ತು ಪರಿಕರಗಳ ಕುರಿತು ನಡೆದಿಲ್ಲ. ಇದಕ್ಕೆ ಬೇರೆ ಬೇರೆ ಕಾರಣಗಳನ್ನು ಕೊಡಬಹುದು. ಮೌಖಿಕ ಸಾಹಿತ್ಯದ ಬಗ್ಗೆ ವಿದ್ವಾಂಸರು, ಸಂಶೋಧಕರು ಆಸಕ್ತಿವಹಿಸಿ ಅನೇಕ ವಿಚಾರ ಸಂಕಿರಣ, ಕಾರ್ಯಾಗಾರಗಳನ್ನು ಮತ್ತು ಪ್ರಾತ್ಯಕ್ಷಿಕೆಗಳನ್ನು ಹಮ್ಮಿಕೊಂಡು ಯುವ ಸಂಶೋಧಕರಿಗೆ ಈ ಸಾಹಿತ್ಯದ ಬಗ್ಗೆ ಮಾರ್ಗವನ್ನು ತೋರಿಸಿದರು. ಇದರ ಜತೆಜತೆಗೆ ಮೌಖಿಕ ಸಾಹಿತ್ಯದ ಕುರಿತು ಅನೇಕ ಪ್ರಕಟಣೆಗಳು ಕೂಡಾ ಕಂಡು ಬಂದವು. ಆದರೆ, ಜನಪದ ಸಾಹಿತ್ಯದ ಇನ್ನೊಂದು ಮಗ್ಗಲು ಭೌತಿಕ ವಸ್ತು ಪರಿಕರಗಳ ಬಗ್ಗೆ ಈ ಬಗೆಯ ದೃಷ್ಟಿಕೋನ, ಅಧ್ಯಯನಗಳು ಇಲ್ಲದೆ ಇರುವುದರಿಂದ ಭೌತಿಕ ವಸ್ತುಗಳು ವಸ್ತು ಸಂಗ್ರಹಾಲಯಕ್ಕೆ ಸೀಮಿತವಾಗಿ ಬಿಟ್ಟಿವೆ. ಭೌತಿಕ ವಸ್ತುಗಳ ವ್ಯವಸ್ಥಿತವಾದ ಮಾದರಿಯ ಸಂಶೋಧನಾತ್ಮಕ ಪುಸ್ತಕ ಪ್ರಕಟಣೆಗಳು ವಿರಳ.

ಪ್ರಸ್ತುತ ಅಧ್ಯಯನವನ್ನು ವಸ್ತುಗಳ ಲಭ್ಯತೆಯ ಹಿನ್ನೆಲೆಯಲ್ಲಿ ನಾಲ್ಕು ವಿಭಾಗಗಳಲ್ಲಿ ಅವುಗಳ ಫಲಿತವನ್ನು ಚರ್ಚಿಸಲಾಗಿದೆ. ಅವುಗಳು ಕೃಷಿ ಪರಿಕರಗಳು; ಗೃಹೋಪಯೋಗಿ ಪರಿಕರಗಳು; ಕರಕುಶಲ ಸಾಧನಗಳು ಮತ್ತು ಆಚರಣೆ ಮತ್ತು ಆರಾಧನೆ ಸಂಬಂಧಿತ ಪರಿಕರಗಳು. ಈ ನಾಲ್ಕು ವಿಭಾಗಗಳು ಕರಾವಳಿ ಕರ್ನಾಟಕದ ಭೌತಿಕ ವಸ್ತು ಸಂಗ್ರಹಾಲಯಗಳು ಸಾಂಸ್ಕೃತಿಕ ಇತಿಹಾಸ ಪುನರ್‌ರಚನೆಯ ಹಿನ್ನೆಲೆಯಿಂದ ಗಮನಾರ್ಹವಾಗಿದೆ.

ಕೃಷಿಯು ತುಳುನಾಡಿನ ಜೀವನಾಡಿ. ಕೃಷಿಬದುಕಿಗೆ ತುಳುವರು ಪ್ರಾಧಾನ್ಯತೆ ನೀಡಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು. ಋಗ್ವೇದ ಕಾಲದಿಂದ ಈಗಿನವರೆಗೆ ಸಾರ್ವಕಾಲಿಕವಾಗಿ ಕೃಷಿಪರಿಕರಗಳ ವಿನ್ಯಾಸ ಅಥವಾ ಬಳಕೆಯ ಮೂಲಕಲ್ಪನೆ ಹಾಗೂ ಒಟ್ಟು ಆಶಯದಲ್ಲಿ ಹೆಚ್ಚಿನ ಬದಲಾವಣೆ ಕಂಡುಬಂದಿಲ್ಲ (ಆಧುನಿಕ

ಯಂತ್ರಯುಗವು ಇದಕ್ಕೆ ಹೊರತಾಗಿದೆ). ಮೌಖಿಕ ಸಾಹಿತ್ಯವು ತುಳುನಾಡಿನ ಇತಿಹಾಸಕ್ಕೆ ಪ್ರಮುಖ ಆಕರವಾಗಿರುವ ಈ ಸಂದರ್ಭದಲ್ಲಿ ಕಬಿತಗಳು, ಪಾಡ್ದನಗಳು ಕೃಷಿ ಬದುಕಿನೊಡನೆ ಬೆಸೆದುಕೊಂಡಿರುವುದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ.

ಕೃಷಿ ಕೆಲಸ ಕಾರ್ಯಗಳಲ್ಲಿ ಶ್ರಮವನ್ನು ಹಣದ ರೂಪದಲ್ಲಿ ನಿರ್ಧರಿಸುವ ಕ್ರಮ ಇರಲಿಲ್ಲ. ದುಡಿಮೆಗೆ ವಿನಿಮಯವಾಗಿ ಸ್ವಸಹಾಯ ಮಾದರಿ ಅಥವಾ ಬೆಳೆಯ ಫಸಲನ್ನು ನೀಡಲಾಗುತ್ತಿತ್ತು. ಹಣದ ವಿನಿಮಯದ ಅಗತ್ಯವಿರಲಿಲ್ಲ. ಇದಕ್ಕಾಗಿ ಈ ಫಸಲುಗಳನ್ನು ಅಳೆಯುವುದಕ್ಕಾಗಿ ಮುಡಿ, ಕಲಸೆ, ಸೇರು, ಪಾವು, ಚಟಾಕ್ ಮುಂತಾದ ಭೌತಿಕ ಪರಿಕರಗಳನ್ನು ಬಳಸುತ್ತಿದ್ದರು. ಪ್ರಕೃತಿಯಲ್ಲಿ ದತ್ತವಾಗುವ ವಸ್ತುವನ್ನೇ ಬಳಸಿ ಕಲಾತ್ಮಕವಾಗಿ ಇವುಗಳನ್ನು ರಚಿಸುತ್ತಿದ್ದರು.

ಬೇಸಾಯ ಮಾಡುವ ಕೃಷಿ ಭೂಮಿಗೆ ನೀರಾವರಿ ಸಾಧನಗಳನ್ನು ಸಮಯ ಮತ್ತು ಸಂದರ್ಭಗಳಿಗೆ ಅನುಸಾರವಾಗಿ ಬಳಸಲಾಗುತ್ತಿತ್ತು. ತುಳುನಾಡಿನಲ್ಲಿ ಪಣೆ(ಏತ), ಕೊಂತ, ಕೊರುಂಗೆಗಳು ವಿವಿಧ ಸಂದರ್ಭಗಳಲ್ಲಿ ನೀರಾವರಿಗಾಗಿ ಬಳಕೆಯಾಗುವುದು ಇದಕ್ಕೆ ಪುಷ್ಟಿನೀಡುತ್ತದೆ. ತುಳುವಿನಲ್ಲಿ 'ಪಣೆ' ಎಂದರೆ 'ಏತ' (ಏರು+ತ) ಎಂದರ್ಥ. ಈ ಪದವು ಪ್ರಾಯಶ: ಪಣೆ/ಪಾಣೆಯ 'ಏರಿನ' ಕಲ್ಪನೆಯನ್ನು ಮೂಡಿಸುತ್ತದೆ. ಪಾಣೆಮಂಗಳೂರು ತುಳುವಿನ ಪಾಣೇರ್, ಪಣಂಬೂರು, ಪಣೆಯಾಡಿ, ಪಾಣಾಜೆ, ಪಣೇಯೂರು, ಪಣಕಜೆ ಮುಂತಾದ ನಾಮಗಳೂ ಇದೇ ಅರ್ಥದಿಂದ ಬಂದಿದೆ. ಪಣೆತ್ತಾಡಿ ಎಂಬ ಊರು ಪಣೆಯ ಅಡಿಯನ್ನು ಸೂಚಿಸಿದರೆ, ಬಿದಿರಿನ ಏತವಿರುವ ಸ್ಥಳ ಬೆದ್ರಪಣೆಯಾಗಿದೆ. ಇಂದು ಏತ–ಕೊಂತ–ಕೊರಂಗೆ ಎಂಬ ಪದಗಳೇ ಬಳಕೆಯಲ್ಲಿಲ್ಲ. ಅದಕ್ಕೆ ಪೂರಕವಾದ ನೊಗಮರ, ಬೆರಿಮರ, ಗಿರ್ಗೊಲು, ನಾವು, ಕರಿ, ಕುಂಡಚೆ, ಬರೋಣಿ, ಅಡ್ಡಕರಿ, ಪನೆಬಲ್ಲ್, ಉಂಡ್ಯೆ, ಕುಂಜಾಲಿ, ಕೀಲ್, ಗುಮ್ಮೆ (ಕಲ್ಲ್), ಪಣೆತ್ತಗುರಿ, ಮರಾಯಿ, ಮುಟ್ಟಿಮರ, ಕಂಡಿ ಇತ್ಯಾದಿಗಳ ಅಗತ್ಯವೆ ಇಲ್ಲವಾಗಿದೆ. ಅಂದರೆ ಕೃಷಿ ಬದುಕಿನ ಪಲ್ಲಟವು ಈ ಮೊದಲಾದ ವಸ್ತು ಪರಿಕರಗಳ ಕಣ್ಮರೆಗೂ ಕಾರಣವಾಗಿದೆ. ವರ್ತಮಾನದಲ್ಲಿ ಉಪಯುಕ್ತತೆಯನ್ನು ಕಳೆದು ಕೊಂಡಿರುವುದರಿಂದ ಈ ಪಾರಂಪರಿಕ ನೀರಾವರಿ ವ್ಯವಸ್ಥೆಯ ಪರಿಕರಗಳು ವಸ್ತುಸಂಗ್ರಹಾಲಯಕ್ಕೆ ಸೇರ್ಪಡೆಗೊಂಡಿದೆ. ಹಾಗಾಗಿ ಐತಿಹಾಸಿಕ ವಸ್ತು ಪರಿಕರ ಪಣೆಯ ಸುತ್ತ ಆ ಕಾಲದ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಮತ್ತು ಭಾಷಿಕ ಸಂಗತಿಗಳು ಹೆಣೆದು ಕೊಂಡಿವೆ. ಸಾಮಾಜಿಕ ಬದುಕಿನ ಸ್ಥಿತ್ಯಂತರಗಳು, ಐತಿಹಾಸಿಕ ಸಂಗತಿಗಳು ನೀರಾವರಿಯಲ್ಲಿ ಬಳಕೆಯಾಗುತ್ತಿದ್ದ ಈ ಭೌತಿಕ ವಸ್ತುಗಳನ್ನು ಚಾರಿತ್ರಿಕಗೊಳಿಸಿದೆ.

ಉಳುಮೆಯ ಸಂದರ್ಭ ಬಳಕೆಯಾಗುವ ಪರಿಕರಗಳು ಅಧುನಿಕತೆಯ ಧಾವಂತದಲ್ಲಿ ಮರೆಗೆ ಸರಿಯುತ್ತಿದೆ. ನೊಗ, ನೇಗಿಲು, ಪಲಾಯಿ, ಓಡಮರಾಯಿ, ಕುರುಂಟು, ಇತ್ಯಾದಿ ಪರಿಕರಗಳಲ್ಲದೆ ಜೊತೆಗೆ ಅವುಗಳಿಗೆ ಸಂಬಂಧಿಸಿದ ವಿವಿಧ ಪಾರಿಭಾಷಿಕ ಪದಗಳು ಮರೆವಿಗೆ ಸಂದಿವೆ. ಉದಾಹರಣೆಗೆ ಗುಂಡಲ, ಪತ್ತ್, ಪುಡ್ಕಾಯಿ, ಮುಸೆ, ಪಣೊರು, ಕಲ್ಯಟ, ಪೊನಕೆ, ಸುಡ, ಮಾಕಾಲಿ ಇತ್ಯಾದಿ. ತುಳುನಾಡಿನ ಕೃಷಿ ಪರಿಕರಗಳಲ್ಲಿ 'ಪಲಾಯಿ'

ಹಾಗೂ 'ಓಡಮರಾಯಿ'ಗಳು ವಿಶೇಷವಾಗಿವೆ. ಕರಾವಳಿ ಕರ್ನಾಟಕದ ಭೌಗೋಳಿಕ ಪರಿಸರವು ಉಳಿದೆಡೆಗಳಿಗಿಂತ ಭಿನ್ನವಾಗಿರುವುದನ್ನು, ಹಾಗೂ ಆ ಭಿನ್ನತೆಗೆ ಪರ್ಯಾಯವಾಗಿ ತುಳುವರು ಅಗತ್ಯ ಪರಿಕರಗಳಾಗಿ ಇವೆರಡನ್ನು ರೂಪಿಸಿಕೊಂಡು ಬಳಕೆಗೆ ತಂದಿರುವುದನ್ನು ಇಲ್ಲಿ ಗುರುತಿಸಬಹುದು.

ದವಸಧಾನ್ಯಗಳ ಸಂರಕ್ಷಣೆಯ ವಿಧಾನದಲ್ಲಿ ಮುಡಿ, ಕೂಟಾಯಿ ಮತ್ತು ಕದಿಕೆ ಪ್ರಾಮುಖ್ಯತೆಯನ್ನು ವಹಿಸುತ್ತದೆ. ಇದು ಅಕ್ಕಿ, ಭತ್ತ ಮೊದಲಾದ ಧಾನ್ಯಗಳನ್ನು ರಕ್ಷಿಸಿಡುವ ಸಾಧನವಾಗಿದೆ. ಮುಡಿಯ ಸಂರಚನೆಯಲ್ಲಿ ಬಳಸಲಾಗುವ ಕಲ್ಲೆ, ಮೊರಜ್ಜ, ಕೊದಂಟಿ, ಗೀಸುಕೋಲು, ಮುರ್ನಾಲಿ, ಓಟೆ, ಇತ್ಯಾದಿ ಪರಿಕರಗಳು ಮೂಲೆಗುಂಪಾಗಿದೆ. ಪಾರಂಪರಿಕವಾದ ಕೃಷಿ ಬದುಕಿನ ಪಲ್ಲಟದೊಂದಿಗೆ ಇವುಗಳ ಬಳಕೆಯೂ ನಿಂತಿದೆ. ಇವುಗಳ ರಚನೆ ಹೆಚ್ಚು ಶ್ರಮ, ತಾಳ್ಮೆ ಮತ್ತು ಕಲಾವಂತಿಕೆಯನ್ನು ಬಯಸುವಂತಹದ್ದು. ಕೃಷಿಸಂಪತ್ತನ್ನು ರಕ್ಷಿಸುತ್ತಿದ್ದ ರೀತಿಯು ಕೂಡ ಕರಾವಳಿ ಕರ್ನಾಟಕದ ಭೌಗೋಳಿಕ ಪರಿಸರಕ್ಕೆ ಹೊಂದಿಕೊಂಡಂತೆ ಇದ್ದು, ಬೇರೆಡೆಯಲ್ಲಿ ಕಾಣಸಿಗದ ಮುಡಿ, ತುಪ್ಪೆ, ಕೂಟಾಯಿಗಳನ್ನು ಇಲ್ಲಿ ಮಾತ್ರ ಕಾಣಬಹುದು. ಶತಮಾನಗಳಿಂದ ಅಕ್ಕಿ ಮುಡಿಗಳನ್ನು ನೌಕೆಗಳ ಮೂಲಕ ಮಧ್ಯ ಪ್ರಾಚ್ಯ ರಾಷ್ಟ್ರಗಳಿಗೆ ರಫ್ತು ಮಾಡಲಾಗುತ್ತಿತ್ತು.

ಕಾಡು ಪ್ರಾಣಿಗಳಿಂದ ರಕ್ಷಿಸಲು ಬಳಸುತ್ತಿದ್ದ ಪರಿಕರಗಳಾದ ಹುಲಿಮೊಂಟೆ, ನೀರಮೊಂಟೆ, ಹಕ್ಕಿಮೊಂಟೆ, ಕಾಪು, ಬಿರು ಇವುಗಳು ಸುಲಭ ತಾಂತ್ರಿಕತೆಯನ್ನು ಹೊಂದಿರುವ ಪರಿಸರದಲ್ಲಿ ಲಭ್ಯವಾಗುವ ಬಿದಿರು, ಮರಗಳಿಂದ ರಚಿತವಾಗಿವೆ. ಇವುಗಳ ಅಧ್ಯಯನದಿಂದ ಅಂದಿನ ಕರಾವಳಿ ಕರ್ನಾಟಕದ ಭೌಗೋಳಿಕ, ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳು ತಿಳಿದು ಬರುತ್ತದೆ. ಕೃಷಿಸಂಪತ್ತನ್ನು ಸಂರಕ್ಷಣೆ ಮಾಡಲು ಬಳಸುವ ಪರಿಕರಗಳು ಆ ಕಾಲದ ಭೌಗೋಳಿಕ ಚಿತ್ರಣವನ್ನು ಹಾಗೂ ಮೃಗಪಕ್ಷಿಗಳ ಸಂಖ್ಯೆ ಮತ್ತು ಅವುಗಳಿಂದಾಗುವ ತೊಂದರೆಗಳು ಬಹಳವಾಗಿದ್ದುದನ್ನು ಸೂಚಿಸುತ್ತವೆ. ಅಲ್ಲದೆ ರಕ್ಷಣೆಗೆ ಬಳಸುತ್ತಿದ್ದ ಪರಿಕರಗಳು ಅವನ್ನು ಬಳಸುತ್ತಿದ್ದವರ ಸಾಮಾಜಿಕ ಸ್ಥಾನಮಾನ, ಅವರು ಅನುಸರಿಸುತ್ತಿದ್ದ ಮತಧರ್ಮಗಳು, ಆಗಿನ ಕಾಲದ ರಾಜಕೀಯ ಸ್ಥಿತಿಗತಿಯನ್ನೂ ತೋರಿಸುತ್ತವೆ.

ಕೃಷಿ ಕಾರ್ಯ ಸಂದರ್ಭದಲ್ಲಿ ಬಿಸಿಲು ಮಳೆಯಿಂದ ರಕ್ಷಿಸಿಕೊಳ್ಳಲು ಉಪಯೋಗಿಸುತ್ತಿದ್ದ ಗೊರಬು, ಮುಟ್ಟಾಲೆಗಳು ಅವುಗಳ ರಚನೆಯಲ್ಲಿನ ವೈವಿಧ್ಯತೆ ಮತ್ತು ಸರಳತೆಯನ್ನು ಮಾತ್ರ ತಿಳಿಯಪಡಿಸುವುದಲ್ಲದೆ ಮಾನವನ ಕೌಶಲ ಮತ್ತು ಬುದ್ಧಿವಂತಿಕೆ ವ್ಯಕ್ತಗೊಳ್ಳುತ್ತದೆ. ಕೃಷಿ ಕೆಲಸಗಳ ನಿರ್ವಹಣೆಗೆ ಅನುಕೂಲವಾಗುವ ಪರಿಕರಗಳಾದ, ಹೊಡೆಮಂಚ, ಕೈಸಟ್ಟಿ, ಒನಕೆ, ಮಾಪನಗಳು, ಎತ್ತಿನಗಾಡಿ, ಬೊಂಕ, ಇತ್ಯಾದಿ ಬಳಕೆಯಿಂದ ದೂರ ಸರಿದಿದೆ. ಆದರೆ, ಹಿಡಿಸೂಡಿ ಕತ್ತಿ, ಗೆರಸೆ ಇತ್ಯಾದಿ ಇವತ್ತಿಗೂ ಅಲ್ಪ ಪ್ರಮಾಣದ ಬದಲಾವಣೆಯೊಂದಿಗೆ ಬಳಕೆಯಲ್ಲಿದೆ.

ಕೃಷಿ ಬದುಕು ಪಲ್ಲಟಗೊಂಡಂತೆ ಕೃಷಿಯಲ್ಲಿ ಹಾಗೂ ಅದರ ಪರಿಕರಗಳಲ್ಲಿ ಬಳಕೆಯಾಗುತ್ತಿದ್ದ ಹಲವಾರು ಪಾರಿಭಾಷಿಕ ಪದಗಳು ನಷ್ಟವಾಗಿವೆ. ಹಾಗಾಗಿ ಭಾಷೆಯ ಹಲವಾರು ಪದಗಳ ಬಳಕೆ ನಿಂತುಹೋಗಿದೆ. ಒಂದು

ಭೌತಿಕ ವಸ್ತುವಿನ ಜೊತೆಗೆ ಭಾಷೆಯು ಕಣ್ಮರೆಯಾಗುತ್ತದೆ. ಹಾಗಾಗಿ ಭಾಷೆ ದೇಶ ಕಾಲವನ್ನು ನಿರ್ಧರಿಸುವ ಮಾನದಂಡವೂ ಆಗಿದೆ. ಮೌಖಿಕ ಸಾಹಿತ್ಯವು ತುಳುನಾಡಿನ ಇತಿಹಾಸಕ್ಕೆ ಪ್ರಮುಖ ಆಕರವಾಗಿರುವ ಈ ಸಂದರ್ಭದಲ್ಲಿ ಕಬಿತಗಳು, ಪಾಡ್ದನಗಳು ಕೃಷಿ ಬದುಕಿನೊಡನೆ ಬೆಸೆದುಕೊಂಡಿರುವುದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಈ ಮೌಖಿಕ ಸಾಹಿತ್ಯದಲ್ಲಿ ಉಲ್ಲೇಖಗೊಂಡಿರುವ ಕೆಲವು ಭೌತಿಕ ವಸ್ತುಪರಿಕರಗಳು ಚಾರಿತ್ರಿಕ ದೃಷ್ಟಿಯಿಂದ ಮುಖ್ಯವಾಗುತ್ತದೆ. ಕೃಷಿ ಬದುಕು ಪ್ರಕೃತಿಗೆ ಹೊಂದಿಕೊಂಡಂತೆ ಬೆಳೆದು ಬಂದಿರುವುದರಿಂದ ಅಲ್ಲಿ ಬಳಕೆಯಾಗುತ್ತಿದ್ದ ವಸ್ತುಗಳೂ ಕೂಡಾ ಸರಳ ಹಾಗೂ ಸುಲಭ ಸಾಧನಗಳಾಗಿದ್ದವು. ನಿರಂತರವಾದ ಪರಿಷ್ಕಾರವೇ ಮಾನವ ನಾಗರಿಕತೆಯ ಕಡೆಗೆ ಚಲಿಸಿದ ಹಾದಿ ಎಂಬುವುದನ್ನು ಇವುಗಳು ನಿಚ್ಚಳವಾಗಿ ತೋರಿಸುತ್ತದೆ. ಅಲ್ಲದೆ, ಕೃಷಿ ಪರಿಕರಗಳನ್ನು ಅನುಭವದಿಂದ ರೂಢಿಸಿಕೊಂಡಿರುವುದು ಹಾಗೂ ಔಷಧೀಯ ಗುಣಗಳನ್ನು ಹೊಂದಿರುವ ಮರಗಳನ್ನು ಅಗತ್ಯವಿದ್ದಲ್ಲಿ ಬಳಕೆ ಮಾಡುವುದನ್ನು–'ಉರಬಡು'ವನ್ನು ಮಾಡಲು ಕಾಸರಕ ಅಥವಾ ಕೊರಜ್ಜಿ ಮರಗಳನ್ನು ಬಳಸುವರು ಮತ್ತು ಅದರ ಅಳತೆಯ ನಿಖರತೆಯು ಉಳಲು ಬಳಸುವ ಪಶುಗಳಿಗೆ ಪೆಟ್ಟು ಬೀಳಬೇಕಾದಲ್ಲಿ ಮಾತ್ರ ಬೀಳುವಂತೆ ಮಾಡುವಲ್ಲಿ ಸಫಲವಾಗುತ್ತದೆ ಎಂಬುದನ್ನು ಗುರುತಿಸಬಹುದು.

ಇಲ್ಲಿ ಸಾಂಕೇತಿಕವಾಗಿ ಕೆಲವೊಂದು ವಸ್ತುಗಳನ್ನು ಸಂದರ್ಭಾನುಸಾರ ವಿಶ್ಲೇಷಿಸಲಾಗಿದೆ. ಈ ವಸ್ತುಗಳು ಶತಶತಮಾನಗಳಿಂದ ಬಳಕೆಯಲ್ಲಿದ್ದು, ಅದರ ಬಳಕೆ ನಿಂತಿದ್ದರೂ ಅದರೊಂದಿಗೆ ಮಿಳಿತವಾದ ಅವಿನಾಭಾವ ನಂಬಿಕೆ ಸಂಪ್ರದಾಯಗಳು ಮುಂದುವರಿಯುತ್ತಿವೆ. ಉದಾಹರಣೆಗೆ ಒಂದು ತೊಟ್ಟಿಲು ಅದೆಷ್ಟೋ ಮಕ್ಕಳು ಅದರಲ್ಲಿ ಮಲಗಿದ್ದಿರಬಹುದು. ಆ ತೊಟ್ಟಿಲಿನ ಬಳಕೆ ಸ್ಥಗಿತಗೊಂಡಿದ್ದರೂ, ರೂಪ ಮಾರ್ಪಾಡಾಗಿದ್ದರೂ ನಂಬಿಕೆ ಸಂಪ್ರದಾಯಗಳು ಮುಂದುವರಿಯುತ್ತಿದೆ. ಯಾವಾಗ ವಸ್ತುವೊಂದರ ಉಪಯೋಗ ಸ್ಥಗಿತಗೊಳ್ಳುವುದೋ ಆ ಸಂದರ್ಭದಲ್ಲಿ ಅದು ಇತಿಹಾಸದ ಭಾಗವಾಗಿ ಬಿಡುತ್ತದೆ. ಈ ವಸ್ತುಗಳು ಸಾಂಸ್ಕೃತಿಕ ಇತಿಹಾಸದ ಪುಟಗಳನ್ನು ತೆರೆದಿಡುತ್ತವೆ. ಒಬ್ಬ ರಾಜನ ಸಾಹಸಗಾಥೆ ಇನ್ನೊಬ್ಬನಿಗೆ ಸ್ಫೂರ್ತಿ ನೀಡಿ ಮುಂದಿನ ಹೆಜ್ಜೆಯನ್ನಿಡಲು ಅನುಕೂಲ ಮಾಡಿಕೊಡುವಂತೆ, ಭೌತಿಕ ವಸ್ತು ಕೂಡಾ ವಸ್ತುವಿನ ಪುನರ್ ರಚನೆಯಲ್ಲಿ ಪ್ರಮುಖವಾದ ಮೈಲಿಗಲ್ಲು ಆಗಬಲ್ಲದು. ರಾಜ ಮಹಾರಾಜರುಗಳ ಇತಿಹಾಸ ರಾಜಕೀಯ ಇತಿಹಾಸವನ್ನು ತಿಳಿಸಿದರೆ, ಭೌತಿಕ ವಸ್ತುಗಳು ಅನಕ್ಷರಸ್ಥರ ಅಂಚಿನ ಜಗತ್ತಿನ ಪ್ರತಿನಿಧಿಯಾಗಿ ಸಾಂಸ್ಕೃತಿಕ ಇತಿಹಾಸವನ್ನು ನಿರೂಪಿಸುವುದರಲ್ಲಿ ಅನುಮಾನವಿಲ್ಲ. ಇವತ್ತು ಏತದ ಉಪಯೋಗವಿಲ್ಲದಿದ್ದರೂ, ಇಂದಿನ ಪಂಪುಸೆಟ್ಟಿನ ಅವಿಷ್ಕಾರಕ್ಕೆ ಹಿಂದಿನ ಪಾತಾಳದಿಂದ ಆಳೆತ್ತರಕ್ಕೆ ಚಿಮ್ಮಿಸುವ ಏತಗಳೆ ಮೂಲಪ್ರೇರಣೆ ಎಂದೂ ಯಾರೂ ಅಲ್ಲಗಳೆಯಲಾರರು. ಅವಿಭಜಿತ ದೊಡ್ಡ ಕುಟುಂಬಗಳಲ್ಲಿ ಸಾಕಷ್ಟು ಮನೆ ಮಂದಿ ಆಳುಕಾಲುಗಳೊಂದಿಗೆ ಸೇರಿ ಕೆಲಸ ನಿರ್ವಹಿಸುವುದು ಅಂದು ಸಾಧ್ಯವಾಗಿತ್ತು. ಇಂದಿನ ವಿಭಕ್ತ ಕುಟುಂಬಗಳಲ್ಲಿ, ಕೃಷಿಕಾರ್ಯ ಮಾಡುವುದೇ ದೊಡ್ಡ ಸಾಹಸವಾಗುತ್ತಿರುವಾಗ ಯಂತ್ರ-ತಂತ್ರಗಳ ಬಳಕೆ ಅನಿವಾರ್ಯ. ಕೃಷಿ ಪರಿಕರಗಳ ಅಧ್ಯಯನದ ಮೂಲಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಚರಿತ್ರೆಯನ್ನು

ತೆರೆದಿಡುತ್ತದೆ. ಯಾವುದೇ ಜೀವನಕ್ರಮ ಬದಲಾವಣೆಗೆ ಒಳಪಟ್ಟರೆ ಒಟ್ಟು ಸಂಸ್ಕೃತಿಯೆ ಪಲ್ಲಟಕ್ಕೆ ಒಳಗಾಗುವುದು. ಕರಾವಳಿ ಕರ್ನಾಟಕದ ಕೃಷಿ ಕೇಂದ್ರಿತ ಜೀವನ ವಿಧಾನವು ಇಲ್ಲಿಯ ಜನರ ನಡೆನುಡಿ ಆಚಾರ–ವಿಚಾರ, ಸಂಸ್ಕಾರವನ್ನು ನಿರ್ದೇಶಿಸುತ್ತಿತ್ತು. ಆಧುನಿಕತೆಯ ಪ್ರವೇಶ ಮತ್ತು ಆಡಂಬೋಳದಿಂದಾಗಿ ಈ ಭಾಗದ ಜನರು ಆಧುನಿಕ ಶಿಕ್ಷಣ ಪಡೆದು ನಗರಮುಖಿಯಾದಂತೆ ಸಂಸ್ಕಾರವು ಪಲ್ಲಟಕ್ಕೆ ಒಳಗಾಯಿತು. ಈ ಪಲ್ಲಟದೊಂದಿಗೆ ಕೇವಲ ಕೃಷಿ ಮಾತ್ರ ಕೈತಪ್ಪಿ ಹೋದುದಲ್ಲ; ಜತೆಜತೆಗೆ, ನಂಬಿಕೆ, ನಡಾವಳಿ, ಭಾಷೆ, ಸಾಹಿತ್ಯ ಇವು ಕೂಡ ಮರೆವಿಗೆ ಸಂದವು. ಇದು ಕೃಷಿಯ ಪಲ್ಲಟದೊಂದಿಗೆ ಭೌತಿಕ ವಸ್ತುಗಳ ಉಪೇಕ್ಷೆಗೂ ಕಾರಣವಾಯಿತು.

ಕೃಷಿ ಪರಿಕರಗಳು ಮನೆಯ ಹೊರಗಿನ ಭೌತಿಕ ವಸ್ತುಗಳನ್ನು ಕೇಂದ್ರೀಕರಿಸಿದರೆ ಗೃಹೋಪಯೋಗಿ ವಸ್ತುಗಳು ಮನೆಯ ಒಳಗಿನ ನಿತ್ಯಬಳಕೆಯ ವಸ್ತುಗಳಿಗೆ ಸಂಬಂಧಿಸಿದೆ. ಆಧುನಿಕತೆಯ ಸ್ಪರ್ಶವು ಕೃಷಿ ಬದುಕಿನ ಪಲ್ಲಟಕ್ಕೆ ಕಾರಣವಾದಂತೆ ಗೃಹೋಪಯೋಗಿ ವಸ್ತುಗಳಲ್ಲಿಯೂ ಪರಿಣಾಮ ಬೀರಿದೆ. ಗೃಹೋಪಯೋಗಿ ವಸ್ತುಗಳನ್ನು ಮಣ್ಣು, ಲೋಹ ಹಾಗೂ ಮರದಿಂದ ಮಾಡಲಾಗುತ್ತಿತ್ತು. ಅನ್ನ ಬಸಿಯಲು ಬಳಸುತ್ತಿದ್ದ 'ಓಡಮರಾಯಿ' ಹಾಗೂ ಗುಳಿಯಪ್ಪ ಮಾಡುತ್ತಿದ್ದ 'ಅಪ್ಪದ ಕಲ್ಲು/ಕಾವಲಿ' ತುಳುವರ ಅಡುಗೆಮನೆಯಲ್ಲಿ ಇರುತ್ತಿದ್ದ, ಬೇರೆಡೆಯಲ್ಲಿ ಕಾಣಸಿಗದ ಪರಿಕರಗಳು. ಕುಚ್ಚಲಕ್ಕಿಯ ಅನ್ನ ಮಾಡಿದಾಗ ಗಂಜಿ ಬಸಿಯಲೇಬೇಕಾಗಿದ್ದು, ಬಸಿದ ಗಂಜಿ ಕುಡಿಯಲು ಹಾಗೂ ಜಾನುವಾರುಗಳಿಗೆ ಆಹಾರವಾಗಿ ಬಳಸಲ್ಪಡುತ್ತಿದ್ದುದು ಅದರ ಬಳಕೆಗೆ ಕಾರಣವಾಗಿದೆಯೆನ್ನಬಹುದು 'ತೊಂದುರು'ವಿನಲ್ಲಿ ತಯಾರಿಸಲ್ಪಡುವ ಇಡ್ಲಿ, ಕಡುಬುಗಳು ಎಲ್ಲಾ ಕಡೆಗಳಲ್ಲಿ ಬಳಸಲ್ಪಡುತ್ತಿದ್ದರೂ, ಉಳಿದೆಡೆಯಲ್ಲಿಲ್ಲದ ಮೂಡೆ, ಕೊಟ್ಟಿಗೆ, ಗುಂಡ, ಉಡರಿಗೆಗಳನ್ನು, ಪತ್ರೊಡೆಯನ್ನು ತುಳುವರು ತಯಾರಿಸುತ್ತಾರೆ. ಅದೇ ರೀತಿ ಶ್ಯಾವಿಗೆ ಮಣೆಯಿಂದ ಮಾಡುವ ಶ್ಯಾವಿಗೆ ಇಲ್ಲಿನ ಬಹು ಪ್ರಚಲಿತ ತಿನಿಸು. ಇದು ಕರಾವಳಿ ಕರ್ನಾಟಕಕ್ಕೆ ಮಧ್ಯ ಪ್ರಾಚ್ಯ ರಾಷ್ಟ್ರಗಳೊಂದಿಗಿನ ವ್ಯಾಪಾರಿ ಸಂಪರ್ಕದ ಮುಖೇನ ಬಂದಿರುವ ಸಾಧ್ಯತೆ ಇದೆ.

ಅಡುಗೆ ಕೋಣೆಯಲ್ಲಿ ಉಪಯೋಗಿಸಲ್ಪಡುವ ಪ್ರತಿಯೊಂದು ಸಣ್ಣ–ದೊಡ್ಡ ಪಾತ್ರೆಗೂ ಹೆಸರುಗಳಿವೆ. ಕೊಪ್ಪರಿಗೆ, ಅನ್ನ ಬೇಯಿಸುವ ಪಾತ್ರೆ (ನುಪ್ಪುದ ಕರ), ಬಂಡಿಬಿಸಲೆ, ಒಗ್ಗಿಬಿಸಲೆ, ಪೇರಸಲೆ, ನೆಸಲೆ, ಕಿನ್ನಿಸಲೆ, ತೊಂದುರುದ ಕರ ಪಲ್ಲಾಯಿ, ಗದ್ದಾವ್, ಕಿಂಞ ಗದ್ದಾವು, ಕುದ್ಪೆ, ಬಾವಡೆ, ಅಡ್ಯಾರ, ನೀರಡ್ಯರ, ಮಣ್ಣ್‌ದ ಓಡು. ಹೊಸ್ತೂಟದ ಮಡಕೆ– 'ಪುದ್ವಾರ್ ಕರ' ಸುಗ್ಗಿ ಹಬ್ಬದ ಮೊದಲ ಊಟಕ್ಕೆ ಬಳಸುವ ವಿಶೇಷವಾದ ಪಾತ್ರೆ. ಇದರ ಬಳಕೆಯಲ್ಲಿರುವ ನಂಬಿಕೆ, ಸಂಭ್ರಮ ವಿಶೇಷವಾದುದು. ಅಡುಗೆ ಮನೆಯ ಮುಖ್ಯ ಪರಿಕರ ಅರೆಯುವ ಕಲ್ಲು ಮಹಿಳೆಯರಿಂದಲೇ ಬಳಸಲ್ಪಡುತ್ತಿತ್ತು. ತುಳು ಜನಪದ ಮಾತ್ರವಲ್ಲದೆ ಪ್ರಾಚೀನ ಋಗ್ವೇದದಲ್ಲಿಯೂ ಇದರ ಉಲ್ಲೇಖವಿದೆ. ಪಾಡ್ದನ, ಕಬಿತಗಳಲ್ಲಿಯೂ ಉಲ್ಲೇಖಗೊಂಡಿದೆ. ತೆಂಗಿನ ಗೆರಟೆಯಿಂದ ತಯಾರಿಸಲ್ಪಡುವ ಸೌಟುಗಳು ತುಳುನಾಡಿನಲ್ಲಿ ತೆಂಗಿನ ಬೆಳೆ ಹೆಚ್ಚಿರುವುದನ್ನು ಸೂಚಿಸುತ್ತವೆ. ತುಳುನಾಡಿನಲ್ಲಿ ಬಳಕೆಯಾಗುವ

ಪರಿಕರಗಳು ಹಾಗೂ ಕಟ್ಟಡಗಳು 'ಆಯ' ಪ್ರಕಾರವೇ ತಯಾರಿಸಲ್ಪಡುತ್ತಿದ್ದವು. ಕರಾವಳಿಯಲ್ಲಿ ನಿತ್ಯ ಬಳಕೆಯ ಗೃಹೋಪಯೋಗಿ ವಸ್ತುಗಳನ್ನು ತಮಗೆ ಸುಲಭದಲ್ಲಿ ದತ್ತವಾಗುವ ವಸ್ತುಗಳಿಂದ ತಯಾರಿಸುತ್ತಿದ್ದರು.

ಮುಸ್ಲಿಂ ಸಮುದಾಯದವರು ಸಾಮೂಹಿಕವಾಗಿ ವಿಶೇಷ ಸಂದರ್ಭಗಳಲ್ಲಿ ಉಪಯೋಗಿಸುತ್ತಿದ್ದ ಬಟ್ಟಲು 'ತಾಲಿ' ಅಥವಾ 'ತಾಲ'ದ ಕುರಿತಾದ ಮೂಲವನ್ನು ಜಾಲಾಡಿಸುವಾಗ ೧೧೩೩ರಲ್ಲಿ ಮಂಗಳೂರಿನಲ್ಲಿ ಬೆನ್ ಯುಹೂದಿ ಎನ್ನುವವನು ಹಿತ್ತಾಳೆ ಮತ್ತು ಕಂಚಿನ ಒಂದು ಕಾರ್ಖಾನೆಯನ್ನು ಹೊಂದಿದ್ದ ಎನ್ನುವ ಮಾಹಿತಿ ದೊರೆಯುತ್ತದೆ. ಅವನು ವ್ಯಾಪಾರದ ನಿಮಿತ್ತ ಮಾಡಿದ ಪತ್ರ ವ್ಯವಹಾರದಲ್ಲಿ ತಾಲಿಯಂ, ತಾಲಂ ಎನ್ನುವ ಪದಗಳ ಉಲ್ಲೇಖವಿದ್ದು, ಇದು ಅರಬ್ ಪದವಲ್ಲ. ತುಳು ಭಾಷೆಯಾಗಿದ್ದಿರಬೇಕು.

ಮನೆಯಲ್ಲಿ ಬೆಲೆಬಾಳುವ ವಸ್ತುಗಳನ್ನಿಡಲು ಬಳಸಲ್ಪಡುವ ಕಲೆಂಬಿಯ ಸ್ವರೂಪವು ಆ ಮನೆಯ ಆರ್ಥಿಕ ಸ್ಥಿತಿಗತಿಯನ್ನು ತಿಳಿಸುತ್ತದೆ. ಸಾಮಾನ್ಯವಾಗಿ ಗುತ್ತು, ಬೀಡು, ಬರ್ಕೆ, ಬಾವದ ಚಾವಡಿಗಳಲ್ಲಿ ಕಲೆಂಬಿಯು ಕಾಣಸಿಗುತ್ತದೆ.

ಕೃಷಿ ಪರಿಕರ, ಗೃಹೋಪಯೋಗಿ ವಸ್ತುಗಳು, ಮತ್ತು ಗ್ರಾಮೀಣ ಕರಕುಶಲ ಸಾಧನಗಳು ಆಧುನಿಕ ಪೂರ್ವದ ಕರಾವಳಿ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯನ್ನು ಅಧ್ಯಯನ ಮಾಡುವಲ್ಲಿ ಮಹತ್ವದ ಸುಳುಹುಗಳನ್ನು ಒದಗಿಸುತ್ತದೆ. ಮುಖ್ಯವಾಗಿ ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಭೌತಿಕ ವಸ್ತುಗಳನ್ನು ತಯಾರಿಸುವವನು ಒಬ್ಬನಾದರೆ ಉಪಯೋಗಿಸುವವನು ಇನ್ನೊಬ್ಬನಾಗಿದ್ದನು. ಭೌತಿಕ ಪರಿಕರಗಳನ್ನು ರಚನೆ ಮಾಡುವವನೇ ಅದನ್ನು ಬಳಸಿದ್ದು ಕಡಿಮೆ. ಕರಕುಶಲಕರ್ಮಿಗಳು ನಿರ್ಮಿಸುತ್ತಿದ್ದ ಪರಿಕರಗಳನ್ನು ಉಪಯೋಗಿಸುತ್ತಿದ್ದ ವರ್ಗ ಬೇರೆಯೇ ಆಗಿದ್ದುದರಿಂದ ಕೊಡುಕೊಳ್ಳುವಿಕೆಯು ಅಗಾಧವಾಗಿ ಕಾಣಿಸುತ್ತದೆ. ಅದು ಕೃಷಿ ಬದುಕಿನಲ್ಲಿರಬಹುದು, ಗೃಹೋಪಯೋಗಿ ವಸ್ತುಗಳಲ್ಲಿರಬಹುದು, ಆಚರಣೆ ಅರಾಧನಾ ಪರಿಕರಗಳಲ್ಲಿದ್ದಿರಬಹುದು ಇವೆಲ್ಲವುಗಳನ್ನು ರಚಿಸುತ್ತಿದ್ದವರು ಕರಕುಶಲಕರ್ಮಿಗಳು. ಅಲ್ಲಿಯೂ ಹೆಚ್ಚಿನ ಹೆಣೆಯುವಂತಹ ಪರಿಕರಗಳನ್ನು ರಚಿಸುತ್ತಿದ್ದವರು ಹೆಂಗಸರಾಗಿದ್ದರು.

ಗ್ರಾಮೀಣ ಕರಕುಶಲ ಸಾಧನಗಳು ಆಧುನಿಕ ಪೂರ್ವದ ಮಾನವನ ವೃತ್ತಿ ನಿಪುಣತೆ, ಕುಲವೃತ್ತಿ ಮತ್ತು ಸಾಮಾಜಿಕತೆಯನ್ನು ಅಭ್ಯಸಿಸಲು ನೆರವಿಗೆ ಬರುತ್ತದೆ. ಮನುಷ್ಯನ ಅತಿಸೂಕ್ಷ್ಮ ಹಾಗೂ ಸಂಕೀರ್ಣ ಸಂವೇದನೆಯ ವ್ಯಕ್ತಿತ್ವದ ಜಾಣ್ಮೆಯ ಅಭಿವ್ಯಕ್ತಿಯೇ ಕುಶಲಕಲೆಯೆನ್ನಬಹುದು. ರಂಪೋನಿ ಬಲೆಯು ಪೋರ್ಚುಗೀಸ್ ಕ್ರೈಸ್ತಪಾದ್ರಿ ರಂಪನ್‌ನಿಂದ (೧೯೧೦) ಪರಿಚಯಿಸಲ್ಪಟ್ಟಿದ್ದು, ತುಳುವ ಮೀನುಗಾರಿಕೆಯಲ್ಲಿ ಬಳಕೆಯಲ್ಲಿದೆ. ಮೀನುಗಾರಿಕೆಯ ವೃತ್ತಿಯನ್ನು ಮಾಡುತ್ತಿದ್ದ ಒಂದು ವರ್ಗ ಆಧುನಿಕ ಪೂರ್ವದಲ್ಲೆ ಪಾಶ್ಚಾತ್ಯರ ಸಂಪರ್ಕಕ್ಕೆ ಒಳಗಾಗಿತ್ತು ಎಂಬುವುದಕ್ಕೆ ಇದು ಪುರಾವೆಯಾಗಿದೆ.

ತುಳುವ ನೇಕಾರರು ಕುಶಲಕರ್ಮಿಗಳಾಗಿದ್ದರೆಂಬುದಕ್ಕೆ ಹಲವಾರು ಪಾಡ್ದನಗಳಲ್ಲಿ ದೊರೆಯುವ ವಿವಿಧ ರೀತಿಯ ಬಟ್ಟೆಗಳ ಹೆಸರುಗಳು ಸಾಕ್ಷಿಯಾಗುತ್ತವೆ. ಶಿಲ್ಪಿಗಳು, ಬಡಗಿಗಳ ಕೈಕುಶಲತೆಯ ಬಗೆಗೆ ಪಾಡ್ದನಗಳು

ಬಹಳ ವಿವರಣೆಯನ್ನು ನೀಡುತ್ತವೆ. ಕರ್ನಾಟಕದ ನಾಲ್ಕು ಮುಖ್ಯ ಏಕಶಿಲಾ ಗೋಮಟೇಶ್ವರ ವಿಗ್ರಹಗಳಲ್ಲಿ ಮೂರು ಮೂರ್ತಿಗಳು ಕರಾವಳಿ ಕರ್ನಾಟಕದಲ್ಲಿದ್ದು ಐತಿಹಾಸಿಕ ಕೊಂಡಿಯನ್ನು ಗುರುತಿಸುವ ಪ್ರಯತ್ನವನ್ನು ಮಾಡಬಹುದು. ಇದು ಜೈನಧರ್ಮ ತುಳುನಾಡಿನಲ್ಲಿ ಬಹಳ ಪ್ರಭಾವಿಯಾಗಿತ್ತೆಂಬುದನ್ನು ಸೂಚಿಸುತ್ತದೆ; ಅಲ್ಲದೆ ಈ ಪ್ರದೇಶದಲ್ಲಿ ಹೆಬ್ಬಂಡೆಗಳು ಇದ್ದುದನ್ನು ಇದು ಸಾಕ್ಷೀಕರಿಸುತ್ತದೆ.

ಜೀವನಾವರ್ತನ ಆಚರಣೆಗಳು ಮಾನವನ ಹುಟ್ಟಿನಿಂದ ಹಿಡಿದು ಸಾಯುವವರೆಗಿನ ಕಾಲದಲ್ಲಿ ಆಚರಿಸಲ್ಪಡುತ್ತದೆ. ಕರಾವಳಿ ಕರ್ನಾಟಕದ ಸಾಂಸ್ಕೃತಿಕ ಆವರಣದಲ್ಲಿ ನಿರ್ದಿಷ್ಟ ವಿಧಾನದಲ್ಲಿ ಈ ಜೀವನಾವರ್ತನ ಆಚರಣೆಗಳು ಚಾಲ್ತಿಯಲ್ಲಿದೆ. ಜನನದ ಸಂದರ್ಭ ಬಳಸಲ್ಪಡುವ ತೊಟ್ಟಿಲು, ಮದುವೆ ಸಂದರ್ಭದಲ್ಲಿನ ಮೂಹೂರ್ತ ಕಂಬ ಮತ್ತು ಮರಣದ ಸಂದರ್ಭದಲ್ಲಿ ಬಳಕೆಗೊಳ್ಳುವ ಶವ ಸಂರಕ್ಷಣಾ ಪೆಟ್ಟಿಗೆ, ಚಟ್ಟ, ಕಾಟ, ಇವುಗಳ ಬಳಕೆಯ ನಂಬಿಕೆ, ಕ್ರಿಯಾವಿಧಿಗಳು ಮತ್ತು ಆಶಯವನ್ನು ಗಮನಿಸಲಾಗಿದೆ. ಶವ ಸಂರಕ್ಷಣೆಯ ಪೆಟ್ಟಿಗೆಯು ಈ ಪ್ರದೇಶದ ಪಟ್ಟಾಭಿಷೇಕ ಸಂದರ್ಭದ ಜೈನ ಮನೆತನದ ವಿಧಿವಿಧಾನಗಳ ಹಾಗೂ ಸಂಪ್ರದಾಯಗಳ ಬಗ್ಗೆ ಮಾಹಿತಿ ನೀಡುವುದು. ಅಲ್ಲದೆ, ಈ ಪೆಟ್ಟಿಗೆಯ ಆಧಾರದಲ್ಲಿ ಈ ಪ್ರದೇಶದ ಅಳಿಯಕಟ್ಟು ವ್ಯವಸ್ಥೆಯ ಕುರಿತಾಗಿಯೂ ಸ್ಪಷ್ಟ ಮಾಹಿತಿಯನ್ನು ಪಡೆಯಬಹುದು. ವಿವಿಧ ಜಾತಿಯ ಮರದ ಹಲಗೆಗಳನ್ನು ಬಳಸಿ ರಚಿಸಿದ ಆಯದ ತೊಟ್ಟಿಲನ್ನು ಇಲ್ಲಿನ ಮೂಲನಿವಾಸಿಗಳು ಎಂದುಕೊಳ್ಳುವವರು ಬಳಸುತ್ತಿದ್ದರು.

ಒಂದು ನಿರ್ದಿಷ್ಟ ವರ್ಷದ ನಿಗದಿತ ಸಂದರ್ಭದಲ್ಲಿ ಆಚರಿಸಲ್ಪಡುವ ಕ್ರಿಯಾವಿಧಾನಗಳನ್ನು ವಾರ್ಷಿಕಾವರ್ತನ ಆಚರಣೆಗಳೆಂದು ಗುರುತಿಸಬಹುದು. ಬಿಸುವಿನಿಂದ ಆರಂಭಗೊಂಡು ವರ್ಷದ ಹನ್ನೆರಡು ತಿಂಗಳ ಸಂದರ್ಭದಲ್ಲಿ ಬೇರೆ ಬೇರೆ ಬಗೆಯ ಆಚರಣೆಗಳನ್ನು ಅವುಗಳ ಸಾಂಸ್ಕೃತಿಕ ವಿಶಿಷ್ಟತೆಯ ನೆಲೆಯಲ್ಲಿ ನೋಡಲಾಗಿದೆ.

ತುಳುನಾಡಿನಲ್ಲಿ ದೈವದೇವರ ಕುರಿತಾದ ನಂಬಿಕೆ, ಸಂಪ್ರದಾಯಗಳು ಕೃಷಿ–ಬದುಕಿನ ಉಳಿವಿಗಾಗಿಯೇ ಮೂಡಿ ಬಂದಿವೆ ಎನ್ನುವಲ್ಲಿ ಎರಡು ಮಾತಿಲ್ಲ. ತುಳುವರ ಮೂಲ ಆರಾಧ್ಯದೈವ 'ನಾಗ'. ತುಳುವರು ಈ ದೇವರ ಬಿಂಬವನ್ನು ಪರಿಕರಗಳಲ್ಲಿ ಚಿತ್ರಿಸಿ, ಆ ಪರಿಕರಗಳನ್ನು ಪೂಜನೀಯವಾಗಿ ಕಂಡಿದ್ದಾರೆ. 'ನಾಯೆರ್ ಪೋಯಿನಲ್ಪ ನಾಗಬೀದಿಲಾ ಉಪ್ಪಂದ್'– ಎನ್ನುವ ಗಾದೆಮಾತಿನಲ್ಲಿರುವಂತೆ ದೇವರಿಗಿಂತ ಕೃಷಿಬದುಕಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಿರುತ್ತಾರೆ. ಸೂರ್ಯ–ಚಂದ್ರರ ಚಿತ್ರವನ್ನು ಅನ್ನ ಬಡಿಸುವ ಸೌಟು, ಕಲಸೆ–ಸೇರು, ತೊಟ್ಟಿಲು ಇವುಗಳಲ್ಲಿ ಪಡಿಮೂಡಿಸಿರುವುದು, ಸಂಪತ್ತು ಹಾಗೂ ಸಂತತಿ ಸೂಚಕವಾದ ಅವೆಲ್ಲವೂ ಚಿರಕಾಲವಿರಲಿ ಎಂಬ ಆಶಯವನ್ನು ಸೂಚಿಸುತ್ತದೆ. ಭೂತಾರಾಧನೆಯಲ್ಲಿ ಬಳಸಲ್ಪಡುವ ಖಡ್ಸಲೆ, ಚೌರಿ, ಗಂಟೆ ಇತ್ಯಾದಿ ಆಯುಧಗಳು ಹಾಗೂ ವೇಷ ಭೂಷಣಗಳನ್ನು ಹಿಂದೆ ತುಳುವ ವೀರರು ಯುದ್ಧ ಸಮಯದಲ್ಲಿ ಬಳಸುತ್ತಿದ್ದರೆಂಬುದು ಪ್ರಾಚೀನ ಕಾವ್ಯಗಳಿಂದ ತಿಳಿದುಬರುತ್ತದೆ.

